

# ಮುನ್ನೋಟ

ಡಾ॥ ಜಿ. ರಾಮಕೃಷ್ಣ

ಈ ಭೂಮಿ ಮತ್ತದರೆಲ್ಲ
ಅಸೀಮ ಸಂಪತ್ತಿಗೆ
ಹಕ್ಕುದಾರರೆಂದರೆ ನಾವೇ,
ದುಡಿಯುವವರಣ್ಣ;

ಸಂಪತ್ತು ಐಷಾರಾಮಗಳ
ಪರತಂತ್ರ ಜೀವಿಗಳಿಗಿಲ್ಲ
ಈ ಮಣ್ಣು
ತಮ್ಮದೆಂದೆಂಬುವ ಹಕ್ಕು!

ಅದೋ, ಆ ಅದ್ಭುತ ಬಿರುಗಾಳಿಯ
ರೋಷಕೆ ಸ್ವಾಗತ,
ಇರುಳನು ಭೇದಿಸಿ ಬಂದ
ಆ ಮಿಂಚಿನ ಪ್ರಭೆಗಿದೋ ಸ್ವಾಗತ –

ನಮಗಿದು ಹೊಸಬಾಳ್ವೆಯ ಉದಯಕೆ
ಸೂಚನೆಯಣ್ಣ;
ಅವರಿಗದೇ ಚಿರಮರಣದ
ಗಂಟೆಯ ಉದ್ಘೋಷವಣ್ಣ.

– 'ಅಂತರರಾಷ್ಟ್ರೀಯದ ಗೀತೆ' ಯಿಂದ

# ಮುನ್ನೋಟ

ಲೇಖಕ

ಡಾ|| ಜಿ. ರಾಮಕೃಷ್ಣ

ಮಾ-ಲೆ ಪ್ರಕಾಶನ

ಜನವರಿ ೨೦೦೬

MUNNOTA : *A collection of articles on literary and philosophical topics by Dr. G. Ramakrishna, Published by Ma-Le Prakashana, 2-F, Pavan Paranjyothi, 22/1, 4th Cross, Kaverinagar, Banashankari III Stage, Bangalore - 560 085.*

Pages : 192

**Price : Rs. 75**

First Impression : December 1980
Second Edition : January 2006



ಅಧಿಕೃತ ಮಾರಾಟಗಾರರು
**ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್**
ಎಂಬೆಸಿ ಸೆಂಟರ್, 11, ಕ್ರೆಸೆಂಟ್ ರಸ್ತೆ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - 560 001

**ಬೆಲೆ : ರೂ. 75**

ಮುಖಪುಟ ವಿನ್ಯಾಸ : ಎ. ಗಿರಿಧರ್
ಹಿಂಬದಿಯ ರಕ್ಷಾಪುಟ : ಬಿ. ಮೈತ್ರಿ

ಮುದ್ರಣ
**ನವಕರ್ನಾಟಕ ಪ್ರಿಂಟರ್ಸ್**
ಪೀಣ್ಯ ಕೈಗಾರಿಕಾ ಪ್ರದೇಶ
ಬೆಂಗಳೂರು - 560 058

# ಓದುಗರೊಡನೆ...

'ಮುನ್ನೋಟ' ಮೊದಲು ಪ್ರಕಟವಾದದ್ದು ಡಿಸೆಂಬರ್ ೧೯೮೦ರಲ್ಲಿ. ಇಪ್ಪತ್ತೈದು ವರ್ಷಗಳ ನಂತರ ಈಗ ಅದರ ಎರಡನೆಯ ಮುದ್ರಣ ಹೊರಬರುತ್ತಿದೆ. ಪುಸ್ತಕವು ಪ್ರಕಟವಾದ ಕೆಲವೇ ತಿಂಗಳುಗಳಲ್ಲಿ ಪ್ರತಿಗಳೆಲ್ಲಾ ಮುಗಿದುಹೋದುವಾದರೂ ಪುನರ್ಮುದ್ರಣದ ಯೋಚನೆ ಬಂದಿರಲಿಲ್ಲ. ಜಿ. ಆರ್. ಅಭಿನಂದನಾ ಸಮಿತಿಯ ಸ್ನೇಹಿತರ ಒತ್ತಾಸೆಯಿಂದ ಈಗದು ನಿಮ್ಮ ಮುಂದಿದೆ. ಸಮಿತಿಯ ಎಲ್ಲ ಮಿತ್ರರಿಗೂ ನನ್ನ ಹೃತ್ಪೂರ್ವಕ ನಮನಗಳು ಸಲ್ಲುತ್ತವೆ. ಅಂತೆಯೇ ಮೊದಲ ಮುದ್ರಣದ ಸುಮಾರು ಮುನ್ನೂರು ಪ್ರತಿಗಳನ್ನು ಮಾರಿ ಸಹಕರಿಸಿದ್ದ ಬೆಂಗಳೂರಿನ ಅಂದಿನ 'ಸಮುದಾಯ'ದ ಬಂಧುಗಳಿಗೆ ನಾನು ಕೃತಜ್ಞ. ಈ ಸಂಕಲನಕ್ಕೆ ೧೯೮೦ರ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿತ್ತು; ಆದರೆ ರಾಜ್ಯ ಗ್ರಂಥಾಲಯವು ಕೇಳಿದಷ್ಟು ಪ್ರತಿಗಳನ್ನು ಸರಬರಾಜು ಮಾಡಲು ಆ ವೇಳೆಗೆ ಪ್ರತಿಗಳೇ ಉಳಿದಿರಲಿಲ್ಲ. ಸಹಜವಾಗಿಯೇ ಪುಸ್ತಕದ ಓದುಗರಿಗೆ ನನ್ನ ಅತ್ಯಂತ ಪ್ರಾಮಾಣಿಕವಾದ ಕೃತಜ್ಞತೆಯನ್ನು ತಿಳಿಸಲಿಚ್ಛಿಸುತ್ತೇನೆ.

೧೯೮೦ಕ್ಕೆ ಮುನ್ನ ಬೇರೆ ಬೇರೆ ಕಡೆಗಳಲ್ಲಿ ಪ್ರಕಟವಾಗಿದ್ದ ನನ್ನ ಕೆಲವು ಲೇಖನಗಳನ್ನು ಆಯ್ದು 'ಮುನ್ನೋಟ'ದಲ್ಲಿ ಸಂಕಲನ ಮಾಡಲಾಗಿತ್ತು. ಪಾಂಡಿತ್ಯಪೂರ್ಣವಾದ ಉನ್ನತಮಟ್ಟದ ಲೇಖನಗಳವೆಂಬ ಭ್ರಮೆ ನನಗೆ ಅಂದೂ ಇರಲಿಲ್ಲ, ಈಗಲೂ ಇಲ್ಲ. ಆದರೆ ವಿಶ್ಲೇಷಣಾ ವಿಧಾನಕ್ಕೆ ಉದಾಹರಣೆಗಳೆಂದು ಅವನ್ನು ನಾನು ಪರಿಗಣಿಸಿದ್ದುದರಿಂದ ಪ್ರಕಟಣೆಯ ಸಾಹಸ ಮಾಡಿದ್ದೆ. ವಿದ್ವತ್ಪೂರ್ಣವಾದ ಲೇಖನಗಳನ್ನು ಅದರದೇ ವಿಶಿಷ್ಟ ಶೈಲಿಯಲ್ಲಿ ಬರೆಯಲು ನನಗೆ ಬರುವುದಿಲ್ಲ, ಕಲಿಯಬೇಕೆಂಬ ಉತ್ಸಾಹವೂ ಇಲ್ಲ. ಆದರೆ ಪ್ರಸಕ್ತ ಚಳುವಳಿಗಳಲ್ಲಿ ಭಾಗಿಯಾಗಲು ಈ ಲೇಖನಗಳು ನನಗೆ ಸಹಾಯ ಮಾಡಿವೆ.

ಮಾರ್ಕ್ಸ್, ಏಂಗಲ್ಸ್ ಮತ್ತು ಲೆನಿನ್ನರ ಹೆಸರುಗಳು ಮೊಟ್ಟಮೊದಲು ನನ್ನ ಕಿವಿಯ ಮೇಲೆ ಬಿದ್ದದ್ದು ನಾನು ಮಾಧ್ಯಮಿಕ ಶಾಲೆಯ ಆರನೆಯ ತರಗತಿಯಲ್ಲಿದ್ದಾಗ. ಆಗ್ಗೆ ನನ್ನ ಉಪಾಧ್ಯಾಯರಲ್ಲೊಬ್ಬರಾಗಿದ್ದ ಶ್ರೀ ಎನ್. ರಾಜಶೇಖರಯ್ಯನವರು ಈ ಹೆಸರುಗಳನ್ನು ಯಾವುದೋ ಸಂದರ್ಭದಲ್ಲಿ ಹೇಳಿದ್ದರೆಂದು ನನಗೆ ಸ್ಪಷ್ಟವಾಗಿ ನೆನಪಿದೆ. ಅವರ ಹೆಸರುಗಳನ್ನು ಏಕೆ ಹೇಳಿದ್ದರು ಮತ್ತು ಅವರ ಬಗ್ಗೆ ಯಾವ ಅಭಿಪ್ರಾಯ ಸೂಚಿಸಿದ್ದರೆಂದು ನನಗೆ ಸರ್ವಥಾ ನೆನಪಿಲ್ಲ. ಶ್ರೀ ರಾಜಶೇಖರಯ್ಯನವರು ಸ್ವತಃ ಎಂದೂ ಮಾರ್ಕ್ಸ್‌ವಾದಿಗಳಾಗಿ ಇರಲಿಲ್ಲವೆಂದು ನನಗೆ ಖಚಿತವಾಗಿ ತಿಳಿದಿದೆ. ಅವರು ಹೇಳಿದ್ದ ಹೆಸರುಗಳನ್ನು ಕೇಳಿದ ಎಷ್ಟೋ ವರ್ಷಗಳ ಮೇಲೆ ನಾನು ಮಾರ್ಕ್ಸ್‌ವಾದಕ್ಕೆ ಪ್ರವೇಶ ಪಡೆದುಕೊಂಡದ್ದು. ೧೯೬೯ರಲ್ಲಿ ನಾನು ಕೆಲಸ ಮಾಡುತ್ತಿದ್ದ ನ್ಯಾಷನಲ್ ಕಾಲೇಜಿನ ಪ್ರಥಮ ಬಿ.ಎಸ್‌ಸಿ. ತರಗತಿಯೊಂದರಲ್ಲಿ ಗಾಂಧೀಜಿಯವರ ಒಂದು ಲೇಖನದ ಬಗ್ಗೆ ವಿವರಣೆ ನೀಡುವಾಗ ಕಾರ್ಲ್ ಮಾರ್ಕ್ಸ್‌ರ ಹೆಸರನ್ನು ಹೇಳಿದ್ದೆ. ತರಗತಿಯ ನಂತರ ಒಬ್ಬ ವಿದ್ಯಾರ್ಥಿನಿ ನನ್ನನ್ನು ಭೇಟಿ ಮಾಡಿ 'ಅದೇನೋ ಮಾರ್ಕ್ಸ್ ಎಂದು ಹೇಳುತ್ತಿದ್ದಿರಲ್ಲಾ, ಏನು ಹಾಗೆಂದರೆ?' ಎಂದು ಕೇಳಿದರು. ಬಿ.ಎಸ್‌ಸಿ. ಓದಲು ಬರುವ ಬುದ್ಧಿವಂತರಲ್ಲೂ ಮಾರ್ಕ್ಸ್ ಅವರ ಹೆಸರು ಕೇಳಿಲ್ಲದವರಿರಬಹುದೆಂದು ನನಗೆ ಅರಿವಾದದ್ದು ಆಗಲೇ. ನಂತರದ ವರ್ಷಗಳಲ್ಲಿ ಈ ಅನುಭವ ಇನ್ನೂ ಹೆಚ್ಚಿದೆ.

ಮಾರ್ಕ್ಸ್‌ರ ಹೆಸರನ್ನು ಕೇಳದೆ ಬಿ.ಎಸ್‌ಸಿ. ಇರಲಿ, ಪಿಎಚ್.ಡಿ. ಕೂಡ ಪಡೆಯಬಹುದೆಂಬ ಜ್ಞಾನ ಈಗ ನನ್ನಲ್ಲಿ ಮೂಡಿದೆ. ಅವರ ಹೆಸರನ್ನು ಕೇಳಿರದಿದ್ದರೆ ಜ್ಞಾನದ ಕೊರತೆಯುಂಟಾಗಿರುತ್ತದೆಯೆಂದು ನಾನೇನೂ ಭಾವಿಸುವುದಿಲ್ಲ, ಅಥವಾ ಆ ಹೆಸರು ಕೇಳಿರುವವರೆಲ್ಲಾ ವಿದ್ವನ್ಮಣಿಗಳೆಂದೂ ನಾನು ತಿಳಿದಿಲ್ಲ. ಆದರೆ ವೈಜ್ಞಾನಿಕ ವಿಶ್ಲೇಷಣೆಯ ಅಭಾವವನ್ನು ಕಂಡಾಗ ಮಾರ್ಕ್ಸ್ ಅವರ ವಿಧಾನ ತಿಳಿದಿದ್ದಿದ್ದರೆ ಪರಿಸ್ಥಿತಿ ಬೇರೆ ಇರುತ್ತಿತ್ತೇನೋ ಎಂಬ ಭಾವನೆಯಂತೂ ನನ್ನಲ್ಲಿದೆ. ವೈಜ್ಞಾನಿಕ ಸಮಾಜವಾದದ ಧೋರಣೆ ಏನೆಂಬುದನ್ನು ತಿಳಿಯುವ ಗೋಜಿಗೆ ಹೋಗದೆಯೇ ಸಮಾಜವಾದವೆಂಬುದೊಂದು ಪಾತಕವೆಂದು ನಂಬುವಂತಹ ಕೆಲವರನ್ನು ಕಂಡಾಗ ಬೇರೆ ಹಲವರಿಗುಂಟಾಗುವಂತೆ ನನಗೂ ಆಶ್ಚರ್ಯ ಮತ್ತು ಅಸಮಾಧಾನ ಉಂಟಾಗುತ್ತದೆ. ಮಾರ್ಕ್ಸ್‌ವಾದವನ್ನು ಸ್ವಲ್ಪಮಟ್ಟಿಗೆ ನಿಷ್ಠೆಯಿಂದ ಅಭ್ಯಾಸ ಮಾಡುವ ನಾನು ಅದನ್ನು ವೈಜ್ಞಾನಿಕ ಮಾರ್ಗದರ್ಶಿ, ಅಧ್ಯಯನಕ್ಕೆ ಸಹಕಾರಿ, ಮತ್ತು ಹೋರಾಟಕ್ಕೆ ಪ್ರೇರಣೆ ಹಾಗೂ ತಾತ್ವಿಕ ಬುನಾದಿ ಎಂದು ಬಗೆದಿದ್ದೇನೆ. ವೈದಿಕ ಸಾಹಿತ್ಯ, ಪ್ರಾಚೀನ ಭಾರತೀಯ ತತ್ವಶಾಸ್ತ್ರ, ಪರಂಪರೆ, ಸಂಸ್ಕೃತಿ ಇತ್ಯಾದಿಗಳನ್ನು ಚಾರಿತ್ರಿಕ ದೃಷ್ಟಿಕೋಣದಿಂದ ಅರ್ಥಮಾಡಿಕೊಳ್ಳಲು ಈ ವೈಜ್ಞಾನಿಕ ಮಾರ್ಗದಿಂದ ಸಾಧ್ಯವಿದೆಯೆಂದು ನನ್ನ ಅಭಿಪ್ರಾಯ. ಇಂದಿನ ಬಹುಮುಖ ಜೀವನದ ಮತ್ತು ಕ್ರಿಯಾತ್ಮಕ ಚಟುವಟಿಕೆಗಳ ಸ್ವರೂಪ ಮತ್ತು ಪರಿಣಾಮಗಳನ್ನು ತಿಳಿದುಕೊಂಡು ಮುನ್ನಡೆಯಲು ಸಹ ಮಾರ್ಕ್ಸ್‌ವಾದ ಅನುವು ಮಾಡಿಕೊಡುತ್ತದೆ.

ಮಾರ್ಕ್ಸ್‌ವಾದದ ಬಗೆಗಿನ ನನ್ನ ತಿಳುವಳಿಕೆ ಸಮಗ್ರವಾಗಿಲ್ಲದಿರಬಹುದೆಂಬುದನ್ನು ಮೊದಲೇ ನಾನು ಅರಿಕೆ ಮಾಡಿಕೊಳ್ಳಬಯಸುತ್ತೇನೆ. ಆ ಕಾರಣದಿಂದಾಗಿ ನನ್ನ ಲೇಖನಗಳಲ್ಲಿ ಇರಬಹುದಾದ ನ್ಯೂನತೆಗೆ ಮತ್ತು ವೈಜ್ಞಾನಿಕ ವಿಧಾನದ ಕೊರತೆಗೆ ನಾನು ಕಾರಣನೇ ಹೊರತು ಮಾರ್ಕ್ಸ್ ಅವರ ತತ್ವಸಿದ್ಧಾಂತವಲ್ಲ. ಅಲ್ಲದೆ ಯಾವೊಂದು ವಿಷಯದ ಸಮಗ್ರ ವೈಜ್ಞಾನಿಕ ಪರಿಶೀಲನೆಗೂ ಅತ್ಯಗತ್ಯವಾದ ಎಲ್ಲಾ ಪರಿಕರಗಳೂ ನನ್ನಲ್ಲಿಲ್ಲದಿರಬಹುದು. ಹೀಗಾಗಿ ಈ ಲೇಖನಗಳು ಒಂದು ಚರ್ಚೆಯನ್ನು ಆರಂಭಿಸಲು ಬೇಕಾದ ಸಾಮಗ್ರಿಯಾಗಬಹುದೇ ಹೊರತು ಅವುಗಳಲ್ಲಿರುವ ಎಲ್ಲ ವಿಶ್ಲೇಷಣೆ ಮತ್ತು ಫಲಿತಾಂಶಗಳೂ ಅಂತಿಮವಾಗಿ ಮಾರ್ಕ್ಸ್‌ವಾದಿ ಧೋರಣೆಗಳು ಎಂದು ನಿರ್ಣಯಿಸಲಾಗುವುದಿಲ್ಲ.

ನನ್ನ ಲೇಖನಗಳು ಅಷ್ಟು ವಿದ್ವತ್ಪೂರ್ಣವಾಗಿಲ್ಲದಿರುವುದು ಒಂದು ಕೊರತೆಯಾದರೆ ಅವುಗಳ ಭಾಷೆ ಸಾಕಷ್ಟು 'ಅಕೆಡೆಮಿಕ್' ಆಗಿಲ್ಲವೆಂಬುದು ಇನ್ನೊಂದು ಕೊರತೆಯಿರಬಹುದು. ವಿದ್ವತ್ಸಭೆಗಳಲ್ಲಿ ಮಂಡಿಸಲು ಈ ಲೇಖನಗಳನ್ನು ನಾನು ಬರೆದಿರಲಿಲ್ಲ. ಪ್ರತಿ ಲೇಖನದ ಕೊನೆಯಲ್ಲೂ ಅದು ಮೊದಲು ಎಲ್ಲಿ ಪ್ರಕಟವಾಗಿದ್ದಿತೆಂಬುದನ್ನು ತಿಳಿಸಲಾಗಿದೆ. ತಿಳಿಸಿಲ್ಲದವುಗಳೂ ಕೆಲವು ಸಂಕಲನಗಳಿಗಾಗಿಯೇ ಬರೆಯಲಾಗಿದ್ದವು. ಅದನ್ನು ಗಮನಿಸಿದರೆ ನನ್ನ 'ನಾನ್-ಅಕೆಡೆಮಿಕ್' ಭಾಷೆಯನ್ನು ಓದುಗರು ಮನ್ನಿಸಬಹುದು. ಅವನ್ನು ಮೊದಲಿಗೆ ಪ್ರಕಟಿಸಿದ್ದ ಆಯಾಯ ಪತ್ರಿಕೆಗಳ ಸಂಪಾದಕರಿಗೆ ನಾನು ಋಣಿಯಾಗಿದ್ದೇನೆ. ಅಂತಹವರಲ್ಲಿ 'ಕೆಂಬಾವುಟ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಎಸ್.ಆರ್. ಭಟ್ ಅವರಿಗೆ ವಿಶೇಷವಾಗಿ ನನ್ನ ಕೃತಜ್ಞತೆ ಸಲ್ಲುತ್ತದೆ.

ಪ್ರಕಟಿತವಾದ ನನ್ನ ಎಲ್ಲ ಲೇಖನಗಳನ್ನೂ ನೋಡಿ, ಇಲ್ಲಿ ಸಂಕಲಿತವಾಗಿರುವುವನ್ನು ಆಯ್ದು, ಅವನ್ನು ಸಂಕಲನಕ್ಕಾಗಿ ಸಂಪಾದಿಸಿ, ಸಂಕಲನದ ಸುಂದರ ಹಸ್ತಪ್ರತಿಯನ್ನು ಸಿದ್ಧಪಡಿಸಿ, ಪ್ರಕಟಣೆಯ ಪ್ರತಿಯೊಂದು ಹಂತದಲ್ಲೂ ನನಗಿಂತ ಹೆಚ್ಚಿನ ಮುತುವರ್ಜಿ ವಹಿಸಿ

ಕೆಲಸ ಮಾಡಿದ್ದವರು ನನ್ನ ಪ್ರೀತಿಯ ಗೆಳತಿ ಎನ್. ಗಾಯತ್ರಿ. ಅವರಿಗೆ ನಾನು ವಂದನೆಗಳನ್ನು ತಿಳಿಸಿದರೆ ಅದಕ್ಕೆ ಗಾಯತ್ರಿ ಆಕ್ಷೇಪಿಸಬಹುದೆಂಬ ಕಾರಣದಿಂದ ಅವರ ಆತ್ಮೀಯತೆಯನ್ನು ಮಾತ್ರ ಇಲ್ಲಿ ನೆನೆಯುತ್ತೇನೆ. ಅಂತೆಯೇ ಎನ್. ಮಂಗಳಾ ನೀಡಿದ್ದ ಸಹಕಾರವನ್ನೂ ಸ್ಮರಿಸುತ್ತೇನೆ.

ಮೊದಲ ಮುದ್ರಣದ ಮುಖಪುಟ ವಿನ್ಯಾಸ ಮಾಡಿದ್ದವರು ನನ್ನ ಸಹೋದ್ಯೋಗಿ ಮಿತ್ರರಾದ ಶ್ರೀ ಕ. ನಂ. ನಾಗರಾಜು. ಈಗಿನ ಮುದ್ರಣಕ್ಕೆ ಅವರ ಮತ್ತು ನನ್ನ ವಿದ್ಯಾರ್ಥಿ ಮಿತ್ರ ಶ್ರೀ ಗಿರಿಧರ ಖಾಸನೀಸ್ ಅದನ್ನು ಮಾಡಿ ಉಪಕರಿಸಿದ್ದಾರೆ. ಅಂದಿನ ಮುದ್ರಣದ ಹಿಂಬದಿಯ ರಕ್ಷಾಪುಟವನ್ನು ಶ್ರೀಮತಿ (ಈಗ ಡಾ||) ಗಾಯತ್ರಿಯವರ ಅಂದವಾದ ಹಸ್ತಾಕ್ಷರಗಳು ಅಲಂಕರಿಸಿದ್ದುವು; ಈಗಿನ ರಕ್ಷಾಪುಟವನ್ನು ಅವರ ಮಗಳ ಪುಟ್ಟಕೈಗಳು ಸಿಂಗರಿಸಿಕೊಟ್ಟಿವೆ. ಈ ಪುಟ್ಟ ಕೈಯವಳ ಹೆಸರು ಬಿ. ಮೈತ್ರಿ. ಮೊದಲ ಮುದ್ರಣವನ್ನು ಇಳಾ ಪ್ರಿಂಟರ್ಸ್‌ನ ಶ್ರೀಮತಿ ವಿಜಯಾ ಮತ್ತು ಶ್ರೀ ಬಿ. ಗುರುಮೂರ್ತಿಯವರ ನೆರವಿನಿಂದ ಹೊರತರಲಾಗಿತ್ತು; ಈಗಿನದನ್ನು ನವಕರ್ನಾಟಕ ಪ್ರಕಾಶನದ ಬಂಧುಗಳು ನಿರ್ಮಿಸಿಕೊಟ್ಟಿದ್ದಾರೆ. ಸಹಕಾರ ನೀಡಿದ ಹಿಂದಿನ ಮತ್ತು ಇಂದಿನ ಎಲ್ಲ ಆತ್ಮೀಯರಿಗೂ ನನ್ನ ವಂದನೆಗಳು.

ಹೋರಾಟದಲ್ಲಿ ತೊಡಗಿರುವ ನಮಗೆಲ್ಲಾ ನಮ್ಮ ಹಾದಿಯ ಮುನ್ನೋಟ ಸ್ವಲ್ಪ ಮಟ್ಟಿಗಾದರೂ ಲಭ್ಯವಾಗಲು ಅಗತ್ಯವಾದ ಚರ್ಚೆಗೆ ಈ ಸಂಕಲನ ನೆರವಾಗಬಹುದೆಂಬುದು ನನ್ನ ಆಶಯ. ಹೋರಾಟದಲ್ಲಿ ಪಾಲ್ಗೊಳ್ಳುತ್ತಿರುವ ನಮ್ಮ ಬಂಧುಗಳಿಗೆ ಹೋರಾಟದಲ್ಲಿ ಸಹಭಾಗಿಯಾದ ನಾನು ಇದನ್ನು ಸಮರ್ಪಿಸುತ್ತಿದ್ದೇನೆ.

ಬೆಂಗಳೂರು ಜಿ. ಆರ್.
೨-೧೦-೨೦೦೫

# ವಿಷಯಸೂಚಿ

1

# ಭಾರತೀಯ ಸಂಸ್ಕೃತಿಯ ಇಣುಕುನೋಟ

ಪ್ರತಿಯೊಂದು ಕಾಲಘಟ್ಟದಲ್ಲೂ ಆಳುವ ವರ್ಗದ ಭಾವನೆಗಳು ಸಮಾಜವನ್ನು ಆಳುವ ಭಾವನೆಗಳಾಗಿ ಗೋಚರಿಸುತ್ತವೆ; ಅಂದರೆ, ಸಮಾಜದ ಭೌತಿಕ ಶಕ್ತಿಯಾಗಿ ಆಳುವ ವರ್ಗವು ಬೌದ್ಧಿಕ ಶಕ್ತಿಯಾಗಿಯೂ ಪರಿಣಮಿಸುತ್ತದೆ. ಭೌತಿಕ ಉತ್ಪಾದನೆಯ ಸಾಧನೆಗಳನ್ನು ಸ್ವಾಧೀನಪಡಿಸಿಕೊಂಡಿರುವ ವರ್ಗವು ಬೌದ್ಧಿಕ ಉತ್ಪಾದನಾ ಸಾಧನಗಳ ಮೇಲೆ ಸಹ ಹತೋಟಿಯನ್ನು ಸ್ಥಾಪಿಸಿಕೊಳ್ಳುತ್ತದೆ. ಆದ್ದರಿಂದ, ಸಾಮಾನ್ಯೀಕರಿಸಿ ಹೇಳುವುದಾದರೆ, ಬೌದ್ಧಿಕ ಉತ್ಪಾದನೆಯ ಸಾಧನೆಗಳನ್ನು ಹೊಂದಿರದಿದ್ದವರ ಭಾವನೆಗಳು ಅವನ್ನು ಹೊಂದಿರುವವರ ಭಾವನೆಗಳಿಗೆ ಅಧೀನವಾಗಿರುತ್ತವೆ.

**ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗೆಲ್ಸ್ :**
ದಿ ಜರ್ಮನ್ ಐಡಿಯಾಲಜಿ

ಮುನ್ನೋಟ/೨

# ವೈದಿಕ ಸಾಹಿತ್ಯದಲ್ಲಿ 'ಋತ'ದ ಚಿಂತನೆ

ಋತಮೇವ ಪರಮೇಷ್ಠೀ ।
ಋತಂ ನಾತ್ಯೇತಿ ಕಿಂಚನ ॥
– *ತೈತ್ತಿರೀಯ ಬ್ರಾಹ್ಮಣ, 1.5.5.1*

ಋಗ್ವೇದದ ಭಾಷಾಂತರಗಳು ಬಹಳಷ್ಟಿವೆ. ಮೊದಲಿನ ಕೆಲವು ಭಾಷಾಂತರಕಾರರಲ್ಲಿ ಆರ್. ಸಿ. ದತ್ ಒಬ್ಬ ಪ್ರಮುಖರು. ಅವರು ಆಂಗ್ಲಭಾಷೆಗೆ ಋಗ್ವೇದವನ್ನು ಭಾಷಾಂತರಿಸ ತೊಡಗಿದಾಗ ಕೆಲವು ಜಟಿಲವಾದ ಮಂತ್ರಗಳನ್ನನುವಾದಿಸುವುದರಲ್ಲಿದ್ದ ಕಷ್ಟವನ್ನರಿತು ಸಂಸ್ಕೃತ ಭಾಷೆಯಲ್ಲಿ ವಿಶೇಷ ಪಾಂಡಿತ್ಯವನ್ನು ಹೊಂದಿದ್ದ ವಿದ್ವಾಂಸರೊಬ್ಬರನ್ನು ಅರಸಹೊರಟರು. ಅಂದಿನ ಪರಂಪರಾಗತವಾದ ಮಡಿವಂತಿಕೆಯಿಂದಾಗಿ ಅವರಿಗೆ ಬೇಕಾಗಿದ್ದ ಸಹಾಯ ದೊರೆಯುವುದು ಕಷ್ಟಸಾಧ್ಯವಾಗಿತ್ತು. ಆಂಗ್ಲಭಾಷೆಗೆ ವೇದವನ್ನು ಅನುವಾದಿಸುವವನಿಗೆ ಸಹಾಯ ಮಾಡುವುದಾದರೂ ಹೇಗೆ! ಇಂತಹ ಪರಿಸ್ಥಿತಿಯಲ್ಲಿ ಈಶ್ವರಚಂದ್ರ ವಿದ್ಯಾಸಾಗರರು ತಮ್ಮ ಚೂಟಿ ವಿದ್ಯಾರ್ಥಿಗಳಲ್ಲೊಬ್ಬರಾಗಿದ್ದ ಹರಪ್ರಸಾದ್ ಶಾಸ್ತ್ರಿಯವರನ್ನು ದತ್ ಅವರಲ್ಲಿಗೆ ಕಳಿಸಿದರು. (ಆಗಿನ್ನೂ ಹರೆಯದಲ್ಲಿದ್ದ ಹರಪ್ರಸಾದರು ನಂತರ 'ಮಹಾಮಹೋಪಾಧ್ಯಾಯ' ಎಂಬ ಬಿರುದನ್ನು ಪಡೆದ ವ್ಯಕ್ತಿ.)

ಋಗ್ವೇದವನ್ನು ಕುರಿತ ಪೀಠಿಕೆಯೊಂದರಲ್ಲಿ ಹರಪ್ರಸಾದ ಶಾಸ್ತ್ರಿಗಳು ನುಡಿದಿದ್ದ ನಾಲ್ಕಾರು ಮಾತುಗಳು ಇಂದಿಗೂ ಅರ್ಥವತ್ತಾಗಿವೆ. ಮೊದಲಿಗೆ ಅವರು ಹೇಳಿದರು: ''ಋಗ್ವೇದದ ಬಗ್ಗೆ ನಿಮಗಿರಬಹುದಾದ ಅನೇಕ ಭ್ರಮೆಗಳನ್ನು ಕಳೆದುಕೊಳ್ಳಲಿಚ್ಛೆಯಿಲ್ಲದಿದ್ದಲ್ಲಿ ನನ್ನ ಈ ಮಾತುಗಳನ್ನು ಮುಂದಕ್ಕೆ ಓದಬೇಡಿ. ವೇದಗಳಲ್ಲಿದೆಯೆಂದು ನಂಬಲಾದ ಆಧ್ಯಾತ್ಮಿಕತೆಯು ಋಗ್ವೇದದಲ್ಲಿ ನಿಜಕ್ಕೂ ಇಲ್ಲವೆಂದು ತಿಳಿದು ನಿಮಗೆ ಆಘಾತವಾಗಬಹುದಷ್ಟೇ!'' ಮುಂದುವರಿದು ಅವರೆಂದರು: ''ಋಗ್ವೇದವನ್ನು ಯಥಾವತ್ತಾಗಿ ಅರ್ಥಮಾಡಿಕೊಳ್ಳಲು ಮೂರು ಸಾವಿರ ವರ್ಷಗಳ ಹಿಂದಿನ ಮಾನವನ ಪ್ರಜ್ಞೆಯ ಅರಿವಿನ ಅವಶ್ಯಕತೆಯಿದೆ.'' ಋಗ್ವೇದದ ಸ್ವರೂಪವನ್ನು ಕುರಿತು ಅವರು ನೀಡಿದ ವಿವರಣೆ ಇದು: ''ಆಂಗ್ಲಭಾಷೆಯಲ್ಲಿ ಪಾಲ್‌ಗ್ರೇವ್ ಸಂಕಲನ ಮಾಡಿರುವ 'ಗೋಲ್ಡನ್ ಟ್ರೆಷರಿ'ಯಲ್ಲಿರುವ ಕವನಗಳ ಕರ್ತೃಗಳು, ಅವರ ಕಾಲ, ಅವರ ಜೀವನ ಪರಿಚಯ ನಮಗೆ ಎಳ್ಳಷ್ಟೂ ಇಲ್ಲದಿದ್ದರೆ ಆ ಸಂಕಲನದ ಬಗ್ಗೆ ನಾವು ಯಾವ ಧೋರಣೆ ತಾಳುತ್ತಿದ್ದೆವು? ಋಗ್ವೇದವು ಬಹುಮಟ್ಟಿಗೆ ಅಂತಹ ಸಂಕಲನ.''

ಇದನ್ನೆಲ್ಲಾ ಕಡೆಗಣಿಸಿ ನಮ್ಮ ಪೂರ್ವಕಲ್ಪಿತ ಭಾವನೆಗಳೊಂದಿಗೆ ಋಗ್ವೇದವನ್ನು ಅರ್ಥೈಸುವುದು ಚರಿತ್ರೆಯ ಮೂಲಪಾಠವನ್ನು ಮರೆತಾಗ ಮಾತ್ರ ಸಾಧ್ಯ. ಅಂದಿನ ಜನಜೀವನದ ಸ್ವರೂಪವನ್ನು ಬದಿಗೊತ್ತಿ ನಂತರದ ತತ್ವಗಳನ್ನು ಆ ಗ್ರಂಥ ಸಮುದಾಯದ ಮೇಲೆ ಹೇರುವುದು ಅಪಚಾರವೇ ಸರಿ. ಅಲ್ಲಿ ಅಡಗಿರುವ ವಿಚಾರ, ಕಾವ್ಯಧಾರೆ, ವಿಶ್ವದ ಬಗೆಗಿನ ದೃಷ್ಟಿ, ತಾತ್ವಿಕ ನಿಲುವು, ಜೀವನ ಸೌಂದರ್ಯದ ಅನುಭವ, ಇತ್ಯಾದಿಗಳಿಗೆ ಯಾವ ಮೆರುಗನ್ನೂ ನೀಡದಿದ್ದರೂ ಋಗ್ವೇದದ ಸ್ಥಾನ ಕ್ಷೀಣಿಸುವುದಿಲ್ಲ. ಅಂದಿನ ಪರಿಸರದ ಬಗ್ಗೆ

ನಾವು ಜುಗುಪ್ಸೆ ಪಡಬೇಕಾಗಿಯೂ ಇಲ್ಲ.

ಉದಾಹರಣೆಗಾಗಿ ಋಗ್ವೇದದ ಒಂದೆರಡು ಮಂತ್ರಗಳನ್ನು ನೋಡೋಣ:

**ಯದಿನ್ನ್ವಿಂದ್ರ ಪೃಥಿವೀ ದಶಭುಜಿರಹಾನಿ ವಿಶ್ವಂ ತತನಂತ ಕೃಷ್ಟಯಃ।**

**ಅತ್ರಾಹ ತೇ ಮಘವನ್ವಿ ಶ್ರುತಂ ಸಹೋದ್ಯಾಮನು ಶವಸಾ ಬರ್ಹಣಾ ಭುವತ್ ॥**

(ಋ. 1.52.11)

(ಎಲೈ ಇಂದ್ರನೇ, ಒಂದು ವೇಳೆ ಪೃಥಿವಿಯು ಈಗಿರುವುದಕ್ಕಿಂತ ಹತ್ತರಷ್ಟು ಹೆಚ್ಚಾಗಿ ಬೆಳೆದರೂ, ಮನುಷ್ಯರೆಲ್ಲರೂ ಪ್ರತಿದಿನವೂ ಅಧಿಕ ಸಂಖ್ಯೆಯಲ್ಲಿ ವೃದ್ಧಿ ಹೊಂದಿದರೂ ಸಹ, ಈ ಬೆಳವಣಿಗೆಗೆ ಸಮನಾಗಿ ವೃತ್ರವಧಾದಿಗಳಿಗೆ ಕಾರಣನಾದ ನಿನ್ನ ಶಕ್ತಿಯೂ ಹೆಸರುವಾಸಿ ಯಾಗುತ್ತದೆ. ನಿನ್ನ ಸ್ವಶಕ್ತಿಯಿಂದ ಸಂಪಾದಿಸಿದ ವೃತ್ರವಧಾದಿರೂಪವಾದ ಈ ಕಾರ್ಯಸಿದ್ಧಿಯು ಅಂತರಿಕ್ಷದಷ್ಟು ವಿಸ್ತಾರವಾಗಿ ಹರಡಿದ ಕೀರ್ತಿಯನ್ನು ಪಡೆಯುತ್ತದೆ.)

ಒಬ್ಬ ದೇವತೆಯ ಅಮೋಘಶಕ್ತಿಯ ಬಗ್ಗೆ ಅವಿಚಲಿತವಾದ ನಂಬಿಕೆ ಇದು.

**ತಾ ಇನ್ನ್ವೇವ ಸಮನಾ ಸಮಾನೀರಮೀತವರ್ಣಾ ಉಷಸಶ್ಚರಂತಿ।**

**ಗೂಹಂತೀರಭ್ವಮಸಿತಂ ರುಶದ್ಭಿಃ ಶುಕ್ರಾಸ್ತನೂಭಿಃ ಶುಚಯೋ ರುಚಾನಾಃ ॥**

(ಋ. 4.51.9)

(ಪ್ರಸಿದ್ಧರಾದ ಅದೇ ಉಷಸ್ಸುಗಳು ಒಂದೇ ವಿಧವಾಗಿ, ಒಂದೇ ರೂಪದಿಂದ, ಅಪರಿಮಿತವಾದ ವರ್ಣದಿಂದ ಕೂಡಿದ್ದು, ಹಾಗೂ ಆರೋಚಕಗಳಾದ ತಮ್ಮ ಶರೀರಗಳಿಂದ ಪ್ರಕಾಶಮಾನರಾಗಿ, ಶುದ್ಧರಾಗಿ, ಮತ್ತು ಆಕರ್ಷಕರಾಗಿದ್ದು ಮಹತ್ತಾದ ಕಗ್ಗತ್ತಲೆಯನ್ನು ಮರೆಮಾಡುತ್ತಾ ಸುತ್ತಲೂ ಸಂಚರಿಸುತ್ತಾರೆ.)

ಉಷೋದೇವತೆಯ ಸ್ತುತಿಗಳಲ್ಲಿ ವಿಶೇಷವಾದ ಕಾವ್ಯಮಯಶಕ್ತಿ ಅಡಗಿದೆ ಎಂಬುದನ್ನು ಇಲ್ಲಿಗಮನಿಸಬಹುದು. ಆದರೆ ಋಗ್ವೇದದಲ್ಲಿ ಕೆಳಗಿನ ಮಂತ್ರದಂತಹ ಭಾಗಗಳೂ ಇವೆ.

**ಅಸುನ್ವಂತಂ ಸಮಂ ಜಹಿ ದೂಣಾಶಂ ಯೋ ನ ತೇ ಮಯಃ।**

**ಅಸ್ಮಭ್ಯಮಸ್ಯ ವೇದನಂ ದದ್ಧಿ ಸೂರಿಶ್ಚಿದೋಹತೇ ॥**

(ಋ. 1.176.4)

(ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಸೋಮಾಭಿಷವ ಮಾಡದೆ ಇರುವವನು, ನಿನಗೆ ಹೋಮಾದಿಗಳ ಮೂಲಕ ಸುಖವನ್ನುಂಟುಮಾಡದವನು, ಇವರೆಲ್ಲರನ್ನೂ ಒಂದೇ ಏಟಿಗೆ ವಧಿಸು ಮತ್ತು ಅವರ ಧನವನ್ನು ನಮಗೆ ದಾನ ಮಾಡು; ಏಕೆಂದರೆ ನಿನ್ನ ಸ್ತೋತೃಗಳೇ ಧನವನ್ನು ಪಡೆಯಲು ಅರ್ಹರು.)

ಅನ್ನದೇವತಾಕವಾದ ಪಿತುಸೂಕ್ತದಲ್ಲಿರುವ ಕೆಲವು ಮಂತ್ರಗಳಿವು:

**ಸ್ವಾದೋ ಪಿತೋ ಮಧೋ ಪಿತೋ ವಯಂ ತ್ವಾ ವವೃಮಹೇ।**

**ಅಸ್ಮಾಕಮವಿತಾ ಭವ ॥**

(1.187.2)

(ಆಸ್ವಾದನಾರ್ಹವೂ, ಮಾಧುರ್ಯೋಪೇತವೂ ಆದ ಎಲೈ ಅನ್ನವೇ, ನಾವು ನಿನ್ನನ್ನು ಸೇವಿಸುತ್ತೇವೆ. ನಮಗೆ ತೃಪ್ತಿದಾಯಕನಾಗಿರು.)

**ಯದದೋ ಪಿತೋ ಅಜಗನ್ವಿವಸ್ವ ಪರ್ವತಾನಾಮ್।**

**ಅತ್ರಾ ಚಿನ್ನೋ ಮಧೋ ಪಿತೋಽರಂ ಭಕ್ಷಾಯ ಗಮ್ಯಾಃ ॥**

(1.187.7)

(ಎಲೈ ಅನ್ನವೇ, ಮಿಂಚಿನಿಂದ ಪ್ರಕಾಶೋಪೇತವಾದ ಮೇಘಗಳಿಂದ ಸುರಿಯುವ ಉದಕವು ನಿನ್ನನ್ನು ಸೇರಿಕೊಂಡಾಗ ನೀನು ಮಾಧುರ್ಯೋಪೇತನಾಗುವೆ; ಅಂತಹ ಎಲೈ ಅನ್ನವೇ, ನಮಗೆ ಪುಷ್ಕಲವಾದ ಭಕ್ಷಣಕ್ಕೆ ಯೋಗ್ಯವಾಗಿರು ಮತ್ತು ಯಥೇಚ್ಛವಾಗಿ ಸನ್ನಿಹಿತನಾಗು.)

ಋಗ್ವೇದದ ನೂರಾರು ಇಂತಹ ಮಂತ್ರಗಳಲ್ಲಿ ಯಾವ ಅಧ್ಯಾತ್ಮತತ್ವವನ್ನು ಹುಡುಕೋಣ ? ಅಧ್ಯಾತ್ಮವಿಲ್ಲವಾದ ಮಾತ್ರಕ್ಕೆ ಋಗ್ವೇದದ ಘನತೆಗೆ ಕುಂದೇನಾದರೂ ಬರುತ್ತದೇನು ? ಅಂತಹ ಸಾಧ್ಯತೆಯೇನೂ ಇದ್ದಂತೆ ತೋರುವುದಿಲ್ಲ.

ಅಂದಿನ ಸಮಷ್ಟಿಜೀವನವನ್ನು ಸೂಚಿಸುವ ಈ ಎರಡು ಮಂತ್ರಗಳನ್ನು ಗಮನಿಸೋಣ:

**ತ ಇದ್ದೇವಾನಾಂ ಸಧಮಾದ ಆಸನ್ನೃತಾವಾನಃ ಕವಯಃ ಪೂರ್ವ್ಯಾಸಃ ।**
**ಗೂಳ್ಹಂ ಜ್ಯೋತಿಃ ಪಿತರೋ ಅನ್ವವಿಂದನ್ತ್ಸತ್ಯ ಮಂತ್ರಾ ಅಜನಯನ್ನುಷಾಸಮ್ ॥**
**ಸಮಾನ ಊರ್ವೇ ಅಧಿ ಸಂಗತಾಸಃ ಸಂಜಾನತೇ ನ ಯತಂತೇ ಮಿಥಸ್ತೇ ।**
**ತೇ ದೇವಾನಾಂ ನ ಮಿನಂತಿ ವ್ರತಾನ್ಯಮರ್ಧಂತೋ ವಸುಭಿರ್ಯಾದಮಾನಃ ॥**

*(7.76.4 ಮತ್ತು 5)*

(ಋತದ ಹಾದಿಯಲ್ಲಿ ನಡೆಯುತ್ತಾ ದೇವತೆಗಳೊಂದಿಗೆ ಯಾವ ನಮ್ಮ ಪೂರ್ವಜರು ಕಲೆತು ಸವಿಯುತ್ತಿದ್ದರೋ ಅವರು ಮರೆಯಾಗಿದ್ದ ತೇಜಸ್ಸನ್ನು ಹೊಂದಿದರು. ಅವರೇ ಉಷಸ್ಸನ್ನು ಉತ್ಪನ್ನಮಾಡಿದರು. ಅವರು ಮೇಧಾವಿಗಳೂ ಪೂರ್ವಕಾಲೋತ್ಪನ್ನರೂ ಸಹ ಆಗಿದ್ದರು. ಎಲ್ಲರಿಗೂ ಒಟ್ಟಿಗೆ ಸೇರಿದ ಗೋ ಸಮೂಹವು ಪುನಃ ಸಿಕ್ಕಿದಾಗ ಅಂಗಿರಸ್ಸುಗಳು ಒಟ್ಟಿಗೆ ಸೇರಿಕೊಂಡು ಒಂದೇ ಮನಸ್ಸುಳ್ಳವರಾದರು. ಪರಸ್ಪರ ಒಬ್ಬರಿಗೊಬ್ಬರಿಗೆ ವಿರುದ್ಧವಾದ ಪ್ರಯತ್ನವನ್ನು ಮಾಡಲಿಲ್ಲ. ತಮ್ಮ ತೇಜಸ್ಸುಗಳಿಂದ ಹಿಂಸಾರಹಿತರಾಗಿ ಮುಂದುವರೆಯುತ್ತಾ ದೇವತೆಗಳಿಗೆ ಸೇರುವ ಯಾಗಕರ್ಮಗಳನ್ನು ಮುಂದುವರಿಸುತ್ತಾರೆ.)

ಋಗ್ವೇದದ ಕಾಲದ ಜೀವನಸೋಪಾನದ ಮೊದಲಘಟ್ಟದ ನಿರೂಪಣೆ ಇದು. ಅದರ ನೆನಪು ಪದೇ ಪದೇ ಈ ಕವಿಗಳಿಗೆ ಮರುಕಳಿಸುತ್ತದೆ. ಹಿಂದಿನ ಸಮಾಜದಲ್ಲಿದ್ದ ಗಣಗಳು, ಆ ಗಣಗಳ ಜೀವನವೈಖರಿ ಎರಡೂ ನಶಿಸಿಹೋಗಿ ಅದರ ನೆನಪು ಇವರನ್ನು ಪುಲಕಿತ ಗೊಳಿಸುತ್ತದೆ. ಬದಲಾಗಿದ್ದ ಸಮಾಜದಲ್ಲಿ ಹಿಂದಿನ ಪದ್ಧತಿಗಳಿಲ್ಲ. ಆ ಹಿಂದಿನ ಪದ್ಧತಿ ಯಾವುದು? ಇದಕ್ಕೆ ಉತ್ತರವಾಗಿ ದೊರೆಯುವುದು 'ಋತ'ದ ಕಲ್ಪನೆ.

**ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ ದೇವಸ್ಯ ಭರ್ಗಃ ಸಹಸೋ ಯತೋ ಜನಿ ।**
**ಯದೀಮುಪ ಹ್ವರತೇ ಸಾಧತೇ ಮತಿರ್ಋತಸ್ಯ ಧೇನಾ ಅನಯಂತ ಸಸ್ರುತಃ ॥**

*(1.141.1)*

(ಪ್ರಸಿದ್ಧವಾದ ಆದಿತ್ಯನ ತೇಜಸ್ಸು ಎಲ್ಲರ ಶರೀರಗಳಲ್ಲೂ ದಾರ್ಢ್ಯಕ್ಕೆ ಕಾರಣವಾಗಿದೆ. ಆ ತೇಜಸ್ಸನ್ನು ನನ್ನ ಮತಿಯು ವರಿಸುತ್ತದೆ. ತೇಜೋರೂಪವಾದ ಅಗ್ನಿಯನ್ನು ಸುಲಲಿತವಾಗಿ ಹೊರಹೊಮ್ಮಿಸುವ ಋತ ಸಂಬಂಧಿಯಾದ ಮಂತ್ರವಾಕ್ಕಿನಿಂದ ಸ್ತುತಿಸುತ್ತೇನೆ.)

**ಆ ವಾಂ ಭೂಷನ್‌ಕ್ಷಿತಯೋ ಜನ್ಮ ರೋದಸ್ಯೋಃ ಪ್ರವಾಚ್ಯಂ ವೃಷಣಾ ದಕ್ಷಸೇ ಮಹೇ ।**
**ಯದೀಮೃತಾಯ ಭರಥೋ ಯದರ್ವತೇ ಪ್ರ ಹೋತ್ರಮಾ ಶಿಮ್ಯಾ ವೀಥೋ ಅಧ್ವರಮ್ ॥**
**ಪ್ರ ಸಾ ಕ್ಷಿತಿರಸುರ ಯಾ ಮಹಿ ಪ್ರಿಯ ಋತಾವಾನಾವೃತಮಾ ಘೋಷಥೋ ಬೃಹತ್ ।**
**ಯುವಂ ದಿವೋ ಬೃಹತೋ ದಕ್ಷಮಾಭುವಂ ಗಾಂ ನ ಧುರ್ಯುಪ ಯುಂಜಾಥೇ ಅಪಃ ॥**

*(1.151.3-4)*

(ಮಿತ್ರಾವರುಣರೇ, ನಿಮ್ಮನ್ನು ಪೂಜಿಸುವವನ ಋತಕ್ಕೆ ಪ್ರತಿಯಾಗಿ ನೀವು ಅವನಿಗೆ ಫಲ ನೀಡಿದ್ದೀರಿ; ನಿಮ್ಮಿಬ್ಬರ ಶ್ಲಾಘ್ಯವಾದ ಜನನವು ದ್ಯಾವಾಪೃಥಿವಿಗಳಿಂದ ಉಂಟಾಗಿದೆ. ಅಸುರರಾದ ಮಿತ್ರಾವರುಣರೇ, ಪ್ರಿಯಕರವಾದ ಭೂಮಿಯು ಋತೋಪಾಸಕರಾದ ನಿಮ್ಮನ್ನು ಸ್ವೀಕರಿಸಲು ಸಿದ್ಧವಾಗಿದೆ. ನೀವಿಬ್ಬರೂ ಋತವನ್ನು ಘೋಷಿಸಿ...)

**ವೈಶ್ವಾನರಃ ಪ್ರತ್ನಥಾ ನಾಕಮಾರುಹದ್ದಿವಸ್ಪೃಷ್ಠಂ ಭಂದಮಾನಃ ಸುಮನ್ಮಭಿಃ ।**

**ನ ಪೂರ್ವವಜ್ಜನಯನ್ ಜಂತವೇ ಧನಂ ಸಮಾನಮಜ್ಮಂ ಪರ್ಯೇತಿ ಜಾಗೃವಿಃ ॥**

*(3.2.12)*

(ಸ್ತೋತ್ರಗಳಿಂದ ಸ್ತುತಿಸಲ್ಪಟ್ಟ ವೈಶ್ವಾನರನು ಹಿಂದಿನಂತೆ ಅಂತರಿಕ್ಷದ ಉಪರಿತನ ಪ್ರದೇಶವಾದ ಸ್ವರ್ಗಕ್ಕೇರುತ್ತಾನೆ. ಅದೇ ವೈಶ್ವಾನರನು ಹಿಂದಿನವರಿಗೆ ಒದಗಿಸಿದಂತೆ ಈ ಸ್ತುತಿಕರ್ತನಿಗೂ ಪಶ್ವಾದಿರೂಪದ ಧನವನ್ನು ಒದಗಿಸುತ್ತಾನೆ ಮತ್ತು ಪ್ರಬುದ್ಧನಾಗಿ ದೇವತೆಗಳ ಮಾರ್ಗದಲ್ಲಿ ಸಂಚರಿಸುತ್ತಾನೆ.)

**ಋತಸ್ಯ ದೃಳ್ಹಾ ಧರುಣಾನಿ ಸಂತಿ ಪುರೂಣಿ ಚಂದ್ರಾ ವಪುಷೇ ವಪೂಂಷಿ ।**

**ಋತೇನ ದೀರ್ಘಮಿಷಣಂತ ಪೃಕ್ಷ ಋತೇನ ಗಾವ ಋತಮಾವಿವೇಶುಃ ॥**

*(4.23.9)*

(ಉತ್ತಮ ರೂಪವುಳ್ಳ ಋತದ ದೃಢ ಮತ್ತು ಲೋಕಧಾರಕ ಶಕ್ತಿಯು ಬಹುಪ್ರಕಾಶವೂ ಮನೋಜ್ಞವೂ ಆಗಿದೆ. ಋತದ ಸಹಾಯದಿಂದ ಹೇರಳವಾದ ಅನ್ನ ದೊರೆಯುತ್ತದೆ. ಋತದಿಂದ ಹಸುಗಳು ಋತವನ್ನು ಪ್ರವೇಶಿಸುತ್ತವೆ.)

**ಯುವೋರ್ಋತಂ ರೋದಸೀ ಸತ್ಯಮಸ್ತು ಮಹೇ ಷು ಣಃ ಸುವಿತಾಯ ಪ್ರಭೂತಮ್ ।**

**ಇದಂ ದಿವೇ ನಮೋ ಅಗ್ನೇ ಪೃಥಿವ್ಯೈ ಸಪರ್ಯಾಮಿ ಪ್ರಯಸಾ ಯಾಮಿ ರತ್ನಮ್ ॥**

*(3.54.3)*

(ದ್ಯಾವಾ ಪೃಥಿವೀ ದೇವತೆಗಳೇ, ನಿಮ್ಮ ಸತ್ಯ ಸ್ವರೂಪದ ಋತವು ಶಾಶ್ವತವಾಗಿರಲಿ. ನಮ್ಮ ಕಾರ್ಯಗಳ ಶುಭ ಪರಿಸಮಾಪ್ತಿಗೆ ನೀವು ಅನುಗ್ರಹ ನೀಡಿ...)

**ಷಡ್ಭಾರಾನೇಕೋ ಅಚರನ್ಬಿಭರ್ತಿ ಋತಂ ವರ್ಷಿಷ್ಠಮುಪ ಗಾವ ಆಗುಃ ।**

**ತಿಸ್ರೋ ಮಹೀರುಪರಾಸ್ತಸ್ಥುರತ್ಯಾ ಗುಹಾ ದ್ವೇ ನಿಹಿತೇ ದರ್ಶ್ಯೇಕಾ ॥**

*(3.50.2)*

(ಸಂವತ್ಸರವು ಆರು ಋತುಗಳನ್ನು ತಪ್ಪದೆ ಧರಿಸುತ್ತದೆ. ಸೂರ್ಯರಶ್ಮಿಗಳು ಋತವನ್ನು ಆವರಿಸಿ ಹರಡಿಕೊಳ್ಳುತ್ತವೆ. ಸುತ್ತುವ ಮೂರು ಬೇರೆ ವಲಯಗಳು ಮೇಲೆ ಇವೆ. ಅವುಗಳಲ್ಲಿ ಎರಡು ಗೋಚರ. ಇನ್ನೊಂದು ಅಗೋಚರ.)

ಈ ವಿವಿಧ ಮಂತ್ರಗಳನ್ನುದ್ಧರಿಸಿರುವುದು ಒಂದು ಉದ್ದೇಶಕ್ಕಾಗಿ: 'ಋತ'ದ ಕಲ್ಪನೆಯ ಮಹತ್ವವನ್ನು ಅರಿಯಲು ಹಾಗೂ ಆ ಕಲ್ಪನೆಯ ವಿವಿಧ ಮುಖಗಳನ್ನು ಗುರುತಿಸಲು. ವೈದಿಕ ಸಾಹಿತ್ಯದಲ್ಲಿ ಮತ್ತು ವಿಶೇಷವಾಗಿ ಋಗ್ವೇದದಲ್ಲಿ ಋತದ ಕಲ್ಪನೆಗಿಂತಲೂ ಆಳವಾದ ಬೇರೊಂದು ಕಲ್ಪನೆಯಿಲ್ಲ. ವೇದಗಳ ಕಾಲದ ಜನಜೀವನವನ್ನು ಪ್ರತಿಬಿಂಬಿಸುವುದರಲ್ಲಿ ಈ ಕಲ್ಪನೆಗೇ ಪ್ರಧಾನ ಸ್ಥಾನ. ಬದಲಾಗುತ್ತಿದ್ದ ಸಮಾಜದ ಆಗುಹೋಗುಗಳನ್ನು ಗುರುತಿಸುವುದೂ ಸಹ ಈ ಕಲ್ಪನೆಯ ಬೆಳವಣಿಗೆಯ ವಿಶ್ಲೇಷಣೆಯಿಂದ ಸಾಧ್ಯ.

ಪ್ರಾಚೀನ ಸಮಾಜಗಳೆಲ್ಲಾ ಬುಡಕಟ್ಟಿನ ಆಯಾಮದಲ್ಲಿ ರಚಿತವಾಗಿದ್ದ ಸಮಾಜಗಳು. ಋಗ್ವೇದದಲ್ಲಿ ಅವನ್ನು ಗಣಗಳೆಂದು ನಿರ್ದೇಶಿಸಲಾಗಿದೆ. ಋಗ್ವೇದದಲ್ಲಿ ವಿವಿಧ ಸ್ತರಗಳನ್ನು

ಗುರುತಿಸಬಹುದೆಂದು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ವ್ಯಾಪಕವಾಗಿ ಹೇಳುವುದಾದರೆ ಋಗ್ವೇದದ ಎರಡನೆಯ ಮಂಡಲವು ಹತ್ತನೆಯ ಮಂಡಲಕ್ಕಿಂತಲೂ ಹಿಂದಿನದು. ಅಲ್ಲಿನ ಒಂದು ಮಂತ್ರ (2.23.1) ಹೀಗಿದೆ:

**ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾಮುಪಮಶ್ರವಸ್ತಮಮ್ ।**
**ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆ ನಃ ಶೃಣ್ವನ್ನೂತಿಭಿಃ ಸೀದ ಸಾದನಮ್ ॥**

(ಎಲೈ ಬ್ರಹ್ಮಣಸ್ಪತಿಯೇ, ನಾವು ನಿನ್ನನ್ನು ಸ್ತುತಿಸಿ ಮೊರೆಯಿಡುತ್ತೇವೆ. ಗಣಗಳ ಅಧಿಪತಿ ನೀನು. ಕವಿಗಳಲ್ಲಿ ಶ್ರೇಷ್ಠತಮನು ನೀನು. ಎಲ್ಲ ವಿಧದ ಆಹಾರಗಳಿಗೂ ನೀನೇ ಶ್ರೇಷ್ಠ ಕಲ್ಪಯಿತೃ. ನೀನು ಸ್ತೋತ್ರಗಳಿಗೆ ಒಡೆಯ. ನಮ್ಮ ಸ್ತುತಿಗೆ ಓಗೊಟ್ಟು ನಮ್ಮಲ್ಲಿಗೆ ಬಂದು ನಮ್ಮನ್ನು ಪಾಲಿಸು.)

ಹೀಗೆ ಸ್ತುತಿಸಲಾಗಿರುವ ಗಣ-ಪತಿ ಋಗ್ವೇದದಲ್ಲಿ ಕಾಣಿಸಿಕೊಳ್ಳುವುದು ಕೆಲವು ಬಾರಿ ಮಾತ್ರವಾದರೂ ಗಣಗಳ ಬಗ್ಗೆ ಸಾಕಷ್ಟು ಉಲ್ಲೇಖಗಳಿವೆ. ಬಹುಮಟ್ಟಿಗೆ ಇದರಿಂದ ಸೂಚಿಸಲಾಗುವುದು ಮರುದ್ದೇವತೆಗಳ ಸಾಮೂಹಿಕ ಜೀವನವನ್ನು. ಹಲವೆಡೆಗಳಲ್ಲಿ ಋಗ್ವೇದದ ಕವಿಗಳ ಸಾಮೂಹಿಕ ಜೀವನವನ್ನು ಸಹ ಇದು ಸೂಚಿಸುತ್ತದೆ. ಉದಾಹರಣೆಗೆ ಕೆಳಗಿನ ಮಂತ್ರಗಳನ್ನು ನೋಡಬಹುದು.

**ಸದಾಪೃಣೋ ಯಜತೋ ವಿ ದ್ವಿಷೋ ವಧೀದ್ಬಾಹುವೃಕ್ತಃ ಶ್ರುತವಿತ್ತರ್ಯೋ ವಃ ಸಚಾ ।**
**ಉಭಾ ಸ ವರಾ ಪ್ರತ್ಯೇತಿ ಭಾತಿ ಚ ಯದೀಂ ಗಣಂ ಭಜತೇ ಸುಪ್ರಯಾವಭಿಃ ॥**

*(5.44.12)*

(ಎಲೈ ವಿಶ್ವದೇವತೆಗಳೇ, ಸದಾ ಉದಾರದಾನಿಗಳಾದ ಯಜಮಾನರು, ಅಂದರೆ ಯಜ್ಞ ಮಾಡುವ ಒಡೆಯರು, ಸಂಪತ್ತನ್ನು ಗಳಿಸಲು ತಮ್ಮ ಶಾಸ್ತ್ರಗಳಿಂದ ಮತ್ತು ನಿಮ್ಮ ಸಹಾಯದಿಂದ ಶತ್ರುಗಳನ್ನು ಜಯಿಸಲಿ; ಎರಡು ಇಚ್ಛೆಗಳೂ ನೆರವೇರುತ್ತವೆಯಾದ್ದರಿಂದಲೇ ಮುಕ್ತ ಸ್ತುತಿಗಳಿಂದ ಗಣಗಳನ್ನು ಹೊಗಳುತ್ತಾರೆ.)

**ಯಚ್ಚಿದ್ಧಿ ತೇ ಗಣಾ ಇಮೇ ಛದಯಂತಿ ಮಘತ್ತಯೇ ।**
**ಪರಿ ಚಿದ್ವಷ್ಟಯೋ ದಧುರ್ದದತೋ ರಾಧೋ ಅಹ್ರಯಂ ಸುಜಾತೇ ಅಶ್ವಸೂನೃತೇ ॥**

*(5.79.5)*

(ಎಲೈ ಉಷೋದೇವತೆಯೇ, ಉನ್ನತಮಟ್ಟದಲ್ಲಿ ಜನಿಸಿರುವ ನೀನು ಅಶ್ವಗಳನ್ನು ಸಂಪ್ರೀತಿಯಿಂದ ಕಾಣುವೆ; ಈ ಗಣಗಳ ಮುಖೇನ ಧನ ಧಾನ್ಯಕ್ಕಾಗಿ ನಾವು ನಿನ್ನನ್ನು ಬೇಡುತ್ತೇವೆ. ಇಚ್ಛೆಯಿಂದ ಕೂಡಿದ ನಮ್ಮಲ್ಲಿ ನೀನು ಬಹುವಾಗಿ ಧನಧಾನ್ಯವನ್ನು ವಿತರಣೆ ಮಾಡು.)

**ಇಂದ್ರ ಪಿಬ ತುಭ್ಯಂ ಸುತೋ ಮದಾಯಾವ ಸ್ಯ ಹರೀ ವಿ ಮುಚಾ ಸಖಾಯಾ ।**
**ಉತ ಪ್ರ ಗಾಯ ಗಣ ಆ ನಿಷದ್ಯಾಥಾ ಯಜ್ಞಾಯ ಗೃಣತೇ ವಯೋ ಧಾಃ ॥**

*(6.40.1)*

(ಎಲೈ ಇಂದ್ರನೇ, ನಿನ್ನ ಸಂತುಷ್ಟಿಗಾಗಿ ಅರ್ಪಿಸಲಾದ ಸೋಮವನ್ನು ಪಾನಮಾಡು; ಮತ್ತು ನಿನ್ನ ಮಿತ್ರರಾದ ಎರಡು ಅಶ್ವಗಳನ್ನು ಹಿಡಿದುಬಿಡು. ನಂತರ ಗಣಗಳ ಮಧ್ಯೆ ಬಂದು ಕೂಡು ಮತ್ತು ನಮಗೆ ಆಹಾರ ದೊರಕುವಂತಾಗಲು ಗಾನಮಾಡು.)

**ಇಮಂ ಚ ನೋ ಗವೇಷಣಂ ಸಾತಯೇ ಸೀಷಧೋ ಗಣಮ್ ।**
**ಆರಾತ್ಪೂಷನ್ನಸಿ ಶ್ರುತಃ ॥**

*(6.56.5)*

(ಪೂಷನ್ ದೇವತೆಯೇ, ನಿನ್ನ ಖ್ಯಾತಿ ಎಲ್ಲೆಲ್ಲೂ ಪಸರಿಸಿದೆ; ನಮ್ಮ ಗಣಕ್ಕೆ ಸ್ಫೂರ್ತಿಯನ್ನು ಉಂಟುಮಾಡು ಮತ್ತು ಆಕಳನ್ನು ಅರಸಿ ನಮಗೆ ಹಿತವಾಗುವಂತಾಗಲು ಗಣಗಳನ್ನು ಪ್ರೇರೇಪಿಸು.)

ಇಲ್ಲೆಲ್ಲಾ ಬರುವ 'ಗಣ' ಶಬ್ದದ ಅರ್ಥವನ್ನು ನಿರ್ಧರಿಸುವುದರಲ್ಲಿ ಪ್ರಭೇದಗಳು ಹಿಂದಿನಿಂದಲೂ ಕಂಡುಬಂದಿವೆ. ಸಾಯಣಾಚಾರ್ಯರು ಈ ಶಬ್ದಕ್ಕೆ ದೇವತೆಗಳ ಸಂಘ, ಮನುಷ್ಯ ಸಂಘ, ಯಜಮಾನಗಣ (ಅಂದರೆ ಯಜ್ಞಾದಿಗಳನ್ನು ಮಾಡುವವರ ಗುಂಪು), ಸಂಘಭೂತ (ಅಂದರೆ ಸಾಮೂಹಿಕ ಸಂಘಟನೆ), ಮತ್ತು ಸ್ತೋತೃಸಂಘ (ಅಂದರೆ, ಒಟ್ಟಾಗಿ ಗಾನಮಾಡುವವರು) ಎಂದು ವಿಧವಿಧವಾಗಿ ಅರ್ಥಗಳನ್ನು ಸೂಚಿಸಿದ್ದಾರೆ. ಯಾವ ಅರ್ಥವನ್ನು ಸ್ವೀಕರಿಸಿದರೂ ಒಂದು ರೀತಿಯ ಸಾಮೂಹಿಕ ಜೀವನವನ್ನು ಸೂಚಿಸುವಂತಹ ಪದ ಇದೆಂಬುದನ್ನಂತೂ ಒಪ್ಪಲೇಬೇಕು. ಬುಡಕಟ್ಟಿನ ಜನಾಂಗದ ಸಾಮೂಹಿಕ ಜೀವನಧರ್ಮದ ಸ್ಥಾನದಲ್ಲಿ ಒಂದೇ ಜನಾಂಗದಲ್ಲಿ ಮೇಲುಕೀಳುಗಳೆಂಬ ಭೇದಗಳಿಂದ ವಿವಿಧ ಬಣಗಳು ಅಸ್ತಿತ್ವಕ್ಕೆ ಬಂದಾಗ ಹಿಂದಿನ ಜೀವನಧರ್ಮಗಳಿಗೆ ಬದಲಾಗಿ ಬೇರೊಂದು ವ್ಯವಸ್ಥೆ ಕಾಣಿಸಿಕೊಳ್ಳುವುದು ಸಹಜ. ಹಾಗೆ ವಿಂಗಡಣೆಗೊಳ್ಳುವ ಮುನ್ನ ಬುಡಕಟ್ಟಿನ ಸಾಮೂಹಿಕ ಜೀವನದ ಚರ್ಯೆಗಳನ್ನು ಸೂಚಿಸುವುದು 'ಋತ'. ''ಆ ಹಿಂದಿನ 'ಋತ' ಎಲ್ಲಿಗೆ ಹೋಯಿತು?'' ಎಂದು ಪರಿತಪಿಸುವ ಋಗ್ವೇದದ ಕವಿಯ ಮನಸ್ಸಿನಲ್ಲಿರುವುದು ಅಂದಿದ್ದು ಇಂದು ಇಲ್ಲವಾಗಿರುವ ವಿಶಿಷ್ಟ ಜೀವನಧರ್ಮ. ಅದಕ್ಕೆ ಕವಿ ಉಪಯೋಗಿಸುವುದು 'ಋತ'ದ, ಅಂದರೆ ಜನಾಂಗ ವ್ಯವಸ್ಥೆಯ, ಕಲ್ಪನೆ.

ಮುಂದಿನ ಹಂತದಲ್ಲಿ ಈ ಶಬ್ದದ ಅರ್ಥವ್ಯಾಪ್ತಿ ಬೇರೆ ರೀತಿಗಳಲ್ಲಿ ಬೆಳೆಯಿತು. ವಿಶ್ವದ ನಿಯಮಗಳನ್ನು ಗಮನಿಸಿದ ಕವಿ ತದೇಕಪ್ರಕಾರವಾಗಿ ತಪ್ಪದೆ ನಡೆಯುತ್ತಿದ್ದ ಘಟನೆಗಳನ್ನು ಹೇಗೆ ತಾನೆ ಗುರುತಿಸದಿರಲು ಸಾಧ್ಯ? ಆ ನಿಯಮಗಳನ್ನೆಲ್ಲಾ ಇಂದಿಗೂ ನಾವು ಸಂಪೂರ್ಣವಾಗಿ ಅರಿತಿಲ್ಲ. ಜ್ಞಾನದ ಸ್ವಭಾವವೇ ಹಾಗೆ. ಯಾವೊಂದು ಚಾರಿತ್ರಿಕ ಘಟ್ಟದಲ್ಲೂ ಪೂರ್ಣಜ್ಞಾನ ಮಾನವನಿಗೆ ನಿಲುಕಲಾರದು. ಹೆಜ್ಜೆಹೆಜ್ಜೆಗೂ ತನ್ನ ಅನುಭವದಿಂದ ಮತ್ತು ತನ್ನ ಸುತ್ತಣ ಪ್ರಪಂಚದೊಡನೆ ಸಂಪರ್ಕವಿಟ್ಟುಕೊಂಡು ಅದರೊಡನೆ ಸೊಬಗನ್ನೋ ಕ್ರೌರ್ಯವನ್ನೋ ಅರಿತು ವಿಸ್ಮಯಗೊಳ್ಳುವ ಕವಿ ವಿಶ್ವಸಾಹಿತ್ಯದಲ್ಲಿ ಎಷ್ಟು ಬಾರಿ ಕಾಣಿಸಿಕೊಂಡಿಲ್ಲ? ಎಷ್ಟೇ ನದಿಗಳು ಬಂದು ಸಮುದ್ರವನ್ನು ಹೊಕ್ಕರೂ ಈ ಸಮುದ್ರ ಮಾತ್ರ ಉಕ್ಕಿ ಹರಿಯುವುದಿಲ್ಲವಲ್ಲಾ! (ಬೇರೆ ಕೆರೆಕಟ್ಟೆಗಳು ತುಂಬಿಹರಿಯುವಂತೆ ಇಲ್ಲೂ ಆಗಬೇಕಲ್ಲವೇ ? ಆದರೆ ಹಾಗಾಗದಿರುವುದು ಐದು ಸಾವಿರ ವರ್ಷಗಳ ಹಿಂದಿನ ಕವಿಯನ್ನು ವಿಸ್ಮಯಗೊಳಿಸಿದರೆ ಆಶ್ಚರ್ಯವೇನಿದೆ ?) ರಾತ್ರಿಯಲ್ಲಿ ಕಾಣುವ ನಕ್ಷತ್ರಗಳು ಬೆಳಗಾದಾಗ ಎಲ್ಲಿ ಹೋಗುತ್ತವೆ ? ಇದನ್ನು ತಿಳಿದವರಾರು? ವರ್ಷವೊಂದರಲ್ಲಿ ಪ್ರಕೃತಿಯಲ್ಲಿ ಎಷ್ಟು ಬದಲಾವಣೆಗಳು ? ಇವು ಮತ್ತೆ ಮತ್ತೆ ಅದೇ ರೀತಿಯಲ್ಲಿ ಹೇಗುಂಟಾಗುತ್ತವೆ ? ಇದಕ್ಕೆಲ್ಲಾ ನಿಯಾಮಕ ಶಕ್ತಿ ಯಾವುದು ? ಎಲ್ಲಿದೆ ? ಇಂತಹ ಪ್ರಶ್ನೆಗಳಿಗೆಲ್ಲಾ ಕ್ರೋಢೀಕೃತವಾದ ಒಂದುತ್ತರ ಋಗ್ವೇದದ ಕವಿಗಳ 'ಋತ'ದ ಕಲ್ಪನೆಯಲ್ಲಿ ಸೇರಿದೆ. ಅದರ ಅಧಿಷ್ಠಾತೃ ದೇವತೆಗಳಲ್ಲಿ ವರುಣನು ಪ್ರಮುಖ; ಆತನ ನಿಯಾಮಕ ಶಕ್ತಿಯ ಸ್ವರೂಪ 'ವರುಣನ ವ್ರತ'ವಾಗುತ್ತದೆ. (ಅದಬ್ಧಾನಿ ವರುಣಸ್ಯ ವ್ರತಾನಿ).

ವಿಶ್ವದಲ್ಲೊಂದು ನಿಯಮವಿದ್ದರೆ ವಿಶ್ವದಲ್ಲೊಬ್ಬನಾಗಿ ಬಾಳುವವನು ನಿಯಮಾತೀತನಾಗಿ ಬಾಳುವುದು ಶಕ್ಯವೇ ಮತ್ತು ಸಾಧುವೇ? ಬಾಹ್ಯ ಪ್ರಪಂಚದ ನಿಯಮಗಳಿಂದ ಆತನು ಸ್ಫೂರ್ತಿ ಪಡೆದು ತನ್ನ ಮತ್ತು ತನ್ನೊಡನಿರುವ ಇತರರ ಜೀವನವನ್ನೂ ನಿಯಮನಗೊಳಿಸಿ

ಕೊಳ್ಳುವುದು 'ಋತ'ದ ಕಲ್ಪನೆಯ ಇನ್ನೊಂದು ಮುಖ. ಅನೃತಭಿನ್ನವಾದ ಋತ, ಅಥವಾ ಸತ್ಯ, ಎಂದರೆ ಈ ನೈತಿಕ ನಿಯಮ. ಪ್ರಾಕೃತಿಕ ನಿಯಮವನ್ನು ಸೂಚಿಸುವ 'ಋತ' ಇನ್ನೂ ಹಲವು ರೀತಿಯ ನಿಯಮಗಳನ್ನು ಒಳಗೊಳ್ಳಬಹುದು. ಯಜ್ಞವೊಂದರಲ್ಲಿ ಅಳವಡಿಸಿಕೊಳ್ಳಲಾದ ನಿಷ್ಕೃಷ್ಟವಾದೊಂದು ನಿಯಮಕ್ಕೂ 'ಋತ' ಎಂಬ ಅರ್ಥ ಕ್ರಮೇಣ ಬಂದಿರುವುದನ್ನು ವೈದಿಕ ಸಾಹಿತ್ಯದಲ್ಲಿ ನಾವು ಕಾಣುತ್ತೇವೆ.

ಹೀಗೆ ಇನ್ನೂ ಎಷ್ಟೋ ಅರ್ಥಗಳನ್ನು 'ಋತ'ಕ್ಕೆ ಅನೇಕ ಖ್ಯಾತ ಪಂಡಿತರು ರೂಢಿಸಿದ್ದಾರೆ. ಅವನ್ನೆಲ್ಲಾ ನಿರೂಪಿಸಲು ಅಡ್ಡಿಯಿಲ್ಲವಾದರೂ ಅನವಶ್ಯಕವೆಂದು ಕೈಬಿಡಬಹುದಾಗಿದೆ.

ವಿಶ್ವದ ಜನಗಳಲ್ಲಿ ವೈವಿಧ್ಯವಿದ್ದರೂ ಮೂಲಭೂತವಾದ ಕೆಲವಂಶಗಳು ಎಲ್ಲ ಮಾನವರಿಗೂ ಸಾಮಾನ್ಯ. ಮೇಲ್ಮೈ ಲಕ್ಷಣಗಳು, ವಾಯುಗುಣ, ಇತ್ಯಾದಿಗಳು ವಿಶ್ವದ ನಾನಾ ಭಾಗಗಳಿಗೆ ಪ್ರತ್ಯೇಕವಾಗಿದ್ದರೂ ಮಾನವನು ಕಾಣುವ ಪ್ರಕೃತಿಯಲ್ಲಿ ಹಾಗೂ ವಿಶ್ವದ ಇತರ ನಡೆಗಳಲ್ಲಿ ಏಕತಾನವಿದೆ. ಸೂರ್ಯ-ಚಂದ್ರ, ದಿನ-ರಾತ್ರಿ, ಖಾಯಿಲೆ-ಕಸಾಲೆ, ಅಸಹಾಯಕತೆ ಮತ್ತು ಅದನ್ನು ಕಡಿಮೆ ಮಾಡಬಹುದಾದ ಜ್ಞಾನ, ಜೀವನ-ಮೃತ್ಯು, ಇವೆಲ್ಲಾ ಎಲ್ಲರಿಗೂ ಸಮಾನ. ಪ್ರಕೃತಿಯ ಸಿರಿ ಮತ್ತು ಸೆರೆ ಎಲ್ಲ ಮಾನವರೂ ಅನುಭವದಿಂದ ತಿಳಿದುಕೊಳ್ಳ ಬಹುದಾದದ್ದು. ಜೀವನ ತತ್ವಗಳು ಇಂತಹ ಅನೇಕ ಅನುಭವಗಳಿಂದ ರೂಪಿತವಾಗುತ್ತ ವಾದ್ದರಿಂದ ಬೇರೆ ಬೇರೆ ಭಾಗಗಳಲ್ಲಿ ಜೀವಿಸಿದ್ದ ಮತ್ತು ಜೀವಿಸುತ್ತಿರುವ ಮಾನವ ಬಹುಮಟ್ಟಿಗೆ ಒಂದೇ ತೆರನಾದ ತಾತ್ವಿಕ ಚಿಂತನೆಯಲ್ಲಿ ತೊಡಗಿ ಹೆಚ್ಚುಕಡಿಮೆ ಸರಿಹೊಂದುವ ಅನೇಕ ಕಲ್ಪನೆಗಳನ್ನು ನಿರೂಪಿಸಿದರೆ ಅದರಲ್ಲಿ ಕೌತುಕಕ್ಕೇನೂ ಎಡೆಯಿಲ್ಲ. ತುಲನೆಗೆ ನಿಲುಕುವ ಕಲ್ಪನೆಗಳು ವಿಶ್ವದ ಸಾಹಿತ್ಯದಲ್ಲಿ ಹೇರಳವಾಗಿ ದೊರೆತರೆ ಅದನ್ನು ಒಬ್ಬರು ಇನ್ನೊಬ್ಬರಿಂದ ಎರವಲು ಪಡೆದಿರಬೇಕೆಂದು ನಾವು ಮೋಹಕ್ಕೊಳಗಾಗಬೇಕಾಗಿಲ್ಲ. ಅವು ಸ್ವತಂತ್ರವಾಗಿ ಹಾಗೂ ಪ್ರತ್ಯೇಕವಾಗಿ ಆವಿರ್ಭಾವವಾಗಿರಲು ಸಾಧ್ಯ. ಅಂತಹ ಕಲ್ಪನೆಗಳು ಬೆಳೆಯುವುದರಲ್ಲಿ (ಅಥವಾ ಅರ್ಥವ್ಯಾಪ್ತಿಯು ವಿಸ್ತಾರವಾಗುವುದರಲ್ಲಿ) ಪ್ರಭೇದಗಳಿದ್ದರೆ ಅದರಲ್ಲೂ ಸೋಜಿಗದ ಸಂಗತಿಯೇನಿಲ್ಲ.

ಋತದ ಸಂಬಂಧದಲ್ಲಂತೂ ಈ ಮಾತು ಬಹಳ ಉಪಯುಕ್ತ. ಮೇಲೆ ಸ್ಥೂಲವಾಗಿ ನಿರೂಪಿಸಲಾಗಿರುವ 'ಋತ'ದ ಕಲ್ಪನೆಗೆ ಸೀಮಿತವಾಗಿರುವಂತೆ ವಿಶ್ವದ ಬೇರೆ ಒಂದೆರಡು ಪ್ರಾಚೀನ ಸಾಹಿತ್ಯಗಳಲ್ಲಿ ಈ ಕಲ್ಪನೆಗೆ ಸರಿದೂಗುವ ಕಲ್ಪನೆಗಳತ್ತ ನಾವು ಗಮನ ಹರಿಸ ಬಹುದು. ಪ್ರಥಮವಾಗಿ ನಮ್ಮ ಗಣನೆಗೆ ಅವೆಸ್ತಾ ಗ್ರಂಥಗಳಲ್ಲಿ ಬರುವ ''ಅಶ'' ಎಂಬ ಕಲ್ಪನೆ ಬೋಧವಾಗುತ್ತದೆ. ಕಾಲ, ಭಾಷೆ ಮತ್ತು ಧೋರಣೆಗಳಲ್ಲಿ ಋಗ್ವೇದ ಹಾಗೂ ಅವೆಸ್ತಾಗಳ ನಡುವೆ ಸಾಕಷ್ಟು ಸಾಮ್ಯಗಳಿವೆ. ಅಲ್ಲಿ 'ಅಶ' ಕೆಲವೊಮ್ಮೆ 'ಅರತ' ನಾಮದಿಂದ ಸೂಚಿಸಲ್ಪಟ್ಟಿದೆ. ಋಗ್ವೇದದಲ್ಲಿ ಋತಕ್ಕಿರುವ ಸ್ಥಾನಕ್ಕೆ ಸಮಾನವಾದ ಸ್ಥಾನ ಅವೆಸ್ತಾದ ಅಶಕ್ಕಿದೆ. ಋತದಂತೆ ಅಶವೂ ದೇವತೆಗಳ ನಿಯಮ. ಅಲ್ಲೂ ಕೆಲವು ಪ್ರಮುಖ ಅಧಿಷ್ಠಾತೃ ದೇವತೆಗಳಿದ್ದು ಅಶವನ್ನು ಪರಿಪಾಲಿಸುತ್ತಾರೆ. ದೇವತೆಗಳಿಗಿಂತಲೂ ಋತ ಹಿರಿದು; ಅಂತೆಯೇ ಅಶವೂ ಕೂಡ. ಆದರೆ ಋತಕ್ಕಿಂತಲೂ ಹೆಚ್ಚಾಗಿ ಅಶ ಯಜ್ಞಯಾಗಾದಿಗಳಿಗೆ ಸಂಬಂಧಿಸಿರುವಂತೆ ತೋರುತ್ತದೆ. ವರುಣನಿಗೆ ಋತದ ಯಾಜಮಾನ್ಯ ಇರುವಂತೆ ಅವೆಸ್ತಾದಲ್ಲಿ ಅಹುರಮಜ್ದನಿಗೆ ಅಶದ ಮೇಲಿನ ಯಾಜಮಾನ್ಯ. ಎರಡು ರೀತಿಯ ಶಕ್ತಿಗಳು ಸದಾ ಘರ್ಷಣೆಯಲ್ಲಿ ತೊಡಗಿರುತ್ತವಂತೆ: ಶಿಷ್ಟ ಮತ್ತು ದುಷ್ಟ ಶಕ್ತಿಗಳವು. ''ಸ್ಪೆಂತಮೈನ್ಯು'' ಅಥವಾ ಅಸಾಧಾರಣ ಧೀಶಕ್ತಿಗೆ ಹೆಸರಾದ ಅಹುರ ಮಜ್ದ ಶಿಷ್ಟ ಬಣದ ನೇತಾರ. ಆತನ ಸತ್ಪ್ರಜ್ಞೆಗೆ (ವೋಹು ಮನೋ) ಆರು ಸಹಕಾರಿಗಳು.

ನಿಷ್ಕೃಷ್ಟನಿಯಮ (ಅಶ), ಅತಿಶಯ ದೇವಲೋಕ (ಕ್ಷತ್ರ ವೈರ್ಯ), ಪಾವನ ಚಾರಿತ್ರ್ಯ (ಸ್ಪೆಂತ ಅರ್ಮೈತಿ), ಆರೋಗ್ಯ (ಹೌರ್ವತಾತ್), ಮತ್ತು ಅಮೃತತ್ವ (ಅಮೆರೆತಾತ್). ಋಗ್ವೇದದಲ್ಲಿ ವರುಣನನ್ನು ಕುರಿತ ಸ್ತುತಿಗಳಲ್ಲಿ ಕಾಣುವ ಭಾವನೆಗಳು ಮತ್ತು ವರ್ಣನೆಗಳು ಅವೆಸ್ತಾದಲ್ಲಿನ ಅಹುರ ಮಜ್ದನ ಸ್ತುತಿಗಳಲ್ಲಿ ಅಂತೆಯೇ ಕಾಣಬರುತ್ತವೆ. ಇಬ್ಬರೂ ಸೃಷ್ಟಿಕರ್ತರು, ವಿಶ್ವದ ಆಧಾರ ಸ್ತಂಭಗಳು, ವಿಶ್ವವನ್ನಾಳುವವರು. ನೈತಿಕ ಸಾಮ್ರಾಜ್ಯಕ್ಕೆ ಇಬ್ಬರೂ ಹೊಣೆಗಾರರು. ಸೂರ್ಯಾದಿ ದೇವತೆಗಳನ್ನು ನಿಯಂತ್ರಿಸುವವರೂ ಇವರೇ. ವರುಣನಂತೆ ಅಹುರ ಮಜ್ದನೂ ಸರ್ವಜ್ಞ (ವಿಶ್ವ ಅಕಶ್), ಸರ್ವಶಕ್ತ (ವಿಶ್ವತುಬನ್), ಸರ್ವನಿಯಾಮಕ (ವಿಶ್ವಖಿದ್ಯೆ), ಸರ್ವರಕ್ಷಕ (ವಿಶ್ವಸುತ್) ಮತ್ತು ಸರ್ವಮಯ (ವಿಶ್ವನ್ವಿಶ್ಪ). ಋಗ್ವೇದದ ಒಂದು ಮಂತ್ರ (5.63.7) ಭಾಗಶಃ ಹೀಗಿದೆ:

**ವ್ರತಾ ರಕ್ಷೇಥೇ ಅಸುರಸ್ಯ ಮಾಯಯಾ**

**ಋತೇನ ವಿಶ್ವಂ ಭುವನಂ ವಿ ರಾಜಥಃ ॥**

ಇದೇ ರೀತಿಯ ಮಂತ್ರ ಅವೆಸ್ತಾದಲ್ಲಿ ಹೀಗಿದೆ (2.12):

**ಮಿಥ್ರ ಅಹುರ ಬರಜತ । ಐಥ್ಯಜಹ್ನ ಅಶಾವಾನ ಯಜಮೈದೇ ॥**

ಭಾಷಾವಿಜ್ಞಾನದ ದೃಷ್ಟಿಯಿಂದಲೂ ಋತ ಮತ್ತು ಅಶಗಳ ನಡುವೆ ಸಾಮ್ಯವಿದೆಯೆಂದು ಭಾಷಾವಿಜ್ಞಾನಿಗಳು ತರ್ಕಿಸಿದ್ದಾರೆ. ಈ ಸಂಬಂಧದಲ್ಲಿ ಲೂಯಿ ಎಚ್. ಗ್ರೇ ಅವರು ಅಮೆರಿಕಾದ ಪ್ರಾಚ್ಯ ವಿದ್ಯಾ ಸಂಸ್ಥೆಯ ನಿಯತಕಾಲಿಕದಲ್ಲಿ (ಸಂ. 61, 1941; ಪುಟ 101-103) ಪ್ರಕಟಿಸಿರುವ ಲೇಖನವನ್ನುಲ್ಲೇಖಿಸಬಹುದಾಗಿದೆ.

ಇಷ್ಟು ಸಾಮರಸ್ಯವಿದ್ದಾಗ್ಯೂ 'ಋತ' ಮತ್ತು 'ಅಶ'ಗಳ ಕಲ್ಪನೆಗಳಲ್ಲಿ ಸ್ವಲ್ಪ ಭಿನ್ನತೆಯೂ ಇದೆ. ವೈದಿಕ ಸಾಹಿತ್ಯದಲ್ಲಿ ಅತ್ಯುಚ್ಚ ಸ್ಥಾನವು ಋತಕ್ಕಿದೆ. ಆದರೆ 'ಅಶ' ಅಹುರಮಜ್ದನ ಸಾಮಗ್ರಿಗಳಲ್ಲೊಂದು ಮಾತ್ರ. ಅರ್ಥಾತ್, ಅಶವು ಋತದಷ್ಟು ಪೂರ್ಣವ್ಯಾಪ್ತಿಯನ್ನು ಹೊಂದಿಲ್ಲ. ಋತದ ಕಲ್ಪನೆಯ ಸರ್ವತೋಮುಖ ಬೆಳವಣಿಗೆಯಂತೆ ಅಶದ ವ್ಯಾಪ್ತಿ ವಿಸ್ತರಿಸಿಲ್ಲ; ಅಶ ಬಹುಮಟ್ಟಿಗೆ ನೈತಿಕ ಕಲ್ಪನೆಯಾಗಿ ಮಾತ್ರ ಪರ್ಯವಸಾನಗೊಂಡಿದೆ. ಋತ ಒಂದು ಕಲ್ಪನೆ (Concept) ಅಥವಾ ತತ್ವವಾಗಿ ಉಳಿಯಿತು; ಅಶವಾದರೋ ಒಂದು ದೇವತೆಯಾಗಿ ಕೂಡ ಮೂರ್ತೀಕರಿಸಲ್ಪಟ್ಟಿದೆ.

ಚೀನಾದ ಪ್ರಾಚೀನ ಸಾಹಿತ್ಯ ಮತ್ತು ತತ್ವಶಾಸ್ತ್ರ ಪರಂಪರೆಯಲ್ಲಿ 'ತವೋ' ಎಂಬೊಂದು ಪ್ರಮುಖ ಕಲ್ಪನೆಯಿದೆ. ಲಾವೋ-ತ್ಸೆ ಎಂಬ ತತ್ವಜ್ಞಾನಿಯಿಂದ ರಚಿತವಾದ ಲಾವೋ-ತ್ಸು ಅಥವಾ ತವೋ-ತೇ-ಕಿಂಗ್ ಎಂಬ ಗ್ರಂಥದಲ್ಲಿ ಮೊದಲಿಗೆ ಈ ಕಲ್ಪನೆಯ ವಿವರಣೆಯಿದೆ. ಗ್ರಂಥಕರ್ತೃವು ಕನ್ಫ್ಯೂಷಿಯಸ್‌ಗಿಂತಲೂ ಸ್ವಲ್ಪ ಹಿಂದಿನವನೆಂದು ಸಾಮಾನ್ಯವಾಗಿ ವಿದ್ವಾಂಸರು ಭಾವಿಸುತ್ತಾರೆ. ''ವಿಶ್ವದಲ್ಲುಂಟಾಗುವ ಬದಲಾವಣೆಗಳ ನಿಯಮಗಳನ್ನು ಗುರುತಿಸುವುದು ಲಾವೋ-ತ್ಸು ಗ್ರಂಥದ ಒಂದು ಸಂಕಲ್ಪ. ವಿಶ್ವದಲ್ಲಿ ವಸ್ತುಗಳು ಬದಲಾಗುತ್ತವೆ; ಆದರೆ ಅವು ಯಾವ ನಿಯಮವನ್ನನುಸರಿಸಿ ಬದಲಾವಣೆ ಹೊಂದುತ್ತವೆಯೋ ಆ ನಿಯಮ ಬದಲಾಗುವುದಿಲ್ಲ. ಆದ್ದರಿಂದ ಆ ನಿಯಮವನ್ನರಿತು ಮಾನವ ತನ್ನ ಚರ್ಯೆಯನ್ನು ರೂಪಿಸಿಕೊಂಡರೆ ಎಲ್ಲವನ್ನೂ ತನಗೆ ಹಿತವುಂಟಾಗುವಂತೆ ಮಾರ್ಪಡಿಸಿಕೊಳ್ಳಬಹುದು.'' (ಫುಂಗ್-ಯು-ಲಾನ್: *ಚೀಣಾದ ತತ್ವಶಾಸ್ತ್ರದ ಇತಿಹಾಸ, ಮೊದಲನೆಯ ಸಂಪುಟ*). – ಈ ಮಾತು ಋಗ್ವೇದದ ಋತಕ್ಕೂ ಅನ್ವಯಿಸುತ್ತದೆ. ''ತವೋ'' ಎಂದರೆ ಮೂಲತಃ ''ಮಾರ್ಗ'' ಎಂದರ್ಥ. ಆಲಂಕಾರಿಕವಾಗಿ ''ಮಾನವನು ನಡೆಯುವ ಮಾರ್ಗ'' ಎಂಬರ್ಥದಲ್ಲೂ

ನಂತರ ಇದನ್ನು ಬಳಸಲಾಗಿದೆ. ಮಾನವನ ನೈತಿಕ ಮಾರ್ಗವನ್ನು ಬೋಧಿಸುವುದರಲ್ಲಿ ಋತ ಮತ್ತು ತವೋಗಳೆರಡೂ ಏಕಾರ್ಥತೆಯನ್ನು ಪಡೆದಿವೆ. ತತ್ವಾರ್ಥದ ದೃಷ್ಟಿಯಿಂದ 'ತವೋ' ಋತಕ್ಕಿಂತಲೂ ಹೆಚ್ಚಿನ ಮಹತ್ವವನ್ನು ಸಾಧಿಸಿದೆಯೆಂಬುದೂ ನಿಜ.

ಖ್ಯಾತ ಮನೋವಿಜ್ಞಾನಿ ಸಿ.ಜಿ. ಯುಂಗ್ ತವೋ ಕಲ್ಪನೆಯ ಬಗ್ಗೆ ಹೀಗೆ ನುಡಿದಿದ್ದಾರೆ:* ''ತವೋ ಕಲ್ಪನೆಯು ವೈದಿಕ ಸಾಹಿತ್ಯದ ಋತಕ್ಕೆ ಸಮಾನವಾದದ್ದು. ತವೋ ಶಬ್ದಕ್ಕೆ ಈ ಕೆಳಗಿನ ಅರ್ಥಗಳಿವೆ: ಮಾರ್ಗ, ವಿಧಾನ, ತತ್ವ, ಪ್ರಕೃತಿ, ಶಕ್ತಿ, ಪ್ರಕೃತಿಯ ನಡತೆಯ ನಿಯಮ, ವಿಶ್ವವನ್ನು ಸೂಚಿಸುವ ಕಲ್ಪನೆ, ಪ್ರಕೃತಿಯ ಎಲ್ಲ ಸಂಗತಿಗಳಿಗೂ ಮೂಲಕಾರಣ, ಸತ್ಯ, ಶಿವ, ಅಮರವಾದ ನೈತಿಕ ನಿಯಮ. ಕೆಲವು ಭಾಷಾಂತರಕಾರರು ತವೋ ಶಬ್ದವನ್ನು 'ದೇವರು' ಎಂದೂ ಅರ್ಥೈಸುತ್ತಾರೆ. ಅದು ಸರಿಯೂ ಹೌದು. ಏಕೆಂದರೆ, ಋತ ಶಬ್ದಕ್ಕಿರುವಂತೆ 'ತವೋ' ಶಬ್ದಕ್ಕೆ ಕೂಡ ಗೋಚರಾನುಭವಗಳಿಗೆ ಆಧಾರವಾಗುವಂತಹ ವಾಸ್ತವಿಕ ಅಸ್ತಿತ್ವ ಎಂಬ ಛಾಯೆಯಿದೆ.'' ತಮ್ಮ ಈ ಮಾತನ್ನು ಋಜುವಾತು ಮಾಡಲು ಯುಂಗ್ ತವೋ-ತೇ-ಕಿಂಗ್ ಗ್ರಂಥದಿಂದ ಹಲವಾರು ಭಾಗಗಳನ್ನು ಉದ್ಧರಿಸಿ ಅವುಗಳನ್ನು ವ್ಯಾಖ್ಯಾನ ಮಾಡಿದ್ದಾರೆ. ಈ ಭಾಗಗಳಲ್ಲಿನ ಮಾತುಗಳು 'ತವೋ' ಮತ್ತು 'ಋತ'ಗಳ ಸಮಾನ ವ್ಯಾಪ್ತಿಯನ್ನು ಹೇರಳವಾಗಿ ಪ್ರದರ್ಶಿಸುತ್ತವೆ. ಭಾರತೀಯ ತತ್ವಶಾಸ್ತ್ರದಲ್ಲಿ ಯಾವುದನ್ನು 'ಧರ್ಮ'ವೆಂದು ಗಣಿಸಲಾಗುವುದೋ ಅದನ್ನು ಚೀಣಾದ ತತ್ವಶಾಸ್ತ್ರದಲ್ಲಿ 'ತವೋ' ಎಂದು ಕರೆಯಲಾಗಿದೆ. ಭಾರತೀಯ ಗ್ರಂಥಗಳನ್ನು ಚೀಣೀಭಾಷೆಗೆ ಅನುವಾದಿಸುವಾಗ 'ಧರ್ಮ' ಎಂಬ ಪದವನ್ನು 'ತವೋ' ಶಬ್ದದಿಂದಲೇ ಭಾಷಾಂತರಿಸುವುದು ಸರ್ವೇಸಾಮಾನ್ಯ. ವೈದಿಕಸಾಹಿತ್ಯದ 'ಋತ' ಸೂಚಿಸುವ ಅನೇಕ ಅರ್ಥಗಳನ್ನು ನಂತರದ 'ಧರ್ಮ' ಶಬ್ದವೂ ಅಳವಡಿಸಿಕೊಂಡಿದೆಯೆಂಬುದನ್ನಿಲ್ಲಿ ಗಮನಿಸಬಹುದು.

'ತವೋ' ಕಲ್ಪನೆಯ ಬೆಳವಣಿಗೆಯಲ್ಲಿ ಅನೇಕ ವಿರೋಧಾಭಾಸದ (ಅಂದರೆ ಅಸಂಬದ್ಧವಾಗಿ ತೋರುವ ಆದರೆ ನಿಜಕ್ಕೂ ಅಸಂಬದ್ಧವಲ್ಲದ) ಉಕ್ತಿಗಳು ಹೆಣೆದುಕೊಂಡಿವೆ. ಋತದ ಬೆಳವಣಿಗೆಯಲ್ಲಾದರೋ ಇದಕ್ಕೆ ಅವಕಾಶವಿಲ್ಲ. ಕಾರಣ, ಋತದ ವಿವಿಧಾರ್ಥಗಳನ್ನು ಸೂಚಿಸುವಂತಹ ಅನೇಕ ನೂತನ ಪದಗಳು ಹಾಗೂ ಕಲ್ಪನೆಗಳು ನಂತರದ ಸಾಹಿತ್ಯದಲ್ಲಿ ಪ್ರಯೋಗಕ್ಕೆ ಬಂದಿವೆ. 'ತವೋ' ಪದವನ್ನು ಕೈಬಿಡದೆಯೇ ಅದರ ಅರ್ಥವ್ಯಾಪ್ತಿಯನ್ನು ಬೆಳೆಸಿರುವುದು ಆ ಪದದ ಸಂದರ್ಭದಲ್ಲಿ ವಿರೋಧಾಭಾಸೋಕ್ತಿಗಳಿಗೆ ಎಡೆಮಾಡಿಕೊಟ್ಟಿದೆಯೆನ್ನಬಹುದು.

ಪ್ರಾಚೀನ ಸಮಾಜಗಳ ಸ್ವರೂಪವನ್ನು ಮೋರ್ಗನ್ ಅವರು 'ಪ್ರಾಚೀನ ಸಮಾಜ' ಎಂಬ ತಮ್ಮ ಗ್ರಂಥದಲ್ಲಿ ಆಮೂಲಾಗ್ರವಾಗಿ ಪರಿಶೀಲಿಸಿ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಫ್ರೆಡ್ರಿಕ್ ಏಂಗೆಲ್ಸ್ ಅವರು ''ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವಗಳ ಉಗಮ'' ಎಂಬ ತಮ್ಮ ಉದ್ದಾಮ ಗ್ರಂಥದಲ್ಲಿ ಮೋರ್ಗನ್ನರ ಅಧ್ಯಯನಗಳ ಆಧಾರದ ಮೇಲೆ ಕೆಲವೊಂದು ಸಿದ್ಧಾಂತಗಳನ್ನು ಮಂಡಿಸುತ್ತಾ ಪ್ರಾಚೀನ ಸಮಾಜಗಳೆಲ್ಲವುಗಳಲ್ಲೂ ಎದ್ದು ಕಾಣುತ್ತಿದ್ದ ಒಂದು ಗುಣವನ್ನು ಗುರುತಿಸಿದ್ದಾರೆ. ಅದನ್ನವರು ''ಪ್ರಾಚೀನ ಕುಲೀನ ಸಮಾಜದ ಸರಳ ನೈತಿಕ ಗಾಂಭೀರ್ಯ'' ಎಂದು ಬಣ್ಣಿಸಿದ್ದಾರೆ. ಋತ, ಆಶ ಮತ್ತು ತವೋಗಳು ಅಂತಹ ಗಾಂಭೀರ್ಯ ಸೂಚಕ ಕಲ್ಪನೆಗಳು. ವಿಸ್ತೃತಾರ್ಥದಲ್ಲಿ ಈ ಮೂರು ಕಲ್ಪನೆಗಳೂ ಬೇರೆ ಅನೇಕ ತತ್ವಗಳನ್ನು ತಮ್ಮಲ್ಲಿ ಒಳಗೊಂಡರೂ ಮೂಲಭೂತವಾಗಿ ಅವು ಸೂಚಿಸಿದ್ದು ''ಸರಳ ನೈತಿಕ ಗಾಂಭೀರ್ಯ''ವನ್ನು.

---

* *Psychological Types or the Psychology of Individuation* (Translated by H. Godwin Baynes), London, 1923, pp. 264-265.

# ಭಾರತೀಯ ತತ್ವಶಾಸ್ತ್ರದಲ್ಲಿ ಬಂಧನ ಮತ್ತು ಬಿಡುಗಡೆಯ ನೆಲೆಗಳು

> ತತ್ತ್ವಶಾಸ್ತ್ರದಲ್ಲಿ ಪಕ್ಷವಹಿಸದಿರುವಿಕೆ ಎಂಬುದು ಶ್ರೇಯಸ್ಕರವೇನೂ ಅಲ್ಲ; ಭಾವನಾವಾದ ಮತ್ತು ಧಾರ್ಮಿಕ ಅತಿರೇಕಕ್ಕೆ ದಾಸ್ಯವೆಂಬ ತುಚ್ಛ ಮನೋಭಾವ ಅದರಲ್ಲಿದೆ.
>
> **–ವಿ. ಐ. ಲೆನಿನ್**

ಭಾರತೀಯ ದರ್ಶನಗಳನ್ನು ಕುರಿತ ಅನೇಕ ಗ್ರಂಥಗಳಲ್ಲಿ ಚರ್ಚೆಗಿಂತಲೂ ಹೊಗಳಿಕೆಗೇ ಹೆಚ್ಚು ಸ್ಥಾನ, ಮಹತ್ವ. ವೇದಾಂತದ ಬಗೆಗಂತೂ ಹೇಳಲೇಬೇಕಾಗಿಲ್ಲ. ಹಾಗೆ ನಮ್ಮ ದರ್ಶನ ಶಾಸ್ತ್ರವನ್ನು ಕುರಿತು ನಿರರ್ಗಳವಾಗಿ ಹೊಗಳಿಕೆಯ ಮಾತನ್ನಾಡುವವರು ಸ್ವತಃ ಶಾಸ್ತ್ರಗ್ರಂಥಗಳ ಅಧ್ಯಯನ ನಡೆಸಿರುತ್ತಾರೆಂದು ನಾವೇನಾದರೂ ನಿರೀಕ್ಷಿಸಿದರೆ ಬಹುಮಟ್ಟಿಗೆ ತಪ್ಪಾದೀತು. ಗ್ರಂಥಗಳನ್ನು ಓದದೆಯೇ ಪೂಜಿಸುವ ಕುರುಡು ಹೊಗಳುಭಟ್ಟ ತತ್ವಜ್ಞಾನಿಗಳ ತಂಡಕ್ಕೆ ಸೇರುವವರು ಅವರು. ಅಲ್ಲಿರುವುದೆಲ್ಲಾ ಶ್ರೇಷ್ಠ, ಅಮೂಲ್ಯ, ಅಧ್ಯಾತ್ಮದ ಪರಮಾವಧಿ, ಉನ್ನತಿಯ ಸೋಪಾನ, ಜ್ಞಾನದ ಪರಾಕಾಷ್ಠೆ, ತತ್ವಜ್ಞಾನದ ಬೇರು, ಸ್ವರ್ಗ-ವಿಮುಕ್ತಿಗಳ ಮೆಟ್ಟಿಲು, ಮಾನವತೆಯ ಮೂಲಭೂತ ಕಲ್ಪನೆ, ಬೇರಾವ ಧರ್ಮದಲ್ಲಾಗಲಿ ದರ್ಶನದಲ್ಲಾಗಲಿ ದೊರೆಯಲಾರದಂತಹ ಅಮೋಘಜ್ಞಾನ, ಹೀಗೆಲ್ಲಾ ಹೇಳುವ ಪುಸ್ತಕಗಳಿಗೆ ನಮ್ಮಲ್ಲಿ ಕೊರತೆಯಿಲ್ಲ. ನಿರಪೇಕ್ಷಾಬುದ್ಧಿಯಿಂದ ಮತ್ತು ಚರಿತ್ರಾತ್ಮಕ ದೃಷ್ಟಿಯಿಂದ ವೈಜ್ಞಾನಿಕವಾಗಿ ನಮ್ಮ ದಾರ್ಶನಿಕ ಸಾಹಿತ್ಯದ ವಿಮರ್ಶೆ ಮತ್ತು ಬೆಲೆಕಟ್ಟುವಿಕೆಯನ್ನು ಮಾಡಿರುವವರು ವಿರಳ. ಭಾರತೀಯ ದರ್ಶನವು ಬೇರೆಲ್ಲಾ ರಾಷ್ಟ್ರಗಳ ತತ್ವಜ್ಞಾನದಂತೆ ಕೆಲವು ಸಂದರ್ಭಗಳಲ್ಲಿ ಹುಟ್ಟಿ ಬೆಳೆದುಬಂದಿರುವ ಸಂಗತಿಯನ್ನು ಗಮನಿಸದೆ ಅದೊಂದು ಕೇವಲ ಜ್ಞಾನಾತ್ಮಕವಾದ ದೃಷ್ಟಿಕೋನ, ಸಾಮಾಜಿಕ ಆಗುಹೋಗುಗಳಿಂದ ಪ್ರಭಾವಿತವಾಗದ ಚಿಂತನೆ ಎಂದು ಪ್ರಲಪಿಸುವ ದರ್ಶನಶಾಸ್ತ್ರದ ಚರಿತ್ರಕಾರರೂ ನಮ್ಮಲ್ಲಿ ಹೇರಳವಾಗಿದ್ದಾರೆ. ಜುಜುಬಿ ಸಾಧು-ಸಂನ್ಯಾಸಿ-ಬಾಬಾಗಳಿಂದ ಹಿಡಿದು, ಅವರ ಭಕ್ತವೃಂದದ ಮುಖೇನ ಇಂತಹ ಭಾವನೆಗಳನ್ನು ಹೊಂದಿ, ಅಂತಹ ಪ್ರೇರಣೆಯ ಹಿನ್ನೆಲೆಯಲ್ಲಿ ಪುಸ್ತಕಗಳನ್ನು ಬರೆಯುತ್ತಿರುವ ಹಿಂಡುಹಿಂಡು ವಿದ್ವಾಂಸರು ತಮಗೆ ಅನುಕೂಲ ಕಂಡಂತೆ ಭಾರತೀಯ ತತ್ವಶಾಸ್ತ್ರ ಪ್ರಣಾಲಿಕೆಯನ್ನು ತಿರುಗುಮುರುಗು ಮಾಡಿರುವುದು ನಮ್ಮ ಅನುಭವಕ್ಕೆ ಬಂದಿದೆ.

ಉಪನಿಷತ್ತುಗಳಲ್ಲಿ ಸಕಲ ವಿಜ್ಞಾನದ ಸಾರಸರ್ವಸ್ವವೂ ಅಡಗಿದೆಯೆಂದೊಬ್ಬರು ನುಡಿದರೆ ವಿಶ್ವದ ಮೂಲತತ್ವದ ಜಿಜ್ಞಾಸೆಯ ಬೌದ್ಧಿಕ ತಳಹದಿಯೇ ಉಪನಿಷತ್ತು ಎಂದು ಮತ್ತೊಬ್ಬರು ನುಡಿಯುತ್ತಾರೆ. ಇಂತಹ ಪ್ರಜ್ವಲ ಮಾತುಗಳು ಆಕರ್ಷಣೀಯವಾಗಿ ಕಂಡರೂ ವಿಶ್ಲೇಷಣೆಯ ದೃಷ್ಟಿಯಿಂದ ಪ್ರಯೋಜನಕಾರಿಗಳಲ್ಲ. ದಾರ್ಶನಿಕ ಭಾವನಾವಾದವನ್ನು ಹೋರಾಟದಲ್ಲಿ ತೊಡಗಿರುವ ಜನತೆಯ ಅಭಿಮತಕ್ಕೆ ಪಾತ್ರವಾಗುವಂತೆ ಮಾಡುವುದರಲ್ಲಿ ಇದು ಯಶಸ್ವಿಯಾಗಬಹುದೇ ಹೊರತು ವಿಶ್ವದ ನೈಸರ್ಗಿಕ ನಿಯಮಗಳನ್ನು ತಿಳಿಯುವುದರಲ್ಲಿ ಇದು ಸಹಕಾರ ನೀಡಲಾರದು. ಸಮಾಜದಲ್ಲಿ ಸ್ಥೂಲವಾಗಿ ಎರಡು ವರ್ಗಗಳನ್ನು ನಾವು ಗುರುತಿಸಬಹುದು: ಸ್ವದುಡಿಮೆಯಿಂದ ಜೀವಿಸುವವರು ಮತ್ತು ಪರತಂತ್ರ ಜೀವಿಗಳು.

ಭಾವನಾವಾದವು ಪರತಂತ್ರ ಜೀವಿಗಳ ಮತ್ತು ಭೌತವಾದವು ದುಡಿಯುವ ಜನತೆಯ ಪ್ರತ್ಯೇಕ ತತ್ವಶಾಸ್ತ್ರಗಳು. ಸುತ್ತಣ ಪ್ರಪಂಚವು ಕೇವಲ ಕಲ್ಪನೆ, ಅದಕ್ಕೆ ಸ್ವತಂತ್ರ ಅಸ್ತಿತ್ವವೇ ಇಲ್ಲ, ಎಂಬುದು ಭಾವನಾವಾದದ ಮೂಲಕಲ್ಪನೆ. ಈ ತತ್ವದ ಪ್ರತಿಗಾಮಿ ಸ್ವರೂಪವು ಉದಾತ್ತ ಮಾತುಗಳ ಮಧ್ಯೆ ಮುಚ್ಚಿಹೋಗುವ ಸಂಭವವುಂಟು. ಚರಿತ್ರಾತ್ಮಕವಾಗಿರಲಿ ಇಲ್ಲದಿರಲಿ, ದುಡಿಯುವ ಜನತೆಯನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಈ ತತ್ವಪ್ರಣಾಲಿಕೆಗೆ ಶಕ್ತಿಯನ್ನು ತುಂಬಿರುವುದರಿಂದ ಶೋಷಕ ವರ್ಗವು ಆ ತತ್ವಕ್ಕೆ ಜೋತುಬಿದ್ದಿರುತ್ತದೆ. ಇಂದಿನ ಏರುಪೇರುಗಳನ್ನು ಖಂಡಿಸುವ ಬದಲು ಅದು ಅನಿವಾರ್ಯವೆಂದು ನ್ಯಾಯ ಹೇಳುವ ಈ ತತ್ವ ಸಹಜವಾಗಿಯೇ ಆಳುವ ವರ್ಗಕ್ಕೆ ಶ್ರೇಷ್ಠವಾಗಿ ಕಾಣುತ್ತದೆ. ಅದಕ್ಕಾಗಿ ಪರಂಪರಾಗತವಾದ ನಮ್ಮ ಶಾಸ್ತ್ರಗ್ರಂಥಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಅರ್ಥೈಸುತ್ತಾರೆ. ಆ ಗ್ರಂಥಗಳಿಗೆ ಹೀಗೆ ಅಪಚಾರ ಮಾಡುವುದು ಹೇಸಿಗೆಯ ಕೆಲಸವೆಂದು ಕೂಡ ಅವರಿಗೆ ಸಂಕೋಚವಾಗುವುದಿಲ್ಲ. ಈ ರೀತಿ ಪ್ರಾಚೀನ ಗ್ರಂಥಗಳ ತುಂಡರಿಸುವಿಕೆಯಲ್ಲಿ ತೊಡಗುವ ನಮ್ಮ 'ತತ್ವಜ್ಞಾನಿ'ಗಳು ಆಳುವ ವರ್ಗದ ದಾಸೋಹ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು.

ಇಂತಹವರಿಂದ ಸಂಪೂರ್ಣವಾಗಿ ಭಿನ್ನವಾಗಿದ್ದು ದುಡಿಯುವ ಜನತೆಯ ಪರಂಪರೆ, ಇತಿಹಾಸ, ತತ್ವಜ್ಞಾನ ಮತ್ತು ಭವಿಷ್ಯಗಳನ್ನು ಗುರುತಿಸಿ ಪ್ರಾಚೀನ ಗ್ರಂಥಗಳಲ್ಲಿ ನಮೂದಿಸಲಾಗಿರುವ ಅಂಶಗಳನ್ನು ವಾಸ್ತವಿಕವಾಗಿ ಪ್ರತಿಪಾದಿಸುವುದು ದೇವೀಪ್ರಸಾದ ಚಟ್ಟೋಪಾಧ್ಯಾಯ ಅವರ ಪದ್ಧತಿ ಮತ್ತು ನಿಯಮ. 'ಲೋಕಾಯತ', 'ಭಾರತೀಯ ತತ್ವಶಾಸ್ತ್ರದ ಲೋಕಪ್ರಿಯ ಪ್ರಸ್ತಾವನೆ', 'ಭಾರತೀಯ ನಿರೀಶ್ವರವಾದ', ಇತ್ಯಾದಿ ಗ್ರಂಥಗಳ ಮತ್ತು ಹಲವಾರು ಲೇಖನಗಳ ಮುಖಾಂತರ ಈ ಲೇಖಕರು ಸಾರಸ್ವತ ಪ್ರಪಂಚಕ್ಕೆ ಈಗಾಗಲೇ ಚಿರಪರಿಚಿತರಾಗಿದ್ದಾರೆ. ''ಭಾರತೀಯ ತತ್ವಶಾಸ್ತ್ರದಲ್ಲಿ ಜೀವಂತ ಹಾಗೂ ನಿರ್ಜೀವ ಪ್ರವೃತ್ತಿಗಳು'' ಎಂಬ ಗ್ರಂಥವಂತೂ ಅವರ ವೈಜ್ಞಾನಿಕ ಮಾರ್ಗವನ್ನು ಇನ್ನೂ ದೃಢಪಡಿಸುತ್ತದೆ. ಭಾರತೀಯ ತತ್ವಶಾಸ್ತ್ರದ ನೈಜ ಚಿತ್ರಣವನ್ನು ಆಕರ ಗ್ರಂಥಗಳಿಂದ ಆಯ್ದ ಹಲವು ಮಾತುಗಳಿಂದ ಓದುಗರಿಗೆ ಸ್ಪಷ್ಟಪಡಿಸುವುದು ಈ ಕೃತಿ. ಕೇವಲ ಹೊಗಳುವಿಕೆಯಿಂದ ತತ್ವಶಾಸ್ತ್ರ ಉದಾತ್ತವಾಗುವುದಿಲ್ಲ; ಭಾರತೀಯ ತತ್ವಶಾಸ್ತ್ರಕ್ಕೆ ಇದರ ಅಗತ್ಯವೂ ಇಲ್ಲ. ಅದರಲ್ಲಿರುವ ಚಿಂತನಸಾಮಗ್ರಿಯನ್ನು ಯಥಾವತ್ತಾಗಿ ಗುರುತಿಸಿದರೆ ಆ ಶಾಸ್ತ್ರದ ಮಹತ್ವ ನಮಗೆ ತಿಳಿಯುತ್ತದೆ.

ಮಹತ್ತರವಾದ ಅಂಶಗಳೊಡನೆ ಬೆರೆತು (ಅಥವಾ ತದ್ಭಿನ್ನವಾಗಿ) ಕೆಲವು ನಿಕೃಷ್ಟವಾದ ಅಂಶಗಳಿದ್ದರೆ ಅದಕ್ಕೆ ನಾವೇನೂ ತಲೆತಗ್ಗಿಸಬೇಕಾಗಿಲ್ಲ. ಯಾವ ರಾಷ್ಟ್ರದ ಪರಂಪರೆಯಲ್ಲೇ ಆಗಲಿ, ಉಜ್ವಲವಾಗಿ ಕಂಗೊಳಿಸುವ ಅಂಶಗಳೊಂದಿಗೆ ಕಳಪೆಯ ಕೆಲವು ಸಿದ್ಧಾಂತಗಳೂ ಕಂಡುಬರುತ್ತವೆ. ಒಂದು, ಜನತೆಯ ಮುನ್ನಡೆಗೆ ಸಾಧನವಾದರೆ, ಇನ್ನೊಂದು ಮಾರಕ. ಇವೆರಡೂ ನಮ್ಮ ದರ್ಶನಗಳಲ್ಲಿವೆ. ಒಂದನ್ನು ಉಳಿಸಿಕೊಂಡು ಮತ್ತೊಂದನ್ನು ತೊಡೆದುಹಾಕಿ ಮುಂದೆ ಸಾಗುವುದು ನಮ್ಮ ಕರ್ತವ್ಯ. ಇವೆರಡನ್ನೂ ಅವುಗಳ ತಾತ್ವಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ನಮ್ಮ ಮುಂದಿಡುವುದು ದೇವೀಪ್ರಸಾದರು ಕೈಗೊಂಡಿರುವ ಕೆಲಸ. ಅದನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿರುವುದು ಅವರ ಸಾಧನೆ.

ಮೇಲೆ ಉಲ್ಲೇಖಿಸಿರುವ ಅವರ ಈ ಕೃತಿಯು ಕೇವಲ ಬೌದ್ಧಿಕವಾದ ಗುರಿಯನ್ನು ಹೊಂದಿಲ್ಲವೆಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ. ಇಂದಿನ ನಮ್ಮ ಅವಶ್ಯಕತೆಯನ್ನು ಪೂರೈಸುವ ದೃಷ್ಟಿಯಿಂದ ಭಾರತೀಯ ತತ್ವಶಾಸ್ತ್ರವನ್ನು ವಿಶ್ಲೇಷಿಸುವುದು ಇದರ ಗುರಿ. ಇಂದಿನ ಅವಶ್ಯಕತೆಗಳಾದರೂ ಯಾವುವು? – ತಾರ್ಕಿಕದೃಷ್ಟಿ, ಧರ್ಮನಿರಪೇಕ್ಷತೆ ಮತ್ತು ವೈಜ್ಞಾನಿಕ ಮಾರ್ಗ.

''ಬಡವಾ ನೀ ಮಡಗಿದ್ದಂಗಿರು'' ಎಂಬ ವಾದದ ಆಧಾರದ ಮೇಲೆ ಒಂದು ತತ್ವದೃಷ್ಟಿ ಬೆಳೆಯಬಹುದು. ಶತಮಾನಗಳಿಂದ ಇಂತಹ ಪರಿಪಾಠ ನಮ್ಮಲ್ಲಿ ಎಡೆಮಾಡಿಕೊಂಡಿದೆ. ಕರ್ಮಫಲ, ಗ್ರಹಚಾರ, ದೇವರು ಕೊಟ್ಟಿದ್ದು-ಇಟ್ಟಿದ್ದು, ಹುಲುಮಾನವ ಏನುತಾನೆ ಮಾಡಲು ಸಾಧ್ಯ, ಹಣೆಯಲ್ಲಿ ಬರೆದದ್ದನ್ನು ಅನುಭವಿಸಿಯೇ ತೀರಬೇಕು, ಶ್ರೀಮಂತ ಹಿಂದಿನ ಜನ್ಮದಲ್ಲಿ ಕೇಳಿಕೊಂಡು ಬಂದಿದ್ದ, ಬೇರೆಯವರನ್ನು ಕಂಡು ಕರುಬುವುದು ಸಾಧುವಲ್ಲ, ಇಲ್ಲಿ ಹೇಗಿದ್ದರೇನು, ಮುಂದೆ ಮೋಕ್ಷ ದೊರಕಿಸಿಕೊಳ್ಳುವುದೇ ನಮ್ಮ ಪರಮಗುರಿ, – ಎಂಬಿತ್ಯಾದಿ ಭಾವನೆಗಳಿಂದ ನಮ್ಮಲ್ಲಿ ಜಡತೆ ತುಂಬಲು ಎಲ್ಲ ವಿಧಗಳಲ್ಲೂ ಪ್ರಯತ್ನ ನಡೆದಿದೆ.

ಮಾನವನ ಪ್ರಯತ್ನವನ್ನೇ ಮೂದಲಿಸಿದರೆ ಮಾನವನ ಕೈಗೆ ಬೇಡಿ ತೊಡಿಸಿದಂತೆಯೇ ಸರಿ. ಹೋರಾಟದಿಂದ ಯಾವ ಫಲವೂ ಇಲ್ಲವೆಂಬ ಬೀಜವನ್ನು ಮನಸ್ಸಿನಲ್ಲಿ ಚೆನ್ನಾಗಿ ಬಿತ್ತಿದರೆ ಹೋರಾಡುವ ಜನತೆಯನ್ನು ಎದುರಿಸಬೇಕಾದ ಪ್ರಮೇಯವೇ ಬರಲಾರದು; ಅದರ ಬದಲು ಆಳುವ ವರ್ಗದ ಅಡಿಯಾಳುಗಳಾಗಿ ಜನ ಕ್ಷೀಣಿಸುವಂತೆ ಮಾಡುವುದು ಸುಲಭ. ಅದಕ್ಕೆ ವಿಜೃಂಭಿಸುವ ಯಾವುದಾದರೊಂದು ನಾಮಫಲಕ ಲಗತ್ತಿಸಿದರೆ ಸಾಕು, ದಾಸ್ಯದ ಸಂಕೋಲೆಯನ್ನು ಸ್ಫುಟವಾಗಿ ಕಾಣದಂತೆ ಮಾಡಬಹುದು. ಪುರೋಗಾಮಿ ತತ್ವವೊಂದು ಜನತೆಯ ಮನಸ್ಸನ್ನು ಹೊಕ್ಕರೆ ಅದೊಂದು ವಿಶಿಷ್ಟಶಕ್ತಿಯಾಗಿ ಪರಿಣಮಿಸುತ್ತದೆ, ಹೋರಾಟಕ್ಕೆ ಅಸ್ತ್ರವಾಗುತ್ತದೆ. ಆದರೆ ಪ್ರತಿಗಾಮಿ ತತ್ವಕ್ಕೂ ಅದೇ ರೀತಿಯ ಶಕ್ತಿ-ಸಾಧ್ಯತೆಗಳಿವೆ. ಭಾವನಾವಾದವು ವಿಶ್ವವನ್ನು ಅರಿತುಕೊಳ್ಳುವುದಕ್ಕೂ ಅದರಿಂದ ಮುಕ್ತರಾಗುವುದಕ್ಕೂ ಪರಿಕರ ಒದಗಿಸುತ್ತದೆಯೆಂದು ತೋರಿಕೆಗೆ ಕಾಣುತ್ತದೆ. ವಸ್ತುಸ್ಥಿತಿಯಾದರೋ ಇವೆರಡಕ್ಕೂ ವಿರುದ್ಧವಾಗಿರುತ್ತದೆ. ವಿಶ್ವವನ್ನು ಸರಿಯಾಗಿ ಅರಿಯುವ ಮಾರ್ಗವನ್ನಾಗಲಿ ಸಂಕಷ್ಟಗಳಿಂದ ಪಾರಾಗುವ ಮುಕ್ತಿ ಮಾರ್ಗವನ್ನಾಗಲಿ ಅದು ತೋರುವುದಿಲ್ಲ. ಕುತ್ತಿಗೆಯ ಸುತ್ತ ಅದೊಂದು ಉರುಳಾಗುವ ಸಂಭವವೇ ಹೆಚ್ಚು.

ಸಮಾಜವು ಬೆಳೆದುಬಂದಿರುವ ಹಾದಿಯನ್ನು ಗಮನಿಸಿದರೆ ತತ್ವಶಾಸ್ತ್ರ ಮತ್ತು ವಿಜ್ಞಾನಗಳು ಸಮಾಜದ ಒಂದು ಭಾಗದ ಹಿತಾಸಕ್ತಿಗಳನ್ನು ಕಾಪಾಡಲು ಉಪಯುಕ್ತವಾಗಿರುವುದನ್ನು ನಾವು ಕಾಣುತ್ತೇವೆ. ಕೆಲಸ ಮಾಡುವ ಕೈಗಳು ಹಿಂದೆ ಸರಿದು ವಿಚಾರ ಮಾಡುವ ಮನಸ್ಸು ಮುಂದೆ ಬಂದಾಗ ಇದು ಸಂಭವಿಸುತ್ತದೆ. ಕೆಲಸ ಮಾಡುವವನ ಪರವಾದ ತತ್ವಶಾಸ್ತ್ರದ ಜಾಗದಲ್ಲಿ ಶೋಷಕ ವರ್ಗದ ಶ್ರೇಷ್ಠತೆಯನ್ನು ಸಾರುವ ತತ್ವದ ಆವಿಷ್ಕಾರವಾಗುತ್ತದೆ. ಅದೇ ಅತ್ಯುನ್ನತವಾದ ತಾತ್ವಿಕ ಪಂಥವೆಂದು ಸಾರಲಾಗುತ್ತದೆ. ಬೆಂಜಮಿನ್ ಫ್ಯಾರಿಂಗ್‌ಟನ್ ಎಂಬ ಖ್ಯಾತ ಶಾಸ್ತ್ರವೇತ್ತರು ಅದನ್ನೇ ಈ ಮಾತುಗಳಲ್ಲಿ ವಿವರಿಸಿದ್ದಾರೆ: ''ವಿರಾಮವಾಗಿ ಕುಳಿತು ಚಿಂತಿಸುವ ವರ್ಗ ಉದ್ಭವವಾದಾಗ ಬರಿಯ ಸಿದ್ಧಾಂತದ ಚರ್ಚೆ ತೋರುತ್ತದೆ. (ಅಂದರೆ ಆ ವರ್ಗ ಸ್ವತಃ ದುಡಿದು ಚರ್ಚಿಸಬೇಕಿಲ್ಲ. ಬೇರೆಯವರ ದುಡಿತದ ಫಲವನ್ನು ತನ್ನದಾಗಿಸಿ ಕೊಂಡಿರುತ್ತದೆ.) ಪರಿಣಾಮವಾಗಿ, ಚಿಂತನೆಗೂ ವಸ್ತುಸ್ಥಿತಿಗೂ ನೇರ ಸಂಬಂಧವೂ ಇರಬೇಕಾಗಿಲ್ಲ. (ಉದಾಹರಣೆಗೆ, ಉಳುವವನು ಅನುಭವದಿಂದ ವಿಷಯಗಳನ್ನು ಸೈದ್ಧಾಂತಿಕವಾಗಿ ನಿರೂಪಿಸಿದರೆ, ಕೇವಲ ಚಿಂತಕನು ತನ್ನ ಮನಬಂದಂತೆ ನಿರೂಪಿಸಿ ತೃಪ್ತಿ ಪಡೆಯಬಹುದು.) ಸಮಾಜದಲ್ಲಿ ವರ್ಗಗಳುಂಟಾದಾಗ ಹೊಸತಾದ 'ವಿಜ್ಞಾನ'ವೂ ಅವಶ್ಯಕ ವಾಗುತ್ತದೆ. ಅದರಂತೆ 'ಒಬ್ಬ ಮಾನವ ಬೇರೊಬ್ಬನ ಮೇಲೆ ಅಧಿಕಾರ ಸ್ಥಾಪಿಸಿಕೊಳ್ಳಲು ಬೇಕಾದಂತಹ ವ್ಯವಸ್ಥಿತ ನಿಯಮವೇ ವಿಜ್ಞಾನ.' ಮನುಷ್ಯನನ್ನು ಅಧೀನನನ್ನಾಗಿಸುವುದೇ ಆಳುವ ವರ್ಗದ ಮೂಲೋದ್ದೇಶವಾದ ನಂತರ ಪ್ರಕೃತಿಯನ್ನು ಹತೋಟಿಗೆ ತಂದು

ಕೊಳ್ಳುವುದು ಇನ್ನೊಂದು (ಶೋಷಿತ) ವರ್ಗದ ಕರ್ತವ್ಯವಾಗುತ್ತದೆ. ವಿಜ್ಞಾನಕ್ಕೆ ಇದರಿಂದಾಗಿ ನೂತನ ಹಾಗೂ ಅಪಾಯಕಾರಿ ತಿರುವು ಕೊಟ್ಟಂತಾಗುತ್ತದೆ.'' ವಿಜ್ಞಾನಕ್ಕೆ ಅನ್ವಯವಾಗುವುದು ತತ್ವಶಾಸ್ತ್ರಕ್ಕೂ ಅನ್ವಯಿಸುತ್ತದೆ. ಇಂದಿಗೂ ವಿಜ್ಞಾನದ ಮುನ್ನಡೆಯು ಜನತೆಗೆ ಸಾಕಷ್ಟು ಪರಿಹಾರ ಒದಗಿಸಿಲ್ಲದಿರುವುದು ಬಂಡವಾಳಶಾಹಿ ಪದ್ಧತಿಯ ದುಷ್ಟತನದ ಫಲವಾಗಿ, ಎಂಬುದನ್ನಿಲ್ಲಿ ಗ್ರಹಿಸುವುದುಚಿತ.

ಹಾಗಾದರೆ ದುಡಿಯುವ ವರ್ಗಕ್ಕೆ ಪರಿಹಾರವೇ ಇಲ್ಲವೇ ? ಆ ವರ್ಗದ ಪರವಾದ ತಾತ್ವಿಕ ಪರಿಪಾಕವೇ ನಮಗೆ ದೊರೆತಿಲ್ಲವೇ ? – ದೊರೆತಿದೆ. ಶೋಷಕರು ತಮ್ಮ ಪ್ರಣಾಲಿಕೆಗೆ ಬುನಾದಿ ಕಲ್ಪಿಸಿಕೊಂಡರೆ ಶೋಷಿತರೂ ತಮ್ಮ ಘೋಷಣೆಯನ್ನು ರೂಪಿಸಿಕೊಂಡೇ ತೀರುತ್ತಾರೆ. ದಾಸ್ಯದಲ್ಲಿ ತೊಳಲುತ್ತಿದ್ದ ಸ್ಪಾರ್ಟಕಸ್‌ನಂತಹ ಗುಲಾಮರೂ ರೊಚ್ಚಿಗೆದ್ದು ತಮ್ಮ ಯಜಮಾನರನ್ನು ನಡುಗಿಸಿದ್ದಾರೆಂಬುದು ಇತಿಹಾಸದಲ್ಲಿ ಸ್ಪಷ್ಟವಾಗಿದೆ. ಈ ವರ್ಗದವರೂ ವಿಶ್ವದ ಬಗೆಗೆ ಒಂದು ವಿಶ್ಲೇಷಣಾ ದೃಷ್ಟಿಯನ್ನು ಬೆಳೆಸಿಕೊಂಡಿದ್ದಾರೆ. ಆಳುವ ವರ್ಗವು ಈ ದೃಷ್ಟಿಯನ್ನು ಕಡೆಗಾಣಿಸುವ ಸಲುವಾಗಿ ಅದನ್ನು ಅದುಮಿಡಲು ಸತತ ಪ್ರಯತ್ನದಲ್ಲಿ ತೊಡಗುತ್ತದೆ. ಅದಕ್ಕೆ ಪ್ರಚಾರಸಿಗದಂತೆ ಮಾಡುತ್ತದೆ, ಅಥವಾ ಅಂಕುಡೊಂಕಾಗಿ ಅದನ್ನು ತಿರುಗುಮುರುಗು ಮಾಡಿ ಪ್ರಚುರಪಡಿಸುತ್ತದೆ. ಇದು ಭಾರತೀಯ ತತ್ವಶಾಸ್ತ್ರದ ಇತಿಹಾಸದಲ್ಲಿ ಯಥೇಚ್ಛವಾಗಿ ನಡೆದಿದೆ. ಹೀಗಾಗಿ ತತ್ವಶಾಸ್ತ್ರದ ಶ್ರೇಷ್ಠತೆಯು ಮಸುಕಾಗಿದೆ. ಇಂದಿನ ನಮ್ಮ ಅವಶ್ಯಕತೆಯಿರುವುದು ನವಸಮಾಜದ ಸೃಷ್ಟಿಗೆಬೇಕಾದ ಪ್ರಣಾಲಿಕೆಯಲ್ಲಿ. ನಮ್ಮ ದಾರ್ಶನಿಕ ಗ್ರಂಥಗಳಲ್ಲಿ ಅದಕ್ಕೆ ಎಷ್ಟೋ ಅನುವು ಸಿಗುತ್ತದೆ. ಆದರೆ ಅದನ್ನು ಗುರುತಿಸಬೇಕಾದರೆ ನಮ್ಮ ಗ್ರಂಥಗಳಲ್ಲಿ ತುಂಬಿರುವ ಗೊಂದಲವನ್ನು ಬಿಡಿಸಬೇಕು, ಕಳಪೆಯಾದುದನ್ನು ಕಿತ್ತೊಗೆಯಬೇಕು. ಈ ಕಾರ್ಯವನ್ನು ದೇವೀಪ್ರಸಾದ್ ಅವರು ತಮ್ಮ ಗ್ರಂಥದಲ್ಲಿ ಅಚ್ಚುಕಟ್ಟಾಗಿ ಮಾಡಿ ತೋರಿಸಿದ್ದಾರೆ.

ಭಾರತೀಯ ದರ್ಶನಗಳನ್ನು ಸಾಮಾನ್ಯವಾಗಿ ಎರಡು ಭೇದಗಳಾಗಿ ಪ್ರತ್ಯೇಕಿಸುವುದುಂಟು: ಆಸ್ತಿಕ ಮತ್ತು ನಾಸ್ತಿಕ. ವೇದಗಳನ್ನು ಜ್ಞಾನದ ಪರಮೋತ್ಕೃಷ್ಟ ನಿತ್ಯ ಸಾಧನವೆಂದು ಬಗೆಯುವವರು ಆಸ್ತಿಕರು. ಅದನ್ನು ಒಪ್ಪದವರು ನಾಸ್ತಿಕರು. ದೇವರಲ್ಲಿ ನಂಬಿಕೆ ಇಡುವುದು ಇಡದಿರುವುದು ಆಸ್ತಿಕತೆ-ನಾಸ್ತಿಕತೆಗಳ ಭಿನ್ನತೆಗೆ ಕಾರಣವಲ್ಲ. ಈ ರೀತಿಯ ವಿಂಗಡಣೆಯು ವಿಶ್ವದ ವಿಶ್ಲೇಷಣೆಗೆ ಸಂಬಂಧಿಸಿಲ್ಲವೆಂಬುದನ್ನೂ ಇಲ್ಲಿ ಗ್ರಹಿಸಬೇಕು. ಈ ದೃಷ್ಟಿಯಿಂದ ನೋಡಿದರೆ ವಿಶ್ವದ ತತ್ವಶಾಸ್ತ್ರದಲ್ಲಿ ಭಾವನಾವಾದ ಮತ್ತು ಭೌತವಾದಗಳೆಂಬ ಪ್ರಭೇದಗಳೇ ಪ್ರಮುಖವಾದುವು. ನಾವು ಗ್ರಹಿಸಲಿ ಗ್ರಹಿಸದಿರಲಿ, ನಮ್ಮ ಸುತ್ತಣ ವಿಶ್ವಕ್ಕೆ ಸ್ವತಂತ್ರ ಅಸ್ತಿತ್ವವಿದೆ, ವಿಶ್ವವು ನಮ್ಮ ಮನಸ್ಸಿನಿಂದ ಮಾತ್ರವೇ ಸೃಷ್ಟಿಯಾದುದಲ್ಲ, – ಇದು ಭೌತವಾದದ ಮೂಲಭೂತ ತತ್ವ. ಚಂದ್ರನ ಹಿಂಬದಿಯ ಭಾಗವನ್ನು ನಾವಂತೂ ಕಂಡಿಲ್ಲ, ಅಂದಮಾತ್ರಕ್ಕೆ ಅದು ಇಲ್ಲವೆಂದರ್ಥವೇ ? ಚಂದ್ರಗ್ರಹಕ್ಕೆ ಹೋಗಿಬಂದವರು ಅದನ್ನು ಕಂಡಿದ್ದಾರೆ; ಅವರನ್ನಲ್ಲಿಗೆ ಕಳುಹಿಸುವ ವಿಜ್ಞಾನಿಯು ಚಂದ್ರನ ಹಿಂಬದಿಯ ಭಾಗವಿದೆಯೆಂಬ ಜ್ಞಾನವನ್ನಾಧರಿಸಿ ಲೆಕ್ಕಮಾಡಿ ಪ್ರಯೋಗಮಾಡಿ ತನ್ನ ಗ್ರಹಿಕೆಯು ಸರಿಯಿದೆಯೆಂಬುದನ್ನು ತೋರಿಸಿಕೊಟ್ಟಿದ್ದಾನೆ. ಅಥವಾ ಇನ್ನೊಂದು ವಿಷಯ ನೋಡೋಣ : ಪ್ರಪಂಚ ಮೊದಲು ಅಸ್ತಿತ್ವಕ್ಕೆ ಬಂತೆ ಅಥವಾ ಮಾನವನೆ ? ತನ್ನ ಮನಸ್ಸಿನಿಂದ ವಿಶ್ವವನ್ನು ಗ್ರಹಿಸುವ ಶಕ್ತಿಯುಳ್ಳ ಮಾನವ ಈ ಗ್ರಹದಲ್ಲಿ ಅಸ್ತಿತ್ವಕ್ಕೆ ಬರುವ ಮುನ್ನವೇ ಈ ಗ್ರಹ ಅಸ್ತಿತ್ವದಲ್ಲಿದ್ದಿತೆಂದು ವಿಜ್ಞಾನ ತಿಳಿಯಹೇಳುತ್ತದೆ. ಇದನ್ನೆಲ್ಲಾ ತಳ್ಳಿಹಾಕಿ ಭಾವನಾವಾದವು ವಸ್ತುಗಳ ಅಸ್ತಿತ್ವವು ನಮ್ಮ ಪ್ರಜ್ಞೆಯನ್ನಾಧರಿಸಿದೆಯೆಂದು ನಂಬುತ್ತದೆ. ಆದ್ದರಿಂದ ಈ ನಿಟ್ಟಿನಲ್ಲಿ ವಿಶ್ವದ ಸತ್ಯವೂ ಸಹ

ನಾವು ಭಾವಿಸಿದಂತೆಯೇ ಇರುತ್ತದೆ ಎಂದೂ ವಾದಿಸಬಹುದು. ಸುಖವೆಂಬುದೂ ಸಹ ಭಾವನೆಯನ್ನೇ ಅವಲಂಬಿಸುತ್ತದೆಯಾದ್ದರಿಂದ "ನಾನು ಸುಖಿಯಾಗಿದ್ದೇನೆ" ಎಂದು ಭಾವಿಸಿದರೆ ಮುಗಿಯಿತು, ಮಾನವ ಸುಖಿಯಾಗುತ್ತಾನೆ. ಹಾಗೆ ಸುಖಿಯಾಗಲು ಪೂರ್ವಭಾವಿಯಾಗಿ ನಿಗದಿಯಾದ ಕೆಲವು ಅಂಶಗಳ ಪೂರೈಕೆಯಾಗಬೇಕಾಗಿಲ್ಲ!

ಇದೊಂದು ಬಾಲಿಶವಾದ ಕಲ್ಪನೆಯಾಗಿ ತೋರಿದರೂ ಇದರ ಪ್ರಭಾವ ವಿವಿಧವಾಗಿ ಹಬ್ಬಿಕೊಳ್ಳಲು ಸಾಧ್ಯ. ತತ್ವಶಾಸ್ತ್ರದ ಇತಿಹಾಸದಲ್ಲಿ ಭೌತವಾದ-ಭಾವನಾವಾದಗಳ ಉತ್ಕಟ ಘರ್ಷಣೆಯು ಮೊದಲಿನಿಂದಲೂ ಜಾರಿಯಲ್ಲಿದೆ ಮತ್ತು ಅದೇ ಮುಖ್ಯವಾದ ಅಂಗ. ಆಸ್ತಿಕ-ನಾಸ್ತಿಕವೆಂಬ ವಿಂಗಡಣೆಯು ತತ್ವಗಳ ಆಧಾರದ ಮೇಲೆ ನಿಲ್ಲದೆ ವೇದಪ್ರಾಮಾಣ್ಯಕ್ಕೆ ಅಂಟಿಕೊಂಡಿದೆ. ವೇದಪ್ರಾಮಾಣ್ಯಕ್ಕೆ ಇಷ್ಟು ಗಣ್ಯಸ್ಥಾನವು ದೊರಕಲು ಧರ್ಮಶಾಸ್ತ್ರಕಾರರು ಹೊಣೆಗಾರರೇ ಹೊರತು ದಾರ್ಶನಿಕರಲ್ಲವೆಂಬುದನ್ನು ಚಟ್ಟೋಪಾಧ್ಯಾಯ ಅವರು ತೋರಿಸಿದ್ದಾರೆ. ತತ್ವಶಾಸ್ತ್ರದ ಕ್ಷೇತ್ರವೂ ಕೂಡ ಧರ್ಮಾಧ್ಯಕ್ಷರ ಕಪಿಮುಷ್ಟಿಗೆ ಸಿಲುಕಿದ್ದರಿಂದಲೇ ನಮ್ಮ ತತ್ವಶಾಸ್ತ್ರದ ಹಾದಿಯು ನೆಟ್ಟಗೆ ನಡೆಯದಿದ್ದುದು. ಅವರ ವಕ್ರದೃಷ್ಟಿಯನ್ನು ತಪ್ಪಿಸಿಕೊಳ್ಳಲು ಅನೇಕ ವೇಳೆ ತಾವು ನಂಬದಂತಹ ಅಂಶಗಳನ್ನೂ ಸಹ ತತ್ವಶಾಸ್ತ್ರಕಾರರು ತಮ್ಮ ಗ್ರಂಥಗಳಲ್ಲಿ ಅಳವಡಿಸಿಕೊಳ್ಳುತ್ತಾರೆ. ಉದಾಹರಣೆಗೆ, ಭಾರತದಲ್ಲಿ ದೀರ್ಘಕಾಲ ಪ್ರವಾಸ ಮಾಡಿದ್ದ ಆಲ್-ಬರೂನಿಯು ಖಗೋಳ ಶಾಸ್ತ್ರಜ್ಞರಾದ ವರಾಹಮಿಹಿರ ಮತ್ತು ಬ್ರಹ್ಮಗುಪ್ತ ಅವರನ್ನು ಕುರಿತು ಹೇಳಿರುವ ಮಾತುಗಳನ್ನು ಗಮನಿಸಬಹುದು: "ಇಲ್ಲಿಯ ಖಗೋಳ ಶಾಸ್ತ್ರಜ್ಞರಿಗೆ ಚಂದ್ರ ಮತ್ತು ಸೂರ್ಯಗ್ರಹಣಗಳು ಹೇಗುಂಟಾಗುತ್ತವೆಂದು ತಿಳಿದಿದೆ. ವರಾಹಮಿಹಿರನ ಬೃಹತ್ಸಂಹಿತೆಯಲ್ಲಿ ಇದೆಲ್ಲಾ ವಿವರಿಸಲಾಗಿದೆ." ಹೀಗಿದ್ದಾಗ್ಯೂ ಗ್ರಹಣದ ವಿಷಯವನ್ನು ವಿವರಿಸುವಾಗ ವರಾಹಮಿಹಿರ ಮತ್ತು ಬ್ರಹ್ಮಗುಪ್ತರು ಮೊದಲಿಗೆ ಅದಕ್ಕೆ ಸಂಬಂಧಿಸಿದ ಹುಚ್ಚುಕತೆಗಳನ್ನು ಹೇಳುತ್ತಾರೆ. ರಾಹು-ಕೇತುಗಳು ಚಂದ್ರ-ಸೂರ್ಯರನ್ನು ಕಬಳಿಸುತ್ತಾರೆಂಬುದೇ ಆ ಕತೆ. ಪುರೋಹಿತ ವರ್ಗಕ್ಕೆ ಈ ಕಟ್ಟುಕತೆಯ ಅವಶ್ಯಕತೆಯಿತ್ತು. ವಿಜ್ಞಾನಿಯಾದ ವರಾಹಮಿಹಿರನು ಈ ವರ್ಗವನ್ನು ಧಿಕ್ಕರಿಸಿ ತನ್ನ ತಿಳುವಳಿಕೆಯನ್ನು ಹೊರಗೆಡಹಲು ಸಾಧ್ಯವಿರಲಿಲ್ಲ. ಆದ್ದರಿಂದ ಆ ವರ್ಗದವರಿಗೆ ಮೊದಲು ಶರಣುಹೊಡೆದು ನಂತರ ತನ್ನ ವೈಜ್ಞಾನಿಕ ವಿಚಾರಗಳನ್ನು ಮಂಡಿಸುತ್ತಾನೆ. ಇದು ಅಂದಿನ ತತ್ವಜ್ಞಾನಿಗಳು ಅನುಸರಿಸಬೇಕಾಗಿದ್ದ ಉಪಾಯ. ಅವರು ಭೌತವಾದಿಗಳೇ ಆಗಿದ್ದರೂ ಭಾವನಾವಾದಕ್ಕೆ ಉಪಚಾರಾತ್ಮಕ ಮಾತುಗಳಿಂದ ಮನ್ನಣೆ ನೀಡಿ ಮತ್ತೆ ಮುಂದುವರಿಯಬೇಕಿತ್ತು!

ಪ್ರಾಚೀನ ಭಾರತದ ವಿಜ್ಞಾನಿಗಳು ಈ ಕಟ್ಟಳೆಗೆ ಸಿಲುಕಿದ್ದರು. ಆದರೆ ಇಂದಿನ ನಮ್ಮ ವಿಜ್ಞಾನಿಗಳಿಗೆ ಅಂತಹ ಯಾವ ಘೋರ ಕಟ್ಟಳೆಯೂ ಇಲ್ಲ. ಆದರೂ ಅವರಲ್ಲಿ ಅನೇಕ ಮೂಢ ವಿಜ್ಞಾನಿಗಳು ಬಾಬಾ ಭಕ್ತರಾಗಿ ವಿಜ್ಞಾನಕ್ಕೆ ಎರಡು ಬಗೆಯುವಂಥವರಾಗಿದ್ದಾರೆ. ಹಾಗೆ ನೋಡಿದರೆ ನಮ್ಮ ಪ್ರಾಚೀನ ವಿಜ್ಞಾನಿಗಳನೇಕರು ಇಂದಿನ ಖೋಟಾ ವಿಜ್ಞಾನಿಗಳನೇಕರಿಗಿಂತಲೂ ಶ್ರೇಷ್ಠರೆಂದೇ ಪರಿಗಣಿತರಾಗುತ್ತಾರೆ. ಅದಿರಲಿ; ವೈಶೇಷಿಕ ದರ್ಶನವೆಂಬುದು ಭಾರತೀಯ ತತ್ವಶಾಸ್ತ್ರದ ಪ್ರಭೇದಗಳಲ್ಲೊಂದು. ಅದರ ಪ್ರಕಾರ ವಿಶ್ವವೆಲ್ಲಾ ಅಣುಗಳ ಒಂದಾಗುವಿಕೆಯಿಂದ ಉಂಟಾಗಿದೆ; ಎಲ್ಲಕ್ಕಿಂತಲೂ ಕನಿಷ್ಠವಾದ ಗಾತ್ರವುಳ್ಳದ್ದು ಅಣು, ಅವುಗಳ ಸಂಘಾತದಿಂದ ವಸ್ತುವೊಂದು ಹೊರಹೊಮ್ಮುತ್ತದೆ. ಈ ತತ್ವಕ್ಕೂ ವೇದಾರ್ಥಕ್ಕೂ ಯಾವ ಸಂಬಂಧವೂ ಇಲ್ಲ. ಆದರೂ ಕಣಾದರು ತಮ್ಮ ಗ್ರಂಥದಲ್ಲಿ ಅಣುವಿನ ಪ್ರಸ್ತಾಪ ಮಾಡುವ ಮೊದಲು ವೇದ, ಯಜ್ಞ, ಪುರೋಹಿತರುಗಳಿಗೆ ತಮ್ಮ ನಮನ ಸಲ್ಲಿಸಿ

ಮುಂದುವರಿಯುತ್ತಾರೆ. ಹಾಗೆ ಮಾಡದಿದ್ದರೆ ಅವರ ಗ್ರಂಥಕ್ಕೆ ಉಳಿಗಾಲವಿಲ್ಲ! ಅಂತೆಯೇ ನ್ಯಾಯದರ್ಶನದ ಪ್ರಥಮ ಕರ್ತೃಗಳಾದ ಗೌತಮರ ಗತಿಯೂ ಸಹ. ಅವರಿಗೆ ತರ್ಕಕ್ಕಿಂತಲೂ ಮಿಗಿಲಾದ ಬೇರಾವ ಸಾಧನದಲ್ಲಿಯೂ ನಂಬಿಕೆ ಇಲ್ಲ. ಹಾಗಿದ್ದರೆ ವೇದಪ್ರಾಮಾಣ್ಯವೇ ಅತಿಮುಖ್ಯವೆಂದು ಅವರು ಒಪ್ಪುವುದಾದರೂ ಹೇಗೆ? ಆದರೂ "ವೇದ-ಬ್ರಾಹ್ಮಣ-ಪುರೋಹಿತ ಸಂಘರ್ಷ ಸಮಿತಿ"ಗೆ ಔಪಚಾರಿಕ ವಂದನೆ ಸಲ್ಲಿಸಲೇಬೇಕು! "ವೇದಪ್ರಾಮಾಣ್ಯವೇ ಅತಿ ಹೆಚ್ಚಿನ ಪ್ರಾಮುಖ್ಯ ಪಡೆಯಲಾರದು. ಆದರೂ ಅದೇ ಪ್ರಮುಖ. ಅಂದರೆ ತರ್ಕಕ್ಕಿಂತಲೂ ಬಲಿಷ್ಠವಾದ ಸಾಧನ ವೇದವೆಂದಂತಾಯಿತು. ಅದು ಹೇಗೆ ಸಾಧ್ಯ? ಏನೋ, ಆ ಮಾತಂತಿರಲಿ; ನಾವು ತರ್ಕಶಾಸ್ತ್ರವನ್ನು ಪ್ರತಿಪಾದಿಸುತ್ತೇವೆ." – ಹೀಗಿದೆ ಗೌತಮರ ದೃಷ್ಟಿ. ನ್ಯಾಯ-ವೈಶೇಷಿಕ ದರ್ಶನಗಳೆರಡೂ ಕೂಡ ಭಾರತೀಯ ತತ್ವಶಾಸ್ತ್ರದ ಆಧಾರದಂತಿದೆಯೆಂದು ಹೇಳಲಾದ ಉಪನಿಷತ್ತಿನ ಚಿಂತನೆಗೆ ಕಿಂಚಿತ್ತಾದರೂ ಗಮನ ನೀಡುವುದಿಲ್ಲ! ಭಾವನಾವಾದವನ್ನು ಅವರು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ಇದರ ಅಂತರಾರ್ಥವೇನೆಂಬುದನ್ನು ನಾವು ಮನಗಾಣಬೇಕು. ಸುತ್ತಣ ಪ್ರಪಂಚ ಮತ್ತು ತರ್ಕಗಳನ್ನು ತಿರಸ್ಕರಿಸುವವರು ಬಹುಬೇಗನೆ ದುಡಿಯುವ ಜನತೆಯ ಬಗೆಗೂ ತಿರಸ್ಕಾರ ಭಾವನೆ ತಾಳುತ್ತಾರೆ. ಭಾರತೀಯ ಭಾವನಾವಾದೀ ತತ್ವಜ್ಞರೂ ಅಂತೆಯೇ ಮಾಡುತ್ತಾರೆ. ರಾಮಾಯಣ-ಮಹಾಭಾರತಗಳ ಪ್ರಕಾರ ತರ್ಕವು ಹೀನವಾದದ್ದು. ಮನುವಿಗಂತೂ ತರ್ಕವೆಂದರೆ ಅಸಹ್ಯ. ಶಂಕರಾಚಾರ್ಯರಿಗೆ ತರ್ಕದಲ್ಲಿ ನಂಬಿಕೆಯಿಲ್ಲ. ಇವರೆಲ್ಲಾ ಇನ್ನೊಂದು ಹೆಜ್ಜೆ ಮುಂದಿಟ್ಟರೆ ಯಾವ ಘಟ್ಟ ತಲುಪುತ್ತಾರೆ? ಪ್ರಪಂಚವೆಲ್ಲಾ ಮಾಯೆ! ಹಾಗಾದರೆ, ಸಾಮಾಜಿಕವಾಗಿ ಪರತಂತ್ರ ಜೀವಿಗಳಿದ್ದಾರಲ್ಲ ಅವರ ಸ್ಥಿತಿ ಏನು? ಅದೂ ಮಾಯೆಯೇ! ಆದ್ದರಿಂದ ಅವರ ವಿರುದ್ಧ ಹೋರಾಟ ಬೇಕಾಗಿಲ್ಲ. ಈ ಹಿನ್ನೆಲೆಯಲ್ಲಿ ಬಿರ್ಲಾ ಮಹಾಶಯರು ಹಲವು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ದೇವಸ್ಥಾನ ಕಟ್ಟಿಸುವುದೂ ಒಂದು ಬಂಡವಾಳ ಹೂಡುವಿಕೆಯೇ ಆಗುತ್ತದೆ! ಭಾವನಾವಾದವು ಅತಾರ್ಕಿಕ, ಅವೈಜ್ಞಾನಿಕ, ಮೂಢನಂಬಿಕೆಯನ್ನಾಧರಿಸಿ ಬೆಳೆಯುತ್ತದೆಂಬುದು ಇದರಿಂದ ವೇದ್ಯವಾಗುತ್ತದೆ.

ಇಂತಹ ಭಾವನಾವಾದವನ್ನು ತಿರಸ್ಕರಿಸುವುದೆಂದರೆ ತಾರ್ಕಿಕ-ವೈಜ್ಞಾನಿಕ ಮಾರ್ಗವನ್ನು ಹಿಡಿಯುವುದೆಂದರ್ಥ. ನ್ಯಾಯ-ವೈಶೇಷಿಕ ದರ್ಶನದ ಪ್ರಕಾರ ಯಾವೊಂದು ಸತ್ಯವೂ ಸಹ ನಿರ್ಧರಿತವಾಗುವುದು ಆಚರಣೆಯಿಂದ ಮಾತ್ರ. ನೀರು ಕುಡಿದರೆ ಬಾಯಾರಿಕೆ ನೀಗುವುದೋ ಇಲ್ಲವೋ ಎಂಬ ಪ್ರಶ್ನೆಗೆ ತತ್ವಶಾಸ್ತ್ರದಲ್ಲಿ ಎಷ್ಟೇ ಚರ್ಚೆ ನಡೆದರೂ ಖಚಿತವಾದ ಉತ್ತರ ದೊರಕುವುದು ಆಚರಣೆಯಿಂದ. ಅನುಭವವೇದ್ಯವಾದ ಸತ್ಯಕ್ಕೆ ಬೇರಿನ್ನಾವ ತರ್ಕಸಾಧನೆಯೂ ಬೇಕಿಲ್ಲ. ಇದನ್ನು ನಮ್ಮ ಸುತ್ತಣ ಪ್ರಪಂಚಕ್ಕೂ ಅನ್ವಯಿಸಬೇಕು. ಶಂಕರರು ವಿಶ್ವವೆಲ್ಲಾ ಮಾಯೆ, ಮಿಥ್ಯೆ, ಅವಿದ್ಯೆ ಎಂದು ಹೇಳಿದರೆ ಅವರಿಗೆ ನ್ಯಾಯ-ವೈಶೇಷಿಕರ ಪ್ರಶ್ನೆ ಒಂದೇ: ಹಾಗಾದರೆ ನಮ್ಮ ಆಚರಣೆಯಿಂದ ಖಚಿತವಾಗಿರುವ ಅನುಭವವನ್ನು ಹೇಗೆ ವಿವರಿಸುತ್ತೀರಿ? ನಿಮ್ಮ ಮಾತೂ ಮಾಯಾ ಅವಿದ್ಯೆಗಳಿಂದ ಆವೃತವಾಗಿರಬಹುದಲ್ಲವೇ? ಸಿದ್ಧಾಂತ-ಆಚರಣೆಗಳ ನಡುವೆ ಸಾಮರಸ್ಯವಿಲ್ಲವೆಂದು ವಾದಿಸುವ ಭಾವನಾವಾದಿಗಳಲ್ಲಿ ಪ್ರಮುಖರಾದ ಶಂಕರಾಚಾರ್ಯರು ಈ ಪ್ರಶ್ನೆಯಲ್ಲಿ ಸಿಲುಕಿಕೊಂಡಾಗ ಬಿಡಿಸಿಕೊಳ್ಳಲು ವಿಶ್ವಕ್ಕೆ ಮೂರು ರೀತಿಯ ಸತ್ಯಗಳಿವೆಯೆಂದು ನುಸುಳಿಕೊಳ್ಳುತ್ತಾರೆ. ಅವು ಪ್ರಾತಿಭಾಸಿಕ (ತಪ್ಪಾಗಿ ತೋರುವುದು; ಹಗ್ಗವನ್ನು ಹಾವೆಂದು ಭ್ರಮಿಸುವುದು), ವ್ಯಾವಹಾರಿಕ (ಅಂದರೆ ದಿನನಿತ್ಯ ಜೀವನದ ವ್ಯವಹಾರದ ಮಟ್ಟದಲ್ಲಿ ಸತ್ಯವೆಂದು ತೋರುವ ಪ್ರಪಂಚ) ಮತ್ತು ಪಾರಮಾರ್ಥಿಕ

(ಅಂದರೆ ಯಥಾರ್ಥ ದೃಷ್ಟಿಯಿಂದ ಸುಳ್ಳಾದ ಪ್ರಪಂಚ, ಬರಿಯ ಮಾಯೆಯೆಂದು ತಿಳಿದು ಕೊಳ್ಳುವುದು). ಅಂದರೆ ಸತ್ಯಕ್ಕೂ ವಿವಿಧ ಸ್ತರಗಳಿವೆಯೆಂದು ಈ ವಾದ. ಎಲ್ಲವೂ ಮಾಯಾ ಅವಿದ್ಯೆಗಳೆಂದು ವಾದಿಸುವ ಶಂಕರರಿಗೆ ನ್ಯಾಯ-ವೈಶೇಷಿಕದ ಇನ್ನೊಂದು ಸ್ವಾರಸ್ಯಕರವಾದ ಪ್ರಶ್ನೆ ಇದೆ: ''ಹಗ್ಗವೂ ಮಾಯೆ, ಹಾವೂ ಮಾಯೆ. ಹಾಗಾದರೆ ಹಗ್ಗವನ್ನು ಹಾವೆಂದೇ ಏಕೆ ಭ್ರಮಿಸುತ್ತೇವೆ? ಆನೆಯೆಂದೇಕೆ ಭ್ರಮಿಸಬಾರದು? ಹಾವು ಮಾಯೆಯಾದರೆ ಅದರ ಭ್ರಮೆಯು ಹಗ್ಗದಲ್ಲೇಕೆ ಬರಬೇಕು? ಅರ್ಥಾತ್ ಹಾವು ಅಸ್ತಿತ್ವದಲ್ಲಿರುವ ಸ್ವತಂತ್ರ ವಸ್ತು ಎಂದಂತಾಗಲಿಲ್ಲವೆ?''

ಈ ಪ್ರಶ್ನೆಯನ್ನು ಗಮನಿಸುವಾಗ ಭಾರತದಲ್ಲಿ ಭಾವನಾವಾದದ ಉಗಮ ಹೇಗಾಯಿತೆಂಬುದನ್ನು ತಿಳಿದುಕೊಳ್ಳುವುದೊಳ್ಳೆಯದು. ವೇದದ ಮತ್ತು ಉಪನಿಷತ್ತುಗಳ ಸಾರವನ್ನು ಗ್ರಹಿಸಿದರೆ ಒಂದು ವ್ಯತ್ಯಾಸ ಎದ್ದು ತೋರುತ್ತದೆ. ವೇದವನ್ನು ರಚಿಸಿದ ಕವಿಯ ದೃಷ್ಟಿಯಲ್ಲಿ ತನ್ನ ಕವಿತೆಯು ರಥವನ್ನು ಮಾಡುವ ಬಡಗಿಯೊಬ್ಬನ ಕೆಲಸಕ್ಕೆ ಸಮಾನವಾದುದು. ಆತ ಬಡಗಿಯನ್ನು ಹೀಯಾಳಿಸುವುದಿಲ್ಲ. ದೈಹಿಕ ಶ್ರಮವನ್ನು ತೆಗಳುವುದಿಲ್ಲ. ಋಗ್ವೇದದ ಒಂದು ಮಂತ್ರ (1.130.6)ದಲ್ಲಿ ಬಡಗಿಯನ್ನು ಜ್ಞಾನಿಯೆಂದು ಪರಿಗಣಿಸಲಾಗಿದೆ. ಆದರೆ ಉಪನಿಷತ್ತುಗಳಿಗೆ ಬಂದರೆ ಇದು ಸಾಧ್ಯವೇ ಇಲ್ಲ. ಅಲ್ಲಿ ಜ್ಞಾನಿಯೆಂದರೆ 'ಬ್ರಹ್ಮಜ್ಞಾನಿ' ಮಾತ್ರ; ಬಡಗಿಯ ಜ್ಞಾನ ತುಚ್ಛವಾದದ್ದು. ದೈಹಿಕ ಶ್ರಮಕ್ಕೆ ಬೆಲೆಯಿಲ್ಲ ಮತ್ತು ಬ್ರಹ್ಮಜ್ಞಾನ ಕೆಲವು ಬುದ್ಧಿವಂತ ಋಷಿಗಳ ಸ್ವತ್ತು ಮಾತ್ರ. ಅದೊಂದು ರಹಸ್ಯಜ್ಞಾನ, ಎಲ್ಲರಿಗೂ ಅದನ್ನು ತಿಳಿಸುವಂತೆಯೂ ಇಲ್ಲ. ಹೀಗೆ ಜ್ಞಾನವೆಂಬುದು ವೈಭವಪೂರಿತವಾದ ಅನಿರ್ದಿಷ್ಟವಾದ ಜ್ಞಾನವಾಗಿ ಮಾರ್ಪಡುತ್ತದೆ. ಯಾಜ್ಞವಲ್ಕ್ಯ, ಜನಕರಂತಹ ಮೇಧಾವಿಗಳಿಗೆ ಮಾತ್ರ ಅದು ಲಭ್ಯ. ಆದರೆ ಅವರು ಈ ರಹಸ್ಯಜ್ಞಾನವನ್ನು ದೊರಕಿಸಿಕೊಳ್ಳಲು ಕಾಲವ್ಯಯ ಮಾಡುವಾಗ ಅವರ ಉಪಚಾರ ನಡೆಯಬೇಕಲ್ಲ, ಅದನ್ನಾರು ಮಾಡಬೇಕು? ಬೇರೆಯವರು ಉತ್ಪಾದಿಸಿದ್ದನ್ನು ತಾವು ಲಪಟಾಯಿಸಿಕೊಂಡು ಈ ರಹಸ್ಯಜ್ಞಾನ ಪಡೆಯಲು ಇವರು 'ಶ್ರಮ' ವಹಿಸುತ್ತಾರೆ! ವೇದದ ಕಾಲದಲ್ಲಿ ಒಬ್ಬ ವ್ಯಕ್ತಿಯ ಉತ್ಪಾದನೆಯಿಂದ ಅಧಿಕ ಮೌಲ್ಯ ಬೇರೊಬ್ಬನಿಗೆ ದಕ್ಕುವುದು ಸಾಧ್ಯವಿರಲಿಲ್ಲ. ಅಂದಿನ ಸಮಾಜ ವ್ಯವಸ್ಥೆ ಪ್ರತಿಯೊಬ್ಬರನ್ನೂ ಉತ್ಪಾದನಾ ಕಾರ್ಯದಲ್ಲಿ ತೊಡಗಿಸುವಂತಿತ್ತು. ಬೇರೊಬ್ಬನ ದುಡಿಮೆಯಿಂದ ಜೀವನ ನಡೆಸುವ ಶೋಷಣಾಕ್ರಮ ಇನ್ನೂ ಉಂಟಾಗಿರಲಿಲ್ಲ. ಆದ್ದರಿಂದ ರಹಸ್ಯಜ್ಞಾನ, ದೈಹಿಕ ಶ್ರಮದ ತೆಗಳುವಿಕೆ, ಇತ್ಯಾದಿ ಜೊಳ್ಳು ಮಾತುಗಳಿನ್ನೂ ಬರುವಂತಿರಲಿಲ್ಲ. ಉತ್ಪಾದನಾ ಸಾಮಗ್ರಿಗಳು ಬೆಳೆದು, ತಾಂತ್ರಿಕ ಜ್ಞಾನವೂ ಹೆಚ್ಚಿ, ಅಧಿಕ ಉತ್ಪಾದನೆ ಸಾಧ್ಯವಾದಾಗ ರಾಜರು ಮತ್ತು ರಾಜಾಶ್ರಯದಲ್ಲಿದ್ದ ತತ್ವಜ್ಞಾನಿಗಳು ಸೋಮಾರಿತನದಿಂದ ಕಾಲಹರಣ ಮಾಡಿ ಅವರ ವರ್ಗದ ತತ್ವಪ್ರಣಾಲಿಕೆಯನ್ನು ಬೆಳೆಸಲು ಸಾಧ್ಯವಾಯಿತು. ಅದೇ ಭಾವನಾವಾದದ ಉಗಮದ ಚರಿತ್ರೆ. ಅಂದರೆ, ಶೋಷಕ ವರ್ಗದ ತತ್ವಜ್ಞಾನ ಭಾವನಾವಾದವಾದರೆ ಶೋಷಿತ ವರ್ಗದ ತತ್ವಜ್ಞಾನ ಭೌತವಾದವಾಗುತ್ತದೆ. ದುಡಿಯುವ ವ್ಯಕ್ತಿಯು ಪ್ರಕೃತಿಯು ಸುಳ್ಳೆಂದು ವಾದ ಹೂಡಲಾರ. ಏಕೆಂದರೆ ಅವನ ಗದ್ದೆಗೆ ಬೇಕಾದ ನೀರು, ಅಗೆತ, ಪೈರು, ಗೊಬ್ಬರಗಳೆಲ್ಲಾ 'ರಹಸ್ಯ'ಗಳಲ್ಲ. ಅವಿಲ್ಲದಿದ್ದರೆ ಬೆಳೆ ಇಲ್ಲ, ಆಹಾರವಿಲ್ಲ. ಮಾಯಾವಾದದಿಂದ ಅವನಿಗೆ ಪ್ರಯೋಜನವೂ ಇಲ್ಲ, ತೃಪ್ತಿಯೂ ಇಲ್ಲ. ಪ್ರಕೃತಿಯೊಡನೆ ಪ್ರತಿನಿತ್ಯ ಸೆಣಸಾಟ ನಡೆಸಿ ತನ್ನ ಶಕ್ತಿ ಮತ್ತು ಕುಶಲತೆಯನ್ನು ಹೆಚ್ಚಿಸಿಕೊಳ್ಳುವ ಆ ದುಡಿಮೆಗಾರ, ಕಚ್ಚಾವೇದಾಂತಿಯಲ್ಲ; ಅವನೊಬ್ಬ ನಿಷ್ಠಾವಂತ ವಿಜ್ಞಾನಿ. ಭಾವನಾವಾದಿಯಂತೆ ಮಂತ್ರದಿಂದ ಮಾವಿನಕಾಯಿ

ಉದುರಿಸುವ ಗೋಜಿಗೆ ಒಬ್ಬ ದುಡಿಮೆಗಾರ ಹೋಗಲಾರ. ಅವನಿಗೆ ಪ್ರತಿಯೊಂದು ಪ್ರತಿಫಲವೂ ದುಡಿಮೆಯ ಸತ್ಯದಿಂದ ಮಾತ್ರವೇ ಉದ್ಭವಿಸುತ್ತದೆಯೆಂಬುದು ಖಚಿತವಾಗಿದೆ.

ಈ ಹಿನ್ನೆಲೆಯಲ್ಲಿ ವೈದಿಕ ಯಜ್ಞಗಳನ್ನೂ ಅರ್ಥಮಾಡಿಕೊಳ್ಳಬೇಕು. ಯಜ್ಞದಿಂದ ಎಲ್ಲ ಫಲವೂ ದೊರೆಯುವುದೆಂಬ ಭಾವನೆಯು ನಾಗರಿಕತೆಯ ಪೂರ್ವಕಾಲದ ಮಾಂತ್ರಿಕತೆಯನ್ನನುಸರಿಸಿ ಬಂದಿದ್ದ ಭಾವನೆ. ಪ್ರಕೃತಿಯ ನಿಯಮವನ್ನು ತಿಳಿಯುವ ಮೊದಲು ಮುಗ್ಧಮಾನವ ತನ್ನ ಶಕ್ತಿ ಹೆಚ್ಚಿಸಿಕೊಳ್ಳಲು ಅನುಸರಿಸುತ್ತಿದ್ದ ಮಾರ್ಗವೇ ಈ ವೈಯಕ್ತಿಕ ಮಾಂತ್ರಿಕತೆ ಎನಿಸಿಕೊಳ್ಳುತ್ತದೆ. ಅಂತಹ ಪದ್ಧತಿಗಳು ಇಂದಿಗೂ ನಮ್ಮಲ್ಲಿ ಕಾಣಸಿಗುತ್ತವೆ. ಮಳೆ ಬಾರದಿದ್ದಾಗ ದಂಪತಿಗಳು ಬರಿಮೈಯಲ್ಲಿ ಹೋಗಿ ಹೊಲವನ್ನುತ್ತರೆ ಮಳೆ ಬರುತ್ತದೆಯೆಂಬ ಐತಿಹ್ಯವೊಂದಿದೆ. ಸಂಕಷ್ಟಕ್ಕೆ ಸಿಲುಕಿದವನು ತನ್ನ ಮಾನಸಿಕ ತುಮುಲವನ್ನು ಕಡಿಮೆ ಮಾಡಿಕೊಳ್ಳಲು ಸಾಧನವಿದೇ ಹೊರತು ನಿಜಕ್ಕೂ ಮಳೆ ಬಾರದೆ ಹೋಗಬಹುದು. ಜಾರ್ಜ್ ಥಾಮ್ಸನ್ ಎಂಬ ವಿಖ್ಯಾತ ಪಂಡಿತರು ಮಾವೋರಿ ಪಂಗಡದ ಒಂದು ಪದ್ಧತಿಯನ್ನು ಉದಾಹರಿಸುತ್ತಾರೆ. ಮಾವೋರಿಗಳಲ್ಲಿ ಹೆಣ್ಣುಮಕ್ಕಳು ಆಲೂಗಡ್ಡೆ ಬೆಳೆಯಿರುವಲ್ಲಿ ನೃತ್ಯವೊಂದನ್ನು ಮಾಡುತ್ತಾರಂತೆ. ಸುಂಟರಗಾಳಿಯು ಬೀಸಿದಾಗ ಆಲೂಗಡ್ಡೆಯ ಸಸಿ ಮತ್ತು ಲತೆ ಹೇಗೆ ನಲುಗಾಡುವುದೋ ಹಾಗೆ ನಲುಗಾಡುವುದೇ ಆ ನೃತ್ಯಭಂಗಿಯ ಸಾರ. ಗಾಳಿಯ ಹೊಡೆತಕ್ಕೆ ಸಿಕ್ಕ ಸಸಿಯಂತೆ ತತ್ತರಿಸಿ ಅವರು ಹಾಗೇ ಚೇತರಿಸಿಕೊಳ್ಳುತ್ತಾರೆ. ಅವರಂತೆಯೇ ಸಸಿಯೂ ಚೇತರಿಸಿಕೊಳ್ಳುತ್ತದೆಯೆಂದು ಅವರ ಊಹೆ. ನಿಜಕ್ಕೂ ಸಸಿಯು ಇವರ ನೃತ್ಯದ ಫಲವಾಗಿ ಚೇತರಿಸಿಕೊಳ್ಳುತ್ತದೆಯೇ? ಇಲ್ಲ. ಹಾಗಾದರೆ ಮಾವೋರಿಗಳ ನಂಬಿಕೆ ಏಕೆ ನಾಶವಾಗಲಿಲ್ಲ? ವೈಯಕ್ತಿಕವಾಗಿ ಒಂದು ಗಾಢ ನಂಬಿಕೆಯನ್ನು ತಾಳಿದ ಹೆಣ್ಣು ಮಕ್ಕಳು ನಂತರ ಆಲೂಗಡ್ಡೆ ಸಸಿಯನ್ನು ಎಚ್ಚರದಿಂದ ಸಲಹುತ್ತಾರೆ. ಅದು ಉಳಿದೇ ತೀರುತ್ತದೆಂಬ ಖಾತರಿ ಅವರಿಗೆ. ಹುಮ್ಮಸ್ಸಿನಿಂದ ಕೆಲಸಮಾಡಿ ಕೃಷಿಯನ್ನು ವೃದ್ಧಿಪಡಿಸುತ್ತಾರೆ. ಸಸಿ ಚೇತರಿಸಿ ಕೊಂಡು ಫಲ ಕೊಡುತ್ತದೆ! ಪ್ರಕೃತಿಯ ಮೇಲೆ ಮಾನವ ತನ್ನ ಶಕ್ತಿ ಸ್ಥಾಪಿಸಿಕೊಳ್ಳುವುದು ಇಂತಹ ಅನೇಕ ಪದ್ಧತಿಗಳಿಂದ. ವೈದಿಕ ಯಜ್ಞಗಳೂ ಇಂತಹ ಮಾಂತ್ರಿಕತೆಯ ಮೂಲದಿಂದಲೇ ಬೆಳೆದಿವೆ. ಅದರಲ್ಲಿ ಸಾಮೂಹಿಕವಾದ ಕೆಲವೊಂದು ಕರ್ತವ್ಯಗಳ ಪರಿಪಾಲನೆಯೂ ಕೂಡಿದೆ. ಆದರೆ ಹೀಗೆ ಉಗಮವಾದ ಯಜ್ಞವು ಪುರೋಹಿತವರ್ಗದ ಕೈಗೆ ಸಿಕ್ಕಿ ಶೋಷಣಾಸ್ತ್ರವಾಗಿ ಪರಿಣಮಿಸುತ್ತದೆ!

ಅದು ಹೇಗೇ ಇರಲಿ, ಒಂದು ಸಮಾಧಾನದ ಸಂಗತಿಯೆಂದರೆ ಭಾವನಾವಾದವನ್ನು ಎತ್ತಿ ಹಿಡಿಯುವ ಉಪನಿಷತ್ತುಗಳಲ್ಲೇ ಭೌತವಾದದ ತಿರುಳೂ ಇದೆಯೆಂಬುದು. ಈ ಭೌತವಾದದ ದೃಷ್ಟಿಯೇ ನಂತರದ ವಿಜ್ಞಾನಕ್ಕೆಡೆಮಾಡಿಕೊಡುತ್ತದೆ. ಅದೇ ಇಂದಿನ ದುಡಿಯುವ ಜನತೆಯು ಭಾರತೀಯ ತತ್ವಶಾಸ್ತ್ರಪರಂಪರೆಯಲ್ಲಿ ಉಳಿಸಿಕೊಂಡು ಹೋಗಬೇಕಾಗಿರುವುದು.

ಭಾವನಾವಾದವು ಸಾಮಾಜಿಕವಾಗಿ ಯಾವ ಕಾರ್ಯವೆಸಗುತ್ತದೆಯೆಂದು ಇದರಿಂದಲೇ ಸ್ಪಷ್ಟವಾಗುತ್ತದೆ. ಸಮಾಜವಾದಿ ಸಿದ್ಧಾಂತದ ಆಧಾರದ ಮೇಲೆ ರಚಿತವಾದ ವ್ಯವಸ್ಥೆಯಲ್ಲಿ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು ಇಲ್ಲವಾಗುತ್ತದೆಂದು ನಮ್ಮಲ್ಲಿ ಆಗಾಗ್ಗೆ ಗುಲ್ಲೆಬ್ಬಿಸಲಾಗುತ್ತದೆ. ಆ ಪ್ರಚಾರಕ್ಕೆ ಮರುಳಾಗುವವರು ಭಾವನಾವಾದವು ಸಮಾಜದಲ್ಲಿ ಹೇಗೆ ಜನರ ಬುದ್ಧಿ ಕೌಶಲ್ಯಗಳಿಗೆ ಕಡಿವಾಣ ಹಾಕಿ ಆಳುವ ವರ್ಗದ ಅಡಿಯಾಳುಗಳನ್ನಾಗಿ ಮಾಡುತ್ತದೆಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದು. ಸ್ವತಂತ್ರ ವಿಚಾರಶಕ್ತಿಯನ್ನು ನಮ್ಮ ಧರ್ಮಶಾಸ್ತ್ರಕಾರರು ಹೀಯಾಳಿಸುತ್ತಾರೆ. (ನಮ್ಮ ಆಧುನಿಕ 'ಸಂವಿಧಾನಕಾರರು' ಅಂತಹ ಪ್ರವೃತ್ತಿಗೆ ತೀರಾ

ವಿರೋಧಿಗಳಲ್ಲವೆಂಬುದು ಗಮನಾರ್ಹ.) ಇಂತಹ ಕಟ್ಟುಪಾಡಿನ ಮಧ್ಯೆ ಸತ್ಯಾನ್ವೇಷಣೆ ಯಥಾವತ್ತಾಗಿ ನಡೆಯುವುದೂ ಅಶಕ್ಯ. ಆದೇ ಗುರಿಯಾಗುಳ್ಳ ತತ್ವಜ್ಞಾನಿಗಳು ಧರ್ಮಶಾಸ್ತ್ರಕಾರರ ಈ ಉಪಟಳಕ್ಕೆ ಪ್ರತಿಯಾಗಿ ಮಾಡುವುದೇನು ? ಬಾಯಿ ಮುಚ್ಚಿಕೊಂಡು ಅವರ ಆಜ್ಞೆಯನ್ನು ಶಿರಸಾವಹಿಸುವುದು! ಇದರ ಪರಿಣಾಮವಾಗಿ ಸಾಮಾಜಿಕ ಮೌಲ್ಯಗಳನ್ನು ಧರ್ಮಶಾಸ್ತ್ರಕಾರರು ನಿರ್ಧರಿಸಿದರೇ ಹೊರತು ತತ್ತ್ವಜ್ಞಾನಿಗಳಲ್ಲ. ಆ ಮೌಲ್ಯಗಳಿಗೆ ತಾತ್ವಿಕ ನೆಲೆಯನ್ನು ರಚಿಸಿಕೊಡುವುದಷ್ಟೆ ತತ್ತ್ವಜ್ಞಾನಿಯ ಕೆಲಸವಾಯಿತು. ಭಾವನಾವಾದಿ ದಾರ್ಶನಿಕರು ಅಗಾಧವಾದ ಆಕರ್ಷಣೀಯ ತತ್ವಗಳನ್ನು ಒಂದು ಕಡೆ ಸಾರಿ ಹೇಳಿದರೆ ಅವುಗಳನ್ನು ತುಚ್ಛೀಕರಿಸುವಂತಹ ನಿಯಮಗಳನ್ನು ಧರ್ಮಶಾಸ್ತ್ರಕಾರರು ನಿರೂಪಿಸಿದರು. ಉದಾಹರಣೆಗೆ, ಶತಶತಮಾನಗಳಿಂದಲೂ ನಮ್ಮಲ್ಲಿ ಬೇರುಬಿಟ್ಟು ನಮ್ಮ ಸಮಾಜವನ್ನು ಹೊಲಸು ಮಾಡಿರುವ ಜಾತಿ ಪದ್ಧತಿಯನ್ನೇ ತೆಗೆದುಕೊಳ್ಳೋಣ: ''ಎಲ್ಲರ ಆತ್ಮವೂ ಒಂದೇ ಪರಬ್ರಹ್ಮನ ಸ್ವರೂಪ, ಅಂಶ'' ಎಂದು ದಾರ್ಶನಿಕ ಘೋಷಿಸಿದರೆ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಹುಟ್ಟುವಿಕೆಯಿಂದಲೇ ಶ್ರೇಷ್ಠ-ಕನಿಷ್ಠರಾಗುತ್ತಾರೆಂದು ಧರ್ಮಶಾಸ್ತ್ರಕಾರ ಬೊಬ್ಬೆಹಾಕುತ್ತಾನೆ. ಅವನ ಮಾತಿಗೆ ದಾರ್ಶನಿಕ ತಲೆಬಾಗಿ ಬ್ರಾಹ್ಮಣನ ಆತ್ಮ, ಶೂದ್ರನ ಆತ್ಮಗಳನ್ನು ಪ್ರತ್ಯೇಕಿಸಿ ತನ್ನ ಸಿದ್ಧಾಂತವನ್ನೇ ತಲೆಕೆಳಗು ಮಾಡುತ್ತಾನೆ. ಇದು ನಮ್ಮ ಭಾವನಾವಾದಿ ತತ್ವಸಿದ್ಧಾಂತದ ಪೌರುಷ ಮತ್ತು ಸಾಮಾಜಿಕ ಪ್ರಜ್ಞೆ! ಮನು, ಇತ್ಯಾದಿ ಧರ್ಮಶಾಸ್ತ್ರಕಾರರನೇಕರು ಉಲ್ಲೇಖಿಸುವ ನಿಯಮಗಳನ್ನು ಕಂಡು ನಾವು ಸಹನೆಯನ್ನು ಕಳೆದುಕೊಂಡರೆ ಆಶ್ಚರ್ಯವೇನಿಲ್ಲ. ಶೂದ್ರಾದಿಗಳ ಸ್ಥಾನವನ್ನು ಅವರು ನಿರ್ಧರಿಸುವ ರೀತಿಯಲ್ಲಿ ಅಮಾನವೀಯತೆಯ ಚಿಹ್ನೆಗಳೂ ತುಂಬಿಕೊಂಡಿವೆ.

ಇವನ್ನೆಲ್ಲಾ ಗಮನಿಸಿ ತಲೆತಗ್ಗಿಸಬೇಕಾಗಿ ಬಂದಾಗ ನಮ್ಮ ಅನೇಕ ವಿದ್ವನ್ಮಣಿಗಳು ಉಪಾಯವಾಗಿ ತಪ್ಪಿಸಿಕೊಳ್ಳಲು ತವಕಿಸುತ್ತಾರೆ. ಜಾತಿ ವಿಂಗಡಣೆಯು ಮೇಲುಕೀಳುಗಳೆಂಬುದಕ್ಕೆ ಕಾರಣವಾಗಲಿಲ್ಲ, ಅದು ಕೇವಲ ಪ್ರಾಚೀನ ಭಾರತದ ಸಾಮಾಜಿಕ ವ್ಯವಸ್ಥೆಯ ಅಂಗರಚನೆಗೆ ಸಂಬಂಧಿಸಿದ್ದ ಅಂಶ, ಎಂದವರು ಜಾರಿಕೊಳ್ಳುತ್ತಾರೆ. ದುಡಿಮೆಯ ವಿಭಜನೆಯನ್ನು ಸೂಚಿಸುವುದಷ್ಟೇ ಜಾತಿಗಳ ಕೆಲಸವಾಗಿತ್ತೆಂದು ಸೊಗಸಾದ ವಾದ ನಮ್ಮ ಮುಂದಿಡುತ್ತಾರೆ, ಈ ಪಂಡಿತಂಮನ್ಯರು. ತಮ್ಮ ಅಚಾರಿತ್ರಿಕ ಶುಷ್ಕ ತರ್ಕವನ್ನು ನಮಗೊಪ್ಪಿಸಲು ಭಗವದ್ಗೀತೆಯನ್ನೂ ಉದ್ಧರಿಸಿ (4-13: ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ) ಬಾಯಿ ಬಡಿಯುತ್ತಾರೆ. ಇದರಂತೆ ಜಾತಿ ವಿಂಗಡಣೆಯು ಹುಟ್ಟಿನಿಂದ ಉದ್ಭವಿಸುವುದಿಲ್ಲ, ವ್ಯಕ್ತಿಗಳ ಗುಣಕರ್ಮಗಳ ಪ್ರಕಾರ ಉಂಟಾಗುತ್ತದೆ. ಈ ವಿದ್ವಾಂಸರು ಗೀತೆಯನ್ನು ಸುಲಲಿತವಾಗಿ ಉದ್ಧರಿಸುವಾಗ ಒಬ್ಬನೇ ಒಬ್ಬ ಧರ್ಮಶಾಸ್ತ್ರಕಾರನ ನಿಯಮಗಳನ್ನೂ ಗಮನಿಸಲಿಚ್ಛಿಸುವುದಿಲ್ಲ. ವ್ಯಕ್ತಿಯ ಜಾತಿಯು ತನ್ನ ಜನ್ಮವನ್ನೇ ಅವಲಂಬಿಸಿದೆಯೆಂಬ ಮಾತನ್ನು ಆಪಸ್ತಂಬ ಇತ್ಯಾದಿ ಪ್ರತಿಯೊಬ್ಬ ಧರ್ಮಶಾಸ್ತ್ರಕಾರನೂ ಉಲ್ಲೇಖಿಸಿದ್ದಾನೆ (ತೇಷಾಂ ಪೂರ್ವತಃ ಪೂರ್ವೇ ಜನ್ಮತಃ ಶ್ರೇಯಾನ್). ಇದರ ಪ್ರಕಾರ ಮೇಲು-ಕೀಳುಗಳು ಸ್ವಾಭಾವಿಕ, ಅವುಗಳನ್ನು ಪ್ರಶ್ನಿಸಬಾರದು, ತತ್ವಶಾಸ್ತ್ರವೂ ಅದನ್ನೇ ಒಪ್ಪಬೇಕು, ರಹಸ್ಯ ಜ್ಞಾನವನ್ನು ಎಲ್ಲ ಜಾತಿಯವರೂ ಪಡೆಯಲು ಯೋಗ್ಯರಲ್ಲ, ಶ್ರೇಷ್ಠಜಾತಿಯವರ ಶುಶ್ರೂಷೆ ಮಾಡುವುದೇ ಶೂದ್ರಾದಿಗಳ ಉತ್ತಮ ಕರ್ತವ್ಯ. ಇಂತಹ ಮಾತುಗಳನ್ನು ಲವಲೇಶವೂ ಮುಚ್ಚುಮರೆಯಿಲ್ಲದೆ ನಮ್ಮ ಧರ್ಮಶಾಸ್ತ್ರಕಾರರು ಹೇಳಿದ್ದಾರೆ. ಅವನ್ನು ಶಂಕರಾಚಾರ್ಯ ಮತ್ತು ಇತರ ಆಚಾರ್ಯರೂ ಒಪ್ಪಿದ್ದಾರೆ, ಹಾಗೂ ಅದರಂತೆ ನಡೆಯಬೇಕೆಂದು

ಬುದ್ಧಿ ಹೇಳಿದ್ದಾರೆ! 'ಸ್ವತಂತ್ರ ವಿಚಾರಶೀಲತೆ' ಮತ್ತು 'ಭಾವನಾವಾದ' ಪರಸ್ಪರ ವಿರೋಧಿಗಳೆನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. ಶೂದ್ರನನ್ನು ಕೊಂದರೆ ಮನುವಿನ ಪ್ರಕಾರ ಪ್ರಾಯಶ್ಚಿತ್ತ ಏನು ಗೊತ್ತೆ? ಬೆಕ್ಕು, ಕಪ್ಪೆ, ಹಲ್ಲಿ, ಗೂಬೆ ಅಥವಾ ಕಾಗೆಯನ್ನು ಕೊಂದರೆ ಏನು ಪ್ರಾಯಶ್ಚಿತ್ತವೋ ಅದೇ! ಈ ಪ್ರಾಣಿಗಳಿಗೂ ಶೂದ್ರನಿಗೂ ವ್ಯತ್ಯಾಸವೇ ಇಲ್ಲ!! ಗೌತಮ ಧರ್ಮಸೂತ್ರದಲ್ಲಿ ಇನ್ನೊಂದು 'ಮಹಾ ಸಂಯಮ'ದ ಮಾತಿದೆ: ಶೂದ್ರನೊಬ್ಬ ಕಾಮುಕ ಸ್ವೇಚ್ಛಾಚಾರಿಯಾದರೆ ಅವನ ಜನನೇಂದ್ರಿಯವನ್ನು ಕತ್ತರಿಸಿಹಾಕಬೇಕು; ಅದೇ ಕೆಲಸ ಬ್ರಾಹ್ಮಣನು ಮಾಡಿದರೆ ಅವನಿಗೆ ದಂಡ ವಿಧಿಸಬೇಕು. ಎಂತಹ ನ್ಯಾಯಶೀಲ ಮತ್ತು ಸಮಾನತೆಯ ಅಧ್ಯಾತ್ಮ ಪ್ರವೃತ್ತಿ ಇದೆಂದು ಒತ್ತಿಹೇಳಬೇಕಾಗಿಲ್ಲ! ಜನಗಳಲ್ಲಿ ಮೂಢನಂಬಿಕೆಗಳನ್ನು ತುಂಬಿ ಅವರ ಮೇಲೆ ಅಧಿಕಾರ ಸ್ಥಾಪಿಸಿಕೊಳ್ಳುವುದು ಪ್ರಾಚೀನ ಅಥವಾ ಆಧುನಿಕ ಭಾರತದ ಗುತ್ತೇದಾರಿಯೇನಲ್ಲ. ಅಂತಹ ಕಾರ್ಯಾಚರಣೆಯನ್ನು ಬೇರೆ ದೇಶ-ಕಾಲಗಳಲ್ಲೂ ನಾವು ಕಾಣುತ್ತೇವೆ. ಪಾಶ್ಚಾತ್ಯ ದಾರ್ಶನಿಕ ಪ್ಲೇಟೋ ಜನತೆಯಲ್ಲಿ ಅಂಧವಿಶ್ವಾಸ ಇರಬೇಕಾದ್ದು ಅವಶ್ಯವೆಂದು ವಾದಿಸಿದ್ದಾನೆ. ಅದಿಲ್ಲದಿದ್ದರೆ ಅವರನ್ನು ಆಳುವ ವರ್ಗ ಹತೋಟಿಯಲ್ಲಿಡುವುದಾದರೂ ಹೇಗೆಂಬುದೇ ಅವನ ವಾದದ ತಿರುಳು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಜನಗಳ ಮನಸ್ಸಿನಲ್ಲಿ ಮೂಢನಂಬಿಕೆಗಳನ್ನು ಹೇಗೆ ತುಂಬಬೇಕೆಂಬುದರ ಬಗ್ಗೆ ಸಲಹೆಗಳು ಸಹ ಇವೆ. ಒಂದು ಉದಾಹರಣೆ ಸಾಕು: ಗೂಢಚಾರರಿಂದ ವಿವಿಧ ಚಟುವಟಿಕೆಗಳನ್ನು ತಿಳಿದುಕೊಂಡು ರಾಜಸಭೆಯಲ್ಲಿ ತಾನು ಅದೆಲ್ಲವನ್ನೂ ದಿವ್ಯಶಕ್ತಿಯಿಂದ ತಿಳಿದಿರುವವನಂತೆ ರಾಜನು ನಟಿಸಬೇಕೆಂದು ಒಂದು ಸಲಹೆ. ಹಾಗೆ ಮಾಡಿದರೆ ಪ್ರಜೆಗಳು ರಾಜನನ್ನು ಕಂಡು ಹೆದರಿ ಗೌರವದಿಂದಿರುತ್ತಾರಂತೆ. ನಮ್ಮ ಬೂದಿಬಾಬಾಗಳ ಸೋಗು, ಠಕ್ಕು, ಎಲ್ಲಾ ಇದೇ ನಿಯಮದಿಂದ ಅರ್ಥಮಾಡಿಕೊಳ್ಳಬಹುದು.

ಭಾವನಾವಾದದ ಚರಿತ್ರೆ ಸಮಾಜದ ಪ್ರಗತಿಗೆ ಅಡ್ಡಿ ಬರುವಂತಿದ್ದರೆ, ತದ್ವಿರುದ್ಧವಾಗಿ ಭೌತವಾದದ ಇತಿಹಾಸವು ಅಕಲಂಕಶೋಭೆಯಿಂದ ಜಾಜ್ವಲ್ಯಮಾನವಾಗಿದೆ. ಹಿಂದಿನ ಚಾರಿತ್ರಿಕ ಸಂದರ್ಭದಲ್ಲಿ ಭೌತವಾದ ಸರ್ವತೋಮುಖವಾಗಿ ಬೆಳೆಯಲು ಸಾಧ್ಯವಿರಲಿಲ್ಲ. ಆದರೂ ವೈಜ್ಞಾನಿಕ ತಳಹದಿಯ ಮೇಲೆ ನಿಂತು ಲೋಕಾಯತ ದರ್ಶನ ಮತ್ತಿತರ ಭೌತವಾದಿಗಳು ತಮ್ಮ ಸುತ್ತಣ ವಿಶ್ವವನ್ನು ವಿವರಿಸಲು ಉಪಕ್ರಮಿಸಿದ್ದು ಸರ್ವಥಾ ಸ್ತುತ್ಯರ್ಹವಾದುದು. "ವಿಶ್ವವೆಲ್ಲಾ ಭೌತಾಕಾರವಾಗಿದೆಯಾದ್ದರಿಂದ ವಿಶ್ವದ ಮೂಲಾಧಾರವು ಭೌತರೂಪದ್ದೇ ಇರಬೇಕು." – ಇದು ಭೌತವಾದದ ಒಂದು ಮುಖ್ಯ ನಿರೂಪಣೆ. ಇದು "ಆಸ್ತಿಕದರ್ಶನ"ವೆಂದು ಪರಿಗಣಿತವಾದ ಸಾಂಖ್ಯದರ್ಶನಕ್ಕೂ ಒಪ್ಪಿಗೆಯಾದ ಮಾತು. ಲೋಕಾಯತ, ಸಾಂಖ್ಯ ಮತ್ತು ನ್ಯಾಯ-ವೈಶೇಷಿಕ ದರ್ಶನಗಳು ಭಾವನಾವಾದವನ್ನು ತಿರಸ್ಕರಿಸುವುದು ಇಂತಹ ಒಂದು ಆಧಾರದಿಂದ. ಭೌತವಸ್ತುಗಳ ಮೂಲಸ್ವರೂಪದ ಬಗ್ಗೆ ಇವರಲ್ಲಿ ಭಿನ್ನಾಭಿಪ್ರಾಯವಿದ್ದರೂ ಅವರೆಲ್ಲಾ ಪ್ರಪಂಚದ ಸತ್ಯತೆಯನ್ನೊಪ್ಪುತ್ತಾರೆ ಮತ್ತು ಭೌತವಸ್ತುವಿನಿಂದ ಎಲ್ಲ ಮಾರ್ಪಾಟುಗಳೂ ಉಂಟಾಗಿ ಪ್ರಜ್ಞಾಶಕ್ತಿ ಬೆಳೆದಿದೆ ಎಂದು ತರ್ಕಿಸುತ್ತಾರೆ. ಆದರೆ ಅವರ ಪೈಕಿ ಲೋಕಾಯತ ದರ್ಶನವೇ ಸಂಪೂರ್ಣ ಭೌತವಾದಿ ದರ್ಶನವಾಗಿ ಉಳಿಯುವುದು. ಹೀಗೆಂದ ಮಾತ್ರಕ್ಕೆ ಲೋಕಾಯತ ದರ್ಶನವು ತತ್ವಶಾಸ್ತ್ರದ ಸಕಲ ಪ್ರಶ್ನೆಗಳಿಗೂ ಸೂಕ್ತ ಪರಿಹಾರ ಕೊಟ್ಟಿದೆಯೆಂದು ಅರ್ಥವಲ್ಲ. ವಿಜ್ಞಾನವು ಕಾಲಕ್ರಮೇಣ ಮುಂದುವರಿಯುತ್ತದೆಯೇ ವಿನಾ ಯಾವುದೋ ದೈವಶಕ್ತಿಯಿಂದ ಒಮ್ಮೆಲೇ ಆವಿರ್ಭಾವವಾಗುವುದಿಲ್ಲ. ವೈಜ್ಞಾನಿಕ ದೃಷ್ಟಿಕೋನವನ್ನಿಟ್ಟುಕೊಂಡು ಪರಿಸರದ ವಿಶ್ಲೇಷಣೆಗೆ

ತೊಡಗಿದುದೇ ಲೋಕಾಯತ ದರ್ಶನದ ಅಂತಃಸತ್ವಕ್ಕೆ ನಿದರ್ಶನ. ನಮ್ಮ ಅತ್ಯಾಧುನಿಕ ವಿಜ್ಞಾನಿಗಳನೇಕರು ಇಂದಿಗೂ ವಿಜ್ಞಾನದ ಮಾರ್ಗವನ್ನು ತ್ಯಜಿಸಿ ಟೋಫನ್-ಸಂನ್ಯಾಸಿಗಳಿಗೆ ಅಡ್ಡಬಿದ್ದು ವಿಜ್ಞಾನಕ್ಕೆ ಮಸಿ ಬಳಿಯುತ್ತಿರುವುದನ್ನು ಕಂಡಾಗ ಪ್ರಾಚೀನ ಕಾಲದಲ್ಲೇ ಪರಿಪೂರ್ಣವೂ ಪಕ್ವವೂ ಆದ ವೈಜ್ಞಾನಿಕ ಮಾರ್ಗವನ್ನಾಶ್ರಯಿಸಿದ ಲೋಕಾಯತ ತತ್ವಜ್ಞಾನಿಗಳ ಮತಿಯ ಆಳಕ್ಕೆ ತಲೆಬಾಗುವುದು ಅನಿವಾರ್ಯ.

ಈ ಸಂದರ್ಭದಲ್ಲಿ ಜಡವಸ್ತು ಮತ್ತು ಪ್ರಜ್ಞಾಶಕ್ತಿಗಳ ನಡುವಣ ಸಂಬಂಧವನ್ನೂ ಪರೀಕ್ಷಿಸುವುದು ಅಗತ್ಯ. ತತ್ವಶಾಸ್ತ್ರ ಕ್ಷೇತ್ರದಲ್ಲಿ ಈ ಪ್ರಶ್ನೆಗೆ ಅತೀವ ಮಹತ್ವವಿದೆ. ಮಾನವ ಇತಿಹಾಸಕ್ಕೆ ಪೂರಕವಾದ ಸಮಸ್ಯೆ ಈ ಪ್ರಶ್ನೆಯಲ್ಲಡಕವಾಗಿದೆ. ಪ್ರಜ್ಞಾಶಕ್ತಿಯೂ ಜಡವಸ್ತುವಿನ ರೂಪಾಂತರದ ಕಾಲವೊಂದರಲ್ಲಿ ಕಾಣಿಸಿಕೊಳ್ಳುವ ಗುಣವೆಂಬುದನ್ನು ಭೌತವಾದ (ಮತ್ತು ಇಂದಿನ ವಿಜ್ಞಾನ) ಒಪ್ಪುತ್ತದೆ. ಜಡವಸ್ತುವಿನಿಂದ ಉತ್ಪನ್ನವಾಗಿರುವ ಪ್ರಜ್ಞಾಶಕ್ತಿಗೆ ತನ್ನದೇ ಆದ ವಿಶಿಷ್ಟಸ್ಥಾನವೂ ಇದೆ ಮತ್ತು ಹೊರಗಣ ಪ್ರಪಂಚವನ್ನು ರೂಪಿಸುವುದರಲ್ಲಿ ಅದಕ್ಕೆ ಪಾತ್ರವೂ ಇದೆ. ಪ್ರಜ್ಞಾಶಕ್ತಿಯು ಜಡವಸ್ತುವಿನ ಮಾರ್ಪಾಡಿನಿಂದ ಉದ್ಭವವಾಗುವ ಅಂಶವೆಂಬುದು ಇಂದಿನ ನೂತನ ಜ್ಞಾನವಲ್ಲ. ಛಾಂದೋಗ್ಯೋಪನಿಷತ್ತಿನಲ್ಲಿ ಉದ್ದಾಲಕ ಆರುಣಿಯು ಶ್ವೇತಕೇತುವಿಗೆ ಜ್ಞಾನವನ್ನು ಬೋಧಿಸುವಾಗ ಕೆಲವು ಪ್ರಯೋಗಗಳಿಂದ ಈ ವಿಷಯವನ್ನು ಸ್ಪಷ್ಟೀಕರಿಸಿದ್ದಾನೆ. ನಮ್ಮ ಭಾವನಾವಾದಿ ತತ್ವಜ್ಞಾನಿಗಳು ಆ ವಾಕ್ಯಗಳನ್ನು ಮರೆಮಾಚಿ ತಮ್ಮದೇ ಆದ ಬಾಲಿಶ ಸಿದ್ಧಾಂತವನ್ನು ಮುಂದಿಡುತ್ತಾರೆ. ಲೋಕಾಯತ ದರ್ಶನದಂತೆ ನ್ಯಾಯವೈಶೇಷಿಕ ಮತ್ತು ಸಾಂಖ್ಯದರ್ಶನಗಳೂ ಪ್ರಜ್ಞೆಯು ಜಡವಸ್ತುವಿನಿಂದ ಉದ್ಭವಿಸಿದ್ದೆಂದು ವಾದಿಸುತ್ತಾರೆ. ಈ ಕಾರಣದಿಂದಲೇ ಶಂಕರಾಚಾರ್ಯರಿಗೆ ಸಾಂಖ್ಯದರ್ಶನವನ್ನು ಕಂಡರೆ ಎಲ್ಲಿಲ್ಲದ ಕೋಪ.

ಜಡವಸ್ತುವಿನಿಂದ ಪ್ರಜ್ಞೆಯು ಹುಟ್ಟುವುದಾದರೂ ಹೇಗೆ? ಈ ಪ್ರಶ್ನೆಗೆ ಉತ್ತರ ಕೊಡುವಾಗ, ಲೋಕಾಯತವು ಒಂದು ನಿದರ್ಶನವನ್ನು ಕೊಟ್ಟು ವಾದ ಮಾಡುತ್ತದೆ. ಮಾದಕ ದ್ರವ್ಯವೊಂದನ್ನು ತಯಾರಿಸುವಾಗ ಉಪಯೋಗಿಸುವ ಸಾಮಗ್ರಿಗಳು ಒಟ್ಟುಗೂಡಿದಾಗ ಅವುಗಳಲ್ಲಿಲ್ಲದ ಮಾದಕ ಗುಣ ಆವಿರ್ಭವಿಸುತ್ತದೆ. ಅಂತೆಯೇ ಪ್ರಜ್ಞಾರಹಿತವಾದ (ಅಥವಾ ಅಚೇತನವಾದ) ಜಡವಸ್ತುಗಳಿಂದ ಚೇತನ ವಸ್ತು ಉಗಮವಾಗುತ್ತದೆ. ಅಡಿಕೆ, ವೀಳೆಯದೆಲೆ ಮತ್ತು ಸುಣ್ಣಗಳ ಸೇರುವಿಕೆಯಿಂದ ಅವುಗಳಾವುದರಲ್ಲೂ ಇಲ್ಲದ ಕೆಂಪುಬಣ್ಣ ಉದ್ಭವ ವಾಗುವುದೂ ಒಂದು ನಿದರ್ಶನವಾಗಬಹುದು. ಅದು ಹೇಗೇ ಇರಲಿ, ಇಂದಿನ ಆಧುನಿಕ ವಿಜ್ಞಾನದ ನಿಯಮವೂ ಸಹ ಜಡವಸ್ತುವಿನಿಂದ ಚೇತನವಸ್ತುವಿನ ಉದ್ಭವವಾಗುತ್ತದೆಂದು ಒಪ್ಪುತ್ತದೆ. ಈ ನಿಯಮವನ್ನು ಪ್ರಾಚೀನ ಲೋಕಾಯತ ದರ್ಶನವು ನಮೂದಿಸಿದೆಯೆಂದರೆ ಲೋಕಾಯತ ತತ್ವದ ವೈಜ್ಞಾನಿಕ ಪ್ರಣಾಲಿಕೆ ಎಷ್ಟು ಗಾಢವಾಗಿದೆಯೆಂದು ತಿಳಿಯಬಹುದು. ಭಾವನಾವಾದಕ್ಕೆ ಇಷ್ಟು ಕಟ್ಟುನಿಟ್ಟಾದ ವಿಮರ್ಶೆಯನ್ನು ನೀಡಿದ ಲೋಕಾಯತ ದರ್ಶನವನ್ನು ಮೂಢನಂಬಿಕೆಗಳಿಂದ ಮಾತ್ರ ಸೋಲಿಸಲು ಸಾಧ್ಯ ಎಂಬುದನ್ನು ಭಾರತೀಯ ಭಾವನಾವಾದದ ವಕ್ತಾರರು ಅರಿತಿದ್ದಾರೆ. ಆದರೆ ಮೂಢನಂಬಿಕೆಯ ಆಧಾರದಿಂದ ಯಾವ ತತ್ವವನ್ನು ನಿರಾಕರಿಸಿದರೂ ಆ ನಿರಾಕರಣೆಗೆ ಬೆಲೆ ಬರಲಾರದು. ವಿಜ್ಞಾನ ಮತ್ತು ಮೂಢ ನಂಬಿಕೆಗಳ ನಡುವಣ ಘರ್ಷಣೆಯಲ್ಲಿ ಯಾವತ್ತೂ ವಿಜ್ಞಾನಕ್ಕೆ ಜಯ ಖಚಿತ. ಅಂತೆಯೇ ಲೋಕಾಯತ ದರ್ಶನದ ಮಹತ್ವಕ್ಕೆ ಸಹ ಎಂದಿಗೂ ಚ್ಯುತಿ ಬರಲಾರದು. ನಮ್ಮ ತತ್ವಶಾಸ್ತ್ರ ಗ್ರಂಥಗಳಲ್ಲಿ ಲೋಕಾಯತರ ವಾದವನ್ನು ಎದುರಿಸುವಾಗ ಸ್ವಾರಸ್ಯದ ಸಂಗತಿಯೊಂದು ಕಾಣಸಿಗುತ್ತದೆ. ಸುಸಂಬದ್ಧ ಚರ್ಚೆಯಿಂದ ಒಂದು ತತ್ವವನ್ನು ನಿರಾಕರಿಸಲಾಗದಿದ್ದಾಗ ಆ

ತತ್ವವನ್ನೇ ಅದಲು ಬದಲು ಮಾಡಿ ಅದನ್ನು ಸುಲಭವಾಗಿ ಖಂಡಿಸಬಹುದು! ಈಚಿನ ವರ್ಷ ಗಳಲ್ಲಿ ವಿಖ್ಯಾತ ತತ್ವಜ್ಞಾನಿಗಳು, ಸಮಾಜ ವಿಜ್ಞಾನಿಗಳು ಎಲ್ಲಾ ಕಲೆತು ಮಾರ್ಕ್ಸ್‌ವಾದವನ್ನು ಖಂಡ ತುಂಡ ಮಾಡುವ ಪ್ರಕಾರವೂ ಇದೇ ಆಗಿದೆ. ಮಾರ್ಕ್ಸ್‌ವಾದವು ನಂಬದಂತಹ ಅಂಶಗಳನ್ನು ಮಾರ್ಕ್ಸ್‌ವಾದಕ್ಕೆ ಲಗತ್ತಿಸಿ ಆ ವಾದವನ್ನು ತಳ್ಳಿಹಾಕುವುದಕ್ಕಿಂತಲೂ ಬೇರೆ ಸುಲಭೋಪಾಯ ಎಲ್ಲಿರಲು ಸಾಧ್ಯ? ಇದೇ ಹೀನ ಬುದ್ಧಿವಂತಿಕೆಯನ್ನು ಭಾರತೀಯ ಭಾವನಾವಾದಿಗಳು ರೂಢಿಸಿಕೊಂಡಿದ್ದಾರೆ. ಆ ಖಂಡನೆಗೆ ಸತ್ಯವೂ ಇಲ್ಲ, ಬೆಲೆಯೂ ಇಲ್ಲ.

ಭಾವನಾವಾದವನ್ನು ತಿರಸ್ಕರಿಸುವ ದಾರ್ಶನಿಕರಲ್ಲಿ ಪೂರ್ವಮೀಮಾಂಸಕರ ಮತ್ತು ನ್ಯಾಯವೈಶೇಷಿಕರ ಪಾತ್ರವೂ ಅಗಾಧವಾಗಿದೆ. ನ್ಯಾಯವೈಶೇಷಿಕರ ಒಂದು ವಾದಸರಣಿ ಹೀಗಿದೆ: ಎಲ್ಲ ತತ್ವಜ್ಞಾನಿಗಳೂ ಸತ್ಯದ ಅನ್ವೇಷಣೆ ಮಾಡುವಾಗ ಅನುಭವ ಮತ್ತು ತರ್ಕಕ್ಕೆ ಮನ್ನಣೆ ನೀಡಬೇಕು. ಇವೆರಡರ ದೃಷ್ಟಿಯಲ್ಲೂ ಭಾವನಾವಾದ ಸೋಲುತ್ತದೆ. ವಸ್ತುಗಳಿಗೆ ಸ್ವತಂತ್ರವಾದ ಅಸ್ತಿತ್ವವಿಲ್ಲವೆಂದು ಸಾರುವ ಭಾವನಾವಾದಿಯೂ ಒಂದು ತರ್ಕವನ್ನನುಸರಿಸ ಬೇಕಷ್ಟೆ. ಹಾಗೆ ಮಾಡಿದಾಗ ತರ್ಕಕ್ಕೊಂದು ಸ್ವತಂತ್ರ ಅಸ್ತಿತ್ವವಿದೆಯೆಂದು ಒಪ್ಪಲೇಬೇಕಲ್ಲ? ಹಾಗೆ ಮಾಡದಿದ್ದರೆ ತನ್ನ ತತ್ವವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಅಂತೂ ಭಾವನವಾವಾದವು ಇದರಿಂದ ಪೇಚಿಗೆ ಸಿಕ್ಕಿಕೊಳ್ಳಲೇಬೇಕು! ಕುಮಾರಿಲಭಟ್ಟರೆಂಬ ಪೂರ್ವಮೀಮಾಂಸಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾರೆ. ತಾತ್ವಿಕ ಜ್ಞಾನವು ಯೌಗಿಕ ಅಪರೋಕ್ಷಾನು ಭೂತಿಯಿಂದ ದೊರೆಯುತ್ತದೆಂದು ಹೇಳುವವರ ವಿರುದ್ಧ ಅವರ ವಾದ ಹೀಗಿದೆ : ವೈಯಕ್ತಿಕ ಭ್ರಮೆಯೇ ಯೌಗಿಕ ಜ್ಞಾನವಾಗಬಹುದು! ಸರ್ವರಿಗೂ ಸಮಾನವಾದ ಅನುಭವ ಮತ್ತು ಜ್ಞಾನಗಳಿಗೆ ಮಾತ್ರ ಬೆಲೆಯುಂಟೇ ಹೊರತು ಯಾವನೋ ಒಬ್ಬ ವ್ಯಕ್ತಿ ತನಗೆ ಅಪಾರ ಜ್ಞಾನವಿದೆಯೆಂದು ಸಾರಿದ ಮಾತ್ರಕ್ಕೆ ಅದನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ಯೌಗಿಕ ಜ್ಞಾನವೆಂಬುದು ಪೊಳ್ಳುಜ್ಞಾನವಲ್ಲದೆ ಮತ್ತೇನೂ ಅಲ್ಲ. ಅಂತೂ ವಸ್ತುಗಳಿಗೆ ಸ್ವತಂತ್ರ ಅಸ್ತಿತ್ವವಿದೆಯೆಂಬುದು ಸ್ವತಃಸಿದ್ಧವಾದ ಅಂಶ.

ಭಾರತೀಯ ತತ್ವಶಾಸ್ತ್ರದಲ್ಲಿ ಇನ್ನೊಂದು ಪ್ರಮುಖ ಪ್ರಶ್ನೆಯು ಮೋಕ್ಷದ ಕಲ್ಪನೆಗೆ ಸಂಬಂಧಿ ಸಿದ್ದು. ಮುಮುಕ್ಷು ಮಾರ್ಗವು ತತ್ವಶಾಸ್ತ್ರಕ್ಕೆ ಭಾರತದ ಅತ್ಯಂತ ದೊಡ್ಡ ಕೊಡುಗೆಯೆಂದು ಪದೇ ಪದೇ ಅನೇಕರು ಉದ್ಗರಿಸುತ್ತಾರೆ. ಆದರೆ ನಿಜಾಂಶವೇನು ? ಶೋಷಕ ವರ್ಗವು ಈ ತತ್ವವನ್ನು ಶೋಷಿತ ಜನತೆಯ ಮೇಲೆ ಬ್ರಹ್ಮಾಸ್ತ್ರವನ್ನಾಗಿ ಉಪಯೋಗಿಸುತ್ತಲೇ ಬಂದಿದೆ ಮತ್ತು ಇಂದಿಗೂ ಉಪಯೋಗಿಸುತ್ತಿದೆ. ''ಇಲ್ಲಿ ಹೇಗಿದ್ದರೇನು, ಮೋಕ್ಷ ಸಾಧನೆಯೇ ಮುಖ್ಯ'', ''ಕರ್ಮಕ್ಕೆ ತಕ್ಕಂತೆ ಫಲ, ಆದ್ದರಿಂದ ಇಂದಿನ ಕಷ್ಟವನ್ನು ಸಹಿಸಲೇಬೇಕು'', ''ನಾವು ಕೇಳಿಕೊಂಡು ಬಂದದ್ದು ಇಷ್ಟನ್ನೆ, ಯಾರೇನು ಮಾಡಲು ಸಾಧ್ಯ?'' ''ನಾ ಮಾಡಿದಾ ಕರ್ಮ ಬಲವಂತವಾದರೆ ನೀ ಮಾಡುವುದೇನೋ ಹರಿಯೆ'', ಇತ್ಯಾದಿ ನುಡಿಗಳೆಲ್ಲಾ ಈ ಭಾವನೆ ಯಿಂದ ಪ್ರೇರಿತವಾಗಿವೆ. ಅಂದರೆ ಸಮಾಜದಲ್ಲಿ ಶೋಷಣೆ ಇಲ್ಲ, ವರ್ಗ ವಿಂಗಡಣೆ ಇಲ್ಲ; ಎಲ್ಲಾ ಕರ್ಮದ ಫಲ! ಇದೊಂದು ಶುಷ್ಕ ತತ್ವ; ದಬ್ಬಾಳಿಕೆ ನಡೆಸುವ ವರ್ಗದ ಕೊಳಕು ವಾದ. ಇದನ್ನು ಬಲಪಡಿಸಲು ಪ್ರಪಂಚವೆಲ್ಲಾ ಮಾಯೆ ಎಂಬ ಮಾತನ್ನೂ ಹೇಳಬಹುದು. ಹೀಗೆ ಶತಮಾನಗಳಿಂದ ಮೋಕ್ಷದ ಹೆಸರಿನಲ್ಲಿ ನಡೆದಿರುವ ಮೋಸಕ್ಕೆ ಎಲ್ಲೆಯಿಲ್ಲ. ಒಟ್ಟಿನಲ್ಲಿ, ''ಇಲ್ಲಿನ ಸ್ಥಿತಿಗತಿಗಳನ್ನು ಕುರಿತು ಏನೂ ಮಾಡಲಾಗದು, ಮಾಡಬೇಕಾಗಿಲ್ಲ; ಇದು ನಶ್ವರ. ಶಾಶ್ವತವಾದ ಮೋಕ್ಷದ ಕಡೆ ಗಮನವಿಡು. ನಾನಿಲ್ಲಿ ಕೆಲಸ ಮಾಡದೆಯೂ ಸುಖವಾಗಿರುತ್ತೇನೆ, ಅದು ನನ್ನ ಕರ್ಮ! ನನಗಾಗಿ ದುಡಿಯುವುದು ನಿನ್ನ ಕರ್ಮ.'' – ಹೀಗಿದೆ ಈ ಮೋಕ್ಷ ತತ್ವದ

ರಂಗು. ಲೋಕಾಯತ ದರ್ಶನವು ಈ ವಾದವನ್ನು ಖಂಡಿಸುತ್ತದೆ. ಬೇರೆ ಕೆಲವು ದರ್ಶನಗಳೂ ಸಹ ಆ ತತ್ವವನ್ನು ತೋರಿಕೆಗೆ ಮಾತ್ರ ಒಪ್ಪಿಕೊಂಡಿವೆ. ಇಲ್ಲಿನ ಸಾಮಾಜಿಕ ಅನ್ಯಾಯಗಳನ್ನು ನಶಿಸದಂತೆ ಕಾಪಾಡಲು ಶೋಷಕ ವರ್ಗವು ಹಾಕಿಕೊಳ್ಳುವ ಸೋಗು ಇದರಿಂದ ಬಯಲಾಗಿದೆ.

ಇಂದಿನ ದುಡಿಯುವ ಜನತೆಯು ಸಂಪೂರ್ಣವಾಗಿ ವೈಜ್ಞಾನಿಕ ನಿಲುವಿನ ಮೇಲೆ ನಿಂತಿರುವ ತತ್ವಶಾಸ್ತ್ರವನ್ನು ಅಂಗೀಕರಿಸಿದೆ. ಅದೇ ದ್ವಂದ್ವಮಾನ ಭೌತವಾದದ ತತ್ವ. ಆ ತತ್ವದ ಬಲದಿಂದ ವಿಶ್ವದ ಮೂರನೆಯ ಒಂದು ಭಾಗಕ್ಕೂ ಹೆಚ್ಚು ಜನ ನೂತನ ಸಮಾಜ ಕಟ್ಟಿದ್ದಾರೆ, ಜನತೆಯ 'ಕರ್ಮಫಲ'ವನ್ನು ಒಂದೇ ಏಟಿನಿಂದ ಸಮಾನವನ್ನಾಗಿಸಿದ್ದಾರೆ. ಭಾರತೀಯ ತತ್ವಶಾಸ್ತ್ರದಲ್ಲಿ ಭಾವನಾವಾದವು ಇದಕ್ಕೆ ಘಾತುಕವಾಗಿದ್ದರೂ ಭೌತವಾದವು ಇದಕ್ಕೆ ಆಸರೆ ನೀಡುತ್ತದೆ. ಆದ್ದರಿಂದ ನಮ್ಮ ಪರಂಪರಾಗತವಾದ ತತ್ವಶಾಸ್ತ್ರದಲ್ಲಿ ಭಾವನಾವಾದವು ನಿರ್ಜೀವವಾದ್ದು, ಭೌತವಾದವು ಜೀವಂತವಾದ್ದು. ಈ ಜೀವಂತ ವೈಜ್ಞಾನಿಕ ಭೌತವಾದವೇ ಇಂದು ನಮ್ಮ ಜನತೆಗೆ ಬೇಕಾದ ತತ್ವಶಾಸ್ತ್ರ ಪ್ರಣಾಲಿಕೆ.

ಇಂದಿನ ಹೋರಾಟಕ್ಕೆ ಬೇಕಾದ ಅಸ್ತ್ರಗಳಲ್ಲಿ ನಮ್ಮ ಪರಂಪರೆ, ಇತಿಹಾಸ, ತತ್ವಶಾಸ್ತ್ರ, ಸಾಹಿತ್ಯ, ಕಲೆ, ಇತ್ಯಾದಿಗಳ ಚಾರಿತ್ರಿಕ ಮತ್ತು ವೈಜ್ಞಾನಿಕ ವಿಶ್ಲೇಷಣೆಯ ಅವಶ್ಯಕತೆ ಇದೆ. ಅದನ್ನು ಅತ್ಯಂತ ಯಶಸ್ವಿಯಾಗಿ ತಮ್ಮ ಅಮೋಘ ಪಾಂಡಿತ್ಯದಿಂದ ನೆರವೇರಿಸಿರುವ ದೇವೀಪ್ರಸಾದ ಚಟ್ಟೋಪಾಧ್ಯಾಯರಿಗೆ ನಮ್ಮ ಕೃತಜ್ಞತೆ ಸಲ್ಲಬೇಕು. ಅವರ ಮೂಲಗ್ರಂಥವನ್ನು ಓದಲು ಈ ಪರಿಚಯಾತ್ಮಕ ಲೇಖನ ಪ್ರೇರಕವಾದರೆ, ಲೇಖಕನ ಶ್ರಮ ಸಾರ್ಥಕವಾಗುತ್ತದೆ.

*– ಅರುಣ : 1977 ಫೆಬ್ರವರಿ*

# ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ಸಮಾಜ

ತರ್ಕದಿಂದ ಮೂಡಿಬರದ ಜ್ಞಾನ ಕೇವಲ ಆಕಸ್ಮಿಕ ಜ್ಞಾನ.
**– ಚರಕ ಸಂಹಿತೆ**

ನಮ್ಮ ಹಿಂದಿನ ಪ್ರಧಾನಿಯೊಬ್ಬರು ಸ್ವಮೂತ್ರ ಚಿಕಿತ್ಸೆಯಿಂದ ಎಲ್ಲ ರೋಗಗಳನ್ನೂ ಪರಿಹರಿಸಬಹುದೆಂಬ ಹಾಸ್ಯಾಸ್ಪದ ಆರೋಗ್ಯ ತಂತ್ರವೊಂದನ್ನು ಪ್ರಚುರಪಡಿಸಿ ಜಗತ್ತಿನಲ್ಲೆಲ್ಲಾ ವಿಸ್ಮಯಕ್ಕೆ ಕಾರಣರಾಗಿದ್ದರು. ಹಾಗೆಯೇ ಮತ್ತೂ ಮುಂದುವರಿದು, ಇದುವರೆಗೂ ಖಾತ್ರಿಯಾಗಿ ಗುಣಪಡಿಸಲು ಸಾಧ್ಯವಾಗಿರದ ಕ್ಯಾನ್ಸರ್ ರೋಗವು ಆರು ವಾರಗಳ ಕಾಲ ದ್ರಾಕ್ಷಿಯ ಸೇವನೆ ಮಾಡುವುದರಿಂದ ಗುಣಮುಖವಾಗಬಲ್ಲುದೆಂಬ ಮತ್ತೊಂದು ಆಶ್ಚರ್ಯಕಾರಕ ಔಷಧಿಯನ್ನೂ ಸೂಚಿಸಿದ್ದರು. ಈ ರೀತಿಯ 'ಸಂಶೋಧನೆ'ಗಳನ್ನು ನಡೆಸಿದವರು ರಾಷ್ಟ್ರದ ಅಧಿಕಾರದ ಗದ್ದುಗೆಯಲ್ಲಿ ಪ್ರಮುಖರೆನಿಸಿ ಮೆರೆದವರಾದರೂ ಈ 'ಸಂಶೋಧನೆ'ಗಳು ವೈಜ್ಞಾನಿಕವೇ ಎಂಬುದು ನಮ್ಮ ಮುಂದಿನ ಪ್ರಶ್ನೆ. ಯಾವುದೇ ಒಂದು ರೋಗವನ್ನು ಗುಣಪಡಿಸಬೇಕಾದರೂ ಶರೀರದ ರಾಸಾಯನಿಕ ಕ್ರಿಯೆಗಳ ಸ್ಥಿತಿಗತಿಗಳನ್ನು ತಿಳಿದುಕೊಂಡು ಯಾವ ಅಂಶದ ಕೊರತೆಯಿದೆಯೆಂದು ಪರೀಕ್ಷಿಸಿ, ಅದಕ್ಕೆ ಸೂಕ್ತ ರೀತಿಯಲ್ಲಿ ಪರಿಹಾರ ನೀಡುವುದು ಹೇಗೆಂಬುದನ್ನು ಪ್ರಯೋಗಗಳಿಂದ ಸಿದ್ಧಪಡಿಸಿಕೊಳ್ಳಬೇಕು. ಹಾಗೆ ಮಾಡುವಾಗ ಒಂದು ರೀತಿಯ ಕಾರ್ಯ-ಕಾರಣ ಸಂಬಂಧಗಳ ಪರಿಜ್ಞಾನ ದೊರೆಯುತ್ತದೆ, ಮತ್ತು ಆಗ ಅದು ವೈಜ್ಞಾನಿಕವೆನಿಸಿಕೊಳ್ಳುತ್ತದೆ. ಆದರೆ ಮೇಲೆ ಹೇಳಿದ ವೈಜ್ಞಾನಿಕವೆನಿಸದ ಸಂಶೋಧನೆಗಳನ್ನು ಪ್ರಚುರಪಡಿಸಿರುವವರು ಅಧಿಕಾರದ ಸ್ಥಾನಮಾನಗಳಿಂದಾಗಿ ಎಷ್ಟೇ ದೊಡ್ಡವರೆನಿಸಿದ್ದರೂ ಅವರು ಮೌಢ್ಯದ ಸಂಕೋಲೆಗೆ ಸಿಲುಕಿರುವ ಕಾರಣ, ನಾವೂ ಅವರಂತೆ ಬಾಲಿಶವಾಗಿ ಕುಣಿಯಬೇಕಾಗಿಲ್ಲ. ಹಲವು ಶತಮಾನಗಳಿಂದ ಪ್ರಕೃತಿಯ ನಿಯಮಗಳನ್ನು ತಿಳಿದುಕೊಳ್ಳಲು ಮಾನವ ಪ್ರಯತ್ನಿಸುತ್ತಾ ಬಂದಿದ್ದಾನೆ; ಆ ಪ್ರಯತ್ನದ ಫಲವೇ ಇಂದು ನಮಗೆ ದೊರಕಿರುವ ನಿಷ್ಕರ್ಷಜ್ಞಾನ. ಅದನ್ನು ಹೆಚ್ಚಿಸಿಕೊಂಡು ಕ್ರಮೇಣ ಹೆಚ್ಚು ಹೆಚ್ಚು ಸ್ವಾತಂತ್ರ್ಯವನ್ನು ಪಡೆದುಕೊಂಡು ಸುಖದಿಂದ ಬಾಳುವುದು ಮತ್ತು ಸೊಗಸಾದ ಸಮಾಜವನ್ನು ಕಟ್ಟುವುದು ಮಾನವನ ಆಕಾಂಕ್ಷೆ.

ಈ ರೀತಿ ಜವಾಬ್ದಾರಿಯನ್ನರಿತು ಪ್ರತಿಯೊಂದು ತಲೆಮಾರಿನ ಜನವೂ ಪ್ರಕೃತಿಯೊಡನೆ ಸೆಣಸಾಡುತ್ತಾ ಬಂದಿರುವುದು ಮಾನವ ಸಮಾಜದ ಇತಿಹಾಸದ ಅವಿಭಾಜ್ಯವಾದ ಒಂದು ಅಂಗ. ಪ್ರಾಚೀನ ಭಾರತದಲ್ಲಿ ಕೂಡ ಈ ದಿಸೆಯಲ್ಲಿ ಬಹಳವಾದ ಪ್ರಗತಿಯನ್ನು ಸಾಧಿಸಲಾಗಿತ್ತು. ಯಾವುದೂ ವಿಮರ್ಶೆಯಿಲ್ಲದೆ ಮತ್ತು ಪ್ರಯೋಗಕ್ಕೆ ಗುರಿಯಾಗದೆ ಸತ್ಯವೆಂದು ತೀರ್ಮಾನವಾಗಲಾರದು; ಜ್ಞಾನವು ಕಾಲ ಮತ್ತು ಅನುಭವಗಳ ಶಿಶುವೇ ಹೊರತು ಅಧಿಕಾರದ ಶಿಶುವಲ್ಲ. ಇದರ ಯಥಾರ್ಥತೆಯು ಪ್ರಾಚೀನ ಭಾರತದಲ್ಲಿ ವಿಜ್ಞಾನದ ಮುನ್ನಡೆಯನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಆ ಮುನ್ನಡೆಗೆ ಅನೇಕ ರೀತಿಗಳಲ್ಲಿ ಅಂದಿನ ಅಧಿಕಾರವರ್ಗ ಕಿರುಕುಳ ನೀಡಿದ್ದು ಮತ್ತು ವಿಜ್ಞಾನಿಗಳು ಅಂತಹ ಕಿರುಕುಳಗಳನ್ನೆದುರಿಸಿ

ಸತ್ಯದ ಅನ್ವೇಷಣೆಯಲ್ಲಿ ಸದಾ ತೊಡಗಿದ್ದುದನ್ನು ನೋಡಿದರೆ ಇಂದಿನ ಅಧಿಕಾರವರ್ಗ ಎಸಗುತ್ತಿರುವ ಅಪಚಾರಗಳ ಸ್ವರೂಪ ಸ್ವಲ್ಪಮಟ್ಟಿಗೆ ನಮಗೆ ತಿಳಿದೀತು. ಆ ದೃಷ್ಟಿಯಿಂದ ಮಾನವನ ಆರೋಗ್ಯಭಾಗ್ಯವನ್ನು ಉತ್ತಮಪಡಿಸಲು ಪ್ರಾಚೀನ ಭಾರತದ ಪರಂಪರೆಯಲ್ಲಿ ನಡೆದುಬಂದ ದಾರಿಯನ್ನು ಗುರುತಿಸಬೇಕಾದದ್ದು ನಮ್ಮ ಕರ್ತವ್ಯ.

ಹಿಂದಿನ ಶತಮಾನಗಳ ಆಗುಹೋಗುಗಳನ್ನು ನಿಷ್ಠೆಯಿಂದ ಅಧ್ಯಯನ ಮಾಡಿ ಈ ಕ್ಷೇತ್ರದ ವಿಧಾನಗಳನ್ನು ನಿರೂಪಿಸುವ ಮಹತ್ತರವಾದ ಸಂಶೋಧನಾಕಾರ್ಯವನ್ನು ಖ್ಯಾತ ಮಾರ್ಕ್ಸ್‌ವಾದಿ ದಾರ್ಶನಿಕರಾದ ದೇವೀಪ್ರಸಾದ್ ಚಟ್ಟೋಪಾಧ್ಯಾಯ ಅವರು ತಮ್ಮ 'ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ಸಮಾಜ' ಎಂಬ ಗ್ರಂಥದಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಲೋಕಾಯತ, ಭಾರತೀಯ ನಿರೀಶ್ವರವಾದ, ಇತ್ಯಾದಿ ಕೃತಿಗಳಿಂದ ಸಾರಸ್ವತ ಲೋಕದಲ್ಲಿ ಸುವಿಖ್ಯಾತರಾದ ದೇವೀಪ್ರಸಾದರು 'ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ಸಮಾಜ' ಎಂಬ ಈ ಅಮೋಘಕೃತಿಯಲ್ಲಿ ಹಲವು ಹೊಸ ವಿಷಯಗಳತ್ತ ನಮ್ಮ ಗಮನ ಸೆಳೆದಿದ್ದಾರೆ. ಅದನ್ನಾಧರಿಸಿ ನಾಲ್ಕಾರು ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸುವುದು ಈ ಲೇಖನದ ಉದ್ದೇಶ. ದೀರ್ಘವಾದ ಮತ್ತು ಪಾಂಡಿತ್ಯಪೂರ್ಣವಾದ ಚರ್ಚೆಗಾಗಿ ಓದುಗರು ದೇವೀಪ್ರಸಾದರ ಕೃತಿಯನ್ನೇ ಓದದೆ ನಿರ್ವಾಹವಿಲ್ಲ.

ಪ್ರಾಚೀನ ಭಾರತದ ಶ್ರೇಷ್ಠ ವೈದ್ಯಕೀಯ ತಜ್ಞರು ಪರೀಕ್ಷೆ ಮಾಡದೆ ಏನನ್ನೂ ಒಪ್ಪುತ್ತಿರಲಿಲ್ಲ. ಪ್ರಯೋಗದಿಂದ ಸಿದ್ಧವಾಗದ್ದು ಡಂಭಾಚಾರಿಯ ತಿಳಿವಳಿಕೆಗೆ ಮಾತ್ರ ಸೇರಿದ್ದು; ವೈಜ್ಞಾನಿಕ ಮಾರ್ಗವನ್ನನುಸರಿಸುವ ವೈದ್ಯನ ಹಾದಿಯೇ ಬೇರೆ. ಪ್ರಕೃತಿಯ ಒಂದು ಭಾಗ ಮಾನವನ ಶರೀರ. ಪ್ರಕೃತಿಯ ನಿಯಮಗಳ ಜ್ಞಾನವೆಂದರೆ ಆದರಲ್ಲಿ ಮಾನವ ಶರೀರದ ನಿಯಮಗಳ ಜ್ಞಾನವೂ ಸೇರುತ್ತದೆ. ಔಷಧೋಪಚಾರಗಳ ಮೂಲಕ ಮಾನವ ಶರೀರದ ಸ್ವಾಸ್ಥ್ಯವನ್ನು ರಕ್ಷಿಸಬೇಕಾದರೆ ಮಾನವ ಶರೀರದ ಮತ್ತು ಔಷಧಿಗಳ ಸ್ವರೂಪ ಮತ್ತು ಕ್ರಿಯೆಗಳನ್ನು ತಿಳಿಯಲೇಬೇಕು. ಅಂತಹ ತಿಳಿವಳಿಕೆಗಳನ್ನು ಸಂಗ್ರಹಿಸಿರುವ ಒಂದು ಪ್ರಾಚೀನ ಗ್ರಂಥ 'ಚರಕ ಸಂಹಿತೆ'. ಈ ಗ್ರಂಥವು ಮೊಟ್ಟಮೊದಲಿಗೆ ವೈದ್ಯಕೀಯ ಕ್ಷೇತ್ರದ ಕಾರ್ಯವಿಧಾನವನ್ನು ಕಟ್ಟುನಿಟ್ಟಾಗಿ ಸ್ಪಷ್ಟಗೊಳಿಸುತ್ತಾ ಯಾವ ಅಭಿಪ್ರಾಯವನ್ನೂ ಒಬ್ಬ ವ್ಯಕ್ತಿಯ ಸ್ಥಾನಮಾನಗಳಿಂದ ನಿಷ್ಕರ್ಷೆ ಮಾಡಲು ಸಾಧ್ಯವಿಲ್ಲವೆಂದು ಸಾರಿ ಹೇಳುತ್ತದೆ. ಬೇರಾವುದೋ ಕಾರಣದಿಂದಾಗಿ ಯಾವನೋ ಒಬ್ಬ ಗೌರವಾನ್ವಿತ ವ್ಯಕ್ತಿ ಖ್ಯಾತಪುರುಷನಾಗಿದ್ದಾನೆಂದಿಟ್ಟುಕೊಳ್ಳೋಣ. ಅವನು ಹೇಳಿದ ಮಾತ್ರಕ್ಕೆ ಬೇರೊಂದು ಕ್ಷೇತ್ರದಲ್ಲಿ ಅವನ ಮಾತಿಗೆ ಬೆಲೆ ಬರುವುದಿಲ್ಲ!

ಆದ್ದರಿಂದಲೇ ಗಾಂಧೀಜಿಯಾಗಲಿ ಮೊರಾರ್ಜಿಭಾಯಿಯಾಗಲಿ ರಾಜಕೀಯ ಧುರೀಣ ರಾಗಿದ್ದರೂ ಆ ಕಾರಣದಿಂದ ವೈದ್ಯಕೀಯ ಪಂಡಿತರಾಗಲು ಸಾಧ್ಯವಿಲ್ಲ. ಅಂತೆಯೇ, ಧಾರ್ಮಿಕ ಗುರುಗಳೊಬ್ಬರು ಮಾನವ ಶರೀರದ ನಿಯಮಗಳ ಬಗ್ಗೆ ಅಧಿಕಾರವಾಣಿಯಿಂದ ತೀರ್ಮಾನ ನೀಡಲು ಅನರ್ಹರು. ಹೀಗೆ ಸಾರುವುದರಿಂದ ಚರಕ ಸಂಹಿತೆಯು ವೈದ್ಯಕೀಯ ಕ್ಷೇತ್ರಕ್ಕೆ ವೈಜ್ಞಾನಿಕ ತಳಹದಿಯನ್ನು ಸುಭದ್ರವಾಗಿ ರಚಿಸಿಕೊಡುತ್ತದೆ. ಜಾತಿ-ಧರ್ಮಗಳ ಸೋಂಕಿಲ್ಲದೆ ಬೆಳೆಯಬೇಕಾದ್ದು ವಿಜ್ಞಾನ. ಆದರೆ ಯಾವ ಸಮಾಜದಲ್ಲಿ ಜಾತಿ-ಧರ್ಮಗಳ ಉಪಟಳ ಅತಿಯಾಗಿರುತ್ತದೋ ಆ ಸಮಾಜದಲ್ಲಿ ವಿಜ್ಞಾನದ ಬೆಳವಣಿಗೆಗೆ ಅಸಂಖ್ಯಾತ ತೊಂದರೆಗಳಿರುತ್ತವೆ. ಆ ತೊಂದರೆಗಳಿಂದ ನಿರಾಶರಾಗಿ ವಿಜ್ಞಾನದ ಕೈಬಿಡದೆ ಮುಂದುವರಿಯಬೇಕಾದರೆ ವಿಜ್ಞಾನಕ್ಕೆ ನಿಷ್ಠೆ ಅಪಾರವಾಗಿರಬೇಕು. ಮತ್ತು ಸಮರದಲ್ಲಿ ಭಾಗಿಯಾಗಿ ವಿಜ್ಞಾನವನ್ನು ಸ್ಥಿರಪಡಿಸಲು ಧೈರ್ಯವಿರಬೇಕು. ಹದಿನಾರನೆಯ ಶತಮಾನದಲ್ಲಿ

ಇಟಲಿಯಲ್ಲಿ ಕ್ಯಾಥೊಲಿಕ್ ಕ್ರೈಸ್ತ ಸಂಪ್ರದಾಯದ ಎಣೆಯಿಲ್ಲದ ಶಕ್ತಿಯನ್ನೆದುರಿಸಿದ ಗೆಲಿಲಿಯೋವಿನಂತಹ ವಿಜ್ಞಾನಿಯ ಜೀವನ ಇದಕ್ಕೊಂದು ನಿದರ್ಶನ. ಗೆಲಿಲಿಯೋ ಇನ್ನೂ ಪ್ರಖ್ಯಾತನಾಗಿಲ್ಲದಿದ್ದಾಗ ಇಟಲಿಯಲ್ಲಿ ಗಿಯಾರ್ದೊನೋ ಬ್ರೂನೋ ಎಂಬ ಖಗೋಳಶಾಸ್ತ್ರಜ್ಞನೊಬ್ಬನಿದ್ದ. ಅವನೇನೂ ಕ್ರೈಸ್ತ ಧರ್ಮದ ಶತ್ರುವಾಗಿರಲಿಲ್ಲ. ಚರ್ಚಿನ ಬಗ್ಗೆ ಅವನಲ್ಲಿ ಅಪಾರ ಗೌರವ ಮತ್ತು ವಿಶ್ವಾಸಗಳಿದ್ದವು. ಆದರೂ ತನ್ನ ಅಧ್ಯಯನದಿಂದ ಸೂಚಿತವಾದ ಫಲಿತಾಂಶವನ್ನು ಅವನು ಪ್ರಚಾರಮಾಡಿದ. ಕ್ರೈಸ್ತಮತ ಅದನ್ನು ಸ್ವೀಕರಿಸಲು ತಯಾರಿರಲಿಲ್ಲ. ಅವನನ್ನು ಧರ್ಮದ ಮತ್ತು ಸಮಾಜದ ಶತ್ರುವೆಂದು ತೆಗಳಿ ಜೀವಂತ ಸುಡುವಷ್ಟು ನೀಚಮಟ್ಟಕ್ಕೆ ಹೋಗಲು ಕೂಡ ಹೇಸಲಿಲ್ಲ ಕ್ಯಾಥೊಲಿಕ್ ಚರ್ಚ್. ಆತನನ್ನು ಚಿತೆಗೇರಿಸಿ ಸುಟ್ಟರು. ಹಾಗೆ ಆತ ಚಿತೆಯೇರಿ ಸುಡುತ್ತಿದ್ದಾಗ ಒಬ್ಬ ಪಾದ್ರಿ ಕ್ರೈಸ್ತ ಧರ್ಮದ ಹೆಗ್ಗುರುತಾದ ಶಿಲುಬೆಯನ್ನು ಆತನತ್ತ ನೀಡಿ ಅದನ್ನು ಚುಂಬಿಸಿಯಾದರೂ ಪಾಪವನ್ನು ನೀಗಿಕೊಳ್ಳಬೇಕೆಂದು ಸಲಹೆ ನೀಡಿದನಂತೆ. ಬ್ರೂನೋವಿಗೆ ಅಂತಹ ಪ್ರಾಯಶ್ಚಿತ್ತದ ಅಗತ್ಯ ಕಾಣಲಿಲ್ಲ. ಶಿಲುಬೆಯಿಂದ ತನ್ನ ಮುಖವನ್ನು ತಿರುಗಿಸಿ ಸುಖವಾಗಿ ಸುಟ್ಟು ಬೂದಿಯಾದನಂತೆ ಅವನು. ವಿಜ್ಞಾನ ಪೂರ್ಣ ಸ್ವರೂಪದಲ್ಲಿ ಆ ಕ್ಷಣದಲ್ಲಿ ಉದ್ಭವವಾಯಿತೆಂದರೆ ತಪ್ಪಲ್ಲ. ಇಂತಹ ನಿಷ್ಠುರವಾದ ಮಾರ್ಗ ವಿಜ್ಞಾನದ ಮಾರ್ಗ.

ಮಧ್ಯಕಾಲೀನ ಯೂರೋಪಿನಲ್ಲಿ ಬ್ರೂನೋ, ಗೆಲಿಲಿಯೋಗಳಂತಹ ವಿಜ್ಞಾನಿಗಳ ಸತ್ವಪರೀಕ್ಷೆಗೆ ಬಹಳ ಮುಂಚೆಯೇ ಪ್ರಾಚೀನ ಭಾರತ ತನ್ನ ವಿಜ್ಞಾನಿಗಳಿಗೆ ಕಠಿಣವಾದ ಪರೀಕ್ಷೆಗಳನ್ನು ಒಡ್ಡಿತ್ತು. ಆ ಪರೀಕ್ಷೆಗಳಲ್ಲಿ ಅಶಕ್ತತೆಯನ್ನು ತೋರಿ ಸೋಲನ್ನೊಪ್ಪದೆ ವಿಜ್ಞಾನಕ್ಕಾಗಿ ಶ್ರಮಿಸಿದವರಲ್ಲಿ ಚರಕ ಸಂಹಿತೆಯಂತಹ ಕೃತಿಗಳ ಕರ್ತೃಗಳೂ ಸೇರಿದ್ದಾರೆ. ಜನರನ್ನು ಜಾತಿಗಳ ಆಧಾರದ ಮೇಲೆ ಉಚ್ಚ-ನೀಚ ಎಂದು ವಿಂಗಡಿಸಿ, ಎಲ್ಲ ಅನುಕೂಲಗಳನ್ನೂ 'ಉಚ್ಚ'ರಿಗೆ ಮೀಸಲಾಗಿರಿಸಿ, 'ನೀಚ'ರನ್ನು ಕನಿಷ್ಠರನ್ನಾಗಿ ಕಂಡು ಅವರ ದುಡಿಮೆಯಿಂದ ಲಾಭವನ್ನು 'ಉಚ್ಚ' ವರ್ಗದವರು ಹೊಂದುತ್ತಿದ್ದಾಗ, ಸಮಾಜದ ಅಂತಹ ವಿಭಜನೆಗೆ ಮಾರುಹೋಗದೆ ಮತ್ತು ಒಪ್ಪದೆ ಎಲ್ಲರನ್ನೂ ಸಮತಾಭಾವದಿಂದ ಕಾಣಲು ಕೆಚ್ಚೆದೆ ಬೇಕಾಗಿತ್ತು. ಅಂತಹ ಕೆಚ್ಚೆದೆಯನ್ನು ಕಾರ್ಯರೂಪದಲ್ಲಿ ತೋರಿದವರು ವೈದ್ಯಕೀಯ ಕ್ಷೇತ್ರದಲ್ಲಿದ್ದ ನಿಷ್ಣಾತ ವಿಜ್ಞಾನಿಗಳು. ಇದು ಸಾಮಾನ್ಯವಾದ ವಿಷಯವಲ್ಲವೆಂಬುದನ್ನು ತಿಳಿಯ ಬೇಕಾದರೆ ಅಂದು ಪ್ರತಿಷ್ಠಿತ ಸ್ಥಾನದಲ್ಲಿದ್ದ ಧರ್ಮಶಾಸ್ತ್ರಕಾರರ ಅಧಿಕಾರಶಕ್ತಿಯ ಸ್ವರೂಪವನ್ನು ಅರಿತುಕೊಳ್ಳಬೇಕು. ಅಂದಿನ ಪದ್ಧತಿಯನ್ನು ನಿಯಮನಗೊಳಿಸಿ ಅದರಿಂದ ಹೆಚ್ಚಿನ ಸೌಲಭ್ಯ ಮತ್ತು ಸಾಮಾಜಿಕ ಅಂತಸ್ತನ್ನು ಅನುಭವಿಸುತ್ತಿದ್ದವರು ಧರ್ಮಶಾಸ್ತ್ರಕಾರರು. ಅವರ ವಕ್ರದೃಷ್ಟಿ ಯಾರ ಮೇಲಾದರೂ ಬಿದ್ದಿತೆಂದರೆ ಅದರಿಂದ ಘೋರ ಪರಿಣಾಮಗಳು ಅನಿವಾರ್ಯ ವಾಗುವಂತಹ ಪರಿಸ್ಥಿತಿ ಅಂದಿನದು.

ಇದಕ್ಕೊಂದು ನಿದರ್ಶನವನ್ನು ನೀಡಬಹುದು : ನಮ್ಮ ಅತ್ಯಂತ ಪ್ರಾಚೀನವಾದ ಸಾಹಿತ್ಯ ಋಗ್ವೇದ. ಸುಮಾರು ಐದುಸಾವಿರ ವರ್ಷಗಳ ಹಿಂದಿನ ಸಮಾಜದ ಆಗುಹೋಗುಗಳು, ಆಗಿನ ತಾತ್ವಿಕಚಿಂತನೆ, ಸಮಾಜರಚನೆ, ಇತ್ಯಾದಿಗಳಿಗೆ ಈ ಗ್ರಂಥ ಮೂಲವಾದ ಆಕರ. ಋಗ್ವೇದದಲ್ಲಿ ಅನೇಕ ದೇವತೆಗಳನ್ನು ಸ್ತುತಿಸಲಾಗಿದೆ ಮತ್ತು ಅವರಿಂದ ಒದಗಬೇಕಾದ ಅನುಕೂಲಗಳನ್ನು ಪದೇ ಪದೇ ಸ್ಮರಿಸಲಾಗಿದೆ. ಅಂತಹ ದೇವತೆಗಳಲ್ಲಿ ಅಶ್ವಿನಿ ದೇವತೆಗಳೆಂಬುವರು ಒಂದು ಜೋಡಿ. ಅವರಿಗೆ ನಾಸತ್ಯರು ಎಂಬ ಹೆಸರಿದೆ; ಅಂದರೆ ಸತ್ಯಶೀಲರು ಎಂದವರನ್ನು ಗುರುತಿಸಲಾಗಿದೆ. ಋಗ್ವೇದದ ದೇವತೆಗಳ ಪೈಕಿ ಅಮೋಘವಾದ

ವೈದ್ಯರು ಅವರು ; ಅವರ ಸಚ್ಚಾರಿತ್ರ್ಯ ಅಪಾರವಾದದ್ದು. ಈ ದೇವವೈದ್ಯರಿಗೆ ಮುಂದಿನಕಾಲದ ಯಜುರ್ವೇದದಲ್ಲಿ ನೀಡಲಾಗಿರುವ ಸ್ಥಾನ ಮಾತ್ರ ಬಹಳ ಕಳಪೆಯಾದದ್ದು. ದೇವತೆಗಳಿಗೆ ಸಲ್ಲುವ ಹವಿಸ್ಸಿನಲ್ಲಿ ಇವರಿಗೆ ಯಾವ ಭಾಗವನ್ನೂ ನೀಡಲಾಗದೆಂದು ಇನ್ನೂ ಮುಂದಿನ ಕಾಲದ ಶತಪಥ ಬ್ರಾಹ್ಮಣ ಎಂಬ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಅವರು ಪ್ರಾಯಶ್ಚಿತ್ತ ಮಾಡಿಕೊಂಡರೆ ಮಾತ್ರ ಹವಿರ್ಭಾಗ ನೀಡಲಾಗುತ್ತದಂತೆ ! ಯಾವ ಅಕಾರ್ಯಕ್ಕಾಗಿ ಇವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ? ವೈದ್ಯರಾಗಿ ತಮ್ಮನ್ನು ಕಲುಷಿತಗೊಳಿಸಿಕೊಂಡುದಕ್ಕಾಗಿ ಈ ಪ್ರಾಯಶ್ಚಿತ್ತ! ಋಗ್ವೇದದಲ್ಲಿ ಹೊಗಳಲಾಗಿರುವ ದೇವವೈದ್ಯರು ಮುಂದಿನ ಕಾಲದಲ್ಲಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುವಷ್ಟರ ಮಟ್ಟಿಗೆ ಕಲುಷಿತರು!! ಅಶ್ವಿನಿ ದೇವತೆಗಳು ದೇವತೆಗಳ ಗಣದಿಂದ ಉಚ್ಚಾಟಿತರು !

ಇದರರ್ಥವೇನು ? ಅಶ್ವಿನಿ ದೇವತೆಗಳ ನಿಂದೆಯು ಅವರ ವೈದ್ಯಕೀಯದ ನಿಂದೆ, ವೈದ್ಯರ ನಿಂದೆ. ವೈದ್ಯರು ಅಪವಿತ್ರರು. ಏಕೆಂದರೆ, ಇತರರಂತೆ ಅವರು ಸಮಾಜದ ವ್ಯಕ್ತಿಗಳಲ್ಲಿ ಭೇದಭಾವವನ್ನು ತೋರುವುದಿಲ್ಲ ಮತ್ತು ಸ್ವಂತ ತಮ್ಮ ಕೈಯಿಂದಲೇ ಕೆಲಸ ಮಾಡುತ್ತಾರೆ. ಋಗ್ವೇದದ ಕಾಲದಲ್ಲಿ ಸಮಾಜದ ವ್ಯಕ್ತಿಗಳೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ದುಡಿಯುವವರೇ ಆಗಿದ್ದರು. ಸಮಾಜದಲ್ಲಿನ್ನೂ ಏರುಪೇರುಗಳು ಉಂಟಾಗಿರಲಿಲ್ಲ. ಉತ್ಪಾದನಾಶಕ್ತಿ ಮತ್ತು ವಿಧಾನಗಳು ಅಭಿವೃದ್ಧಿ ಹೊಂದಿದಂತೆ ದೈಹಿಕ ಮತ್ತು ಮಾನಸಿಕ ದುಡಿಮೆಗಳ ನಡುವಣ ಅಂತರವೂ ಹೆಚ್ಚುತ್ತಾ ಬಂತು. ಮಾನಸಿಕ ಅಥವಾ ಬೌದ್ಧಿಕ ದುಡಿಮೆ ಶ್ರೇಷ್ಠವಾದುದೆಂದೂ ದೈಹಿಕ ಶ್ರಮವು ಕೀಳುಮಟ್ಟದ್ದೆಂದೂ ಪರಿಗಣಿಸಲಾಯಿತು. ಅದರಂತೆ ದೈಹಿಕಶ್ರಮದಿಂದ ಜೀವಿಸುವವರು ಸಮಾಜದಲ್ಲಿ ಕನಿಷ್ಠಸ್ಥಾನಕ್ಕೆ ನೂಕಲ್ಪಟ್ಟರು. ವೈದ್ಯರು ಇಂತಹ ಬದಲಾವಣೆಯ ಫಲವಾಗಿ ನೀಚಸ್ಥಾನದವರೆಂದು ಗಣನೆಗೆ ಬಂದರು. ಆದ್ದರಿಂದಲೇ ಅಶ್ವಿನಿದೇವತೆಗಳು ದೇವತೆಗಳಲ್ಲಿ ಕನಿಷ್ಠರು, ಹವಿರ್ಭಾಗಕ್ಕೆ ಅನರ್ಹರು, ಮತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾದವರು. ಇನ್ನೂ ಮುಂದಿನ ಕಾಲದಲ್ಲಿ ರಚಿತವಾದ ಉಪನಿಷತ್ತುಗಳಲ್ಲಿ ಅಶ್ವಿನಿದೇವತೆಗಳೂ ವೈದ್ಯರೂ ಹೇಳಹೆಸರಿಲ್ಲದೆ ಮಾಯವಾಗಿದ್ದಾರೆ. ಏಕೆಂದರೆ, ಉಪನಿಷತ್ತುಗಳು ಬೋಧಿಸುವುದು ಸರ್ವಶ್ರೇಷ್ಠವಾದ 'ಪರಾ' ವಿದ್ಯೆಯನ್ನು. ವೈದ್ಯಕೀಯ ಮುಂತಾದುವೆಲ್ಲಾ ಅತಿಸಾಮಾನ್ಯವಾದ 'ಅಪರಾ' ವಿದ್ಯೆಗಳು ಮಾತ್ರ. ಹೀಗೆ ಪ್ರಾರಂಭವಾದ ವೈದ್ಯರ ಮೂದಲಿಕೆ ಮಹಾಭಾರತದಲ್ಲಿ ಇನ್ನೂ ಹೆಚ್ಚಿನ ರೂಪವನ್ನು ತಾಳಿದೆ. ಇದಕ್ಕೆಲ್ಲಾ ಒಂದೇ ಕಾರಣ: ಸಮಾಜದಲ್ಲಿ ಪ್ರತಿಷ್ಠಿತರ ಸ್ಥಾನ ಮತ್ತು ಪ್ರಭಾವಗಳನ್ನು ಉಳಿಸಿಕೊಳ್ಳುವುದು ಹಾಗೂ ಹೆಚ್ಚಿಸಿಕೊಳ್ಳುವುದು.

ಉಪನಿಷತ್ತುಗಳ ಕಾಲದ ನಂತರ ಬಂದದ್ದು ಧರ್ಮಶಾಸ್ತ್ರ, ಆಗ್ಗೆ ಸಮಾಜದಲ್ಲಿ ವರ್ಣವಿಭಜನೆ ಸಂಪೂರ್ಣವಾಗಿತ್ತು. ಯಾರು ತಮ್ಮನ್ನು ತಾವು ಶ್ರೇಷ್ಠರೆಂದು ಬಗೆದು ಶ್ರಮವಿಲ್ಲದ ಸುಖಜೀವನ ನಡೆಸುತ್ತಿದ್ದರೋ ಅವರೇ ಧರ್ಮಶಾಸ್ತ್ರಗಳನ್ನು ರಚಿಸಿದವರು. ಆದ್ದರಿಂದ ಆ ಗ್ರಂಥಗಳಲ್ಲಿ ತಮ್ಮ ಮಾನ್ಯತೆಯನ್ನು ಸ್ಥಿರಪಡಿಸಿಕೊಳ್ಳಲು ಬೇಕಾದಂತಹ ನಿಯಮಗಳನ್ನು ರೂಪಿಸಿ ತಾವು ಇನ್ನೂ ಹೆಚ್ಚು ಬಲಿಷ್ಠರಾದರು. ಇವರನ್ನು ನಾವು ಪುರೋಹಿತವರ್ಗ ವೆಂದು ಬಣ್ಣಿಸಬಹುದು. ಯಾವ ವ್ಯವಸ್ಥೆಯು ತಮಗೆ ಅಧಿಕಾರ ಮತ್ತು ಸವಲತ್ತುಗಳನ್ನು ವಿಶೇಷವಾಗಿ ನೀಡಿತ್ತೋ ಆ ವ್ಯವಸ್ಥೆಯನ್ನೇ ಪುಷ್ಟೀಕರಿಸುವುದು ಅವರಿಗೆ ಸಹಜವಾಗಿತ್ತು. – ಬಿರ್ಲಾ, ಪಾಲ್ಖಿವಾಲಾ, ಇತ್ಯಾದಿಗಳು ಇಂದಿನ ನಮ್ಮ ಸಂವಿಧಾನದಲ್ಲಿರುವ ಆಸ್ತಿಯ ಹಕ್ಕನ್ನು ಸರ್ವಶ್ರೇಷ್ಠವಾದ ಮೂಲಭೂತವಾದ ಹಕ್ಕೆಂದು ಸಾರಿ ಶ್ರೇಷ್ಠ ನ್ಯಾಯಾಲಯದಲ್ಲಿ ಅದನ್ನು

ಸ್ಥಿರೀಕರಿಸಿಕೊಳ್ಳುವುದಿಲ್ಲವೇ, ಹಾಗೆ. ಇದರಿಂದ ಪುರೋಹಿತ ವರ್ಗಕ್ಕೆ ದೊರಕಿದ ಸೌಲಭ್ಯ ಇಡೀ ಆಳುವ ವರ್ಗಕ್ಕೂ ದೊರಕುತ್ತಿದ್ದುದರಿಂದ ಆಳುವ ವರ್ಗವು ಪುರೋಹಿತವರ್ಗಕ್ಕೆ ಪ್ರಾಶಸ್ತ್ಯ ನೀಡಿದ್ದರಲ್ಲಿ ಆಶ್ಚರ್ಯವಿಲ್ಲ. ಪುರೋಗಾಮಿ ದೃಷ್ಟಿಯನ್ನು ವಿರೋಧಿಸುವ ಇಂದಿನ ನಮ್ಮ ಆಳುವ ವರ್ಗದ ಸಹಚರರೂ, ಭಂಟರೂ ಆದ ಕೆಲವು ಬುದ್ಧಿಜೀವಿಗಳಿಗೆ ಸಮಾನರಾದವರು ಹಿಂದಿನ ಪುರೋಹಿತವರ್ಗ ಎಂದಿಷ್ಟೇ ಇದರರ್ಥ.

ಈ ಪುರೋಹಿತವರ್ಗದ (ಅ)ನೈತಿಕತೆ ಯಾವ ಮಟ್ಟದ್ದೆಂದು ನಿರೂಪಿಸಲು ಒಂದು ಉದಾಹರಣೆ ಸಾಕು : ಯಜ್ಞಯಾಗಾದಿ ಕರ್ಮಗಳನ್ನು ನಡೆಸುವ ವಿಧಾನವನ್ನು ವಿವರಿಸುವ ಗ್ರಂಥ ಸಮೂಹವೊಂದಿದೆ ; ಅವಕ್ಕೆ ಬ್ರಾಹ್ಮಣ ಗ್ರಂಥಗಳು ಎಂಬ ಹೆಸರಿದೆ. ಅವುಗಳಲ್ಲಿ ಐತರೇಯ ಬ್ರಾಹ್ಮಣ ಎಂಬುದೊಂದು ಗ್ರಂಥ. ಆ ಗ್ರಂಥದ ಮೂರನೆಯ ಅಧ್ಯಾಯದಲ್ಲಿರುವ ಒಂದು ಸಂದರ್ಭ ಹೀಗಿದೆ : ಯಾವುದೋ ಒಂದು ಯಾಗ ; ಅದನ್ನು ಸಂಯೋಜಿಸುವವನು ಯಜಮಾನ. ಅವನಿಗೆ ಅನೇಕ ಋತ್ವಿಕ್ಕುಗಳ ಸಹಾಯ ಬೇಕು. ಅವರಿಗೆ ಸೂಕ್ತವಾದ ಸಂಭಾವನೆ ನೀಡಬೇಕಾದ್ದು ಅವನ ಕರ್ತವ್ಯ, ಧರ್ಮ. ಯಜ್ಞ ಮಾಡಿಸುವ ಋತ್ವಿಕ್ಕು ಅನೇಕ ಮಂತ್ರಗಳನ್ನು ಉಚ್ಚರಿಸಬೇಕು ; ಮತ್ತು ಹಾಗೆ ಉಚ್ಚರಿಸುವಾಗ ಕೆಲವು ಹವನಕ್ರಿಯೆಗಳು ನಡೆಯಬೇಕು. ಎಲ್ಲ ಮಂತ್ರಗಳನ್ನೂ ಅವನು ಜೋರಾಗಿ ಪಠಿಸುವುದಿಲ್ಲ; ಕೆಲವನ್ನು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳಬೇಕಾಗಿರುತ್ತದೆ. ಯಜಮಾನನೇನಾದರೂ ಋತ್ವಿಕ್ಕನನ್ನು ಸಂತೃಪ್ತಿಗೊಳಿಸದಿದ್ದರೆ ಹೀಗೆ ಮನಸ್ಸಿನಲ್ಲಿ ಹೇಳಿಕೊಳ್ಳಬೇಕಾದ ಮಂತ್ರಗಳನ್ನು ಉಚ್ಚರಿಸದೆ ಯಜ್ಞವನ್ನು ಹಾಳುಮಾಡಿ ಯಜಮಾನನ ಮನೆಗೆ ನೀರು ತಿದ್ದಬಹುದು ! ಇದು ಐತರೇಯ ಬ್ರಾಹ್ಮಣದಲ್ಲಿ ಬರುವ ಸ್ವಾರಸ್ಯ. ಪುರೋಹಿತವರ್ಗದ ಶಕ್ತಿ ಮತ್ತು ಹಿಡಿತ ಇದರಿಂದ ಸ್ಪಷ್ಟವಾಗುತ್ತದೆ. ಧರ್ಮಶಾಸ್ತ್ರಕಾರರು ಈ ಬಣದಿಂದ ಬೆಳೆದುಬಂದಿದ್ದವರು. ಇಂತಹವರ ಕ್ರೂರದೃಷ್ಟಿಗೆ ವೈದ್ಯರು ಬೀಳದಿರುವುದಾದರೂ ಹೇಗೆ ?

ನಿಷ್ಠಾವಂತನಾದ ವೈದ್ಯನಿಗೆ ರೋಗಿಯ ಜಾತಿ ಮತ್ತು ಸಾಮಾಜಿಕ ಅಂತಸ್ತು ಮುಖ್ಯವಲ್ಲ; ತನ್ನ ಕೈಲಾದಷ್ಟು ಮಟ್ಟಿಗೂ ರೋಗಿಯ ಸೇವೆ ಮಾಡುವುದು ಅವನ ಧರ್ಮ. ಇದರಲ್ಲಿ ಅಚಲವಾದ ನಂಬಿಕೆಯಿಲ್ಲದವನನ್ನು ವೈದ್ಯನಾಗಲು ಅನರ್ಹನೆಂದು ಚರಕ ಸಂಹಿತೆ ಪದೇ ಪದೇ ಒತ್ತಿ ಹೇಳುತ್ತದೆ. ವಿವಿಧ ಜಾತಿಗಳ ಜನಗಳ ನಡುವೆ ಸಂಪರ್ಕ ಹೆಚ್ಚಿದರೆ ವರ್ಣಸಂಕರವಾದೀತೆಂಬ ಅಂಜಿಕೆ ಧರ್ಮಶಾಸ್ತ್ರಕಾರರಿಗೆ. – ವರ್ಣವಿಭಜನೆ ಅಸ್ವಾಭಾವಿಕ ಮತ್ತು ಅರ್ಥರಹಿತ ಎಂಬುದು ಚರಕ ಸಂಹಿತೆಯ ತೀರ್ಮಾನ. ಇವೆರಡು ದೃಷ್ಟಿಗಳ ನಡುವೆ ಘರ್ಷಣೆ ಅನಿವಾರ್ಯವೆಂದಂತಾಯಿತು. ತಮ್ಮ ಸ್ಥಾನಮಾನಗಳನ್ನು ರಕ್ಷಿಸಿಕೊಳ್ಳಲು ಶಕ್ತರಾಗಿದ್ದ ಧರ್ಮಶಾಸ್ತ್ರಕಾರರು ವೈದ್ಯಕೀಯ ಕ್ಷೇತ್ರದಲ್ಲಿದ್ದವರನ್ನು ಮೂದಲಿಸಿ, ಖಂಡಿಸಿ, ಸಮಾಜಶತ್ರುಗಳೆಂದು ಅವರ ವಿರುದ್ಧ ವಿಷಕಾರಿದರು. ವೈಜ್ಞಾನಿಕ ಮಾರ್ಗವನ್ನನುಸರಿಸಿ, ವೈದ್ಯಕೀಯ ಜ್ಞಾನವನ್ನು ವಿಸ್ತರಿಸಿ, ಮಾನವನ ಸುಖಕ್ಕಾಗಿ ಹಲುಬುತ್ತಿದ್ದ ಭಾರತದ ಪ್ರಾಚೀನ ವೈದ್ಯರಿಗೆ ಇದೊಂದು ಮಹಾನ್ ಆಘಾತವನ್ನುಂಟುಮಾಡಿತು. ಒಬ್ಬ ವೈದ್ಯ ವರ್ಣ ವಿಭಜನೆಯನ್ನು ತಿರಸ್ಕರಿಸುವುದು ಮಾತ್ರವಲ್ಲದೆ ಇನ್ನೂ ಒಂದು ರೀತಿಯಲ್ಲಿ ಅಂದಿನ ಆಳುವ ವರ್ಗವನ್ನೆದುರಿಸಬೇಕಾಗಿತ್ತು.

ಆಳುವ ವರ್ಗವು ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲು ತಾತ್ವಿಕ ತಳಹದಿಯನ್ನೊಂದನ್ನು ಸದಾ ಬಲಪಡಿಸಿಕೊಳ್ಳುತ್ತದೆ. ಬೌದ್ಧಿಕ ಶ್ರಮದ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದರ ಜೊತೆಗೆ ಆಳುವ ವರ್ಗವು ಹಿಂದೆ ಇನ್ನೊಂದು ತಾತ್ವಿಕ ಸಿದ್ಧಾಂತವನ್ನು ಅವಲಂಬಿಸಿತ್ತು. (ಇಂದಿನ

ಆಳುವ ವರ್ಗವೂ ಇದಕ್ಕೆ ಸಂಪೂರ್ಣವಾಗಿ ಹೊರತಲ್ಲ.) – ಅಂತಹ ಸಿದ್ಧಾಂತಗಳಲ್ಲಿ 'ಪೂರ್ವಕರ್ಮಫಲ' ಎಂಬುದೊಂದು. ಹಿಂದಿನ ಜನ್ಮದ ಕೃತಿಗಳಿಂದಾಗಿ ಈಗಿನ ಜನ್ಮದಲ್ಲಿ ವ್ಯಕ್ತಿಯೊಬ್ಬ ಬಡವನಾಗಿರಬಹುದು ಅಥವಾ ಬಲ್ಲಿದನಾಗಿರಬಹುದು ; ಅಂತೆಯೇ ಅವನು ಆರೋಗ್ಯವಂತನಿರಬಹುದು ಅಥವಾ ರೋಗಿ ಇರಬಹುದು. ರೋಗಕ್ಕೆ ಶರೀರದ ಕ್ರಿಯೆಗಳು, ಆಹಾರ, ಇತ್ಯಾದಿಗಳು ಕಾರಣವಲ್ಲ, ಪೂರ್ವಜನ್ಮಕೃತವಾದ ಪಾಪವೇ ಕಾರಣ! ಚರಕ ಸಂಹಿತೆಯು ಇಂತಹ ಮೌಢ್ಯವನ್ನು ತೊಡೆದುಹಾಕಲು ಹಿಂಜರಿಯುವುದಿಲ್ಲ. ನಿಷ್ಠಾವಂತ ವೈದ್ಯನು ರೋಗಿಯ ಸೇವೆ ಮಾಡುವಾಗ ಪೂರ್ವಜನ್ಮದ ಕೃತಿಗಳನ್ನು ನೆನೆಯುವುದಿಲ್ಲ; ರೋಗಿಯನ್ನು ಪರೀಕ್ಷಿಸಿ ತನ್ನ ಜ್ಞಾನದ ಸಹಾಯದಿಂದ ಅವನನ್ನು ಗುಣಪಡಿಸಲು ಯತ್ನಿಸುತ್ತಾನೆ. ಹೀಗೆ 'ಕರ್ಮಸಿದ್ಧಾಂತ'ವನ್ನೇ ತಳ್ಳಿಹಾಕಿದರೆ ಉಚ್ಚ ಮತ್ತು ನೀಚ ಸ್ಥಾನಗಳ ಕಲ್ಪನೆಗೇ ಕುತ್ತು ಬರುತ್ತದೆ ; ಸಮಾಜದ ವ್ಯವಸ್ಥೆಯನ್ನೇ ಪ್ರಶ್ನಿಸಿದಂತಾಗುತ್ತದೆ. ವೈದ್ಯರು ಹಾಗೆ ಮಾಡಿದ್ದುದರಿಂದಲೇ ಶಾಸ್ತ್ರಕಾರರು ಅವರನ್ನು ಮೂದಲಿಸಿದ್ದು, ಅಶ್ವಿನಿದೇವತೆಗಳಿಗೆ ಪ್ರಾಯಶ್ಚಿತ್ತವನ್ನು ವಿಧಿಸಿದ್ದು!

ಪ್ರಕೃತಿಯ ನಿಯಮಗಳಿಗೆ ಹೆಚ್ಚು ಮಹತ್ವವನ್ನೀಯುವ ವೈದ್ಯ ಕ್ರಮೇಣ ಭೌತವಾದವನ್ನು ಅಂಗೀಕರಿಸುತ್ತಾನೆ. ಭೌತವಾದಕ್ಕೆ ಮನ್ನಣೆ ದೊರಕಿದರೆ ವ್ಯಕ್ತಿನಿಷ್ಠ ಭಾವನಾವಾದದ ಗತಿಯೇನು? ಆದ್ದರಿಂದ ವೈದ್ಯರ ದಾರಿಯಲ್ಲಿದ್ದ ತೊಡರುಗಳು ಪ್ರಾಚೀನ ಭಾರತದಲ್ಲಿದ್ದ ಸಮಾಜ ವ್ಯವಸ್ಥೆಯಲ್ಲಿ ಸಹಜವಾಗಿಯೇ ಇದ್ದುವು. ಆದರೆ ವೈಜ್ಞಾನಿಕ ಮಾರ್ಗವನ್ನನುಸರಿಸಲು ಸಿದ್ಧರಿದ್ದ ವೈದ್ಯರು ಇದನ್ನೆದುರಿಸಿದ್ದು ಹೇಗೆ? ಈ ಪ್ರಶ್ನೆಗೆ ಉತ್ತರ ಕೊಡುವಾಗ ನಮ್ಮ ಇಂದಿನ ಸಾಯಿಬಾಬಾ-ವಿಜ್ಞಾನಿಗಳನ್ನು ಮರೆಯುವಂತಿಲ್ಲ. ಬಾಬಾನ ನಿಲುವಂಗಿಯ ಮರೆಯಲ್ಲಿ ನಿಂತು ವಿಜ್ಞಾನದ ಹಾದರದಲ್ಲಿ ತೊಡಗುವಂತಹ ಇಂದಿನ ಕೆಲವು ವಿಜ್ಞಾನಿಗಳು ಪ್ರಾಚೀನ ಭಾರತದ ಈ ವೈದ್ಯರ ಮುಂದೆ ನಾಚಿ ತಲೆಬಾಗಬೇಕು. ಇಂದಿನ ವಿಜ್ಞಾನಿಯು ವೈಜ್ಞಾನಿಕ ಮಾರ್ಗವನ್ನನುಸರಿಸಲು ನಿರ್ಧರಿಸಿದರೆ ಯಾವ ಧರ್ಮಶಾಸ್ತ್ರಕಾರನೂ ಕಂಟಕವನ್ನು ಅಷ್ಟಾಗಿ ಉಂಟುಮಾಡಲಾರ. ಆದರೂ ಬಾಬಾಗೆ ಶರಣಾಗುವ ಇಂದಿನ ಕೆಲವು ಕೃತ್ರಿಮ ವಿಜ್ಞಾನಿಗಳಿಗೆ ನಾವೇನೆನ್ನೋಣ? ಇದಕ್ಕೆ ಪ್ರತಿಯಾಗಿ, ಎಷ್ಟೇ ಆತಂಕಕಾರಿ ಪರಿಣಾಮಗಳಿದ್ದಾಗ್ಯೂ ತಮ್ಮ ವೈಜ್ಞಾನಿಕ ನಿಲುವನ್ನು ಬಿಡದೆ ವಿಜ್ಞಾನಕ್ಕಾಗಿ, ಮಾನವನ ಪುರೋಭಿವೃದ್ಧಿಗಾಗಿ ಮತ್ತು ಮಾನವೀಯತೆಗಾಗಿ ದುಡಿದ ಪ್ರಾಚೀನ ವೈದ್ಯರು ನಿಜಕ್ಕೂ ಅಭಿನಂದನಾರ್ಹರು, ವಂದ್ಯರು. ಅದಂತಿರಲಿ, ಅವರು ತಮ್ಮ ಮಾರ್ಗದಲ್ಲಿದ್ದ ಅಡ್ಡಿಯನ್ನು ಎದುರಿಸಿದ್ದು, ಪರಿಹರಿಸಿಕೊಂಡದ್ದು ಹೇಗೆಂಬುದನ್ನು ನೋಡೋಣ.

ಧರ್ಮಶಾಸ್ತ್ರಕಾರರು ಮತ್ತು ಆಳುವ ವರ್ಗದ ಸಿದ್ಧಾಂತಗಳು ಯಾವ ತತ್ವಗಳನ್ನು ಪುರಸ್ಕರಿಸಿದ್ದರೋ ಅಂತಹ ತತ್ವಗಳ ಅಂಶಗಳನ್ನು ಅಲ್ಲಲ್ಲಿ ತಮ್ಮ ಗ್ರಂಥಗಳಲ್ಲಿ ಬಳಸಿಕೊಂಡು, ಮೂಲಭೂತವಾಗಿ ಆ ತತ್ವಗಳಿಗೆ ತಾವು ವಿರೋಧಿಗಳಲ್ಲವೆಂದು ತೋರ್ಪಡುವಂತೆ ಮಾಡುವುದು ಅವರ ಮೊದಲನೆಯ ಉಪಾಯ ತಂತ್ರ. ಬೇರೆಡೆಗಳಲ್ಲಿ ಅದೇ ಅಂಶವನ್ನು ತೆಗಳಿ ಅದಕ್ಕೆ ತಾರ್ಕಿಕವಾದ ಕಾರಣಗಳನ್ನು ಕೊಡುತ್ತಾರೆ. ಚರಕ ಸಂಹಿತೆಯಲ್ಲಿ ಇಂತಹ ಅನೇಕ ಪ್ರಸಂಗಗಳುಂಟು. ಉದಾಹರಣೆಗೆ, ವೈದ್ಯನಿಗೆ ಶರೀರದ ಸ್ವಾಸ್ಥ್ಯವೇ ಮುಖ್ಯ ಧ್ಯೇಯ. ಆತ್ಮಸಾಕ್ಷಾತ್ಕಾರದ ಬಗ್ಗೆ ಅವನಿಗೆ ತಾತ್ಸಾರವಿಲ್ಲದಿರಬಹುದು ; ಆದರೂ ಅವನ ಕ್ಷೇತ್ರದಲ್ಲಿ ಅದು ಅಪ್ರಕೃತ. ಆತ್ಮವಾದಿಗಳ ವಿರೋಧವನ್ನು ಕಡಿಮೆಮಾಡಿಕೊಳ್ಳಲು ಆತ್ಮದ ಶ್ರೇಷ್ಠತೆಯ ಬಗ್ಗೆ ನಾಲ್ಕು ಮಾತನ್ನಾಡಿದರೆ ಏನು ನಷ್ಟ! ಹೇಗಿದ್ದರೂ ನಂತರ ಅದನ್ನು ಅಚ್ಚುಕಟ್ಟಾಗಿ

ತಿರಸ್ಕರಿಸುವ ಸಂದರ್ಭ ಇರುತ್ತದಲ್ಲ! ಅಥವಾ ಹಿಂದೆ ಚರ್ಚಿಸಿದ 'ಕರ್ಮಫಲ'ದ ಪ್ರಶ್ನೆಯೇ ಆಗಬಹುದು. ಆ ತತ್ವವನ್ನು ನಿರಾಕರಿಸುವುದಂತೂ ಇದ್ದೇ ಇದೆ; ಆದರೆ ಮೊದಲಿಗೆ ಅದರ ಪ್ರಾಶಸ್ತ್ಯವನ್ನು ಸ್ಮರಿಸುವುದು! ಇವೆಲ್ಲದರ ಹಿಂದೆ ಚರಕ ಸಂಹಿತೆಯ ಮೂಲನಂಬಿಕೆ ಯಾವುದಿದೆಯೆಂಬುದನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಿದೆ.

ಹದಿನಾರನೆಯ ಶತಮಾನದಲ್ಲಿ ಡೇಕಾರ್ಟ್ ಎಂಬ ತತ್ವಜ್ಞಾನಿ ಯೂರೋಪಿನಲ್ಲಿದ್ದ. ಆತ ಕ್ರೈಸ್ತ ಸಂಪ್ರದಾಯದ ಕೆಲವು ತತ್ವಗಳನ್ನು ವಿಜ್ಞಾನದ ಒರೆಗಲ್ಲಿನಿಂದ ಪರೀಕ್ಷಿಸಿ ನೂತನವಾದ ಪ್ರಣಾಳಿಕೆಯೊಂದನ್ನು ಸ್ವೀಕರಿಸಿದ್ದ. ಗೆಲಿಲಿಯೋವಿಗೆ ಚರ್ಚಿನಿಂದುಂಟಾಗಿದ್ದ ಅಡಚಣೆಯನ್ನು ಆತ ಕಂಡಿದ್ದ. ತನ್ನ ಗ್ರಂಥಕ್ಕೂ ಧಾರ್ಮಿಕ ಗುರುಗಳಿಂದ ಅಡ್ಡಿಬರುವುದು ನಿಸ್ಸಂಶಯವೆಂದು ಅವನಿಗೆ ತಿಳಿದಿತ್ತು. ವಿದ್ವಾಂಸರಿಗೆ ಗ್ರಂಥವನ್ನು ಮುಟ್ಟಿಸಬೇಕಾದರೆ ಈ ಅಡ್ಡಿಯಿಂದ ತೊಂದರೆ ಖಚಿತ. ಮಾಡುವುದಾದರೂ ಏನು ? ಧಾರ್ಮಿಕ ಗುರುಗಳನ್ನು ಎದುರು ಹಾಕಿಕೊಳ್ಳುವುದು ವಿಜ್ಞಾನದ ಮುನ್ನಡೆಗೆ ಕುಠಾರಪ್ರಾಯ. ಆದ್ದರಿಂದ ಆತ ಒಂದು ಉಪಾಯ ಮಾಡಿಕೊಂಡ. ಧಾರ್ಮಿಕ ಗುರುಗಳಿಗೆ ಸಂಶಯವೇ ಬಾರದಂತೆ ಮಾಡಿದರೆ ಸರಿ! ತನ್ನ ಗ್ರಂಥವನ್ನು ಲೋರೆಟ್ಟೋನಲ್ಲಿದ್ದ ಪ್ರಸಿದ್ಧ ಚರ್ಚಿಗೊಯ್ದು ಅಲ್ಲಿ ಏಸುಮಾತೆಯ ಅಡಿಯಲ್ಲಿ ಗ್ರಂಥವನ್ನು ಸಮರ್ಪಿಸಿ ''ತಾಯೆ, ನಿನ್ನ ಕರುಣೆಯಿಂದ ಲಭಿಸಿದ ಜ್ಞಾನದ ಫಲ ಇದು. ಇದನ್ನು ನಿನಗೆ ಸಮರ್ಪಿಸುತ್ತಿದ್ದೇನೆ : ನನ್ನನ್ನು ಆಶೀರ್ವದಿಸು'', ಎಂದ. ಧಾರ್ಮಿಕ ಗುರುಗಳು ಡೇಕಾರ್ಟನ ಧಾರ್ಮಿಕ ಶ್ರದ್ಧೆಯನ್ನು ಕೊಂಡಾಡಿದರು, ಡೇಕಾರ್ಟನ ಗ್ರಂಥ ಹೊರಬಂತು! ಚರಕ ಸಂಹಿತೆಯು ಧಾರಾಳವಾಗಿ ಇಂತಹ ಉಪಾಯಗಳನ್ನು ಸಮರ್ಥವಾಗಿ ಹೂಡುತ್ತದೆ.

ಉದಾಹರಣೆಗೆ, ನಮ್ಮ ಧರ್ಮಶಾಸ್ತ್ರಕಾರರಿಗೆ (ಅಂದರೆ, ವಿಜ್ಞಾನದ ಶತ್ರುಗಳಿಗೆ) ಗೋವು ಮತ್ತು ಬ್ರಾಹ್ಮಣರೆಂದರೆ ಎಲ್ಲಿಲ್ಲದ ಅಕ್ಕರೆ. (ಅವರ ನೆಂಟರಾದ ಗೋಲ್ವಾಲ್ಕರ್ ಗುರೂಜಿ ಸಂಪ್ರದಾಯಸ್ಥರಲ್ಲೂ ಇದೇ ಅಕ್ಕರೆಯನ್ನು ಇಂದಿಗೂ ಕಾಣಬಹುದು.) ವೈದ್ಯನಿಗಾದರೋ ಬ್ರಾಹ್ಮಣನೂ ಇತರರಂತೆ ಒಬ್ಬ ಮಾನವ ಜೀವಿ ಮಾತ್ರ. ಗೋವೆಂದರೆ ಒಂದು ಪ್ರಾಣಿ. ಇತರ ಪ್ರಾಣಿಗಳಂತೆ ಅದೂ ಮಾನವನಿಗೆ ಬೇಕಾದ ಶ್ರೇಷ್ಠವಾದ ಒಂದು ಜೀವಿ. ಜಿಂಕೆಯ ಮಾಂಸ, ಮೊಲದ ಮಾಂಸ, ಇತ್ಯಾದಿಗಳಂತೆ ಗೋಮಾಂಸವೂ ಕೆಲವು ರೋಗಿಗಳಿಗೆ ಅತ್ಯುಪಯುಕ್ತವಾದ ಆಹಾರ. ಶರೀರ ಸ್ವಾಸ್ಥ್ಯಕ್ಕಾಗಿ ಗೋಮಾಂಸ ಸೇವನೆ ಸೂಕ್ತವೆಂದು ವೈದ್ಯನಿಗೆನಿಸಿದರೆ ರೋಗಿಗೆ ಅದನ್ನು ಉಣಿಸಬೇಕು. ಅದೇ ಅವನ ಧರ್ಮ. ಗೋಮಾಂಸವನ್ನು ಭಕ್ಷಿಸದ ರೋಗಿಯಾದರೆ ವೈದ್ಯನೇನು ಮಾಡಬೇಕು ? ಒಳ್ಳೆಯ ಅಡಿಗೆಯವನಾಗಿ, ಗೋಮಾಂಸವನ್ನು ಲಕ್ಷಣವಾಗಿ ಬೇಯಿಸಿ, ಅದನ್ನು ಜಿಂಕೆಯ ಮಾಂಸವೆಂದೋ ಅಥವಾ ಮತ್ತೇನನ್ನೋ ಹೇಳಿ ರೋಗಿಗೆ ತಿನ್ನಿಸಬೇಕು! ಗೋಮಾಂಸ ತಿನ್ನಬಹುದೆಂದು ಚರಕ ಸಂಹಿತೆಯು ಹೇಳಿದರೆ ಅಪಚಾರವಾಗುವುದಿಲ್ಲವೆ ? ಧರ್ಮಶಾಸ್ತ್ರಕಾರರಿಗೆ ಮುನಿಸುಂಟಾಗುವುದಿಲ್ಲವೇ ? ಅದಕ್ಕೂ ಚರಕ ಸಂಹಿತೆ ಮದ್ದನ್ನಿಟ್ಟುಕೊಂಡಿದೆ. ಮೊದಲು ಒಂದು ಅಧ್ಯಾಯದ ಪೂರ್ತಿ ಗೋಬ್ರಾಹ್ಮಣರ ದೈವೀರೂಪವನ್ನು ಹೊಗಳಿ ಬರೆದರಾಯಿತು! ಅದೇ ರೀತಿಯಲ್ಲಿ ಇತರ ಧಾರ್ಮಿಕ ಸಂಪ್ರದಾಯಗಳನ್ನು ಚರಕ ಸಂಹಿತೆ ಬುದ್ಧಿವಂತಿಕೆಯಿಂದ ಬದಿಗೊತ್ತಿ ತನ್ನ ವೈದ್ಯಕೀಯ ವಿಜ್ಞಾನವನ್ನು ರಕ್ಷಿಸಿಕೊಳ್ಳುತ್ತದೆ. ಹುರಿದ ಮಣ್ಣು ಹುಳು (ಎರೆ ಹುಳು) ಯಾವುದೋ ರೋಗಕ್ಕೆ ಸಿದ್ಧೌಷಧ. ಅದನ್ನು ಮೀನಿನ ಕರುಳು ಎಂದು ಬೇಕಾದರೆ ಹೇಳಿ ರೋಗಿಗೆ ತಿನ್ನಿಸಬೇಕು ವೈದ್ಯ, ಎನ್ನುತ್ತದೆ ಚರಕ ಸಂಹಿತೆ.

ಇಂತಹ ಗ್ರಂಥದ ವೈಜ್ಞಾನಿಕ ಮಾರ್ಗದ ಬಗ್ಗೆ ಒಂದು ಮಾತು ಹೇಳುವುದು ಇಲ್ಲಿ

ಸಮಂಜಸವಾದೀತು. ಯಾವ ವಿಷಯದ ಸತ್ಯವನ್ನೇ ಆಗಲಿ ಅನುಭವದಿಂದ ಸಿದ್ಧಗೊಳಿಸಿದಾಗ ಮಾತ್ರ ಅದು ಖಚಿತಗೊಳ್ಳುತ್ತದೆಂಬುದು ವೈಜ್ಞಾನಿಕ ಸತ್ಯ. ವಸ್ತುಸ್ಥಿತಿಯ ವಿಶ್ಲೇಷಣೆಯಿಂದ ತಿಳಿದ ತಾರ್ಕಿಕ ನಿಯಮಗಳು ಕೂಡ ಅನುಭವದಿಂದಲೇ ನಿಷ್ಕರ್ಷೆಯಾಗಬೇಕು ; ಇಡೀ ವಿಶ್ವವೇ ವೈದ್ಯನಿಗೆ ಗುರು. – ಈ ಮಾತುಗಳೆಲ್ಲಾ ಚರಕ ಸಂಹಿತೆಯವು. ಪ್ರಕೃತಿಯ ನಿಯಮಗಳನ್ನು ತಿಳಿಯದೆ ಮಾನವನ ಬಗೆಗಿನ ಜ್ಞಾನ ಅಪೂರ್ಣ. ಆದ್ದರಿಂದ ಮಾನವಶರೀರದ ಸ್ವಾಸ್ಥ್ಯವನ್ನು ರಕ್ಷಿಸಬೇಕಾದರೆ ಪ್ರಕೃತಿಯ ಅಧ್ಯಯನವನ್ನು ಮಾಡಬೇಕು. ಅದು ಪ್ರಕೃತಿಯೊಡನೆ ಬೆರೆತಾಗ ಮಾತ್ರ ನಡೆಸಲು ಸಾಧ್ಯ. ಆದ್ದರಿಂದ ಕಾಡುಮೇಡುಗಳಲ್ಲಿ ಸಂಚರಿಸಬೇಕು. ಅಲ್ಲಿನ ಜನರೊಡನೆ ಸಂಪರ್ಕ ಬೆಳೆಸಬೇಕು, ಕೈಯಿಂದ ಮಣ್ಣನ್ನು ಮುಟ್ಟಬೇಕು, ಮೂಸಬೇಕು. ರಾಜನ ಆಸ್ಥಾನದಲ್ಲಿ ಹೊಟ್ಟೆ ತುಂಬಿಸಿಕೊಂಡು ಆತ್ಮವಿದ್ಯೆಯ ಬಗ್ಗೆ ಭಾಷಣ ಬಿಗಿಯುವುದಲ್ಲ ಇದು !

ಇದಲ್ಲದೆ ಚರಕ ಸಂಹಿತೆ ಇನ್ನೊಂದಂಶವನ್ನೂ ವಿವರಿಸುತ್ತದೆ : ಪ್ರಕೃತಿಯ ನಿಯಮಗಳೆಲ್ಲಾ ನಿಗದಿತವಾದ ರೂಪದಲ್ಲಿವೆ. ಅದನ್ನು ತತ್ವವೇತ್ತರು 'ಸ್ವಭಾವ' ಎನ್ನುತ್ತಾರೆ. ಆ ಸ್ವಭಾವದ ಜ್ಞಾನವೇ ಪ್ರಕೃತಿಜ್ಞಾನ. ಎಲ್ಲ ವಸ್ತುಗಳೂ ಭೌತವಸ್ತುಗಳೇ ; ಇವುಗಳನ್ನು ಪಂಚಭೂತಗಳನ್ನಾಗಿ ವಿಂಗಡಿಸಬಹುದು. ಆದರೆ ಭೌತದ್ರವ್ಯದಿಂದ ಉದ್ಭವಿಸದಿರುವುದೇನೂ ಇಲ್ಲ. (ಅಂದರೆ, ಜೀವವೂ ಭೌತವಸ್ತುವಿನಿಂದಲೇ ಬಂದಿದೆ; ಮನಸ್ಸು ಭೂತದ್ರವ್ಯದ ಒಂದು ರೂಪ, ಎಂದರ್ಥ.) ಇದನ್ನೆಲ್ಲಾ ಪ್ರತಿಪಾದಿಸುವ ಚರಕ ಸಂಹಿತೆ ಬಹಳಮಟ್ಟಿಗೆ ಭೌತವಾದವನ್ನು ಒಪ್ಪಿದಂತೆಯೇ ಆಯಿತು. ಮುಂದುವರಿದು ಚರಕ ಸಂಹಿತೆ ಇನ್ನೊಂದು ತತ್ವವನ್ನು ನಿರೂಪಿಸುತ್ತದೆ : ಯಾವ ಜ್ಞಾನವೇ ಆಗಲಿ ಪರಿಪೂರ್ಣವಲ್ಲ; ಕ್ರಮೇಣ ಅದರ ವೃದ್ಧಿಯಾಗಬೇಕಷ್ಟೆ. ಇಂದಿನ ನಮ್ಮ ವೈದ್ಯಕೀಯ ಜ್ಞಾನದ ಮಟ್ಟವೂ ಪರಿಪೂರ್ಣವಲ್ಲ. ಹೊರಗಿನ ಪ್ರಪಂಚದೊಡನೆ ಸೆಣಸಾಡಿ ಅನುಭವದಿಂದ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ಪ್ರಕೃತಿ ನಿಯಮದ ಜ್ಞಾನ ಬೆಳೆದಂತೆಲ್ಲಾ ಶಾರೀರಿಕ ಜ್ಞಾನವೂ ಹೆಚ್ಚುತ್ತದೆ. ಆರೋಗ್ಯ ರಕ್ಷಣೆಗೆ ಇದೊಂದೇ ಮಾರ್ಗ. – ಇದು ಚರಕ ಸಂಹಿತೆಯ ತತ್ವ. ನಮ್ಮಲ್ಲಿ ಕೆಲವು ಆಯುರ್ವೇದದ ವಿದ್ವಾಂಸರು ಇದನ್ನೆಲ್ಲಾ ಮರೆತು ಚರಕವೈದ್ಯರಿಗೆ ಆಶ್ಚರ್ಯವಾಗುವಂತೆ ಆಯುರ್ವೇದವು ಪರಿಪೂರ್ಣವಾದ ಪದ್ಧತಿಯೆಂದು ಪ್ರಚಾರಮಾಡುವುದು ವಿರೋಧಾಭಾಸವೇ ಸರಿ.

ಅದೇನೇ ಇರಲಿ, ಚರಕ ಸಂಹಿತೆಯ ಮೂಲತತ್ವಗಳು ಮೂರು : ಪ್ರಕೃತಿಯ ಕ್ರಿಯೆಗಳಲ್ಲಿ ಒಂದು ನಿಯಮವಿದೆ, ಆ ನಿಯಮವನ್ನು ನಾವು ಸಂಪೂರ್ಣವಾಗಿ ಈಗಾಗಲೇ ತಿಳಿದಿಲ್ಲವಾದರೂ ಅದು ತಿಳಿಯಲಾಗದಂತಹ ನಿಯಮವಲ್ಲ, ಮತ್ತು ಈ ನಿಯಮದ ತಿಳುವಳಿಕೆಯು ಮಾನವನಿಗೆ ಪ್ರಕೃತಿಯ ಮೇಲೆ ಅಧಿಕಾರವನ್ನೊದಗಿಸುತ್ತದೆ. (ಅರ್ಥಾತ್, ಆ ಜ್ಞಾನದಿಂದ ತನ್ನ ಜೀವನವನ್ನು ಮಾನವ ಉತ್ತಮಪಡಿಸಿಕೊಳ್ಳಬಲ್ಲ). ಆಧುನಿಕ ವಿಜ್ಞಾನದ ಮೂಲಭೂತ ನಂಬಿಕೆಗಳಿಗೆ ಇದೆಲ್ಲಾ ಎಷ್ಟು ಹತ್ತಿರವಾದದ್ದೆಂದು ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಚರಕ ಸಂಹಿತೆಯು ನಮ್ಮನ್ನು ನೇರವಾಗಿ ಆಧುನಿಕ ವಿಜ್ಞಾನದ ಹೊಸ್ತಿಲಿಗೆ ತಂದು ನಿಲ್ಲಿಸುತ್ತದೆಯೆಂದರೆ ತಪ್ಪಾಗಲಾರದು.

ಕಡೆಯದಾಗಿ, ಚರಕ ಸಂಹಿತೆಯ ಒಂದೆರಡು ವಿಶೇಷ ನಿರೂಪಣೆಗಳು : ರೋಗಿಗೆ ವೈದ್ಯ ಔಷಧಿ ನೀಡುತ್ತಾನೆ; ರೋಗಿ ಗುಣಮುಖನಾಗುತ್ತಾನೆ. ಈಗ ಪ್ರಶ್ನೆ ಇದು : ಅವನು ಗುಣವಾದುದಕ್ಕೆ ಕಾರಣವೇನು ? ಔಷಧಿಯೇ ಅಥವಾ ರೋಗಿಯ ಪೂರ್ವಾರ್ಜಿತ ಕರ್ಮದ ಫಲವೇ ? ಚರಕ ಸಂಹಿತೆಯ ಉತ್ತರ : ''ಒಂದು ದ್ರವ್ಯದ ಕ್ರಿಯೆಯು ಆ

ದ್ರವ್ಯದಿಂದ ಮಾತ್ರ ನಿರ್ಧರಿಸಲಾಗುತ್ತದೆಯೇ ಹೊರತು ಆ ಕ್ರಿಯೆಗೆ ಹೊರಗಿನ ಯಾವ ಪ್ರೇರಣೆಯೂ ಇಲ್ಲ'' (ಕರ್ಮ ನ ಅನ್ಯತ್ ಅಪೇಕ್ಷತೇ). ಆಕಸ್ಮಾತ್ತಾಗಿ ಅಥವಾ ಅದೃಷ್ಟದಿಂದಾಗಿ ಗುಣಮುಖನಾಗುವ ರೋಗಿಗೂ ಚರಕ ಸಂಹಿತೆಗೂ ಸಂಬಂಧವೇ ಇಲ್ಲ! ಯಾವನೋ ವೈದ್ಯನು ತನ್ನ ವಿಶ್ಲೇಷಣಾತ್ಮಕವಾದ ತಾರ್ಕಿಕ ವಸ್ತುಜ್ಞಾನದಿಂದ ರೋಗಿಯನ್ನು ಗುಣಪಡಿಸಿದರೆ ಅದು ವೈದ್ಯಕೀಯ ಜ್ಞಾನವೆನಿಸಿಕೊಳ್ಳುತ್ತದೆ ; ಆಕಸ್ಮಿಕವಾಗಿ ಗುಣಹೊಂದಿದರೆ ಅದು ವೈದ್ಯವಲ್ಲ. ಇದು ಚರಕ ಸಂಹಿತೆಯ ಮಾತು. (ವಿನಾ ತರ್ಕೇಣ ಯಾ ಸಿದ್ಧಿಃ ಯದೃಚ್ಛಾ ಸಿದ್ಧಿರೇವ ಸಾ). ಮಂತ್ರದಿಂದ ಹಾವು ಕಡಿದಿದ್ದನ್ನು ಗುಣಪಡಿಸುವ ವೈದ್ಯರು, ಅದನ್ನು ಮುಗ್ಧಜನರ ಮುಂದೆ ಮಾಂತ್ರಿಕವಾಗಿ ಮಂಡಿಸುವ ವೃತ್ತಪತ್ರಿಕೆಗಳು, ಮತ್ತು ಸಾಯಿಬಾಬಾ ಮತ್ತಿತರ ಬಡಾಯಿಬಾಬಾಗಳ ಭಕ್ತರು, ಇದನ್ನು ತಿಳಿದುಕೊಂಡರೆ ವಿಜ್ಞಾನದ ಮೂಲಪಾಠವನ್ನು ಕಲಿತಂತಾಗುತ್ತದೆ. ಯಾವ ಜ್ಞಾನವನ್ನು ಎಲ್ಲರೂ ಎಲ್ಲ ಸಮಯಗಳಲ್ಲೂ ಪ್ರಯೋಗಿಸಿ ಸಿದ್ಧಿಪಡೆಯಲು ಸಾಧ್ಯವಿಲ್ಲವೋ ಅದು ಜ್ಞಾನವಲ್ಲ. ಅದರಿಂದ ಪ್ರಯೋಜನವಿಲ್ಲ, ಅದು ವಿಜ್ಞಾನವಲ್ಲ. ನಿರುಕ್ತ ಎಂಬ ಒಂದು ಪ್ರಾಚೀನ ಶಬ್ದ ಶಾಸ್ತ್ರ ಗ್ರಂಥ ನಮ್ಮಲ್ಲಿದೆ. ಅದರಲ್ಲಿ ಬರುವ ಮಾತುಗಳಿವು: ವಿದ್ಯಾ ಹ ವೈ ಬ್ರಾಹ್ಮಣಮಾಜಗಾಮ ಗೋಪಾಯ ಮಾಂ ಶೇವಧಿಷ್ಟೇಹಮಸ್ಮಿ. (ವಿದ್ಯೆಯು ಬ್ರಾಹ್ಮಣನನ್ನು ಮೊರೆಹೊಕ್ಕು ಕೇಳಿಕೊಂಡಿತಂತೆ: ನನ್ನನ್ನು ಗುಪ್ತವಾಗಿರಿಸು, ನಿನ್ನ ರಕ್ಷಕ ನಾನು.) ವಿದ್ಯೆ ಬ್ರಾಹ್ಮಣನ ಮೊರೆಯನ್ನೇ ಏಕೆ ಹೊಗಬೇಕಾಗಿತ್ತೆಂಬುದು ಒಂದು ಚಾರಿತ್ರಿಕ ಪ್ರಶ್ನೆ; ಮತ್ತು ವಿದ್ಯೆಯನ್ನು ಅವರ ಸ್ವತ್ತಾಗಿ ಮಾತ್ರ ಇರಿಸಿಕೊಂಡಿರಬೇಕಾಗಿದ್ದ ಸಂದರ್ಭ ಬೇರೆ.

ಆದರೆ ಚರಕ ಸಂಹಿತೆಯಂತಹ ವೈದ್ಯಕೀಯ ಗ್ರಂಥಗಳು ಬೆಳೆಸುವ ಜ್ಞಾನ ಅಂತಹ ಗುಟ್ಟಾದ ಅಥವಾ ಕೆಲವರಿಗೆ ಮಾತ್ರ ಸೀಮಿತವಾದಂತಹ ವಿದ್ಯೆಯಲ್ಲ. ಅದು ಮಾನವೀಯತೆಯ ಉದಾತ್ತ ಧ್ಯೇಯದ ಹಿನ್ನೆಲೆಯಲ್ಲಿ ಬೆಳೆದುಬಂದಿರುವ ವೈಜ್ಞಾನಿಕ ಶಾರೀರವಿದ್ಯೆ ಮತ್ತು ಅದರ ಹಿರಿಮೆ ಇರುವುದು ಶರೀರ ಶ್ರಮದಿಂದ ಜೀವಿಸುತ್ತಿದ್ದ ಜನಸಾಮಾನ್ಯರಿಂದ ಉದ್ಭವವಾದ ವಿದ್ಯೆಯಾಗಿ ಅದು ಬೆಳೆದುಬಂದಿದ್ದರಲ್ಲಿ. ಮನು ಧರ್ಮಶಾಸ್ತ್ರ ಹೇಳುತ್ತದೆ : ನೀಚಜಾತಿಯವರು ಮಾತ್ರ ವೈದ್ಯಕೀಯದಲ್ಲಿ ತೊಡಗಬಹುದು. ವಾಸಿಷ್ಠ ಧರ್ಮಶಾಸ್ತ್ರ ಹೇಳುತ್ತದೆ: ವೈದ್ಯಕೀಯದಿಂದ ಜೀವನ ಹೊರೆಯುವವರನ್ನು ಬ್ರಾಹ್ಮಣರೆಂದೆಣಿಸಲಾಗುವುದಿಲ್ಲ. ಕಾರಣ ಇಷ್ಟೇ: ಪ್ರಾಚೀನ ಭಾರತೀಯ ಸಮಾಜದಲ್ಲಿ ಬ್ರಾಹ್ಮಣ ಶರೀರ ಶ್ರಮದಿಂದ ಜೀವಿಸಿದವನಲ್ಲ! ಇಂತಹ ಏರುಪೇರಿನ, ವರ್ಣಸಂಘರ್ಷದ, ಮತ್ತು ವರ್ಗವಿಭಜಿತ ಸಮಾಜದಲ್ಲಿ ಎಷ್ಟೋ ಬಾಧಕಗಳನ್ನೂ, ವಿರೋಧಗಳನ್ನೂ ಸಹಿಸಿಕೊಂಡು ಬೆಳೆದುಬಂದಿರುವ ಶ್ರೇಷ್ಠ ಜ್ಞಾನ ಭಂಡಾರ ಪ್ರಾಚೀನ ಭಾರತದ ವಿಜ್ಞಾನದ ಪರಂಪರೆಯಲ್ಲಿ ಕಾಣಸಿಗುತ್ತದೆ. ಅಂತಹ ಜ್ಞಾನರಾಶಿಗೆ ಸೇರಿದ್ದು ವೈದ್ಯಕೀಯ ಕ್ಷೇತ್ರ. ಅದರ ವೈಜ್ಞಾನಿಕಪದ್ಧತಿಯನ್ನು ಉಳಿಸಿ ಬೆಳೆಸಬೇಕಾದ್ದು ಇಂದಿನ ದುಡಿಯುವ ವರ್ಗದ ಜವಾಬ್ದಾರಿಯಾಗಿದೆ.

*– ಕೆಂಬಾವುಟ : 1979 ಆಗಸ್ಟ್*

# ಭಾರತೀಯ ಸಮಾಜದಲ್ಲಿ ವರ್ಣ ಮತ್ತು ಜಾತಿ

ಶೂದ್ರಸ್ಯ ಪೂರ್ವವರ್ಣಪಾರತಂತ್ರ್ಯಂ ಅಮಂತ್ರಿಕಾಶ್ಚ ಕ್ರಿಯಾಃ ॥
– ಪ್ರಶಸ್ತಪಾದ ಭಾಷ್ಯ

1776ರಲ್ಲಿ ಅಮೆರಿಕಾದ ಸ್ವಾತಂತ್ರ್ಯ ಸಂಗ್ರಾಮ ಕೊನೆಯ ಘಟ್ಟವನ್ನು ಮುಟ್ಟಿತ್ತು. ಅದೇ ವರ್ಷದಲ್ಲಿ ಜರ್ಮನಿಯಲ್ಲಿ ರೋಖೋ ಎಂಬ ಲೇಖಕನ ಒಂದು ಪುಸ್ತಕ ಪ್ರಸಿದ್ಧಿಗೆ ಬಂತು. ಅದರ ಹೆಸರು 'ಮಕ್ಕಳ ನೇಹಿಗ – ಹಳ್ಳಿಯ ಶಾಲೆಗಳಿಗೊಂದು ಪಠ್ಯಪುಸ್ತಕ' ಎಂದು. ಅದರ ಉದ್ದೇಶವಾದರೋ ಬಹಳ ಸ್ಪಷ್ಟವಾಗಿತ್ತು: ಹಳ್ಳಿಗಳ ರೈತರ ಮತ್ತು ಕುಶಲಕರ್ಮಿಗಳ ಪುಟ್ಟ ಮಕ್ಕಳಿಗೆ ತಮ್ಮ ಜೀವನದಲ್ಲಿನ ಉದ್ಯೋಗವನ್ನು ಕುರಿತು 'ಅರಿವು' ಉಂಟುಮಾಡುವುದು. ಸಮಾಜದ 'ಪ್ರತಿಷ್ಠಿತ' ವ್ಯಕ್ತಿಗಳ ಮತ್ತು ರಾಜ್ಯದ ಪ್ರಭುತ್ವದ ಬಗೆಗೆ ಅವರು ತಾಳಬೇಕಾದ ಗೌರವಭಾವ, ಇಹಲೋಕದಲ್ಲಿ ಅವರಿಗೆ ದೊರಕುವ ಸ್ಥಾನ (ಮಾನದ ಪ್ರಶ್ನೆಯೇ ಇಲ್ಲ), ಅದರ ಬಗೆಗೆ ಅವರಲ್ಲಿರಬೇಕಾದ ನಿರಂತರ ತೃಪ್ತಿ ಇತ್ಯಾದಿಗಳನ್ನು ಕುರಿತಾದದ್ದು ಅದರ ಉದ್ದೇಶ. ಮುಂದುವರಿದು ಆ ಪುಸ್ತಕ ತಿಳಿಯಹೇಳಿತು : ''ಮಾನವನು ಜೀವನಾಧಾರವನ್ನೂ ಸುಖ ಸಂತೋಷಗಳನ್ನೂ ಕೇವಲ ದುಡಿಮೆಯಿಂದಲೇ ಪಡೆದುಕೊಳ್ಳಬೇಕೆಂದು ಪ್ರಕೃತಿಯು ನಿರ್ಧರಿಸಿದೆ. ಆದ್ದರಿಂದ ರೈತ ಹಾಗೂ ಕುಶಲಕರ್ಮಿಗಳ ಮಕ್ಕಳು ಕಡುಬಡತನದಲ್ಲೇ ಬೆಳೆದರೂ ತಮ್ಮ ದುಡಿಮೆಯ ಹಿರಿತನವನ್ನು ಕಂಡುಕೊಂಡು ಹಿಗ್ಗಬೇಕು. ಅವರ ಆಹಾರ ಅವರ ದುಡಿಮೆಯ ಫಲವೆಂದು ತಿಳಿದು ಸಂತಸಭಾವವನ್ನು ತಾಳಬೇಕು, ಐಶ್ವರ್ಯವಂತ ಹೊಟ್ಟೆಬಾಕರಿಗಿರಬಹುದಾದ ಅಜೀರ್ಣ, ಇತ್ಯಾದಿ ರೋಗಗಳು ಅವರನ್ನು ಕಾಡುವುದಿಲ್ಲವೆಂದು ತಿಳಿದು ಸಂತೋಷಪಡಬೇಕು'' ಇತ್ಯಾದಿ, ಇತ್ಯಾದಿ. ಈ ಮಾತುಗಳ ಹಿಂದಿನ ತತ್ವ ಗೂಢವಾಗಿದೆ ಎಂದೇನೂ ಹೇಳಲಾಗದು. ಕನ್ನಡದಲ್ಲಿ ಒಂದು ಗಾದೆ ಇದೆ : ''ಬಡವ, ನೀನು ಮಡಗಿದ್ದಂಗಿರು'' ಎಂಬುದೇ ಅದು. ಈ ಗಾದೆಯ ಹಿಂದಿನ ಮೋಸ ಹೇಗೆ ಗೂಢವಲ್ಲವೋ ರೋಖೋವಿನ ಪಠ್ಯಪುಸ್ತಕದ ತತ್ವವೂ ಅಷ್ಟೆ. ನಮ್ಮಲ್ಲಿಂದೂ ಅಂತಹ ಪಠ್ಯಪುಸ್ತಕಗಳು ಪ್ರಚುರವಾಗಿವೆ.

ಮುಖ್ಯವಾಗಿ ಉದ್ಭವಿಸುವ ಪ್ರಶ್ನೆಗಳಿವು. ಬಡವನು ಬಡವನೇಕಾಗಿದ್ದಾನೆ ? ಅವನನ್ನು ಹಾಗೆ ''ಮಡಗಿರುವವರು'' ಯಾರು ? ಅವನು ಮಾತ್ರ ''ಮಡಗಿದ್ದಂಗೇ'' ಏಕಿರಬೇಕು ? ಅವನು ಹಾಗಿರುವುದರ ವಿರುದ್ಧ ತೀರ್ಮಾನಿಸಿದರೆ ಅವನನ್ನು ಹಾಗೆ ''ಮಡಗಿರುವವರ'' ಪರಿಸ್ಥಿತಿ ಏನಾಗುತ್ತದೆ ? ಅಂತಹ ಪರಿಸ್ಥಿತಿ ಬಾರದಿರಬೇಕಾದರೆ ಅಥವಾ ''ಮಡಗಿರುವವರು'' ತಮ್ಮನ್ನು ಸಂರಕ್ಷಿಸಿಕೊಳ್ಳಬೇಕಾದರೆ ಯಾವ ವ್ಯವಸ್ಥೆಯನ್ನುಂಟುಮಾಡಬೇಕು, ಆ ವ್ಯವಸ್ಥೆಯನ್ನು ಹೇಗೆ ಹೊಗಳಬೇಕು, ಅದಕ್ಕೆ ಯಾವ ದೈವೀ ಹಿನ್ನೆಲೆಯನ್ನು ನೀಡಬೇಕು, ಅದರ ತತ್ವವನ್ನು ಹೇಗೆ ಸಾರಬೇಕು, ಮತ್ತು ಕಡೆಯದಾಗಿ, ಸಮಾಜದ ಮೇಲೆ ಅದರ ಪರಿಣಾಮವೇನು ?

ಈ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಜಾತಿ-ವರ್ಗಗಳ ಮಾತನ್ನಾಡದಿರಲು ಸಾಧ್ಯವಿಲ್ಲ. ನಮ್ಮ ರಾಷ್ಟ್ರದಲ್ಲಿನ ಅತ್ಯಂತ ಹೀನವೂ ಹೇಯವೂ ಆದ ಪಿಡುಗೆಂದರೆ ಈ ಜಾತಿ ಕಟ್ಟಲೆ.

ಅದನ್ನು ಕುರಿತು ಚಿಂತಿಸುವಾಗ, ವಿಶ್ಲೇಷಿಸುವಾಗ ಮತ್ತು ಸೂಕ್ತ ಪರಿಹಾರವನ್ನು ಅನ್ವೇಷಿಸುವಾಗ ಈ ಮೇಲಿನ ಪ್ರಶ್ನೆಗಳತ್ತ ಗಮನಕೊಡುವುದು ಅತ್ಯಂತ ಅವಶ್ಯ. ಇತ್ತೀಚೆಗೆ ನಮ್ಮ ರಾಜ್ಯದ ವಿಶ್ವವಿದ್ಯಾನಿಲಯವೊಂದರ ಪ್ರಾಧ್ಯಾಪಕರೊಡನೆ ಜಾತಿಗಳನ್ನು ಕುರಿತು ಒಂದೆರಡು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವ ಅವಕಾಶ ನನಗೆ ದೊರಕಿತು. ಅತ್ಯಾಶ್ಚರ್ಯಕರವಾದ ಧೋರಣೆಯೊಂದು ನನ್ನ ಗಮನಕ್ಕೆ ಆಗ ಬಂದಿತು. ಅವರ ವಾದ ಹೀಗಿತ್ತು: ''ಜಾತಿಗಳು ಭಾರತೀಯ ಸಮಾಜದಲ್ಲಿ ಕೇವಲ ಇತ್ತೀಚಿನ ಕಲ್ಪನೆ ಮಾತ್ರ. ಹಿಂದೆ (ಅಂದರೆ ಪ್ರಾಚೀನ ಸಮಾಜದಲ್ಲಿ) ವರ್ಣವಿಭಾಗ ಇದ್ದುದು ನಿಜ. ಆದರೆ ಅದು ಸ್ಥಾನಮಾನಕ್ಕೆ ಸಂಬಂಧಿಸಿದುದಲ್ಲ. ಎಲ್ಲ ವರ್ಣದವರೂ ಸಮಾನರೇ ಆಗಿದ್ದರು. ಉಚ್ಚ-ನೀಚ ಭಾವನೆ ಇರಲಿಲ್ಲ. ವ್ಯಕ್ತಿಯ ಕಸುಬನ್ನು ನಿರ್ದೇಶಿಸಲು ಮಾತ್ರ ವರ್ಣಗಳು ಉಪಯೋಗಿಸಲ್ಪಡುತ್ತಿದ್ದವು. ಕಸುಬಿದ್ದವರೆಲ್ಲಾ ಮೊದಲ ಮೂರು ವರ್ಣಗಳಿಗೆ ಸೇರಿರುತ್ತಿದ್ದರು. ಎಲ್ಲರೂ ಒಂದಲ್ಲ ಒಂದು ಕಸುಬನ್ನು ಹೊಂದಿರುತ್ತಲೇ ಇದ್ದುದರಿಂದ (ಅರ್ಥಾತ್ ನಿರುದ್ಯೋಗ ಸಮಸ್ಯೆಯೇ ಇಲ್ಲದುದರಿಂದ) ಶೂದ್ರರು ಎಂಬ ಒಂದು ಪಂಗಡ ಇರಲೇ ಇಲ್ಲ. ಚರಿತ್ರೆಯನ್ನು ತಿಳಿಯದವರು ವರ್ಣವಿಭಾಗವನ್ನು ಅಪಹಾಸ್ಯಮಾಡಿ ಪ್ರಾಚೀನ ಸಮಾಜವನ್ನು ತೆಗಳುತ್ತಾರೆ. ಇಂದಿನ ಜಾತಿಯ ವಿಭಾಗವನ್ನು ಈ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದು ಸಾಧ್ಯ, ಇತ್ಯಾದಿ''. ಇವರು ರೋಖೋ ಜಾತಿಗೆ ಸೇರಿದವರೆಂದು ಬೇರೆ ಹೇಳಬೇಕಾಗಿಲ್ಲ. ಇತಿಹಾಸವನ್ನು ಇದಕ್ಕಿಂತಲೂ ಹೆಚ್ಚು ಕ್ಷುದ್ರವಾಗಿ ವಿವರಿಸಲು ಸಾಧ್ಯವಾಗಲಾರದು. ಸಮಸ್ಯೆಯನ್ನು ಎದುರಿಸುವ ಬದಲು ಸಮಸ್ಯೆಯೇ ಇಲ್ಲವೆಂದು ನಂಬಿಸಲು ಕಣ್ಣುಮುಚ್ಚಿಕೊಳ್ಳುವ ಮಾರ್ಜಾಲಗಳಿವು ಎಂದು ಹೇಳಿದರೆ ತಪ್ಪಾಗಲಾರದು.

ಪ್ರಾಚೀನ ಭಾರತೀಯ ಸಮಾಜದಲ್ಲಿ ಜಾತಿಯ ಕಲ್ಪನೆಗಿಂತಲೂ ಮುನ್ನ ವರ್ಣವಿಭಾಗವು ಇದ್ದಿತೆಂಬುದನ್ನು ನಾವು ಒಪ್ಪಬಹುದು. ದುಡಿಮೆಯ ಪ್ರತ್ಯೇಕತೆಯನ್ನು ಅನುಸರಿಸಿ ಈ ವಿಭಾಗ ಮಾಡಲಾಗಿದ್ದಿತೆಂಬುದು ಸಾಧ್ಯವಿರಬಹುದು. ಜನಸಮುದಾಯವು ಸಾಕಷ್ಟು ಭಿನ್ನತೆಯಿಂದ ಕೂಡಿದ್ದು, ವಿವಿಧ ಉತ್ಪಾದನಾ ಕಾರ್ಯದಲ್ಲಿ ತೊಡಗಿದ್ದು ಉತ್ಪಾದನೆಯ ವಿನಿಮಯವು ತೀವ್ರಗತಿಯಿಂದ ಸಾಗಿದ್ದರೆ ದುಡಿಮೆಯ ವಿಭಜನೆ ಅಗತ್ಯವಾಗುತ್ತದೆ. ಅಂತಹ ಒಂದು ಸನ್ನಿವೇಶದಲ್ಲಿ ವರ್ಣವಿಭಾಗ ನಡೆದಿದ್ದಿರಬಹುದು. ಹೊರಗಿನಿಂದ ಬಂದ ಆರ್ಯರು ಮತ್ತು ವಿವಿಧ ಪಂಗಡಗಳಾಗಿ ಜೀವಿಸುತ್ತಿದ್ದ ಇಲ್ಲಿಯವರು ಅನುಸರಿಸುತ್ತಿದ್ದ ಪ್ರತ್ಯೇಕ ವ್ಯವಸ್ಥೆಗಳ ನಡುವಣ ಘರ್ಷಣೆಯೂ ವರ್ಣವಿಭಾಗಕ್ಕೆ ಕಾರಣವಿರಬಹುದು. ದಸ್ಯುಗಳೆಂದು ಕರೆಯಲ್ಪಟ್ಟ ಇಲ್ಲಿಯ ಜನಾಂಗಗಳು ಹೊರಗಿನಿಂದ ಬಂದವರ ಪದ್ಧತಿಗಳನ್ನು ಸ್ವಯಮಿಚ್ಛೆಯಿಂದ ಸ್ವೀಕರಿಸಿದರೆಂದು ಹೇಳಲಾಗದು. ಅಂದು ಪ್ರಾರಂಭವಾದ ಘರ್ಷಣೆ ಇಲ್ಲಿಯವರೆಗೂ ನಡೆದೇಬಂದಿದೆಯೆಂಬುದನ್ನಂತೂ ನಾವು ಗಮನಿಸಬಹುದು.

ಮಹಾಭಾರತದ ಶಾಂತಿಪರ್ವದಲ್ಲಿ ಉದ್ಯೋಗ ಕಾರ್ಯಗಳಿಗನುಗುಣವಾಗಿ ವರ್ಣವಿಭಾಗ ಮಾಡಲಾಗಿದೆಯೆಂದು ಸೂಚಿಸಲಾಗಿದೆ (ಬ್ರಹ್ಮಣಾ ಪೂರ್ವಸೃಷ್ಟಾ ಹಿ ಕರ್ಮಭಿರ್ವರ್ಣತಾಂ ಗತಾಃ). ಗೀತೆಯು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಉದ್ಯೋಗಕಾರ್ಯ ಹಾಗೂ ಗುಣಗಳನ್ನನುಸರಿಸಿ ಈ ವಿಭಾಗ ಮಾಡಲಾಗಿದೆಯೆಂದು ಘೋಷಿಸಿದೆ (ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ). ಪ್ರಾಚೀನ ಸಮಾಜದಲ್ಲಿ ಕಳಂಕಗಳೇ ಇರಲಿಲ್ಲವೆಂದು ಭಾವಿಸಲಿಚ್ಛಿಸುವ ಹಲವು ಮಹಾ ಮೇಧಾವಿಗಳು ಈ ವಾಕ್ಯಗಳನ್ನೇ ಬಲವಾಗಿ ಹಿಡಿದು ಅವಿಚ್ಛಿನ್ನವಾಗಿ ಮತ್ತು ಅನೂಚಾನವಾಗಿ ನಡೆದು

ಬಂದಿರುವ ಘರ್ಷಣೆಯನ್ನು ಮರೆಮಾಚಿಸಲು ಪ್ರಯತ್ನ ನಡೆಸಿದ್ದಾರೆ, ನಡೆಸುತ್ತಲೂ ಇದ್ದಾರೆ. ಕಾಮ, ಕ್ರೋಧ, ಭಯ, ಲೋಭ, ಚಿಂತೆ, ಶ್ರಮ ಇತ್ಯಾದಿಗಳೆಲ್ಲಾ ಸರ್ವರೂ ಅನುಭವಿಸುವಂತಿರುವಾಗ ವರ್ಣವಿಭಾಗದ ಅರ್ಥವಾದರೂ ಏನು ಎಂಬ ಪ್ರಶ್ನೆಯು ಮಹಾಭಾರತದ ಕಾಲದ್ದು. ಅದನ್ನೇ ಬೇರೆ ಪದಗಳಲ್ಲಿ ಹೇಳುವುದಾದರೆ, ವ್ಯಕ್ತಿಗಳ ಆಶೆ-ಆಕಾಂಕ್ಷೆಗಳು ಸರ್ವತೋಮುಖವಾಗಿರುವಾಗ ವರ್ಣವಿಭಾಗದಿಂದ ಕೆಲವು ಅಡ್ಡಿಗಳನ್ನೊಡ್ಡುವುದು ಸಾಧುವೇ ? ಉದ್ಯೋಗಗಳ ಭಿನ್ನತೆಯಿಂದಲೇ ವರ್ಣವಿಭಾಗ ನಡೆದರೂ ಈ ಉದ್ಯೋಗಗಳ ಹಂಚಿಕೆಯಲ್ಲಿ ನಿಷ್ಠುರತೆಯನ್ನು ಅನುಸರಿಸುವುದು ಸಮಾಜದ ಬೆಳವಣಿಗೆಗೆ ಸಾಧನವಾಗಬಲ್ಲುದೇ ? ಆಪಸ್ತಂಬ ಧರ್ಮಸೂತ್ರದಲ್ಲಿ ಕರಾರುವಾಕ್ಕಾಗಿ ಈ ಮಾತುಗಳನ್ನು ಆಡಲಾಗಿದೆ : ಚತ್ವಾರೋ ವರ್ಣಾಃ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಾಃ। ತೇಷಾಂ ಪೂರ್ವತಃ ಪೂರ್ವೇ ಜನ್ಮತಃ ಶ್ರೇಯಾನ್ । ಅಶೂದ್ರಾಣಾಮದುಷ್ಟಕರ್ಮಣಾಂ ಸಮುಪಾಯನಂ ವೇದಾಧ್ಯಯನ-ಮಗ್ನ್ಯಾಧೇಯಂ ಫಲವಂತಿ ಚ ಕರ್ಮಾಣಿ। ಶುಶ್ರೂಷಾ ಶೂದ್ರಸ್ಯೇತರೇಷಾಂ ವರ್ಣಾನಾಂ। ಪೂರ್ವಸ್ಮಿನ್ ಪೂರ್ವಸ್ಮಿನ್ ವರ್ಣೇ ನಿಃಶ್ರೇಯಸಂ ಭೂಯಃ ॥

ಇದರ ಅರ್ಥವಿಷ್ಟೆ: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಿವೆ ; ಇವುಗಳಲ್ಲಿ ಹಿಂದಿನವರು ಮುಂದಿನವರಿಗಿಂತ ಹುಟ್ಟಿನಿಂದಲೇ ಶ್ರೇಷ್ಠರು. ಶೂದ್ರರಲ್ಲದವರು ವೇದಾಧ್ಯಯನ, ಅಗ್ನಿಹೋತ್ರ, ಇತ್ಯಾದಿ ಪುಣ್ಯಕಾರ್ಯಗಳನ್ನು ಮಾಡಬಹುದು. ಶೂದ್ರರಾದರೋ ಬೇರೆಯವರ ಸೇವೆ ಮಾಡುವುದನ್ನೇ ತಮ್ಮ ಕಾರ್ಯವನ್ನಾಗಿಟ್ಟುಕೊಳ್ಳಬೇಕು. ಸೇವೆಮಾಡಲು ಹೆಚ್ಚು ಶ್ರೇಷ್ಠರಾದವರನ್ನು ಆರಿಸಿಕೊಂಡರೆ ಶೂದ್ರನಿಗೆ ದೊರಕುವ ಶ್ರೇಯಸ್ಸು ವಿಪುಲವಾಗಿರುತ್ತದೆ.

ಸನ್ಮಾನ್ಯ ಡಾ॥ ರಾಧಾಕೃಷ್ಣನ್ ಅವರೂ ಅವರ ಹಿಂಬಾಲಕರೂ ಪ್ರಾಚೀನ ಸಮಾಜದ ಬಗ್ಗೆ ನಿರರ್ಗಳವಾಗಿ ಮಾತನಾಡುವಾಗ ಒಮ್ಮೆಯಾದರೂ ಇಂತಹ ವಾಕ್ಯಗಳತ್ತ ತಮ್ಮ ದೃಷ್ಟಿಯನ್ನು ಹರಿಸಿದ್ದರೆ ವೈಜ್ಞಾನಿಕ ವಿಶ್ಲೇಷಣೆಗೆ ಅವಕಾಶ ಮಾಡಿಕೊಂಡಂತಾಗುತ್ತಿತ್ತು. ಇಂದು ಹೋರಾಟ ನಡೆಸಲು ಸನ್ನದ್ಧರಾಗಿರುವವರನ್ನು ನಿಶ್ಶಸ್ತ್ರಗೊಳಿಸುವುದೇ ತಮ್ಮ ಗುರಿಯನ್ನಾಗಿಟ್ಟುಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳ ಈ ನೆಚ್ಚಿನ ಭಂಟರು ಅದನ್ನೇಕೆ ಮಾಡಿಯಾರು ? ಆಪಸ್ತಂಬರು ಗುಣಕರ್ಮಗಳ ಆಧಾರದ ಮೇಲೆ ವರ್ಣವಿಭಾಗವನ್ನು ಒತ್ತಟ್ಟಿಗಿಟ್ಟು ಜನ್ಮದಿಂದಲೇ ಅದು ನಿರ್ಧರಿಸಲ್ಪಟ್ಟಿದೆಯೆಂದು ಸೂಚಿಸಿರುವುದು ಈ ಮಹಾನ್ ದಾರ್ಶನಿಕರಿಗೆ ಕೊಡಲಿ ಪೆಟ್ಟಿನಂತಿದೆಯಾದ್ದರಿಂದ ಅಂತಹ ಒಂದು ವಿಶ್ಲೇಷಣೆ ನಡೆದಿದೆಯೆಂಬುದನ್ನು ಸಹ ಅವರು ಮುಚ್ಚಿಡುತ್ತಾರೆ. ಆದರೂ ಅವರೇ ನಮ್ಮ ಉದಾತ್ತ ತತ್ತ್ವವೇತ್ತರುಗಳು ! ಜಾತಿಯನ್ನು ಕುರಿತು ಚರ್ಚೆ ಮಾಡುವಾಗ ಗೀತೆಯನ್ನು ಉದ್ಧರಿಸುವುದಕ್ಕಿಂತಲೂ ಆಪಸ್ತಂಬ ಸೂತ್ರವನ್ನು ಉದ್ಧರಿಸುವುದು ಹೆಚ್ಚು ಸೂಕ್ತ. ಏಕೆಂದರೆ, ದ್ವಿಜರು ತಾವೆಂದು ಭಾವಿಸಿರುವ ಶ್ರೋತ್ರಿಯರು ತಮ್ಮ ಪ್ರವರ ಗೋತ್ರಗಳನ್ನು ಹೇಳಿಕೊಳ್ಳುವಾಗ ''ನಾನು ಆಪಸ್ತಂಬ ಸೂತ್ರದವನು'', ''ನಾನು ಬೌಧಾಯನ ಸೂತ್ರದವನು'', ''ನಾನು ಆಶ್ವಲಾಯನ ಸೂತ್ರದವನು'', ಎಂಬಿತ್ಯಾದಿಯಾಗಿ ಹೇಳುತ್ತಾರೆ. ''ಗೀತೆಯಲ್ಲಿ ಹೇಳಿರುವಂತೆ ಗುಣಕರ್ಮಗಳಿಂದಾಗಿ ನಾನು ಬ್ರಾಹ್ಮಣನಾಗಿದ್ದೇನೆ'', ಎಂದು ಯಾವ ಕಾಲದಲ್ಲೂ ಗೋತ್ರಗಳನ್ನು ಪಠಿಸಿದುದಿಲ್ಲ. ಜಾತಿ ವಿಭೇದವನ್ನು ತೊಡೆದುಹಾಕುವುದರ ವಿರುದ್ಧ ಬುದ್ಧಿವಂತಿಕೆಯಿಂದ ಇಂದಿನ 'ಪಂಡಿತರು' ಪಾಮರರನ್ನು ಹೇಗೆ ಮೋಸಗೊಳಿಸಿ ಪ್ರಾಚೀನ ಸಮಾಜದತ್ತ ಬೆರಳು ತೋರಿಸುತ್ತಾರೋ ಹಾಗೆಯೇ ಗೀತಾಚಾರ್ಯರೂ ಸಹ ಮರ್ಮದಿಂದ ಅಂದಿನ ಸಮಾಜದ ಘಾತುಕತೆಯನ್ನು ಮುಚ್ಚಿಡಲು

ಪ್ರಯತ್ನಿಸಿದ್ದಾರೆಂದು ನನ್ನ ಅನಿಸಿಕೆ. ಚೀಣಾದ ತವೋ ಸಿದ್ಧಾಂತದಲ್ಲಿ ಒಂದೆಡೆ ಹೀಗಿದೆ: ''ನಾಚಿಕೆಗೆಟ್ಟವನು ಶ್ರೀಮಂತನಾಗುತ್ತಾನೆ ಮತ್ತು ಒಳ್ಳೆಯ ಮಾತನಾಡುವವನು ದೊಡ್ಡ ಅಧಿಕಾರಿಯಾಗುತ್ತಾನೆ. ಚಿಕ್ಕ ಪುಟ್ಟ ಕಳ್ಳರನ್ನು ಕಾರಾಗೃಹದಲ್ಲಿಡುತ್ತಾರೆ, ಆದರೆ ದರೋಡೆಕೋರರು ಊಳಿಗಮಾನ್ಯ ಪದ್ಧತಿಯಲ್ಲಿ ಪಾಳೇಗಾರರಾಗುತ್ತಾರೆ. ಆ ಪಾಳೇಗಾರರ ಮನೆಯ ಬಾಗಿಲಿನಲ್ಲೇ ನೀವು ಕಾಣುವುದು ಆ ಎಲ್ಲ ಧಾರ್ಮಿಕ ಪಂಡಿತರುಗಳನ್ನು! ಯಾರನ್ನು ನಾವು ಧೀಮಂತರೆಂದು ಗೌರವಿಸುತ್ತೇವೋ ಅವರೆಲ್ಲಾ ಹಗಲುಗಳ್ಳರ ಕಾರ್ಯಭಾರಿಗಳಾಗಿಲ್ಲವೇ ? ಈ ಪಂಡಿತರುಗಳು ಹಗಲುಗಳ್ಳರ ಹಿತಾಸಕ್ತಿಗಳನ್ನು ಕಾಪಾಡಹೊರಟಿರುವವರೇ ಅಲ್ಲವೇ ?'' ಜಾತಿ-ವರ್ಣದ ಪ್ರಶ್ನೆಯನ್ನು ಬಾಲಿಶವಾಗಿ ವಿವರಿಸುವ ನಮ್ಮ ವಿದ್ವಾಂಸರುಗಳನ್ನು ಇದಕ್ಕಿಂತಲೂ ನೈಜವಾಗಿಯೂ ಕಟುವಾಗಿಯೂ ಟೀಕಿಸಲು ಸಾಧ್ಯವಿಲ್ಲ.

ಹೇಗೂ ಸರಿ, ಈಗಂತೂ ಜಾತಿಗಳಿವೆ. ಕಣ್ಣು ಮುಚ್ಚಿ ಕೂತರೆ ಅದು ಇಲ್ಲವಾಗುವುದಿಲ್ಲ. ಸನಾತನ ಧರ್ಮದ ಜಪ ಮಾಡುವುದರಿಂದ ಜಾತಿಭೇದದ ಅನಿಷ್ಟವನ್ನು ನಿರ್ಮೂಲನಗೊಳಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾಗಿಲ್ಲ. ಏಕೆಂದರೆ, ಇದು ಆ ಸನಾತನ ಧರ್ಮದ ಶಿಶುವೇ ಆಗಿದೆ. ಬಹಳ ಹಿಂದಿನಿಂದ ನಮ್ಮಲ್ಲಿ ಕಂಡುಬಂದಿರುವ ವಿರೋಧಾಭಾಸವು ಇಂದಿಗೂ ಅಸ್ತಿತ್ವದಲ್ಲಿದೆ. ಗಾಂಧೀಜಿಯವರಿಗಿಂತಲೂ ತೀಕ್ಷ್ಣವಾಗಿ ಜಾತಿಭೇದವನ್ನು ಧಿಕ್ಕರಿಸುವುದಾಗಲೀ, ತಿರಸ್ಕರಿಸುವುದಾಗಲೀ ಸಾಧ್ಯವಾಗಲಾರದು. ಆದರೂ ಆ ಮಹಾತ್ಮರು ತಮ್ಮನ್ನು ತಾವು ಸನಾತನ ಧರ್ಮದವರೆಂದು ಬಣ್ಣಿಸಿಕೊಂಡರು! ''ಸರ್ವೇ ಜನಾಸ್ಸುಖಿನೋ ಭವಂತು'' ಎಂಬುದೇ ಸನಾತನ ಧರ್ಮವಿರಬಹುದು. ''ಸರ್ವೇ ಜನಾಃ ಕಥಂ ಕೇನ ಮಾರ್ಗೇಣ ಸುಖಿನೋ ಭವಂತಿ'* ಎಂಬ ಪ್ರಶ್ನೆ ಉಳಿದೇ ಇದೆ. ''ಬಡವರೇ ದೈವಕೃಪೆಗೊಳಗಾದವರು, ಏಕೆಂದರೆ ಸ್ವರ್ಗದ ಸಾಮ್ರಾಜ್ಯ ಅವರದಾಗುತ್ತದೆ'', ಎಂಬ ಮಾತು ಹೇಗೆ ಕಳಂಕಪೂರಿತವೋ ಹಾಗೇ ಇದೂ ಕೂಡ. ಸತ್ಯಕಾಮ ಜಾಬಾಲಿಯ ಹೆಸರನ್ನೋ, ವಾಲ್ಮೀಕಿಯ ಹೆಸರನ್ನೋ ಹೇಳಿ ಸನಾತನ ಧರ್ಮದ ಮನೋವೈಶಾಲ್ಯವನ್ನು ನಿರೂಪಿಸುವವರು ಏಕಲವ್ಯ-ಕರ್ಣ-ಶಂಬೂಕ ಇತ್ಯಾದಿಗಳನ್ನೂ ಸ್ಮರಿಸಿಕೊಂಡರೆ ಒಳಿತು. ನಮಗೆ ಸಂತಸವೀಯುವಂತಹದಲ್ಲವಾದರೂ ಈ ಜಾತಿಭೇದದ ಮೂಲಭೂತವಾದ ಅಂಶವು ಪರಂಪರಾಗತವಾದ ನಮ್ಮ ಧರ್ಮದ ಒಂದು ಭಾಗವಾಗಿದೆ ಎಂಬುದನ್ನು ತಳ್ಳಿಹಾಕಲಾಗುವುದಿಲ್ಲ. ಧರ್ಮದಿಂದ ನಡೆಯುವುದು ಸರಿಯಲ್ಲವೆಂಬ ದೃಷ್ಟಿಯಿಂದ 'ಧರ್ಮ' ಎಂಬ ಪದದ ಪ್ರಯೋಗವನ್ನು ಇಲ್ಲಿ ಮಾಡಿಲ್ಲ. ಧರ್ಮವೆಂದರೆ ಜೀವನವನ್ನು ಕುರಿತಾದ ಒಂದು ಪ್ರಜ್ಞೆ, ಪರಿಸರದ ವ್ಯವಸ್ಥೆಗೆ ಸಂಬಂಧಿಸಿದಂತೆ ಒಂದು ದೃಷ್ಟಿ, ಗುರಿಗೆ ಸಂಬಂಧಿಸಿದಂತೆ ಒಂದು ನಿರೂಪಣೆ, ಮತ್ತು ವಿಶ್ವಸೃಷ್ಟಿಯ ಬಗೆಗೆ ಒಂದು ನಿರ್ಧಾರ. ಸಾಮಾನ್ಯ ಅವಲೋಕನದಿಂದ ಗುರುತಿಸಲಾಗದ ಮತ್ತು ತಿಳಿಯಲಾಗದ ಅನೇಕ ಉದಾತ್ತ ಸವಾಲುಗಳಿಗೆ ಸೂಕ್ತವಾದ ಪರಿಹಾರ ಕಂಡುಕೊಳ್ಳಬೇಕೆಂಬ ತೀವ್ರ ಸಂವೇದನೆಯೇ ಜ್ಞಾನ-ವಿಜ್ಞಾನಗಳ ಮೂಲಾಧಾರ. ಒಂದು ಪ್ರಶ್ನೆಗೆ ಉತ್ತರವನ್ನೇ ಕೊಡದಿರಲು ಅಥವಾ ಪ್ರಶ್ನೆಯನ್ನೇ ಮರೆಯಲು ಮಾನವನ ಮನಸ್ಸು ತಯಾರಿಲ್ಲ. ಸರಿಯಾದೊಂದು ಉತ್ತರ ಸಿಗುವವರೆಗಾದರೂ ಹಂಗಾಮಿ ಉತ್ತರಗಳನ್ನು ಸ್ವೀಕರಿಸುವುದು ಸ್ವಭಾವ. ಜೀವನದಲ್ಲಿ – ವಿಶೇಷತಃ ಮೃತ್ಯುವಿಗೆ ಸಂಬಂಧಿಸಿದಂತೆ – ಇಂತಹ ಹಲವಾರು ಪ್ರಶ್ನೆಗಳಿವೆ. ಚಾರಿತ್ರಿಕವಾಗಿ ಯಾವೊಂದು ಕಾಲದಲ್ಲೂ ಜ್ಞಾನವು ಪೂರ್ಣವಾಗಲೀ, ಸಮಗ್ರವಾಗಲೀ ಆಗಿದ್ದು, ಇನ್ನು ಮುನ್ನಡೆ ಸಾಧ್ಯವಿಲ್ಲವೆಂದು ಹೇಳುವಂತೆ ಇರಲಿಲ್ಲ. ಮುಂದೆಯೂ ಈ ಪರಿಸ್ಥಿತಿ ಅಂತೆಯೇ

ಇರಬಹುದೆಂದು ತರ್ಕಿಸಲೂಬಹುದು. ಹಾಗಿದ್ದಾಗ್ಯೂ ನಮ್ಮ ಧರ್ಮಗಳೆಲ್ಲಾ ಸಾರುವುದೇನು ? ಅವುಗಳು ನೀಡುವ 'ಜ್ಞಾನ' ಪೂರ್ಣ, ಪರಿಪಕ್ವ, ನಿತ್ಯ, ಅನಂತ, ಸರ್ವಕಾಲಾಬಾಧಿತ, ಮುಕ್ತಿಗೆ 'ಏಕೈಕ ಮಾರ್ಗ', ಇತ್ಯಾದಿ. ಹೀಗಾಗಿ ನಮಗೀಗ ಇಪ್ಪತ್ತಕ್ಕೂ ಹೆಚ್ಚು 'ಏಕೈಕ ಮಾರ್ಗ'ಗಳ ಪರಿಜ್ಞಾನ ದೊರಕಲು ಸಾಧ್ಯ.

ಈ ಧರ್ಮಗಳೆಲ್ಲಾ ಕೇವಲ ಬೌದ್ಧಿಕ ಅಥವಾ ದಾರ್ಶನಿಕ ಮಟ್ಟದಲ್ಲೇ ಇದ್ದಿದ್ದರೆ ಬಾಧಕವೇನೂ ಇರುತ್ತಿರಲಿಲ್ಲ. ಆದರೆ ಅವು ಸಮಾಜದಲ್ಲಿ ಹೊಕ್ಕು ಜೀವನವನ್ನು ಕಲುಷಿತಗೊಳಿಸಿವೆ. ಮೇಧಾವಿಗಳ ಕೈಗೆ ಸಿಕ್ಕಿ ಈ ಧರ್ಮಗಳು ವಜ್ರಾಯುಧಗಳಾಗಿ ಶೋಷಣೆಯ ಸಾಧನಗಳಾಗಿವೆ. ಬಿರ್ಲಾ ಮಹಾಶಯರಿಗಿಂತ ದೊಡ್ಡ ಜೈನ ಮತಾನುಯಾಯಿ ಬೇಕೇ ? ಆ ಸಾಧುಶಿಖಾಮಣಿಯು ಕಟ್ಟಿಸಿರುವ ದೇವಸ್ಥಾನಗಳು ಅವರು ಕೊಡಬೇಕಾದ, ಆದರೆ ಕೊಟ್ಟಿರದ, ಆದಾಯ ತೆರಿಗೆಗೆ ಸಮಾನವಾಗಿರಲಾರದೆಂದು ನನ್ನ ಊಹೆ! ನನ್ನ ವಾದವಿಷ್ಟೆ: ಧರ್ಮದ ಹೆಸರಿನಲ್ಲಿ ನಡೆಸುವ ಅನಾಚಾರದಿಂದ ಉತ್ಪಾದನಾಸಾಮಗ್ರಿಗಳ ಮತ್ತು ತನ್ಮೂಲಕ ಕೆಲಸಗಾರರ ಮೇಲಿನ ಹಿಡಿತ ಭದ್ರವಾಗುವುದಾದರೆ, ನಮ್ಮಿಂದ ಆರಿಸಲ್ಪಡದಿದ್ದವರು ಸಂವಿಧಾನದಲ್ಲಿ ನಮೂದಿಸಿದ ಮೂಲಭೂತ ಹಕ್ಕುಗಳ ಬಗ್ಗೆ ಹೇಗೆ ಉದ್ವೇಗದಿಂದ ಅರಚಬಹುದೋ ಹಾಗೆಯೇ ಧರ್ಮದ ಬಗೆಗೂ ಅರಚಬಹುದು. ಜಾತಿಯ ಬಗ್ಗೆ ಹಾಗೆ ಅರಚಿದರೆ ಮುಖಮಾರ್ಜನವಾದೀತೆಂದು ಬೆದರಿ ಅದರ ಬಗೆಗಿನ ಭಾವನೆಗಳನ್ನು ತಮ್ಮಲ್ಲೇ ಹುದುಗಿಸಿಕೊಂಡು ಜಾತಿಭೇದಕ್ಕೆ ಒಳಗೊಳಗೇ ಕುಮ್ಮಕ್ಕು ನೀಡಬಹುದು. ಅದೇ ಬಂಡವಾಳ ಧರ್ಮದ ಒಂದು ಧಾರ್ಮಿಕ ನಡವಳಿಕೆ. ಹತ್ತೊಂಬತ್ತನೆಯ ಶತಮಾನದಲ್ಲಿ ಆಳುವ ಶ್ರೀಮಂತ ವರ್ಗ ಯೂರೋಪಿನಲ್ಲಿ ಹೀಗೆ ನುಡಿಯಿತಂತೆ : ''ಕರ್ತವ್ಯನಿಷ್ಠೆಯನ್ನು ಕುರಿತ ಮಾತುಗಳು ನಮಗೆ ; ಕ್ರೈಸ್ತಧರ್ಮದ ಪರಿಪಾಲನೆಯು ಜನಸಾಮಾನ್ಯನಿಗೆ''. ಎಂದರೆ ಅರ್ಥವಿಷ್ಟೆ: ಕ್ರೈಸ್ತಧರ್ಮದ ಹಿಂದಿನ ಸಾಧುಸಂತರು ಜನಸಾಮಾನ್ಯರ ಆತ್ಮೋದ್ಧಾರಕ್ಕಾಗಿ ತಮ್ಮ ದೇಹಗಳನ್ನು ದಂಡಿಸಿಕೊಂಡರು ; ಇಂದಿನ ಆಧುನಿಕ ವಿದ್ಯಾವಂತ ಸಾಧುವು ತನ್ನ ಆತ್ಮೋದ್ಧಾರಕ್ಕಾಗಿ ಜನಸಾಮಾನ್ಯರ ದೇಹಗಳನ್ನು ದಂಡಿಸುತ್ತಾನೆ !

ಸಮಾಜದಲ್ಲಿನ ವರ್ಗವಿಭಜನೆಯನ್ನು ಬದಲಾಗದಂತೆ ನೋಡಿಕೊಳ್ಳಲು ಸಾಧ್ಯವೆಂಬ ಮೂಢನಂಬಿಕೆಯಿಂದ ಪ್ರೇರಿತವಾದ ಕೆಲವು ಆಯುಧಗಳಲ್ಲಿ ಧರ್ಮವೂ ಒಂದು. ಕಾನೂನು, ಉತ್ಪಾದನಾ ಸಾಮಗ್ರಿಯಾಗಿ ಉಪಯೋಗಿಸಲ್ಪಡುವ ಖಾಸಗಿ ಆಸ್ತಿಯ ಶ್ರೇಷ್ಠತೆಯನ್ನು ಸಾರುವುದು, ಪ್ರಭುತ್ವದ ಸಂಯೋಜನೆಯು ಶೋಷಕ ವರ್ಗವನ್ನು ರಕ್ಷಿಸಲು ಉಪಕಾರಿಯಂತಿರುವುದು, ವಿದ್ಯಾಭ್ಯಾಸಕ್ರಮವನ್ನು ಇದಕ್ಕೆ ಅನುಗುಣವಾಗಿ ರೂಪಿಸಿ ಕೊಳ್ಳುವುದು, – ಇತ್ಯಾದಿಗಳಂತೆ ಧರ್ಮವೂ ಒಂದು ಅಸ್ತ್ರ ಈ ಅಸ್ತ್ರವನ್ನು ನಾಶಪಡಿಸದ ಹೊರತು ಜಾತಿಭೇದದಿಂದ ಉದ್ಭವಿಸಿರುವ ನೀಚ ಮತ್ತು ಅಮಾನುಷ ಅವ್ಯವಸ್ಥೆಗಳು ಕೊನೆಗಾಣವು. ಎಲ್ಲ ಧರ್ಮಗಳೂ ಅಸ್ತ್ರರೂಪದಲ್ಲಿರುವುದರಿಂದ ಅವೆಲ್ಲವನ್ನೂ ಒಟ್ಟಿಗೇ ಹೂತು ಆ ಜಾಗದಲ್ಲಿ ವೈಜ್ಞಾನಿಕ ವಿಶ್ಲೇಷಣೆಯ ಸಸಿಯನ್ನು ನೆಡಬೇಕು. ಮೂಢನಂಬಿಕೆಗಳ ವಿರುದ್ಧ ಅತ್ಯಂತ ಕಳಕಳಿಯಿಂದ ಸಮರವನ್ನೆಸಗುವವರು ಕೆಲವರು ಸಮಾಜದ ವಿಶ್ಲೇಷಣೆಗೆ ವೈಜ್ಞಾನಿಕ ತತ್ವಗಳನ್ನು ಉಪಯೋಗಿಸಲು ಹಿಂಜರಿಯುವುದು ಕೆಲವೊಮ್ಮೆ ಅವರ ಧರ್ಮದ ನೆಂಟಸ್ತನದಿಂದ ಒದಗುವ ಪೇಚಾಟವೆಂದು ತೋರುತ್ತದೆ. ವಿಶ್ವದ ಇತಿಹಾಸದ ಪುಟಗಳಲ್ಲಿ ವರ್ಗಸಮರದ ಘಟನೆಗಳು ಅಚ್ಚಳಿಯದಂತೆ ನಿಂತಿವೆ. ವರ್ಗಸಮರದ ಸ್ವರೂಪ ಎಲ್ಲೆಡೆಯಲ್ಲೂ ಮತ್ತು ಯಾವಾಗಲೂ ಒಂದೇ ತೆರನಾದದ್ದಲ್ಲ. ನಮ್ಮ ಹಿಂದಿನ ವರ್ಣನೀತಿ,

ನಂತರದ ಜಾತಿವಿಭೇದ, ಮಧ್ಯಯುಗದ ಊಳಿಗಮಾನ್ಯತೆ, ಇಂದು ಉಳಿದಿರುವ ಅದರ ಪ್ರಭೇದಗಳು, ವಸಾಹತಾಗಿ ಬೆಳೆದಾಗ ತೋರಿಬಂದ ಬಂಡವಾಳಶಾಹೀ ಕುನೀತಿ, ಅದರ ಇಂದಿನ ಮೂರ್ತಸ್ವರೂಪ, ಇವೆಲ್ಲಾ ವರ್ಗವಿಭಜನೆ ಹಾಗೂ ಅದರ ಪರಿಣಾಮವಾಗಿ ಬೆಳೆಯುವ ವರ್ಗಸಮರದ ವಿವಿಧ ಸ್ವರೂಪಗಳೇ.

ವರ್ಣ, ಜಾತಿ, ವರ್ಗ, ಈ ರೀತಿಯ ವಿಭಜನೆಯು ಸಮಾಜದ ಚಾರಿತ್ರಿಕ ಬೆಳವಣಿಗೆಯ ಘಟ್ಟಗಳು. ನಮ್ಮಲ್ಲಿ ಇನ್ನೂ ವರ್ಗಪ್ರಜ್ಞೆಯು ಸಾಕಷ್ಟು ಪರಿಣಾಮಕಾರಿಯಾಗಬಲ್ಲ ರೂಪದಲ್ಲಿ ಮೂಡಿಬಂದಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಆ ಪ್ರಜ್ಞೆಯು ಸಾಕಷ್ಟು ಬೆಳೆದರೆ ಅದು ವರ್ಗ ಸಮರದ ಅಂತಿಮಘಟ್ಟವೂ ಆಗಬಲ್ಲದು. ಆ ದಿಶೆಯಲ್ಲಿ ಹೋಗುವಾಗ ಜಾತಿಕಟ್ಟಳೆಯನ್ನು ವಿರೋಧಿಸಿ, ಅದನ್ನು ತೊಡೆದುಹಾಕಬೇಕಾದುದು ಅತ್ಯಂತ ಅಗತ್ಯವಾಗಿ ನೆರವೇರಿಸಬೇಕಾದ ಕರ್ತವ್ಯ. ಊಳಿಗಮಾನ್ಯ ಪದ್ಧತಿಯ ಮುಖ್ಯವಾದ ಎರಡು ಅಂಗಗಳು ನಮ್ಮಲ್ಲಿ ಉಳಿದಿವೆ : ಒಂದು ಜಾತಿಪದ್ಧತಿ, ಇನ್ನೊಂದು ಭೂಮಿಯ ಮೇಲಿನ ಒಡೆತನದ ಪ್ರಕಾರಗಳು. ಒಂದು ಇನ್ನೊಂದಕ್ಕೆ ಪೂರಕವಾಗಿರುವುದರಿಂದ ಭೂಮಾಲೀಕತ್ವದ ಸ್ವರೂಪವು ಮೂಲಭೂತವಾಗಿ ಬದಲಾಗದೆ ಜಾತಿಪದ್ಧತಿಯು ಸರ್ವನಾಶವಾಗಲಾರದು. ಜೀತಪದ್ಧತಿಯ ನಿರ್ಮೂಲನವೂ ಇದಕ್ಕೆ ಸಂಬಂಧಿಸಿದೆ.

ಖಾಸಗಿ ಆಸ್ತಿಯ ಶ್ರೇಷ್ಠತೆಯನ್ನು ಸಾರಿ ಅದನ್ನು ರಕ್ಷಿಸಿರುವ ನಮ್ಮ ಮಹಾ ಸಂವಿಧಾನವು ಅಸ್ಪೃಶ್ಯತೆಯನ್ನು ನಿವಾರಿಸಿದ್ದರೂ ಅದು ಏಕೆ ನಿವಾರಣೆಯಾಗಿಲ್ಲವೆಂಬ ಒಂದು ಪ್ರಶ್ನೆ ಜಟಿಲವಾಗಿ ಕಂಡರೂ ನಿಜಕ್ಕೂ ಅದು ಜಟಿಲವಲ್ಲ. ಅದರ ನಿವಾರಣೆಗೆ ಬೇಕಾದ ಪರಿಸ್ಥಿತಿ ಮತ್ತು ವ್ಯವಸ್ಥೆಯನ್ನು ನಾವು ನಿರ್ಮಿಸಿಲ್ಲ. ನಮ್ಮ ಊಳಿಗಮಾನ್ಯ ಪದ್ಧತಿ ಅದಕ್ಕೆ ಅಡ್ಡಿಯನ್ನು ತರುತ್ತದೆ. ಅಸ್ಪೃಶ್ಯರನ್ನು ಹರಿಜನರನ್ನಾಗಿ ಪರಿವರ್ತಿಸಿ ನಮ್ಮ ಅಂತಃಕರಣವನ್ನು ಪರಿಶುದ್ಧಿಗೊಳಿಸಿಕೊಂಡೆವೆಂದು ಭಾವಿಸಿದರೆ ಅದು ಒಂದು ರೀತಿಯ ಸುಧಾರಣೆ. ಅವರಿಗೆ ದೇವಸ್ಥಾನಕ್ಕೆ ಪ್ರವೇಶವನ್ನು ದೊರಕಿಸಿದರೆ ಇನ್ನೂ ಭಾರೀ ಸುಧಾರಣೆ. ಇವೆಲ್ಲವನ್ನೂ ಮರೆತು ಅವರನ್ನು ಮಾನವರಂತೆ ಕಂಡರೆ ಅದು ಕ್ರಾಂತಿ ಎನಿಸಿಕೊಂಡೀತು. ಅವರಾಗಲೀ ಬೇರೆಯವರಾಗಲೀ ದೇವಸ್ಥಾನಕ್ಕೆ ಹೋಗದಿದ್ದರೆ ಯಾವ ದೇವರೂ ಬೊಬ್ಬೆ ಹಾಕಬೇಕಾಗಿಲ್ಲ. ಆದರೆ ಅವರನ್ನು ಸಮಾಜದಲ್ಲಿ ತುಚ್ಛವಾಗಿ ಕಾಣುವುದು ಅಮಾನುಷವೆಂದೇ ನನ್ನ ನಂಬಿಕೆ. ಖಾಸಗಿ ಆಸ್ತಿಯನ್ನು ರಕ್ಷಿಸಿ ಶೋಷಣೆಯನ್ನು ಸುಭದ್ರವಾಗಿಸಲು ಇರುವ ಪರಿಸ್ಥಿತಿಯನ್ನು ಸಂವಿಧಾನವು ಪ್ರತಿಬಿಂಬಿಸುತ್ತದೆ. ಆದರೆ ಅಸ್ಪೃಶ್ಯತೆಯ ನಿವಾರಣೆಗೆ ಬೇಕಾದ ಪರಿಸ್ಥಿತಿ ಉಂಟಾಗದಿದ್ದರೂ ಅದರ ಸಂಬಂಧದಲ್ಲಿ ಉದಾರವಾಗಿ ಘೋಷಣೆ ಮಾಡಿದೆ. ಇದು ಜಾತಿ ವಿಭಜನೆಗೂ ಅನ್ವಯಿಸುತ್ತದೆ. ಗಾಂಧೀಜಿಯವರ ಅವಿಶ್ರಾಂತ ಹೋರಾಟವು ಮೂಲಭೂತವಾದ ಪ್ರಶ್ನೆಗೆ ಆದ್ಯತೆ ನೀಡದಿದ್ದುದರ ಫಲವಿದೆಂದು ಬಹಳ ಸಂಕಟದಿಂದ ಹೇಳಬೇಕಾಗಿದೆ. ಈ ಸಂಬಂಧದಲ್ಲಿ ಇನ್ನೊಂದು ಮಾತು : ಹಿಂದೆ ಸಂವಿಧಾನಕ್ಕೆ ತಿದ್ದುಪಡಿಗಳನ್ನು ಸೂಚಿಸಿದ್ದ ಕಾಂಗ್ರೆಸ್ಸಿನ ಸ್ವರಣ ಸಿಂಗ್ ಸಮಿತಿಯು ಖಾಸಗಿ ಆಸ್ತಿಯ ಹಕ್ಕನ್ನು ತೊಡೆದುಹಾಕಬೇಕೆಂಬ ವಾದವನ್ನು ತಿರಸ್ಕರಿಸಿತ್ತು. ಖಾಸಗಿ ಆಸ್ತಿಯ ನಿಯಂತ್ರಣವಿಲ್ಲದೆಯೇ ಸಮಾಜವಾದವನ್ನು ಜಾರಿಗೆ ತರುವುದಾಗಿ ಹೇಳಿ ನಮ್ಮ ರಾಷ್ಟ್ರದ ಗುರಿಯಲ್ಲಿ ಸಮಾಜವಾದವನ್ನು ಸೇರಿಸಲಾಗುತ್ತಿದೆ. ಅಂದಿನ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯವರಂತೂ ಬಂಡವಳಿಗರಿಗೆ ಅವರ ಆಸ್ತಿಗಳ ಬಗ್ಗೆ ಆಶ್ವಾಸನೆ ನೀಡಿ ಸಮಾಜವಾದಕ್ಕೂ ಆಸ್ತಿಯ ಹಕ್ಕಿಗೂ ಯಾವ ವಿರೋಧವೂ ಇಲ್ಲವೆಂದು ತಿಳಿಸಿದ್ದರು. ಈ ಬುದ್ಧಿವಂತಿಕೆಯ

ರಾಜಕೀಯವನ್ನು ಬಯಲು ಮಾಡಬೇಕು.

ಹಿಂದಿನ ನಮ್ಮ ಕುಶಲಕರ್ಮಿಗಳ ವ್ಯವಸ್ಥೆಯು ಜಾತಿಪದ್ಧತಿಗೆ ತೊಂದರೆಯನ್ನುಂಟು ಮಾಡುವಂತಿರಲಿಲ್ಲ. ಆದರೆ ಔದ್ಯಮೀಕರಣವು ಜಾತಿಪದ್ಧತಿಯನ್ನು ಅಸ್ತವ್ಯಸ್ತಗೊಳಿಸುತ್ತದೆ ಎಂಬುದೊಂದು ಶುಭ ಸಮಾಚಾರ. ವೇದ-ವೇದಾಂತವನ್ನೋದದೆ ಉಪಾಕರ್ಮದಲ್ಲಿ ಭಾಗಿಯಾಗುವ ಶುದ್ಧಬ್ರಾಹ್ಮಣ, ಭಾರತೀಯ ಸಮಾಜದ ಇತಿಹಾಸವನ್ನು ಓದಿ ತಿಳಿಯಲು ಇಚ್ಛಿಸದ ಭಾರತೀಯ ಸಂಸ್ಕೃತಿಯ ಸೋಲೇಜೆಂಟ್, ಗುಟ್ಟುಗುಟ್ಟಾಗಿ ಜಾತಿ ಸಮ್ಮೇಳನಗಳಲ್ಲಿ ಭಾಗವಹಿಸುವ ವಿಶಾಲ ಮನೋಭಾವದ ನಮ್ಮ ಪ್ರಜ್ಞಾವಂತ ಮರ್ಯಾದಸ್ಥರು, ಎಲ್ಲರೂ ಇಂದು ಒಂದಲ್ಲ ಒಂದು ರೀತಿಯಲ್ಲಿ ಉತ್ಪಾದನಾಕಾರ್ಯದಲ್ಲಿ ಮೇಲುಕೀಳೆಂಬ ಭೇದವಿಲ್ಲದೆ ಭಾಗಿಗಳಾಗಿದ್ದಾರೆ. ಸಮಾಜದಲ್ಲಿ ಉಂಟಾಗುವ ಪರಿವರ್ತನೆಯಿಂದ ಎಲ್ಲಿ ತಮ್ಮ ಸ್ಥಾನಮಾನಗಳಿಗೆ ಚ್ಯುತಿ ಬರುತ್ತದೋ ಎಂದು ಗಾಬರಿಯಾಗಿ ಮನೆಗಳಲ್ಲಿ ತಮ್ಮ ತಮ್ಮ ಜಾತಿಗಳನ್ನು ನಗರದ ಸಭ್ಯಜನ ಪಾಲಿಸಿಕೊಂಡು ಬರುತ್ತಿದ್ದಾರೆ. ಆ ಜಾತಿಯು ಒಂದು 'ನಾಮದ ಬಲ'ವಾಗಿದ್ದರಂತೂ (ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೊ) ಇನ್ನೂ ಸರಿ. ಪ್ರಜ್ಞಾಪೂರ್ವಕವಾಗಿ ನಾವಿದನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆಯೋ ಎಂಬ ಭಾವನೆಯೂ ಸಹಜವಾಗಿಯೇ ಬಂದೀತು.

ನಮ್ಮ ಇರುವಿಕೆಯ ವಸ್ತುಸ್ಥಿತಿ ನಮ್ಮ ಪ್ರಜ್ಞೆಯನ್ನು ರೂಪಿಸುತ್ತದೆ. ಜಾತಿ ವಿಭಾಗದಿಂದ ಕಂದಿಹೋಗಿರುವ ಸಮಾಜದ ಕ್ಷುದ್ರಪ್ರಜ್ಞೆಯು ಆ ಜಾತಿವಿಭಾಗವನ್ನು ಮತ್ತೆ ಭದ್ರಪಡಿಸಲು ಯತ್ನಿಸಿದರೆ ಅಚ್ಚರಿಯೇನಿಲ್ಲ. ಆದರೆ ಶೋಷಿತವರ್ಗಕ್ಕೂ ಒಂದು ಪ್ರಜ್ಞೆ ಇದೆ, ಅದೂ ಬೆಳೆಯುತ್ತದೆ, ಅದೂ ಸೆಟೆದೆದ್ದು ಈ ಕಳಂಕವನ್ನು ಕಿತ್ತೊಗೆಯುತ್ತದೆ, ಮತ್ತು ಪರತಂತ್ರ ಜೀವಿಗಳನ್ನು ಸಾಮಾನ್ಯ ಮನುಷ್ಯನ ಮಟ್ಟಕ್ಕೇರಿಸಲು ಪ್ರಯತ್ನಿಸಿ ಸಫಲವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಜನತೆಯು ತಮ್ಮ ವಿಮುಕ್ತಿಗಾಗಿ ಹೋರಾಟ ನಡೆಸಲೇಬೇಕು. ಇಂದಿನ ಸಮಾಜವು ನಿರೋಧಕ ಶಕ್ತಿಗಳನ್ನೆಲ್ಲಾ ಸೋಲಿಸಿ ಆರ್ಥಿಕವಾಗಿ ಒಂದು ಉನ್ನತ ಮಟ್ಟಕ್ಕೆ ಏರುವ ಹಾದಿಯಲ್ಲಿ ಸಾಗಿಯೇ ತೀರುತ್ತದೆ. ಈ ಚಾರಿತ್ರಿಕ ಘಟ್ಟದಲ್ಲಿ ಜನತೆಯು ಹೋರಾಟಕ್ಕೆ ಸನ್ನದ್ಧವಾಗುವುದು ಅತ್ಯವಶ್ಯಕ. ಈ ಕಾರ್ಯದಲ್ಲಿ ತೊಡಗಿದಾಗ ಹಲವಾರು ಸನ್ನಿವೇಶಗಳನ್ನೂ ವ್ಯಕ್ತಿಗಳನ್ನೂ ಬದಲಾಯಿಸಬೇಕಾಗುವ ಸಂಭವವಿದೆ. ನವೀನ ಸಮಾಜದ ಸೃಷ್ಟಿಗೆ ತಡೆಯನ್ನುಂಟುಮಾಡುವ ಶಕ್ತಿಗಳನ್ನು ತೊಡೆದುಹಾಕುವುದೇ ಜನತೆಯ ಧ್ಯೇಯ. ಇಂದಿನ ನಾರುತ್ತಿರುವ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ಪದ್ಧತಿಗಳಲ್ಲಿ ನವೀನ ಸಮಾಜದ ಸೃಷ್ಟಿಗೆ ಬೇಕಾದ ಸಲಕರಣೆಗಳಿವೆ. ಅವುಗಳನ್ನುಪಯೋಗಿಸಿ ಎಲ್ಲ ಅನೀತಿ, ದುರಾಚಾರ ಮತ್ತು ಕ್ರೌರ್ಯಗಳನ್ನೂ ದೂರೀಕರಿಸಿದರೆ ಜಾತಿಯ ವಿನಾಶ, ವರ್ಗವಿಭಜನೆಯ ಅಂತ್ಯ, ಹಾಗೂ ಶೋಷಣೆಯ ಕೊನೆ ಸಾಧ್ಯ ಮಾತ್ರವಲ್ಲ, ಸಾಧುವೂ ಹೌದು.

*– ಕೆಂಬಾವುಟ : 1976 ಆಗಸ್ಟ್*

2

# ಸಾಹಿತ್ಯ ಮೀಮಾಂಸೆ

'ಕಲೆಗಾಗಿ ಕಲೆ' ಎನ್ನುವುದು ನಮ್ಮ ಕಾಲದಲ್ಲಿ 'ಸಂಪತ್ತಿಗಾಗಿ ಸಂಪತ್ತು', 'ವಿಜ್ಞಾನಕ್ಕಾಗಿ ವಿಜ್ಞಾನ' ಎನ್ನುವಷ್ಟೇ ವಿಚಿತ್ರ. ಮನುಷ್ಯನ ಎಲ್ಲಾ ಚಟುವಟಿಕೆಗಳು ಮಾನವಕೋಟಿಯ ಒಳಿತನ್ನು ಸಾಧಿಸಬೇಕು. ಇಲ್ಲದಿದ್ದರೆ ಅಂಥ ಚಟುವಟಿಕೆಗಳು ನಿಷ್ಪ್ರಯೋಜಕ ಹಾಗೂ ನಿರರ್ಥಕ ಕಸುಬುಗಳಾಗುತ್ತವೆ. ಸಂಪತ್ತು ಇರುವುದು ಮನುಷ್ಯನಿಗೆ ಪ್ರಯೋಜನವಾಗಲಿ ಎಂದು ; ವಿಜ್ಞಾನ ವಿರುವುದು ಮನುಷ್ಯನಿಗೆ ಮಾರ್ಗದರ್ಶಿಯಾಗಲಿ ಎಂದು. ಹೀಗೆ ಕಲೆಯೂ ಸಹ ಒಂದು ಉಪಯುಕ್ತ ಉದ್ದೇಶಸಾಧನವಾಗಬೇಕೇ ಹೊರತು ನಿಷ್ಫಲವಾದ ಹವ್ಯಾಸವಾಗಬಾರದು.

— ಚೆರ್ನಿಶೆವ್‌ಸ್ಕಿ

ಅಪ್ಪಟ, ಅಮೂರ್ತ, ನಿರುಪಾಧಿಕ, ಅಥವಾ ತಾತ್ವಿಕರು ಹೇಳುವ 'ಸರ್ವಸ್ವತಂತ್ರ' ಕಲೆ ಎಲ್ಲೂ ಇರಲಿಲ್ಲ.

— ವಿ. ಬೆಲಿನ್‌ಸ್ಕಿ

# ಕಲೆ ಮತ್ತು ಸಾಹಿತ್ಯ ಯಾರಿಗೆ ?

ದುಡಿಯುವ ಜನರ ಕಲೆಯನ್ನು ನಾವು ಪುರಸ್ಕರಿಸುತ್ತೇವೆ: ದುಡಿಯುವ ವರ್ಗದ ಚಳುವಳಿಗೆ ಅಭಿವ್ಯಕ್ತಿ ನೀಡುವ ಕಲೆ ಅದು. ಆ ಚಳುವಳಿಯ ಉದ್ದೇಶ ಸ್ಪಷ್ಟವೇ ಇದೆ; ವರ್ಗವಾಗಿ ತನ್ನ ಅಸ್ತಿತ್ವವನ್ನು ನೀಗಿಕೊಂಡು ಇಡೀ ಸಮಾಜದಲ್ಲಿ ಏಕೀಭವಿಸಿಕೊಳ್ಳುವುದೇ ಆ ಉದ್ದೇಶ.

**–ಕ್ರಿಸ್ಟಫರ್ ಕಾಡ್‌ವೆಲ್**

ವಿಶ್ವದಲ್ಲೇ ಅತ್ಯಂತ ಪ್ರಾಚೀನವಾದ ಸಾಹಿತ್ಯವು ಭಾರತದೇಶದ ವೈದಿಕಸಾಹಿತ್ಯ. ಅದನ್ನು ಕೊಂಡಾಡಿ ಅದರ ಮಹತ್ವವನ್ನು ಸಾರುವ ಜನ ನಮ್ಮಲ್ಲಿ ಹೇರಳವಾಗಿದ್ದರೂ ವಿಚಾರಾತ್ಮಕ ದೃಷ್ಟಿಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ ಅಲ್ಲಿ ಹೊರಹೊಮ್ಮುವ ಜೀವನದೃಷ್ಟಿ ಮತ್ತು ಜೀವನತತ್ವದ ಬಗೆಗೆ ಚಾರಿತ್ರಿಕ ವಿಮರ್ಶೆಯ ಆಧಾರದ ಮೇಲೆ ಬೆಳಕು ಚೆಲ್ಲುವಂತಹ ಕೃತಿಗಳು ವಿರಳವಾಗಿರುವುದು ಒಂದು ಸೋಜಿಗದ ಸಂಗತಿ. ಸಾಹಿತ್ಯಾಭ್ಯಾಸ ಮತ್ತು ಕಲೆಯ ಬಗೆಗೆ ಇಂದು ನಮ್ಮ ಸುತ್ತಣ ಸಮಾಜದಲ್ಲಿ ಕಾಣಬರುವ ಅಭಿರುಚಿಯು ಕಾರಣಾಂತರಗಳಿಂದ ಸಾಕಷ್ಟು ವ್ಯಾಪಕವಾಗಿಲ್ಲದಿರುವುದು ಯಾರ ಅನುಭವಕ್ಕಾದರೂ ಬರಲು ಸಾಧ್ಯ. ವೇದಕಾಲದ ಕವಿಗಳು ಸಮಾಜದ ಆಗುಹೋಗುಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಭಾಗವಹಿಸುತ್ತಿದ್ದ ವ್ಯಕ್ತಿಗಳು; ಸಮಾಜಕ್ಕಿಂತ ಉನ್ನತಮಟ್ಟದಲ್ಲಿದ್ದವರು ತಾವೆಂದು ಭಾವಿಸದೆ ವೈದಿಕ ಸಮಾಜದಲ್ಲಿ ಹಾಸುಹೊಕ್ಕಾಗಿ ಬೆರೆತಿದ್ದವರು; ಅಸಾಮಾನ್ಯ ಪ್ರತಿಭೆಯುಳ್ಳವರು ತಾವೆಂಬ ಮೂಢ ಹಾಗೂ ಸ್ವಪ್ರತಿಷ್ಠೆಯ ಆರಾಧಕರು ಅವರಾಗಿರಲಿಲ್ಲ. ಇದೆಲ್ಲ ಪ್ರತಿಯೊಬ್ಬ ಪ್ರಾಚೀನ ಸಾಹಿತ್ಯಾಭ್ಯಾಸಿಗೂ ತಿಳಿದ ವಿಷಯ. ಚಾರಿತ್ರಿಕ ದೃಷ್ಟಿಯಿಂದ ಇದು ಗಮನಾರ್ಹವಾದ ಅಂಶ. ಐದಾರು ಸಾವಿರ ವರ್ಷಗಳ ಹಿಂದಿನ ಸಮಾಜದ ನೀತಿನಿಯಮಗಳನ್ನು ಕುರಿತು ಇಂದು ನಮಗೆ ಹೆಚ್ಚು ವಿವಾದಾಸ್ಪದವಲ್ಲದ ಜ್ಞಾನವಿದ್ದರೆ ವೇದಕಾಲದ ಕವಿಗಳು ಅದಕ್ಕೆ ಬಹುಮಟ್ಟಿಗೆ ಕಾರಣರಾಗಿದ್ದಾರೆ.

ಅಂತಹ ಸಾಹಿತ್ಯವೊಂದನ್ನು ಸಮಾಜದ ಒಂದು ವರ್ಗವು ತನ್ನ ಖಾಸಗಿ ಆಸ್ತಿಯನ್ನಾಗಿ ಮಾಡಿಕೊಂಡು, ಆ ಸಾಹಿತ್ಯದ ಮೂಲಮೌಲ್ಯಗಳನ್ನು ಲೆಕ್ಕಿಸದೆ ಅದನ್ನು ಬಹ್ವರ್ಥ ಯುಕ್ತವಾದ ಅಪೌರುಷೇಯ ಅತಿಮಾನವ ಗ್ರಂಥವೆಂದು ಪ್ರತಿಪಾದಿಸಿ ವಿಜೃಂಭಿಸಿದ್ದು, ಆ ಸಾಹಿತ್ಯಕ್ಕೆ ಬಗೆಯಲಾದ ಮಹಾನ್ ಅಪಚಾರ. ಇಂದಿಗೂ ಅದೇ ಮೌಢ್ಯವನ್ನು ಪ್ರಚಾರಮಾಡುವವರು ನಮ್ಮಲ್ಲಿದ್ದಾರೆ.

ವೇದವನ್ನು ಅರ್ಥೈಸಿ ಅದರಿಂದ ಪ್ರಯೋಜನ ಪಡೆಯುವ ಬದಲಾಗಿ ಅದನ್ನು ಪೂಜಿಸಿ ಅದರ 'ಗೂಢಾರ್ಥ'ವನ್ನು ಜನರಿಂದ ಮರೆಮಾಡುವ ಪದ್ಧತಿ ಇನ್ನೂ ನಶಿಸದಿರುವುದು ಸಂಕಟಕ್ಕೆಡೆಮಾಡಿಕೊಡುತ್ತದೆ. ಸುಮಾರು ಮೂರು ಸಾವಿರ ವರ್ಷಗಳ ಹಿಂದೆಯೇ ಯಾಸ್ಕರು ತಮ್ಮ ನಿರುಕ್ತದಲ್ಲಿ ಈ ವಿಧಾನವನ್ನು ಮೂದಲಿಸಿದ್ದರು. ಸ್ಥಾಣುರಯಂ ಭಾರಹರಃ ಕಿಲಾಭೂದಧೀತ್ಯ ವೇದಂ ನ ವಿಜಾನಾತಿ ಯೋರ್ಥಮ್। ಯೋರ್ಥಜ್ಞ ಇತ್ಸಕಲಂ

ಭದ್ರಮಶ್ನುತೇ ನಾಕಮೇತಿ ಜ್ಞಾನವಿಧೂತಪಾಪ್ಮಾ॥ ಎಂದರು ಅವರು. (ವೇದವನ್ನು ಓದಿ ಅದರ ಅರ್ಥವನ್ನು ಗ್ರಹಿಸದವನು ಒಂದು ಮರದ ಕೊರಡಿನಂತೆ; ಅರ್ಥ ಗ್ರಹಿಸುವವನು ತನ್ನ ಶ್ರೇಯಸ್ಸಿಗೆ ಹಾದಿ ಮಾಡಿಕೊಳ್ಳುತ್ತಾನೆ, ಎಂದಿದರರ್ಥ.)

ಅಂದಿನ ಜನಸಮುದಾಯದ ಸಂಘಟನೆಯನ್ನೂ ಜನಜೀವನವನ್ನೂ ಪ್ರಕೃತಿಯೊಡನೆ ಸದಾಕಾಲವೂ ನಡೆಯುವ ಸೆಣಸಾಟದಿಂದ ವ್ಯಕ್ತವಾಗುವ ಅಭೇದ್ಯ ತತ್ವಗಳು ಉಂಟು ಮಾಡುವ ಆಶ್ಚರ್ಯವನ್ನೂ ಬಗೆಬಗೆಯಾಗಿ ನಿರೂಪಿಸುವ ವೇದವನ್ನು ಒಂದು ಉದಾತ್ತ ಮಟ್ಟಕ್ಕೇರಿಸಿದ್ದು, ಆ ಸಾಹಿತ್ಯದ ಅಭ್ಯಾಸಮಾಡಿ ಅದರಿಂದ ಸ್ಫೂರ್ತಿಯನ್ನು ಪಡೆದ ಜನರಲ್ಲ; ಆ ಸಾಹಿತ್ಯದಿಂದ ತಮ್ಮ ವರ್ಗದ ಶ್ರೇಷ್ಠತೆಯನ್ನು ಎತ್ತಿಹಿಡಿದು ಅದರ ಪಾವಿತ್ರ್ಯದ ಅಸ್ತ್ರದಿಂದ ಬೇರೆ ವರ್ಗಗಳ ಮೇಲೆ ತಮ್ಮ ದಬ್ಬಾಳಿಕೆಯನ್ನು ಸ್ಥಾಪಿಸಹೊರಟಿದ್ದ ಜನ ಹಾಗೆ ಮಾಡಿದ್ದು. ಬೇರೆಯವರಿಂದ ಮುಚ್ಚಿಟ್ಟು ಆ ಸಾಹಿತ್ಯದ ಶ್ರೇಷ್ಠತೆಯನ್ನು ಕಾಪಾಡಬೇಕಾದ ಪ್ರಸಂಗ ಬರಬೇಕಾದಂತಹ ಸಾಹಿತ್ಯವಲ್ಲ ವೇದ. ಆದರೂ ಹಾಗೆ ನಡೆದು ಬಂತು. ಇಂತಹ ಪರಿಸ್ಥಿತಿಯು ಹಲವಾರು ಶತಮಾನಗಳ ಕಾಲ ಜಾರಿಯಲ್ಲಿದ್ದು ಇತ್ತೀಚೆಗೆ ಮಾತ್ರವೇ ವೇದವು ಒಂದು ವರ್ಗದ ಸ್ವತ್ತಾಗದೆ ಒಟ್ಟು ಸಮಾಜದ ಪರಂಪರೆಯ ಮೂಲವಾದ ಅಂಗವೆಂದು ಒಪ್ಪಲಾಗಿದೆ. ಇದರಿಂದ ಸಮಾಧಾನಗೊಳ್ಳದ ಆಧುನಿಕ ಪಂಡಿತರು ವೈದಿಕ ಸಾಹಿತ್ಯದ ಆದಿಭಾಗಕ್ಕೆ ಸೇರಿದ ಋಗ್ವೇದದ ಮೇಲೆ ಸಹ ತಮ್ಮ ಅಧ್ಯಾತ್ಮ ತತ್ವಗಳನ್ನೆಲ್ಲಾ ಹೇರಿ ಅದಕ್ಕೆ ಮೆರುಗುಕೊಡಲು ಪ್ರಯತ್ನಿಸಿದ್ದಾರೆ. ಇಂದಿಗೂ ಅವರ ಈ ಕಾತುರತೆ ಕೊನೆಗೊಂಡಿಲ್ಲ. ಆದರೆ ಋಗ್ವೇದ ಇದರಿಂದ ಹೆಚ್ಚು ಶೋಭಿಸಿಲ್ಲವೆಂಬುದು ಸ್ವಯಂಸಿದ್ಧ. ''ಬಿಭೇತ್ಯಲ್ಪಶ್ರುತಾದ್ವೇದಃ ಮಾಮಯಂ ಪ್ರತರಿಷ್ಯತಿ'' ಎಂಬ ವಾಕ್ಯ ಮಹಾಭಾರತದಲ್ಲಿದೆ. ಶ್ರುತಿಯನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳದವನು ತನ್ನನ್ನು ಹಿಂಸಿಸಿ ಕೊಲ್ಲುತ್ತಾನಲ್ಲ ಎಂದು ವೇದಕ್ಕೆ ಹೆದರಿಕೆಯಂತೆ. ಹಾಗೆ ಹೆದರಿಸುವುದರಲ್ಲಿ ನಮ್ಮ ಆಧುನಿಕ ಪಂಡಿತರದ್ದು ಎತ್ತಿದ ಕೈ.

ನಮ್ಮ ಪ್ರಾಚೀನಸಾಹಿತ್ಯವು ಒಟ್ಟು ಸಮಾಜಕ್ಕೆ ಸಂಬಂಧಿಸಿದ್ದೆಂದು ಒಪ್ಪಿ ಆ ಸಾಹಿತ್ಯ ಮತ್ತು ಸಂಸ್ಕೃತಿಗಳು ಪ್ರತಿಫಲಿಸುವ ಸಮಾಜ ತತ್ವಗಳನ್ನು ನಮ್ಮದನ್ನಾಗಿಸಿಕೊಂಡು ಮುಂದಿನ ಪ್ರಗತಿಪರ ಹೆಜ್ಜೆಯನ್ನಿಡಲು ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿರುವ ನಮಗೆ ಸಾಧ್ಯವಿದೆ. ಹಿಂದಿನ ಕೆಲವು ಕಟ್ಟಳೆಗಳಿಂದಾಗಿ ಆ ಸಾಹಿತ್ಯ ಒಂದು ವರ್ಗಕ್ಕೆ ಸಂಬಂಧಿಸಿದ ಸಾಹಿತ್ಯವಾಗಿ ಪರಿಣಮಿಸಿತು; ಆ ಕಟ್ಟಳೆಗಳ ಬದಲು ಬೇರೆ ಕಟ್ಟಳೆಗಳೋ ಅಥವಾ ಇತರ ಮಿತಿಗಳೋ ನಮ್ಮ ದೃಷ್ಟಿಯನ್ನು ಸಂಕುಚಿತಗೊಳಿಸದಿದ್ದರೆ ಸಾಕು. ಈ ಸಂದರ್ಭದಲ್ಲಿ ಇಂದು ಹೊಸದಾಗಿ ಸೃಷ್ಟಿಯಾಗುತ್ತಿರುವ ಕಲೆ ಮತ್ತು ಸಾಹಿತ್ಯಗಳು ಯಾವ ರೀತಿಯವು ಮತ್ತು ಅವು ಯಾವ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ ಎಂಬುದನ್ನು ಪರಿಶೀಲಿಸುವುದೂ ಸೂಕ್ತವಾಗಿದೆ. ಒಟ್ಟು ಸಮಾಜದ ಸಂಸ್ಕೃತಿಯನ್ನು ನಮ್ಮ ಕಲೆ ಸಾಹಿತ್ಯಗಳು ಎಷ್ಟರಮಟ್ಟಿಗೆ ಅಳವಡಿಸಿಕೊಂಡಿವೆ ಎಂಬುದನ್ನು ಪ್ರತಿಯೊಬ್ಬ ಸಾಹಿತ್ಯಾಭ್ಯಾಸಿಯೂ ಅತ್ಯಗತ್ಯವಾಗಿ ವಿಮರ್ಶಿಸಬೇಕಾಗಿದೆ. ವೈಯಕ್ತಿಕ ಕಾರಣಗಳಿಂದಾಗಿ ಅಥವಾ ಪರಂಪರೆಗೆ ಗೌರವ ಸಲ್ಲಿಸುವ ಕಾರಣಕ್ಕಾಗಿ ನಮ್ಮ ಇಂದಿನ ಪರಿಸ್ಥಿತಿಯನ್ನು ಲಕ್ಷಿಸಿ ಬುದ್ಧಿವಂತಿಕೆಯಿಂದ ಹೊಲಸನ್ನು ಸುಗಂಧ ದ್ರವ್ಯದ ರೂಪದಲ್ಲಿ ಉಣಬಡಿಸಿದರೆ ಅದೊಂದು ಕುಯುಕ್ತಿಯಾಗುತ್ತದೆ; ಆದರೆ ಇಂದಿನ ಅಸಮಾನತೆಯನ್ನು ಸುಭದ್ರಪಡಿಸಿ ಅದಕ್ಕೆ ತಾತ್ವಿಕ ತಳಹದಿಯನ್ನು ರಚಿಸಿಕೊಡುವ ಬುದ್ಧಿವಂತಿಕೆಯನ್ನೇನಾದರೂ ನಮ್ಮ ಸಾಹಿತಿಗಳು ತೋರಿದರೆ ಅದು ಕುಯುಕ್ತಿಯಾಗುವುದಿಲ್ಲ, ಅದು ದುಷ್ಟಬುದ್ಧಿ ಎಂದೆನಿಸುತ್ತದೆ.

ಚರಿತ್ರೆಯ ಕಸದ ಬುಟ್ಟಿಗೆ ಹಾಕಲ್ಪಟ್ಟಿರುವ ಅಥವಾ ಹಾಕಬೇಕಾದ ''ಕಲೆಗಾಗಿ ಕಲೆ'' ಎಂಬ ತತ್ವದ ಆಶ್ರಯ ಪಡೆದು, ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಮ್ಮ ಮುಂದೆ ಬರುತ್ತಿರುವ ಸಾಹಿತ್ಯದ ಅನೇಕ ಕೃತಿಗಳು ಸಮಾಜದ ಧ್ಯೇಯಗಳನ್ನು ಬದಿಗೊತ್ತಿ, ಜೀವನದಲ್ಲಿ ಹೋರಾಟಕ್ಕೆ ಸ್ಥಾನವೇ ಇಲ್ಲವೇನೋ ಎಂಬಂತೆ ಕೇವಲ ನಿಸ್ಸಹಾಯಕತೆಯನ್ನು ಬೋಧಿಸುವಂತಹ ಕೃತಿಗಳಾಗಿರುವುದು ನಮ್ಮ ದುರದೃಷ್ಟ. ''ಮಾನವನಿಗಾಗಿ ಕಲೆ'', ''ಜೀವನ ಸೌಂದರ್ಯಕ್ಕಾಗಿ ಕಲೆ'' ಎಂಬ ದೃಷ್ಟಿ ಇವರಿಗೆ ಒಪ್ಪಿಗೆಯಾಗದಿರುವುದು ಬಹುಶಃ ಅವರ ನಿಶ್ಚೇಷ್ಟ ಜೀವನಗಳಿಂದಿರಬಹುದೆಂದು ಊಹಿಸಿದರೆ ತಪ್ಪಾಗಲಾರದು. ಜನಸಾಮಾನ್ಯರಿಗೂ ಸಂಬಂಧಿಸಿದಂತಹ ವಿಷಯಗಳನ್ನೂ, ಅನುಭವಗಳನ್ನೂ ಕುರಿತು, ಬಹುಮಟ್ಟಿಗೆ ಜನಸಾಮಾನ್ಯರೆಲ್ಲರ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸಲು ಸಾಧ್ಯವಿಲ್ಲವೋ ಏನೋ ನನಗೆ ತಿಳಿಯದು ; ಏಕೆಂದರೆ ಸ್ವತಃ ನಾನೇನೂ ಸಾಹಿತ್ಯ ಕೃಷಿಯಲ್ಲಿ ತೊಡಗಿರುವವನಲ್ಲ. ಅದೇ ಸಾಹಿತ್ಯಕ್ಕೆ ನನ್ನ ಶ್ರೇಷ್ಠ ಕೊಡುಗೆಯೂ ಇರಬಹುದು ! ಆದರೆ ಈ ಮಾರ್ಗವನ್ನನುಸರಿಸಿ ಜೀವನವನ್ನೂ ಸಾಹಿತ್ಯ ವನ್ನೂ ಉಚ್ಚಮಟ್ಟಕ್ಕೇರಿಸಬೇಕೆಂದು ಹತ್ತೊಂಭತ್ತನೆಯ ಶತಮಾನದ ಪೂರ್ವಭಾಗದಲ್ಲಿ ತವಕಿಸಿದ್ದ ಆಂಗ್ಲಭಾಷಾ ಕವಿ ವರ್ಡ್ಸ್‌ವರ್ತನ ಪರಿಚಯ ನನಗೆ ಸ್ವಲ್ಪಮಟ್ಟಿಗಿದೆ. ಆತನ ಈ ಮಾರ್ಗವನ್ನು ಜ್ಞಾಪಿಸಿಕೊಳ್ಳಲು ನಮ್ಮ ಅನೇಕ ಸಾಹಿತಿಗಳಿಗೆ ವ್ಯವಧಾನವಿಲ್ಲವೆಂದು ತೋರುತ್ತದೆ. ಕೈಗಾರಿಕೋದ್ಯಮಗಳ ಒತ್ತಡ ಮತ್ತಿನ್ನಿತರ ಕೆಲವು ಸೂಕ್ಷ್ಮ ಕಾರಣಗಳಿಂದಾಗಿ ಅಂದಿನ ಸಮಾಜ ಖಂಡಖಂಡವಾಗಿ ವಿಭಜನೆ ಹೊಂದುತ್ತಿದ್ದುದನ್ನು ಗಮನಿಸಿದ ಆ ಕವಿ ಎಲ್ಲ ಖಂಡಗಳಿಗೂ ಸ್ಥೂಲವಾಗಿ ಸಮಾನವಾದ ಸಂವೇದನೆಗಳನ್ನು ತನ್ನ ಕಾವ್ಯದಲ್ಲಿ ಅಳವಡಿಸಲು ಯತ್ನಿಸಿದ. ಆತ ಸಫಲನಾದನೋ ವಿಫಲಗೊಂಡನೋ ಎಂಬ ಪ್ರಶ್ನೆ ಇಲ್ಲಿ ಅಪ್ರಕೃತ. ಆ ಪ್ರಯತ್ನ ಮತ್ತು ಆತನ ಸಾಹಿತ್ಯ ದೃಷ್ಟಿ ಅರ್ಥವತ್ತಾಗಿದೆಯೆಂದಷ್ಟೇ ನನ್ನ ಸೂಚನೆ. ಹಲವು ಸಾಹಿತ್ಯ ಪ್ರಕಾರಗಳ ಮಧ್ಯೆ ಮೇರುಕೃತಿಗಳೆಂದು ಪರಿಗಣಿತವಾಗುವ ನಮ್ಮ ಇಂದಿನ ಕೆಲವು ಕೃತಿಗಳು ಈ ದೃಷ್ಟಿಗೆ ಹೊರತಾಗಿವೆಯೆಂದು ನನ್ನ ಭಾವನೆ. ಎಷ್ಟು ಕಡಿಮೆ ಜನಕ್ಕೆ ಅರ್ಥವಾಗುತ್ತದೆ ಮತ್ತು ಎಷ್ಟು ಕಡಿಮೆ ಜನರ ಅನುಭವಕ್ಕೆ ಸಂಬಂಧಿಸಿದ್ದು ಒಂದು ಕೃತಿ ಎಂಬುದೊಂದೇ ಸಾಹಿತ್ಯದ ಶ್ರೇಷ್ಠತೆಯ ಮಾಪನಕ್ಕೆ ಇರುವ ಆಧಾರವೇನೋ ಎಂಬ ಅನುಮಾನವೂ ಆಗಾಗ ನಮ್ಮನ್ನು ಕಾಡುತ್ತದೆ. ಇದು ಸಾಹಿತ್ಯಕ್ಕಾಗಲಿ ಸಮಾಜಕ್ಕಾಗಲಿ ಅವುಗಳ ಬೆಳವಣಿಗೆಗಾಗಲಿ ಒಳಿತಲ್ಲವೆಂದು ನಾವಿಲ್ಲಿ ಗಮನಿಸಬೇಕು. ಕಡೆಗೆ ಇದು ಸಾಹಿತ್ಯಕ್ಕೆ ಮಾರಕವಾದರೂ ಆಶ್ಚರ್ಯವಲ್ಲ. ಅಂತೆಯೇ ಅತ್ಯಂತ ವೈಯಕ್ತಿಕ ಅನುಭವಗಳನ್ನಾಧರಿಸಿ ರಚಿತವಾಗುವ ಸಾಹಿತ್ಯದ ಸಮಸ್ಯೆಯೂ ಕೂಡ. ಆ ಅನುಭವಕ್ಕೆ ಬೆಲೆಯಿಲ್ಲವೆಂದು ಇದರರ್ಥವಲ್ಲ; ಇತರರಿಗೆ ಆ ಅನುಭವದಿಂದ ಆಗಬಹುದಾದದ್ದೇನೂ ಇಲ್ಲವೆಂದಷ್ಟೇ ಇದರರ್ಥ.

ವೈಜ್ಞಾನಿಕ ಮತ್ತು ಚಾರಿತ್ರಿಕ ದೃಷ್ಟಿಗೂ ಸಾಹಿತ್ಯ ರಚನೆ ಹಾಗೂ ಸಾಹಿತ್ಯಾಭ್ಯಾಸಕ್ಕೂ ಇರುವ ಸಂಬಂಧವಾದರೂ ಏನೆಂಬ ಪ್ರಶ್ನೆ ಇಲ್ಲಿ ಉದ್ಭವಿಸಬಹುದು. ಆ ದೃಷ್ಟಿಯು ಸಮಾಜದ ಕೆಲವು ಅಂಗಗಳಿಗೆ ಮಾತ್ರ ಸೇರಿದಂತಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಆ ದೃಷ್ಟಿಗೆ ಅವಕಾಶವಿಲ್ಲವೆಂದು ವಾದಿಸುವುದು ಬಾಲಿಶ ಪ್ರಜ್ಞೆಯ ಕುರುಹು. ವಿಜ್ಞಾನದ ಕ್ಷೇತ್ರದಲ್ಲಿ ಕಾಣಬರುವ ಪದ್ಧತಿ ಕಲಾಸಾಹಿತ್ಯಗಳಲ್ಲಿ ರೂಢಿಗೆ ಬರಬೇಕಾದ್ದು ಅವಶ್ಯಕ. ಅರ್ಥಾತ್ ಅವಿಷಯಕವಾದ ದೃಷ್ಟಿಯನ್ನಿಟ್ಟುಕೊಂಡು ಕಲಾಕಾರನು ತನ್ನ ಪ್ರಪಂಚದ, ಎಂದರೆ ಸಮಾಜದ, ಆಶೆ ಆಕಾಂಕ್ಷೆಗಳನ್ನು ತನ್ನ ಕೃತಿಗಳಲ್ಲಿ ಪ್ರತಿಬಿಂಬಿಸಿ, ಸಮಾಜದ ಮುನ್ನಡೆಯ ಪಥದಲ್ಲಿ ಅಗ್ರಗಾಮಿಯಾಗಲು ಮುಂಬರಬೇಕು. ಈ ಮಾತನ್ನು ಕೇಳಿದೊಡನೆಯೇ ಕೆಲವು ಸಾಹಿತ್ಯಾಭಿ

ಮಾನಿಗಳು ಹುಬ್ಬುಗಂಟಿಕ್ಕಿಕೊಂಡು ಅದನ್ನು ವಿರೋಧಿಸುವುದು ರೂಢಿಯಾಗಿದೆ. ಅವರೊಡನೆ ನನ್ನದೇನೂ ವ್ಯಾಜ್ಯವಿಲ್ಲ. ಸಾಹಿತಿಯಿಂದ ನಮ್ಮ ಅಪೇಕ್ಷೆ ಹೀಗಿದೆ; ಅದನ್ನು ಪೂರೈಸದಿರುವ ಸ್ವಾತಂತ್ರ್ಯ ಸಾಹಿತಿಗೆ ಖಂಡಿತವಾಗಿಯೂ ಇದೆ. ಆತ ಆ ಸ್ವಾತಂತ್ರ್ಯವನ್ನನುಭವಿಸಿದರೆ ಆತನನ್ನು ಮೂಲೆಗಟ್ಟಿ ಮೂದಲಿಸುವ ಸ್ವಾತಂತ್ರ್ಯವನ್ನು ನಾವೂ ಅನುಭವಿಸ ಬೇಕಾಗುತ್ತದೆ ಮಾತ್ರ. ಆದ್ದರಿಂದ ಸಾಹಿತಿಯ ಮೇಲೆ ದಂಡಪ್ರಯೋಗದ ಪ್ರಶ್ನೆಯಲ್ಲ ಇದು. ಆತನ ಸ್ವೇಚ್ಛಾಚಾರಕ್ಕೆ ನಾವು ಅಡ್ಡಿ ಬರುವುದಿಲ್ಲ. ಆದರೆ ಆತನ ಸ್ಥಾನದ ಬಗ್ಗೆ ತೀರ್ಪನ್ನು ನೀಡುವ ನಮಗೆ ಆತ ಉಪದೇಶಿಸಲು ಮುಂದಾದರೆ ಅವನನ್ನು ನಿರಾಕರಿಸುವ ಹಕ್ಕು ನಮಗುಂಟು.

ಸಾಹಿತ್ಯವೆಂದರೆ ಸ್ವಯಂಪ್ರೇರಣೆ, ಪ್ರತಿಭೆ ಇತ್ಯಾದಿಗಳಿಂದುಂಟಾಗುವ ಪರಿಣಾಮ, ಅದು ಎಂದೆಂದಿಗೂ ಆತ್ಮ ವಿಶ್ವಾಸವನ್ನು ಸೂಚಿಸುವ ವಸ್ತು ಮತ್ತು ವ್ಯಕ್ತಿಗತ ಭಾವಗಳ ಅಡಿಪಾಯದ ಮೇಲೆ ನಿಂತಿರುವ ಕೃತಿ ಸಮೂಹ; ಆದ್ದರಿಂದ ವಿಜ್ಞಾನ ಕ್ಷೇತ್ರದ ಪದ್ಧತಿಯು ಸಾಹಿತ್ಯ ಕ್ಷೇತ್ರಕ್ಕೆ ಹೊರತಾದದ್ದು ಎಂಬುದು ಸಾಮಾನ್ಯವಾಗಿ ಅಂತಹವರ ವಾದದ ಸಾರಾಂಶ. ವೈಜ್ಞಾನಿಕ ಮತ್ತು ಚಾರಿತ್ರಿಕ ದೃಷ್ಟಿಯನ್ನು ಸಾಹಿತ್ಯ ಕ್ಷೇತ್ರಕ್ಕೆ ಅನ್ವಯಿಸಿದರೆ ಉತ್ತಮ ಸಾಹಿತ್ಯದ ರಚನೆಯು ಸಾಧ್ಯವೇ ಇಲ್ಲವಾಗುತ್ತದೆ ಮತ್ತು ಅದು ಸಾಹಿತಿಯ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವನಿಗೆ ಸಂಕೋಲೆಯನ್ನು ತೊಡಿಸಿದಂತಾಗುತ್ತದೆ ಎಂದೂ ಅವರು ವಾದಿಸುತ್ತಾರೆ.

ಅದಕ್ಕೆ ನಮ್ಮ ಸರಳ ಸಮಾಧಾನವಿಷ್ಟೇ : ಎಫ್. ಆರ್. ಲೀವೀಸ್ ಎಂಬ ಖ್ಯಾತ ವಿಮರ್ಶಕ ಹೇಳುವಂತೆ, ಪ್ರಾಚೀನ ಸಾಹಿತ್ಯವಾಗಲಿ, ಆಧುನಿಕ ಸಾಹಿತ್ಯವಾಗಲಿ ಅದು ಚರಿತ್ರೆಯ ಪ್ರತಿಯೊಂದು ಘಟ್ಟದಲ್ಲೂ ಪುನರ್ವಿಮರ್ಶೆಗೆ ಒಳಗಾಗಬೇಕಾಗುತ್ತದೆ. ಹಾಗಾದಾಗ ಅದರ ಶ್ರೇಷ್ಠತೆಯ ಪುನರ್ನಿರ್ಧಾರವಾಗಿ ಹೊಸ ಸ್ಥಾನವನ್ನು ಅದು ಹೊಂದುತ್ತದೆ. ಯಾವುದೋ ಒಂದು ಕಾಲಕ್ಕೆ ಸಾಹಿತ್ಯ ಕೃತಿಯು ಚಾರಿತ್ರಿಕವಾಗಿ ಅಸಂಬದ್ಧವಾಗಿ ಕಂಡುಬಂದರೆ ಅದನ್ನು ತಳ್ಳಿಹಾಕಬೇಕಾಗುತ್ತದೆ. ಪರಂಪರೆಯು ಹೇಗೆ ಪ್ರತಿಯೊಂದು ಘಟ್ಟದಲ್ಲೂ ಹೊಸ ಹೊಸ ತತ್ವಗಳ ಸೇರ್ಪಡೆಯಿಂದ ಹೆಚ್ಚು ವ್ಯಾಪಕವಾಗಿ ಬಲಗೊಳ್ಳುತ್ತದೋ ಹಾಗೆಯೇ ಸಾಹಿತ್ಯ ಕೃತಿಯ ಸ್ಥಾನವೂ ಕೂಡ ಕಾಲಕ್ರಮೇಣ ಬದಲಾಗುತ್ತದೆ. ಸಾಹಿತ್ಯವು ಸ್ವಾತ್ಮಸಂವೇದನೆಯ ಪರಿಣಾಮವಾಗಿದ್ದರೂ ಸತ್ಯಶೋಧನೆಗೆ ಅದು ಒಂದು ಸಾಧನವೆಂಬುದನ್ನು ಮರೆಯಬಾರದು. ಸ್ವೇಚ್ಛಾವರ್ತನೆ ಮತ್ತು ಲಗಾಮಿಲ್ಲದ ಭಾವನಾ ಸಂಕೀರ್ಣಗಳ ಹೊರೆಯಾಗಿ ಸಾಹಿತ್ಯವು ಪರಿಣಮಿಸಿದಾಗ ಅದು ಉತ್ತಮ ಮಟ್ಟದ್ದಾಗಿರಲಾರದೆಂಬುದು ಸ್ವಯಂವೇದ್ಯ. ಸಾಹಿತ್ಯವು ಆನಂದಾನುಭೂತಿಯನ್ನು ನೀಡಿ ಓದುಗನನ್ನು ಪರಿಪೂರ್ಣ ಜ್ಞಾನದತ್ತ ಕೊಂಡೊಯ್ಯುವಂತಹದ್ದೆಂದು ಹೇಳುವ ರಾಬರ್ಟ್ ಫ್ರಾಸ್ಟನ ಮಾತನ್ನು ನಾವಿಲ್ಲಿ ಉಲ್ಲೇಖಿಸ ಬಹುದು. ''ಸದ್ಯಃಪರನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ'' ಎಂಬ ಕಾವ್ಯ ಪ್ರಕಾಶಕಾರ ಮಮ್ಮಟನ ಮಾತೂ ಇದನ್ನೇ ಹೇಳುತ್ತದೆ. ನಮ್ಮ ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಹಲವಾರು ಬಾರಿ ಪರಿಪೂರ್ಣ ಜ್ಞಾನದ ಮಾತಿರಲಿ, ಅತಿಸಾಮಾನ್ಯವಾದ ಆನಂದಾನುಭೂತಿಯೂ ಸಹ ದೊರೆಯುವುದು ದುಸ್ಸಾಧ್ಯವಾಗುತ್ತಿದೆಯೆಂಬುದು ವಿಕಟಸತ್ಯ.

ಸಾಹಿತಿಯ ಸ್ವಾತಂತ್ರ್ಯದ ಪ್ರಶ್ನೆಯನ್ನು ಇದರಿಂದ ಬೇರ್ಪಡಿಸಿ ವಿವೇಚಿಸಲು ಸಾಧ್ಯವಿಲ್ಲ. ತನ್ನನ್ನು ತಾನು ಮೋಸಗೊಳಿಸಿಕೊಂಡು ತನ್ಮೂಲಕ ಸಮಾಜದ ಬಹುಭಾಗದ ಜನರನ್ನು ಮೋಸಗೊಳಿಸುವುದು ಸ್ವಾತಂತ್ರ್ಯದ ನಿಜರೂಪವೇ ? ಸ್ವಾತಂತ್ರ್ಯದ ಹೆಸರಿನಲ್ಲಿ ಅರ್ಥ ರಹಿತವೂ, ಸತ್ಯದಿಂದ ದೂರವೂ ಆದ ಚಿತ್ರಣವನ್ನು ಕೊಡುವ ಸಾಹಿತ್ಯಕೃತಿಯು ಚಾರಿತ್ರಿಕವಾಗಿ ಅಸಂಬದ್ಧವಲ್ಲದೆ ಮತ್ತೇನು ? ಶೋಷಕ ವರ್ಗದ ಪ್ರತಿನಿಧಿಯಾಗಿ ನಿಲ್ಲುವ,

ಮೌಢ್ಯದ ಆರಾಧಕನಾದ, ಮತ್ತು ಅಮೂರ್ತಭಾವನೆಗಳನ್ನು ತುಂಬಿಸುವ ಸಾಹಿತಿಗೆ ಸ್ವಾತಂತ್ರ್ಯವನ್ನು ಅನುಭವಿಸುವ ವಿವೇಕವಾದರೂ ಇರಬಲ್ಲುದೆ ? ಮೂಲತಃ ಯಾವುದು ಸ್ವಾತಂತ್ರ್ಯ ? ನಮ್ಮ ಭಾಷೆಗಳಲ್ಲಿ ಪ್ರಯೋಗದಲ್ಲಿರುವ ಪದಗಳು ಯಾವುವೋ ವಸ್ತುಗಳ ಪರಿಜ್ಞಾನವನ್ನು ಸಂಕೇತಗಳ ಮೂಲಕ ಉಂಟುಮಾಡುತ್ತವೆ. 'ಸ್ವಾತಂತ್ರ್ಯ'ವೆಂಬ ಪದವೂ ಸಾಂಕೇತಿಕವಾಗಿ ಯಾವುದೋ ವಸ್ತುವನ್ನು ನಿರ್ದೇಶಿಸಬೇಕು. ಬೇರೆ ಕ್ಷೇತ್ರದಲ್ಲಿ ದುಡಿಯುವವನಿಗಿರದ ಸ್ವಾತಂತ್ರ್ಯವನ್ನು ಸಾಹಿತಿಗೆ ಮಾತ್ರ ಕೊಡಬೇಕಾದರೆ ಇವನೇನೋ ರಾಜಕುಮಾರನೇ ಇರಬೇಕು ! 'ಸ್ವಾತಂತ್ರ್ಯ' ಎಂಬ ಪದವನ್ನು ವೇಶ್ಯೆಯ ಸ್ಥಾನದಲ್ಲಿರಿಸುವುದಕ್ಕೆ ಇದೊಂದು ನಿದರ್ಶನ. ''ನಾಚಿಕೆಯಿಲ್ಲದ ಸ್ವೇಚ್ಛಾವರ್ತನೆಯೇ ಸ್ವಾತಂತ್ರ್ಯದ ಹೆಸರಿನಲ್ಲಿ ಕೆಲವೊಮ್ಮೆ ಶೋಭಿಸುತ್ತದೆ'', ಎಂದು ಬಹು ಹಿಂದೆಯೇ ಹೇಳಿದ್ದ ಕಾರ್ಲ್ ಮಾರ್ಕ್ಸ್ ಅವರ ಮಾತನ್ನು ನಮ್ಮ ಕೆಲವು ಸಾಹಿತಿಗಳು ಸತ್ಯಗೊಳಿಸುತ್ತಾರೆ. ಉದಾತ್ತ ತತ್ವಶಾಸ್ತ್ರ, ಮನೋವಿಜ್ಞಾನ ಇತ್ಯಾದಿಗಳ ಸೋಗಿನಲ್ಲಿ ಕೀಳುಭಾವನೆಗಳ ಕಾದಂಬರಿಗಳು ನಮ್ಮಲ್ಲಿ ಬಂದಿಲ್ಲವೇನು ? ಅವನ್ನು ಶ್ರೇಷ್ಠ ಕೃತಿಗಳೆಂದು ಕೆಲವು ಮತೀಯ ಆನ್ಯಾಕ್ರಮಣಶೀಲರು ಪ್ರಚಾರ ಮಾಡಿರುವುದು ನಮ್ಮ ಗಮನಕ್ಕೆ ಬಂದಿಲ್ಲವೇನು ? ಇಂತಹ ಪ್ರಚಾರದ ಪ್ರಭಾವದಿಂದ ಈಗಾಗಲೇ ಒಡಕುಂಟಾಗಿರುವ ನಮ್ಮ ಸಮಾಜದ ಛಿದ್ರತೆ ಹೆಚ್ಚುವಂತಾಗುತ್ತದೆ. ಈ ರೀತಿಯ ಸಾಹಿತ್ಯ ಸಮಾಜಘಾತುಕ ಮಾತ್ರವಲ್ಲ; ಅದು ಸತ್ಯದ ಮರೆಮಾಚುವಿಕೆಯೂ ಹೌದು. ಸಾಹಿತ್ಯ ಕೃಷಿಗಾರನ 'ಸ್ವಾತಂತ್ರ್ಯ'ದಿಂದ ಬೇರೆಯವರ ಸ್ವಾತಂತ್ರ್ಯಕ್ಕೆ ಸಂಚು ಬರುವಂತಾಗಬಹುದೆ ? ಅಂತಹ ಸಂದರ್ಭದಲ್ಲಿ ಸಾಹಿತಿಯನ್ನು ವಿರೋಧಿಸುವ ಸಾಹಿತ್ಯಕ್ಕೆ ಸ್ವಾತಂತ್ರ್ಯ ಬೇಡವೆ ?

ಇಂದಿನ ನಮ್ಮ ಅವಶ್ಯಕತೆ ಮಾನವೀಯತೆಯ ಶ್ಲಾಘ್ಯ ಧ್ಯೇಯವನ್ನು ಸಾರುವ ನವಕಾವ್ಯ, ನವಸಾಹಿತಿ ಮತ್ತು ನವಸಂಸ್ಕೃತಿ. ಕೆಲವರಿಗೆ ಮಾತ್ರ ಮೀಸಲಾದ ಸಂಪತ್ತಾಗದೆ ಜನಸಮೂಹದ ಸ್ವತ್ತಾಗಿ ಅದರ ಅನುಭವಕ್ಕೆ ಸಾಟಿಯಾದಂತಹ ಸಾಹಿತ್ಯ ಮಾತ್ರ ಉತ್ತಮ ಸಾಹಿತ್ಯ. ನಮ್ಮನ್ನು ದಂಗುಬಡಿಸಿ, ನಿರಾಶೆ, ಅಸಹಾಯಕತೆಗಳನ್ನು ತುಂಬುವ ಸಾಹಿತ್ಯ ಶೋಷಕ ವರ್ಗದಿಂದ ಎಷ್ಟೇ ಬಂಗಾರದ ಪದಕಗಳನ್ನು ಪಡೆದರೂ ನಮ್ಮ ದೃಷ್ಟಿಯಲ್ಲಿ ಅದು ತುಚ್ಛ ಸಾಹಿತ್ಯವೇ ಸರಿ.

ನೈಜವಾದ ಕ್ರಿಯಾತ್ಮಕ ಮಾನವೀಯತೆಯನ್ನು ಎತ್ತಿಹಿಡಿಯುವ ಉನ್ನತ ಸಂಸ್ಕೃತಿ ಶೋಷಣಾರಹಿತ ಸಮಾಜದಲ್ಲಿ ಮಾತ್ರ ಆವಿರ್ಭವಿಸಲು ಸಾಧ್ಯ. ಸಮಾಜವಾದ ಮತ್ತು ಸಮತಾವಾದಗಳನ್ನು ಕುಬುದ್ಧಿಯಿಂದ ಗ್ರಹಿಸುವ ಕೆಲವು 'ಪ್ರಗಲ್ಭ ಮತಿಗಳು' ಈ ವಾದಗಳು ಕೇವಲ ಒಂದು ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದುವು ಮಾತ್ರವೆಂದು ಭಾವಿಸುತ್ತಾರೆ. ಸಂಸ್ಕೃತಿಗೂ ಸಮಾಜವಾದಕ್ಕೂ ಎಲ್ಲಿಯ ಸಂಬಂಧ ಎಂಬ ಜಾರುನುಡಿಯನ್ನಾಡುವ 'ಸೂಕ್ಷ್ಮಮತಿ'ಗಳಿಗೂ ನಮ್ಮಲ್ಲಿ ಕೊರತೆಯಿಲ್ಲ. ಸಮಾಜವಾದ ಮತ್ತು ಸಮತಾವಾದಗಳು ಉಚ್ಚ ಸಂಸ್ಕೃತಿಯ ಉಗಮಕ್ಕೆ ಸಾಧನದಂತಿರುವ ವ್ಯವಸ್ಥೆಯನ್ನು ಸೃಷ್ಟಿಸುತ್ತವೆಂಬುದನ್ನು ಇವರೇಕೆ ಗ್ರಹಿಸಲಾರರೋ ನಮಗೆ ತಿಳಿಯದು. ಬಾಯಿಮಾತಿನಲ್ಲಿ ಸಂಸ್ಕೃತಿಗೆ, ಕಲೆಗೆ ಮತ್ತು ಸಾಹಿತ್ಯಕ್ಕೆ ಒಂದು ಶ್ರೇಷ್ಠ ಸ್ಥಾನವನ್ನು ನೀಡಿ, ಅಪಕ್ವವಾದ 'ಸ್ವಾತಂತ್ರ್ಯ'ವನ್ನು ಕುರಿತು ಬೊಬ್ಬೆಹಾಕಿ, ಶೋಷಣೆಯಲ್ಲಿ ತೊಡಗಿರುವ ವ್ಯಕ್ತಿಗಳಿಂದಾಗಲಿ ಅವರ ಅನುಯಾಯಿಗಳಿಂದಾಗಲಿ ಸಾಹಿತ್ಯಕ್ಕೆ ಹಿಂಸೆ ತಪ್ಪಿದ್ದಲ್ಲ. ಮಾನವನಲ್ಲಿರುವ ಪ್ರಜ್ಞಾಶಕ್ತಿಯು ಬೇರೆಲ್ಲಾ ವಸ್ತುಗಳಂತೆ ಮಾರಾಟದ ಸರಕೋ ಶೋಷಣಾ ಸಾಮಗ್ರಿಯೋ ಆದಾಗ ಅಂತಹ ಪ್ರಜ್ಞಾಶಕ್ತಿಯಿಂದ ಬೆಳೆಯುವ ಸಾಹಿತ್ಯ ಕುತ್ಸಿತ ಸಂಸ್ಕೃತಿಯ ಸಾಹಿತ್ಯ. ಆತ್ಮವಿಕಾಸಕ್ಕೆ ಸರ್ವತೋಮುಖವಾದ

ಮಾರ್ಗವನ್ನು ಕಲ್ಪಿಸಿಕೊಡುವ ಸಮಾಜವಾದೀ ಸಂಸ್ಕೃತಿ ಇದರಿಂದ ತೀರಾ ಭಿನ್ನವಾದದ್ದು. ಶ್ರೇಷ್ಠವಾದ ಸಂಸ್ಕೃತಿಯು ಆವರಿಸಿರುವ ಒಂದು ಸಮಾಜದಲ್ಲಿ ವ್ಯಕ್ತಿ ಮತ್ತು ಸಮಷ್ಟಿಗಳ ನಡುವೆ ಹೊಂದಾಣಿಕೆಯಿದ್ದು ವ್ಯಕ್ತಿಯ ವಿಕಾಸಕ್ಕೆ ಅವಕಾಶವಾಗುವಂತಿರುತ್ತದೆ. ಅಂತಹ ಮಾನವೀಯ ಸಂಸ್ಕೃತಿಯ ಸಾಕ್ಷಾತ್ಕಾರವು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಮೂಡಿಬರುವುದು ಸಮಾಜವಾದಿ ತತ್ವದ ಆಧಾರದ ಮೇಲೆ ನಿಲ್ಲುವ ಸಮಾಜದಲ್ಲಿ ಮಾತ್ರ. ಎಂದೇ ಸಮಾಜವಾದಿ ಸಿದ್ಧಾಂತವು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಪರಮಮಿತ್ರ ಎಂಬ ಹೆಸರನ್ನು ಪಡೆದಿರುವುದು. ನಮ್ಮ ಕಲೆ ಮತ್ತು ಸಾಹಿತ್ಯ ಆ ಉಚ್ಚಮಟ್ಟವನ್ನು ಮುಟ್ಟುವಂತೆ ಮಾಡುವುದು ನಮ್ಮ ಕರ್ತವ್ಯ, ನಮ್ಮ ಸಮಾಜದ ಬಾಂಧವರಿಗೆ ನಾವು ನೀಡಲೇಬೇಕಾದ ಕೊಡುಗೆ.

*– ಕೆಂಬಾವುಟ : ಆಗಸ್ಟ್ 1976*

# ಸಾಹಿತ್ಯದ ಗೊತ್ತುಗುರಿ

> ಸ್ಪೇನಿನ ಗಿಟಾರುಗಳನ್ನು ಮದ್ದುಗುಂಡುಗಳು ನುಚ್ಚುನೂರು ಮಾಡಿದಾಗ ಅವುಗಳಿಂದ ಸಂಗೀತ ಹೊಮ್ಮುವ ಬದಲು ರಕ್ತವು ಚಿಮ್ಮಲಾರಂಭವಾಯಿತು. ಮಾನವತೆಗಾಗಿ ಆತಂಕಪಡುವ ರಸ್ತೆಗಳಲ್ಲಿ ನನ್ನ ಕಾವ್ಯವು ಸ್ತಂಭೀಭೂತವಾಗಿ ಒಂದು ಪ್ರೇತದಂತೆ ನಿಂತಿತು. ಮಾನವತೆಯ ಬೇರುಗಳು ಹಾಗೂ ರಕ್ತ ಆಮೂಲಾಗ್ರವಾಗಿ ಹರಿದಾಡಲಾರಂಭಿಸಿತು. ಅಂದಿನಿಂದ ನನ್ನ ಹಾದಿಯು ಇತರರ ಹಾದಿಯೊಡನೆ ಸಮ್ಮಿಳಿತವಾಗುತ್ತಲೇ ಬಂದಿದೆ. ಅದರ ನೇರ ಪರಿಣಾಮವೆಂದರೆ ಒಂಟಿತನದ ಧ್ರುವದಿಂದ ಜನತೆಯೆಂಬ ಧ್ರುವದತ್ತ ದಾಪುಗಾಲು ಹಾಕಿರುವುದು. ಜನರ ಅಲುಗು ಮತ್ತು ಕರವಸ್ತ್ರವಾಗಲು ನನ್ನ ನಮ್ರ ಕಾವ್ಯ ಬಯಸುತ್ತದೆ; ಜನರ ಅಗಾಧ ನೋವುಗಳ ಬೆವರನ್ನು ಒರೆಸಲು ಹಾಗೂ ಅವರು ರೊಟ್ಟಿಗಾಗಿ ನಡೆಸುವ ಹೋರಾಟಕ್ಕೆ ಒಂದು ಆಯುಧವನ್ನೀಯಲು ಅದು ಆಶಿಸುತ್ತದೆ.
>
> –ಪ್ಯಾಬ್ಲೋ ನೆರುದ

ಭಾರತದ ಸಾಹಿತ್ಯಶಾಸ್ತ್ರ ಪರಂಪರೆಯಲ್ಲಿ ಸಾಹಿತ್ಯಕ್ಕೆ ನಿಗದಿಯಾದ ಗೊತ್ತುಗುರಿಗಳಿವೆ. ಅಂತೆಯೇ ಈ ಗುರಿಗಳನ್ನು ಸಾಧಿಸಲು ವಿವಿಧ ಮಾರ್ಗಗಳನ್ನೂ ಸೂಚಿಸಲಾಗಿದೆ. ಶ್ರುತಿ, ಸ್ಮೃತಿ ಮತ್ತು ಸಾಹಿತ್ಯಗಳಿಗೆಲ್ಲಾ ಧರ್ಮಬೋಧನೆಯೇ ಏಕೈಕ ಕರ್ತವ್ಯ. ಶ್ರುತಿಯು ಇದನ್ನು ಆಜ್ಞಾರೂಪದಲ್ಲೂ ಸ್ಮೃತಿಯು ಮೈತ್ರಿ ರೂಪದಲ್ಲೂ ಸಾಹಿತ್ಯವು ಪತ್ನೀ ರೂಪದಲ್ಲೂ ನೆರವೇರಿಸುತ್ತವೆಂದು ವಿವರಣೆ ನೀಡಲಾಗಿದೆ. ಧರ್ಮವೆಂಬುದು ನಿರಂತರವಾಗಿ ಬದಲಾವಣೆ ಹೊಂದುವುದು ಸಹಜವೆಂಬುದನ್ನು 'ಯುಗಧರ್ಮ' ಎಂಬ ಮಾತಿನಲ್ಲಿ ಸೂಚಿಸಲಾಗಿದೆ. ಸಮಾಜ ಮತ್ತು ಸಮಾಜ ಜೀವನಗಳು ತದೇಕಪ್ರಕಾರವಾಗಿ ಉಳಿಯುವುದಿಲ್ಲ. ಅವುಗಳು ಏಕೆ ಹಾಗೂ ಹೇಗೆ ವಿವಿಧರೂಪಗಳನ್ನು ತಾಳುತ್ತವೆಯೆಂಬುದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅನಗತ್ಯ. ತನ್ನ ಸ್ವಂತದ ಸಾಮಗ್ರಿಗಳ ಮತ್ತು ಮಾಮೂಲು ಯಂತ್ರಗಳ ಸಾಧನದಿಂದ ದುಡಿಯುವವನಿಗೂ ತನ್ನದಲ್ಲದ ಭಾರಿ ಯಂತ್ರಗಳ ಸಾಧನದಿಂದ ದುಡಿಯುವವನಿಗೂ ಅನೇಕ ವ್ಯತ್ಯಾಸಗಳಿವೆ. ಸಾವಿರಾರು ಜನ ಒಟ್ಟುಸೇರಿ ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಎಂತಹ ಮಡಿವಂತಿಕೆ ಸಾಧ್ಯವಾದೀತು? ಬೆಂಗಳೂರಿನ ನಗರ ಸಂಚಾರಿ ಬಸ್ಸುಗಳಲ್ಲಿ ಅದೃಷ್ಟವಶಾತ್ ಅಸ್ಪೃಶ್ಯತೆಯನ್ನು ಅನುಸರಿಸಲು ಸಾಧ್ಯವಿಲ್ಲವಲ್ಲವೇ? ವ್ಯಕ್ತಿಗಳ ನಡುವಣ ಸಂಬಂಧಗಳು ಬದಲಾಗುವುದು ಮಾನವನ ಚರಿತ್ರೆಯಲ್ಲಿ ಪ್ರಾಚೀನಕಾಲದಿಂದಲೂ ನಡೆದುಬಂದಿದೆ. ಒಂದೊಂದು ಕಾಲಕ್ಕೆ ಒಂದೊಂದು ತತ್ವ, ಆ ತತ್ವ ಪ್ರಣಾಲಿಕೆಯೇ ಧರ್ಮ, ಅದನ್ನರಿತು ನಡೆಯುವುದು ವ್ಯವಹಾರ. ಯಾವುದು ಸದ್ವ್ಯವಹಾರ ಮತ್ತು ಯಾವುದು ದುರ್ವ್ಯವಹಾರ ಎಂಬುದನ್ನು ಶ್ರುತಿ-ಸ್ಮೃತಿಗಳು ಘೋಷಿಸುತ್ತವಂತೆ. ಅದನ್ನೇ ಸಾಹಿತ್ಯವೂ ಮಾರ್ಮಿಕವಾಗಿ ಮತ್ತು ಚಮತ್ಕಾರದಿಂದ ತಿಳಿಯಹೇಳುತ್ತದೆ.

ಮಮ್ಮಟನೆಂಬ ಆಲಂಕಾರಿಕನು ಹೇಳುವಂತೆ ಕಾವ್ಯವು ವ್ಯವಹಾರವನ್ನೂ ಬೋಧಿಸುತ್ತದೆ. (ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ। ಸದ್ಯಃಪರನಿರ್ವೃತಯೇ

ಕಾಂತಾಸಮ್ಮಿತತಯೋಪದೇಶಯುಜೇ ॥) ಇದರ ಪ್ರಕಾರ ಕಾವ್ಯವು (ಅರ್ಥಾತ್, ಸಾಹಿತ್ಯವು) ಕವಿಯ ಸ್ವವ್ಯಾಪಾರ, ತನ್ನ ಸ್ವಂತ ಖುಷಿಗಾಗಿ ರಚಿಸಲ್ಪಡುವಂತಹುದು, ಅದರ ರಚನೆಗಿಂತಲೂ ಮಿಗಿಲಾದ ಉದ್ದೇಶ ಬೇರಾವುದೂ ಅದರಲ್ಲಿಲ್ಲ, ಅದರಿಂದ ಯಾವುದೇ ಸಾಮಾಜಿಕ ಪರಿಣಾಮವನ್ನಪೇಕ್ಷಿಸುವುದು ಬಾಲಿಶತನ, ಇತ್ಯಾದಿ ತರ್ಕವೆಲ್ಲಾ ಶುಷ್ಕವಾದುದು. ಕೇವಲ ತನ್ನ ಸಂತೋಷಕ್ಕೆ ಪ್ರತಿಭಾವಂತ ವ್ಯಕ್ತಿಯೊಬ್ಬ ಕಾವ್ಯವನ್ನು ರಚಿಸುವುದೇ ಪರಮ ಸತ್ಯವಾದಲ್ಲಿ ರಚಿತವಾದ ಕಾವ್ಯವನ್ನು ಪ್ರಕಟಿಸುವ ವ್ಯಾಮೋಹ ಕೆಲವು ಮೇಧಾವಿಗಳಿಗೇಕಿದೆ ಎಂದು ನನಗಂತೂ ಅರ್ಥವಾಗುವುದಿಲ್ಲ. ಸಂತೋಷ ಅಭಿವ್ಯಕ್ತವಾದಮೇಲೆ ಸಾಹಿತ್ಯವನ್ನು ಮುದ್ರಿಸುವ ಗೋಜಿಗೆ ಹೋಗುವ ಬದಲು ಅದನ್ನು ಹರಿದುಹಾಕಬಹುದಲ್ಲ! ಯಾರನ್ನೂ ಗೇಲಿಮಾಡಬೇಕೆಂಬ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿಲ್ಲ. ಸಾಹಿತ್ಯದಲ್ಲಿ ಅನುಭವಗಳನ್ನು ವ್ಯಕ್ತಪಡಿಸಲಾಗುತ್ತದೆ ಮತ್ತು ಆ ಅನುಭವಗಳ ಪರಿಚಯ ಬೇರೆಯವರಿಗೂ ಉಂಟಾಗುವುದು ಸಾಧುವಾದದ್ದು ಎಂಬ ದೃಷ್ಟಿಕೋನ ಬಹುಶಃ ಎಲ್ಲ ಸಾಹಿತ್ಯದ ಹಿಂಬದಿಯಲ್ಲೂ ಇದೆ.

ಸಾಹಿತ್ಯವನ್ನು ರಚಿಸುವವನು ನಿರ್ದಿಷ್ಟವಾದ ಒಂದು ಉದ್ದೇಶವನ್ನು ಹೊಂದಿದ ಮಾತ್ರಕ್ಕೆ ಆತನ ಕೃತಿಯು ಕಳಪೆಯದ್ದಾಗುವುದಿಲ್ಲ. ಮಿಲ್ಟನನು ಭಗವಂತನ ರೀತಿ ನೀತಿಗಳನ್ನು ಮಾನವನಿಗೆ ಒಪ್ಪಿಗೆಯಾಗುವಂತೆ ತಿಳಿಯಹೇಳುವ ಉದ್ದೇಶವನ್ನು ಹೊಂದಿದ್ದುದಾಗಿ ತನ್ನ ಅಮೋಘ ಕೃತಿಯ ಆದಿಯಲ್ಲೇ ಹೇಳಿದ್ದಾನೆ. ಆದರೂ ಆ ಕಾವ್ಯ ಒಂದು ಮೇರುಕೃತಿಯಾಗಿ ಉಳಿದಿದೆ. ಕಾವ್ಯದ ಪರಿಧಿಗೆ ಹೊರತಾದ ಬೇರಾವ ಉದ್ದೇಶವೂ ಇಲ್ಲವೆಂಬ ಧೋರಣೆಯನ್ನು ತಾಳಿ ರಚಿತವಾಗಿರುವ ಕೃತಿಗಳೆಲ್ಲಾ ಅತ್ಯಂತ ಶ್ರೇಷ್ಠವಾದುವೆಂದು ಹೇಳಲು ಬಾರದು.

ಪರಂಪರಾಗತವಾಗಿ ಬೆಳೆದುಬಂದಿದ್ದ ಸಂಪ್ರದಾಯಬದ್ಧವಾದ ಕೃತಿಗಳನ್ನೇ ಪ್ರಥಮದಲ್ಲಿ ರಚಿಸುತ್ತಿದ್ದ ಕೇರಳದ ಕುಮಾರನ್ ಆಸಾನ್ ಅವರು ತಮ್ಮ ಪ್ರಾಂತ್ಯದಿಂದ ಹೊರಹೋಗಿ ಸಾಹಿತ್ಯದ ನವೀನ ಪ್ರಕಾರಗಳನ್ನು, ಹಾಗೂ ಬಂಗಾಳದಲ್ಲಿ ತೀವ್ರವಾಗಿದ್ದ ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳನ್ನು ಕಂಡು ಮರಳಿದ ನಂತರ ಮಾಡಿದ್ದೇನು? ಸ್ವತಃ ತಾವೇ ತುಳಿತಕ್ಕೆ ಸಿಕ್ಕಿದ್ದ ಒಂದು ಜಾತಿಯವರಾಗಿದ್ದ ಆಸಾನ್ ಅವರು ಜಾತೀಯ ಕಟ್ಟಳೆಗಳಿಂದ ಉದ್ಭವಿಸುವ ಅಸಮಾನತೆಯ ವಿರುದ್ಧ ಟೊಂಕಕಟ್ಟಿ ನಿಂತರು. ಆ ಸಂದರ್ಭದಲ್ಲಿ ಸಂಪ್ರದಾಯಬದ್ಧವಾದ ರಚನೆಯನ್ನು ಕೈಬಿಟ್ಟು 'ದುರವಸ್ಥಾ' ಎಂಬೊಂದು ಕೃತಿಯನ್ನು ರಚಿಸಿದರು. ಇಲ್ಲಿಯ ನಾಯಕಿ ಒಂದು ನಂಬೂದ್ರಿ ಹುಡುಗಿ. 1921ರ ಮಲಬಾರ್ ದಂಗೆಯ ಸಮಯದಲ್ಲಿ ಮನೆಯಿಂದ ಕಂಬಿಕೀಳುವಳು. ನಾಯಕ ಹರಿಜನ ಪಂಗಡಕ್ಕೆ ಸೇರಿದವನು. ಆ ಕೃತಿಯ ಪೀಠಿಕೆಯಲ್ಲಿ ಆಸಾನ್ ಅವರು ಕೆಲವು ಪ್ರಮುಖ ವಿಚಾರಗಳನ್ನು ಚರ್ಚಿಸುತ್ತಾ ಒಂದು ಮಾತು ಹೇಳಿದ್ದಾರೆ. ಅದರ ಸಾರಾಂಶ ಇದು: ''ಕೆಲವು ಸೌಂದರ್ಯ ತತ್ವಗಳಿಗೆ ಹೊರತಾದದ್ದು ಈ ಕೃತಿ ಎಂಬುದನ್ನು ಯಾರಾದರೂ ಮನಗಾಣಬಹುದು. ಇದೊಂದು ದೋಷವೂ ಇರಬಹುದು. ಆದರೂ ಇದನ್ನು ರಚಿಸಲು ಒಂದು ಅಗಾಧವಾದ ಕಾರಣವಿತ್ತು. ಅದೆಂದರೆ, ಒಂದು ಆದರ್ಶವನ್ನು ಪ್ರಚಾರ ಮಾಡುವುದು.'' ಏನೋ ಪ್ರಚಾರ ಮಾಡ ಹೊರಟಿರುವ ದುಷ್ಟಕವಿ ಎಂದು ಕುಮಾರನ್ ಆಸಾನ್ ಅವರನ್ನು ನಿಂದಿಸಿ ಕಡೆಗಾಣಿಸುವ ಕೆಟ್ಟ ಧೈರ್ಯ ಬಹಳ ವಿಮರ್ಶಕರಿಗೆ ಇನ್ನೂ ಬಂದಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ.

ಪ್ರಚಾರ ಎಂಬ ಪದಕ್ಕೆ ಒಂದು ದುರ್ಗಂಧ ಅಂಟಿಕೊಂಡಿರುವಂತೆ ತೋರುತ್ತದೆ. ಆದ್ದರಿಂದ ಅದರ ಬದಲು ವಿಚಾರವಿನಿಮಯ ಅಥವಾ 'ಧರ್ಮಬೋಧನೆ' ಎಂಬ ಪದಗಳನ್ನು ಉಪಯೋಗಿಸಿದರೆ ಏನಾದರೂ ಈ ಅನಿಷ್ಟ ವಾಸನೆ ಕಡಿಮೆಯಾದೀತೋ

ಏನೋ! ಇಷ್ಟಂತೂ ನಿಜ : ಯಾವ ರೀತಿಯ ವಿಚಾರವೂ ಇಲ್ಲದ ಸಾಹಿತ್ಯಕೃತಿ ಇಲ್ಲ; ಇದ್ದರೆ ಅದು ಶ್ರೇಷ್ಠವೆನಿಸಿಕೊಳ್ಳಬಹುದಾದ ಮಟ್ಟಕ್ಕೆ ಏರಿಲ್ಲ. ಕಟ್ಟಾ ಸೌಂದರ್ಯೋಪಾಸಕರೂ ಒಂದು ವಿಚಾರದ ಹಿನ್ನೆಲೆಯಲ್ಲಿಯೇ ಆನಂದಾನುಭವ ಪಡೆದಿದ್ದಾರೆ. ಅಥವಾ ವಿಚಾರವೊಂದನ್ನು ಸೂಚಿಸುವ ಪ್ರತಿಮೆ ಇರಬಹುದು. ಸ್ವರೂಪ ಮಾತ್ರದಿಂದ ಮೆರೆಯುವ ಕೃತಿಗಳು ಚಾಕಚಕ್ಯತೆಯ ಸರ್ಕಸ್ಸಿಗೆ ಹೆಸರುವಾಸಿಯಾಗಬಹುದೇ ಹೊರತು ಕಾವ್ಯಮಯವಾದ ಕೃತಿಗಳೆಂದು ವಿಜೃಂಭಿಸಲಾರವು. ಅಂತಹ ಮಾದರಿಗಳು ಸಂಸ್ಕೃತ ಸಾಹಿತ್ಯದಲ್ಲಿ ಹೇರಳ ವಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ 'ವಿಚಾರರಹಿತ'ವಾದದ್ದು ಮಾತ್ರ 'ಪ್ರಚಾರರಹಿತ' ವಾದದ್ದು. ಈಗ ನಮ್ಮ ಮುಂದೆ ಬರುವ ಪ್ರಶ್ನೆ ಇಷ್ಟೆ: ಯಾವ ವಿಚಾರದ ಪ್ರಚಾರವು ಸಾಹಿತ್ಯಕ್ಕೆ ಅಪಚಾರ ಮಾಡುವುದಿಲ್ಲ, ಅಥವಾ ಕಳಂಕ ತರುವುದಿಲ್ಲ?

'ಕಲೆಗೋಸುಗವೇ ಕಲೆ' ಎಂಬ ಪ್ರಣಾಲಿಕೆಯನ್ನು ಚರ್ಚಿಸುವಾಗ ಮೊಟ್ಟಮೊದಲಿಗೆ ಹೇಳಬೇಕಾದ್ದೇನೆಂದರೆ ಕಲಾಕಾರನು ತನ್ನ ಸಾಮಾಜಿಕ ಸಂದರ್ಭಕ್ಕೆ ಹೊಂದಿಕೊಳ್ಳಲಾರದೆ ಚಡಪಡಿಸುವ ಸನ್ನಿವೇಶದಲ್ಲಿ ಹುಟ್ಟುವ ವ್ಯಾಖ್ಯಾನ ಇದು ಎಂದು. ವಿಶ್ವದ ಬಗ್ಗೆ ಅಥವಾ ಮಾನವ ಜೀವನದ ಬಗ್ಗೆ ವಿಚಾರವೊಂದನ್ನು ಕಲಾತ್ಮಕವಾಗಿ ಚಿತ್ರಿಸಿ ಆ ವಿಷಯವೆಲ್ಲಾ ಕೇವಲ ಸೌಂದರ್ಯ ಸಾಧನವಾಗಿದ್ದು ಆ ಕೃತಿಗಷ್ಟೇ ಸೀಮಿತವಾಗಿದೆಯೆಂದು ವಾದಿಸುವುದು ಮಹತ್ತರವಾದ ವಿರೋಧಾಭಾಸವೆಂದೆನಿಸುತ್ತದೆ. ವಿಚಾರರಾಹಿತ್ಯದಿಂದ ಸಾಹಿತ್ಯ ಉದ್ಭವ ವಾಗಲಾರದೆಂದು ಹಿಂದೆಯೇ ತರ್ಕಿಸಿದ್ದೇವೆ. ವಿಶ್ವದ ಸತ್ಯತೆಯನ್ನು ಕುರಿತು ಚಿಂತಿಸುವಾಗ ಪ್ರತಿಯೊಬ್ಬ ಶ್ರೇಷ್ಠ ಸಾಹಿತಿಯೂ ತನ್ನ ದೃಷ್ಟಿ, ಪ್ರತಿಕ್ರಿಯೆ ಮತ್ತು ಆಸೆ-ಆಕಾಂಕ್ಷೆಗಳನ್ನು ಹೊರಗೆಡಹುತ್ತಾನೆಂಬುದನ್ನು ಪ್ರಕೃತದಲ್ಲಿ ನಮ್ಮ ಮುಂದಿರುವ ಯಾವ ಶ್ರೇಷ್ಠ ಸಾಹಿತ್ಯ ಕೃತಿಯಿಂದಲಾದರೂ ತಿಳಿಯಬಹುದು. ವಿಚಾರಕ್ಕೆ ಒಂದು ಗಾಢವಾದ ಶಕ್ತಿಯಿದೆ. ಒಂದು ವಿಚಾರವು ಪ್ರಜ್ಞೆಯನ್ನಾವರಿಸಿದಾಗ ವ್ಯಕ್ತಿಯ ಹೊರಗಿನ ವಸ್ತುಗಳು ಹೇಗೆ ತನ್ನಲ್ಲಿ ಮಾರ್ಪಾಡನ್ನುಂಟುಮಾಡಬಹುದೋ ಅಂತೆಯೇ ವಿಚಾರವೂ ಮಾರ್ಪಾಡಿನ ಸಾಧನವಾಗಿ ಪರಿಣಮಿಸುತ್ತದೆ. ಆದ್ದರಿಂದಲೇ 'ಕಲೆಗಾಗಿ ಕಲೆ' ಎಂಬ ಇಲ್ಲದ ತತ್ವವನ್ನು ಪ್ರತಿಪಾದಿಸುವ ಬದಲು 'ಜೀವನಕ್ಕಾಗಿ ಕಲೆ', 'ಮಾನವನಿಗಾಗಿ ಕಲೆ' ಮತ್ತು 'ಮಾನವೀಯತೆಗಾಗಿ ಕಲೆ' ಎಂಬ ಅರ್ಥವತ್ತಾದ ತತ್ವಗಳನ್ನು ನಿರೂಪಿಸಬಹುದು. ವಸ್ತುಸ್ಥಿತಿಯನ್ನು ಎದುರಿಸಲು ಅಶಕ್ಯವಾದಾಗ ಅಥವಾ ಅಶಕ್ತರಾದಾಗ ಆ ವಸ್ತುಸ್ಥಿತಿಯನ್ನೇ ಮರೆಮಾಚುವುದು ಸುಲಭಮಾರ್ಗವಾಗಿ ತೋರುವುದು ಸಹಜವಾಗಿದೆ. ಕಾಲ ಮತ್ತು ದೇಶ ದೃಷ್ಟಿಯಿಂದ ದೂರವಾದದ್ದು ಮಧುರವಾಗಿ ಕಾಣುವುದು ಅಂತಹ ಕಾರಣದಿಂದ. ಭೂತಕಾಲದ ಸುವರ್ಣಯುಗಗಳ ಭವ್ಯ ವಿವರಣೆಗಳನ್ನು ಅಥವಾ ಗಂಧರ್ವಲೋಕದ ಆನಂದಮಯ ಜೀವನದ ವೃತ್ತಾಂತಗಳನ್ನು ಈ ರೀತಿ ಅರ್ಥಮಾಡಿಕೊಳ್ಳಬೇಕು. ಇಂದಿನ ಕಷ್ಟಕಾರ್ಪಣ್ಯಗಳನ್ನು ಸಹಿಸುವಂತೆ ಮಾಡಲು ಇದೊಂದು ಮಾರ್ಗವಿರಬೇಕು. ಈ ಕಾರ್ಪಣ್ಯಗಳನ್ನು ನಿರ್ಮೂಲನ ಮಾಡಲಾಗದಿದ್ದಾಗ ನಮ್ಮ ಭಾವನಾ ಪ್ರಪಂಚವೊಂದನ್ನು ಊಹಿಸಿಕೊಂಡು ಅತ್ಯಂತ ಆಕರ್ಷಕವಾದ ಮತ್ತು ಸುಖಮಯವಾದ ಜೀವನವನ್ನು ಚಿತ್ರಿಸಿಕೊಂಡು ಸಂತೃಪ್ತಿ ಪಡೆಯಬಹುದು. 'ದೇವರು ಕೊಟ್ಟ ತಂಗಿ'ಯಂತಹ ಸಿನಿಮಾ ಮತ್ತು 'ನಮ್ಮ ಸಂಸಾರ ಆನಂದ ಸಾಗರ' ಎಂಬ ಸಿನಿಮಾ ಹಾಡು, ಇತ್ಯಾದಿ, ಇಂತಹ ಕಲ್ಪನೆಗಳ ಫಲ. ಅತ್ಯಂತ ಅಧೀರಯುತವಾದ ವರ್ತನೆಯೂ ಇದಕ್ಕೆ ಅಂಟಿಕೊಂಡೇ ಬರುತ್ತದೆ. ಆಗ ಪದವೀಧರ ಳೊಬ್ಬಳು ಅಸಹಾಯಕಳಾಗಿ ''ಕತೆ ಹೇಳುವೆ, ನನ್ನ ಕತೆ ಹೇಳುವೆ'' ಎಂದು ಒರಲಿ

ಬಡಜನರ ಸಹಾನುಭೂತಿಯನ್ನಪೇಕ್ಷಿಸುವಂತಾಗುತ್ತಾಳೆ. ಬಡವರು ಸಹ ಏನಾದರೊಂದು ಕತೆ ಹೇಳಿಕೊಂಡು ಜೀವನ ನೂಕಿದರೆ ಸಾಕೆಂದು ಇದರ ಆಶಯವಿರಬೇಕು.

ಇದರಿಂದ ನಾನು ಸೂಚಿಸಬಯಸುವುದಿಷ್ಟೆ: ಸಾಹಿತ್ಯಕಲೆಯು ತನ್ನದೇ ಆದ ಪ್ರತ್ಯೇಕವಾದ ಸರ್ವತಂತ್ರ ಸ್ವಾತಂತ್ರ್ಯವನ್ನು ಹೊಂದಿಲ್ಲ, ಸಮಾಜದ ಅನೇಕ ಅಂಗಾಂಗಗಳಲ್ಲಿ ಅದೂ ಒಂದು; ಆದ್ದರಿಂದ ಸಮಾಜದ ಇತರ ಚಟುವಟಿಕೆಗಳಿಗೂ ಸಾಹಿತ್ಯಕ್ಕೂ ನಿತ್ಯ ಸಂಬಂಧವಿದೆ. ಸಾಹಿತ್ಯದ ಸ್ವರೂಪ, ತತ್ವ ಮತ್ತು ನಿಷ್ಠೆಗಳನ್ನು ಸಂಪೂರ್ಣವಾಗಿ ಅವ್ಯಾವಹಾರಿಕ ಜ್ಞಾನದೃಷ್ಟಿಯಿಂದ ಅಳೆಯಲಾಗುವುದಿಲ್ಲ. ಒಟ್ಟು ಸಾಂಸ್ಕೃತಿಕ ಜೀವನದ ಒಂದು ಭಾಗ ಸಾಹಿತ್ಯ. ಸಾಹಿತ್ಯ ಮತ್ತು ಸಾಂಸ್ಕೃತಿಕ ಜೀವನವು ಕೇವಲ ಇಚ್ಛಾಶಕ್ತಿಯಿಂದ ರೂಪಿತವಾಗದ ಅಂಶ. ಒಬ್ಬ ಝಾಡಮಾಲಿಯ ಸಾಂಸ್ಕೃತಿಕ ಜೀವನಕ್ಕೂ ನನ್ನ ಸಾಂಸ್ಕೃತಿಕ ಜೀವನಕ್ಕೂ ಇರುವ ವ್ಯತ್ಯಾಸಕ್ಕೆ ಕಾರಣ ನಮ್ಮಿಬ್ಬರ ಇಚ್ಛೆಗಳು ಮಾತ್ರವಲ್ಲ, ನಮ್ಮ ವಿಭಿನ್ನ ಪ್ರಜ್ಞೆಗಳು ನಮ್ಮ ಸಾಮಾಜಿಕ ಅಸ್ತಿತ್ವದಿಂದ ರೂಪಿಸಲ್ಪಟ್ಟಿವೆ. ಆತನಿಗಿರುವ ವಿರಾಮಕ್ಕೂ ನನಗೆ ದೊರಕುವ ವಿರಾಮಕ್ಕೂ ಅಂತರವಿದೆ. ನಮ್ಮಿಬ್ಬರ ಆರ್ಥಿಕ ಪರಿಸ್ಥಿತಿಗಳಲ್ಲೂ ಸಾಕಷ್ಟು ಅಂತರವಿದೆ. ಇದನ್ನೇ ಒಟ್ಟು ಸಮಾಜಕ್ಕೂ ಅನ್ವಯಿಸಬಹುದು. ಸಾಂಸ್ಕೃತಿಕ ಜೀವನಕ್ಕೆ ಒಂದು ತಳಹದಿ ಇದೆ; ಒಂದೊಂದು ರೀತಿಯ ಆರ್ಥಿಕ ವ್ಯವಸ್ಥೆಯಡಿಯಲ್ಲಿ ಒಂದೊಂದು ರೀತಿಯ ಸಂಸ್ಕೃತಿ ಆವಿರ್ಭಾವವಾಗುತ್ತದೆ. ೮ ಅಥವಾ ೧೦ನೆಯ ಶತಮಾನದ ದಾನಸ್ತುತಿಗಳಿಗೆ ಸಮಾನವಾದ ಸಾಹಿತ್ಯ ೧೯೮೦ರಲ್ಲಿ ಹುಟ್ಟಲಾರದು; ಅದು ಕಾಲಕ್ಕನುಗುಣವಾಗಿ ಬದಲಾವಣೆ ಯಾಗಿದೆ! ನಮ್ಮದು ಕ್ಯಾಬರೆ ಮತ್ತು ಝೋಪಡಿಗಳ ಸಹಜೀವನದ ಸಮನ್ವಯ ಸಂಸ್ಕೃತಿ. ಅದಕ್ಕೆ ತಕ್ಕ 'ಸ್ತುತಿ'ಗಳೂ ಹುಟ್ಟಿಕೊಳ್ಳುತ್ತವೆ.

ಹಾಗೆಂದಮಾತ್ರಕ್ಕೆ ನವನವೋನ್ಮೇಷಶಾಲಿಯಾದ ಪ್ರತಿಭೆಯನ್ನು ಹೊಂದಿರುವ ಕಲಾಕಾರನ ಸೃಷ್ಟ್ಯಾತ್ಮಕ ಪ್ರವೃತ್ತಿಗೆ ಸ್ಥಾನವಿಲ್ಲವೆಂದಾಗಲಿ, ಬೆಲೆಯಿಲ್ಲವೆಂದಾಗಲಿ ನನ್ನ ಆಶಯವೆಂದು ಭಾವಿಸಬಾರದು. ಎಲ್ಲ ಚಾರಿತ್ರಿಕ ಸಂದರ್ಭಗಳಲ್ಲೂ, ಬೆಳವಣಿಗೆಗಳಲ್ಲೂ ವ್ಯಕ್ತಿಗತವಾದ ಕ್ರಿಯಾತ್ಮಕ ಶಕ್ತಿಗೆ ಮೀಸಲಾದ ಸ್ಥಾನವು ಇದ್ದೇ ತೀರುತ್ತದೆ. ಪರಂಪರಾಗತವಾಗಿ ಬಂದಿರುವ ಮೌಲ್ಯಗಳ ವಿಸ್ತರಣೆಗೆ ಸದಾಕಾಲವೂ ಪ್ರತಿಯೊಂದು ತಲೆಮಾರಿನವರೂ ತಮ್ಮ ಕಾಣಿಕೆಯನ್ನು ಅರ್ಪಿಸುತ್ತಾ ಬಂದಿರುವುದು ಇತಿಹಾಸದಲ್ಲಿ ಗೋಚರಿಸುತ್ತದೆ. ಹಾಗೆ ಮಾಡದಿದ್ದಲ್ಲಿ ಸಾಹಿತ್ಯವು ಬರಡಾಗಿ ಉಳಿಯುತ್ತದೆ ಮಾತ್ರ. ಮಾನವ ಸಂಸ್ಕೃತಿಯ ಪ್ರಗತಿಪಥದಲ್ಲಿ ಅನುಗುಣವಾದ ನೂತನ ಛಾಯೆಯನ್ನು ಅಳವಡಿಸಿಕೊಳ್ಳುವುದರ ಜೊತೆಯಲ್ಲೇ ಅನನುಗುಣವಾದುದನ್ನು ಕೈಬಿಡುತ್ತಾ ಬರುವುದು ರೂಢಿಯಲ್ಲಿದೆ. ಭವಿಷ್ಯದಲ್ಲೂ ಹೀಗೆ ನಡೆಯುವುದು ಸ್ವಾಭಾವಿಕ. ಇಂದಿನ ಕಾಣಿಕೆಯು ಬಲವತ್ತರವಾಗಿರಬೇಕಾದರೆ ಸಾಹಿತ್ಯವು ಪ್ರತಿಪಾದಿಸುವ ಅನುಭವವು ಆಳವಾಗಿರಬೇಕೆಂಬುದು ಸ್ವಯಂಸಿದ್ಧವಾಗಿದೆ.

ಮಹಾನ್ ಕಲಾವಿದನೊಬ್ಬನು ಸ್ಥಾವರವಾದ ವಸ್ತುಗಳ ಮತ್ತು ಸಂದರ್ಭಗಳ ಚಿತ್ರಣದಿಂದಲೇ ತೃಪ್ತಿಯನ್ನು ಹೊಂದುವುದಿಲ್ಲ; ಬದಲಾಗಿ ಆಯಾ ಸಂದರ್ಭಗಳು ಬದಲಾಗುವ ಮಾದರಿ ಮತ್ತು ದಿಶೆಗಳನ್ನು ಸೂಚಿಸುವುದರಲ್ಲಿ ಮುಂದಾಗುತ್ತಾನೆ. ಹೀಗೆ ಮಾಡುವಾಗಲೇ ಸಾಹಿತಿಯು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕಾಗಿ ಬರುತ್ತದೆ. ಈ ಕಾರಣದಿಂದ ಸಾಹಿತಿ ಮತ್ತು ಸಮಾಜದ ಸಂಬಂಧವು ''ಕಮಲಪತ್ರಮಿವಾಂಭಸಿ'' ಆಗಲು ಸಾಧ್ಯವಿಲ್ಲ. ನಮ್ಮ ಪ್ರಜ್ಞೆಯು ಏನೇ ಇರಲಿ, ಹೊರಾವರಣದ ಸತ್ಯವು ತನ್ನದೇ ಆದ ಸ್ವರೂಪವನ್ನು ತಾಳಿರುತ್ತದೆ. ಸಮಾಜವು ಈ ಹೊರಾವರಣದ ಸತ್ಯದ ಒಂದು

ಭಾಗವಾದ್ದರಿಂದ ವ್ಯಕ್ತಿನಿಷ್ಠ ಪ್ರಜ್ಞೆಯು ಸಾಹಿತಿಗೆ ಸಾಧುವಾದ ಪ್ರಜ್ಞೆಯಾಗಲಾರದು.

ಸತ್ಯಾಸತ್ಯತೆಗಳ ನಡುವೆ ಮತ್ತು ಶ್ರೇಷ್ಠ ಹೀನಗಳ ನಡುವೆ ವ್ಯತ್ಯಾಸವನ್ನು ಗ್ರಹಿಸುವುದು ಸಾಮಾಜಿಕ ಬದಲಾವಣೆಗಳ ನಿಯಮವನ್ನು ಗ್ರಹಿಸುವುದೇ ಆಗಿದೆ. ಇದೇ ಸಾಹಿತಿಯ ಮತ್ತು ಕಲಾವಿದನ ನಿಷ್ಠೆ ಅಥವಾ ಒಲವು (ಬದ್ಧತೆ). ನಿಷ್ಠೆಗೂ ಪೂರ್ವಗ್ರಹ ಪೀಡೆಗೂ ಅಜಗಜಾಂತರ ವ್ಯತ್ಯಾಸವಿದೆಯೆಂಬುದನ್ನು ಒತ್ತಿಹೇಳಬೇಕಾಗಿಲ್ಲ. ನಿಷ್ಠೆಯನ್ನುಳ್ಳ ಸಾಹಿತಿ ಅಥವಾ ಕಲಾವಿದನೆನಿಸಿಕೊಂಡರೆ ಸಂಕೋಚಪಡಬೇಕಾದ ಅವಶ್ಯಕತೆ ಯಾರಿಗೂ ಇಲ್ಲ. ಸಮಾಜದ ವಸ್ತುಸ್ಥಿತಿಯನ್ನು ಗ್ರಹಿಸಿ, ಅದರಲ್ಲಿ ಲೋಪದೋಷಗಳನ್ನು ಗುರುತಿಸಿ, ಅವುಗಳ ನಿಯಂತ್ರಣಕ್ಕಾಗಿ ಒಂದು ನಿರ್ದಿಷ್ಟವಾದ ಮಾರ್ಗವನ್ನು ಅವಲೋಕಿಸುವುದು ಪ್ರತಿಯೊಬ್ಬ ಪ್ರಜ್ಞಾವಂತನ ಹಕ್ಕು ಹಾಗೂ ಕರ್ತವ್ಯ. ಈ ಕರ್ತವ್ಯವನ್ನು ಪಾಲಿಸುವುದರಿಂದ ಸಾಹಿತಿಯು ಕನಿಷ್ಠನಾಗುವುದು ಹೇಗೆ ಸಾಧ್ಯ ? ರಾಜಕೀಯವಾಗಿ ಯಥಾಸ್ಥಿತಿವಾದಿಗಳು ಅತಿಬುದ್ಧಿವಂತಿಕೆ ಯಿಂದ ''ಪಕ್ಷರಹಿತ ಪ್ರಜಾಪ್ರಭುತ್ವ''ವನ್ನು ಎತ್ತಿಹಿಡಿಯುತ್ತಾರೆ. ಪಕ್ಷರಹಿತದ ಬದಲು ವರ್ಗರಹಿತವಾದ ಪ್ರಜಾಪ್ರಭುತ್ವವನ್ನು ಎತ್ತಿಹಿಡಿದರೆ ಅವಮಾನದ ಪ್ರಸಂಗವೆಲ್ಲಿಂದ ಬಂತು ? ಅಥವಾ ಅದರಲ್ಲಿ ತಪ್ಪೇನು ? ನೇರವಾಗಿ ಪ್ರಗತಿಯನ್ನು ವಿರೋಧಿಸುವ ಬದಲು ಯಥಾಸ್ಥಿತಿವಾದದ ತತ್ವವನ್ನು ಪ್ರತಿಪಾದಿಸಿದರೆ ಭ್ರಾಂತರಾದ ಜನ ಅದನ್ನು ಒಪ್ಪಬಹುದೆಂದು ಯಾರಾದರೂ ಭಾವಿಸಿದರೆ ಅವರಿಗೆ ನಿರಾಶೆ ತಪ್ಪಿದ್ದಲ್ಲ.

ಇನ್ನುಳಿದ ಪ್ರಶ್ನೆಯೆಂದರೆ ''ಪ್ರಗತಿ ಯಾವುದು ?'' ಎಂಬುದು. ದೇವರು, ಗ್ರಹಗಳು, ಜ್ಯೋತಿಷ, ಜನಿವಾರ, ಶಿವದಾರ, ಇತ್ಯಾದಿಗಳನ್ನು ಜರಿಯುವುದೇ ಪ್ರಗತಿ ಪಂಥದ ಚಿಹ್ನೆ ಯಾಗಬಾರದು. ಇವುಗಳನ್ನೆಲ್ಲಾ ವೈಜ್ಞಾನಿಕವಾಗಿ ಪರಾಮರ್ಶಿಸಿ ಅವುಗಳ ಪೊಳ್ಳುತನವನ್ನು ಎತ್ತಿಹಿಡಿಯುವುದು ನಿಜಕ್ಕೂ ಪುರೋಗಾಮಿತ್ವದ 'ಕುರುಹೆನಿಸಿಕೊಳ್ಳುತ್ತದೆ. ಆದರೆ ಪುರೋಗಾಮಿತ್ವವು ಅಷ್ಟರಲ್ಲೇ ನಿಂತರೆ ಅಂತಹ ತತ್ವದಿಂದ ಯಾವ ಖಚಿತವಾದ ಪ್ರಯೋಜನವೂ ಇಲ್ಲ. ಸಮಾಜದಲ್ಲಿನ ವಿವಿಧ ವ್ಯವಸ್ಥೆ ಮತ್ತು ಅವ್ಯವಸ್ಥೆಗಳಿಂದಾಗಿ ರಚಿತವಾಗಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ವೈಯಕ್ತಿಕ ಹಿತಾಸಕ್ತಿ ರಕ್ಷಣೆಯ ಮಾರ್ಗವನ್ನು ತೋರೆದು ವಿಶ್ಲೇಷಿಸುವುದು ಪುರೋಗಾಮಿತ್ವದ ನೈಜ ಕುರುಹು. ದೇವರನ್ನು ಅಲ್ಲಗಳೆದು ಪಾಳೆಗಾರಿಕೆಯನ್ನು ಸಮರ್ಥಿಸಿದರೆ ಮತಿಭ್ರಾಂತಿಗೆ ಅದೊಂದು ನಿದರ್ಶನವಾಗಬಹುದಷ್ಟೆ! ಇನ್ನೊಂದು ಧ್ರುವದಲ್ಲಿ ಇದಕ್ಕೆ ಸಮಾನವಾದ ಇನ್ನೊಂದು ಚಿಹ್ನೆ ಕಾಣಬಹುದು. ಅಕ್ಟೋಬರ್ ೨ರಂದು ಖಾದಿ ಧರಿಸಿ, ಚರಖಾ ಹಿಡಿದು, ಬಿಳಿಟೋಪಿ ಹಾಕಿ (ತನ್ನ ತಲೆಯ ಮೇಲೆ!) ಮಹಾತ್ಮಾ ಗಾಂಧೀ ಕಿ ಜೈ ಕೂಗಿದರೆ ಅಷ್ಟಕ್ಕೆ ಅದು ಪ್ರಗತಿ ಯೆನಿಸಿಕೊಳ್ಳಲಾರದು. ಸಾಹಿತ್ಯ ಮತ್ತು ಕಲೆಗಳಲ್ಲಿ ಒಂದು ಅಂತಸ್ಸತ್ವದ ಅವಶ್ಯಕತೆ ಇದೆ, ಕಲಾತ್ಮಕವಾದ ಸೃಷ್ಟಿಗೆ ಪ್ರಾಧಾನ್ಯವಿದೆ. ಚಿತ್ರಿತವಾದ ವ್ಯಕ್ತಿಗಳೆಲ್ಲಾ ಶೋಷಿತ ರೈತರೋ, ಕೃಷಿ ಕಾರ್ಮಿಕರೋ ಅಥವಾ ತಮ್ಮ ಗುಡಿಸಲುಗಳಿಗೆ ಬೆಂಕಿ ಹಾಕಿಸಿಕೊಂಡ ಹರಿಜನರೋ ಆದಮಾತ್ರಕ್ಕೆ ಸಾಹಿತ್ಯ ಮತ್ತು ಕಲೆಯು ಪುರೋಗಾಮಿತ್ವಕ್ಕೆ ಅರ್ಹವೆನಿಸದು. ಕೆಂಪು ಮುದ್ರೆ ಧರಿಸಿ, ಕೆಂಬಾವುಟ ಹಿಡಿದು, ಸಾಮೂಹಿಕ ಕೃಷಿ ಕ್ಷೇತ್ರದತ್ತ ಟ್ರ್ಯಾಕ್ಟರ್‌ನಲ್ಲಿ ಕೂತು ಹತ್ತು ಮಂದಿ ಯುವಕರು ಹೋದಮಾತ್ರಕ್ಕೆ ನಾಟಕವೊಂದು ಪ್ರಗತಿಯುತವೆನಿಸಿಕೊಳ್ಳುವುದೂ ಅಷ್ಟೇ ಅಶಕ್ಯ. ಕೆಂಪಿನ ಬದಲು ಕೇಸರಿ ಬಣ್ಣ ಬರಬೇಕೆಂದು ನಾನು ಸೂಚಿಸುತ್ತಿಲ್ಲ. ಈ ಪ್ರತಿಮೆಗಳಿಗೆಲ್ಲಾ ಅರ್ಥ ಬರಬೇಕಾದರೆ ಕಲಾಕೃತಿಯು ತನ್ನ ಸಾಮಾಜಿಕ ನಿಷ್ಠೆಯನ್ನು ಮೂರ್ತ ಸ್ವರೂಪದಲ್ಲಿ ಹೊರಸೂಸಬೇಕು. ಮೇಲೆ ಹೇಳಿದ ರೀತಿಯ ಪಾತ್ರಗಳೇ ಪ್ರಧಾನವಾಗಿ

ಚಿತ್ರಿತವಾಗಬೇಕೆಂಬುದು ನಿಜ. ಮಧ್ಯಮ ವರ್ಗದ ವ್ಯಕ್ತಿಗಳ ಕಾಮಕಾಮನೆಗಳ ಮೂಲಕವೇ ಆತ್ಮಶೋಧನೆ ನಡೆಸುವ ಪ್ರವೃತ್ತಿ ಅಂತ್ಯವಾಗಬೇಕು.

ಮಾನವನ ಪುರೋಭಿವೃದ್ಧಿಯಲ್ಲಿ ಮತ್ತು ಮಾನವನ ಸತ್ವದಲ್ಲಿ ನಿಷ್ಠೆ ಹೊಂದುವುದೇ ಪುರೋಗಾಮಿತ್ವ ಅಥವಾ ಪ್ರಗತಿಯ ಪ್ರಜ್ಞೆ. ಮಾನವನ ಜೀವನವು ಕ್ರಮೇಣ ಉನ್ನತ ಮಟ್ಟಗಳಿಗೆ ವಿಕಾಸಹೊಂದಿರುವುದನ್ನು ನಾವು ಚರಿತ್ರೆಯಲ್ಲಿ ಕಾಣುತ್ತೇವೆ. ಮಾನವ ಅಧೋಗತಿಗಿಳಿಯುತ್ತಿದ್ದಾನೆಂದು ನೊಂದುಕೊಂಡು ಭವ್ಯವಾದ ಭೂತಕಾಲಕ್ಕೆ ಅಂಟಿ ಕೊಂಡಿರುವವರು ವರ್ತಮಾನವನ್ನು ಒಳಹೊಕ್ಕು ತಿಳಿಯಲು ತಯಾರಿಲ್ಲ. ಭೂತಕಾಲದ ಅರಿವಂತೂ ಅವರಿಗೆ ಇಲ್ಲವೇ ಇಲ್ಲವೆಂದರೂ ತಪ್ಪಾಗಲಾರದು. ಇನ್ನು ಅವರಿಗೆ ಭವಿಷ್ಯದ ಚಿಂತೆಯಾದರೂ ಏಕೆ ? ಹೇಗೂ ಪ್ರಪಂಚ ಹಾಳಾಗುವುದೇ ಅದರ ನಿಯಮವಲ್ಲವೇ! ಹಿಂದಿನ ಪರಂಪರೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕೆಂದು ಇದರ ಅರ್ಥವಲ್ಲ. ಜೀವನದ ಮೌಲ್ಯಗಳನ್ನು ಮಾಪನ ಮಾಡುವಾಗ ಇಂದಿಗೆ ಸಮಂಜಸವಾದ, ಅವಶ್ಯಕವಾದ ಮತ್ತು ಜೀವಂತವಾದ ಅನೇಕ ತತ್ವಗಳನ್ನು ಪ್ರಾಚೀನ ಕಲೆ ಮತ್ತು ಸಾಹಿತ್ಯಗಳಲ್ಲಿ ನಾವು ಗುರುತಿಸ ಬಹುದು. ಹಾಗೆ ಮಾಡದೆ ಸಾಂಸ್ಕೃತಿಕ ಪರಂಪರೆಯಲ್ಲಿ ನಿರ್ಜೀವವಾದ ಯಾವುದೋ ಅಮೂರ್ತ ತತ್ವವನ್ನು ಅವಲಂಬಿಸಿ ಕೂಡುವುದು ನಮ್ಮ ಬೆಳವಣಿಗೆಗೆ ಸಹಾಯಕವಾದದ್ದನ್ನು ಬಿಟ್ಟು ಅಡ್ಡಿಯುಂಟುಮಾಡುವುದನ್ನು ಗಂಟುಹಾಕಿಕೊಂಡಂತೆಯೇ ಸರಿ.

·ಮಾನವೀಯತೆಯು ಸಾಹಿತ್ಯ ಮತ್ತು ಕಲೆಗಳಿಗೆ ಅತ್ಯಗತ್ಯವಾದ ಅಂಗ. ಮಾನವನ ಸ್ವಭಾವವನ್ನು ತೀವ್ರತರವಾಗಿ ಮತ್ತು ಕಳಕಳಿಯಿಂದ ಅಭ್ಯಸಿಸುವುದು ಮಾನವೀಯತೆಯ ಲಕ್ಷಣ. ಉತ್ತಮವಾದ ಸಾಹಿತ್ಯ ಮತ್ತು ಕಲೆಯ ಪ್ರಕಾರಗಳು ಮಾನವನ ಜೀವನದ ಒಳಹೊಕ್ಕು ಅಧ್ಯಯನ ಮಾಡುವುದರ ಜೊತೆಗೆ ಅವನ ಸ್ವಭಾವವನ್ನು ತೀಕ್ಷ್ಣವಾಗಿ ಗ್ರಹಿಸಿ ಆ ಸ್ವಭಾವದ ಅಧಃಪತನದ ವಿರುದ್ಧ ಟೊಂಕಕಟ್ಟಿ ನಿಲ್ಲುತ್ತವೆಯೆಂದು ಈಗಾಗಲೇ ಹೇಳಿಯಾಗಿದೆ. ಮಾನವನ ಉದಾತ್ತತೆಯನ್ನು ಕಲುಷಿತವಾಗದಂತೆ ರಕ್ಷಿಸುವುದು ಉತ್ತಮ ಸಾಹಿತ್ಯದ ಜವಾಬ್ದಾರಿ. ಒಬ್ಬ ಮಾನವ ಇನ್ನೊಬ್ಬ ಮಾನವನ ತುಳಿತಕ್ಕೆ ಸಿಕ್ಕಿ ತನ್ನ ವ್ಯಕ್ತಿತ್ವವನ್ನು ಪೂರ್ಣರೂಪದಲ್ಲಿ ಹೊರಹೊಮ್ಮಿಸಿಕೊಳ್ಳುವುದು ಅಸಾಧ್ಯವಾದಲ್ಲಿ ಅದು ಮಾನವತೆಯ ಭಂಗ ಅಥವಾ ಪತನ ಎಂದೇ ನಮ್ಮ ತೀರ್ಮಾನ. ಸಮಾಜದ ಒಂದು ವರ್ಗದ ನಡವಳಿಕೆ ಮತ್ತು ಮೌಲ್ಯಗಳು ಒಟ್ಟು ಸಮಾಜದ ಸಾಂಸ್ಕೃತಿಕ ಜೀವನ ಎನಿಸಿಕೊಳ್ಳಕೂಡದು. ಅನೇಕ ಕಾರಣಗಳಿಂದಾಗಿ ನಮ್ಮಲ್ಲಿ ಅಂತಹ ಪರಿಸ್ಥಿತಿಯು ಒದಗಿಬಂದಿದೆ. ಅದನ್ನೆದುರಿಸಬೇಕಾದ್ದು ಇಂದಿನ ನಮ್ಮ ಕರ್ತವ್ಯಗಳಲ್ಲೊಂದು. ಈ ದೃಷ್ಟಿಯಿಂದ ವಿವಿಧ ರೀತಿಗಳ ಶೋಷಣೆಯನ್ನು ದೂರೀಕರಿಸಬೇಕಾದ ಅಗತ್ಯವನ್ನೂ ಸಾಧನಗಳನ್ನೂ ಕಂಡುಕೊಳ್ಳಬೇಕು. ಕೆಲವು ದರಿದ್ರ ನಾರಾಯಣರ ಮೇಲಿನ ಕನಿಕರದಿಂದಲೋ, ಬೇರೆಯವರಂತಲ್ಲದೆ ಉಚ್ಚ ಸಂಸ್ಕೃತಿಯ ಆರಾಧಕರು ನಾವೆಂದೋ, ಈ ಶೋಷಣಾವ್ಯವಸ್ಥೆಯನ್ನು ವಿರೋಧಿಸಿದರೆ ಸಾಲದು. ಸಂಪೂರ್ಣ ಗ್ರಹಿಕೆಯು ಇದರಿಂದ ಸಾಧ್ಯವಾಗುವುದಿಲ್ಲ.

ಸ್ವಾತಂತ್ರ್ಯೋತ್ತರದಲ್ಲಿ ಇಂದು ಭಾರತ ಪ್ರಮುಖವಾದ ಘಟ್ಟವೊಂದನ್ನು ಮುಟ್ಟಿದೆ. ಈಗಿನ ನಮ್ಮ ಹೆಜ್ಜೆಯು ಗುರುತರವಾದ ಹೆಜ್ಜೆ. ಅದನ್ನು ಸರಿಯಾದ ದಿಶೆಯಲ್ಲಿ ಇಡುವಂತೆ ಮಾಡುವುದರಲ್ಲಿ ಎಲ್ಲ ಪುರೋಗಾಮಿಗಳ ಹೊಣೆಯೂ ಸೇರಿದೆ. ಮಧ್ಯಯುಗದ ಅಂತ್ಯದಲ್ಲಿ ಬಂದ ಪುನರುಜ್ಜೀವನ ಘಟ್ಟದ ಚಟುವಟಿಕೆಗಳನ್ನು ಕುರಿತು ಬರೆಯುತ್ತಾ ಒಂದೆಡೆ ಫ್ರೆಡರಿಕ್ ಏಂಗೆಲ್ಸ್ ಹೀಗೆ ಹೇಳುತ್ತಾರೆ : ''ಆ ಕಾಲದ ಅನೇಕ ಶ್ರೇಷ್ಠ ಮತ್ತು ಧೀರ ವ್ಯಕ್ತಿಗಳ ಪೈಕಿ ಕೆಲವರು

ಲೇಖನಿಯಿಂದಲೂ ಇನ್ನು ಕೆಲವರು ಖಡ್ಗದಿಂದಲೂ ಮತ್ತೆ ಕೆಲವರು ಎರಡನ್ನೂ ಸಹ ಉಪಯೋಗಿಸಿಕೊಂಡು ಅಂದಿನ ಜೀವನ ಮತ್ತು ಚಳುವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಆದರಿಂದಲೇ ಅವರೆಲ್ಲಾ ಸರ್ವತೋಮುಖವಾದ ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಾಧ್ಯವಾದದ್ದು.'' ನೂತನ ವಿಧಾನದ ಪುನರುಜ್ಜೀವನಕ್ಕಾಗಿ ಇಂದು ನಾವು ಎದುರುನೋಡುತ್ತಿದ್ದೇವೆ. ನಮ್ಮ ಸಾಹಿತಿಗಳು, ಕಲಾಕಾರರು, ತತ್ವಜ್ಞಾನಿಗಳು, ಮತ್ತಿನ್ನಿತರ ಕ್ರಿಯಾವಂತ ವಿದ್ವನ್ಮಣಿಗಳು ಈ ಸನ್ನಿವೇಶದಲ್ಲಿ ತಾಳಬೇಕಾದ ನಿಲುವನ್ನು ಸಮಗ್ರವಾಗಿ ಚಿಂತಿಸಿ ಸ್ಪಷ್ಟ ಮಾಡಿಕೊಳ್ಳಬೇಕಾದ್ದು ಅನಿವಾರ್ಯವಾಗಿದೆ. ಹಾಗೆ ಮಾಡದಿದ್ದಲ್ಲಿ ಮುಂದಿನ ಚರಿತ್ರಕಾರರು ಮತ್ತು ಸಮಾಜ ವಿಜ್ಞಾನಿಗಳು ಈ ಬುದ್ಧಿವಂತರನ್ನೆಲ್ಲಾ ಪರತಂತ್ರ ಜೀವಿಗಳು, ಕ್ರೂರಿಗಳು, ಡಾಂಭಿಕ ಸಂಸ್ಕೃತಿಯ ಪ್ರತಿಪಾದಕರು, ಎಂದೆಲ್ಲಾ ತೆಗಳಬೇಕಾಗಬಹುದೆಂಬ ಭೀತಿ ಇಂದೇ ನಮ್ಮನ್ನು ಬಾಧಿಸುತ್ತದೆ. ಖ್ಯಾತ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್ ತನ್ನ ಒಂದು ಕವನದಲ್ಲಿ ಇದರ ಬಗ್ಗೆ ಸಾಹಿತಿಗಳಿಗೆ ಖಚಿತವಾದ ಎಚ್ಚರ ನೀಡಿದ್ದಾನೆ :

ಬರಲಿರುವ ದಿನಗಳಲಿ ಅವರು ಹೇಳುವುದಿಲ್ಲ:
''ತಾಮಸದ ಕಾಲವದು ಹಿಂದೆ ಇತ್ತೆಂದು.''
ಆದರೆ : ಕವಿಗಳೇತಕೆ ತಾವು ಮೂಕರಾದರು ಅಂತು ?

*– ಪ್ರಗತಿ ಪಂಥ : ಏಪ್ರಿಲ್ 1976*

# ಲೇಖಕರ ಸ್ವಾತಂತ್ರ್ಯ

ನೀನು ನಿನ್ನ ಹಾದಿ ಹಿಡಿ, ನಾಲಿಗೆಗಳನ್ನು ಸಡಿಲಬಿಟ್ಟವರು ಬಿಡಲಿ.

– ಡಾಂಟೆ

ನಮ್ಮಲ್ಲಿ ಆಗಾಗ್ಗೆ ಲೇಖಕರ ಸ್ವಾತಂತ್ರ್ಯವನ್ನು ಕುರಿತು ಚರ್ಚೆ ನಡೆಯುತ್ತದೆ. ರಾಷ್ಟ್ರದ ಬುದ್ಧಿಜೀವಿಗಳ ಪೈಕಿ ಅತಿಮೇಧಾವಿಗಳು ಲೇಖಕರಾಗಿರುತ್ತಾರೆಂದೂ, ಅವರ ಅನುಭವಗಳು ಬಹಳ ಆಳವಾದುವೆಂದೂ, ಅವರ ಭಾವನಾಶಕ್ತಿ ಅಮೋಘವಾದುದೆಂದೂ, ಅಂತಹವರ ಪ್ರಜ್ಞಾಶಕ್ತಿಗೆ ಕಡಿವಾಣವನ್ನು ಹಾಕುವುದು ಸರ್ವಥಾ ಯೋಗ್ಯವಲ್ಲವೆಂದೂ ಬೇರೆ ಬೇರೆ ಮಾತುಗಳಲ್ಲಿ ವಾದವನ್ನು ಮುಂದಿಡಲಾಗುತ್ತದೆ. ಈ ವಾದ ಅನವಶ್ಯಕ. ಏಕೆಂದರೆ, ಮೊದಲನೆಯದಾಗಿ ಅವರ ಸ್ವಾತಂತ್ರ್ಯಕ್ಕೆ ಎಂದೂ ಅಡ್ಡಿ ಬಂದಿಲ್ಲ; ಮತ್ತು ಎರಡನೆಯದಾಗಿ ಯಾರ ಅಡಚಣೆ ಮತ್ತು ಆಕ್ಷೇಪಣೆಯೂ ಇಲ್ಲದೆ ಸ್ವತಂತ್ರರಾಗಿ ಈ ಲೇಖಕರಲ್ಲನೇಕರು ಸೃಷ್ಟಿಸಿರುವ ಸಾಹಿತ್ಯದ ಮೌಲ್ಯ ವಿಶಿಷ್ಟವೇನೂ ಅಲ್ಲ. ಮೌಢ್ಯದ ಮುಸುಕಿನಿಂದ ಹೊರ ಬರದಂತಹ 'ತತ್ವಜ್ಞಾನಿ'ಗಳೂ ಸಹ ಕನ್ನಡದಲ್ಲಿ ಶ್ರೇಷ್ಠ ಕಾದಂಬರಿಕಾರರೂ ವಿಮರ್ಶಕರೂ ಆಗಿ ವಿಜೃಂಭಿಸುತ್ತಾರೆಂದು ನೆನೆದರೆ ಲೇಖಕರಲ್ಲಿ ಹಲವರು ತಮ್ಮ ಸ್ವಾತಂತ್ರ್ಯವನ್ನು ಎಷ್ಟು ಅಪಾರ್ಥ ಮಾಡಿಕೊಂಡಿದ್ದಾರೆಂದು ತಿಳಿಯುತ್ತದೆ. ಇವರಿಗೆ ಬೇಕಾದ್ದು ಯಾವುದಾದರೂ ಗಹನವಾದ ವಿಚಾರವನ್ನು ಮಂಡಿಸುವ ಸ್ವಾತಂತ್ರ್ಯವಲ್ಲ. ವಿಚಾರದಿಂದ ಸ್ವತಂತ್ರವಾದ, ಅಂದರೆ ಬರಡಾದ, ಕೃತಿಗಳನ್ನು ರಚಿಸಲು ಅವರಿಗೆ ಸಂವಿಧಾನದತ್ತವಾದ ಮೂಲಭೂತ ಹಕ್ಕಿದೆ, ಮತ್ತು ಅದನ್ನು ಚಲಾಯಿಸುವ ಮಂದಿಗೆ ನಮ್ಮಲ್ಲೇನೂ ಕೊರತೆಯಿಲ್ಲ. ಕಾರ್ಲ್ ಮಾರ್ಕ್ಸ್ ಅವರು ಒಂದೆಡೆ ಹೀಗೆ ಬರೆದಿದ್ದಾರೆ : ''ನಾಚಿಕೆಯಿಲ್ಲದೆ ಉದ್ದುದ್ದವಾಗಿ ನಾಲಿಗೆ ಚಾಚುವುದಕ್ಕೆ 'ಸ್ವಾತಂತ್ರ್ಯ' ಎಂಬ ಶ್ರೇಷ್ಠಪದವನ್ನು ಕೆಲವೊಮ್ಮೆ ಪ್ರಯೋಗಿಸುವುದುಂಟು.'' ಇದು ನಮ್ಮ ಪತ್ರಿಕಾ ಸ್ವಾತಂತ್ರ್ಯಕ್ಕೂ ಅನ್ವಯಿಸುತ್ತದೆ. ವ್ಯಕ್ತಿಸ್ವಾತಂತ್ರ್ಯದ ಸೋಗಿನಲ್ಲಿ ಪಾಲ್ಕೀವಾಲಾ ಮತ್ತು ಅವರ ಸಹಚರರು ನಮ್ಮ ಮುಂದಿಡುವ ಖೋಟಾ ಕಾರ್ಯಕ್ರಮಗಳಿಗೂ ಕಡಿಮೆಯಿಲ್ಲ. ಆದರೂ ಸ್ವಾತಂತ್ರ್ಯವನ್ನು ಕುರಿತು ಬೊಬ್ಬೆಯಿಡುವ ಪ್ರವೃತ್ತಿ ನಮ್ಮ ಅನೇಕ ಬುದ್ಧಿಜೀವಿಗಳಲ್ಲಿದೆ. (ಬುದ್ಧಿಜೀವಿಗಳಲ್ಲದವರನ್ನು ಏನೆಂದು ಕರೆಯೋಣ ? ''ಜೀವಿಸಲು ಬೇಕಾದ ಬುದ್ಧಿ ಇಲ್ಲದವರು'' ಎಂದೇ ? – ಹಾಗೆ ಬೇಕಾದ ಬುದ್ಧಿ ಯಾವುದು ? ಬುದ್ಧಿಜೀವಿಗಳು ಒರಲುವಂತೆ ಸ್ವಾತಂತ್ರ್ಯದ ಬಗ್ಗೆ ಒರಲುವುದು, ಯಾವ ಹೋರಾಟವೂ ಇಲ್ಲದೆಯೇ ಸುಖಸಮೃದ್ಧಿಗಳ ಕನಸನ್ನು ಕಾಣುವುದು !)

ಜಾರ್ಜ್ ಬರ್ನಾರ್ಡ್ ಷಾ ಅವರು ಡಿಕಿನ್ಸರ ಒಂದು ಕಾದಂಬರಿಗೆ ಮುನ್ನುಡಿ ಬರೆಯುತ್ತಾ ಹೀಗೆಂದರು : ''ಬ್ರಿಟನ್ನಿನ ಪಾರ್ಲಿಮೆಂಟರಿ ಪದ್ಧತಿಯಲ್ಲಿ ಸ್ವಾತಂತ್ರ್ಯವೆಂದರೆ ಕೂಲಿಯಾಳುಗಳನ್ನು ಶೋಷಿಸಿ ಸಂಪೂರ್ಣ ಪರತಂತ್ರ ಜೀವಿಯಾಗಿ ಬಾಳುವುದು ಎಂದರ್ಥ.'' ಲೇಖಕರು ಸ್ವಾತಂತ್ರ್ಯವನ್ನು ಕುರಿತು ಚರ್ಚಿಸುವಾಗ ಶ್ರೇಷ್ಠ ಲೇಖಕ ಷಾ ಅವರ ಮಾತನ್ನು ಮರೆಯದಿರುವುದು ಒಳ್ಳೆಯದು.

ಬ್ರಿಟಿಷರು ನಮ್ಮಲ್ಲಿ ಹುಟ್ಟುಹಾಕಿದ ನ್ಯಾಯಾಡಳಿತ ವ್ಯವಸ್ಥೆಯನ್ನೇ ನಂಬಿ ಇಂದಿಗೂ ಅದನ್ನೇ ಪೋಷಿಸುತ್ತಾ ನಾವೊಂದು ಮಹಾಪರಾಧ ಮಾಡಿದಂತಾಗಿದೆ. ಬ್ರಿಟನ್ನಿನಲ್ಲಿ ಈ ವ್ಯವಸ್ಥೆ ಹುಟ್ಟಿಕೊಂಡದ್ದು ಭಾರೀ ಜಮೀನ್ದಾರರ ಖಾಸಗಿ ಸ್ವತ್ತಾದ ಭೂಮಿಯನ್ನು ರಕ್ಷಿಸುವ ಸಂದರ್ಭದಲ್ಲಿ. ಆ ಸ್ವತ್ತು ಮತ್ತು ಇತರ ಸ್ವತ್ತುಗಳೂ ಇಂದು ಕಾನೂನಿನ ರಕ್ಷಣೆ ಪಡೆಯುತ್ತಿವೆ. ಹೀಗಾಗಿ ನಮ್ಮ ಭೂ ಮಸೂದೆಗಳೆಲ್ಲಾ ಕಾಗದ ಪತ್ರಗಳಲ್ಲೇ ನಿಂತಿವೆ. ಅದರಷ್ಟೇ ಮಹತ್ವದ ಅಂಶವೆಂದರೆ ಬ್ರಿಟನ್ನಿನ ಕಾಯಿದೆಯ ಹಿಂದಿರುವ ತತ್ವ ನಮ್ಮ ಸಂದರ್ಭಕ್ಕೆ ಸರಿಹೊಂದುವುದಿಲ್ಲ ಎಂಬುದು. ಅಲ್ಲೇನೋ ಯಾವೊಂದು ನಿಯಮದಿಂದಲೂ ತಪ್ಪಿತಸ್ಥನಲ್ಲದವನು ಶಿಕ್ಷೆಗೆ ಗುರಿಯಾಗದಿರಲೆಂದು ಕಾನೂನನ್ನು ಉಲ್ಲೇಖಿಸಲಾಗಿದೆ. ''ಒಂಭತ್ತು ಜನ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಂಡರೂ ಸರಿಯೆ, ತಪ್ಪಿತಸ್ಥನಲ್ಲದವನೊಬ್ಬನನ್ನೂ ಸಹ ಶಿಕ್ಷೆಗೆ ಗುರಿಮಾಡಬಾರದು'' ಎಂಬುದೇ ಅವರ ಆಕಾಂಕ್ಷೆ. ಇದರಂತೆಯೇ ರೂಪಿತವಾಗಿರುವ ನಮ್ಮ (ಅ)ನ್ಯಾಯಕ್ರಮದಿಂದ ಎಲ್ಲರಿಗೂ ತಿಳಿದಿರುವಂತೆ ಮಹಾ ಅಪರಾಧಗಳನ್ನೆಸಗಿರುವ ದುಷ್ಟ ಚೋರರನೇಕರು ಧೈರ್ಯವಾಗಿ, ಮರ್ಯಾದಸ್ಥರಾಗಿ, ಸಮಾಜದಲ್ಲೇ ಉಳಿದುಕೊಂಡು ಸಮಾಜದ ಅಡಿಪಾಯವನ್ನೇ ಧ್ವಂಸ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯನ್ನು ನ್ಯಾಯಾಂಗದ ಸ್ವಾತಂತ್ರ್ಯದ ಅಥವಾ ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಾವು ಸಹಿಸಿದ್ದೇ ಆದರೆ ಸಮಾಜದ ಬಹುಸಂಖ್ಯಾತರಿಗುಂಟಾಗುವ ಅನ್ಯಾಯ, ಹೀನಸ್ಥಿತಿ ಮತ್ತು ಕ್ಷೋಭೆಗಳಿಗೆ ಯಾರು ಜವಾಬ್ದಾರರು ? ಯಾವೊಬ್ಬನ ಸ್ವಾತಂತ್ರ್ಯವೂ ಇನ್ನಿತರರ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಸಿದುಕೊಳ್ಳುವಂತಹ ಪ್ರಮೇಯವನ್ನುಂಟುಮಾಡಬಾರದು. ಹಾಗೆ ಮಾಡಿದರೆ ಅದು ರಾಕ್ಷಸೀ ಸ್ವಾತಂತ್ರ್ಯ! ನಮ್ಮ ಬಂಡವಾಳಶಾಹಿ ಪತ್ರಿಕೆಗಳಿಂದ ಬಹಳವಾಗಿ ಪ್ರೇರಿತರಾಗಿರುವವರಲ್ಲಿ ಹಲವರು ಸಮಸ್ಯೆಯನ್ನು ಈ ದೃಷ್ಟಿಯಿಂದ ವಿಮರ್ಶಿಸಿಯೇ ಇಲ್ಲ. ದುರದೃಷ್ಟವಶಾತ್ ಅಂತಹ ಅಸಾಧಾರಣ ಮೂರ್ಖರಲ್ಲಿ ನಮ್ಮ ಕೆಲವು ಲೇಖಕರೂ ಸೇರಿದ್ದಾರೆಂದು ಹೇಳಿದರೆ ಇತರ ಲೇಖಕರು ತಪ್ಪಾಗಿ ಭಾವಿಸಬಾರದು. ಗುತ್ತೇದಾರಿ ಬಂಡವಳಿಗರು ವಿದೇಶೀ ಬಂಡವಳಿಗರೊಡನೆ ಸೇರಿ, ಸನ್ನಾಹ ಮಾಡಿ, ಸಾಮ್ರಾಜ್ಯಶಾಹಿಯ ಕ್ರೂರ ಸಂಗೀತಕ್ಕೆ ತಾಳ ಹಾಕಿ ಕುಣಿಯುವುದು ಸ್ವಾಭಾವಿಕ. ಹಾಗೆ ಕುಣಿಯುವುದೇ ಸ್ವಾತಂತ್ರ್ಯದ ಅತ್ಯಂತ ಉನ್ನತ ದೆಶೆ ಎಂದು ಅವರು ಪ್ರಲಪಿಸಿದರೆ ನಾವು ಅಥವಾ ನಮ್ಮ ಲೇಖಕರೇಕೆ ಕೇಕೆ ಹಾಕಿಕೊಂಡು ಅವರೊಡನೆ ದನಿಗೂಡಿಸಬೇಕೋ ನಮಗಂತೂ ತಿಳಿಯುವುದಿಲ್ಲ. ಗುತ್ತೇದಾರಿ ಬಂಡವಳಿಗರ ವರ್ಗಹಿತಕ್ಕೂ, ಕೆಲಸ ಮಾಡಿ ಜೀವಿಸುವವರ ವರ್ಗಹಿತಕ್ಕೂ ವ್ಯತ್ಯಾಸವೇ ಇಲ್ಲವೇ ? ಅಥವಾ, ವ್ಯತ್ಯಾಸ ಬೇಡವೇ ? ಈ ಪ್ರಶ್ನೆಗೆ ನಮ್ಮ ಕೆಲವು ಲೇಖಕ ಮಿತ್ರರ ಪ್ರತಿಕ್ರಿಯೆ ಏನು ?

ಇಂದು ಸಾಹಿತ್ಯ ವಿಮರ್ಶೆಯ ಪ್ರಸ್ತಾಪ ಬಂದಾಗಲೆಲ್ಲಾ ಸಾಹಿತ್ಯ ವಿಮರ್ಶೆಯ ಮೌಲ್ಯ ಮಾಪನದ ಅಳತೆಗೋಲಿನ ಸ್ವರೂಪದ ಬಗ್ಗೆ ಟೀಕೆ ತುಂಬಾ ಕೇಳಿಬರುತ್ತಿದೆ. ಸಾಹಿತ್ಯೇತರ ಮಾನದಂಡಗಳಿಂದ ಸಾಹಿತ್ಯ ವಿಮರ್ಶೆ ಮಾಡಿ, ಅಸಾಹಿತ್ಯಿಕ ರಾಜಕೀಯ ಮಾಡಿ, ಸಾಹಿತ್ಯ ಕ್ಷೇತ್ರವನ್ನು ಕೆಲವರು ಹೊಲಸು ಮಾಡುತ್ತಿರುವರೆಂಬ ಕೂಗು ಒಂದು ಗುಂಪಿನ ವಿಮರ್ಶಕರಿಂದ ಕೇಳಿಬರುತ್ತಿದೆ. ಕೇವಲ ಕೃತಿನಿಷ್ಠವಾದ ಸಾಹಿತ್ಯ ವಿಮರ್ಶೆ ಬೇಕೆಂದು ಬಯಸುವ ಈ ವಿಮರ್ಶಕರು ಕೃತಿಯಲ್ಲಿ ಏನಿರಬೇಕೆಂದು ಬಯಸುತ್ತಾರೋ ತಿಳಿಯದು. ಕೃತಿ ಪ್ರತಿಪಾದಿಸುವ ಧೋರಣೆ ಮತ್ತು ಅದರ ವಸ್ತುವನ್ನು ಕುರಿತ ವೈಜ್ಞಾನಿಕವಾದ ಸಾಂಸ್ಕೃತಿಕ ವಿಶ್ಲೇಷಣೆ ಮಾಡಿದರೆ, ಅದು 'ಅಸಾಹಿತ್ಯಿಕ' ಹೇಗಾಗುತ್ತದೋ ತಿಳಿಯದು. ಹಾಗಿಲ್ಲದೆ ಕೇವಲ

ಕೃತಿಯ ಅಭಿವ್ಯಕ್ತಿಯ ಅಂದಚಂದವನ್ನು ಹಾಡಿ ಹೊಗಳುವುದಷ್ಟೇ ನಿಜವಾದ ಸಾಹಿತ್ಯ ವಿಮರ್ಶೆಯಾದಲ್ಲಿ, ಅಂತಹ ಸಾಹಿತ್ಯ ವಿಮರ್ಶೆ ಇಂದು ನಮಗೆ ಬೇಡವೇ ಬೇಡ.

ಈ ಸಮಸ್ಯೆ ಮತ್ತು ಪ್ರಶ್ನೆಗಳನ್ನು ಸಾಹಿತ್ಯ ಮತ್ತು ವಿಮರ್ಶೆಗಳ ಕ್ಷೇತ್ರದಲ್ಲಿ ಹಿಂದಿನಿಂದಲೂ ಚರ್ಚಿಸುತ್ತಾ ಬಂದಿರುವ ಒಂದು ತತ್ವದೊಳಗೆ ನಾವು ಕಾಣುತ್ತೇವೆ. ಅದು ಸಾಹಿತ್ಯ ಮತ್ತು ಕಲೆಗಳ ಸ್ವರೂಪ ಮತ್ತು ಕರ್ತವ್ಯ. ಅಮಿತಾನಂದವನ್ನು ನೀಡುವ ಸಾಹಿತ್ಯದಲ್ಲಿ ಯಾವ ಕರ್ತವ್ಯವನ್ನೂ ಆರಸಬಾರದೆಂದು ಹೇಳುವ ಜನರನ್ನು ಸೌಂದರ್ಯಾರಾಧಕರು ಎಂದು ಕರೆಯುವುದು ವಾಡಿಕೆ. ಸೌಂದರ್ಯಸೃಷ್ಟಿಯೇ ಕಲಾಕೃತಿಯ ಅಥವಾ ಸಾಹಿತ್ಯದ ಧ್ಯೇಯ. ಅದಕ್ಕಿಂತಲೂ ಭಿನ್ನವಾದ ಮತ್ತು ಹೆಚ್ಚಿನ ಗುಣವನ್ನಾಗಲೀ ಕ್ರಿಯೆಯನ್ನಾಗಲೀ ಸಾಹಿತ್ಯಕ್ಕೆ ಆರೋಪಿಸಿದರೆ ಸಾಹಿತ್ಯವು ಕ್ಷುದ್ರವಾಗುತ್ತದೆಯೆಂದು ಇವರ ವಾದ. ನಮ್ಮ ಸುತ್ತಣ ಪ್ರಪಂಚದ ದೈನಂದಿನ ಜೀವನದಲ್ಲಿ ಕಾಣಬರುವ ಕಷ್ಟನಷ್ಟಗಳನ್ನಾಗಲಿ ಕಡು ಕಾರ್ಪಣ್ಯವನ್ನಾಗಲಿ ಚಿತ್ರಿಸಿದರೆ ಅದೇನೂ ಅಷ್ಟೊಂದು ಸುಂದರವಾಗಿರಲಾರದೆಂದು ಇವರ ಭೀತಿ ಇರಬೇಕು. ಆದ್ದರಿಂದಲೇ ಅಂತಹ ಸ್ವರೂಪವನ್ನುಳ್ಳ ಸಾಹಿತ್ಯವನ್ನು ಇವರು ಒಂದೇ ಮಾತಿನಲ್ಲಿ ನಿಕೃಷ್ಟವನ್ನಾಗಿ ಮಾಡುತ್ತಾರೆ. ಇವರ ಪ್ರಕಾರ ಆ ಸಾಹಿತ್ಯ ಕೇವಲ ಪ್ರಚಾರ ಸಾಹಿತ್ಯ ! ಯಾವುದಾದರೊಂದು ರೀತಿಯಲ್ಲಿ ಮೂಢನಂಬಿಕೆಯನ್ನೋ ಧರ್ಮಾಂಧತೆಯನ್ನೋ ನಿರೂಪಿಸಿದರೆ ಅದು ವರ್ಗಪರವಾದ ಸಾಹಿತ್ಯವಲ್ಲ, ಅದು ಸ್ವತಂತ್ರಸಾಹಿತ್ಯ ! ಆದರ ವಿರುದ್ಧ ಸಾಹಿತಿಯು ಏನಾದರೂ ಹೇಳಿದರೆ ಅದು ಕೇವಲ ಪ್ರಚಾರ !!

ಈ ತರ್ಕವನ್ನು ವಿಶ್ಲೇಷಿಸುತ್ತಾ ಇ.ಎಂ.ಎಸ್. ನಂಬೂದ್ರಿಪಾದ್ ಅವರು ಸ್ಪಷ್ಟವಾಗಿ ಒಂದು ಮಾತನ್ನು ಹೇಳುತ್ತಾರೆ : ಎಲ್ಲ ಸಾಹಿತ್ಯವೂ ಒಂದಲ್ಲ ಒಂದು ರೀತಿಯ ಪ್ರಚಾರವೇ ಆಗಿದೆ. ಪ್ರಚಾರಕನೆಂಬ ಹೆಸರನ್ನು ಕೊಟ್ಟು ಶ್ರೇಷ್ಠವಾದ ಯಾವ ಲೇಖಕನನ್ನೂ ಕಸದ ಬುಟ್ಟಿಗೆ ಹಾಕಲು ಸಾಧ್ಯವಿಲ್ಲ. ಅಂತೆಯೇ ವಂದಿಮಾಗಧನೆಂಬ ಬಿರುದು ಕೊಟ್ಟು 'ಸ್ವತಂತ್ರ' ಲೇಖಕನೊಬ್ಬನನ್ನು ಅಲ್ಲಗಳೆಯುವಂತೆಯೂ ಇಲ್ಲ.

'ಸ್ವಾತಂತ್ರ್ಯ'ವು ಸಾಹಿತ್ಯದಲ್ಲಿ ಕೆಲವೊಮ್ಮೆ ಕೇವಲ ತಾಂತ್ರಿಕತೆಯ ರೂಪದಲ್ಲಿ ಪರ್ಯವಸಾನವಾಗಬಹುದು. ಎಲ್ಲಿ ಭಾವನೆ ಮತ್ತು ವಿಷಯಗಳಿಗೆ ಅಭಾವವಿದೆಯೋ ಅಲ್ಲಿ ತಾಂತ್ರಿಕತೆಯೇ ಅತ್ಯಂತ ಶ್ರೇಷ್ಠವಾದುದೆಂದು ಪರಿಗಣಿಸಲ್ಪಡುವುದು ಸಹಜವಾಗಿದೆ. ಸೌಂದರ್ಯವೇ ಸಾಹಿತ್ಯದ ಸೀಮಾರೇಖೆ ಎಂದು ಹೊರಡುವ ಸಾಹಿತಿಗಳು ಈ ನಾಮರೂಪ ಭೇದದ ಹುಡುಗಾಟದಲ್ಲಿ ಮತ್ತು ಥಳುಕಿನ ಪ್ರಪಂಚದಲ್ಲಿ ಸಿಲುಕಿ ಒದ್ದಾಡುತ್ತಿರುವುದನ್ನೂ ನಮ್ಮ ಆಧುನಿಕ ಸಾಹಿತ್ಯದಲ್ಲಿ ನಾವು ಕಾಣುತ್ತಿದ್ದೇವೆ. ಇದನ್ನೇ ಸಾಹಿತ್ಯದ ಮೇರುಭಾಗವೆಂದು ಬಗೆಯಲಾದೀತೆ ?

ರಾಬರ್ಟ್ ಫ್ರಾಸ್ಟ್ ಎಂಬ ಅಮೆರಿಕಾದ ಕವಿ ಒಂದೆಡೆ ಹೀಗೆ ಹೇಳುತ್ತಾನೆ : ''ಆನಂದದಲ್ಲಿ ಪ್ರಾರಂಭವಾಗುವ ಕಾವ್ಯವು ಅಂತಿಮವಾಗಿ ವಿವೇಕದತ್ತ ನಮ್ಮನ್ನೊಯ್ಯುತ್ತದೆ.'' ಯಾವ ಪ್ರಜ್ಞೆಯೇ ಆಗಲಿ ಅದು ಸಾಹಿತ್ಯಕ್ಕೆ ಬಾಹಿರವಾದುದೆಂದು ವಾದಿಸುವವರು ಕೇವಲ ತಿಳಿಗೇಡಿ ತನವನ್ನು, ಬೇಜವಾಬ್ದಾರಿತನವನ್ನು ಮತ್ತು ಔದಾಸೀನ್ಯವನ್ನು ಪ್ರಚಾರ ಮಾಡುತ್ತಾರೆಂಬುದನ್ನು ಮರೆಯಬಾರದು. ಸಾಹಿತ್ಯವು ವೈಯಕ್ತಿಕ ಭಾವನೆಗಳ ಆಧಾರದ ಮೇಲೆ ಬೆಳೆಯುತ್ತದೆಂಬುದು ನಿಜ; ಸಾಹಿತ್ಯವು ವೈಯಕ್ತಿಕ ಭಾವನೆಗಳಿಗೆ ಮಾಧ್ಯಮವಾಗಬಹುದೆಂಬುದೂ ನಿಜ. ಆದರೆ ಹೀಗೆ ಹುಟ್ಟುವ ಸಾಹಿತ್ಯವು ಶ್ರೇಷ್ಠಮಟ್ಟಕ್ಕೇರಬೇಕಾದರೆ, ಲೆನಿನ್ನರು ಹೇಳುವಂತೆ ಅದು ಒಂದು ವಸ್ತುನಿಷ್ಠ ಅಥವಾ ವಾಸ್ತವ ಸತ್ಯದತ್ತ ಹೋಗಬೇಕು.

ಸಾಹಿತ್ಯದ ಸ್ವರೂಪ ಮತ್ತು ಗುಣಮಟ್ಟಗಳನ್ನು ಸಾಮಾಜಿಕ ಜೀವನದ ಪರಿವೆಯಿಲ್ಲದೆ ತೀರ್ಮಾನಿಸಲು ಸಾಧ್ಯವಿಲ್ಲ. ಸಮಾಜ ಜೀವನವೆಂಬುದೊಂದು ಅನೇಕಾವಯವಗಳ ಸಂಘಾತ. ಇದರಲ್ಲಿ ಒಂದೊಂದು ಅವಯವವೂ ಮತ್ತೊಂದರೊಡನೆ ಸಂಬಂಧವನ್ನು ಹೊಂದಿದೆ. ಈ ಸಂಬಂಧಗಳು ಆಯಾಕಾಲದ ಆರ್ಥಿಕ ಶಕ್ತಿಗಳನ್ನು ಅವಲಂಬಿಸಿರುತ್ತವೆ. ಏಕೆಂದರೆ, ವೈಯಕ್ತಿಕ ಸಂಬಂಧಗಳಿಗೂ, ಉತ್ಪಾದನಾಕ್ರಮಗಳಿಗೂ ನೇರವಾದ ಸಂಬಂಧವಿದೆ. ಯಾವೊಂದು ಘಟ್ಟದಲ್ಲೂ ಸಮಗ್ರ ಸಾಮಾಜಿಕ ಬೆಳವಣಿಗೆಯನ್ನು ಉಪೇಕ್ಷಿಸಿ ಜೀವನವನ್ನು ವಿಶ್ಲೇಷಿಸಿದರೆ ಸಾಹಿತ್ಯವಾಗಲಿ, ವಿಮರ್ಶೆಯಾಗಲಿ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವ ವರ್ಗ ಮನೋವಿಜ್ಞಾನವನ್ನು ಕಡೆಗಣಿಸಿದಂತಾಗುತ್ತದೆ. ಜೀವನದಲ್ಲಿ ನಾವು ಕಾಣುವುದೇನು ? ಉತ್ಪಾದನಾ ಸಾಮಗ್ರಿ, ಪ್ರಕೃತಿ ಸಂಪತ್ತು, ಜಾತಿ, ಧರ್ಮ, ಸ್ಥಾನಮಾನ, ಇತ್ಯಾದಿಗಳ ಆಧಾರದ ಮೇಲೆ ನಡೆಯುವ ಶೋಷಣೆಗಿಂತ ಪ್ರತ್ಯೇಕವಾದದ್ದಾದರೂ ಸಾಹಿತ್ಯವನ್ನು ವರ್ಗಹಿತದ ರಕ್ಷಣೆಗಾಗಿ ಬಹುವಿಧಗಳಲ್ಲಿ ಉಪಯೋಗಿಸಲಾಗುತ್ತದೆ. ಅದಿಲ್ಲದಿದ್ದರೆ ಸೋವಿಯೆತ್ ಒಕ್ಕೂಟದ ಅಲೆಗ್ಸಾಂಡರ್ ಸೋಲ್ಜೆನಿತ್ಸಿನ್‌ಗೆ ನೊಬೆಲ್ ಪಾರಿತೋಷಕ ಏಕೆ ನೀಡಲಾಗುತ್ತಿತ್ತು? ಆತನು ರಚಿಸಿರುವ ಸಾಹಿತ್ಯವು ಗಾತ್ರದಲ್ಲಿ ಮಹತ್ತರ ವಾಗಿದೆಯಾದರೂ ಮೌಲ್ಯದ ದೃಷ್ಟಿಯಿಂದ ಅದರಲ್ಲಿ ಸಿಗುವುದು ಅತ್ಯಲ್ಪ. ಮಾನವೀಯತೆಯ ಲವಲೇಶವೂ ಇಲ್ಲದ ಆತನ ಸಾಹಿತ್ಯವು ರಾಜಕೀಯವಾಗಿ ಪ್ರಮುಖವಾಗಿದೆಯಾದ್ದರಿಂದ ಬಂಡವಾಳಶಾಹಿ ಸಮಾಜವು ಆತನಿಗೆ ಪುರಸ್ಕಾರ ನೀಡುವುದು ಉಚಿತವಾಗಿದೆ. ಆದರೆ ಅಂತಹ ಸಾಹಿತ್ಯದ ಜೀವಮಾನವೆಷ್ಟು? ಕೆಲವು ತಿಂಗಳುಗಳ ಹಿಂದೆ ಪ್ರತಿನಿತ್ಯ ಈ 'ಶ್ರೇಷ್ಠ ಕಲಾವಿದ'ನ – ಸೋಲ್ಜೆನಿತ್ಸಿನ್‌ನ – ಮಾತೇ ಮಾತು! ಆತನ ಕೃತಿಗಳನ್ನು ಓದಿದವರೆಷ್ಟು ಮಂದಿ ? ಆದರೂ ದಿನಪತ್ರಿಕೆಗಳಲ್ಲಿ ಆತನ 'ಸ್ವಾತಂತ್ರ್ಯ'ದ ಬಗ್ಗೆ ರಾದ್ಧಾಂತವೋ ರಾದ್ಧಾಂತ ! ಆತನಿಗೆ ಕೊಟ್ಟಿರದ 'ಸ್ವಾತಂತ್ರ್ಯ' ಕುರಿತು ಚಿಂತಿಸುವ ನಮ್ಮ ಭಾರತೀಯ ನಾಗರಿಕರು ತಮ್ಮ ಸುತ್ತ ಜೀವಿಸುತ್ತಿರುವ ಕಡುಬಡವರ ಸ್ವಾತಂತ್ರ್ಯಕ್ಕಾಗಿ ಏಕೊಂದು ಹೋರಾಟ ಹೂಡುವುದಿಲ್ಲ? ಸ್ವರೂಪ ಮಾತ್ರದಲ್ಲಿ ಪ್ರಜಾಪ್ರಭುತ್ವವೆನಿಸಿಕೊಳ್ಳುವಂತಹ ಕ್ರಮವನ್ನು ಘೋಷಿಸಿ ದಾಸ್ಯ ಜೀವನ ಮುಂದುವರಿಸಬೇಕೆಂದು ಯಾವ ನಿಯಮವಿದೆಯೋ ತಿಳಿಯದು. ಇಂತಹ ತೋರಿಕೆಯ 'ಸ್ವಾತಂತ್ರ್ಯ'ದಿಂದ ಮರುಳಾಗಲು ಜನ ಇನ್ನೂ ಕಾರ್ಗತ್ತಲಲ್ಲೇ ಜೀವಿಸುತ್ತಿದ್ದಾರೆಯೇ ? ಯಾವನೋ ತನ್ನ ಮೂರನೆಯ ಹೆಂಡತಿ ಸತ್ತಾಗ ಮೂರು ದಿನ ಸತತವಾಗಿ ಕಣ್ಣೀರು ಸುರಿಸಿ ನಾಲ್ಕನೆಯ ಹೆಂಡತಿಯನ್ನು ಹುಡುಕಲು ಆರಂಭಿಸಿದನಂತೆ. ಪ್ರಜಾಪ್ರಭುತ್ವದ ಬಗ್ಗೆ ಕೆಲವರ ಕಾಳಜಿ, ಸ್ವಾತಂತ್ರ್ಯದ ಬಗ್ಗೆ ಸೋಲ್ಜೆನಿತ್ಸಿನ್ ಕಾಳಜಿ, ಎಲ್ಲಾ ಈ ಮಟ್ಟದ್ದೇ ಎಂದು ಹೇಳದೆ ವಿಧಿಯಿಲ್ಲ. ನಮ್ಮ ಸಾಹಿತ್ಯಪ್ರಪಂಚದ ಹುರಿಯಾಳುಗಳು ಇದನ್ನು ನೆನಪಿಟ್ಟುಕೊಂಡರೆ ನಮ್ಮ ಸಾಹಿತ್ಯ ನಿಜಕ್ಕೂ ಶ್ರೇಷ್ಠವಾದೀತು.

ಸೋಲ್ಜೆನಿತ್ಸಿನ್ ಕುರಿತು ಮಾತನಾಡದೆ ಲೇಖಕರ ಸ್ವಾತಂತ್ರ್ಯದ ಚರ್ಚೆಯೇ ಸಾಧ್ಯವಿಲ್ಲವೆಂದು ನಮ್ಮ ಅನೇಕ ಪಂಡಿತರು ಭಾವಿಸುತ್ತಾರಾದ್ದರಿಂದ ಆ ಮಾತನ್ನೇ ಇನ್ನೂ ಸ್ವಲ್ಪ ಆಡೋಣ. ಆತನ ಚಿಂತೆ ಏನು ? ಅಯ್ಯೋ, ಕ್ರಾಂತಿಯಿಂದ ರಷ್ಯಾದ ಜನಜೀವನದಲ್ಲಿ ಎಂತಹ ಕೋಲಾಹಲ ಉಂಟಾಯಿತು, ಜೀವನ ಅಸ್ತವ್ಯಸ್ತವಾಯಿತು, ಎಷ್ಟು ಜನ ಕಂಗಾಲಾದರು, ಇತ್ಯಾದಿ. ೧೯೦೫ರಲ್ಲಿ ತನ್ನ ಅರಮನೆಯ ಎದುರಿನಲ್ಲೇ ಆ ಸುಸಂಸ್ಕೃತ ಜಾರ್ ಮಹಾರಾಜ ಎಷ್ಟು ಜನರನ್ನು ಬಲಿ ತೆಗೆದುಕೊಂಡ ? ೧೯೧೭ರವರೆಗೆ ಹೊಟ್ಟೆಗಿಲ್ಲದೆ, ಛಳಿ ತಡೆಯದೆ, ಅಜ್ಞಾನದಲ್ಲಿ ಪರಿತಪಿಸಿ, ಸತ್ತವರೆಷ್ಟು ಮಂದಿ ? ದುಡಿದು ದುಡಿದು ಹಣ್ಣಾಗಿ

ಸುಖವನ್ನೇ ಕಾಣದೆ ನಿರ್ಗಮಿಸಿದ ಸಂಸಾರಗಳೆಷ್ಟು? ಸೋಲ್ಜೆನಿತ್ಸಿನ್ ಈ ಪ್ರಶ್ನೆಗಳನ್ನೂ ಏಕೆ ಹಾಕಬಾರದು ? ಆದರೂ ಆತ ಅವನ್ನು ಹಾಕುವುದಿಲ್ಲ. ಜಮೀನ್ದಾರರು ಹೋದರಲ್ಲಾ ಎಂಬುದೇ ಆತನ ಉದಾತ್ತ ಚಿಂತೆ! ಆದ್ದರಿಂದಲೇ ಆತ ಅಮೆರಿಕಾಕ್ಕೂ ಶ್ರೇಷ್ಠ, ತಾತಾ-ಬಿರ್ಲಾ ಪತ್ರಿಕೆಗಳಿಗೂ ಶ್ರೇಷ್ಠ, ನೊಬೆಲ್ ಪಾರಿತೋಷಕ ಮಂಡಲಿಗೂ ಶ್ರೇಷ್ಠ. ಮಿಖೈಲ್ ಶೋಲಕೋವರಿಗೆ ಇದೇ ಪಾರಿತೋಷಕ ಬಂದಾಗ ಈ ಜನರೆಲ್ಲಾ ಅಷ್ಟೇ ಸಂತೃಪ್ತಿ ಏಕೆ ವ್ಯಕ್ತಪಡಿಸಲಿಲ್ಲ? ಸೋವಿಯೆತ್ ಒಕ್ಕೂಟವನ್ನು ನಿಂದಿಸುವವನು ಮಾತ್ರ ಏಕೆ ಶ್ರೇಷ್ಠ ಸಾಹಿತಿಯಾಗುತ್ತಾನೆ ? ಈಚಿನ ನಮ್ಮ ರಾಜಕೀಯ ಜೀವನದಲ್ಲಿ ಇದಕ್ಕೆ ಸಮನಾದ ಘಟನೆ ನಡೆಯಿತು. ಬ್ಯಾಂಕುಗಳ ರಾಷ್ಟ್ರೀಕರಣ, ಮಹಾರಾಜರ ಸಹಾಯಧನದ ರದ್ದಿಯಾತಿ, ಭೂ ಸುಧಾರಣೆ, ಇತ್ಯಾದಿಗಳನ್ನು ಎತ್ತಿ ಹಿಡಿದಾಗ ಸುಪ್ರೀಂ ಕೋರ್ಟು ಮತ್ತು ಹೈಕೋರ್ಟುಗಳು 'ಸ್ವಾತಂತ್ರ್ಯ'ವನ್ನು ಹೊಂದಿರಲಿಲ್ಲ! ಅವನ್ನು ತಳ್ಳಿಹಾಕಿದರೆ ಅದು ಮಾತ್ರ ಅತ್ಯುಚ್ಚಸ್ವಾತಂತ್ರ್ಯ! ತಾತ್ಪರ್ಯವಿಷ್ಟೇ: ಬಂಡವಾಳಶಾಹಿ ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಸ್ವಾತಂತ್ರ್ಯದ ಮರೆಯಲ್ಲಿ ಮೋಸ ನಡೆಯುತ್ತಲೇ ಇರುತ್ತದೆ. ನಮ್ಮ ಸಾಹಿತಿಗಳು ಇದನ್ನು ಗಮನಿಸಬೇಕೆಂದು ನಮ್ಮ ಕಳಕಳಿಯ ಪ್ರಾರ್ಥನೆ.

ಸಮಾಜವಾದ ಸಿದ್ಧಾಂತದ ನೆರಳಿನಲ್ಲಿ ಸಾಹಿತಿಗೆ ಸ್ವಾತಂತ್ರ್ಯವಿರಲಾರದೆಂಬ ಐತಿಹ್ಯವನ್ನೇ ತಬ್ಬಿ ಕುಳಿತಿರುವ ನಮ್ಮ ಕೆಲವು ಸಾಹಿತಿಗಳು ಶೋಲಕೋವರಂತಹವರ ಕೃತಿಗಳನ್ನು ಓದಿ ಅಲ್ಲಿಯ ರಚನಾತ್ಮಕ ವಿಮರ್ಶೆಯನ್ನು ತಮ್ಮದನ್ನಾಗಿಸಿಕೊಳ್ಳಲಿ. ಸ್ಟಾಲಿನ್ ಅವರ ಕಾಲದಲ್ಲಿ ಸಾಮೂಹಿಕ ಕೃಷಿಯು ಜ಼ಾರಿಗೆ ಬಂದಾಗಿನ ಅಸಂತೃಪ್ತಿ ಮತ್ತು ಘರ್ಷಣೆಗಳನ್ನು ಯಾರ ಅಡ್ಡಿಯೂ ಇಲ್ಲದೆ ಸ್ಟಾಲಿನ್ ಅವರ ಕಾಲದಲ್ಲೇ ಶೋಲಕೋವರು ಚಿತ್ರಿಸಿ ತಮ್ಮ ಕಾದಂಬರಿಗಳನ್ನು ಪ್ರಕಟಿಸಲಿಲ್ಲವೆ ? ಸೋವಿಯೆತ್ ಒಕ್ಕೂಟದ ಸಮಾಜದಲ್ಲಿ ಕೆಲವೊಮ್ಮೆ ಕಲ್ಲುಬಂಡೆಯಂತೆ ಎದುರಾಗುವ ಆಡಳಿತ ಯಂತ್ರದ ವಿಘ್ನಗಳನ್ನು ಇಂದಿಗೂ ಸೋವಿಯೆತ್ ಸಾಹಿತಿಗಳು ತೀವ್ರವಾಗಿ ಮೂದಲಿಸಿ ತಮ್ಮ ಕೃತಿಗಳಲ್ಲಿ ಚರ್ಚೆ ನಡೆಸುತ್ತಿಲ್ಲವೇ ? ಪ್ರಪಂಚದ ವೈವಿಧ್ಯಮಯ ರಹಸ್ಯವನ್ನು ಸಮಾಜವಾದಿ ಸಾಹಿತಿಗಳೂ ಅನುಭವಿಸಿ ತಮ್ಮ ಭಾವನೆಗಳನ್ನು ಸಾಹಿತ್ಯದಲ್ಲಿ ಕ್ರೋಢೀಕರಿಸುತ್ತಿಲ್ಲವೆ ? – ಇದೆಲ್ಲಾ 'ಸ್ವಾತಂತ್ರ್ಯ'ವಲ್ಲವೇನು ?

ಮೇಲಾಗಿ ಸಾಹಿತ್ಯವು ಯಾರ ಸ್ವತ್ತು? ಉಚ್ಚವರ್ಗದ ಚಿಂತನೆಯನ್ನು ಪ್ರತಿಬಿಂಬಿಸಿದರೆ ಮಾತ್ರ ಅದು ಸಾಹಿತ್ಯವಾಗುತ್ತದೆ ಎಂದಾದರೆ ಆ ಸಾಹಿತ್ಯ ನಮಗೇಕೆ ಬೇಕು ? ಇದರ ಬಗೆಗೂ ನಮ್ಮ ಸಾಹಿತಿಗಳ ಮಧ್ಯೆ ಬಿರುಸಿನ ಚರ್ಚೆ ನಡೆಯಲಿ.

ಇಲ್ಲಿ ಒಂದು ಘಟನೆಯನ್ನು ಪ್ರಸ್ತಾಪಿಸಿ ಈ ವಿಷಯವನ್ನು ಪೂರ್ಣ ಚರ್ಚೆಗೆ ಬಿಡೋಣ. ಮತ್ತೆ ಯಥಾಪ್ರಕಾರ ಸೋಲ್ಜೆನಿತ್ಸಿನ್ನೇ ಇದರ ವಸ್ತು. ಆತನನ್ನು ವಾಷಿಂಗ್‌ಟನ್ನಿನ ಶ್ವೇತಭವನಕ್ಕೆ ಆಹ್ವಾನಿಸಿ ಸನ್ಮಾನಿಸಲಿಲ್ಲವೆಂದು ಮಾಜಿ ಅಧ್ಯಕ್ಷ ಜೆರಾಲ್ಡ್ ಫೋರ್ಡ್ ಬಗೆಗೆ ಅಮೆರಿಕಾದ ಕೆಲವು ಲೇಖಕರು ಅಸಮಾಧಾನ ವ್ಯಕ್ತಪಡಿಸಿದರಂತೆ. ಅದಾದನಂತರ ಹೆನ್ರಿ ಕಿಸಿಂಜರ್ ಆತನನ್ನು ಭೇಟಿ ಮಾಡಿದರಂತೆ. ಈ ಮಧ್ಯೆ ಸೋಲ್ಜೆನಿತ್ಸಿನ್ ಒಂದು ಹೇಳಿಕೆ ನೀಡಿದ್ದರಂತೆ. ಹೇಳಿಕೆ ನೀಡುವುದರಲ್ಲಿ ಈತ ಹೇಗೂ ಪ್ರಬಲನೇ ಅಲ್ಲವೆ ? ಹಿಂದೆ ವಿಯೆಟ್ನಾಮೀ ಜನರನ್ನು ನಿಂದಿಸಿ ಅನೇಕ ಹೇಳಿಕೆಗಳನ್ನು ಹೊರಡಿಸಿದ ಖ್ಯಾತಿ (?) ಈ ಸೋಲ್ಜೆನಿತ್ಸಿನ್‌ಗೆ ಇದೆ. ಆತನ ಆಗಿನ ಹೇಳಿಕೆಯ ಸಾರಾಂಶ ಇದು : "ಅಮೆರಿಕಾ ಮತ್ತು ಸೋವಿಯೆತ್ ಒಕ್ಕೂಟದ ನಡುವೆ ಶೀತಲಯುದ್ಧದ ವಾತಾವರಣದ ಬದಲು ಸ್ನೇಹಸಂಬಂಧ ಏರ್ಪಡುತ್ತಿರುವುದು ದುರದೃಷ್ಟಕರ. ಸೋವಿಯೆತ್ ಒಕ್ಕೂಟದಲ್ಲಿ ಜನತೆಗೆ ಎಳ್ಳಷ್ಟೂ ಸುಖವಿಲ್ಲ, ಸ್ವಾತಂತ್ರ್ಯವಿಲ್ಲ,

ಅದು ಹೋಗಲಿ ಎಂದರೆ, ಆ ರಾಷ್ಟ್ರದೊಡನೆ ಸ್ನೇಹ ಬೆಳೆಸಿ ಈ ಅಸ್ವಾತಂತ್ರ್ಯಕ್ಕೆ ಮೆಚ್ಚುಗೆ ಸೂಚಿಸುವ ಅಮೆರಿಕಾದ ನೀತಿ ಬೇರೆ ಈಗ ನಮ್ಮ ಮುಂದಿದೆ. ಇದರ ಪರಿಣಾಮವಾಗಿ ಪೂರ್ವ ಯೂರೋಪಿನ ಸಮಾಜವಾದಿ ರಾಷ್ಟ್ರಗಳ ಜನತೆಯೂ ಸಹ ದಾಸ್ಯದಲ್ಲೇ ತೊಳಲ ಬೇಕಾಗುತ್ತದೆ. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳನ್ನು ರಕ್ಷಿಸುವ ಅಮೆರಿಕಾ ಇದರಿಂದ ಪಾಠ ಕಲಿತುಕೊಂಡು ತನ್ನ ನೀತಿಯನ್ನು ಬದಲಿಸಬೇಕು. ಸೋವಿಯೆತ್ ಒಕ್ಕೂಟದೊಡನೆ ಸ್ನೇಹದ ವಾತಾವರಣದಲ್ಲಿ ವ್ಯವಹರಿಸುವ ಬದಲು ಯುದ್ಧದ ವಾತಾವರಣದಲ್ಲೇ ವ್ಯವಹರಿಸಬೇಕು.''

ಅಮೆರಿಕಾದ ಪತ್ರಿಕೆಗಳಲ್ಲಿ ಆಗ ಇದಕ್ಕೆ ಸಾಕಷ್ಟು ಪ್ರಚಾರ ದೊರೆಯಿತು. ಪತ್ರಿಕಾಕರ್ತರು ಕಿಸಿಂಜರ್ ಅವರನ್ನು ಈ ಹೇಳಿಕೆಯ ಬಗ್ಗೆ ಪ್ರಶ್ನಿಸಿದಾಗ ಅವರ ಉತ್ತರ ಹೀಗಿತ್ತು: ''ಸೋಲ್ಜೆನಿತ್ಸಿನ್ ಒಬ್ಬ ಶ್ರೇಷ್ಠ ಸಾಹಿತಿಯೇ ಇರಬಹುದು. ಅಂತರರಾಷ್ಟ್ರೀಯ ವ್ಯವಹಾರ ಹೇಗೆ ನಡೆಸಬೇಕೆಂದು ನಾನು ಆತನಿಂದ ಪಾಠ ಪಡೆಯಲು ತಯಾರಿಲ್ಲ.'' ಕಿಸಿಂಜರ್ ಮಹಾಶಯರೇ ಹೀಗೆ ನುಡಿದಿರಬೇಕಾದರೆ ನಮ್ಮ ಸಾಹಿತಿಗಳು ಇನ್ನೇನು ಹೇಳಬೇಕು ? ಈ ಪ್ರಕರಣದಲ್ಲಿ ಸೋಲ್ಜೆನಿತ್ಸಿನ್ ಒಂದು ವರ್ಗದ ಪ್ರತಿನಿಧಿಯಾಗಿ ರಾಜಕೀಯ ನಡೆಸುತ್ತಿರುವಂತೆ ತೋರುತ್ತಾರೋ ಅಥವಾ ಸಾಹಿತ್ಯದ ಅವಿಚ್ಛಿನ್ನ ಭಕ್ತರಾಗಿ ಸ್ವಾತಂತ್ರ್ಯದ ಆರಾಧಕರಂತೆ ತೋರುತ್ತಾರೋ ? ಇದನ್ನು ನಮ್ಮ ಸಾಹಿತಿಗಳು ವಿಚಾರ ಮಾಡಲಿ.

ಕಡೆಯದಾಗಿ ಬುದ್ಧಿಜೀವಿಗಳಿಗೆ ಮತ್ತು ಸಾಹಿತಿಗಳಿಗೆ ಒಂದು ಸೂಚನೆ ನೀಡಬಹುದು. ಈ ಶತಮಾನದ ಅತ್ಯಂತ ಶ್ರೇಷ್ಠ ವಿಜ್ಞಾನಿಗಳು, ಸ್ವಾತಂತ್ರ್ಯ ಹೋರಾಟಗಾರರು, ಕಲಾವಿದರು, ಕವಿಗಳು, ಸಾಹಿತಿಗಳು, ಸಂಶೋಧಕರು ಇತ್ಯಾದಿಗಳೆಲ್ಲಾ ಸಮಾಜವಾದಿ ಸಿದ್ಧಾಂತದಲ್ಲಿ ನಂಬಿಕೆಯುಳ್ಳವರೇ ಆಗಿದ್ದಾರೆ. ಆಲ್ಬರ್ಟ್ ಐನ್‌ಸ್ಟೈನ್, ಬರ್ಟ್ರಂಡ್ ರಸೆಲ್, ಬರ್ನಾರ್ಡ್ ಷಾ, ಜೋಲಿಯೋ ಕ್ಯೂರಿ, ಜೆ. ಡಿ. ಬರ್ನಾಲ್, ಪ್ಯಾಬ್ಲೊ ಪಿಕಾಸೋ, ಪ್ಯಾಬ್ಲೊ ನೆರುದ, ಗಾರ್ಕಿ, ಲೆನಿನ್, ಹೋ ಚಿ ಮಿನ್ ಮುಂತಾದವರ ಹೋರಾಟಗಳು ಮತ್ತು ಕೀರ್ತಿ ಯಾರಿಗೆ ತಿಳಿದಿಲ್ಲ? ನಮ್ಮ ರಾಷ್ಟ್ರದ ಜೆ. ಬಿ. ಎಸ್. ಹಾಲ್ಡೇನ್, ಭಗತ್ ಸಿಂಗ್, ರಾಹುಲ್ ಸಾಂಕೃತ್ಯಾಯನ, ಡಿ. ಡಿ. ಕೋಸಾಂಬಿ ಇತ್ಯಾದಿಗಳ ಕಾಣಿಕೆಯಾದರೂ ನಿಕೃಷ್ಟವಾದದ್ದೇನಲ್ಲ. ಇವರೆಲ್ಲಾ ವರ್ಗಗಳ ವಿಭಜನೆಯನ್ನು ಕಂಡು, ಅದನ್ನು ಕಿತ್ತುಬಿಸುಡಲು ಶ್ರಮವಹಿಸಿದವರು, ಒಂದು ವರ್ಗದ ಪರವಾಗಿ ತತ್ವಗಳನ್ನು ವಿಶ್ಲೇಷಿಸಿದವರು. ಆ ವರ್ಗ ದುಡಿಯುವ ವರ್ಗ. 'ಸ್ವಾತಂತ್ರ್ಯ'ದ ಹೆಸರಿನಲ್ಲಿ ನಡೆಯುತ್ತಿದ್ದ ಕಪಟ ನಾಟಕವನ್ನು ಗುರುತಿಸಿ ಅದರ ವಿರುದ್ಧ ರೊಚ್ಚಿಗೆದ್ದು ನೈಜ ಸ್ವಾತಂತ್ರ್ಯಕ್ಕಾಗಿ ಹಲುಬಿ ಅದನ್ನು ಅಸ್ತಿತ್ವಕ್ಕೆ ತರಲು ತಮ್ಮ ಜೀವನಗಳನ್ನೇ ಸವೆಸಿದವರು ಇವರು. ಇದನ್ನು ನಮ್ಮ ಲೇಖಕರು ನೆನಪಿಡಲಿ.

*– ಕೆಂಬಾವುಟ : ಆಗಸ್ಟ್ 1975*

# ಅಮರ ಸಾಹಿತಿ ಶರತ್‌ಚಂದ್ರ

ಪ್ರೇಮಪೀಠದಲ್ಲಿ ಯಾರಿಗೆ ಸ್ಥಾನವಿದೆಯೋ ಅವರನ್ನು ನಾವು ಮರಣದಲ್ಲಿ ಕಳೆದುಕೊಳ್ಳುವುದಿಲ್ಲ.

—ರವೀಂದ್ರನಾಥ ಠಾಕೂರ್

ಉದ್ದಾಮ ಸಾಹಿತಿ ಶ್ರೀ ಶರತ್‌ಚಂದ್ರ ಚಟ್ಟೋಪಾಧ್ಯಾಯರು (೧೮೭೬-೧೯೩೮) ತಮ್ಮ ಲೇಖನಿಯನ್ನು ದಬ್ಬಾಳಿಕೆಯ ವಿವಿಧ ಪ್ರಕಾರಗಳ ವಿರುದ್ಧ ತೀವ್ರ ಪ್ರತಿಭಟನೆಯನ್ನು ಸೂಚಿಸಲು ಪ್ರಯೋಗಿಸಿದ ಭಾರತೀಯ ಲೇಖಕರಲ್ಲಿ ಅಗ್ರಸ್ಥಾನ ಪಡೆದಿರುವ ವ್ಯಕ್ತಿ. ಭಾರತೀಯ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿ ಸೊರಗಿರುವವರ ಪರವಾಗಿ ಸಾಹಿತ್ಯಕ್ಷೇತ್ರದಲ್ಲಿ ಉಗ್ರವಾದ ಹೋರಾಟ ನಡೆಸಿದವರು ಶರತ್‌ಚಂದ್ರರು. ೧೯೧೬ರಲ್ಲಿ 'ಹಳ್ಳಿಯ ಸಮಾಜ' ಮತ್ತು ೧೯೧೭ರಲ್ಲಿ 'ಚರಿತ್ರಹೀನ' ಎಂಬ ತಮ್ಮ ಕಾದಂಬರಿಗಳನ್ನು ಪ್ರಕಟಿಸಿದಾಗ ಉತ್ಕಟ ವಿರೋಧವನ್ನೆದುರಿಸಿದವರು. ಮಡಿವಂತ ವಿಮರ್ಶಕರನೇಕರು ''ಯುವಕರನ್ನು ತಪ್ಪುದಾರಿಗೆ ಎಳೆಯುತ್ತಿರುವ ಸಾಹಿತಿ ಶರತ್‌ಚಂದ್ರ''ರೆಂದು ಅವರನ್ನು ಜರಿದರು. 'ಮಹೇಶ', 'ಏಕಾದಶಿ', 'ಬೈರಾಗಿ' ಇತ್ಯಾದಿ ಸಣ್ಣ ಕಥೆಗಳಲ್ಲಿ ಕ್ರೂರ ಶ್ರೀಮಂತ ಜಮೀನ್ದಾರರನ್ನು ಮತ್ತು ಬ್ರಾಹ್ಮಣ ಮುತ್ಸದ್ದಿಗಳನ್ನು ಮೂದಲಿಸಿ ಶೋಷಿತ ರೈತ ವರ್ಗದ ಅಳಲನ್ನು ತೋಡಿ ತೋರಿಸಿದ ಶರತ್‌ಚಂದ್ರರು ಹಲವುಬಾರಿ ಹಿಂದೂ ಸಮಾಜದ ಮಧ್ಯಮವರ್ಗದ ಮೌಲ್ಯಗಳನ್ನು ಪ್ರಶ್ನಿಸಿದರು. 'ಚರಿತ್ರಹೀನ'ದ ಕಿರಣ್ಮಯಿಯಂತಹವರು ಪರಂಪರಾಗತವಾದ ಮಾರ್ಗವನ್ನು ತೊರೆದರೂ ಸಂಪೂರ್ಣ ಸಾಫಲ್ಯ ಪಡೆಯದಿದ್ದರೆ ಅವರ ಚಾರಿತ್ರಿಕ ಸನ್ನಿವೇಶಗಳೇ ಅದಕ್ಕೆ ಕಾರಣ. ಇದು ಶರತ್‌ಚಂದ್ರರ ಭೋಳೆತನವನ್ನಾಗಲಿ ಅವರ ಅನಿರ್ಧಾರಿತ ಧೋರಣೆಗಳ ನ್ನಾಗಲಿ ಸೂಚಿಸದೆ ಅಂದಿನ ಸಮಾಜದ ವಸ್ತುಸ್ಥಿತಿಯ ದ್ಯೋತಕಗಳಾಗಿವೆ. 'ಸಾಹಿತ್ಯ ಮತ್ತು ನೈತಿಕತೆ' (೧೯೨೪) ಎಂಬ ತಮ್ಮ ಲೇಖನದಲ್ಲಿರುವ ಅವರ ಮಾತುಗಳಿವು: ''ಮಾನವನ ಸ್ಥಿತಿಗತಿಗಳ ಬಗೆಗೆ ಮಾನವನ ಹೃದಯವನ್ನರಳಿಸುವುದಷ್ಟೆ ನನ್ನ ಇಚ್ಛೆ.'' ಅವರನ್ನು ಕುರಿತು ರವೀಂದ್ರನಾಥ ಠಾಕೂರರೊಮ್ಮೆ ಹೇಳಿದ್ದಿದು: ''ಆಧುನಿಕ ವಿಶ್ವ ಸಾಹಿತ್ಯದ ಸನಿಹಕ್ಕೆ ಬಂಗಾಳಿ ಕಾದಂಬರಿಯನ್ನು ಕೊಂಡೊಯ್ದುದು ಶರತ್‌ಚಂದ್ರರ ಕೊಡುಗೆ. ಬಂಗಾಳಿ ಭಾಷೆಗೆ ಅವರು ನವಚೇತನವನ್ನೊದಗಿಸಿದ್ದಾರೆ.''

ಸಾಹಿತ್ಯ ಕಲೆಯನ್ನು ಪ್ರಚಾರಮಾಧ್ಯಮವನ್ನಾಗಿ ಬಳಸಿಕೊಂಡರೆಂದು ಶರತ್‌ಚಂದ್ರರನ್ನು ಹಿಂದೂ ಇಂದೂ ಟೀಕಿಸಲಾಗಿದೆ. ಅದಕ್ಕೆ ಹಿಮ್ಮೆಟ್ಟದೆ ೧೯೩೨ರಲ್ಲಿ ಅವರು ಘೋಷಿಸಿದರು: ''ಶೋಷಿತರು, ಅಶಕ್ತರು ಮತ್ತು ದಮನಕ್ಕೆ ಸಿಲುಕಿರುವವರು ತಮ್ಮ ಅಸಹಾಯಕತೆ ಮತ್ತು ಗೋಳಿನ ಬಾಳಿಗೆ ಕಾರಣಗಳನ್ನೂ ಅರಿಯದಾಗಿದ್ದಾರೆ; ಅವರ ಮಾನವ ಹಕ್ಕಿಗೆ ಧಕ್ಕೆ ಹೇಗೆ ಮತ್ತು ಏಕೆ ಬಂದಿದೆಯೆಂಬುದನ್ನು ತಿಳಿಯದಾಗಿದ್ದಾರೆ. ಅವರ ಗೋಳೇ ನನ್ನನ್ನು ಲೇಖಕ ನನ್ನಾಗಿಸಿರುವುದು; ಮಾನವತೆಯ ನ್ಯಾಯಾಲಯದ ಮುಂದೆ ಅವರ ಅಭಿಯೋಗವನ್ನು ಮಂಡಿಸುವುದೇ ನನ್ನ ಕರ್ತವ್ಯ.'' ಮುಂದುವರಿದು ಇನ್ನೊಂದೆಡೆ ಅವರು ಹೇಳಿದರು:

''ಅಸುಂದರವಿದ್ದುದು, ಅನೈತಿಕವಿದ್ದುದು, ಅಕಲ್ಯಾಣವಿದ್ದುದು ಯಾವ ರೀತಿಯಿಂದಲೂ ಕಲೆಯಲ್ಲ, ಧರ್ಮವಲ್ಲ. ಕಲೆಯು ಕಲೆಗಾಗಿ ಎಂಬ ಉಕ್ತಿಯೂ ಸಹ ಯಾವ ರೀತಿಯಿಂದಲೂ ಸತ್ಯವಿರುವುದಿಲ್ಲ.''[1]

ಇಂತಹ ಲೇಖಕರು ತರ್ಕಸರಣಿಯಲ್ಲಿ ಮಾತ್ರ ಜ್ಞಾನದ ಆವಿರ್ಭಾವ ಸಾಧ್ಯವೆಂದು ಭಾವಿಸಿದ್ದು ಸಹಜವಾಗಿದೆ. ಇದರ ಪ್ರತಿಯಾಗಿ ಪೊಳ್ಳು ಭಾವನೆಗಳನ್ನು ಪ್ರಚುರಪಡಿಸುತ್ತಿದ್ದವರನ್ನು ಲೇವಡಿ ಮಾಡುವುದೆಂದರೆ ಶರತ್‌ಚಂದ್ರರಿಗೆ ಭಾರಿ ಮೋಜು. ೧೯೩೧ರಲ್ಲಿ ದಿಲೀಪ್‌ಕುಮಾರ್ ರಾಯ್ ಅವರಿಗೆ ಬರೆದ ಪತ್ರದ ಈ ಒಕ್ಕಣೆಯನ್ನು ನೋಡಿ: ''ನಿನ್ನ (ಸ್ನೇಹಿತ) ಅನಿಲವರ್ಣ ಧೂಳಿಯಿಂದ ಸಕ್ಕರೆ ತಯಾರಿಸಬಲ್ಲನೆಂದು ಕೇಳಿದ್ದೇನೆ. ಆಶ್ರಮಕ್ಕೆ ಬೇಕಾಗುವ ಎಲ್ಲ ಸಕ್ಕರೆ ಅವನೇ ಪೂರೈಸುತ್ತಾನೆಂದು ಹೇಳಲಾಗುತ್ತದೆ. ಇದು ನಿಜವೇ? ನನಗಂತೂ ವಿಶ್ವಾಸವಾಗುವುದಿಲ್ಲ. ಏಕೆಂದರೆ ಹಾಗಿದ್ದಲ್ಲಿ ಅವನು ಆಶ್ರಮದಲ್ಲಿರಲು ಏಕೆ ಹೋಗುತ್ತಿದ್ದ? ಕಲಕತ್ತೆಗೆ ಬಂದು ನಿರಾಯಾಸವಾಗಿ ಒಂದು ಸಕ್ಕರೆ ಅಂಗಡಿ ತೆರೆಯುತ್ತಿದ್ದ.'' ಪತ್ರವನ್ನು ಮುಗಿಸಿ ಮತ್ತೆ ಅದನ್ನೇ ಪ್ರಸ್ತಾಪಿಸಿದರು: ''ಅನಿಲವರ್ಣನು ಸಕ್ಕರೆ ಮಾಡುವ ಸುದ್ದಿ ಜರೂರು ತಿಳಿಸಬೇಕು. ಅವನು ಮಾಡಬಲ್ಲವನಾದರೆ ಜಾವಾದ ಸಕ್ಕರೆಯನ್ನು ಬಹಿಷ್ಕರಿಸಬಹುದು. ಇದು ದೇಶದ ಒಂದು ದೊಡ್ಡ ಕೆಲಸ.''[2] ಇಂತಹ ಪಕ್ವವಾದ ಅಳತೆಗೋಲನ್ನು ಸಾಮಾಜಿಕ ಸಂದರ್ಭಗಳಲ್ಲೂ ಉಪಯೋಗಿಸಿದರು. ಲೀಲಾರಾನಿ ಗಂಗೋಪಾಧ್ಯಾಯರಿಗೆ ಬರೆದ ಒಂದು ಪತ್ರದಲ್ಲಿ ಬರುವ ಮಾತುಗಳಿವು: ''ವಿಧವೆಯಾಗಿರುವಲ್ಲಿ ನಾರೀಜೀವನದ ಪರಮ ಹಾನಿಯುಂಟು; ಸಧವೆಯಾಗಿರುವಲ್ಲೇ ಜೀವನದ ಚರಮ ಸಾರ್ಥಕತೆಯುಂಟು. ಇವೆರಡರಲ್ಲಿ ಯಾವುದೂ ಸತ್ಯವಲ್ಲ'' (ಪುಟ 180). ಮಹೇಶನ ಕಥೆಯಲ್ಲಿ ಅವರೆನ್ನುತ್ತಾರೆ: ''ಮೂಕವಾಗಿ ಸಹಿಸುವ ತುಳಿತಕ್ಕೆ ಸಿಕ್ಕ ಮಾನವ ದುಡಿಯುತ್ತಾನೆ, ಆದರೆ ದುಡಿತದ ಫಲ ಲಭ್ಯವಲ್ಲ'' ''ಕರ್ಮಣ್ಯೇವಾಧಿಕಾರಸ್ತೇ'' ತತ್ವಕ್ಕೂ ಶರತ್‌ಚಂದ್ರರ ಅನುಕಂಪದ ಮರ್ಮವಾದ ಸಾಮಾಜಿಕ-ಆರ್ಥಿಕ ತತ್ವಶಾಸ್ತ್ರಕ್ಕೂ ಅಜಗಜಾಂತರವಿದೆ. ತರ್ಕದಿಂದ ಹೊರಹೊಮ್ಮುವ ಜ್ಞಾನವು ಸಮಾಜವನ್ನು ನ್ಯಾಯಯುತ ಆಧಾರದ ಮೇಲೆ ನಿಲ್ಲುವಂತೆ ಮಾಡಲು ಒಂದು ಸಾಧನವಾಗಬೇಕೆಂಬುದಕ್ಕೆ ಇದೊಂದು ನಿದರ್ಶನ. 'ಶೇಷಪ್ರಶ್ನೆ' ಕಾದಂಬರಿಯಲ್ಲಿ ಕಮಲೆ ಒಮ್ಮೆ ತಲೆಯಲ್ಲಾಡಿಸುತ್ತಾ ಹೇಳುತ್ತಾಳೆ: ''...ಬರಿಯ ನಂಬಿಕೆಯ ಬಲದಿಂದಲೇ ಯಾವುದೂ ಸತ್ಯವಾಗುವುದಿಲ್ಲ, ತ್ಯಾಗದ ಬಲದಿಂದಲೂ ಸತ್ಯವಾಗುವುದಿಲ್ಲ, ಮೃತ್ಯುವನ್ನು ಸ್ವಾಗತಿಸುವುದರಿಂದಲೂ ಸಾಧ್ಯವಿಲ್ಲ. ಪ್ರಪಂಚದಲ್ಲಿ ಅತ್ಯಲ್ಪ ವಿಷಯಗಳಿಗೂ ಅನೇಕರ ಪ್ರಾಣಹಾನಿಗಳಾಗಿವೆ. ಆದ್ದರಿಂದ ಹಟದ ಬಲುಮೆ ವ್ಯಕ್ತವಾಗುತ್ತದೆಯೇ ವಿನಾ ವಿಚಾರದ ಸತ್ಯತೆಯು ವ್ಯಕ್ತವಾಗುವುದಿಲ್ಲ. ಯಾವುದನ್ನು ಯೋಗ್ಯವೆನ್ನುತ್ತಾರೆಂಬುದು ನನಗೆ ತಿಳಿಯದು. ಆದರೆ ಏಕಾಂತದಲ್ಲಿ ಕುಳಿತು ಆತ್ಮವಿಶ್ಲೇಷಣೆ ಮತ್ತು ಆತ್ಮಚಿಂತನೆ ಮಾಡುವುದೇ ಯೋಗ್ಯವಾದರೆ, ಈ ಎರಡು ಸಿಂಹದ್ವಾರಗಳಿಂದ ಜನಗಳಲ್ಲಾಗಿರುವ ಭ್ರಮೆ ಮತ್ತು ಮೋಹ ಇನ್ನಾವುದರಿಂದಲೂ ಆಗಿಲ್ಲ. ಇವೆರಡೂ ಅಜ್ಞಾನದ ಗೆಳೆಯರೆಂದು ನಾನು ಧೈರ್ಯವಾಗಿ ಹೇಳುತ್ತೇನೆ.''[3]

ಸಾಮಾಜಿಕ ಮೌಲ್ಯಗಳು ಕಾಲಕ್ರಮೇಣ ಅಂದಿನ ಅನೇಕ ಸನ್ನಿವೇಶಗಳನ್ನನುಸರಿಸಿ

---

1. 'ಸಾಹಿತ್ಯ ಮತ್ತು ನೈತಿಕತೆ' ಎಂಬ ನಿಬಂಧದಿಂದ.
2. *ಶರತ್‌ಚಂದ್ರ ಚಟ್ಟೋಪಾಧ್ಯಾಯ*:– ಗುರುನಾಥ ಜೋಶಿ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1976, ಪುಟಗಳು 152-3.
3. ಡಿ. ವಿ. ಕೆ. ಮೂರ್ತಿ ಪ್ರಕಾಶನ, ಪುಟಗಳು 332-3.

ಬದಲಾಗುವುವೆಂದೂ ಅದನ್ನು ತಡೆಹಿಡಿಯಲು ಸರ್ವಥಾ ಸಾಧ್ಯವಿಲ್ಲವೆಂದೂ ಶರತ್‌ಚಂದ್ರರು ಪದೇ ಪದೇ ಪ್ರತಿಪಾದಿಸುತ್ತಾರೆ. 'ಶೇಷಪ್ರಶ್ನೆ'ಯಲ್ಲಿ ಕಮಲೆಯೆನ್ನುತ್ತಾಳೆ : ''ಸಾಧ್ವಿಯೊಬ್ಬಳು ತನ್ನ ಗಂಡನನ್ನು ಹೆಗಲ ಮೇಲೆ ಕೂರಿಸಿಕೊಂಡು ವೇಶ್ಯೆಯ ಮನೆಗೆ ತಲುಪಿಸಿದಳೆಂಬ ಸತೀತ್ವದ ಆದರ್ಶ ಹಿಂದೆ ಅದ್ವಿತೀಯವಾಗಿತ್ತು. ಇಂದು ಅಂತಹ ಘಟನೆ ಏನಾದರೂ ನಡೆದರೆ ಮನುಷ್ಯ ಅದನ್ನು ಜುಗುಪ್ಸೆಯಿಂದ ತಿರಸ್ಕರಿಸುತ್ತಾನೆ. ನೀವು ತಿಳಿದಿರುವ ಜೀವನದ ಆದರ್ಶ ಮತ್ತು ತ್ಯಾಗ ಜನಗಳ ಮನಸ್ಸಿನಲ್ಲಿ ಇಂದು ಶ್ರದ್ಧೆ ಮತ್ತು ವಿಸ್ಮಯವನ್ನುಂಟುಮಾಡುತ್ತಿರಬಹುದು; ಆದರೆ ಎಂದಾದರೊಂದು ದಿನ ಅದು ಜನಗಳ ಅನುಕಂಪಕ್ಕೊಳಗಾಗಬಹುದು. ನಿಮ್ಮ ಈ ನಿಶ್ಚಲ ಆತ್ಮನಿಗ್ರಹವನ್ನು ನೋಡಿ ಜನರು ಹಾಸ್ಯಮಾಡಬಹುದು'' (ಪುಟ 105). ...''ರಾಮಾಯಣ, ಮಹಾಭಾರತಗಳಲ್ಲಿ ಎಷ್ಟೇ ವಿಷಯಗಳನ್ನು ಬರೆದಿದ್ದರೂ, ಆ ಶ್ಲೋಕಗಳನ್ನು ಬಾಯಿಪಾಠ ಮಾಡುವುದರಿಂದ ಆ ಕಾಲದ ಸಾಮಾನ್ಯ ಮನುಷ್ಯನ ಪರಿಚಯವಾಗಲಾರದು. ತಾಯಿಯ ಗರ್ಭವೆಷ್ಟೇ ಸುಖವಾಗಿದ್ದರೂ, ದೊಡ್ಡವರಾದ ಮೇಲೆ ಅದರಲ್ಲಿ ವಾಪಸ್ಸು ಹೋಗುವುದಕ್ಕಾಗುವುದಿಲ್ಲ'' (ಪುಟ 330). ಸಮಾಜದ ಏರುಪೇರುಗಳನ್ನು ಸ್ಥಿರಗೊಳಿಸಲು ಉಪಯೋಗಿಸಲಾಗುವ ತಕ್ಕುಮಾರ್ಗಗಳು ಒಂದೇ ಎರಡೇ. ಊಳಿಗಮಾನ್ಯ ಪದ್ಧತಿಯಲ್ಲಂತೂ ಇಂತಹ ಪ್ರಯೋಗಗಳಿಗೆ ಇತಿಮಿತಿಯಿಲ್ಲ. ಮಹೇಶನ ಕತೆಯಲ್ಲಿ ಶಿವಶಂಕರ ಬಾಬುಗಳಲ್ಲಿ ಗಫೂರ್ ಕ್ಷಮೆ ಬೇಡಿದ್ದಾನೆ. ಆಗ '''ತರ್ಕರತ್ನ' ಮಹಾಶಯರೂ ಅಲ್ಲಿದ್ದರು. ಅವರು 'ಗೋ' ಎಂಬ ಶಬ್ದದ ಶಾಸ್ತ್ರೀಯ ವ್ಯಾಖ್ಯೆಯನ್ನು ಮಾಡಿದರು. ಅಲ್ಲದೆ ಇಂತಹ ಧರ್ಮಜ್ಞಾನಶೂನ್ಯ ಮ್ಲೇಚ್ಛಜಾತಿಯವರನ್ನು ಊರಹತ್ತಿರ ಕೂಡ ಇರಗೊಡಬಾರದೆಂಬ ವಿಷಯವನ್ನೂ ಹೇಳಿ, ಅವರ ಜ್ಞಾನಚಕ್ಷುಗಳನ್ನು ತೆರೆದರು !'' ಶರತ್‌ಚಂದ್ರರ ವೇದನೆ ಮತ್ತು ತೀಕ್ಷ್ಣತೆಗಳಿಗೆ ಇಂತಹ ಎಷ್ಟೋ ನಿದರ್ಶನಗಳನ್ನುದಾಹರಿಸಬಹುದು. ಗಫೂರನ ಪ್ರಾರ್ಥನೆ ತುಳಿತಕ್ಕೆ ಸಿಲುಕಿರುವ ಇಡೀ ಮಾನವ ಜನಾಂಗದ ಕರುಣಾಜನಕ ಸಂವೇದನೆಯಂತಿದೆ : ''ಅಲ್ಲಾ! ನನ್ನ ಮಹೇಶ ನೀರಡಿಕೆಯಿಂದ ಸತ್ತುಹೋಯಿತು. ಅದಕ್ಕೆ ಮೇಯಲು ಯಾರೂ ಒಂದು ಗೇಣು ಭೂಮಿಯನ್ನೂ ಬಿಡಲಿಲ್ಲ. ನೀನು ನನಗೆಷ್ಟು ಬೇಕಾದರೂ ಶಿಕ್ಷೆಯನ್ನು ವಿಧಿಸು; ಆದರೆ ಹಸಿದವರಿಗಾಗಿ ನೀನು ಕೊಟ್ಟಂತಹ ಹುಲ್ಲನ್ನು, ನೀರಡಿಸಿದವರಿಗಾಗಿ ನೀನು ಕೊಟ್ಟ ನೀರನ್ನು ಯಾರು ಅದಕ್ಕೆ ಕೊಡಲಿಲ್ಲವೋ, ಅವರನ್ನು ನೀನೆಂದಿಗೂ ಕ್ಷಮಿಸಬೇಡ.''

ಶರತ್‌ಚಂದ್ರರು ಭಾರತೀಯ ಸಮಾಜದ ಬಗ್ಗೆ ಕಾಣುವ ಕನಸು ಅವರ ಕಳಕಳಿಯ ಗಹನತೆಯನ್ನು ಸೂಚಿಸುತ್ತದೆ. 'ಹಳ್ಳಿಯ ಸಮಾಜ' ಕಾದಂಬರಿಯಲ್ಲಿ ಬರುವ ಈ ಮಾತುಗಳನ್ನು ಗಮನಿಸಿ : ''ಬೆಳಕು ಹಚ್ಚಿಸೋ ಮಗು, ಬೆಳಕು ಹಚ್ಚಿಸು... ಗ್ರಾಮಗ್ರಾಮಗಳಲ್ಲಿ ಜನಗಳೆಲ್ಲಾ ಕತ್ತಲಲ್ಲಿ ಕುರುಡಾಗಿಬಿಟ್ಟಿದ್ದಾರೆ. ಒಂದು ಸಲ ಅವರು ಕಣ್ಣು ತೆರೆದು ಸ್ವತಃ ನೋಡುವ ಶಕ್ತಿ ಬರುವುದಕ್ಕೆ ಏನಾದರೂ ದಾರಿ ಹುಡುಕೋ ರಮೇಶೂ! ಆಗ ನಿನಗೆ ಗೊತ್ತಾಗುತ್ತೆ ಅವರಲ್ಲಿ ಯಾರು ಕಪ್ಪು ಯಾರು ಬಿಳುಪು ಎನ್ನುವುದು.'' ಅದೇ ಕಾದಂಬರಿಯಲ್ಲಿ ರಮಾ ತನ್ನ ತಮ್ಮನನ್ನು ರಮೇಶನಿಗೊಪ್ಪಿಸುವಾಗ ಹೇಳುವ ಮಾತಿದು : ''ದೊಡ್ಡವನಾದ ಮೇಲೆ ಅವನೂ ನಿಮ್ಮಂತೆಯೇ ನಗುಮುಖದಿಂದ ಸ್ವಾರ್ಥತ್ಯಾಗ ಮಾಡುವವನಂತಾಗಬೇಕು. ಅದನ್ನು ನಾನು ಕಣ್ಣಲ್ಲಿ ನೋಡಿ ಹೋಗುವಷ್ಟು ಭಾಗ್ಯ ನನ್ನ ಹಣೆಯಲ್ಲಿ ಬರೆದಿಲ್ಲ. ಆದರೆ ನನಗೆ ಖಂಡಿತ ಗೊತ್ತು – ಯತೀನನ ನಾಡಿಯಲ್ಲಿ ಅವನ ಪೂರ್ವ ಪುರುಷರ ರಕ್ತ ಹರಿಯುತ್ತಿದೆ. ತ್ಯಾಗ ಮಾಡುವಂತಹ ಶಕ್ತಿ ಅವನ ನರನಾಡಿಗಳಲ್ಲಿ ಸೇರಿಕೊಂಡಿದೆ... ಸ್ವಲ್ಪ ಸರಿಯಾಗಿ ಶಿಕ್ಷಣವಾದಲ್ಲಿ ಅವನು ನಿಮ್ಮಂತೆಯೇ ತಲೆ ಎತ್ತಿ ನಿಂತುಕೊಳ್ಳಬಲ್ಲ.''

ಸಾಮಾಜಿಕ ಜೀವನದಲ್ಲಿ ನಿಷ್ಕರುಣೆ, ಪರಿತಾಪ, ಡಾಂಭಿಕತೆ, ಕಾಪಟ್ಯ, ಕಾರ್ಪಣ್ಯ ಇತ್ಯಾದಿಗಳು ಅಸ್ತಿತ್ವದಲ್ಲಿದ್ದರೆ ಅದಕ್ಕೆ ಕಾರಣಗಳು ಕೇವಲ ವ್ಯಕ್ತಿಗತವಾದವುಗಳಲ್ಲ. ಅವರಿರುವ ವ್ಯವಸ್ಥೆಯಿಂದಲೂ ಅವು ಉದ್ಭವಿಸುತ್ತವೆ. ವ್ಯವಸ್ಥೆಯನ್ನು ಕಡೆಗಾಣಿಸಿ ವ್ಯಕ್ತಿಯ ಪ್ರಜ್ಞೆಯನ್ನು ಗುರುತಿಸಲಾಗದು. ತಮ್ಮ ಅಪೂರ್ಣವಾದ 'ಜಾಗರಣ' ಕಾದಂಬರಿಯಲ್ಲಿ ಶರತ್‌ಚಂದ್ರರು ಈ ವಿಷಯಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಆಮೂಲಾಗ್ರವಾಗಿ ಪರಿಶೋಧಿಸಲು ಯತ್ನ ನಡೆಸಿದ್ದಾರೆ. ಅಲ್ಲಿನ ನಾರಾಯಣ ಗಂಗೂಲಿಯ ದುರಂತವು ಕಲ್ಲು ಮನಸ್ಸುಳ್ಳ ಆಲೇಖ್ಯಳ ಕಾರ್ಯಾನುಸರಣೆಯಲ್ಲಿ ಹೊಂದಿಕೊಂಡಿದೆ. ನಿಮಾಯಿ ಬಾಬು ತಮ್ಮ ಮಗಳಿಗೆ ನೀಡುವ ಉಪದೇಶದ ಸಾರವಾದರೂ ಏನು ? ''ಈ ಹಳ್ಳಿಯ ನಿನ್ನ ಆಸ್ತಿಯನ್ನು ತೊರೆಯದೆ ನೀನಿಲ್ಲಿಂದ ತೆರಳಬಹುದು. ಆದರೆ ಬೇರೆಲ್ಲೋ ಇದ್ದು ಈ ಆಸ್ತಿಯ ಆಧಾರದಿಂದ ನೀನು ಪರತಂತ್ರ ಜೀವನ ನಡೆಸಿದರೆ ನಿನ್ನ ಮನಸ್ಸಿನ ದಳ್ಳುರಿ ಆರಲಾರದು ಮತ್ತು ಈಗಿನ ಹೀನ ಶೋಷಣೆಯೂ ಅಂತ್ಯವಾಗಲಾರದು. ಇಂದು ನೀನು ಯಾರು ಪ್ರಯೋಜಕರು, ಯಾರು ನಿಷ್ಪ್ರಯೋಜಕರು ಎಂಬುದನ್ನು ತೀರ್ಮಾನಿಸುತ್ತಿದ್ದೀಯೆ. ಆದರೆ ಮಾನವತೆ ಒಂದು ದಿನ ನಿನ್ನನ್ನು ಪರೀಕ್ಷಿಸುತ್ತದೆ. ವ್ಯಕ್ತಿಯೊಬ್ಬ ಎಷ್ಟೇ ಅಪ್ರಯೋಜಕನಿರಲಿ, ಅವನಿಗೆ ಜೀವಿಸುವ ಹಕ್ಕನ್ನು ನಿರಾಕರಿಸಲು ಯಾರಿಗೂ ಹಕ್ಕಿಲ್ಲ. ಇಂದು ನಿನ್ನ ಹಿತ ಸಾಧಿಸುವ ನ್ಯಾಯ, ಕಾನೂನು, ಎಲ್ಲಾ ನಿನ್ನನ್ನು ಪೋಷಿಸುತ್ತಿರಬಹುದು. ಆದರೆ ಮಾನವ ಎಚ್ಚೆತ್ತಾಗ ಅವೆಲ್ಲಾ ನಿರ್ಜೀವವಾಗಿ ಕುಸಿದು ಬೀಳುತ್ತವೆ. ಮಾನವಕೋಟಿ ಐಕ್ಯಗೊಂಡಾಗ ನಿನ್ನ ಯಾವ ಹುಸಿ ತತ್ವಶಾಸ್ತ್ರವೂ ಅವರನ್ನು ಹಿಮ್ಮೆಟ್ಟಿಸಲಾರದು. ಅವರ ಆಕಾಂಕ್ಷೆಗಳನ್ನವರು ಪೂರೈಸಿಕೊಳ್ಳಲು ಶಕ್ತರಾಗುತ್ತಾರೆ.'' ಭೂತಕಾಲದ ಸಮಾಜದಲ್ಲಿ ನ್ಯೂನತೆಗಳನ್ನು ಗುರುತಿಸಿದ ಶರತ್‌ಚಂದ್ರರು ಒಮ್ಮೊಮ್ಮೆ 'ರೊಮ್ಯಾಂಟಿಕ್' ಭಾವನೆಯಿಂದ ಪ್ರೇರಿತರಾಗುವುದನ್ನೂ ನಾವು ಕಾಣುತ್ತೇವೆ. ಅದಕ್ಕೆ ವರ್ತಮಾನದ ಬಗ್ಗೆ ಅವರಿಗಿರುವ ಉದ್ವೇಗವೇ ಬಹುಮಟ್ಟಿಗೆ ಕಾರಣ. 'ಜಾಗರಣ' ಕಾದಂಬರಿಯಲ್ಲಿ ಬರುವ ಸನ್ನಿವೇಶವಿದು. ಹಿಂದೆ ನಾಗರಿಕತೆ ಇಂದಿನಂತೆ ಬೆಳೆದಿರಲಿಲ್ಲ, ನಿಜ; ಆದರೆ ಮಾನವ ದುಡಿದು ಸುಖಜೀವನ ಸಾಗಿಸುತ್ತಿದ್ದ. ಆ ಸಂದರ್ಭದಲ್ಲಿ ಶರತ್‌ಚಂದ್ರರು ನುಡಿಯುತ್ತಾರೆ : ''ಆ ದಿನಗಳಲ್ಲಿ ವಿದೇಶಿ ಸಾಹೇಬರುಗಳು ಮತ್ತು ಸ್ವದೇಶಿ ಮಾರವಾಡಿಗಳು ಒಟ್ಟಿಗೆ ಸೇರಿ ದೇಶದ ಅನ್ನವನ್ನು ವಿದೇಶಕ್ಕೆ ಕಳುಹಿಸಿಕೊಟ್ಟು ಕೋಟಿಗಟ್ಟಲೆ ಜನರ ಜೀವನ ಸಮಸ್ಯೆಯನ್ನು ಇಷ್ಟೊಂದು ದುರ್ದಮ್ಯ, ಭೀಷಣ ಮತ್ತು ಅಸಹ್ಯ ಮಾಡುವ ಪ್ರಸಂಗವನ್ನೇ ತಂದುಕೊಂಡಿರಲಿಲ್ಲ. ಆ ದಿನಗಳಲ್ಲಿ ಹಸಿವೆಯಿಂದ ಬಳಲುವವರ ಬಾಯತುತ್ತು ಜೂಜಿನ ಅಡ್ಡೆಗಳ ಮುಖಾಂತರ ಬಂಗಾರ ಬೆಳ್ಳಿಯ ರೂಪದಲ್ಲಿ ಬಂಡವಾಳಶಾಹಿಯವರ ಖಜಾನೆಯನ್ನು ಸೇರುತ್ತಿರಲಿಲ್ಲ.'' ಆರ್ಥಿಕ-ಸಾಮಾಜಿಕ ಅಸಮಾನತೆ ಮತ್ತು ಶೋಷಣೆಗಳ ವಿರುದ್ಧ ಹೀಗೆ ಸಿಡಿದೆದ್ದ ಆಳವಾದ ಸಾಮಾಜಿಕ ಪ್ರಜ್ಞೆಯುಳ್ಳ ಸಾಹಿತಿ ಶರತ್‌ಚಂದ್ರರು ವಸಾಹತುಶಾಹಿಯ ವಿರುದ್ಧವೂ ಬಂಡೇಳುವುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಮೂಲಭೂತವಾಗಿ ಮಾನವ ಸ್ವತಂತ್ರನಾಗಿ ಬೆಳೆಯಲು ಯಾವ ಆತಂಕವೂ ಇರಕೂಡದೆಂದು ಶರತ್‌ಚಂದ್ರರ ಕಟ್ಟುನಿಟ್ಟು ಅಭಿಪ್ರಾಯ. ಅಂತಹ ಬೆಳವಣಿಗೆಗೆ ಸಂಪೂರ್ಣ ಮಾರಕ ವಸಾಹತುಶಾಹಿ ಅನೀತಿ. ಸ್ವಾತಂತ್ರ್ಯಕ್ಕೆ ಅಧಿಕಾರವುಳ್ಳವರು ಅದನ್ನು ಯಾವ ಮಾರ್ಗದಿಂದ ಪಡೆಯಬೇಕೆಂಬುದನ್ನು ತೀರ್ಮಾನಿಸಲು ಸಹ ಅಧಿಕಾರಿಗಳೆ. ಭಾರತದ ರಾಜಕೀಯ ಜೀವನದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶರತ್‌ಚಂದ್ರರು ಈ ಪ್ರಶ್ನೆಯನ್ನು ತಮ್ಮ 'ಅಧಿಕಾರ' ಕಾದಂಬರಿಯಲ್ಲಿ ವಿಶ್ಲೇಷಿಸಿದ್ದಾರೆ.

'ಪೊಥೇರ್ ದಾಬಿ' ಕಲಾತ್ಮಕ ಸಂಯೋಜನೆ ಮತ್ತು ಸಾಮಾಜಿಕ ಸಂದೇಶಗಳಿಂದ ಅರ್ಥಗರ್ಭಿತವಾಗಿರುವ ಶರತ್‌ಚಂದ್ರರ ಕಾದಂಬರಿ. ಅದನ್ನು ಅವರ ಮೇರುಕೃತಿಯೆಂದು ಪರಿಗಣಿಸಲಾಗದಿದ್ದರೂ ಅವರ ರಾಷ್ಟ್ರೀಯ ಅನಿಸಿಕೆಗಳ ಆಗರವೆಂದು ಖಂಡಿತ ಬಗೆಯಬಹುದು. ಯುವಕ ರಾಷ್ಟ್ರೀಯಕ್ರಾಂತಿಕಾರಿಗಳನ್ನು ಸಂಪೂರ್ಣ ಸಹಾನುಭೂತಿಯಿಂದ ಚಿತ್ರಿಸುವ ಈ ಕಾದಂಬರಿಯಲ್ಲಿ ಬ್ರಿಟಿಷ್ ವಸಾಹತುಶಾಹಿ ದಬ್ಬಾಳಿಕೆಯ ಅಸಹ್ಯ ಪರಿಣಾಮಗಳನ್ನು ಸೂಚ್ಯವಾಗಿ ಚರ್ಚಿಸಲಾಗಿದೆ. ಭೂಗತರಾಗಿ ತಲೆಮರೆಸಿಕೊಂಡು ಕಾರ್ಯ ಪ್ರವೃತ್ತರಾಗಿರುವ ಕ್ರಾಂತಿಕಾರಿಗಳ ಕ್ರಾಂತಿಕಾರಿ ಚಟುವಟಿಕೆಗಳನ್ನು ವಿವರಿಸುವುದಕ್ಕಿಂತಲೂ ಅವರ ನಿಶ್ಚಲ ಧ್ಯೇಯನಿಷ್ಠೆ, ಅದಮ್ಯ ಧೀರತನ, ಮತ್ತು ಪ್ರಖರವಾದ ಶಿಸ್ತನ್ನು ಎತ್ತಿ ಹಿಡಿಯುವುದು ಶರತ್‌ಚಂದ್ರರ ಪ್ರಮುಖ ಆಶಯ. ಧ್ಯೇಯ ಸಾಧನೆಗೆ ಒಂದು ಸಂಘಟನೆ ಬೇಕು, ಅದರಲ್ಲಿ ಒಗ್ಗೂಡಿದ ವ್ಯಕ್ತಿಗಳಿರಬೇಕು. ಅವರ ಕಾರ್ಯಾಚರಣೆಗೆ ನಿಯಮಾವಳಿ ಗಳಿರಬೇಕು. ಅವುಗಳ ಪರಿಪಾಲನೆಯನ್ನು ವೀಕ್ಷಿಸಿ ನಿರ್ದೇಶಿಸಲು ಸಮಿತಿಯೊಂದು ಬೇಕು. ಆ ಸಮಿತಿಯ ಸದಸ್ಯರಲ್ಲೂ ಇತಿಮಿತಿಗಳಿರುವುದು ಶಕ್ಯವಲ್ಲವೆ ? ಅಲ್ಲೂ ಅಂಜಿಕೆಯುಳ್ಳ ಕೆಲವು ಭೀರುಗಳೋ ಸ್ವಹಿತ ಸಾಧನೆಯನ್ನೇ ಗುರಿಯಾಗುಳ್ಳ ಕೆಲವು ಸಮಯಸಾಧಕರೋ ಅಥವಾ ಉದಾತ್ತ ಭಾವನೆಗಳಿಂದ ಕೂಡಿದ ಗಾಂಭೀರ್ಯ ಮೂರ್ತಿಗಳೋ ಇರಬಹುದಲ್ಲವೇ ? ಇವು ಮತ್ತು ಇಂತಹ ಹಲವಾರು ಪ್ರಶ್ನೆಗಳನ್ನು ಎತ್ತಿ ವಿಶ್ಲೇಷಣೆ ನಡೆಸುವ ಕಾದಂಬರಿ 'ಅಧಿಕಾರ'[4]. ಕಾದಂಬರಿಯ ಮೂಲೋದ್ದೇಶವನ್ನು ಶರತ್‌ಚಂದ್ರರೇ ಭಾರತಿಯ ಮುಖೇನ ತಿಳಿಯಹೇಳಿದ್ದಾರೆ : "ನಾವೆಲ್ಲರೂ ಪಥಿಕರು; ಮನುಷ್ಯನು ಮನುಷ್ಯತ್ವದ ಹಾದಿಯಲ್ಲಿ ಹೋಗಲು ಇರುವ ಎಲ್ಲ 'ಅಧಿಕಾರ'ವನ್ನು ಒಪ್ಪಿ ಎಡರುತೊಡರುಗಳನ್ನು ಕಿತ್ತೆಸೆಯುವುದೇ ನಮ್ಮ ಗುರಿ. ನಮ್ಮ ನಂತರ ಬರುವವರು ಏನೂ ಉಪದ್ರವವಿಲ್ಲದೆ ಈ ಹಾದಿಯಲ್ಲಿ ನಡೆಯ ಲೆಂಬುದೇ ನಮ್ಮ ಪ್ರತಿಜ್ಞೆ. ನೀವೂ ನಮ್ಮ ದಳಕ್ಕೆ ಸೇರುತ್ತೀರಾ ?" – ಎಲ್ಲ ಸ್ವಾತಂತ್ರ್ಯವೀರರೂ ಮಾನವತಾವಾದಿಗಳೂ ಸೇರಿ ಸಂಘಟಿಸಬೇಕಾದ ದಳದ ರೂಪರೇಖೆ ಕಾದಂಬರಿಯಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ಕಾದಂಬರಿಯ ಪರಿಮಾಣದಲ್ಲಿ ಅಡಕವಾಗಿರುವ ವಿಷಯಗಳು ಹೇರಳವಾಗಿವೆ. ವಿವಿಧ ವ್ಯಕ್ತಿಗಳ ಮಾನಸಿಕ ತುಮುಲ, ಸೀಮಿತ ವ್ಯಾಪ್ತಿಯಲ್ಲಿ ಚಿಂತಿಸಿ ಕಾರ್ಯನಿರತರಾಗುವ ಪ್ರವೃತ್ತಿ, ಇವನ್ನೂ ಸಹ ಶರತ್‌ಚಂದ್ರರು ಚಿತ್ರಿಸುತ್ತಾರೆ. ಆದರೆ ಸೀಮಾರಹಿತವಾದ, ಉತ್ತುಂಗ ಶಿಖರವನ್ನೇರಿದ ಮತ್ತು ಪರಿಧಿಯ ವಿಸ್ತಾರವನ್ನು ಮೀರಿ ನಿಲ್ಲುವ ಒಂದು ವ್ಯಕ್ತಿ ಚಿತ್ರಣವನ್ನೂ ಶರತ್‌ಚಂದ್ರರು ಕಾದಂಬರಿಯಲ್ಲಿ ನೀಡಿದ್ದಾರೆ.

ಪರಂಪರಾಗತವಾದ ಹಲವು ಅಂಧಶ್ರದ್ಧೆಗಳಲ್ಲಿ ಅವಿರತ ನಿಷ್ಠೆಯುಳ್ಳ ಬ್ರಾಹ್ಮಣ, ಉಚ್ಚ ಪದವೀಧರ, ಅಪೂರ್ವ. ಉದ್ಯೋಗಕ್ಕಾಗಿ ರಂಗೂನಿಗೆ ತೆರಳಿ ಅಲ್ಲೂ ಮಡಿವಂತಿಕೆ ಆಚರಿಸುವಷ್ಟು ನಿಷ್ಠೆ ಅವನದು. ಅವನ ಸೇವಕ ತಿವಾರಿ ಕ್ರಿಶ್ಚಿಯನ್ ಕುಟುಂಬವೊಂದರೊಡನೆ ಜಗಳದಲ್ಲಿ ಸಿಕ್ಕಿಕೊಂಡ.. ಜಗಳ ಮಾಡಿದ ಕುಟುಂಬಕ್ಕೆ ಸೇರಿದ ಭಾರತಿ ಅಪೂರ್ವನೊಡನೆ ಅಪೂರ್ವವಾದ ಗಾಢಮೈತ್ರಿ ಬೆಳೆಸಿಕೊಳ್ಳುತ್ತಾಳೆ. ಕ್ರಾಂತಿಕಾರಿ ಗುಪ್ತಸಮಿತಿಯ ಸಂಚಾಲಕ ಮತ್ತು ಬೆನ್ನೆಲುಬು ಸವ್ಯಸಾಚಿ. ಸುಮಿತ್ರಾ ಅದರ ಅಧ್ಯಕ್ಷೆ, ಭಾರತಿ ಕಾರ್ಯದರ್ಶಿ. ಅಪೂರ್ವನೂ ಅದರ ಸದಸ್ಯನಾಗುತ್ತಾನೆ, ರಾಷ್ಟ್ರವಿಮೋಚನಾ ರಂಗದಲ್ಲಿ ಪಾಲ್ಗೊಳ್ಳುತ್ತಾನೆ.

---

4. ಅನುವಾದ : ಡಾ॥ ಎಚ್. ಕೆ. ವೇದವ್ಯಾಸಾಚಾರ್ಯ;
   ಪ್ರಕಾಶನ : ಡಿ. ವಿ. ಕೆ. ಮೂರ್ತಿ, ಮೈಸೂರು; ನಾಲ್ಕನೆಯ ಮುದ್ರಣ 1965.

ಆದರೆ ಅವನಿಗೆ ಅನೇಕ ಬಂಧನಗಳಿವೆ; ಉದ್ಯೋಗವನ್ನು ಭದ್ರಪಡಿಸಿಕೊಳ್ಳುವುದೂ ಅಂಥದ್ದೊಂದು. ಉತ್ಕಟ ಪರಿಸ್ಥಿತಿ ಬಂದೊದಗಿದಾಗ ಈ ಅಂಜುಬುರುಕ ಹಿಂದೆಗೆಯುತ್ತಾನೆ. ಆದರೆ ಸಂಸಾರವೊಂದನ್ನು ಗಂಟುಹಾಕಿಕೊಂಡಿರುವ ರಾಮದಾಸ ಹಿಂದೇಟುಹಾಕಿದ ಅಪೂರ್ವನಿಗೆ ತದ್ವಿರುದ್ಧವಾಗಿ ಮುನ್ನುಗ್ಗುತ್ತಾನೆ. ಸಂದಿಗ್ಧ ಪರಿಸ್ಥಿತಿಯೊಂದರಲ್ಲಿ ಅಪೂರ್ವ ಗುಪ್ತಸಮಿತಿಯ ಗುಟ್ಟನ್ನು ಆಳುವ ಯಂತ್ರದ ಭಂಟರಿಗೆ ಬಯಲು ಮಾಡುತ್ತಾನೆ. ಅದಕ್ಕೆ ಗುಪ್ತಸಮಿತಿಯು ವಿಧಿಸುವ ಶಿಕ್ಷೆ ಮರಣದಂಡನೆ. 'ಡಾಕ್ಟರ್' ಎಂದು ಪರಿಚಿತನಾದ ಸವ್ಯಸಾಚಿ ತನ್ನ ವಿಶಿಷ್ಟ ಸ್ಥಾನದ ಪ್ರಭಾವವನ್ನುಪಯೋಗಿಸಿ ಅಪೂರ್ವನನ್ನು ರಕ್ಷಿಸುತ್ತಾನೆ. ಭಾರತಿಗೂ ಅಪೂರ್ವನಿಗೂ ಇರುವ ಮೈತ್ರಿಯ ಅರ್ಥ ಅವನಿಗೆ ಗೊತ್ತು. ಅಪೂರ್ವ ರಂಗೂನಿನಿಂದ ಮರಳಿದ. ಗುಪ್ತಸಮಿತಿಯಲ್ಲಿ ಈ ಕಾರಣದಿಂದಾಗಿ ಭಿನ್ನಾಭಿಪ್ರಾಯವೇರ್ಪಟ್ಟಿತು. ಸಮಿತಿಯ ಇತರ ಶಾಖೆಗಳಲ್ಲೊಂದಾದ ಸಿಂಗಪುರ ಶಾಖೆಯಲ್ಲಿ ಇನ್ನೇನೋ ಸಮಸ್ಯೆ. ಅದನ್ನು ಬಗೆಹರಿಸಲು ಸವ್ಯಸಾಚಿ ಅಲ್ಲಿಗೆ ಹೋಗಬೇಕು. ಅಷ್ಟರಲ್ಲಿ ಅಪೂರ್ವ ತನ್ನ ವೃದ್ಧ ತಾಯಿಯೊಡನೆ ರಂಗೂನಿಗೆ ಮತ್ತೆ ಬಂದ. ತಾಯಿ ತೀರಿಕೊಂಡಳು. ಭಾರತಿ ಅವನನ್ನು ಸಂತೈಸಿದಳು. ಸುಮಿತ್ರಾ ಸಹ ಜಾವಾಕ್ಕೆ ಹಿಂದಿರುಗಲು ನಿಶ್ಚಯಿಸಿದ್ದಳು. ಅವಳು ಬಂದಿದ್ದುದೇ ಅಲ್ಲಿಂದ. ಸವ್ಯಸಾಚಿ ಅವಳನ್ನು ಸಂಕಷ್ಟದಿಂದ ಪಾರುಮಾಡಿ ಕರೆತಂದಿದ್ದ. ಆತ ಪ್ರಾರಂಭಿಸಿದ್ದ ಸಮಿತಿಯಲ್ಲಿ ಅವಳು ಅತ್ಯಂತ ಪ್ರಾಮಾಣಿಕವಾಗಿ ದುಡಿದಿದ್ದಳು. ಈಗ ಎಲ್ಲಾ ಅಸ್ತವ್ಯಸ್ತವಾಗಿತ್ತು. ಸವ್ಯಸಾಚಿ ಒಬ್ಬನೇ ಉಳಿದ.

ಕಾದಂಬರಿಯ ವಸ್ತುವಿನ ಬಹಳ ಸ್ಥೂಲವಾದ ಪರಿಚಯ ಇದು. ಆದರೆ ಕಾದಂಬರಿಯಲ್ಲಿ ಅಡಕವಾಗಿರುವ ವಿಷಯಗಳು ಮತ್ತು ವಿವರಗಳು ಹೇರಳವಾಗಿವೆ. ಅಪೂರ್ವ ಸಹ ಕಳಪೆಯವನೇನಲ್ಲ. ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆರೆತು ತಂದೆಯ ಉದ್ಯೋಗಕ್ಕೆ ಧಕ್ಕೆ ತರುವಷ್ಟು ತೀವ್ರಗಾಮಿ ಅವನು. ಅವನ ರಾಷ್ಟ್ರಪ್ರೇಮ ಉಜ್ವಲವಾದದ್ದು. ಅವರಣ್ಣ ವಿನೋದ ಹೇಳುತ್ತಾನೆ : ''ದೇಶದ ಮಣ್ಣೇ ಇವನ ದೇಹದ ಮಾಂಸ ಮತ್ತು ದೇಶದ ನೀರೇ ಇವನ ಜೀವನ ರಕ್ತ... ಬರೇ ಮಣ್ಣು ನೀರು ಮಾತ್ರವಲ್ಲ, ದೇಶದ ಗುಡ್ಡಬೆಟ್ಟಗಳು, ಕಾಡುಮೇಡುಗಳು, ಚಂದ್ರ ಸೂರ್ಯರು, ನದೀ ನಾಲೆಗಳು, ನೆರಳು-ಬೆಳಕುಗಳು ಎಲ್ಲವನ್ನೂ ಈ ಜನರು (ಅಪೂರ್ವನಂತಹವರು) ತಮ್ಮ ಅಂಗಾಂಗಗಳಲ್ಲೇ ಶೋಷಿಸಲೆತ್ನಿಸುತ್ತಾರೆ'' (ಪುಟ 14). ರಂಗೂನಿನಲ್ಲಿ ಪರಂಗಿ ಸಾಹೇಬನ ದುರ್ನಡತೆಯನ್ನು ಕಂಡು ''ಅಪೂರ್ವನ ಮನಸ್ಸು ಸಿಟ್ಟಿನಿಂದ ತಳಮಳಿಸಿತು. ಅವನು ಯೋಚಿಸಿದ : ಇದು ನನ್ನ ಮತ್ತು ಆ ಕುಡುಕನ ಪ್ರಶ್ನೆ ಮಾತ್ರವಲ್ಲ; ಇಂತಹ ದುರ್ನಡತೆಯನ್ನು ಸಹಿಸಬೇಕಾಗಿ ಬಂದಿರುವುದರಿಂದಲೇ ಇವರ ಉನ್ಮತ್ತ ದಬ್ಬಾಳಿಕೆ ಪ್ರತಿದಿನವೂ ಅಭಿವೃದ್ಧಿಯಾಗಿ ಇವತ್ತು ನಮ್ಮ ಮೇಲೂ ನಡೆದಿದೆ!'' ಪ್ರಾರಂಭದಲ್ಲಿ ಇಂಗ್ಲಿಷರ ನ್ಯಾಯಾಂಗ ಪದ್ಧತಿಯಲ್ಲಿ ಅವನಿಗೆ ಶ್ರದ್ಧೆಯಿದೆ; ಆದರೆ ತನಗೆ ನ್ಯಾಯ ದೊರಕದಿದ್ದಾಗ ಅದರ ನಿಜಸ್ವರೂಪ ಅವನಿಗೆ ತಿಳಿಯುತ್ತದೆ. ತನಗೆ ಅನ್ಯಾಯವಾಗಿ ಅಂಟಿಸಲಾಗಿರುವ ಕಳಂಕ ಸದಾಕಾಲವೂ ಉಳಿದುಬಿಡುತ್ತದಲ್ಲಾ ಎಂಬುದು ಅವನ ಚಿಂತೆ. ಹಿಂಸೆಯ ಆಗರವಾದ ಒಂದು ಬಡ ಸಂಸಾರವನ್ನು ಕಂಡಾಗ ಅಪೂರ್ವ ರೋಸಿಹೋಗುತ್ತಾನೆ. ಇಂತಹ ಹೀನಸ್ಥಿತಿಗೆ ಕಾರಣವೇನೆಂಬ ಕಲ್ಪನೆ ಅವನಿಗಿಲ್ಲ. ಭಾರತಿಗೂ ಮೊದಲಿಗೆ ಇರಲಿಲ್ಲವಂತೆ. ಆದರೆ ಸವ್ಯಸಾಚಿಯ ಸಖ್ಯವಾದ ಮೇಲೆ ಇದನ್ನೆಲ್ಲಾ ಅವಳು ತಿಳಿಯಲು ಶಕ್ತಳು. ಒಂದು ಬಡಸಂಸಾರದ ಬೇನೆಗೆ ಹೊರಗಿನ ನೂರಾರು ಕಾರಣಗಳಿರುತ್ತವೆ. ಅವನ್ನೆಲ್ಲಾ ನಾವು ನೋಡದಿದ್ದರೆ ಬೇನೆಯೇ ಇಲ್ಲವೆಂದರ್ಥವಲ್ಲ. ''ಬರೇ ನಿಮ್ಮ ಪಾಡಿಗೆ ನೀವು ಮಡಿ,

ಆಚಾರ ಮಾಡಿಕೊಂಡು ಸಾಧುಗಳಾಗಿ ಒಬ್ಬರೇ ಪುಣ್ಯ ಸಂಪಾದಿಸಿ ಸ್ವರ್ಗಕ್ಕೆ ಹೋಗುತ್ತೀರೇನು ? ಇದೆಂದಿಗೂ ಸಾಧ್ಯವಿಲ್ಲ... ನೀವು ಅದಕ್ಕೇನೂ ಸಂಬಂಧಿಸಿಲ್ಲೇನು ? ಡಾಕ್ಟರನ್ನು ಸರಿಯಾಗಿ ಅರ್ಥಮಾಡಿಕೊಳ್ಳುವವರೆಗೂ ನಾನೂ ನಿಮ್ಮಂತೆ ಯೋಚಿಸುತ್ತಿದ್ದೆ. ಈ ನರಕಕುಂಡದಲ್ಲಿ ಎಷ್ಟು ಪಾಪವಿದೆಯೋ ಅದು ಎಲ್ಲವನ್ನೂ ಸ್ವರ್ಗದಿಂದ ಕೂಡ ಎಳೆದು ತಂದು ನರಕಕೂಪದಲ್ಲಿ ಹಾಕುತ್ತದೆ ಎಂದು ನನಗೆ ನಿಶ್ಚಯವಾಯಿತು. ಈ ದುಷ್ಕೃತ್ಯದ ಋಣ ತೀರಿಸದ ಹೊರತು ನೀವು ಬಿಡುಗಡೆ ಹೊಂದುವುದು ಹುಡುಗಾಟವೇ? ಇದನ್ನು ತಿಳಿಯುವುದೇ ದಾಬಿ ಸಮಿತಿಯ ದೊಡ್ಡ ಸಾಧನೆ''. ಇದು ಭಾರತಿಯು ಅಪೂರ್ವನಿಗೆ ತಿಳಿಯಹೇಳಿದ್ದು. ಇದು ಅವನ ಮನಸ್ಸನ್ನು ಕುಟುಕಿತು. ತನ್ನ ಸುತ್ತಣ ಜೀವನವನ್ನು ಹೊಸ ಕಣ್ಣುಗಳಿಂದ ನೋಡಲಾರಂಭಿಸಿದ. ಸಮಸ್ಯೆಗೆ ಪರಿಹಾರವೆಲ್ಲಿ ಎಂದು ತವಕಿಸಿದ. ಮಧ್ಯಮ ವರ್ಗದ ಉತ್ತರ ತಕ್ಷಣ ಹೊಳೆಯಿತು. ''ಯಾರು ಇಲ್ಲಿ ಏನು ಮಾಡುತ್ತಿದ್ದಾರೆ ?'' ''ನನಗೆ ಗೊತ್ತಿಲ್ಲ''. ''ನಾನೇನೂ ಮಾಡುವುದಿಲ್ಲ''. ''ಹೀಗೇ ಆಗುತ್ತಿರುತ್ತೆ''. ''ಮೊದಲಿನಿಂದಲೂ ಹೀಗೆ ಆಗುತ್ತಿದೆ''. (ಪುಟ 155). ಆದರೆ ಇದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಮಾರ್ಗವಾಗಲಾರದು. ಪ್ರಶ್ನೆಯು ಇನ್ನೂ ಘೋರ ರೂಪ ತಾಳಬಹುದಷ್ಟೇ. ''ಮನುಷ್ಯ ಇನ್ನೊಬ್ಬ ಮನುಷ್ಯನನ್ನು ವಂಚನೆ, ಕ್ರೌರ್ಯದಿಂದ ಕೊಲ್ಲುತ್ತಿರುವ, ಪ್ರಬಲ, ದುರ್ಬಲರ ಮೇಲೆ ಎಸಗುತ್ತಿರುವ ಈ ರಾಕ್ಷಸೀ ಕೃತ್ಯ, ಈ ಬೀಭತ್ಸ ಕರಾಳಜ್ವಾಲೆ ಎಂದಿಗೆ ಆರೀತು? ಈ ಉನ್ಮತ್ತತನದ ಕೊನೆ ಯಾವಾಗ ?'' (ಪುಟ 155). ಈ ಎಲ್ಲಾ ಪ್ರಶ್ನೆಗಳ ಹಿಂದೆ ಸವ್ಯಸಾಚಿಯ ಛಾಯೆ ಇದೆ. ಉತ್ಪಾದನಾ ಸಾಮಗ್ರಿಗಳನ್ನು ತಮ್ಮದನ್ನಾಗಿಸಿಕೊಂಡಿರುವ ವರ್ಗದ ವಿರುದ್ಧ ಕ್ರಾಂತಿಕಾರಿ ಹೋರಾಟವಲ್ಲದೆ ಇದಕ್ಕೆ ಬೇರೊಂದು ಪರಿಹಾರ ಮಾರ್ಗವಿಲ್ಲ. ಆದಕ್ಕಾಗಿ ಪ್ರಭುತ್ವದ ಶಾಖೋಪಶಾಖೆಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ ಆರ್ಥಿಕ ಶಕ್ತಿಯನ್ನು ಎಲ್ಲ ಕ್ಷೇತ್ರಗಳಲ್ಲೂ ಎದುರಿಸಬೇಕು. ಆದರೆ ಪ್ರಭುತ್ವವನ್ನು ಆಕ್ರಮಿಸಿರುವ ವರ್ಗ ತನ್ನ ದಮನಶಕ್ತಿಯನ್ನು ಯಥೇಚ್ಛವಾಗಿ ಪ್ರಯೋಗಿಸುತ್ತದೆ. ಪ್ರಜ್ಞಾಪೂರ್ವಕವಾದ ಸಂಘಟಿತ ಹೋರಾಟ ಇದರಿಂದಾಗಿ ಕಠಿಣವಾಗುತ್ತದೆ. ಸವ್ಯಸಾಚಿಯ ನೇತೃತ್ವ ಹೊಂದಿರುವ ದಳದ ಸದಸ್ಯರಲ್ಲೊಬ್ಬನಾದ ರಾಮದಾಸ ಇದನ್ನೇ ಇನ್ನೂ ಸ್ಫುಟವಾಗಿ ತಿಳಿಸುತ್ತಾನೆ: ''ಈ (ಪೊಲೀಸ್) ನಾಯಿಗಳನ್ನು ನಮ್ಮ ಹಿಂದೆ ನಿಮ್ಮ ಹಿಂದೆ ಬಿಟ್ಟಿರುವವರು ಕಾರ್ಖಾನೆಯ ಮಾಲೀಕರು. ನಿಮಗೆ ನಿಮ್ಮ ಕಷ್ಟಸುಖಗಳನ್ನು ಯಾರು ಬಿಚ್ಚಿ ಹೇಳುವುದೂ ಇವರಿಗಿಷ್ಟವಿಲ್ಲ; ನೀವು ಆ ಕಾರ್ಖಾನೆ ನಡೆಸುವವರು ಮತ್ತು ಅದರ ಭಾರ ಹೊತ್ತಿರುವ ಎತ್ತುಗಳು. ನೀವೂ ಅವರಂತೆಯೇ ಮನುಷ್ಯರು, ನಿಮಗೂ ಹೊಟ್ಟೆ ತುಂಬಾ ಉಣ್ಣುವ ಮತ್ತು ಜೀವನದಲ್ಲಿ ಸಂತೋಷವಾಗಿರುವ ಅಧಿಕಾರ ಜನ್ಮಸಿದ್ಧವಾಗಿದೆಯೆಂಬ ಸತ್ಯಾಂಶವನ್ನು ನಿಮ್ಮಿಂದ ಮುಚ್ಚಿಡಲು ಇವರು ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿದ್ದಾರೆ. ನೀವು ಒಮ್ಮೆ ಈ ನಿದ್ದೆಯಿಂದ ಎಚ್ಚೆತ್ತರೆ, ನಾವು ಬಡವರಾದರೂ, ಅಶಿಕ್ಷಿತರಾದರೂ ಅವರಂತೆ ಮನುಷ್ಯರು, ಈ ಮನುಷ್ಯತ್ವವನ್ನು ಕಸಿದುಕೊಳ್ಳಲು ಸಾಧ್ಯವಿಲ್ಲವೆಂಬ ಸತ್ಯವನ್ನು ತಿಳಿದರೆ, ಈ ಗಿರಣಿ ಮಾಲೀಕರು ನಿಮ್ಮ ಮುಂದೆ ಯಾವ ಮಹಾವಿಷಯ ? ನಿಮಗೆ ಈ ಸತ್ಯ ತಿಳಿಯುವುದಿಲ್ಲವೆ ? ಇದು ದುಡ್ಡಿದ್ದವರ ವಿರುದ್ಧ ಬಡವರ ಆತ್ಮರಕ್ಷಣೆಗಾಗಿ ಯುದ್ಧ! ಇದಕ್ಕೆ ದೇಶ-ವಿದೇಶ, ಜಾತಿ-ಧರ್ಮ, ಹಿಂದೂ-ಮುಸಲ್ಮಾನ ಎಂಬ ವ್ಯತ್ಯಾಸವಿಲ್ಲ. ಇದರಲ್ಲಿ ಇರುವುದು ದುಡ್ಡಿನಿಂದ ಉನ್ಮತ್ತರಾದ ಗಿರಣಿ ಮಾಲೀಕರು ಮತ್ತು ಅವರ ಕಾರ್ಖಾನೆಯಲ್ಲಿ ದುಡಿಯುವ ಪ್ರವಂಚಿತ ಕೂಲಿಕಾರರು – ನಿಮ್ಮ ಶಕ್ತಿಗೆ ಅವರು ಹೆದರುತ್ತಾರೆ. ನಿಮಗೆ ವಿಷಯಗಳನ್ನು ತಿಳಿಸಬೇಕೆಂಬ

ಆಸೆ ಹುಟ್ಟಿದರೆ ಅವರ ಎದೆಯ ರಕ್ತ ಒಣಗುತ್ತದೆ. ಮೂರ್ಖರಾದ ನೀವೇ ಅವರ ಸ್ವೇಚ್ಛಾಚಾರದ ವಿಲಾಸ ಜೀವನಕ್ಕೆ ಸಹಾಯಕರು! ಅದಕ್ಕಾಗಿ ನೀವು ಬದುಕಿರಲು ಎಷ್ಟು ಬೇಕೋ ಅಷ್ಟಕ್ಕಿಂತ ಒಂದು ಕಾಸೂ ನಿಮಗೆ ಹೆಚ್ಚಾಗಿ ಕೊಡುವುದಿಲ್ಲ. ಇದನ್ನು ತಿಳಿಯಲು ನಿಮಗೆ ಇಷ್ಟು ಕಷ್ಟವೇ? ಇದನ್ನು ಸ್ಪಷ್ಟವಾಗಿ ನಿಮ್ಮ ಮುಂದೆ ಹೇಳಿದ್ದಕ್ಕೆ ಈ ಬಿಳಿಯವರ ಕೈಲಿ ಅವಮಾನ ಮಾಡಿಸಿಕೊಳ್ಳುವುದೇ ನಮ್ಮ ಪಾಲಿನ ಫಲವೇ? ಬಡವರ ಜೀವನವನ್ನು ಸಾರ್ಥಕಗೊಳಿಸಲು ಮಾಡುವ ಈ ಯುದ್ಧದಲ್ಲಿ ನೀವೆಲ್ಲ ಬಂದು ಸೇರುವುದಿಲ್ಲವೆ?'' – ೧೯೨೬ರಲ್ಲಿ ಬರೆಯಲಾದ ಒಂದು ಕಾದಂಬರಿಯಲ್ಲಿ ಇಂತಹ ಉಜ್ವಲ ಮಾತುಗಳು ಸಾಹಿತ್ಯಕವಾಗಿ ಸೇರಿಕೊಂಡಿವೆಯೆಂದರೆ ಶರತ್‌ಚಂದ್ರರ ಕೃತಿಯ ಮಹತ್ವ ಎಷ್ಟೆಂಬುದನ್ನು ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಆ ಸುಮಾರಿನಲ್ಲಿ ಬರೆಯಲಾದ ಇನ್ನಾವ ಭಾರತೀಯ ಸಾಹಿತ್ಯ ಕೃತಿಯಲ್ಲಿ ಇಂತಹ ದೃಢವಾದ ನಿಲುವು ತಳೆಯಲಾಗಿದೆಯೋ ನನಗೆ ತಿಳಿಯದು. ಸವ್ಯಸಾಚಿ ಪ್ರತಿನಿಧಿಸುವುದು ಇಂತಹ ಧೀರ ಸಾರ್ಥಕತೆಯ ಮಾರ್ಗವನ್ನು. ಆತನ ವ್ಯಕ್ತಿತ್ವ ಬಹುಮುಖವಾದದ್ದು. ''ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ'' ಎಂಬುದಕ್ಕೆ ಜೀವಂತ ನಿದರ್ಶನ ಆತನ ವ್ಯಕ್ತಿತ್ವ. ಶರತ್‌ಚಂದ್ರರು ಅದನ್ನು ವರ್ಣಿಸುವ ಸನ್ನಿವೇಶ ಹೀಗಿದೆ: ''ನಿಮಗೆ ಸಿಟ್ಟು ಬರುವುದೇ ಇಲ್ಲವೆಂದು ಜನ ಹೇಳುತ್ತಾರೆ, ನಿಜವೇ?'' – ಇದು ಸವ್ಯಸಾಚಿಗೆ ಭಾರತಿಯ ಪ್ರಶ್ನೆ. ಉತ್ತರ: ''ಹೇಳುತ್ತಾರೆಯೇ? ಅದು ಎಂದಿಗೂ ಇಲ್ಲ. ನನ್ನ ವಿರುದ್ಧ ಜನ ಪ್ರಚಾರ ಮಾಡುತ್ತಾರೆ. ಅವರಿಗೆ ನನ್ನನ್ನು ಕಂಡರೆ ಹೊಟ್ಟೆಕಿಚ್ಚು.''

''ಅಥವಾ ನಿಮ್ಮನ್ನು ಕಂಡರೆ ಬಹಳ ವಿಶ್ವಾಸ, ಆದ್ದರಿಂದಲೇ ಹೀಗೆ ಹೇಳುತ್ತಾರೆ. ನಿಮ್ಮಲ್ಲಿ ದಯಾ, ದಾಕ್ಷಿಣ್ಯ, ಅಹಂಕಾರ, ದರ್ಪ ಒಂದೂ ಇಲ್ಲ. ನಿಮ್ಮ ಹೃದಯ ಕಲ್ಲು ಎಂದು ಹೇಳುತ್ತಾರೆ... ಆ ಕಲ್ಲಿನ ಮೇಲೆ ಒಂದು ವಿಷಯ ಬರೆದಿದೆ: 'ಜನನೀ ಜನ್ಮಭೂಮಿ'; ಇದಕ್ಕೆ ಆದಿ ಅಂತ್ಯವಿಲ್ಲ, ಏರಿಳಿತವಿಲ್ಲ. ಆದರ ರೂಪವೇ ನಮ್ಮ ಕಣ್ಣಿಗೆ ಬೀಳುವುದಿಲ್ಲ. ಆದ್ದರಿಂದಲೇ ನಾವು ನಿಮ್ಮ ಹತ್ತಿರ ಇದ್ದೇವೆ'' (ಪುಟ 188-9).

ಏರಿಳಿತಗಳಿಂದ ತುಂಬಿ ದುಗುಡ ದುಮ್ಮಾನಗಳಿಂದಲೂ ಸ್ಥೈರ್ಯದಿಂದಲೂ ಭವಿಷ್ಯದತ್ತ ತನ್ನ ಮುಖಮಾಡಿ, ಆರ್ಥಿಕ-ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹಾತೊರೆದು ಹೋರಾಟ ನಡೆಸಿ, ಬಂಧನದಿಂದ ಮುಕ್ತವಾಗಿ, ಎಲ್ಲರಿಗೂ ಸರ್ವೇಸಾಮಾನ್ಯವಾದ ಅಧಿಕಾರವನ್ನು ಸ್ಥಾಪಿಸಬೇಕಾದ ಮತ್ತು ಎಷ್ಟೇ ಅಡೆತಡೆಗಳಿರಲಿ ಅದರಿಂದ ಹಿಮ್ಮೆಟ್ಟದೆ ಮುನ್ನುಗ್ಗಿ ಅಂತಹ ಅಧಿಕಾರವನ್ನು ಸ್ಥಾಪಿಸುವ ಭವ್ಯಭಾರತ. – ಇದು ಸವ್ಯಸಾಚಿಯ ವ್ಯಕ್ತಿಸ್ವರೂಪ. ಆದ್ದರಿಂದಲೇ ಆತನ ವ್ಯಕ್ತಿತ್ವ ಇತರರಿಗೆ ಸಂಪೂರ್ಣವಾಗಿ ವೇದ್ಯವಾಗುವುದಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಆತನನ್ನು ಅರ್ಥೈಸುತ್ತಾರೆ. ಆತನ ಗಹನತೆ ಭಾರತದ ದುರ್ಭೇದ್ಯವಾದ ರಾಷ್ಟ್ರೀಯತೆಯ ಕುರುಹು, ಪ್ರತೀಕ. ಆದರೆ ಶರತ್‌ಚಂದ್ರರು ಕಂಡ ಭಾರತಕ್ಕೂ ಅವರ ಕನಸಿನ ಭಾರತಕ್ಕೂ ತಲೆಚಿಟ್ಟು ಹಿಡಿಸುವಷ್ಟು, ರೋಷ ಬರಿಸುವಷ್ಟು, ಅತ್ಯಂತ ದುಃಖಿಯನ್ನಾಗಿಸುವಷ್ಟು, ವ್ಯತ್ಯಾಸವಿತ್ತು. ಕೋಪಾವಿಷ್ಟರಾಗಿ ಎಲ್ಲರನ್ನೂ ತೆಗಳಿ ತೆಪ್ಪಗಾಗುವ ಭಾರತ ಶರತ್‌ಚಂದ್ರರ ಕ್ರಿಯಾತ್ಮಕ ಭಾರತವಲ್ಲ. ಅದೊಂದು ಸಹನಾಶೀಲ ಅಗ್ನಿಪರ್ವತ. ಸವ್ಯಸಾಚಿಯ ಈ ಚಿತ್ರವನ್ನು ಭಾರತಿ ಬಿಡಿಸುತ್ತಾಳೆ: ''ಒಂದು ದಿನ ನಾನು ಸುಮಿತ್ರಾ ಅಕ್ಕನ ಜೊತೆ ಕಾರಖಾನೆ ನೋಡಲು ಹೋಗಿದ್ದೆ. ಅಲ್ಲಿ ಅವತ್ತು ಹೊಸ ಬಾಯಿಲರಿನ ಪರೀಕ್ಷೆ ನಡೆದಿತ್ತು. ಅದರ ಒಂದು ಬಾಗಿಲು ತೆರೆಯುತ್ತಲೇ ಒಳಗಿನಿಂದ ಬೆಂಕಿಯ ಬಿರುಗಾಳಿ ಹೊರಟಂತೆ ತೋರಿತು. ಇಡೀ ಭೂಮಿಯನ್ನು ಅದು ಸುಡಬಲ್ಲುದೆನಿಸಿತು. ಅದರ ಬಾಗಿಲು

ಹಾಕಿದೊಡನೆಯೇ ಅದರಲ್ಲಿ ಬೆಂಕಿಯ ಕಿಡಿ ಇದೆಯೆಂಬುದೂ ಕೂಡ ಗೊತ್ತಾಗುವಂತಿರಲಿಲ್ಲ. ಅದನ್ನು ನೋಡಿ ಸುಮಿತ್ರಾ ನಿಟ್ಟುಸಿರುಬಿಟ್ಟರು. ನಾನು 'ಏಕೆಂದು' ಕೇಳಿದೆ. ಅವರು ಹೇಳಿದರು – 'ಇದನ್ನು ಜ್ಞಾಪಕದಲ್ಲಿಟ್ಟುಕೋ ಭಾರತಿ, ಇದೇ ಡಾಕ್ಟರರ ನಿಜವಾದ ಚಿತ್ರ'...''(ಪುಟ 189). ದುರ್ಬಲನಾದರೂ ಸಹ ಭಾರತೀಯ ಎಲ್ಲಿಯವರೆವಿಗೆ ಹೀನಾಚಾರಗಳನ್ನೂ, ದಬ್ಬಾಳಿಕೆಯನ್ನೂ ಸಹಿಸಬಲ್ಲ? ಅವನಲ್ಲೂ ಬೆಂಕಿಯ ಕಿಡಿ ಇದೆಯಲ್ಲವೇ? ಅದನ್ನು ಅದುಮಿಹಿಡಿದಿರುವ ಬ್ರಿಟಿಷ್ ವಸಾಹತುಶಾಹಿ (ಅಥವಾ ನಂತರದ ಸ್ವಕೀಯ ಬಂಡವಾಳಶಾಹಿ) ಎಲ್ಲಿಯವರೆಗೆ ವಿಜೃಂಭಿಸಲು ಸಾಧ್ಯ?

ಆ ಕಿಡಿ ಜಾಜ್ವಲ್ಯಮಾನವಾಗಿ ಉರಿದು ಆಮೇಲೆ ಪ್ರದೀಪವಾಗಬೇಕಾದರೆ ಅಪೂರ್ವ ನಂತಹವರನ್ನು ಕಡೆಗಣಿಸಿ ನಡೆಯಲಾಗದು. ಆತನ ದುರ್ಬಲತೆಯನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಕ್ರಮೇಣ ಮುನ್ನಡೆಸಬೇಕು. ಅದು ದಾಬಿ ಸಮಿತಿಯ ಕರ್ತವ್ಯ: ''ಈ ದುರ್ಬಲ ಮನುಷ್ಯನನ್ನು ಬಲಪಡಿಸುವ ಭಾರ ಭಾರತಿಯ ಮೇಲೆ ಇರಲಿ'' ಎನ್ನುತ್ತಾನೆ ಸವ್ಯಸಾಚಿ (ಪುಟ 199). ಭಾರತಿ ಸ್ವತಃ ಹೋರಾಟಗಳಲ್ಲಿ ಭಾಗವಹಿಸಿ ಉಚ್ಚಮಟ್ಟದ ತಾತ್ವಿಕತೆ ಮತ್ತು ಪ್ರಜ್ಞೆಗಳನ್ನು ಪಡೆದಿರುವವಳು. ವೈಯಕ್ತಿಕ ಆಕಾಂಕ್ಷೆಗಳ ಸಾಫಲ್ಯವನ್ನು ಅಳೆಯುವ ಅಪೂರ್ವ ತುಚ್ಛನಿರಬಹುದು; ಆದರೆ ಆ ತುಚ್ಛತನದ ಮೂಲವನ್ನು ತಿಳಿಯಬೇಕಾದದ್ದು ಮತ್ತು ನಿವಾರಿಸಬೇಕಾದದ್ದು ಕ್ರಾಂತಿಕಾರಿ ಸಮಿತಿಯ ಕರ್ತವ್ಯ. ಭಾರತದ ಅಪೂರ್ವರುಗಳೆಲ್ಲಾ ಅಪೂರ್ವರಲ್ಲದಿದ್ದರೆ ಸಮಿತಿಯ ಅವಶ್ಯಕತೆಯಾದರೂ ಎಲ್ಲಿರುತ್ತಿತ್ತು? ಆಗ ಸವ್ಯಸಾಚಿ ಸವ್ಯಸಾಚಿಯಾಗುತ್ತಿರಲಿಲ್ಲ ಕೂಡ. ಅಸಂಖ್ಯಾತ ಅಪೂರ್ವರು 'ಸವ್ಯಸಾಚಿ'ಯನ್ನು ಒಪ್ಪುವ ಮಾತಂತಿರಲಿ, ಆತನ ಗಾಂಭೀರ್ಯ ಮತ್ತು ಸ್ವಾರ್ಥರಹಿತ ಔದಾರ್ಯವನ್ನು ಗುರುತಿಸಲು ಸಹ ಸಮಯ ಬೇಕು. ಶಾಂತವಾಗಿ, ಮೃದುವಾಗಿ, ಆದರೆ ತತ್ತ್ವದ ಕೈ ಬಿಡದೆ, ಹೆಣಗುವುದೊಂದೇ ಸವ್ಯಸಾಚಿಗಿರುವ ಮಾರ್ಗ. ಆತನೇ ಭಾರತಿಗೆ ಹೇಳುವ ಮಾತುಗಳಿವು: ''ಅಯ್ಯೋ ದೈವವೇ, ನೀನು ದೇಶವೆಂದರೆ ವಿಶಾಲವಾದ ಭೂಮಿ, ನದಿ ಮತ್ತು ಪರ್ವತವೆಂದು ತಿಳಿದಿದ್ದೀ. ಒಬ್ಬ ಅಪೂರ್ವನ ಜೊತೆಗೆ ಇದ್ದೇ ನಿನಗೆ ಧಿಕ್ಕಾರವೆನಿಸಿ ನೀನು ವಿರಾಗಿಣಿಯಾದೆ. ಇಲ್ಲಿ ನೂರಾರು ಸಾವಿರಾರು ಅಪೂರ್ವನಂತಹವರು, ಅವನನ್ನು ಮೀರಿಸಿದಂತಹವರು ಇರುತ್ತಾರೆಂಬುದು ನಿನಗೆ ತಿಳಿದಿಲ್ಲ. ಪರಾಧೀನ ದೇಶದಲ್ಲಿ ಈ ಕೃತಘ್ನತೆಯೇ ದೊಡ್ಡ ಅಭಿಶಾಪ. ನೀನು ಯಾರ ಸೇವೆ ಮಾಡುತ್ತೀಯೋ ಅವರೇ ನಿನ್ನನ್ನು ಸಂದೇಹದ ದೃಷ್ಟಿಯಿಂದ ನೋಡುತ್ತಾರೆ. ಯಾರ ಪ್ರಾಣವನ್ನು ನೀನು ಉಳಿಸುತ್ತೀಯೋ ಅವರೇ ನಿನ್ನನ್ನು ದೂರಲೆಳಸುತ್ತಾರೆ. ಮೂಢತನ ಮತ್ತು ಕೃತಘ್ನತೆ ನಿನ್ನನ್ನು ಪ್ರತಿಕ್ಷಣವೂ ಸೂಜಿಯಂತೆ ಚುಚ್ಚುತ್ತಿರುತ್ತದೆ. ಇದರಲ್ಲಿ ಶ್ರದ್ಧೆಯಿಲ್ಲ, ಸಹಾನುಭೂತಿಯಿಲ್ಲ, ಯಾರೂ ಹತ್ತಿರ ಕೂಡ ಕರೆಯುವುದಿಲ್ಲ, ಯಾರೂ ಸಹಾಯ ನೀಡಲು ಮುಂದೆ ಬರುವುದಿಲ್ಲ, ವಿಷಸರ್ಪವೆಂದು ತಿಳಿದು ಎಲ್ಲರೂ ದೂರ ಸರಿಯುತ್ತಾರೆ. ದೇಶಪ್ರೇಮ ಮಾಡಿದರೆ ಇದೇ ನಮಗೆ ಪುರಸ್ಕಾರ ಭಾರತಿ!'' (ಪುಟಗಳು 290-91).

ಸವ್ಯಸಾಚಿಯನ್ನು ಒಂದು ಪ್ರಜ್ಞಾಪೂರ್ವಕ ಸಂಘಟನೆಯ ಪ್ರತಿನಿಧಿಯಂತಲ್ಲದೆ ಒಬ್ಬ ವ್ಯಕ್ತಿಯನ್ನಾಗಿ ನೋಡಿದರೆ ಆತ ಅತ್ಯಧಿಕ ಕಲ್ಪನಾಶೀಲ ಸಾಹಸಿಯಾಗಿ ಮಾತ್ರ ಕಂಡಾನು. ಕ್ರಾಂತಿಕಾರಿ ಹೋರಾಟದ ಪ್ರತೀಕವಾಗಿ ಆತನನ್ನು ವಿಶ್ಲೇಷಿಸಿದರೆ ಆತನ ಧೀರೋದಾತ್ತ ವ್ಯಕ್ತಿತ್ವ ಹೊರಹೊಮ್ಮುತ್ತದೆ. ''ನಿನ್ನನ್ನು ಸೆರಗಿನಲ್ಲಿ ಕಟ್ಟಿಕೊಂಡು ಗಲ್ಲಿಗೇರಿಸಬೇಕೆಂದಿರುವವರಿಗೆ ನಿನ್ನ ಬೆಲೆ ಗೊತ್ತಿದೆಯೇ? ತಾವು ಇದರಿಂದ ಪ್ರಪಂಚದ ಎಂತಹ ವಸ್ತುವಿನ

ನಾಶಮಾಡಿದಂತಾಗುತ್ತದೆಂಬುದು ಅವರಿಗೆ ಗೊತ್ತೆ?'' ಎನ್ನುತ್ತಾಳೆ ಭಾರತಿ ಸವ್ಯಸಾಚಿಯನ್ನು ಕುರಿತು (ಪುಟ 212). ಅವನು ದುಃಖದಾರಿದ್ರ್ಯದಮನಗಳಿಗೆ ತುತ್ತಾಗಿರುವ ಎಲ್ಲರನ್ನೂ ತನ್ನಲ್ಲಿ ಸಂಯೋಜಿಸಿಕೊಂಡಿರುವ ಶ್ರೇಯೋಮೂರ್ತಿ. ಪ್ರತಿಕ್ರಾಂತಿ, ವಸಾಹತುಶಾಹಿಯ ಪ್ರಭುತ್ವ, ದರ್ಪ – ಇವುಗಳ ವಿರುದ್ಧ ಕ್ರಾಂತಿಕಾರಿ ಹಿಂಸಾಚರಣೆ ಅವನಿಗೆ ವರ್ಜ್ಯವಲ್ಲ; ಅದಕ್ಕೆ ಬದಲಾಗಿ ಇರುವುದೊಂದೇ ಮಾರ್ಗ. ''ಬೇರೆ ಮಾರ್ಗ ಏಕಿಲ್ಲ! ನಮ್ಮನ್ನು ಉಲ್ಲಾಸ ಪಡಿಸಿಕೊಳ್ಳಲು ಅನೇಕ ಮಾರ್ಗಗಳಿವೆ. ಆದರೆ ಸತ್ಯವನ್ನು ಮುಟ್ಟಲು ಬೇರೆ ಮಾರ್ಗವಿಲ್ಲ'' ಎನ್ನುತ್ತಾನವನು (ಪುಟ 214). ಈ ಮಾರ್ಗದ ಪ್ರಶ್ನೆ ಶರತ್‌ಚಂದ್ರರಿಗೆ ಪ್ರಮುಖ ಪ್ರಶ್ನೆ. ಅಂದಿನ ಸಂದರ್ಭದ ಘಟನೆಗಳ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿ 'ಅಧಿಕಾರ'. ಹಲವು ವಿಭಿನ್ನಮಾರ್ಗಗಳ ಚರ್ಚೆ ನಡೆಯುತ್ತಿದ್ದ ಕಾಲ; ಕ್ರಾಂತಿಕಾರಿಗಳ ಕ್ರಿಯೆಗಳನ್ನು ಖಂಡಿಸುವವರು ಇಂದಿಗಿಂತಲೂ ವಿಪುಲವಾಗಿದ್ದ ಕಾಲ. ಕ್ರಾಂತಿಕಾರರೂ ಬಹುಶಃ ಸರಿ ಇರಬಹುದಲ್ಲವೇ ? – ಎಂಬ ವಾದವನ್ನು ಮೊದಲಿಗೆ ಸಾಹಿತ್ಯದಲ್ಲಿ ಚರ್ಚಿಸಿದವರು ಶರತ್ ಚಂದ್ರರು. ಅನ್ಯಮಾರ್ಗಗಳನ್ನು ಅವರು ಪ್ರಸ್ತಾಪಿಸದೆ ಬಿಡಲಿಲ್ಲ. ಭಾರತಿಯ ಮಾತುಗಳಿವು : ''ಯಾವ ಸಂಕೋಚ, ಕಪಟವೂ ಇಲ್ಲದೆ ಮುಕ್ತಕಂಠದಿಂದ ನಾವು ಇಂದು ಭಾರತದ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತೇವೆ. ದುರ್ಬಲರಾದ, ನೊಂದ ಭಾರತವಾಸಿಗಳಿಗೆ ಅನ್ನ, ವಸ್ತ್ರ ಬೇಕು. ಇಂತಹ ಸತ್ಯವನ್ನು ಮುಟ್ಟಲು ಈ ನಿಷ್ಠುರದ ಮಾರ್ಗದ ಹೊರತು ಬೇರೆ ಮಾರ್ಗ ತೆರೆದಿಲ್ಲವೆಂಬುದನ್ನು ನಾನು ಯಾವ ರೀತಿಯಿಂದಲೂ ಒಪ್ಪಲಾರೆ. ನೀನು ಪ್ರಪಂಚವನ್ನು ಸುತ್ತಿ ಇದೊಂದನ್ನೇ ತಿಳಿದು ಬಂದಿದ್ದೀಯೆ... ಸೃಷ್ಟಿಯ ಆರಂಭದಿಂದ ಸ್ವಾತಂತ್ರ್ಯದ ನೂರಾರು ಸಾವಿರಾರು ಯಾತ್ರಾರ್ಥಿಗಳ ಪ್ರಯಾಣದಿಂದ ನಿನ್ನ ದೃಷ್ಟಿಗೆ ಇದೊಂದೇ ಬಿದ್ದಿರಬಹುದು. ಆದರೆ ಆ ವಿಶ್ವಮಾನವ ಬುದ್ಧಿ ಈ ರಕ್ತಮಾರ್ಗವಲ್ಲದೆ ಬೇರೆ ಮಾರ್ಗ ತೋರಿಸಿಕೊಡ ದಿರುವಷ್ಟು ಅಲ್ಪವಾಗಿದೆಯೆ ? ಇದು ಯಾವ ಪರಿಸ್ಥಿತಿಯಲ್ಲೂ ಸತ್ಯವಾಗಲಾರದು. ಮನುಷ್ಯರಲ್ಲಿ ಇಷ್ಟು ಪರಿಪೂರ್ಣತೆ ನಿನ್ನ ಹೊರತು ಯಾರಲ್ಲೂ ನಾನು ನೋಡಲಿಲ್ಲ, ಅಣ್ಣಾ, ಆದರೆ ಈ ಕಠೋರ ಮಾರ್ಗವನ್ನು ಬಿಟ್ಟುಬಿಡು. ನಾವು ಎಲ್ಲರನ್ನೂ ಪ್ರೀತಿಸುತ್ತಾ ನಡೆಯಬಹುದಾದ ಮಾರ್ಗ ಇನ್ನೂ ಜಗತ್ತಿಗೆ ಗೊತ್ತಿಲ್ಲದಿರಬಹುದು. ನೀನು ಈ ಮಾರ್ಗದ ಬಾಗಿಲನ್ನು ತೆರೆ'' (ಪುಟಗಳು 215-6). ಈ ಪ್ರಶ್ನೆಗೆ ಸ್ವತಃ ಶರತ್‌ಚಂದ್ರರು ಇದಮಿತ್ಥಂ ಎಂದು ಕರಾರುವಾಕ್ಕಾಗಿ ಯಾವ ಉತ್ತರವನ್ನೂ ನೀಡಿಲ್ಲ. ಮಂಥನವನ್ನು ಮುಂದುವರಿಸಿ ಅಧಿಕಾರದ ಪಥವನ್ನು ಚರಿತ್ರೆಯಲ್ಲಿ ಭಾರತದ ಸಮಾಜ ಕಂಡುಕೊಳ್ಳಲಿ ಎಂಬ ಧೋರಣೆ ಅವರದಿರಬೇಕು. ನಮ್ಮಲ್ಲಿ ಇಂದಿಗೂ ಇದರ ಬಗ್ಗೆ ಸುವ್ಯವಸ್ಥಿತವಾದ ಚರ್ಚೆ ನಡೆದಿಲ್ಲ, ಪುಂಖಾನುಪುಂಖವಾದ ಮಾತುಗಳು ಕೇಳಿಬಂದಿವೆ ಮಾತ್ರ. ಇದು ನೈತಿಕ ಪ್ರಶ್ನೆ ಮಾತ್ರವಲ್ಲ, ರಾಜಕೀಯ ಪ್ರಶ್ನೆಯೂ ಹೌದು. ಬೇರೆಲ್ಲದನ್ನೂ ಬದಿಗಿರಿಸಿ ಅದು ಕೇವಲ ನೈತಿಕ ಪ್ರಶ್ನೆ ಎಂಬಂತೆ ವಾದಿಸುವುದು ಮಾರ್ಮಿಕ ಮೋಸ ಎಂದಷ್ಟೇ ನಾನಿಲ್ಲಿ ಹೇಳಬಯಸುವುದು. ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲಾಗದಿದ್ದರೆ ನಾವು ತೆಪ್ಪಗಿರೋಣ, ಶೋಷಿತ ಜನ ತಮ್ಮ ಮನಬಂದಂತೆ ಪರಿಹಾರ ಕಂಡುಕೊಳ್ಳಲಿ; ಅದು ನೈತಿಕ ಪ್ರಶ್ನೆಯೆಂದು ನಾವು ನಂಬುವುದಾದರೆ ಸಮಸ್ಯೆಗೆ ಶತಾಯಗತಾಯ ಪರಿಹಾರ ಹುಡುಕೋಣ. ಸುಧಾರಣಾವಾದಿಗಳಾಗಿ ತೇಪೆ ಕೆಲಸ ಮಾಡುವುದರಿಂದ ಸಮಾಜದಲ್ಲಿ ಕ್ರಾಂತಿ ಸಾಧ್ಯವಿಲ್ಲ. ಮತ್ತು ಕ್ರಾಂತಿಯಾಗುವ ತನಕ ಮನುಷ್ಯ ಸಂಪೂರ್ಣ ಮನುಷ್ಯತ್ವ ಪಡೆಯಲಾರ. ಯಾವುದೋ ಕೆಲವು ಕೂಲಿಕಾರರ ಸ್ಥಿತಿ ಉತ್ತಮಗೊಳ್ಳಲು ನಡೆಯುವ ಆರ್ಥಿಕ ಹೋರಾಟವೇ ಕ್ರಾಂತಿ

ಯೆನಿಸಿಕೊಳ್ಳುವುದಿಲ್ಲ ಮತ್ತು ದಾಬಿ ಸಮಿತಿಯ ಕೆಲಸ ಇಷ್ಟಕ್ಕೆ ಸೀಮಿತವೂ ಅಲ್ಲ. ಸವ್ಯಸಾಚಿ ಸಾರುವಂತೆ ಕೂಲಿಗಾರರ ''ಉದ್ಧಾರ ಕೇವಲ ಕ್ರಾಂತಿಯಿಂದ ಮಾತ್ರ ಸಾಧ್ಯ. ಆ ಕ್ರಾಂತಿಗಾಗಿ ದಾಬಿ ಸಮಿತಿಯ ಸೃಷ್ಟಿಯಾಗಿದೆ. ಕ್ರಾಂತಿ ಶಾಂತಿಯಲ್ಲ, ಕ್ರಾಂತಿ ಹಿಂಸೆಯಿಂದಲೇ ನಡೆಯ ಬಲ್ಲುದು... ಮನುಷ್ಯನ ರಕ್ತಧಾರೆ ವಿಶ್ವಮಾನವನ ಮುಕ್ತಿಗೆ ಮಾರ್ಗ. ಇಲ್ಲದಿದ್ದರೆ ಈ ಪರ್ವತದಂತಹ ಪಾಪ ತೊಳೆಯುವುದು ಹೇಗೆ?... ಶಾಂತಿ, ಶಾಂತಿ ಎಂದು ಕೇಳಿ ಕಿವಿ ಕಿವುಡಾಗಿದೆ. ಈ ಅಸತ್ಯವನ್ನು ಹರಡುವವರು ಯಾರು ಗೊತ್ತೆ? ಇನ್ನೊಬ್ಬರ ಶಾಂತಿಯನ್ನು ಲೂಟಿ ಮಾಡಿ ದೊಡ್ಡ ದೊಡ್ಡ ಮಹಡಿ ಮನೆಗಳನ್ನು ಕಟ್ಟಿಕೊಂಡಿರುವವರು. ಈ ಮಂತ್ರ ಉಪದೇಶ ಮಾಡಿ ಅಶಾಂತಿ ಎಂದರೆ ಭಯಪಡುವಂತೆ ಮಾಡಿದ್ದಾರೆ... ಪ್ರಪಂಚದಲ್ಲಿ ಬಾಹುಬಲವಿಲ್ಲದ ಯಾವ ಹರತಾಳವೂ ಯಶಸ್ವಿಯಾಗುವುದಿಲ್ಲ... ಧನಿಕನ ಹತ್ತಿರ ಧನಬಲ, ಶಸ್ತ್ರಬಲ, ಸೈನ್ಯಬಲ ಇರುತ್ತದೆ. ಅದೇ ರಾಜಶಕ್ತಿ (ಧನಿಕ ಮತ್ತು ಬಡವನ ಸಂಘರ್ಷದಲ್ಲಿ). ನಿನ್ನ ಸನಾತನ ಅಹಿಂಸೆಯ ಮಾರ್ಗಕ್ಕೆ ಜಯವಾಗುವುದರ ಬದಲು ರಕ್ತದ ಪ್ರವಾಹ ಹರಿಯುತ್ತದೆ'' (ಪುಟಗಳು 146-7). ಮಾನವನ ಸ್ವಾತಂತ್ರ್ಯದ ನಂತರದ ಶಾಂತಿಗೂ ಅದರ ಮುಂಚಿನ ಶಾಂತಿಗೂ ವ್ಯತ್ಯಾಸವಿದೆ. ಸ್ವಾತಂತ್ರ್ಯವಿಲ್ಲದೆ ಧರ್ಮ, ಶಾಂತಿ, ಕಾವ್ಯಾನಂದಗಳು ಅಚಿಂತ್ಯ. ಅಂದರೆ ಸ್ವಾತಂತ್ರ್ಯವೇ ಕೊನೆಯಲ್ಲ. ಅದು ಬೇರೆ ಧ್ಯೇಯ ಸಾಧನೆಗಳಿಗೆ ಪೂರ್ವಭಾವಿ ಅಂಗ, ಅಷ್ಟೇ. ಅಲ್ಲಿಯೂ ಸ್ವಾತಂತ್ರ್ಯವೆಂದರೆ ಕೇವಲ ಪರಾಧೀನತೆಯಿಂದ ಹೊರಬರುವುದು ಎಂದಷ್ಟೇ ಅಲ್ಲ.

ಸದಾ ಬದಲಾಗುತ್ತಿರುವ ಸಮಾಜದ ಇತಿಹಾಸದಲ್ಲಿ ಸತ್ಯ, ಮೌಲ್ಯ ಇತ್ಯಾದಿ ಪ್ರತಿಯೊಂದಕ್ಕೂ ಕಾಲಕ್ರಮವಾಗಿ ಹೊಸ ಅರ್ಥ ಒದಗಿಬರುತ್ತದೆ. ಅದು ಮಾನವಸಮಾಜದ ಲಕ್ಷಣ. ಯಾವುದೊಂದು ಕಲ್ಪನೆಗೂ ಶಾಶ್ವತವಾಗಿ ಗಂಟುಹಾಕಿಕೊಂಡಿರಲು ಸಾಧ್ಯವಿಲ್ಲ. ವರ್ಗಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಜಮೀನ್ದಾರನೊಬ್ಬ ಬಹುಶಃ ಕೆಲವು ಮೌಲ್ಯಗಳನ್ನು ಶಾಶ್ವತವೆಂದು ಎಣಿಸಿಯಾನು. ವಸ್ತುಸ್ಥಿತಿ ಮಾತ್ರ ಬೇರೆಯೇ ಇರುತ್ತದೆ. ಸವ್ಯಸಾಚಿಯ ಈ ಮಾತುಗಳು ಭಾರತಿಯ ತಲೆಯಲ್ಲಿ ಸುಳಿದಾಡುತ್ತವೆ : ''ಬಾರಿಬಾರಿಗೂ ಬದಲಾಗುತ್ತಿರುವ ಈ ಪ್ರಪಂಚದಲ್ಲಿ ಸತ್ಯವೆಂಬುವ ನಿತ್ಯವಸ್ತುವೇ ಇಲ್ಲ. ಅದೂ ಹುಟ್ಟುತ್ತದೆ, ಸಾಯುತ್ತದೆ. ಮನುಷ್ಯ ಕಾಲ ಹೋದಂತೆ ಬದಲಾವಣೆ ಹೊಂದುತ್ತಿರುತ್ತಾನೆ. ಸತ್ಯವೂ ಅದಕ್ಕೆ ಸರಿಯಾಗಿ ಬದಲಾಯಿಸುತ್ತಿರುತ್ತದೆ. ಹಿಂದೆ ಸತ್ಯವಾದದ್ದೇ ಈಗಲೂ ಸತ್ಯವೆಂದು ಒಪ್ಪಿಕೊಳ್ಳುವುದು ಭ್ರಾಂತಿ'' (ಪುಟ 278). ಇದು ಪುರೋಗಾಮಿತ್ವದ ಪ್ರಬಲ ಚಿಹ್ನೆ. ಈ ವಿಚಾರಧಾರೆಗೆ ಪ್ರತಿಕೂಲವಾದೊಂದು ಮತವನ್ನು ಸಾರುವಂತಹ ಕನ್ನಡ ಕಾದಂಬರಿಯೊಂದು ೧೯೭೦ರಷ್ಟು ಈಚೆಗೆ ಪ್ರಕಟವಾಗಿ ಪ್ರಸಿದ್ಧಿಪಡೆಯಿತೆಂಬುದು ಸೋಜಿಗದ ಸಂಗತಿ; ಅದನ್ನು ಸ್ಮರಿಸಿದರೆ ಶರತ್‌ಚಂದ್ರರು ಆಳವಾದ ಅನುಭವಿಯಾಗಿ ಮತ್ತು ತತ್ವವೇತ್ತರಾಗಿ ತಮ್ಮ ಕಾಲಕ್ಕಿಂತಲೂ ಎಷ್ಟು ದಶಕಗಳನ್ನು ದಾಟಿ ಮುಂದೆಹೋಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಸವ್ಯಸಾಚಿ ಈ ಎಲ್ಲ ವಿಶಾಲಪ್ರಜ್ಞೆಯ ಆಗರ; ದೇಶ ಕಾಲಗಳ ಎಲ್ಲೆಯನ್ನು ಮೀರಿ ನಿಲ್ಲುವ ಅವನು ಭೂತಭವಿಷ್ಯತ್ತುಗಳ ಸಮ್ಮಿಲನದ ಸಂಕೇತ, ಮಾನವನ ಅದಮ್ಯ ಭಾವನೆ ಮತ್ತು ಕ್ರಿಯೆಗಳ ಹಾಗೂ ಅವನ ಯಾವತ್ತೂ ಆಕಾಂಕ್ಷೆಗಳ ಪ್ರತೀಕ. ಅಂತಹ ಪಾತ್ರವೊಂದನ್ನು ಸೃಷ್ಟಿಸಿದ ಶರತ್‌ಚಂದ್ರರು ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ ಅಮರರಾಗಿ ಉಳಿಯುವುದು ಖಂಡಿತ.

– *ಶರತ್‌ಚಂದ್ರ* : ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ, 1978

# ವಿಶ್ವಸಾಹಿತಿ ಲಿಯೋ ಟಾಲ್‌ಸ್ಟಾಯ್

ಈ ವ್ಯಕ್ತಿ ನಮ್ಮ ಜಗತ್ತಿನಲ್ಲಿರುವ ತನಕ ನಾನೆಂದೂ ಅನಾಥನಲ್ಲ.

—ಮ್ಯಾಕ್ಸಿಂ ಗಾರ್ಕಿ

೧೯೭೮ನೇ ಇಸವಿಯು ಎರಡು ಕಾರಣಗಳಿಂದ ವಿಶ್ವ ಸಾಹಿತ್ಯದಲ್ಲಿ ಪ್ರಮುಖವಾದ ವರ್ಷವಾಗಿದೆ. ಭಾರತದ ಶ್ರೇಷ್ಠ ಪುರೋಗಾಮಿ ಕವಿ ವಲ್ಲತ್ತೋಳ್ ಅವರ ಜನ್ಮ ಶತಮಾನೋತ್ಸವ ಆ ವರ್ಷದಲ್ಲಿ ಆಚರಿಸಲಾಯಿತು. ಅಂತೆಯೇ ರಷ್ಯಾದ ಮಹೋಚ್ಚ ಸಾಹಿತಿ ಲಿಯೋ ಟಾಲ್‌ಸ್ಟಾಯ್ ಅವರ ೧೫೦ನೇ ಜನ್ಮೋತ್ಸವವನ್ನೂ ಆಚರಿಸಲಾಯಿತು. ವಲ್ಲತ್ತೋಳ್ ಜನ್ಮಶತಮಾನೋತ್ಸವವನ್ನು ಅಕ್ಟೋಬರ್ ೧೯೭೮ರಲ್ಲಿ ಕೊಚ್ಚಿನ್‌ನಲ್ಲಿ ವಿಜೃಂಭಣೆಯಿಂದ ನಡೆಸಿದಾಗ ಸುಮಾರು ಹದಿನೈದು ರಾಷ್ಟ್ರಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಅದೇ ಸಂದರ್ಭದಲ್ಲಿ ಟಾಲ್‌ಸ್ಟಾಯ್ ಸ್ಮರಣಾರ್ಥ ಒಂದು ಅಂತರರಾಷ್ಟ್ರೀಯ ವಿಚಾರಗೋಷ್ಠಿಯನ್ನೇರ್ಪಡಿಸಲಾಗಿತ್ತು. ಅಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಶ್ರೀ ಸಿ. ಅಚ್ಯುತ ಮೆನನ್ ಅವರು ವಾಲ್ಮೀಕಿ ರಾಮಾಯಣದ ಒಂದು ಶ್ಲೋಕವನ್ನು ಉದ್ಧರಿಸಿ ಮಹರ್ಷಿ ಟಾಲ್‌ಸ್ಟಾಯ್ ಅವರ ಔನ್ನತ್ಯವನ್ನು ಸೂಚಿಸಿದರು. ''ಆಕಾಶದ ಆಕಾರ ಆಕಾಶದ ಆಕಾರದಂತಿದೆ. ಮತ್ತು ಸಾಗರಕ್ಕೆ ಉಪಮೆ ಎಂದರೆ ಸಾಗರ ಮಾತ್ರ; ರಾಮರಾವಣರ ನಡುವೆ ಯುದ್ಧ ಹೇಗಿತ್ತೆಂದರೆ ರಾಮರಾವಣರ ನಡುವಣ ಯುದ್ಧದಂತಿತ್ತು'', ಎಂದು ರಾಮಾಯಣದ ಒಂದು ಶ್ಲೋಕ. ಅವುಗಳನ್ನು ಬೇರಾವುದರೊಂದಿಗೂ ಹೋಲಿಸಲಾಗದು. ವಿಶ್ವಸಾಹಿತಿಗಳ ಸಾಲಿನಲ್ಲಿ ಟಾಲ್‌ಸ್ಟಾಯ್ ಅವರ ಸ್ಥಾನ ಅಂತಹದ್ದು; ಅವರನ್ನು ಯಾರೊಂದಿಗೂ ಹೋಲಿಸಿ ವಿವರಿಸುವಂತಿಲ್ಲ. ಏಕೆಂದರೆ ಆತ ಅಸಮಾನವಾದ ಕಲಾಕೌಶಲ್ಯವನ್ನು ಸಿದ್ಧಿಸಿಕೊಂಡ ಮೇರುಸಾಹಿತಿ. ಹಲವು ವರ್ಷಗಳ ಹಿಂದೆ ಈತನನ್ನು ವಿಶ್ವದ ಸಾಹಿತಿಗಳ ಅಗ್ರಪಂಕ್ತಿಗೆ ಸೇರಿದವನೆಂದು ಬಣ್ಣಿಸಿ ಕವನವೊಂದನ್ನು ವಲ್ಲತ್ತೋಳ್ ರಚಿಸಿದ್ದರು. ಕ್ರಾಂತಿ ಪೂರ್ವದ, ಅಂದರೆ ೧೯೧೭ಕ್ಕೆ ಹಿಂದಿನ, ರಷ್ಯಾ ದೇಶವನ್ನುದ್ದೇಶಿಸಿ ಬರೆದ ಕವನ ಅದು; ಟರ್ಕಿಯ ವಿರುದ್ಧ ತ್ಸಾರ್‌ಶಾಹಿ ಯುದ್ಧಹೂಡಿದ್ದ ಕಾಲ. ವಲ್ಲತ್ತೋಳ್ ಹೀಗೆ ನುಡಿದರು: ''ಯುದ್ಧಮತ್ತವಾಗಿ ಟಾಲ್‌ಸ್ಟಾಯ್ ನಿನ್ನವನು ಮಾತ್ರವೆಂದು ಬಗೆದಿರುವೆ ನೀನು. ಈ ವಿಶಾಲವಾದ ವಿಶ್ವದಲ್ಲಿ ಯಾವ ರಾಷ್ಟ್ರ ತಾನೆ ಆತನನ್ನು ವಂದಿಸದಿರಲು ಸಾಧ್ಯ ? ಯಾರಿಗವನು ಗುರುವಲ್ಲ? ಎಲ್ಲಿ ಅವನು ಶ್ರೇಷ್ಠ ಎಂದೆನಿಸಿಕೊಳ್ಳಲಾರ ?''

ಹಿಂದಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಂತ ವ್ಯಕ್ತಿಯಾದ ಮುನ್ಷಿ ಪ್ರೇಮಚಂದ್ ರಷ್ಯಾದ ವಿವಿಧ ಸಾಹಿತಿಗಳ ಕಾಣಿಕೆಯನ್ನು ಗುರುತಿಸಿ ತಮ್ಮ ನಿಷ್ಕರ್ಷೆಯನ್ನು ಈ ರೀತಿಯಲ್ಲಿ ವ್ಯಕ್ತಪಡಿಸಿದ್ದರು : ''ಚೆಕವ್ ಸಣ್ಣ ಕತೆಗಳ ಬಾದಶಹ. ತುರ್ಗನೇವನ ಕೃತಿಗಳು ಮಾನವನ ಬಗ್ಗೆ ಆಳವಾದ ಅನುಕಂಪ ತೋರುವ ಶ್ರೇಷ್ಠ ಕೃತಿಗಳು. ಮ್ಯಾಕ್ಸಿಂ ಗಾರ್ಕಿ ಕಾರ್ಮಿಕರ ಮತ್ತು ರೈತಾಪಿ ಜನರ ಉಸಿರಿನಂತಿರುವ ಲೇಖಕ. ಟಾಲ್‌ಸ್ಟಾಯ್ ಇವರೆಲ್ಲರಿಗಿಂತಲೂ ಉನ್ನತಸ್ಥಾನದಲ್ಲಿರುವವ. ಅವನು ಸಮಗ್ರ ಸಾಹಿತ್ಯ ಸಾಮ್ರಾಜ್ಯದ ಶಹನ್ ಶಹಾ''. ಇರಾನಿನ 'ಚಕ್ರವರ್ತಿ' ಶಹಾ

ಎರಡನೇ ಬಾರಿಗೆ ತನ್ನ ರಾಷ್ಟ್ರದಿಂದ ಒದ್ದೋಡಿಸಲ್ಪಡುವ ದುರವಸ್ಥೆಯನ್ನೆದುರಿಸಬೇಕಾಗಿ ಬಂದಿರುವಾಗ ಶಹಾ ಎಂದರೆ ಮೂದಲಿಕೆಯ ಬೈಗುಳವೆಂದು ತೋರಿದರೆ ಅಚ್ಚರಿಯಿಲ್ಲ. ಆದರೆ ಸಾಹಿತ್ಯದ ಪರಿಧಿಯಲ್ಲಿ ಚಿರಸ್ಥಾಯಿಯಾಗಿ ನಿಲ್ಲುವ ಯೋಗ್ಯತೆಯನ್ನು ಹೊಂದಿರುವ ಲಿಯೋ ಟಾಲ್‌ಸ್ಟಾಯ್‌ಗೆ ಮಾನವ ಪ್ರಜ್ಞೆ ಇರುವ ಸಹೃದಯನ ಹೃದಯವೇ ಅಚಲವಾದ ಭವ್ಯ ಸಿಂಹಾಸನ. ಅದಕ್ಕೆಂದಿಗೂ ಚ್ಯುತಿ ಬಾರದು.

೧೯೦೯ರಲ್ಲಿ ದಕ್ಷಿಣ ಆಫ್ರಿಕಾದ ಸಮರಕ್ಕೆ ನಾಯಕತ್ವ ನೀಡಿದ ಗಾಂಧೀಜಿಯವರು ಈತನನ್ನು ತಮ್ಮ 'ಗುರು' ಎಂದು ಬಗೆದರು. ಅಲ್ಲಿ ದಮನಕ್ಕೆ ಸಿಲುಕಿದ್ದವರನ್ನು ಪಾರುಮಾಡಲು ಟ್ರಾನ್ಸ್‌ವಾಲಿನಲ್ಲಿ ಸೃಜಿಸಲಾಗಿದ್ದ ಪುನರ್ವಸತಿ ಕೇಂದ್ರವನ್ನು ಗಾಂಧೀಜಿ 'ಟಾಲ್‌ಸ್ಟಾಯ್ ಕ್ಷೇತ್ರ' ಎಂದು ಕರೆದರು. ದುಡಿಯದೆ ಯಾವನಿಗೂ ಉಣ್ಣುವ ಹಕ್ಕಿಲ್ಲವೆಂಬ ತತ್ವದ ಆಧಾರವನ್ನು ಹೊಂದಿದ್ದುದು ಈ ಸಂಸ್ಥೆ. ಗಾಂಧೀಜಿಯವರಿಗೆ ಪ್ರೇರಕ ಶಕ್ತಿಯಾಗಿದ್ದರೆಂಬ ಕಾರಣವಲ್ಲದೆ ಟಾಲ್‌ಸ್ಟಾಯ್ ನಮ್ಮಲ್ಲಿ ಅಗ್ರೇಸರ ಸ್ಥಾನ ಪಡೆಯಲು ಬೇರೆ ಕಾರಣಗಳೂ ಇವೆ. ಕ್ರಾಂತಿ ಪೂರ್ವದ ರಷ್ಯಾದ ಜೀವನವನ್ನು ಸ್ಫುಟವಾಗಿ ಚಿತ್ರಿಸುವ ಟಾಲ್‌ಸ್ಟಾಯ್ ಸ್ವಾತಂತ್ರ್ಯ ಪೂರ್ವದ ಭಾರತದ ಚಿತ್ರಣವನ್ನು ನೀಡಿದಂತೆ ಕಂಡರೆ ಆಶ್ಚರ್ಯವಿಲ್ಲ. ಭಾರಿ ಶ್ರೀಮಂತ ಜಮೀನ್ದಾರರ ಅಡಿಯಾಳುಗಳಾಗಿ ದಾಸ್ಯಕ್ಕೆ ಸಿಲುಕಿದ್ದ ರಷ್ಯಾದ ಜನಸಾಮಾನ್ಯರ ಆಸೆ-ಆಕಾಂಕ್ಷೆಗಳನ್ನು ಅತ್ಯಂತ ನಿಷ್ಠೆ ಮತ್ತು ಕಳಕಳಿಯಿಂದ ಚಿತ್ರಿಸುವವರು ಟಾಲ್‌ಸ್ಟಾಯ್. ೧೮೬೦ರಲ್ಲಿ ದಾಸ್ಯತ್ವ ವಿಮೋಚನೆಯ ಶಾಸನ ಜಾರಿಗೆ ಬರಲು ಶ್ರಮಿಸಿದ್ದವರಲ್ಲಿ ಇವರೂ ಒಬ್ಬ ಪ್ರಮುಖರು. ಅಂದಿನ ಕಡುಬಡವರ ಜೀವನದ ತಳಮಳ, ಅನಿಶ್ಚಿತ ಭವಿಷ್ಯ, ತುಳಿತಕ್ಕೆ ಸಿಕ್ಕ ಅವರ ದೈನ್ಯತೆ, ಮತ್ತು ಎಚ್ಚೆತ್ತು ಮುನ್ನಡೆ ಇಡುವ ಸಾಧ್ಯತೆ, ಇತ್ಯಾದಿಗಳನ್ನೆಲ್ಲಾ ವಸ್ತುನಿಷ್ಠವಾಗಿ, ಸರಳವಾಗಿ ಮತ್ತು ಮಾನವೀಯತೆಯ ಪರಾಕಾಷ್ಠತೆಯ ದೃಷ್ಟಿಯಿಂದ ನಿರೂಪಿಸಿದ ಕೀರ್ತಿ ಟಾಲ್‌ಸ್ಟಾಯ್ ಅವರದು. ಸಾಮಾಜಿಕ ಉಪಟಳಗಳ ಕಟು ವಿರೋಧಿಯಾಗಿ ಸಿಡಿದೆದ್ದ ಈ ಧೀಮಂತ ತತ್ವಜ್ಞಾನಿ ಹಳ್ಳಿಗಳ ರೈತ ಕುಟುಂಬಗಳು ಕ್ರಮೇಣ ನಿರ್ಗತಿಕರಾಗಲು ಭಾರಿ ಜಮೀನ್ದಾರರು ಹೇಗೆ ಕಾರಣರಾಗುತ್ತಾರೆಂಬುದನ್ನು ಪ್ರತ್ಯಕ್ಷವಾಗಿ ತಿಳಿದಿದ್ದ. ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳಿಗೆ ಗಟ್ಟಿಯಾದ ಧ್ವನಿಯಲ್ಲಿ ಪ್ರತಿಭಟನೆಯನ್ನು ಸಲ್ಲಿಸಿದ ಟಾಲ್‌ಸ್ಟಾಯ್‌ಗೆ ನಿರ್ಧರಿತವಾದ ಸೈದ್ಧಾಂತಿಕ ಆರ್ಥಿಕ ತಳಹದಿಯ ಆಧಾರವಿಲ್ಲದಿದ್ದರೂ ವೈಯಕ್ತಿಕವಾಗಿ ಎಷ್ಟರಮಟ್ಟಿಗಿನ ಸಾರ್ಥಕ್ಯ ಮತ್ತು ಪರಿಹಾರಗಳನ್ನು ಕಾಣಲು ಸಾಧ್ಯವೋ ಅಷ್ಟನ್ನು ತಮ್ಮ ಜೀವಿತದ ಕಾಲದಲ್ಲಿ ಕಾಣುವಷ್ಟರ ಮಟ್ಟಿಗೆ ತಮ್ಮ ಜೀವನವನ್ನು ಸವೆಸಲು ಹಿಂದೆಗೆಯದಿರುವಷ್ಟು ಉದಾತ್ತತೆ ಇತ್ತೆಂಬುದು ಸ್ಪಷ್ಟವಾಗಿದೆ. ಸಾಮಾಜಿಕ ರುಜಿನಗಳಿಗೆ ವೈಯಕ್ತಿಕ ಪರಿಹಾರ ಸಾಧ್ಯವೇ, ಸಾಕೆ, ಎಂಬಿತ್ಯಾದಿ ಪ್ರಶ್ನೆಗಳಿದ್ದರೂ ಟಾಲ್‌ಸ್ಟಾಯ್ ಅವರ ಉದಾರ ಮನೋಭಾವ, ಅಕಲುಷಿತ ಮಾನವ ಪ್ರಜ್ಞೆ ಮುಂತಾದ ಹೆಗ್ಗುರುತುಗಳನ್ನು ಲೆಕ್ಕಿಸದಿರುವವರಾರು ? ಅವರು ಸೂಚಿಸುವ ಪರಿಹಾರವನ್ನು ತಮ್ಮ ಸ್ವಂತ ಜೀವನದಲ್ಲಿ ಅಳವಡಿಸಿಕೊಂಡು ಕಾರ್ಯರೂಪಕ್ಕೆ ತರಲು ಶ್ರಮಿಸಿದ್ದವರು ಟಾಲ್‌ಸ್ಟಾಯ್. ಆ ಪರಿಹಾರವು ಸಾಮಾಜಿಕ ಆಯಕಟ್ಟು ಮತ್ತು ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವಷ್ಟು ಶಕ್ತವಲ್ಲದಿದ್ದರೂ ವ್ಯಕ್ತಿಯೊಬ್ಬನ ಮಾನವಿಕ ಅನಿಸಿಕೆಗಳಿಗೆ ಪುಟ ಕೊಡಲು ಅದಕ್ಕೆ ಸಂಪೂರ್ಣ ಸಾಧ್ಯತೆ ಇದೆ.

೧೯೦೫ರಲ್ಲಿ ರಷ್ಯಾದಲ್ಲಿ ವಿಶಾಲವಾದ ಕ್ರಾಂತಿಯೊಂದು ನಡೆಯಿತು. ಆ ಕ್ರಾಂತಿಯ ಕೈಗನ್ನಡಿ ಎಂದು ಕ್ರಾಂತಿ ನಾಯಕ ಲೆನಿನ್ ಟಾಲ್‌ಸ್ಟಾಯ್ ಅವರಿಗೆ ಪ್ರಶಸ್ತಿ ನೀಡಿದ್ದಾರೆ. ಆ

ರಾಷ್ಟ್ರದ ಜನತೆಯ ಅಸಮಾಧಾನವನ್ನು ಸ್ಪಷ್ಟವಾಗಿ ಪ್ರತಿಫಲಿಸುವಂತಿದ್ದು ಧಾರ್ಮಿಕ ನಾಯಕರ ನೇತೃತ್ವವನ್ನೂ ಪಡೆದಿತ್ತು. ತ್ಸಾರ್‌ಶಾಹಿಯು ೧೯೦೫ರ ಒಂದು ಭಾನುವಾರದಂದು ಸೇಂಟ್ ಪೀಟರ್ಸ್‌ಬರ್ಗ್ (ಈಗ ಲೆನಿನ್‌ಗ್ರಾಡ್)ನಲ್ಲಿ ನಡೆದ ಮೆರವಣಿಗೆಯ ಮೇಲೆ ಗುಂಡುಹಾರಿಸಿ ಉಗ್ರವಾದ ದಮನಕಾರಿ ನೀತಿಯನ್ನನುಸರಿಸಿತು. ಟಾಲ್‌ಸ್ಟಾಯ್ ೧೯೦೫ರ ಕ್ರಾಂತಿಯನ್ನು ಆಗಬಾರದಿದ್ದ ಒಂದು ಪ್ರಸಂಗವೆಂದು ಬಣ್ಣಿಸಿದರು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ನೈತಿಕ ಬೆಳವಣಿಗೆಯತ್ತ ಗಮನನೀಡಿ ತತ್ಫಲವಾಗಿ ಸಾಮಾಜಿಕ ಮಾರ್ಪಾಟುಗಳುಂಟಾಗಬೇಕೆಂದು ಭಾವಿಸುತ್ತಿದ್ದ ಟಾಲ್‌ಸ್ಟಾಯ್ ಅವರ ಈ ವಿರೋಧ ಸಹಜವಾಗಿದ್ದಿರಬಹುದು. ರಷ್ಯಾದ ಜನಜೀವನವನ್ನು ಅತ್ಯಂತ ಸಮರ್ಪಕವಾಗಿ ತಿಳಿದು ಅದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾಗ್ಯೂ ಕ್ರಾಂತಿಯ ಬೀಜ ಈ ಜೀವನದಲ್ಲೇ ಅಡಕವಾಗಿತ್ತೆಂಬುದನ್ನು ಟಾಲ್‌ಸ್ಟಾಯ್ ಗಣನೆಗೆ ತೆಗೆದುಕೊಳ್ಳಲಿಲ್ಲ ಮತ್ತು ಒಪ್ಪಲಿಲ್ಲ. ಅವರ ಸುಧಾರಣಾವಾದಿ ಧೋರಣೆಗೆ ಇದೊಂದು ನಿದರ್ಶನ. ಆದಾಗ್ಗ್ಯೂ ಲೆನಿನ್ ಈತನನ್ನು ಕ್ರಾಂತಿಯ ಕೈಗನ್ನಡಿಯೆಂದು ವರ್ಣಿಸಿದ್ದೇಕೆ ? ಜನ ಸಾಮಾನ್ಯರ ಜೀವನಕ್ಕೆ ಹೇಗೆ ಹಲವು ಅಡಚಣೆಗಳಿವೆ, ಶೋಷಣೆಯು ಹೇಗೆ ಪರಮಾವಧಿಯ ಮಟ್ಟವನ್ನು ಮುಟ್ಟಿದೆ, ಪ್ರಸಕ್ತ ವ್ಯವಸ್ಥೆಯನ್ನು ಕಿತ್ತೊಗೆಯದೆ ಸಮಸ್ಯೆಗೆ ಹೇಗೆ ಪರಿಹಾರವಿಲ್ಲ, ತ್ಸಾರ್‌ಶಾಹಿಯ ದುಷ್ಟ ದಮನ ಮತ್ತು ಅಸಹ್ಯವಾದ ಅಧಿಕಾರಶಾಹಿಯು ಜನತೆಯನ್ನು ಹೇಗೆ ಕೃಶಗೊಳಿಸಿತ್ತು, ಅರ್ಥರಹಿತವಾದ ಕಾನೂನು ಕಟ್ಟಳೆಗಳು ಹೇಗೆ ಸಮಾಜಕ್ಕೆ ಕಂಟಕವಾಗಿದ್ದವು, ಉಚ್ಚ ವರ್ಗದ ಸುಖಲೋಲುಪತೆಯ ಜೀವನ ಹೇಗೆ ನೈತಿಕ ಅಧಃಪತನದ ಸೂಚಕವಾಗಿತ್ತು, ಎಂಬಿತ್ಯಾದಿ ಮೂಲಭೂತ ಪ್ರಶ್ನೆಗಳಿಗೆ ಟಾಲ್‌ಸ್ಟಾಯ್ ಅವರ ಕೃತಿಗಳು ಉತ್ತರವನ್ನೊದಗಿಸಿದ್ದವು. ಅಂದಿನ ಪರಿಸ್ಥಿತಿ ಕ್ರಾಂತಿಕಾರಿ ಪರಿಸ್ಥಿತಿಯಾಗಿತ್ತೆಂಬುದನ್ನು ಟಾಲ್‌ಸ್ಟಾಯ್ ಅವರು ನೀಡಿದ್ದ ಜೀವನ ಚಿತ್ರಣ ಎತ್ತಿ ತೋರಿಸುತ್ತಿತ್ತು. ವೈಯಕ್ತಿಕವಾಗಿ ಟಾಲ್‌ಸ್ಟಾಯ್ ೧೯೦೫ರ ಕ್ರಾಂತಿಯನ್ನು ತೆಗಳಿದಾಗ ಮ್ಯಾಕ್ಸಿಂ ಗಾರ್ಕಿ ಒಂದು ಕಟುವಾದ ಪತ್ರವನ್ನು ಬರೆದು ಟಾಲ್‌ಸ್ಟಾಯ್ ಅವರ ನಿಲುವನ್ನು ಪ್ರಶ್ನಿಸಿದರು. ''ರಷ್ಯಾದ ಜನಸಾಮಾನ್ಯರ, ರೈತಾಪಿ ಜನರ, ಕಡುಬಡವರ, ಮುಖವಾಣಿಯಾಗಿ ಪ್ರಶಸ್ತಿಯನ್ನು ಪಡೆದ ನೀವು ಇಂತಹ ನಿಲುವನ್ನು ತಾಳಿರುವುದು ಹೇಯವಾಗಿದೆ. ಸೇಂಟ್‌ಪೀಟರ್ಸ್‌ಬರ್ಗಿನಲ್ಲಿ ಅಂದು ಹರಿದ ರಕ್ತದ ಹೊಳೆ ನಿಮ್ಮ ಮನಸ್ಸಿಗೆ ಹೇಗೆ ಬರುವುದಿಲ್ಲವೋ ತಿಳಿಯದು. ರಷ್ಯಾದ ಶೋಷಿತ ಜನತೆಯ ಪ್ರತಿನಿಧಿಯೆಂದು ಇನ್ನು ಮುಂದೆ ನಿಮ್ಮನ್ನು ನಾವು ಹೇಗೆ ತಾನೇ ಗುರುತಿಸಲು ಶಕ್ಯ ?'' ಎಂದು ಗಾರ್ಕಿ ಉದ್ಗರಿಸಿದರು. ರಷ್ಯಾದ ಎಲ್ಲ ಘಟನೆಗಳನ್ನು ವೀಕ್ಷಿಸಿದ್ದ ಟಾಲ್‌ಸ್ಟಾಯ್, ದುಃಖಭರಿತ ಜನರ ವಾಣಿ ಟಾಲ್‌ಸ್ಟಾಯ್, ಸೈಬೀರಿಯಾಕ್ಕೆ ಅಟ್ಟಲಾಗುತಿದ್ದ ಸೆರೆಯಾಳುಗಳ ನಿಕೃಷ್ಟ ಜೀವನವನ್ನು ಸ್ವತಃ ಕಂಡು ಕಹಿ ಅನುಭವವನ್ನು ಪಡೆದಿದ್ದ ಟಾಲ್‌ಸ್ಟಾಯ್, ಹೀಗೇಕಾದರೆಂದು ಗಾರ್ಕಿಗೆ ಸೋಜಿಗವೆನಿಸಿತ್ತು. ಹಿಂದೊಮ್ಮೆ ಖಾರ್ಕೊವ್ ಎಂಬ ನಗರದಲ್ಲಿ ಯುವ ಜನರ ನೆಚ್ಚಿನ ನಾಯಕನಾಗಿ ಲೇಖಕ ಗಾರ್ಕಿ ಪ್ರಸಿದ್ಧಿ ಹೊಂದಿದ್ದು ಕ್ರಾಂತಿ ಚಳುವಳಿಗೆ ಪ್ರೇರಣೆ ನೀಡಿದ್ದ. ತ್ಸಾರ್ ಚಕ್ರವರ್ತಿಯ ಸರ್ಕಾರ ಈ ಚಳುವಳಿಯನ್ನು ತಡೆಹಿಡಿಯಲು ಶಕ್ತವಾಗಲಿಲ್ಲ, ಗಾರ್ಕಿಯನ್ನು ಖಾರ್ಕೋವ್ ನಗರದಿಂದ ಹೊರಹಾಕಲು ಸರಕಾರ ನಿರ್ಧರಿಸಿತು. ಆ ನಗರದಲ್ಲಿ ಮತ್ತು ಇನ್ನೂ ಅನೇಕ ಸ್ಥಳಗಳಲ್ಲಿ ಇದರ ವಿರುದ್ಧ ವ್ಯಾಪಕವಾದ ಚಳುವಳಿಗಳು ಮತ್ತು ಮುಷ್ಕರಗಳು ನಡೆದವು. ಅಂದು ಅಸ್ತಿತ್ವದಲ್ಲಿದ್ದ ಸಾಹಿತಿಗಳ ಸಂಘ ಗಾರ್ಕಿಯ ಸದಸ್ಯತ್ವವನ್ನು ರದ್ದುಗೊಳಿಸಿತು. ಆಗ ಹಿರಿಯ ಸಾಹಿತಿ ಟಾಲ್‌ಸ್ಟಾಯ್ ಈ ಸಂಘದ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು

ಗಾರ್ಕಿಯನ್ನು ಬೆಂಬಲಿಸಿದ್ದರು. ಕ್ರಾಂತಿಯ ಕಿಡಿಯನ್ನು ಹರಡುತ್ತಿದ್ದ ಗಾರ್ಕಿಗೆ ಈ ರೀತಿಯ ಸಂಪೂರ್ಣ ಬೆಂಬಲ ನೀಡಿದ್ದ ಟಾಲ್‌ಸ್ಟಾಯ್ ೧೯೦೫ರ ಕ್ರಾಂತಿಯನ್ನು ವಿರೋಧಿಸಿದ್ದು ವಿಪರ್ಯಾಸವೆಂದು ಗಾರ್ಕಿಯ ಭಾವನೆ. ಟಾಲ್‌ಸ್ಟಾಯ್ ಅವರು ವಾಸಿಸುತ್ತಿದ್ದ ಯಾಸ್ನಾಯ ಪೊಲ್ಯಾನಾಕ್ಕೆ ಹೋಗಿ ಹಲಕಾಲ ತಂಗಿದ್ದು, ಅವರ ನಿಕಟ ಪರಿಚಯವನ್ನು ಪಡೆದು ಅವರಿಗೆ ವಿಶೇಷವಾದ ಆದರವನ್ನು ತೋರಿದ್ದ ಗಾರ್ಕಿ ಹೀಗೆ ಅವರನ್ನು ಟೀಕಿಸಿದಾಗಲೂ ಟಾಲ್‌ಸ್ಟಾಯ್ ಕ್ರುದ್ಧರಾಗಲಿಲ್ಲ, ಗಾರ್ಕಿಯನ್ನು ದೂಷಿಸಲಿಲ್ಲ. ಇದು ಆ ಮಹಾತ್ಮನ ಔದಾರ್ಯ ಬುದ್ಧಿ; ಇತರರೊಡನೆ ಇರಿಸಿಕೊಂಡಿದ್ದ ಬಾಂಧವ್ಯದ ಕುರುಹು. ''ಟಾಲ್‌ಸ್ಟಾಯ್ ಬದುಕಿರುವವರೆಗೆ ನಾವು ಅನಾಥರಾಗುವುದಿಲ್ಲ'', ಎಂದು ಗಾರ್ಕಿ ನುಡಿಯಲು ಟಾಲ್‌ಸ್ಟಾಯ್ ಅವರ ಈ ಔದಾರ್ಯ ಕಾರಣವಾಗಿದ್ದಿರಬೇಕು.

ತಮ್ಮ ಯೌವನಾವಸ್ಥೆಯಲ್ಲಿಯೇ ಜೀವನ ಮೌಲ್ಯಗಳ ಬಗೆಗೆ ಚಿಂತನ ನಡೆಸಿ ತಮ್ಮ ಜೀವನ ವಿಧಾನವನ್ನು ಬದಲಾಯಿಸಿಕೊಳ್ಳಲು ಶ್ರಮಿಸಿದ ಟಾಲ್‌ಸ್ಟಾಯ್ ಶ್ರೀಮಂತ ವರ್ಗಕ್ಕೆ ಸೇರಿದವರಾದರೂ ಅತಿ ಕೆಳಗಿನ ಮಟ್ಟದಲ್ಲಿ ಜೀವಿಸುತ್ತಿದ್ದವರ ಬಗ್ಗೆ ಗೌರವವನ್ನು ಹೊಂದಿದ್ದರು. ಅವರಿಗಾಗಿ ಶಾಲೆಗಳನ್ನು ನಡೆಸಿ ತ್ಸಾರ್ ಸರ್ಕಾರಕ್ಕೆ ಭೀತಿಯನ್ನುಂಟು ಮಾಡಿದರು. ಅವರ ಕೆಲವು ಪ್ರಕಟಣೆಗಳನ್ನು ತ್ಸಾರ್ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲು ಸಹ ಹೇಸಲಿಲ್ಲ. ನೈಜವಾದ ಕ್ರೈಸ್ತ ಧರ್ಮದ ಅನುಯಾಯಿಯಾಗಿದ್ದ ಟಾಲ್‌ಸ್ಟಾಯ್‌ನ್ನು ಕಂಡರೆ ಕ್ರೈಸ್ತ ಪಾದ್ರಿಗಳಿಗೆ ಮತ್ತು ಚರ್ಚಿಗೆ ಎಲ್ಲಿಲ್ಲದ ಸಿಟ್ಟು. ಅವರನ್ನು ಕ್ರೈಸ್ತ ಮತದಿಂದ ಹೊರ ಹಾಕಲಾಗಿತ್ತು ಕೂಡ. ಇದಕ್ಕೆ ಕಾರಣ, ಟಾಲ್‌ಸ್ಟಾಯ್ ಅವರು ಎಳ್ಳಷ್ಟೂ ಸಂಕೋಚಪಡದೆ ಕ್ರೈಸ್ತ ಮತದ ಹೆಸರಿನಲ್ಲಿ ಪಾದ್ರಿಗಳು ಮತ್ತು ಚರ್ಚ್ ಶ್ರೀಮಂತ ವರ್ಗದ ಕೈಗೊಂಬೆಯಾಗಿ ಜನಸಾಮಾನ್ಯರ ಅಧೋಗತಿಗೆ ಕಾರಣರಾಗಿದ್ದಾರೆಂಬುದನ್ನು ಎತ್ತಿಹಿಡಿದದ್ದು; ಬೈಬಲ್ಲಿಗೆ ವಿರೋಧವಾದ ಪದ್ಧತಿಗಳನ್ನು ಬೈಬಲ್‌ನ ಹೆಸರಿನಲ್ಲಿ ಚರ್ಚ್ ಅನುಸರಿಸುತ್ತಿದೆ ಎಂಬುದನ್ನು ಪ್ರತಿಪಾದಿಸಿದ್ದು; ಮತ್ತು ಚರಿತ್ರೆಯಲ್ಲಿ ಕ್ರೈಸ್ತಧರ್ಮ ಎತ್ತಿಹಿಡಿದಿದ್ದ ಆದರ್ಶಗಳನ್ನು ರಷ್ಯಾದ ಚರ್ಚ್ ಸಂಪೂರ್ಣವಾಗಿ ನಿರಾಕರಿಸಿದೆ ಎಂಬುದನ್ನು ಸೂಚಿಸಿದ್ದು. ತಮ್ಮ ಕೃತಿಗಳಲ್ಲೆಲ್ಲಾ ಆಧ್ಯಾತ್ಮ ಚಿಂತನೆ ಮತ್ತು ನಡವಳಿಕೆಯನ್ನು ನಿರೂಪಿಸಿದ ಟಾಲ್‌ಸ್ಟಾಯ್ ಚರ್ಚಿನಿಂದ ಬಾಹಿರವಾದದ್ದು ಚರ್ಚಿನ ವಕ್ರದೃಷ್ಟಿಗೆ ನಿದರ್ಶನವಾಯಿತೇ ವಿನಾ ಟಾಲ್‌ಸ್ಟಾಯ್ ಅವರಿಗೆ ಯಾವ ರೀತಿಯಲ್ಲೂ ಬಾಧಕವಾಗಲಿಲ್ಲ. ೧೯೦೧ರಲ್ಲಿ ಕಾಯಿಲೆ ಯಿಂದ ನಿಶ್ಶಕ್ತರಾಗಿದ್ದ ಟಾಲ್‌ಸ್ಟಾಯ್ ಹಾಸಿಗೆ ಹಿಡಿದಿದ್ದರು. ಚರ್ಚಿನಿಂದ ಹೊರದೂಡಲ್ಪಟ್ಟಿದ್ದ ಈತ ಮರಣಾವಸ್ಥೆ ಯಲ್ಲಿದ್ದಾಗ ತಮ್ಮ ಜೀವನದಲ್ಲಿ ತಪ್ಪು ನಡೆಯಿತೆಂದು ವಿಷಾದಿಸಿ ಕಡೆಯಲ್ಲಿ ಚರ್ಚಿಗೆ ಶರಣಾದರೆಂಬ ಐತಿಹ್ಯವನ್ನು ಸೃಷ್ಟಿಸಲು ಚರ್ಚಿನ ಹಿರಿಯ ಪಾದ್ರಿಯೊಬ್ಬನಿಂದ ಟಾಲ್‌ಸ್ಟಾಯ್ ಅವರ ಮಗನಿಗೆ ಮೇಲಿನಿಂದ ಮೇಲೆ ಪತ್ರಗಳು ಬರತೊಡಗಿದವು. ತಾವು ಟಾಲ್‌ಸ್ಟಾಯ್ ಅವರನ್ನು ಭೇಟಿಯಾಗಬೇಕೆಂಬ ಇಚ್ಛೆಯನ್ನು ಆತ ಸೂಚಿಸಿದ್ದ. ಇದು ಟಾಲ್‌ಸ್ಟಾಯ್‌ಗೆ ಹಿಡಿಸಲಾರದೆಂದು ಮಗನ ನಂಬಿಕೆ. ಪದೇ ಪದೇ ಪತ್ರ ಬಂದಿದ್ದರಿಂದ ಕಡೆಗೆ ಟಾಲ್‌ಸ್ಟಾಯ್ ಅವರಿಗೆ ವಿಷಯವನ್ನು ತಿಳಿಸಿದ ಮಗ. ಆಗ ಅವರು ಹೇಳಿದ್ದು ಇದು : ''ಎಂತಹ ಮೂರ್ಖರು ಈ ಚರ್ಚಿನ ಜನ! ಜೀವನದುದ್ದಕ್ಕೂ ನಾನಿರಿಸಿಕೊಂಡಿದ್ದ ನಂಬಿಕೆ ಸಾಯುವಾಗ ಬದಲಾಯಿಸಬಹುದೆಂದು ಅಪೇಕ್ಷಿಸುತ್ತಾರೇನು ಇವರು? ಅಂದರೆ ಸಾಯುವ ಕಾಲದಲ್ಲಿ ಎರಡು ಎರಡು ಐದು ಆಗುತ್ತದೆಂದು ಅವರ ಲೆಕ್ಕಾಚಾರವಿರಬೇಕು!''

ಟಾಲ್‌ಸ್ಟಾಯ್‌ಗೆ ಚರ್ಚ್ ಬಹಿಷ್ಕಾರ ಹಾಕುವುದಕ್ಕೆ ಮೊದಲೇ ಅವರು ಚರ್ಚನ್ನು

ತೊರೆದಿದ್ದರು; ಹಾಗೆ ಮಾಡಿದ್ದು ಅವರ ಹದಿನೇಳನೆಯ ವಯಸ್ಸಿನಲ್ಲಿ. ಅರ್ಥವಿಲ್ಲದ ಆಡಂಬರದಿಂದ ಕೂಡಿದ ಚರ್ಚಿನ ಪೂಜಾವಿಧಿಗಳು ಕ್ರಿಸ್ತನ ಮಾರ್ಗಾನುಸಾರಕ್ಕೆ ಹೊರತಾದದ್ದೆಂದು ಅವರ ವಾದ. ಇಂತಹ ದಿಟ್ಟತನದ ತಾರ್ಕಿಕ ತೀರ್ಮಾನವನ್ನು ಚಿಕ್ಕ ವಯಸ್ಸಿನಲ್ಲೇ ತೆಗೆದುಕೊಂಡವರಲ್ಲಿ ಟಾಲ್‌ಸ್ಟಾಯ್‌ಗೆ ಸಮೀಪವಾದ ಇನ್ನೊಬ್ಬ ವ್ಯಕ್ತಿಯೆಂದರೆ ೧೯೭೯ರಲ್ಲಿ ಜನ್ಮ ಶತಮಾನೋತ್ಸವಕ್ಕೆ ಪಾತ್ರರಾದ ಮಾನವಿಕ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್. ಅವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಶಾಲೆಯನ್ನು ತೊರೆದರು, ಜರ್ಮನಿಯ ಪ್ರಜೆ ತಾನಲ್ಲವೆಂದು ಘೋಷಿಸಿದರು, ಮತ್ತು ಯಹೂದಿ ಮತದಿಂದ ಹೊರಬಂದರು.

ಟಾಲ್‌ಸ್ಟಾಯ್ ಅವರ ಕೃತಿಗಳ ಪರಿಚಯ ಮಾಡಿಕೊಡುವುದಾಗಲಿ ಅವನ್ನು ವಿಮರ್ಶಿಸುವುದಾಗಲಿ ಈ ಲೇಖನದ ಆಶಯವಲ್ಲ. ಆದರೂ ಅವಕ್ಕೆ ಸಂಬಂಧಿಸಿದಂತೆ ಒಂದೆರಡು ಪ್ರಶ್ನೆಗಳನ್ನಿಲ್ಲಿ ಎತ್ತಲಾಗುತ್ತದೆ. ಟಾಲ್‌ಸ್ಟಾಯ್ ಅವರ ಅಮರ ಕೃತಿಗಳಲ್ಲಿ 'ಯುದ್ಧ ಮತ್ತು ಶಾಂತಿ' ಪ್ರಗಲ್ಭವಾದ ಒಂದು ಕಾದಂಬರಿ. ಮಹಾಕಾವ್ಯದ ಪರಂಪರೆಗೆ ಸೇರಲು ಯೋಗ್ಯವಾದ ಉಜ್ವಲ ಕೀರ್ತಿ ಈ ಕಾದಂಬರಿಗಿದೆ. ಜೀವನದ ಅಂತರಾಳವನ್ನು ಹೊಕ್ಕು ನಾಗರಿಕತೆ ಮತ್ತು ಸಂಸ್ಕೃತಿಗಳ ವಿವಿಧ ಸ್ತರಗಳನ್ನು ಗುರುತಿಸುವುದರಲ್ಲಿ ಕೃತಿ ಸಾರ್ಥಕ್ಯ ಪಡೆದಿದೆ. ಇತಿಹಾಸದ ಗತಿ ಕೆಲವು ವ್ಯಕ್ತಿಗಳ ಇಚ್ಛೆಯಿಂದ ಬದಲಾಗುವುದಿಲ್ಲ, ಇತಿಹಾಸದಲ್ಲಿ ಯಾವೊಬ್ಬ ವ್ಯಕ್ತಿಯೂ ಧೀರನಾಯಕನಾಗಿ ಕಂಗೊಳಿಸುವುದಿಲ್ಲ, ಜನಸಾಮಾನ್ಯರು ಇತಿಹಾಸದ ನಿರ್ವಾಹಕರು, ಎಂಬ ತತ್ವವನ್ನು ಬೆಳೆಸುತ್ತದೆ ಈ ಕಾದಂಬರಿ. ನಾಗರಿಕತೆಯ ಭವ್ಯ ಭವನವನ್ನು ನಿರ್ಮಿಸಲು ಮಾನವ ಕೋಟಿ ಶತಶತಮಾನಗಳ ಕಾಲ ಶ್ರಮಪಟ್ಟಿದೆ; ಅದನ್ನು ಛಿದ್ರಗೊಳಿಸುವ ಅಥವಾ ವಿಕಾರಗೊಳಿಸುವ ಹೊಲಸು ಪ್ರವೃತ್ತಿ ಅಮಾನವೀಯವಾದದ್ದು; ಅರಳುವ ಹೂವಿಗೆ ಬಂದೂಕದ ಸಿಡಿಮದ್ದನ್ನು ತಾಕಿಸಿ ಅದನ್ನು ನಾಶಗೊಳಿಸುವುದು ಮಾನವನ ವಿಕಾರ ಮನೋಭಾವಕ್ಕೆ ಉದಾಹರಣೆ. – ಇಂತಹ ಭಾವನೆಗಳ ಆಗರ ಈ ಕಾದಂಬರಿ. ಮಾನವನ ಜೀವನದಲ್ಲಿ ಸಿರಿ ಇದೆ, ಅದರಲ್ಲಿ ಅಜ್ಞಾತವಾದ ಹೊನಲಿದೆ, ಎಂತಹ ಬಿಕ್ಕಟ್ಟಿನಲ್ಲೂ ಮಾನವ ಪ್ರೇಮದಲ್ಲಿ ತನ್ನನ್ನು ತಾನು ಉಚ್ಚಮಟ್ಟಕ್ಕೇರಿಸಿಕೊಳ್ಳಬಲ್ಲ ಹಾಗೂ ಎಂತಹ ಕಷ್ಟವನ್ನಾದರೂ ಎದುರಿಸಬಲ್ಲ ದಾರ್ಢ್ಯ ಅವನಲ್ಲಿದೆ, ಎಂಬಿತ್ಯಾದಿ ವ್ಯಾಖ್ಯಾನವನ್ನೂ ನಾವು ಈ ಕಾದಂಬರಿಯಲ್ಲಿ ಕಾಣುತ್ತೇವೆ. 'ಯುದ್ಧ ಮತ್ತು ಶಾಂತಿ' ಮಾನವನಿಗೆ ಸಹಜವಾದ ಶಾಂತಿ ತತ್ವದ ನಿರೂಪಣೆ ; ಆ ಕಾದಂಬರಿಯ ಏಕಮೇವ ಉದಾತ್ತ ನಾಯಕ ರಷ್ಯಾದ ಶ್ರೀ ಸಾಮಾನ್ಯ.

ಟಾಲ್‌ಸ್ಟಾಯ್ ಅವರದ್ದು ವಿಡಂಬನೆಯಲ್ಲಿ ಎತ್ತಿದ ಕೈ. ಅವರ 'ಪುನರುತ್ಥಾನ' ಎಂಬ ಕೃತಿಯಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಒಬ್ಬ ವ್ಯಕ್ತಿ ಅಂತರ್ಮುಖಿಯಾಗಿ, ತನ್ನ ಜೀವನವನ್ನು ಸ್ವವಿಮರ್ಶೆ ಮಾಡಿಕೊಂಡು, ತನ್ನನ್ನು ತಾನು ತಿದ್ದಿಕೊಳ್ಳಲು ಪ್ರಯತ್ನಶೀಲನಾಗುವುದು ಕಾದಂಬರಿಯ ವಸ್ತು. ಕಾನೂನು, ಕೋರ್ಟು ಕಚೇರಿಗಳು, ಬಂದಿಖಾನೆ, ಚರ್ಚ್, ಸರಕಾರ, ಇವೆಲ್ಲವನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸಿ ಅವುಗಳ ಮೋಸ ಮತ್ತು ಕೃತ್ರಿಮತೆಗಳನ್ನು ಬಹಿರಂಗಗೊಳಿಸುವುದರಲ್ಲಿ ಕಾದಂಬರಿ ಯಶಸ್ಸು ಪಡೆದಿದೆ. ಕೋರ್ಟಿನಲ್ಲಿ ನಡೆಯುವ ವಿಚಾರಣೆಗಳನ್ನು ಸರಳವಾಗಿ ಮತ್ತು ಸುದೀರ್ಘವಾಗಿ ಪ್ರಸ್ತಾಪಿಸಿ ಅವರ ತಟವಟವನ್ನು ಹೃದಯಸ್ಪರ್ಶಿಯಾಗುವಂತೆ ಬಣ್ಣಿಸುವುದು ಕಾದಂಬರಿಯುದ್ದಕ್ಕೂ ಕಾಣಸಿಗುತ್ತದೆ. ಸಮಾಜದಲ್ಲಿ ಅಪರಾಧಿಗಳು, ದ್ರೋಹಿಗಳು, ಇತ್ಯಾದಿಯಾಗಿ ದಂಡನೆಗೊಳಗಾಗುವ ಸರಳ ಪ್ರವೃತ್ತಿಯ ಜನ ಒಂದು ಕಡೆ; ಅವರನ್ನು ಶಿಕ್ಷಾರ್ಹರೆಂದು ನಿರ್ಧರಿಸುವ ಕುಟಿಲ ಪ್ರವೃತ್ತಿಯ ಜನ ಇನ್ನೊಂದು ಕಡೆ; ಅಪರಾಧಿಗಳು ಅಪರಾಧವನ್ನೆಸಗಲು ಮೂಲ

ಕಾರಣಗಳೇನೆಂಬುದರ ಗೋಜಿಗೆ ಹೋಗದೆ, ಅಂದರೆ ಸಮಾಜದ ರಚನೆಯನ್ನು ಬದಲಾಯಿಸದೆ, ನೈತಿಕತೆಯನ್ನು ಬೋಧಿಸುವ ಶೋಷಕರು ಶಿಕ್ಷೆಗಳನ್ನು ವಿಧಿಸುತ್ತಲೇ ಬಂದಿದ್ದಾರಲ್ಲ; ಆದರೂ ಅಪರಾಧಿಗಳ ನಿರ್ಮೂಲನ ಏಕಾಗಿಲ್ಲ? ಹೀಗೆ ವಿಶ್ಲೇಷಿಸುತ್ತಾ ಮುಂದುವರಿದು ಟಾಲ್‌ಸ್ಟಾಯ್ ಎನ್ನುತ್ತಾರೆ : ''ಈ ಕೋರ್ಟು ಕಚೇರಿಗಳಲ್ಲಿ ಕ್ರೌರ್ಯ ಮತ್ತು ಮೌಢ್ಯಗಳು ತಾಂಡವವಾಡುತ್ತಿವೆ. ಅವೆರಡರಲ್ಲಿ ಯಾವುದು ಹೆಚ್ಚಾಗಿದೆಯೆಂದು ಹೇಳಲು ಬಾರದು. ಏಕೆಂದರೆ ಅವೆರಡೂ ಒಂದರೊಡನೆ ಇನ್ನೊಂದು ಸ್ಪರ್ಧೆಯಲ್ಲಿ ತೊಡಗಿವೆ.''

ವ್ಯಕ್ತಿಗಳನ್ನಾಗಲಿ, ಸನ್ನಿವೇಶಗಳನ್ನಾಗಲಿ ವರ್ಣನೆ ಮಾಡುವುದರಲ್ಲಿ ಟಾಲ್‌ಸ್ಟಾಯ್‌ಗೆ ಸರಿಸಮಾನರಾಗುವಂತಹವರು ಬಹಳವಿಲ್ಲ. ಚಿಕ್ಕದಾಗಿ ಮತ್ತು ಕಣ್ಣಿಗೆ ಕಟ್ಟಿದಂತೆ ವರ್ಣನೆ ಮಾಡುವುದು ಈ ಸಾಹಿತಿಯ ವೈಶಿಷ್ಟ್ಯ. 'ಪುನರುತ್ಥಾನ' ಎಂಬ ಕಾದಂಬರಿಯಲ್ಲಿ ಬರುವ ಮಾಸ್ಲೋವಾ ಎಂಬ ಹೆಣ್ಣಿನ ವರ್ಣನೆಗೆ ಸಂಬಂಧಿಸಿದ ಭಾಗವನ್ನು ಟಾಲ್‌ಸ್ಟಾಯ್ ಹತ್ತುಹಲವು ಬಾರಿ ಪುನರಾವರ್ತನೆ ಮಾಡಿ ಬರೆದರೆನ್ನಲಾಗಿದೆ. ಕಡೆಗೆ ಕಾದಂಬರಿಯಲ್ಲಿ ಬರುವ ವರ್ಣನೆ ಕೇವಲ ಹತ್ತು ವಾಕ್ಯಗಳಷ್ಟು ಮಾತ್ರ. ವ್ಯಕ್ತಿಯ ಯಾವುದೋ ಕೆಲವು ವಿಶಿಷ್ಟವಾದ ಚರ್ಯೆಗಳನ್ನು ಉಲ್ಲೇಖಿಸಿ ಆ ವ್ಯಕ್ತಿಯ ನೆನಪು ಮಾಸಿಹೋಗದಂತೆ ಚಿತ್ರಿಸುವುದು ಟಾಲ್‌ಸ್ಟಾಯ್ ಅನುಸರಿಸುವ ಮಾರ್ಗ. 'ಪಾಲಿಕುಶ್ಕ' ಎಂಬ ಸಣ್ಣ ಕಥೆಯಲ್ಲಿ ಅದೇ ಹೆಸರಿನ ಪಾತ್ರದ ವ್ಯಕ್ತಿಯನ್ನು ನಾವು ಕಂಡಿಲ್ಲದಿದ್ದರೂ ಆಕೆ ಅಕ್ಕಪಕ್ಕಕ್ಕೆ ಕೈ ಬೀಸುವವಳೆಂಬುದು ಅಚ್ಚಳಿಯದಂತೆ ನಮ್ಮ ಮನಸ್ಸಿನಲ್ಲಿ ಉಳಿಯುತ್ತದೆ. 'ಯುದ್ಧ ಮತ್ತು ಶಾಂತಿ' ಕಾದಂಬರಿಯಲ್ಲಿ ಕಡೇಪಕ್ಷ ನೂರು ಪಾತ್ರಗಳಾದರೂ ಇವೆ. ಆದರೆ ಪ್ರತಿಯೊಂದು ಪಾತ್ರದಲ್ಲೂ ವಿಶೇಷವಾದ ಒಂದು ಸ್ವಭಾವ ಮತ್ತು ಭಾವನೆ ಇದೆ; ಆ ಕಾದಂಬರಿಯಲ್ಲಿ ಒಂದು ಸಣ್ಣ ಪ್ರಪಂಚದ ಸೃಷ್ಟಿಯೇ ನಡೆದಿದೆ ಎನ್ನಬಹುದು.

ಸಣ್ಣ ಕಥೆಗಳ ಪ್ರಪಂಚದಲ್ಲಿ ಸಹ ಟಾಲ್‌ಸ್ಟಾಯ್ ಗಣ್ಯವಾದ ಸ್ಥಾನ ಹೊಂದಿದ್ದಾರೆ. ಅಷ್ಟು ನೀಳವಾದ ಕತೆಗಳಲ್ಲದಿದ್ದರೂ, ಮತ್ತು ಕಥಾಕೌಶಲ್ಯದಲ್ಲಿ ಯಾವ ನವೀನ ಪ್ರಯೋಗವನ್ನು ಮಾಡಿಲ್ಲದಿದ್ದರೂ ಆ ಕತೆಗಳು ಆಕರ್ಷಣೀಯವಾದುವು. ನೀತಿ ಕತೆಗಳನ್ನು ಅಷ್ಟು ಸಮರ್ಪಕವಾಗಿ ಮತ್ತು ಕಲಾತ್ಮಕವಾಗಿ ಬರೆದಿರುವ ಬೇರೆ ಯಾವ ಸಾಹಿತಿಯನ್ನೂ ಟಾಲ್‌ಸ್ಟಾಯ್ ಜೊತೆ ಹೆಸರಿಸುವುದು ಅಶಕ್ಯ. 'ಒಬ್ಬನಿಗೆ ಎಷ್ಟು ಜಮೀನು ಬೇಕು ?' ಎಂಬಂತಹ ಕತೆಗಳಲ್ಲಿ ಭಾರಿ ಭೂಮಾಲಿಕರ ದುರಾಸೆಗೆ ಇತಿಮಿತಿಯಿಲ್ಲದಿರುವುದನ್ನೂ ಆ ವರ್ಗದ ಮೇಲೆ ಕೀಳು ಮೌಲ್ಯಗಳ ಪ್ರಭಾವವನ್ನೂ ಸೊಗಸಾಗಿ ಚಿತ್ರಿಸಿದ್ದಾರೆ ಟಾಲ್‌ಸ್ಟಾಯ್.

ಟಾಲ್‌ಸ್ಟಾಯ್ ಅವರ ಅತ್ಯಮೂಲ್ಯವಾದ ಕೊಡುಗೆಯೆಂದರೆ ಮಾನವತಾ ಪ್ರಜ್ಞೆ. ಸಹಜೀವಿಗಳ ಬಗ್ಗೆ ಕೇವಲ ಅನುಕಂಪವನ್ನು ಸೂಚಿಸುವಂತಲ್ಲದೆ ಅವರೊಡನೆ ಸಂಪೂರ್ಣವಾಗಿ ಐಕ್ಯ ಹೊಂದುವ ದೃಷ್ಟಿಯನ್ನು ಸಾಹಿತ್ಯದಲ್ಲಿ ಅಳವಡಿಸಿರುವ ಶ್ರೇಷ್ಠ ಸಾಹಿತಿಗಳಲ್ಲಿ ಟಾಲ್‌ಸ್ಟಾಯ್ ಪ್ರಮುಖರು. ಅವರ ಕೃತಿಗಳಲ್ಲೆಲ್ಲಾ 'ಮಾನವ' ಅದ್ವಿತೀಯವಾದ ಮಹಾನ್ ವಸ್ತು. ಇಂತಹ ಸಾಹಿತಿಯ ವಸ್ತುನಿಷ್ಠತೆ, ಜನಸಾಮಾನ್ಯರ ಬಗ್ಗೆ ಕಾಳಜಿ, ದುರಾಡಳಿತದ ವಿರುದ್ಧ ನಿಗ್ರಹ ಮನೋಭಾವ, ಅಸಮಾನತೆಯನ್ನು ಬೆಳೆಸುವ ವ್ಯವಸ್ಥೆಯನ್ನು ಬದಲಾಯಿಸಬೇಕೆಂಬ ತಾತ್ವಿಕ ನಿರ್ಧಾರ, ಇತ್ಯಾದಿ ಗುಣಗಳಿಂದ ಸ್ಫೂರ್ತಿಯನ್ನು ಹೊಂದಿ ನಮ್ಮ ಭಾಷೆಯಲ್ಲಿ ಸಾಹಿತ್ಯ ರಚಿಸುವ ಲೇಖಕರು ಪ್ರಜ್ಞಾವಂತರಾಗಿ ಕಲಾಮಾಧ್ಯಮವನ್ನು ಬಳಸುವಂತಾದರೆ ಈಗ್ಗೆ ೧೫೦ ವರ್ಷಗಳ ಹಿಂದೆ ಜನಿಸಿದ ಮೇಧಾವಿ ಲಿಯೋ ಟಾಲ್‌ಸ್ಟಾಯ್‌ಗೆ ಸೂಕ್ತವಾದ ಗೌರವ ಸಲ್ಲಿಸಿದಂತಾಗುತ್ತದೆ.

– *ಸಾಧನೆ : ಜನವರಿ-ಮಾರ್ಚ್* 1979

# ಜಾಗತಿಕ ಸಾಹಿತ್ಯದಲ್ಲಿ ಪ್ರೇಮಚಂದರ ಸ್ಥಾನ

> ದುಡಿಯುವ ವರ್ಗವು ತನ್ನ ವಿಜಯವನ್ನು ಸಾಧಿಸಲು ರಸ್ತೆಗಳ ತಡೆಗೋಡೆಗಳನ್ನು ಭೇದಿಸಬೇಕು, ಯುದ್ಧಭೂಮಿಯಲ್ಲಿ ಸೆಣಸಬೇಕು; ಅದಕ್ಕೆ ಮುನ್ನ ಬೌದ್ಧಿಕ ವಿಜಯಗಳ ಸರಮಾಲೆಯ ಮುಖೇನ ತನ್ನ ಆಳ್ವಿಕೆಯ ಬರುವಿಕೆಯನ್ನು ಸಾರಿ ಹೇಳಬೇಕು.
>
> **–ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗೆಲ್ಸ್**

ಶ್ರೇಷ್ಠ ಮಾನವಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಯಾವ ಸಾಹಿತಿಯೇ ಆಗಲಿ ಸಮಾಜದ ದೃಷ್ಟಿಯಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆಯಲು ಅರ್ಹನಾಗುತ್ತಾನೆ. ಆ ಮೌಲ್ಯಗಳು ಕಲಾತ್ಮಕ ಚಿತ್ರಣದ ಅಂಗವಾಗಿ ಮೂಡಿಬರುತ್ತವೆ ಮತ್ತು ವಸ್ತುನಿಷ್ಠವಾದ ಜೀವನದ ಪ್ರತಿಫಲನದ ಹಿನ್ನೆಲೆಯಲ್ಲಿ ಕಂಗೊಳಿಸುತ್ತವೆ. ಮೌಲ್ಯಗಳನ್ನು ಕೇವಲ ಪಟ್ಟಿ ಮಾಡುವುದರಿಂದ ಒಂದು ಕೃತಿ ಸಾಹಿತ್ಯದ ಶ್ರೇಣಿಗೆ ಸೇರಿಬಿಡುವುದಿಲ್ಲ. ಅಂತೆಯೇ, ಅಮೂರ್ತವಾದ ಕಲ್ಪನೆಗಳ ಹಿನ್ನೆಲೆಯಲ್ಲಿ ವ್ಯಕ್ತವಾಗುವ ಮೌಲ್ಯಗಳು ಪ್ರಭಾವಶಾಲಿ ಪರಿಣಾಮವನ್ನುಂಟುಮಾಡಲಾರವು. ಜೀವನದ ವಿವಿಧ ಪ್ರಕಾರಗಳ ನೈಜ ಚಿತ್ರಣದೊಡನೆ ಹಾಸುಹೊಕ್ಕಾಗಿ ಬೆರೆಯುವಂತಹ ಮೌಲ್ಯಗಳು ಮಾನವನ ಆಕಾಂಕ್ಷೆಗಳ ಪೂರೈಕೆಯ ಸಮಯದಲ್ಲಿ ಹುಟ್ಟುವಂತಹವು ಮತ್ತು ಅವನ ವಿವಿಧ ಮುಖಗಳ ಹೋರಾಟಗಳಿಗೆ ರೂಪು ಕೊಡುವಂತಹವು. ಈ ಗುಣಗಳನ್ನುಳ್ಳ ಸಾಹಿತ್ಯಕೃತಿ ಚಿರಂತನವಾಗಿ ಉಳಿಯುವ ಸಾಧ್ಯತೆ ಇದೆ. ಚರಿತ್ರೆಯ ವಿವಿಧ ಘಟ್ಟಗಳಲ್ಲೂ ಆ ಕೃತಿ ತನ್ನ ಮಹತ್ವವನ್ನು ಉಳಿಸಿಕೊಂಡಿರುತ್ತದೆ. ಎಂದೂ ಅದು ಅಪ್ರಕೃತವೆನ್ನುವಷ್ಟರ ಮಟ್ಟಿನ ಕಳಪೆಯನ್ನು ತೋರ್ಪಡಿಸಲಾರದು. ತಮ್ಮ ೫೬ನೆಯ ವಯಸ್ಸಿನಲ್ಲಿ ಅಕ್ಟೋಬರ್ ೧೯೩೬ರಲ್ಲಿ ಗತಿಸಿದ ಪ್ರೇಮಚಂದರು ತಮ್ಮ ಕೃತಿಗಳಿಂದಾಗಿ ಈಗಲೂ ಜೀವಂತವಾಗಿರುವುದು ಈ ಸಾಹಿತ್ಯಿಕ ಗುಣದಿಂದ. ಜಗತ್ತಿನ ಶ್ರೇಷ್ಠ ಸಾಹಿತಿಗಳ ಸಾಲಿನಲ್ಲಿ ಅವರಿಗೆ ಸ್ಥಾನ ದೊರೆತಿರುವುದೂ ಅದೇ ಕಾರಣದಿಂದ. ಅವರ ಕೃತಿಗಳು ಮತ್ತು ವ್ಯಕ್ತಿತ್ವವು ಇಂದಿಗೂ ಕೆಲಮಟ್ಟಿನ ಸ್ಫೂರ್ತಿ ನೀಡುತ್ತಿದ್ದರೆ ಅದಕ್ಕೆ ಅವರ ಸಾಹಿತ್ಯಕೃಷಿಯ ವಿಧಾನ ಕಾರಣ.

ತಮ್ಮ ಕತೆ, ಕಾದಂಬರಿ ಮತ್ತು ಇತರ ಲೇಖನಗಳಲ್ಲಿ ಕಾಣಬರುವ ವ್ಯಕ್ತಿತ್ವದಿಂದಾಗಿ ಪ್ರೇಮಚಂದರು ಉಜ್ವಲ ಮಾನವ ಪ್ರೇಮಿಯಾಗಿ ಹೆಸರನ್ನು ಪಡೆದಿದ್ದಾರೆ. ಅವರ ಪುರೋಗಾಮಿ ದೃಷ್ಟಿ ಮತ್ತು ಸಾಮಾಜಿಕ ನ್ಯಾಯದ ಬಗೆಗಿನ ತೀವ್ರ ಕಳಕಳಿಯು ಅವರ ಎಲ್ಲ ಕೃತಿಗಳಲ್ಲೂ ಎದ್ದು ತೋರುವುದರಿಂದ ಅವರ ಕೃತಿಗಳು ಮಾಸಿದಂತೆ ಕಾಣುವುದಿಲ್ಲ. ಹಿಂದಿ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ, ಪ್ರೇಮಚಂದರು ಅದಕ್ಕೊಂದು ನಿರ್ದಿಷ್ಟವಾದ ತಿರುವನ್ನು ಕೊಟ್ಟರೆನ್ನಬಹುದು. ಸಮಾಜದ ಆಗುಹೋಗುಗಳನ್ನು ಮಾಂತ್ರಿಕವಾಗಿ ಮತ್ತು ರೊಮ್ಯಾಂಟಿಕ್ ಭಾವನೆಗಳಿಂದ ಕಾಣುವುದನ್ನು ಬಿಟ್ಟು ಯಥಾವತ್ತಾಗಿ ಚಿತ್ರಿಸುವ ಪದ್ಧತಿಗೆ ಬುನಾದಿಯನ್ನು ರಚಿಸಿದವರಲ್ಲಿ ಪ್ರೇಮಚಂದ್ ಪ್ರಮುಖರು. ಜನಸಮುದಾಯದ ಪರವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದು ಪ್ರೇಮಚಂದರ ಇನ್ನೊಂದು ಮಹತ್ತರ ಸಾಧನೆಯಾಗಿದೆ.

ಒಂದು ರೀತಿಯಲ್ಲಿ ಹೇಳುವುದಾದರೆ, ಧನಪತ್ ರೈ ಎಂಬ ಮೂಲ ಹೆಸರಿನ ಈ ಸಾಹಿತಿ

ಭಾರತದ ಸ್ವಾತಂತ್ರ್ಯದ ಲೇಖಕ ಎನಿಸಿಕೊಳ್ಳುತ್ತಾರೆ. ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ವಿಮುಕ್ತಿ ಇವರ ಕೃತಿಗಳಲ್ಲಿ ಸಾರ್ವತ್ರಿಕವಾಗಿ ಚರ್ಚಿತವಾಗುವ ಅಂಶಗಳು. ಪ್ರೇಮಚಂದ್ ವಿಶ್ವದ ಸಾಹಿತಿಗಳ ಪಂಕ್ತಿಗೆ ಸೇರಲು ಅವರ ಅರ್ಹತೆ ಇದನ್ನು ಬಹಳವಾಗಿ ಅವಲಂಬಿಸಿದೆ ಎಂದರೆ ತಪ್ಪಾಗಲಾರದು. ಒಂದು ಇಡೀ ರಾಷ್ಟ್ರದ ಈ ಮಿಡಿತವನ್ನು ಗ್ರಹಿಸಿ ಅದಕ್ಕೆ ಪುಟಗೊಡುವಂತಹ ವಸ್ತುಗಳನ್ನು ಆಯ್ದುಕೊಂಡು ಭವಿಷ್ಯದತ್ತ ಬೆರಳುಮಾಡಿ ತೋರಿಸುವುದು ಪ್ರೇಮಚಂದರ ಬಹುಪಾಲು ಕೃತಿಗಳ ಸಾರವಾಗಿದೆ. ತಮ್ಮ ಕಡೆಯ ದಿನಗಳಲ್ಲಿ ಒಬ್ಬ ಸ್ನೇಹಿತರಾಗಿದ್ದ ಬನಾರ್ಸಿದಾಸ್ ಚತುರ್ವೇದಿಯವರಿಗೆ ಅವರು ಬರೆದ ಪತ್ರದ ಒಕ್ಕಣೆ ಹೀಗಿದೆ : ''ನನಗೆ ವೈಯಕ್ತಿಕ ಆಸೆಗಳೇನೂ ಉಳಿದಿಲ್ಲ. ಈಗಿರುವುದು ಒಂದೇ ಪ್ರಮುಖ ಆಸೆ : ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ನಾವು ಗೆಲುವು ಪಡೆಯಬೇಕು... ಕೆಲವು ಒಳ್ಳೆಯ ಸಾಹಿತ್ಯ ಕೃತಿಗಳನ್ನು ರಚಿಸುವಂತಹ ಶಕ್ತಿ ನನಗೆ ಬೇಕೆಂಬ ಆಸೆಯೇನೋ ಇದೆ; ಆದರೆ ಅದೂ ಸ್ವಾತಂತ್ರ್ಯ ಗಳಿಕೆಯ ಅಂಗವಾಗಿಯೇ ಇರಬೇಕಷ್ಟೆ.'' ಇದನ್ನು ಗಮನಿಸುವಾಗ ಪ್ರೇಮಚಂದರನ್ನು ರಾಷ್ಟ್ರಭಕ್ತನೆಂಬ ಪಟ್ಟಕ್ಕೇರಿಸಿ ಸುಮ್ಮನಾಗಲಾರದು. ಸ್ವಾತಂತ್ರ್ಯವೆಂದರೆ ಅವರಿಗಿದ್ದ ಕಲ್ಪನೆಯನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು. ೧೯೨೧ರ ಚಳುವಳಿಗೆ ಇನ್ನೂ ಎರಡು ವರ್ಷಗಳಿದ್ದಾಗ ಮತ್ತು ಜಲಿಯನ್‌ವಾಲಾಬಾಗ್ ಹತ್ಯಾಕಾಂಡಕ್ಕೆ ಎರಡು ತಿಂಗಳ ಮುನ್ನ ಫೆಬ್ರವರಿ ೧೯೧೯ರಲ್ಲಿ ತಮ್ಮ 'ಹಳೆಯ ಯುಗ, ಹೊಸ ಯುಗ' ಎಂಬೊಂದು ಲೇಖನದಲ್ಲಿ ಅವರು ಹೀಗೆ ಬರೆದರು : ''ಜನಸಂಖ್ಯೆಯ ಸುಮಾರು ಶೇಕಡ ತೊಂಬತ್ತರಷ್ಟು ಮಂದಿ ರೈತ ಜನರಿರುವ ನಮ್ಮ ದೇಶದಲ್ಲಿ ಒಂದು ರೈತಸಂಘಟನೆ ಇಲ್ಲದಿರುವುದು, ರೈತರ ಪುರೋಭಿವೃದ್ಧಿಗಾಗಿ ಚಳುವಳಿಯಿಲ್ಲದಿರುವುದು, ವ್ಯವಸಾಯಕ್ಕೆ ಸಂಬಂಧಿಸಿದ ಶಾಲೆಗಳಿಲ್ಲದಿರುವುದು, ರೈತ ಜೀವನವನ್ನು ಉತ್ತಮಗೊಳಿಸಲು ಯೋಜಿತ ಪ್ರಯತ್ನವಿಲ್ಲದಿರುವುದು ನಾಚಿಕೆಗೇಡಿನ ವಿಷಯವಲ್ಲವೆ ? ನಮ್ಮಲ್ಲಿ ಹೊಸದಾಗಿ ಕಾಲೇಜುಗಳು ಹುಟ್ಟಿಕೊಂಡಿವೆ, ವಿಶ್ವವಿದ್ಯಾನಿಲಯಗಳಿವೆ ಮತ್ತು ಆಂದೋಲನಗಳು ಜರುಗುತ್ತಿವೆ. ಆದರೆ ಅವೆಲ್ಲಾ ಯಾರಿಗಾಗಿ ? ಕೇವಲ ಕೆಲವರಿಗಾಗಿ; ಕೆಲವರ ಅಧಿಕಾರ ಮತ್ತು ಶಕ್ತಿಗಳ ವರ್ಧನೆಗಾಗಿ. ಆ ಕೆಲವರು ರಾಷ್ಟ್ರವೆಂದರೆ ಏನೆಂದು ತಿಳಿದುಕೊಳ್ಳುತ್ತಾರೋ ಆ ದೃಷ್ಟಿಯಲ್ಲಿ ಈ ವಿದ್ಯಮಾನಗಳಲ್ಲಿ ತಪ್ಪೇನೂ ಕಾಣುವುದಿಲ್ಲ. ಆದರೆ ಮುಂಬರುವ ಯುಗವು ಒಂದು ನವೀನ ಪ್ರಕಾರದ್ದು. ಆ ಯುಗ ಕೆಲಸಗಾರರ ಮತ್ತು ರೈತ ಜನರ ಯುಗ. ವಿಶ್ವದ ಅನೇಕ ಘಟನೆಗಳು ಇದನ್ನೇ ಸೂಚಿಸುತ್ತವೆ. ಆ ಶುಭ್ರ ಗಾಳಿಯು ಭಾರತವನ್ನೂ ಮುಟ್ಟೀತೆಂಬುದರಲ್ಲಿ ಸಂದೇಹವಿಲ್ಲ. ಹಿಮಾಲಯದ ಉನ್ನತ ಶ್ರೇಣಿಗಳೂ ಆ ಗಾಳಿಯನ್ನು ತಡೆಯಲಾರವು. ಇಂದೋ ನಾಳೆಯೋ ನಮ್ಮ ಜನ ಎಚ್ಚೆತ್ತು ತಮ್ಮ ಹಕ್ಕುಗಳಿಗಾಗಿ ಹೋರಾಡುವುದನ್ನು ನಾವು ಕಾಣುತ್ತೇವೆ. ನಂತರ ಅವರೇ ಅವರ ಭವಿಷ್ಯದ ಯಜಮಾನರಾಗುತ್ತಾರೆ. ಬಹು ಕಾಲ ಅನ್ಯಾಯವನ್ನೆಸಗಿದ ಜನ ಈಗ ತಮ್ಮ ತಪ್ಪನ್ನರಿತುಕೊಂಡು ಕೈ ಕೈ ಹಿಚುಕಿಕೊಳ್ಳುತ್ತಾರೆ. ಈಗ ಪಸರಿಸಿರುವ ನಿಷ್ಕ್ರಿಯತೆಯಿಂದ ಈ ಜನ ಮೋಸ ಹೋಗಬಾರದು. ನಿಷ್ಕ್ರಿಯತೆ ಸದಾ ಕಾಲಕ್ಕೂ ಹಾಗೇ ಉಳಿಯುವುದಿಲ್ಲ. ಭಾರಿಯ ಮರ್ದನಕ್ಕೆ ಗುರಿಯಾಗಿದ್ದ ರಷ್ಯಾದ ಜನರಲ್ಲಿ ಅಂತಹ ಅದ್ಭುತ ಶಕ್ತಿ ಅಡಗಿದ್ದೀತೆಂಬುದನ್ನು ಕ್ರಾಂತಿಯ ಮುನ್ನ ಯಾರು ತಾನೆ ಅರಿತಿದ್ದರು ?'' – ಈ ಮಾತುಗಳಲ್ಲಿ ಎರಡು ಅಂಶಗಳನ್ನು ನಾವು ಗ್ರಹಿಸಬೇಕು. ಸ್ವಾತಂತ್ರ್ಯವೆಂದರೆ ಪ್ರೇಮಚಂದರ ದೃಷ್ಟಿಯಲ್ಲಿರುವುದು ಸಮಗ್ರವಾದ ಒಂದು ಸ್ವಾತಂತ್ರ್ಯ; ಕೇವಲ ರಾಜಕೀಯ ಸ್ವಾತಂತ್ರ್ಯವಲ್ಲ, ಕೇವಲ ಬ್ರಿಟಿಷ್ ವಸಾಹತುಶಾಹಿಯನ್ನು ಒದ್ದೋಡಿಸುವುದು ಮಾತ್ರವಲ್ಲ. ೧೯೨೧ರಲ್ಲಿ ಅವರು ಬರೆದ 'ಆಹುತಿ' ಎಂಬ ಸಣ್ಣ ಕತೆಯಲ್ಲಿ

ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ಪ್ರೇಮಚಂದ್ ಒಂದು ಪಾತ್ರದಿಂದ ಹೀಗೆ ಹೇಳಿಸುತ್ತಾರೆ: ''ವಿದ್ಯಾವಂತ ವರ್ಗಗಳಲ್ಲಿ ನಾವಿಂದು ಕಾಣುತ್ತಿರುವ ಹಣದ ಶಕ್ತಿ ಮತ್ತು ಸ್ವಾರ್ಥಗಳು ರಾಷ್ಟ್ರದಲ್ಲಿ ಸ್ವಾತಂತ್ರ್ಯದ ನಂತರವೂ ಇದೇ ರೀತಿ ಇರುವುದಾದರೆ ಅಂತಹ ಸ್ವಾತಂತ್ರ್ಯದಿಂದ ಯಾವ ಪ್ರಯೋಜನವೂ ಇಲ್ಲವೆಂದು ನನ್ನ ಭಾವನೆ. ಬ್ರಿಟಿಷ್ ಬಂಡವಳಿಗರ ಮತ್ತು ನಮ್ಮ ವಿದ್ಯಾವಂತ ವರ್ಗಗಳ ಸ್ವಾರ್ಥ ನಮಗೆ ಮಾರಕವಾಗಿದೆ. ನಮ್ಮ ಜೀವನಗಳನ್ನೇ ಪಣವನ್ನಾಗಿಟ್ಟು ಯಾವ ದುಷ್ಟ ಪ್ರವೃತ್ತಿಗಳ ವಿರುದ್ಧ ಹೋರಾಟ ನಡೆಸುತ್ತಿದ್ದೆವೋ ಅವನ್ನು ಮುಂದೆ ನಮ್ಮ ಜನ, ಆ ಪ್ರವೃತ್ತಿಯು ವಿದೇಶಿಯರದ್ದಲ್ಲ, ನಮ್ಮವರೇ ಆಳುತ್ತಿದ್ದಾರೆ ಎಂಬ ಕಾರಣದಿಂದ ಒಪ್ಪಿಕೊಳ್ಳುತ್ತಾರೇನು? ನನ್ನ ಮಟ್ಟಿಗೆ ಹೇಳುವುದಾದರೆ, ಸ್ವಾತಂತ್ರ್ಯವೆಂದರೆ ಜಾನನ ಬದಲು ಗೋವಿಂದನನ್ನು ಪಟ್ಟಕ್ಕೇರಿಸುವುದೆಂದಲ್ಲ.'' ಎರಡನೆಯದಾಗಿ, ಈ ರೀತಿಯ ಕಲ್ಪನೆಯ ಸ್ವಾತಂತ್ರ್ಯಸಿದ್ಧಿಗೆ ಜನರ ಬಂಡಾಯ ಒಂದೇ ದಾರಿ. ಅದು ಇಂದಲ್ಲ ನಾಳೆ ಆಗಿಯೇ ತೀರಬೇಕೆಂಬ ನಿಶ್ಚಲ ಅಪೇಕ್ಷೆ ಪ್ರೇಮಚಂದರಲ್ಲಿತ್ತು. ಪ್ರೇಮಚಂದರ ಮತ್ತು ಅವರಂತಹವರ ಈ ಅಪೇಕ್ಷೆ ಸಂಕೀರ್ಣ ಪರಂಪರೆಗಳನ್ನುಳ್ಳ ಭಾರತದಂತಹ ರಾಷ್ಟ್ರದಲ್ಲಿ ಎಂದೆಂದಿಗೂ ಕೈಗೂಡಲಾರದೆಂದು ತೀರ್ಮಾನಿಸಿರುವವರು ಇಂದಿಗೂ ನಮ್ಮಲ್ಲಿದ್ದಾರೆ. ಅದರ ಬಗ್ಗೆ ವಿಶ್ಲೇಷಣೆ ನಡೆಸಲು ಇದು ಸೂಕ್ತ ಸಮಯವಲ್ಲ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ್ದಿಷ್ಟೆ: ಅವರಲ್ಲಿದ್ದ ತುಡಿತ ಗಾಢವಾದದ್ದು. ಸಾಮಾಜಿಕ ಬದಲಾವಣೆಗಾಗಿ ಅವರು ಹಾತೊರೆಯುತ್ತಿದ್ದರು. ಅದು ಕೇವಲ ಭಾವುಕತನದ ಮಟ್ಟದಲ್ಲಿ ಉಳಿದಿರಲಿಲ್ಲ. ಹೊಸ ವ್ಯವಸ್ಥೆಯೊಂದನ್ನು ಕಂಡಾಗ ೧೯೩೦ರಲ್ಲಿ ರವೀಂದ್ರನಾಥರು ಯಾವ ಭಾವನೆ ವ್ಯಕ್ತಪಡಿಸಿದರೆಂದು ಅವರ 'ರಷ್ಯದಿಂದ ಪತ್ರಗಳು' ಎಂಬ ಹೊತ್ತಿಗೆಯಲ್ಲಿ ಕಾಣಬರುತ್ತದೆ. ಅಂಥದೇ ಭಾವನೆಯನ್ನು ಪ್ರೇಮಚಂದ್ ೧೯೧೯ರಲ್ಲಿ ವ್ಯಕ್ತಪಡಿಸಿದ್ದರು. ೧೭೮೯ರ ಫ್ರೆಂಚ್ ಕ್ರಾಂತಿಯ ಬಗ್ಗೆ ವರ್ಡ್ಸ್‌ವರ್ತ್, ಕೋಲರಿಜ್ ಮುಂತಾದ ಆಂಗ್ಲ ಕವಿಗಳು ತಾಳಿದ್ದ ಮನೋಭಾವವನ್ನಿಲ್ಲಿ ಸ್ಮರಿಸಬಹುದು. ಮಾನವ ಜನಾಂಗದ ಚರಿತ್ರೆಯಲ್ಲಿ ಅದೊಂದು ನೂತನ ಅಧ್ಯಾಯದ ನಾಂದಿಯೆಂಬ ಸಂಭ್ರಮ ಅವರಲ್ಲಿತ್ತು. ಆದರೆ ನಂತರದ ಘಟ್ಟಗಳಲ್ಲಿ ಆ ಕ್ರಾಂತಿ ತಾಳಿದ ಸ್ವರೂಪದಿಂದ ಅವರೆಲ್ಲಾ ಅವಾಕ್ಕಾದರು, ಅದರಿಂದ ದೂರ ಸರಿದರು. ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಅವರು ಕ್ರಾಂತಿಕಾರಕ ಸಿದ್ಧಾಂತವನ್ನೇನೂ ರೂಢಿಸಿಕೊಳ್ಳಲಿಲ್ಲ. ಪ್ರೇಮಚಂದರ ಭಾವನೆ ಇದರಿಂದ ಭಿನ್ನವಾದದ್ದು. ಜೀವನ ಮಾಧುರ್ಯವನ್ನು ಅವರು ಅಕ್ಟೋಬರ್ ಸಮಾಜವಾದಿ ಕ್ರಾಂತಿಯಲ್ಲಿ ಕಂಡರು. ತಮ್ಮ ಇಳಿವಯಸ್ಸಿನಲ್ಲಿ ಸಿಡ್ನಿ ಮತ್ತು ಬಿಯಾಟ್ರಿಸ್ ವೆಬ್ ದಂಪತಿಗಳು ಇದೇ ಅನುಭವವನ್ನು ಪಡೆದರೆಂಬುದನ್ನಿಲ್ಲಿ ಉಲ್ಲೇಖಿಸಬಹುದು. ತಮ್ಮ ವೈಯಕ್ತಿಕ ಜೀವನದಲ್ಲಿ ಇದರ ಪ್ರಭಾವವನ್ನು ಸಂಪೂರ್ಣವಾಗಿ ಗ್ರಹಿಸಿ ಅದರಂತೆ ಕಾರ್ಯೋದ್ಯುಕ್ತರಾದದ್ದು ಪ್ರೇಮಚಂದರ ವೈಶಿಷ್ಟ್ಯ.

೧೯೧೯ ಪ್ರೇಮಚಂದರ ಜೀವನದಲ್ಲಿ ಇನ್ನೊಂದು ಕಾರಣದಿಂದಲೂ ಪ್ರಮುಖವಾಗಿದೆ. ಆ ವರ್ಷದಲ್ಲಿ 'ಪ್ರೇಮಾಶ್ರಮ್' ಎಂಬ ಕಾದಂಬರಿಯನ್ನವರು ಬರೆದರು. ಭಾರಿ ಭೂಮಾಲಿಕರ ಮತ್ತು ಅವರ ಹಿತರಕ್ಷಕ ಬ್ರಿಟಿಷ್ ವಸಾಹತು ಸರ್ಕಾರದ ಘೋರ ಉಪಟಳಗಳ ವಿರುದ್ಧ ಉತ್ತರ ಭಾರತದ ರೈತಾಪಿಜನರ ಹೋರಾಟ ಈ ಕಾದಂಬರಿಯ ವಸ್ತು. ಕಾದಂಬರಿಯಲ್ಲಿ ಬಲರಾಜ್ ಎಂಬೊಬ್ಬ ಯುವಕನ ಪಾತ್ರ ಬರುತ್ತದೆ. ಜೀತಪದ್ಧತಿಯನ್ನು ಕಂಡು ಅವನು ಸಿಟ್ಟೇಳುತ್ತಾನೆ. ಅವನಿಂದ ಪ್ರೇಮಚಂದ್ ಒಂದೆಡೆ ಈ ಮಾತುಗಳನ್ನು ಹೇಳಿಸುತ್ತಾರೆ: ''ಸಾಮಾನ್ಯ ಕೃಷಿಕನೆಂದರೆ ನಿಮಗೆಲ್ಲಾ ಅಸಡ್ಡೆ. ಅವನು ಹುಲ್ಲುಕಡ್ಡಿಯ ಸಮಾನ ಅಷ್ಟೆ

ಭೂಮಿಯ ಒಡೆಯನ ಸೇವೆ ಮಾಡಿಕೊಂಡಿರುವುದೊಂದೇ ಅವನ ಜಾಯಮಾನವೆಂದು ನಿಮ್ಮ ನಂಬಿಕೆ. ಆದರೆ ಅಲ್ಲೆಲ್ಲೋ ರಷ್ಯಾದಲ್ಲಿ ಇವರೇ ಆಳ್ವಿಕೆ ನಡೆಸುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಓದಿದ್ದೇನೆ.'' ಊಳಿಗಮಾನ್ಯ ಪದ್ಧತಿಯ ವಿರೋಧವನ್ನು ಪ್ರೇಮಚಂದ್ ಈ ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ. ೧೯೨೦ರಲ್ಲಿ ಅವರಿದನ್ನು ಬರೆದು ಮುಗಿಸಿದ್ದು. ಗಾಂಧೀಜಿಯವರ ನೇತೃತ್ವದಲ್ಲಿ ಮುಂದೆ ನಡೆದ ರಾಷ್ಟ್ರೀಯ ವಿಮೋಚನಾ ಚಳುವಳಿಗೆ ಈ ಕಾದಂಬರಿ ಕನ್ನಡಿಯಂತಿದೆ. ಲಿಯೋ ಟಾಲ್‌ಸ್ಟಾಯ್ ಅವರ ಕೃತಿಗಳನ್ನು ರಷ್ಯಾದ ಕ್ರಾಂತಿಯ ಕನ್ನಡಿಯೆಂದು ಲೆನಿನ್ ಬಣ್ಣಿಸಿದ್ದುದನ್ನಿಲ್ಲಿ ಗಮನಿಸಬಹುದು. ಕ್ರಾಂತಿಪೂರ್ವದ ಜೀವನ ಸ್ಥಿತಿ, ಹೋರಾಟ, ಆಕಾಂಕ್ಷೆ ಇವುಗಳನ್ನು ವಿವರವಾಗಿ ಚಿತ್ರಿಸಿ ಮುಂದಿನ ಮಾರ್ಗವನ್ನು ಆರಿಸಿಕೊಳ್ಳಲು ಬೇಕಾದ ಆಯಕಟ್ಟನ್ನು ಮಾರ್ಮಿಕವಾಗಿ ಸೂಚಿಸಿದ್ದು ಟಾಲ್‌ಸ್ಟಾಯ್ ಅವರ ಅಮೋಘ ಕಾಣಿಕೆ. ಟಾಲ್‌ಸ್ಟಾಯ್ ಮತ್ತು ಪ್ರೇಮಚಂದರ ಸಮಾಜಗಳು ಒಂದೇ ತೆರನಾಗಿರಲಿಲ್ಲ. ಒಂದೇ ಹಂತಕ್ಕೆ ಸೇರಿರಲಿಲ್ಲ. ಟಾಲ್‌ಸ್ಟಾಯ್ ಅವರಷ್ಟು ಆಳವಾಗಿ ಸಮಾಜವನ್ನು ಪ್ರೇಮಚಂದ್ ಗ್ರಹಿಸಿದರೋ ಇಲ್ಲವೋ ಹೇಳಲು ಬರುವುದಿಲ್ಲ. ಆದರೆ ಟಾಲ್‌ಸ್ಟಾಯ್ ಅವರ 'ಪುನರುತ್ಥಾನ' ಕಾದಂಬರಿಯಲ್ಲಿ ಬರುವ ನೆಖಲ್ಯುಡೋವ್‌ನಂತೆ 'ಪ್ರೇಮಾಶ್ರಮ್'ನ ಪ್ರೇಮಶಂಕರ್ ವರ್ಗದ್ವಂದ್ವ, ಸಾಮಾಜಿಕ ಅನ್ಯಾಯ, ಇತ್ಯಾದಿಗಳನ್ನು ಕಂಡು ಉದ್ವೇಗಗೊಳ್ಳುತ್ತಾನೆ. ಜಮೀನ್ದಾರರ ವೈಭವ ಜೀವನದಲ್ಲಿ ಅವನಿಗೆ ಹೇಸಿಗೆಯುಂಟಾಗುತ್ತದೆ ಮತ್ತು ನೆಖಲ್ಯುಡೋವ್‌ನಂತೆ ತಾನೂ ತನ್ನ ಜಮೀನನ್ನೆಲ್ಲಾ ಸ್ವಯಂಪ್ರೇರಣೆಯಿಂದ ರೈತರಿಗೆ ಹಂಚಿಕೊಡುತ್ತಾನೆ. ನಿಜಜೀವನದಲ್ಲಿ ಟಾಲ್‌ಸ್ಟಾಯ್‌ರ ರಷ್ಯಾದಲ್ಲಾಗಲಿ ಪ್ರೇಮಚಂದರ ಭಾರತದಲ್ಲಾಗಲಿ ಇಷ್ಟು ಸುಲಭವಾದ ಪರಿಹಾರಗಳು ದೊರೆಯುವುದಿಲ್ಲ. ವಿನೋಬಾಜಿಯವರ ಸತತವಾದ ದಾನ ಯಜ್ಞಗಳು ನಡೆದ ಮೇಲೂ ಬೆಲ್ಚಿ, ಹುಣಿಸೆಕೋಟೆ ಇತ್ಯಾದಿ ಘಟನೆಗಳು ನಮ್ಮ ಮುಂದೆ ನಡೆದುಹೋಗಿವೆ. ಆದರೆ ಟಾಲ್‌ಸ್ಟಾಯ್, ಪ್ರೇಮಚಂದ್ ಇತ್ಯಾದಿ ಸಾಹಿತಿಗಳು ಹಳ್ಳಿಗಳ ಸಮಸ್ಯೆಗೆ ಯಾವುದು ಸೂಕ್ತ ಪರಿಹಾರವೆಂದೆಣಿಸುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಭೂಮಿಯ ಒಡೆತನದ ಪ್ರಶ್ನೆ ಹಳ್ಳಿಯ ಆರ್ಥಿಕ ಮತ್ತು ಸಾಮಾಜಿಕ ಜೀವನಕ್ಕೆ ಮೂಲಭೂತವಾದ ಪ್ರಶ್ನೆ ಎಂಬುದನ್ನು ಪ್ರೇಮಚಂದ್ ತಮ್ಮ 'ಬಲಿದಾನ್' ಎಂಬ ಸಣ್ಣಕತೆಯಲ್ಲೂ ಎತ್ತಿತೋರಿಸಿದ್ದಾರೆ. ಸಣ್ಣ ರೈತನೊಬ್ಬ ಶ್ರೀಮಂತ ಭೂಮಾಲೀಕನೊಬ್ಬನಿಂದ ಬವಣೆಗೆ ಗುರಿಯಾಗಿ ತನ್ನ ಜಮೀನು ಕಳೆದುಕೊಂಡು ನಿರ್ಗತಿಕನಂತೆ ಪಟ್ಟಣ ಸೇರಿ ತನ್ನ ದುಡಿಮೆಯ ಶಕ್ತಿಯನ್ನು ಮಾರಿಕೊಳ್ಳುವಾಗ ತನ್ನ ಮನಸ್ಸೆಲ್ಲಾ ಹಿಂದಿನ ಭೂಮಿಯಲ್ಲೇ ನಿರತವಾಗಿರುವುದನ್ನು ಪ್ರೇಮಚಂದ್ ಚಿತ್ರಿಸಿದ್ದಾರೆ. ಅವನು ಸತ್ತರೆ ಅವನ ಪ್ರೇತವೂ ಆ ಜಮೀನಿನ ಸುತ್ತ ಸುತ್ತುತ್ತಿರುತ್ತದೋ ಏನೋ! ತನ್ನದಾಗಿದ್ದ ಅಂಗೈಯ್ಯಗಲದ ಭೂಮಿಯನ್ನು ಉಳಿಸಿಕೊಳ್ಳಲಾರದೆ ಹೋದದ್ದು ಅವನ ದಾರುಣ ಕತೆ. ಬಿಮಲ್ ರಾಯ್ ಅವರ 'ದೋ ಬೀಘಾ ಜಮೀನ್' ಎಂಬ ಚಲನಚಿತ್ರಕ್ಕೆ ಮೂಲ ಕತೆಯೋ ಎಂಬಂತಿದೆ ಪ್ರೇಮಚಂದರ 'ಬಲಿದಾನ್'. ಹಳ್ಳಿಯ ಸಮಾಜದ ಘರ್ಷಣೆಯನ್ನು ಮಾರ್ಮಿಕವಾಗಿ ನಿರೂಪಿಸುವಾಗ ಪ್ರೇಮಚಂದರಲ್ಲಿ ಕಾಣುವುದು ಭಾವುಕತೆಯಲ್ಲ, ಆದರ್ಶ ಜೀವನದ ಕನಸಲ್ಲ, ಆದರೆ ವಸ್ತುಸ್ಥಿತಿಯ ಕರಾಳತೆ ಮತ್ತು ಕ್ರೌರ್ಯ. 'ಗೋದಾನ್' ಎಂಬ ಅವರ ಅತಿ ಮುಖ್ಯವಾದ ಕಾದಂಬರಿಯಲ್ಲಿ ಇದನ್ನೇ ಇನ್ನೂ ಸಮಗ್ರವಾಗಿ ಚಿತ್ರಿಸಿದ್ದಾರೆ. ಜನಸಾಮಾನ್ಯರಿಗೆ ತೀರಾ ನಿಕಟವಾಗಿ ಅವರು ಬಾಳಿದ್ದರಿಂದಲೇ ಈ ಉನ್ನತ ಅರಿವು ಅವರಲ್ಲಿ ಮೂಡಿಬಂದದ್ದು. ಉತ್ತರಭಾರತದ ಹಳ್ಳಿಗಳ ನೈಜಚಿತ್ರಣವನ್ನು ನೀಡಿ ಆ ಜೀವನದಲ್ಲಿ

ಸಹಸ್ಪಂದನ ಕಂಡುಕೊಂಡ ಹಿಂದಿ ಕಾದಂಬರಿಕಾರರಲ್ಲಿ ಇಂದಿಗೂ ಅತಿಶ್ರೇಷ್ಠರಾಗಿ ಉಳಿದಿರುವವರು ಪ್ರೇಮಚಂದ್. ಅವರ ಚಿತ್ರಣದಲ್ಲಿ ಕಾಣಬರುವ ಪ್ರಮುಖ ಅಂಶಗಳು ಇಂದಿನ ಸಮಾಜರಚನೆಯ ಅಂಶಗಳಾಗಿಯೂ ಉಳಿದಿರುವುದು ನಮ್ಮ ಸ್ವಾತಂತ್ರ್ಯ ಇನ್ನೂ ಎಷ್ಟು ಅರ್ಥರಹಿತವಾಗಿದೆ ಎಂಬುದಕ್ಕೊಂದು ನಿದರ್ಶನ.

ಪ್ರೇಮಚಂದರು ಕೇವಲ ಭಾವುಕಜೀವಿಯಲ್ಲವೆಂಬುದಕ್ಕೆ ಇನ್ನೊಂದು ಪುರಾವೆ ಅವರ ಜೀವನಚರಿತ್ರೆಯಲ್ಲೇ ದೊರೆಯುತ್ತದೆ. ಅವರ ಸಣ್ಣಕತೆಗಳ ಮೊದಲ ಸಂಗ್ರಹ 'ಸಾಜ್-ಇ-ವತನ್' ೧೯೦೯ರಲ್ಲಿ ಹೊರಬಂತು. ಐದು ಕತೆಗಳಿದ್ದ ಈ ಸಂಗ್ರಹದಲ್ಲಿ ಅಂದಿನ ಬ್ರಿಟಿಷ್ ಸರ್ಕಾರಕ್ಕೆ ಅರುಚಿಕರವಾದ ಅನೇಕ ಮಾತುಗಳೂ ಭಾವನೆಗಳೂ ಪ್ರಕಟಗೊಂಡಿದ್ದವು. ಕೆಲವು ಯುವಕ ಕ್ರಾಂತಿಕಾರರ ಬಗೆಗಿನ ಪ್ರಸ್ತಾಪವಿದ್ದ ಈ ಸಂಗ್ರಹವನ್ನು ಅಂದಿನ ಸರ್ಕಾರ ಬಹಿಷ್ಕರಿಸಿತು ಮತ್ತು ಸಾರ್ವಜನಿಕವಾಗಿ ಸುಟ್ಟುಹಾಕಿಸಿತು. ಧನಪತ್ ರೈ ಅವರು ಪ್ರೇಮಚಂದ್ ಆದದ್ದು ಆ ಸಂದರ್ಭದಲ್ಲಿ. ಮತ್ತು ನಂತರ ತಮ್ಮ ಸರ್ಕಾರಿ ನೌಕರಿಗೆ ರಾಜಿನಾಮೆ ಕೊಟ್ಟು ಪೂರ್ಣವಾಗಿ ಸಾಹಿತ್ಯಿಕ ಚಟುವಟಿಕೆಯಲ್ಲಿ ಮತ್ತು ರಾಜಕೀಯ ಆಂದೋಳನದಲ್ಲಿ ಪ್ರೇಮಚಂದ್ ಮುಳುಗಿದರು. ಈ ಚಟುವಟಿಕೆಯಲ್ಲಿ ಸಕ್ರಿಯ ಪಾತ್ರ ವಹಿಸಿದ ಪ್ರೇಮಚಂದ್ ನೂತನ ಸಂಸ್ಕೃತಿಯ ಸೃಷ್ಟಿಯತ್ತ ತಮ್ಮ ನಿಷ್ಠೆಯನ್ನು ಬೆಳೆಸಿಕೊಂಡರು. 'ಮಹಾಜನೀ ಸಭ್ಯತಾ' ಎಂಬ ಲೇಖನದಲ್ಲಿ ಈ ನೂತನ ಸಂಸ್ಕೃತಿಯ ಸ್ವರೂಪವನ್ನು ಚರ್ಚಿಸುತ್ತಾ ಅವರು ಹೀಗೆಂದರು: ''ಈ ನೂತನ ವಿಧಾನದ ಅತ್ಯಂತ ಮಹತ್ವದ ತತ್ವವೇನೆಂದರೆ ಯಾರು ತಮ್ಮ ದೈಹಿಕ ಅಥವಾ ಬೌದ್ಧಿಕ ದುಡಿಮೆಯಿಂದ ಸಂಪತ್ತನ್ನು ಸೃಜಿಸುತ್ತಾರೋ ಅವರು ಸಮಾಜದ ಮತ್ತು ರಾಷ್ಟ್ರದ ಗೌರವಾನ್ವಿತ ಸದಸ್ಯರಾಗಿರುತ್ತಾರೆ. ತದ್ವಿರುದ್ಧವಾಗಿ ಯಾರು ತಮ್ಮ ಪಿತ್ರಾರ್ಜಿತ ಆಸ್ತಿಯಿಂದ ಅಥವಾ ಇತರರ ದುಡಿಮೆಯಿಂದ ಜೀವನ ಹೊರೆಯುತ್ತಾರೋ, ಯಾರು ದಿನನಿತ್ಯದ ಬಳಕೆಯ ಪದಾರ್ಥಗಳ ಬೆಲೆಗಳನ್ನು ಏರಿಸಿ ತಮಗೆ ಲಾಭವನ್ನುಂಟುಮಾಡಿಕೊಳ್ಳುತ್ತಾರೋ, ಯಾರು ಬಲಹೀನ ರಾಷ್ಟ್ರಗಳನ್ನು ದಮನಮಾಡಲು ಮಾರಕ ಆಯುಧಗಳನ್ನು ತಯಾರಿಸುತ್ತಾರೋ, ಅವರು ಅತ್ಯಂತ ತೀಕ್ಷ್ಣವಾದ ವಿಷದಂತೆ ವರ್ಜನೆಗೆ ಅರ್ಹರು.'' ಈ ರೀತಿಯ ನಿಲುವನ್ನು ತಾಳಿದ ಪ್ರೇಮಚಂದರಿಗೆ ಜಾತೀಯತೆ ಮತ್ತು ಮತೀಯ ಭಾವನೆಗಳು ಕುತ್ಸಿತವಾಗಿ ಕಂಡುಬಂದುವು. ಸಮಾಜದಲ್ಲಿ ಅವೂ ವಿಷಕ್ಕೆ ಸಮಾನವೆಂದು ಅವರ ವಾದ. ಕೆಲವರನ್ನು ಕೀಳುಜಾತಿಯವರನ್ನಾಗಿ ಮತ್ತು ಕೆಲವರನ್ನು ಅಂತ್ಯಜರನ್ನಾಗಿ ಕಾಣುವ ಪ್ರವೃತ್ತಿಯನ್ನು ತಮ್ಮ ಅನೇಕ ಸಣ್ಣಕತೆಗಳಲ್ಲಿ ಮತ್ತು ಲೇಖನಗಳಲ್ಲಿ ಪ್ರೇಮಚಂದ್ ಖಂಡಿಸಿದರು. ಆದ್ದರಿಂದಲೇ ಸಂಸ್ಕೃತಿಯು ಮತಧರ್ಮಗಳ ನೆಲೆಯಲ್ಲಿ ಉದ್ಭವಿಸುವುದು ಅಶಕ್ಯ ಎಂದು ಅವರು ಪ್ರತಿಪಾದಿಸಿದ್ದು. ಇಡೀ ಜನಸಮುದಾಯದ ಕ್ರಿಯಾತ್ಮಕ ದುಡಿಮೆಯೇ ಸಂಸ್ಕೃತಿಯ ಜನಕನಾಗಲು ಸಾಧ್ಯವೆಂದು ಅವರು ಪದೇ ಪದೇ ವಾದಿಸಿದರು.

ಈಚಿನ ದಿನಗಳಲ್ಲಿ ಕೆಲವು ವಿಮರ್ಶಕರು ಪ್ರೇಮಚಂದರ ಕೃತಿಗಳ ಕಥಾನಿರೂಪಣೆ, ಸರಳತೆ, ಸಂಕೀರ್ಣರಹಿತವಾದ ವಸ್ತು, ನೇರವಾದ ಪಾತ್ರಚಿತ್ರಣ ಇತ್ಯಾದಿಗಳನ್ನು ಚರ್ಚಿಸುವಾಗ ಅವೆಲ್ಲಾ ನಿಜಕ್ಕೂ ಅವಗುಣಗಳೇ ಆಗಿವೆಯೆಂಬ ವಾದವನ್ನು ಮಂಡಿಸಹೊರಟಿದ್ದಾರೆ. ಪ್ರೇಮಚಂದರ ಕೆಲವು ಸಮಕಾಲೀನರಿಗೂ ಹಿಡಿಸದಿದ್ದಂತಹ ರೀತಿಯಲ್ಲಿ ಅವರು ಕಲೆಯ ಸ್ವರೂಪ ಮತ್ತು ಉದ್ದೇಶಗಳನ್ನು ವಿವರಿಸಿದ್ದುಂಟು. ಎಷ್ಟೋ ವರ್ಷಗಳಿಂದ ಕೇಳಿಬರುತ್ತಿರುವ ವಿಮರ್ಶಾಸೂತ್ರವೊಂದು ಈ ವಿಮರ್ಶಕರಿಗೆಲ್ಲಾ ಖಂಡನೆಗೆ ಪ್ರಥಮ ಪ್ರೇರಣೆಯಾಗಿದೆ.

ಕಲೆಯನ್ನು ಪ್ರಚಾರ ಸಾಧನೆಯನ್ನಾಗಿ ಬಳಸಿಕೊಳ್ಳುವವರು ಸಾಹಿತ್ಯಕ್ಕೆ ಅಪಚಾರವೆಸಗುತ್ತಾರೆ, ಅಂಥವರಲ್ಲಿ ಪ್ರೇಮಚಂದರೂ ಒಬ್ಬರು ಮತ್ತು ಆ ಕಾರಣದಿಂದ ಸಾಹಿತ್ಯಕ್ಷೇತ್ರದಲ್ಲಿ ಅವರ ಸ್ಥಾನ ಅಪ್ರಕೃತವಾದುದೆಂದು ಇವರ ತೀರ್ಮಾನ. ಇದನ್ನೆಲ್ಲಾ ಖಂಡತುಂಡವಾಗಿ ವಿಶ್ಲೇಷಿಸುವ ಅವಶ್ಯಕತೆಯಿಲ್ಲ. ಈ ದಶಕದಲ್ಲಿ ಪ್ರಕಾಶಿತವಾಗಿರುವ ಶಿವರಾಮ ಕಾರಂತರ 'ನಾವು ಕಟ್ಟಿದ ಸ್ವರ್ಗ' ಕಾದಂಬರಿಯನ್ನು ಕೇವಲ ಪ್ರಚಾರಾತ್ಮಕವಾದ ಕತೆಯೆಂದೇನಾದರೂ ಈ ವಿಮರ್ಶಕರು ನಿರಾಕರಿಸುವುದಾದರೆ ಅವರ ಒಡ್ಡ ಧೈರ್ಯಕ್ಕೆ ಏನು ಹೇಳಬೇಕೋ ತಿಳಿಯದು. ಯಾವ ಸಾಹಿತ್ಯಕೃತಿಯಲ್ಲಿ ಯಾವೊಂದು ಭಾವನೆ ಮತ್ತು ಸಂವೇದನೆಯ 'ಪ್ರಚಾರ'ವೂ ಇರುವು ದಿಲ್ಲವೋ ಅದರಲ್ಲಿ ಉಳಿಯುವುದೇನು ಎಂಬ ಪ್ರಶ್ನೆ ನಮ್ಮನ್ನು ಬಾಧಿಸುತ್ತದೆ. ಕೇವಲ ಪ್ರಚಾರವೇ ಸಾಹಿತ್ಯ ಎಂದು ಪ್ರೇಮಚಂದ್ ಎಲ್ಲಿ ಸಾರಿ ಹೇಳಿದ್ದಾರೋ ಈ ವಿಮರ್ಶಕರೇ ತಿಳಿಸಿಕೊಡಬೇಕು. ಅಥವಾ ಕಾರ್ಯತಃ ಅವರು ಕಾದಂಬರಿಕಾರರಾಗಿ ಬರಿಯ ಪ್ರಚಾರವನ್ನಷ್ಟೇ ಮಾಡಿದ್ದಾರೆಂದು ಈ ವಿಮರ್ಶಕರು ಮೊಂಡುವಾದ ಹೂಡಿದರೆ ಅವರು ಪ್ರೇಮಚಂದರ ಸೃಜನಶೀಲತೆಯ ಫಲವನ್ನು ಸವಿಯುವ ಅವಕಾಶವನ್ನು ಕಳೆದುಕೊಂಡಿದ್ದಾರೆ ಎಂದಷ್ಟೇ ಹೇಳಬೇಕು. ಸಾಹಿತ್ಯದ ಸ್ವರೂಪ ಮತ್ತು ಉದ್ದೇಶವನ್ನು ಕುರಿತು ಪ್ರೇಮಚಂದ್ ಬರೆದಿರುವ ಲೇಖನವೊಂದರ ಕೆಲವು ಭಾಗಗಳನ್ನು ಮಾತ್ರ ಇಲ್ಲಿ ಉದ್ಧರಿಸಬಹುದು : ''ನೀತಿಶಾಸ್ತ್ರ ಮತ್ತು ಸಾಹಿತ್ಯಗಳೆರಡಕ್ಕೂ ಸಮಾನವಾದ ಉದ್ದೇಶವುಂಟು. ಅವುಗಳ ಪ್ರಕಾರದಲ್ಲಿ ಮಾತ್ರ ಭಿನ್ನತೆ ಇದೆ. ನೀತಿಶಾಸ್ತ್ರವು ತರ್ಕ ಮತ್ತು ನೈತಿಕ ಉಪದೇಶದ ಮಾರ್ಗ ಹಿಡಿದು ಮನಸ್ಸಿನ ಮೇಲೆ ಪರಿಣಾಮ ಬೀರಲೆಳಸುತ್ತದೆ; ಸಾಹಿತ್ಯವು ಭಾವನೆಗಳನ್ನು ಮತ್ತು ಮಾನಸಿಕ ಸನ್ನಿವೇಶಗಳನ್ನು ಆರಿಸಿಕೊಳ್ಳುತ್ತದೆ. ನಮ್ಮ ಜೀವನದಲ್ಲಿನ ಅನೇಕ ಘಟನೆಗಳೇ ಅನುಭವಗಳು, ಆಘಾತಗಳು ಮತ್ತು ನೋವುಗಳು. ಅವು ಕಲ್ಪನೆಯ ಹರವನ್ನು ಮುಟ್ಟಿದಾಗ ಲೇಖಕನಲ್ಲಿ ಸೃಷ್ಟ್ಯಾತ್ಮಕ ಪ್ರವೃತ್ತಿಯಾಗಿ ಘಟಿಸುತ್ತವೆ. ನಮ್ಮ ಅಂತರಂಗ ಭಾವನೆಗಳನ್ನು ಕಲಕದ, ನಮ್ಮ ಅಂತಃಕರಣದ ಭಾವನೆಗಳಿಗೆ ತೃಪ್ತಿ ನೀಡದ, ನಮ್ಮ ಶಕ್ತಿ ಮತ್ತು ಕ್ರಿಯಾತ್ಮಕತೆಯನ್ನು ಸ್ಫೂರ್ತಿಯಿಂದ ಹಿಗ್ಗಿಸದ ಮತ್ತು ನಮ್ಮಲ್ಲಿ ಸೌಂದರ್ಯಪ್ರಜ್ಞೆಯನ್ನು ಅಂಕುರಿಸದ ಸಾಹಿತ್ಯವು ಸಾಹಿತ್ಯವೆನಿಸಿಕೊಳ್ಳ ಲಾರದು; ಅದರಿಂದ ನಮಗಾವ ಪ್ರಯೋಜನವೂ ಇಲ್ಲ...

''ಪ್ರಾಚೀನ ಕಾಲದಲ್ಲಿ ಸಮಾಜವನ್ನು ಮತಧರ್ಮದ ಆಯಕಟ್ಟಿನಲ್ಲಿ ನಿರ್ಬಂಧಿಸಲಾಗಿತ್ತು. ಮತಧರ್ಮದ ಕಟ್ಟಳೆಯು ಮಾನವನ ಆಧ್ಯಾತ್ಮಿಕ ಮತ್ತು ನೈತಿಕ ಸಂಸ್ಕೃತಿಗೆ ಆಧಾರವಾಗಿದ್ದಿತು; ಭೀತಿ ಮತ್ತು ಆಸೆಯ ಈಡೇರಿಕೆಗಳನ್ನುಂಟುಮಾಡುವ ದೈವೀ ಶಕ್ತಿಗಳ ಹೆಸರಿನಲ್ಲಿ ಇದು ನಡೆದುಬಂದಿತ್ತು: ಒಳ್ಳೆಯವರಿಗೆ ಪ್ರತಿಫಲ, ಕೆಟ್ಟವರಿಗೆ ಶಿಕ್ಷೆ.

''ಈಗ ಆ ಕೆಲಸ ಸಾಹಿತ್ಯದಿಂದ ನಡೆಯಬೇಕಾಗಿದೆ. ಅದರ ಮಾರ್ಗ ಹಿಂದಿನ ಮತ ಧರ್ಮದ ಮಾರ್ಗಕ್ಕಿಂತ ಭಿನ್ನವಾದುದು. ಮಾನವನ ಸೌಂದರ್ಯಪ್ರಜ್ಞೆಯನ್ನಾಧರಿಸಿ ಅದು ತನ್ನ ಕಾರ್ಯ ಸಾಧಿಸಿಕೊಳ್ಳಬೇಕು. ಪ್ರತಿಯೊಬ್ಬನಲ್ಲೂ ಸೌಂದರ್ಯಪ್ರಜ್ಞೆ ಇದೆ; ಅದನ್ನು ಸ್ಫು ರಿಸುವಂತೆ ಮಾಡುವುದು ಸಾಹಿತಿಯ ಕೆಲಸವಾಗುತ್ತದೆ. ಸ್ವತಃ ಲೇಖಕನಲ್ಲಿ ಈ ಪ್ರಜ್ಞೆ ಎಷ್ಟರಮಟ್ಟಿಗೆ ಎಚ್ಚರಗೊಂಡಿದ್ದು ಸ್ಫುರಣೆಗೊಂಡಿರುತ್ತದೋ ಅಷ್ಟೂ ಅವನ ಸಾಹಿತ್ಯಕೃತಿಗಳು ಪ್ರಭಾವಶಾಲಿಗಳಾಗಿರುತ್ತವೆ. ತನ್ನ ಸುತ್ತಮುತ್ತಣ ಪ್ರಪಂಚವನ್ನು ವೀಕ್ಷಿಸುವುದರಿಂದ ಮತ್ತು ತನ್ನ ಪ್ರಕರ್ಷವಾದ ಭಾವನೆಗಳಿಂದ ಅದಕ್ಕೆ ಪ್ರತಿಕ್ರಿಯಿಸುವುದರಿಂದ ಅವನ ಸೌಂದರ್ಯ ಪ್ರಜ್ಞೆ ಎಷ್ಟು ಗಾಢವಾಗಿ ಬೆಳೆದಿರುತ್ತದೆಂದರೆ ಅವನು ಯಾವ ಹೊಲಸನ್ನೂ ಸಹಿಸಲಾರ, ಮಾನವಿಕತೆಯಿಲ್ಲದ ಏನನ್ನೂ ಒಪ್ಪಲಾರ. ತನ್ನೆಲ್ಲ ಶಬ್ದಭಂಡಾರದಿಂದ ಮತ್ತು ಮಾನಸಿಕ

ಭಾವನೆಗಳಿಂದ ಅಂತಹದ್ದನ್ನು ಅವನು ಎದುರಿಸುತ್ತಾನೆ, ಧಿಕ್ಕರಿಸುತ್ತಾನೆ. ಮಾನವಜೀವನದಲ್ಲಿರುವ ಶ್ರೇಷ್ಠ ಮತ್ತು ಸುಂದರ ಮೌಲ್ಯಗಳಿಗೆ ಬದ್ಧನಾಗಿರುವವನು ಅವನು ಎನ್ನಬಹುದು. ನಿರ್ಗತಿಕರ, ದಮನಕ್ಕೊಳಗಾಗಿರುವವರ ಮತ್ತು ಶೋಷಿತರ ಪರವಾಗಿ ಅವನ ದನಿ ಏರುತ್ತದೆ. ಅಂತಹವರು ಕೆಲವು ವ್ಯಕ್ತಿಗಳಿರಬಹುದು ಅಥವಾ ಭಾರಿ ಜನಸಮುದಾಯದವರಿರಬಹುದು. ಹೇಗಿದ್ದರೂ ಸಾಹಿತಿ ಅವರ ಪರವಾಗಿರುವವನೇ. ಸಮಾಜವೆಂಬ ನ್ಯಾಯಾಲಯದಲ್ಲಿ ಅವರ ಪರವಾಗಿ ವಾದಿಸುವ ನಿಷ್ಠಾವಂತ ವಕೀಲ ಸಾಹಿತಿ.

''ರೈತಾಪಿ ಜನರೊಡನೆ ನಾವು ಜೀವಿಸುತ್ತಿದ್ದರೆ ಅಥವಾ ಕೆಲಕಾಲ ಅಂತಹ ಸಂದರ್ಭ ಒದಗಿಬಂದಿದ್ದರೆ ಸಹಜವಾಗಿಯೇ ನಾನವರ ಸುಖಸಂತೋಷಗಳನ್ನು ನಮ್ಮದೋ ಎಂಬಂತೆ ಕಂಡಿರುವ ಸಾಧ್ಯತೆ ಇದೆ... ಅದರಿಂದ ಸಾಹಿತಿಯೊಬ್ಬನನ್ನು ರೈತಾಪಿ ಜನರ ಮತ್ತು ಕೆಲಸಗಾರರ ಪರವಾದ ಪ್ರಚಾರಕ ಎನ್ನಲು ಬರುತ್ತದೆಯೇ ? ಸಾಹಿತ್ಯ ಮತ್ತು ಪ್ರಚಾರ, ಇವುಗಳ ನಡುವಿನ ವ್ಯತ್ಯಾಸವನ್ನು ತಿಳಿಯಬೇಕಾದ್ದು ಅತ್ಯಾವಶ್ಯಕ. ಪ್ರಚಾರದಲ್ಲಿ ಯಾವ ಭಾವನಾತ್ಮಕ ಅನುಭವವೂ ಇಲ್ಲ; ಆದ್ದರಿಂದ ಅದರಲ್ಲಿ ಸವಿಯಬಹುದಾದ ಅಂಶ ಏನೂ ಇಲ್ಲ. ಆದರೆ ಒಬ್ಬ ನುರಿತ ಕಲಾವಿದನು ಅದನ್ನು ಭಾವನೆ, ಅನುಭವ ಮತ್ತು ಸೌಂದರ್ಯಗಳಿಂದ ತುಂಬಬಲ್ಲನಾದರೆ ಅದನ್ನು ಕೇವಲ ಪ್ರಚಾರವೆಂದು ತಳ್ಳಿಹಾಕಲು ಬರುವುದಿಲ್ಲ, ಅದು ಒಳ್ಳೆಯ ಸಾಹಿತ್ಯವಾಗುತ್ತದೆ. 'ಅಂಕಲ್ ಟಾಮ್ಸ್ ಕ್ಯಾಬಿನ್' ದಾಸ್ಯದ ವಿರುದ್ಧದ ಪ್ರಚಾರವಾಗಿರುವ ಕೃತಿ. ಆದರೆ ಎಂತಹ ಅಮೋಘವಾದ ಪ್ರಚಾರ! ಅದರ ಪ್ರತಿಯೊಂದು ಪದದಲ್ಲೂ ಭಾವನೆ ತುಂಬಿ ತುಳುಕುತ್ತಿರುವುದು ಕಾಣುವುದಿಲ್ಲವೇ ? ಅದನ್ನು ಪ್ರಚಾರವೆಂದು ಮೂದಲಿಸಿ ಕೈಬಿಡುವಂತಿಲ್ಲ. ಬರ್ನಾರ್ಡ್ ಷಾನ ನಾಟಕಗಳು, ವೆಲ್ಸನ ಕಾದಂಬರಿಗಳು, ಗಾಲ್ಸ್‌ವರ್ದಿಯ ನಾಟಕ ಮತ್ತು ಕಾದಂಬರಿಗಳು, ಡಿಕಿನ್ಸ್, ಮೇರಿ ಕೊರೋಲಿ, ರೊಮೇನ್ ರೊಲಾನ್, ಟಾಲ್‌ಸ್ಟಾಯ್, ದೊಸ್ತೋಯೆವ್‌ಸ್ಕಿ, ಮ್ಯಾಕ್ಸಿಂ ಗಾರ್ಕಿ, ಅಪ್ಟನ್ ಸಿಂಕ್ಲೇರ್, – ಹೀಗೆ ಇನ್ನೂ ಎಷ್ಟು ಹೆಸರುಗಳು ಬೇಕು ? ಅವರೆಲ್ಲರ ಕೃತಿಗಳಲ್ಲೂ ನಮಗೆ ಕಾಣಸಿಗುವುದು ಸಾಹಿತ್ಯ ಮತ್ತು ಪ್ರಚಾರದ ಮಧುರ ಮಿಲನ. ... ಕಲಾವಿದನು ನಿರ್ದಿಷ್ಟವಾದೊಂದು ವಿಷಯದ ಬಗ್ಗೆ ಅಷ್ಟೊಂದು ಆಸ್ಥೆ ಬೆಳೆಸಿಕೊಂಡದ್ದು ಏಕೆ ಎಂಬ ಪ್ರಶ್ನೆ ಇಲ್ಲಿ ಪ್ರಕೃತವಲ್ಲ: ಅದು ಅವನ ಜೀವನಾನುಭವಕ್ಕೆ ಸಂಬಂಧಿಸಿದ್ದು, ಅವನ ಅಸ್ತಿತ್ವಕ್ಕೆ ಸಂಬಂಧಿಸಿದ್ದು, ಅವನ ಸಂವೇದನೆ ಮತ್ತು ಇಚ್ಛೆಗೆ ಸಂಬಂಧಿಸಿದ್ದು, ನಮಗಿರುವ ಒರೆಗಲ್ಲಾದರೋ ಒಂದೇ ಒಂದು : ಸತ್ಯ ಮತ್ತು ಸೌಂದರ್ಯಗಳತ್ತ ಕೆಲವು ಹೆಜ್ಜೆಗಳಷ್ಟು ಮುಂದಕ್ಕೆ ನಮ್ಮನ್ನು ಅದು ಒಯ್ಯುತ್ತದೆಯೇ ? ಒಯ್ಯುತ್ತದಾದರೆ ಅದು ಸಾಹಿತ್ಯ ; ಇಲ್ಲದಿದ್ದರೆ ಅದು ಪ್ರಚಾರ ಅಥವಾ ಅದಕ್ಕಿಂತಲೂ ಕೀಳಾದ ಯಾವುದೋ ಪ್ರಕಾರ.''

ಇಂತಹ ಖಡಾಖಂಡಿತವಾದ ಸಾಹಿತ್ಯ ಮೀಮಾಂಸೆಯನ್ನು ರೂಪಿಸಿದ ಪ್ರೇಮಚಂದ್ ಅವರನ್ನು ಆ ಮೀಮಾಂಸದ ನೆಲೆಯಿಂದಲೇ ವಿಶ್ಲೇಷಿಸಿ ವಿಮರ್ಶಿಸುವುದು ಅನೌಚಿತ್ಯವಾಗಲಾರದು. ಹಾಗೆ ಮಾಡಿದಾಗ ಮೇಲಿನ ತಮ್ಮ ಮಾತುಗಳಲ್ಲಿ ಅವರು ಹೆಸರಿಸಿರುವ ಕೆಲವು ಜಗದ್ವಿಖ್ಯಾತ ಸಾಹಿತಿಗಳ ಪಂಕ್ತಿಯಲ್ಲಿ ನಿಲ್ಲಲು ಪ್ರೇಮಚಂದ್ ಖಂಡಿತ ಸಮರ್ಥರಾಗುತ್ತಾರೆ. ಅವರು ತಮ್ಮ ಕಾದಂಬರಿ ಮತ್ತು ಸಣ್ಣಕತೆಗಳಲ್ಲಿ ನಿರೂಪಿಸಿರುವ ಕರ್ಕಶ ಜೀವನವು ಬರುವ ದಿನಗಳಲ್ಲಿ ಇಲ್ಲವಾಗುವಂತಹ ದಿಸೆಯಲ್ಲಿ ಸಾಗಿಯೇ ತೀರುತ್ತೇವೆಂಬ ಖಾತರಿಯುಳ್ಳವನು ನಾನು. ಅವರು ಪ್ರಸ್ತಾಪಿಸಿರುವ ಸಾಮಾಜಿಕ ಅನ್ಯಾಯಗಳು ಆಗ ಇಲ್ಲದಂತಾಗುತ್ತವೆ, ಅಥವಾ ಅವುಗಳ ತೀವ್ರತೆ ಕಡಿಮೆಯಾಗಿರುತ್ತದೆ. ಆಗಲೂ ಪ್ರೇಮಚಂದ್ ಅಪ್ರಸ್ತುತರಾಗಲಾರರು.

ಏಕೆಂದರೆ, ಅವರ ಸಾಹಿತ್ಯದಲ್ಲಿ ಅಂತಶ್ಚಕ್ಷುಸ್ಸಿನ ಪರಿಶೀಲನೆ ಇದೆ, ಜೀವಂತ ಜನರಿದ್ದಾರೆ, ಮಾನಸಿಕ ಸಂವೇದನೆ ಮತ್ತು ಪ್ರತಿಕ್ರಿಯೆ ಇದೆ, ಮಾನವನ ಅಂತಃಕರಣವನ್ನು ಮುಟ್ಟುವ ಮೂಲಭೂತ ವಸ್ತು ಇದೆ. ಇವೆಲ್ಲವನ್ನೂ ತನ್ನಲ್ಲಿ ಕ್ರೋಢೀಕರಿಸಿಕೊಳ್ಳಬಲ್ಲ ಸಾಹಿತಿಗೆ ಮತ್ತು ಅವನ ಸಾಹಿತ್ಯಕ್ಕೆ ಚ್ಯುತಿ ಬರುವಂತಹ ಅಪಾಯವಿಲ್ಲ.

*(ಸೆಪ್ಟೆಂಬರ್ 1980)*

3

# ದೀಪಧಾರಿಗಳು

ಮಹದ್ಗುರಿಯ ಸಾಧನೆಯ ಹಾದಿಯಲಿ
    ಮಡಿದವರಿಗೆ ಸೋಲೆಂದೂ ಇಲ್ಲ;
ಹೆಪ್ಪುಗಟ್ಟಿದ ನೆತ್ತರು ತೋಯಬಹುದು :
ಸೂರ್ಯನ ಝಳ ನೆತ್ತಿಯ ಬೆವರನಿಳಿಸಬಹುದು :
ಅವರಂಗಾಂಗಗಳ ಸಿಗಿದು ನಗರ-ಕೊತ್ತಲಗಳ
    ಬಾಗಿಲುಗಳ ಸಿಂಗರಿಸಬಹುದು :
ಆದರೂ ಅವರ ಧೃತಿಯ ನೆಟ್ಟನಡೆ ಸೋಲದು.
ಶತಮಾನಗಳುರುಳಲಿ, ಇನ್ನೆಷ್ಟೋ ವೀರರು ಅಂತೆಯೇ
    ಅಂಧಕಾರದಲಿ ತೊಳಲಲಿ,
ಅವರ ಆಳ ಅಗಲದ ಚಿಂತನೆಯ,
    ಸೊಗಸಿಮ್ಮಡಿಸುತ್ತಲೇ ಉಂಟು,
ಕ್ರೂರ ಯಜಮಾನರೆಲ್ಲರ ಬೆನ್ನುಹತ್ತಿ
    ಜಗಕೆ ಸ್ವಾತಂತ್ರ್ಯದ ಸವಿಯೂಟ ನೀಡಿ.

—ಲಾರ್ಡ್ ಬೈರನ್

# ಒಂದು ಅಪೂರ್ವ ಬಾಂಧವ್ಯ

> ಕ್ರಾಂತಿಯ ಪ್ರಬಲ ದಾಪುಗಾಲುಗಳಿಂದ ಮಂದ ಯೂರೋಪ್ ತಲ್ಲಣಿಸುತ್ತಿದ್ದಾಗ ಅವರಿಬ್ಬರ ಅಂತಶ್ಶಕ್ತಿ ಪ್ರಜ್ವಲವಾಗಿರುತ್ತಿತ್ತು, ಮೇಧಾಶಕ್ತಿ ಅತಿ ಸೂಕ್ಷ್ಮವಾಗಿರುತ್ತಿತ್ತು ಮತ್ತು ಮಾತುಗಳು ಧೈರ್ಯ ತುಂಬುವಂತಿರುತ್ತಿದ್ದವು. ಅವರು ಯಾರಿಗಾಗಿ ಜೀವಿಸಿದರೋ, ಹೋರಾಡಿದರೋ ಮತ್ತು ತಮ್ಮ ಅಮರ ಕೃತಿಗಳನ್ನು ಸೃಜಿಸಿದರೋ ಅವರ ಸ್ಮೃತಿಯಲ್ಲಿ ಇವರಿಬ್ಬರೂ ಉಳಿದಿರುವುದು ಆ ಸ್ವರೂಪದಲ್ಲಿಯೇ.
>
> **–ಫ್ರಾನ್ತ್ಸ್ ಮೇರಿಂಗ್**

ಮಾರ್ಕ್ಸ್ ಅವರು ಲಂಡನ್ನಿನಲ್ಲಿ ೧೪ನೇ ಮಾರ್ಚ್ ೧೮೮೩ರಂದು ನಿಧನರಾದಾಗ ಏಂಗಲ್ಸರಿಗುಂಟಾದ ಆಘಾತ ಅಷ್ಟಿಷ್ಟಲ್ಲ. ಹಲವು ವರ್ಷಗಳ ನಿಕಟ ಸಂಪರ್ಕ ಮತ್ತು ಸಹಜೀವನಗಳಿಂದಾಗಿ ಏಂಗಲ್ಸರಿಗೆ ಇದೊಂದು ಭಾರಿ ವಿಯೋಗವಾಗಿತ್ತು.

ಆಗ ಜರ್ಮನಿಯ ಲೈಪ್‌ಜಿಗ್‌ನಲ್ಲಿ ವಾಸವಾಗಿದ್ದ ಮಾರ್ಕ್ಸ್‌ರ ಇನ್ನೊಬ್ಬ ಆಜನ್ಮ ಮಿತ್ರ ವಿಲ್ಹೆಲ್ಮ್ ಲೀಬ್‌ನೆಖ್ಟ್ ಅವರಿಗೆ ಅಂದೇ ಮಾರ್ಕ್ಸ್ ಅವರ ನಿಧನದ ವಾರ್ತೆಯನ್ನು ತಿಳಿಸುತ್ತಾ ಏಂಗಲ್ಸ್ ತಮ್ಮ ಪತ್ರದಲ್ಲಿ ಹೀಗೆ ಬರೆದರು: ''ಸದ್ಯದಲ್ಲಿ ನನ್ನಲ್ಲಿರುವುದು ಶ್ರೀಮತಿ ಬೆಬೆಲ್ ಅವರ ವಿಳಾಸ ಮಾತ್ರ. ಆಕೆಗೆ ಕಳಿಸಿದ ತಂತಿಯಿಂದ ಯೂರೋಪಿನ ಸಮಾಜವಾದಿ ಕ್ರಾಂತಿಕಾರಿ ಪಕ್ಷಕ್ಕೆ ಒದಗಿರುವ ಅಗಾಧ ನಷ್ಟದ ಮಾಹಿತಿ ನಿಮಗೆ ತಲುಪಿರಬೇಕು. ಕಳೆದ ಶುಕ್ರವಾರ ಮಾತ್ರವೇ ಲಂಡನ್ನಿನ ನಿಷ್ಣಾತ ವೈದ್ಯರೊಬ್ಬರು ಮಾರ್ಕ್ಸ್ ಅವರ ದೇಹಸ್ಥಿತಿಯನ್ನು ನಿರೀಕ್ಷಿಸಿ ಅವರು ಮತ್ತೆ ಯಥಾಸ್ಥಿತಿಗೆ ಬರುತ್ತಾರೆಂಬ ಆಶಯವನ್ನು ವ್ಯಕ್ತಪಡಿಸಿದ್ದರು. ಮಾರ್ಕ್ಸ್ ಚೇತರಿಸಿಕೊಳ್ಳಲು ಪುಷ್ಟಿಯುತ ಆಹಾರದಿಂದೊದಗುವ ಶಕ್ತಿ ಬೇಕಿತ್ತೆಂದು ಅವರ ಅಭಿಪ್ರಾಯವಾಗಿತ್ತು. ಅದಾದನಂತರ ಮಾರ್ಕ್ಸ್ ಆಹಾರ ಸ್ವೀಕರಿಸಲು ಮುಂದಾದರು. ಆದರೆ ಇಂದು ಮಧ್ಯಾಹ್ನ ೨ ಗಂಟೆಯ ನಂತರ ಮನೆಯಲ್ಲಿ ರೋದನವನ್ನು ಕಂಡೆ. ಮಾರ್ಕ್ಸ್ ನಿಶ್ಶಕ್ತರಾಗಿದ್ದಾರೆಂದು ಕೇಳಿದೆ. ಲೆನ್‌ಶೆನ್ ನನ್ನನ್ನು ಮೇಲೆ ಬರಲು ತಿಳಿಸಿದಳು. ಮಾರ್ಕ್ಸ್ ಅರೆನಿದ್ದೆಯಲ್ಲಿದ್ದಾರೆಂದು ಕೇವಲ ಎರಡು ನಿಮಿಷಗಳ ಮುನ್ನ ಕೊಠಡಿಯಿಂದ ಹೊರಬಂದಿದ್ದ ಆಕೆ ತಿಳಿಸಿದಳು. ನಾನು ಮೇಲೆ ಹೋದೆ. ಮಾರ್ಕ್ಸ್ ನಿದ್ರಿಸುತ್ತಿದ್ದರು. ಆದರೆ ಅದು ದೀರ್ಘ ನಿದ್ರೆಯಾಗಿತ್ತು. ಈ ಶತಮಾನದ ಉತ್ತರಾರ್ಧದ ಅತಿ ದೊಡ್ಡ ಮೇಧಾಶಕ್ತಿ ಸಂಪೂರ್ಣವಾಗಿ ಸುಪ್ತವಾಗಿಹೋಗಿತ್ತು.

''...ಕಳೆದ ಆರು ವಾರಗಳಿಂದಲೂ ನನ್ನ ಮನಸ್ಸು ಸಾಕಷ್ಟು ಆತಂಕವನ್ನನುಭವಿಸಿತ್ತು. ಮೊದಲು ಆತನ ಪತ್ನಿಯ ಸಾವು, ನಂತರ ಜೆನ್ನಿ (ಮಾರ್ಕ್ಸ್‌ರ ಪುತ್ರಿ)ಯ ಮರಣ. ಇವು ಆಗಲೇ ಕಂದಿಹೋಗುತ್ತಿದ್ದ ಆತನ ಜೀವಕ್ಕೆ ಕುಠಾರಪ್ರಾಯವಾಗಿ ಪರಿಣಮಿಸಿದುವು. ಇಂದು ಸಂಜೆ ಆತನನ್ನು ಹಾಸಿಗೆಯ ಮೇಲಿರಿಸಿದ್ದುದನ್ನು ನೋಡಿದೆ. ಸಾವಿನಲ್ಲಿ ಆತನ ಮುಖಚರ್ಯೆ ಲೀನವಾಗಿತ್ತು. ನಾನಿನ್ನೂ ಒಂದಂಶವನ್ನು ನಂಬಲಾರೆ. ಈ ಮೇಧಾವಿಯ ಮಿದುಳಿನ ಶಕ್ತಿಯಿಂದ ಸಂಭವಿಸಿರುವ ದುಡಿಯುವ ವರ್ಗದ ಚಳುವಳಿಯು ಫಲಕಾರಿ

ಆಗದಿರಲು ಸಾಧ್ಯವೇ ಎಂಬುದೇ ಆ ಅಂಶ. ಇಂದು ನಾವೇನಾಗಿದ್ದೇವೋ ಅದು ಈತನ ಮೂಲಕವೇ ಎಂಬುದಂತೂ ಶತಸ್ಸಿದ್ಧ; ಚಳುವಳಿಯು ಮುನ್ನಡೆದಿರುವುದೂ ಈತನ ಮಹತ್ತರ ಸೈದ್ಧಾಂತಿಕ ಮತ್ತು ಕ್ರಿಯಾತ್ಮಕ ಚಟುವಟಿಕೆಗಳಿಂದ; ಆತನಿಲ್ಲದೆ ನಾವೀಗಲೂ ಕಂಗಾಲಾಗುವುದು ಸ್ವಾಭಾವಿಕವೇ.''

ಮಾರನೆಯ ದಿನ ಜಿನೀವಾದಲ್ಲಿದ್ದ ಇನ್ನೊಬ್ಬ ಸ್ನೇಹಿತ ಜೊಹಾನ್ ಫಿಲಿಪ್ ಬೇಕರ್‌ಗೆ ಪತ್ರ ಬರೆಯುವಾಗ ಏಂಗಲ್ಸ್ ಮತ್ತೆ ಅದೇ ದುಃಖವನ್ನು ತೋಡಿಕೊಂಡರು: ''ಕಳೆದ ಶರತ್ಕಾಲದಲ್ಲಿ ನೀನು ಮಾರ್ಕ್ಸ್ ಅವರನ್ನು ಕಂಡಿದ್ದೆಯೆಂದು ಸಂತಸಪಟ್ಟುಕೊ. ಆತನನ್ನು ನೀನು ಮತ್ತೆ ಕಾಣಲಾರೆ.

''...ನಮ್ಮ ಪಕ್ಷದ ಅತ್ಯಂತ ಶಕ್ತಿಯುತವಾದ ಮಿದುಳು ನಶಿಸಿಹೋಯಿತು. ನಾನು ಕಂಡರಿತಿದ್ದ ಅತ್ಯಂತ ಪ್ರಬಲ ಹೃದಯವು ಇಂದು ಸ್ತಬ್ಧವಾಗಿದೆ. ೧೮೪೮ರ ಹಿಂದಿನ ಕಾಲದ ನಾವಿಬ್ಬರು ಬಹುಶಃ ಹಳೆಯ ಪೀಳಿಗೆಗೆ ಸೇರಿ ಉಳಿದಿದ್ದ ಎರಡೇ ಹಳೆಯ ತಲೆಗಳು. ...ಗುಂಡುಗಳು ಹಾರುತ್ತಿವೆ, ಸ್ನೇಹಿತರು ಉರುಳುತ್ತಿದ್ದಾರೆ. ಆದರೆ ಅದನ್ನೆಲ್ಲಾ ನಾವು ಹಿಂದೆಯೂ ನೋಡಿದ್ದಾಗಿದೆ. ಗುಂಡೊಂದು ನಮ್ಮಲ್ಲೊಬ್ಬರಿಗೆ ತಾಕಿದರೆ, ಅದೇನೂ ಅಸಂಭಾವ್ಯವಲ್ಲ. ಆದರೆ ಅದರ ಹೊಡೆತದ ಕಷ್ಟವನ್ನನುಭವಿಸಲು ಇನ್ನೊಬ್ಬ ಬಹುಕಾಲ ಬಾಳಲಾರದೆ ಹೋದರೆ ಅಷ್ಟೇ ಸಾಕು.''

ಮಾರ್ಚ್ ೧೭ರಂದು ಲಂಡನ್ನಿನ ಹೈಗೇಟ್ ಸ್ಮಶಾನ ಭೂಮಿಯಲ್ಲಿ ಮಾರ್ಕ್ಸ್ ಅವರ ದೇಹವನ್ನು ಹೂಳಲಾಯಿತು. ಹದಿನೈದು ತಿಂಗಳ ಮುನ್ನ ಅದೇ ಜಾಗದಲ್ಲಿ ಮಾರ್ಕ್ಸ್ ಅವರ ಪತ್ನಿಯನ್ನು ಹೂಳಲಾಗಿತ್ತು. ದುಃಖಭರಿತ ಏಂಗಲ್ಸ್ ರುದ್ರಭೂಮಿಯಲ್ಲಿ ಗದ್ಗದ ಕಂಠದಿಂದ, ಆದರೆ ಅವರ ಎಂದಿನ ಸ್ಥೈರ್ಯದಿಂದ, ಲಘುವಾದ ಭಾಷಣ ಮಾಡಿದರು. ಅವರು ಪ್ರಾರಂಭಿಸಿದ್ದು ಹೀಗೆ: ''ಮಾರ್ಚ್ ೧೪ರಂದು ಮಧ್ಯಾಹ್ನ ಎರಡುಮುಕ್ಕಾಲು ಗಂಟೆಯ ವೇಳೆಯಲ್ಲಿ ಜಗತ್ತಿನ ಅತ್ಯಂತ ಶ್ರೇಷ್ಠ ವಿಚಾರಿಯು ತನ್ನ ವಿಚಾರಲಹರಿಗೆ ಇತಿಶ್ರೀ ಹಾಡಿದ. ಯೂರೋಪ್ ಮತ್ತು ಅಮೆರಿಕಾಗಳ ಕ್ರಾಂತಿಕಾರಿ ದುಡಿಯುವ ವರ್ಗವು ಅಳೆಯಲಾಗದಷ್ಟು ನಷ್ಟವನ್ನು ಇದರಿಂದಾಗಿ ಅನುಭವಿಸಿದೆ. ಚಾರಿತ್ರಿಕ ವಿಜ್ಞಾನದ ಕ್ಷೇತ್ರಕ್ಕುಂಟಾಗಿರುವ ನಷ್ಟವೂ ಅಷ್ಟೇ ಪ್ರಮಾಣದ್ದು. ಈ ಉದಾತ್ತ ಚೇತನವು ನಿಷ್ಪಂದವಾಗಿರುವುದರ ಪರಿಣಾಮವಾಗಿ ಉಂಟಾಗುವ ಕೊರತೆಯನ್ನು ಸದ್ಯದಲ್ಲೇ ನಾವು ನೋಡುತ್ತೇವೆ.'' ನಂತರ ಲೀಬ್‌ನೆಖ್ಟ್ ಜರ್ಮನ್ ಭಾಷೆಯಲ್ಲಿ ಭಾಷಣ ಮಾಡಿದರು: ''ಎಂದೆಂದಿಗೂ ಮರೆಯಲಾಗದ ನನ್ನ ಗುರು ಮತ್ತು ಪ್ರಾಮಾಣಿಕ ಮಿತ್ರನಿಗೆ ನನ್ನ ಪ್ರೀತಿ ಮತ್ತು ಕೃತಜ್ಞತೆಗಳನ್ನು ಅರುಹಲು ಜರ್ಮನಿಯಿಂದ ನಾನು ಬಂದಿದ್ದೇನೆ. ಮಾರ್ಕ್ಸ್ ಈ ಶತಮಾನದಲ್ಲಿ ಅತಿ ಹೆಚ್ಚಿನ ದ್ವೇಷಕ್ಕೆ ಪಾತ್ರನಾದ ವ್ಯಕ್ತಿ. ಆದರೆ ಆತ ಅತಿ ಹೆಚ್ಚಿನ ಪ್ರೀತ್ಯಾದರಗಳಿಗೆ ಪಾತ್ರನಾದ ವ್ಯಕ್ತಿಯೂ ಹೌದು. ಅತಿ ಹೆಚ್ಚಿನ ದ್ವೇಷಕ್ಕೆ ಗುರಿಯಾದುದು ಜನತೆಯ ಕರಾಳ ಶೋಷಕರಿಂದ ಮತ್ತು ಪ್ರೀತ್ಯಾದರಗಳನ್ನು ಗಳಿಸಿದ್ದು ಜಗತ್ತಿನ ಅಸಂಖ್ಯಾತ ಮರ್ದಿತ ಹಾಗೂ ಶೋಷಿತ ಜನತೆಯಿಂದ. ಇವರೆಲ್ಲಾ ಆತನನ್ನು ಪ್ರೀತಿಸುವುದು ಆತ ಇವರನ್ನೆಲ್ಲಾ ಹಿಂದೆಂದೂ ಕಾಣದ ಅಭಿಮಾನ ಮತ್ತು ಪ್ರೀತಿಗಳಿಂದ ಕಂಡನೆಂಬ ಕಾರಣಕ್ಕಾಗಿ. ಈಗ ನಿಧನನಾಗಿರುವ ಮಾರ್ಕ್ಸ್, ದ್ವೇಷಿಸಲು ಎಷ್ಟು ಶಕ್ತನಾಗಿದ್ದನೋ ಪ್ರೀತಿಸಲು ಅದಕ್ಕಿಂತಲೂ ಹೆಚ್ಚು ತವಕಿಸುತ್ತಿದ್ದ. ಆತನ ದ್ವೇಷಕ್ಕೆ ಪ್ರೀತಿಯೇ ಮೂಲ. ಆತನ ಹೃದಯವು ಆತನ ಬುದ್ಧಿಶಕ್ತಿಯಂತೆ ವಿಶಾಲವಾದುದು. ಆತನ ಪರಿಚಯವಿದ್ದವರಿಗೆಲ್ಲಾ ಇದು ತಿಳಿದೇ ಇದೆ.''

ಇಂತಹ ಅವರ್ಣನೀಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ಕೇವಲ ತಮ್ಮ ಬುದ್ಧಿಶಕ್ತಿ ಮಾತ್ರದಿಂದಲೇ ಮಾರ್ಕ್ಸ್ ಸಫಲರಾಗಲಿಲ್ಲ. ಸತತವಾದ ಹೋರಾಟದ ಅವರ ಬದುಕಿನಲ್ಲಿ ಕೆಲವೊಮ್ಮೆ ಅವರು ಮಾನವ ಸ್ವಭಾವದ ನಿಸ್ತೇಜವನ್ನು ಅನುಭವಿಸಿಯೂ ಇದ್ದಿರಬಹುದು. ಅಂತಹ ಸಂದರ್ಭಗಳಲ್ಲೆಲ್ಲಾ ಅವರಿಗೆ ಆಸರೆ ದೊರೆತದ್ದು ಅವರ ಪರಮಮಿತ್ರ ಏಂಗಲ್ಸರಲ್ಲಿ. ಈತನ ಔದಾರ್ಯ, ತ್ಯಾಗ ಮತ್ತು ನಿಷ್ಠೆ ಅಪಾರವಾದುದು.

ಇತಿಹಾಸಪ್ರಸಿದ್ಧವಾದ ವ್ಯಕ್ತಿಗಳ ಬಾಂಧವ್ಯಗಳು ಎಷ್ಟೋ ಇವೆ; ಆದರೆ ಇವರಿಬ್ಬರ ಬಾಂಧವ್ಯಕ್ಕೆ ಸಮಾನವಾದದ್ದಿನ್ನೊಂದಿಲ್ಲ. ಇವರಿಬ್ಬರ ಜೀವನದ ಕೊಡುಗೆಯನ್ನು ವಿಭಾಗಿಸಿ ಇದಿಷ್ಟು ಒಬ್ಬರದು, ಮಿಕ್ಕಿದ್ದು ಇನ್ನೊಬ್ಬರದು ಎಂದು ಹೇಳಬರುವುದಿಲ್ಲ. ಆದರೂ ಅವರಿಬ್ಬರ ವೈಶಿಷ್ಟ್ಯಗಳೂ ಸ್ವತಂತ್ರವಾಗಿ ಉಳಿದಿವೆ. ಒಬ್ಬನ ಮೊಂಡುತನ, ಇನ್ನೊಬ್ಬನ ಛಲ : ಇದಕ್ಕೆ ನಿದರ್ಶನವಿಲ್ಲದಿಲ್ಲ. ಗುಟ್ಟಾಗಿಯೇ ಆದರೂ ಸರಿ, ಪ್ರತಿಯೊಬ್ಬನೂ ತನ್ನ ತನ್ನ ವ್ಯಕ್ತಿತ್ವ ವಿಶೇಷವನ್ನು ಕಾಪಾಡಿಕೊಂಡೇ ಬಂದಿರುವುದು ಮಾರ್ಕ್ಸ್ ಏಂಗಲ್ಸರ ಸಾಧನೆಯಲ್ಲೊಂದು. ಆದರೆ ಇತರರಲ್ಲಿ ಆಗಾಗ ಕಾಣಬರುವ ಸಣ್ಣತನದ ಲವಲೇಶವೂ ಇದರಲ್ಲಿಲ್ಲ. ಅವರಿಬ್ಬರ ಚಿಂತನೆ ಮತ್ತು ಬೆಳವಣಿಗೆಗಳು ಹೆಚ್ಚಿದಷ್ಟೂ ಅವರಿಬ್ಬರು ತಮ್ಮ ವ್ಯಕ್ತಿತ್ವ ವಿಶೇಷವನ್ನೂ ಉಳಿಸಿಕೊಳ್ಳುವುದರಲ್ಲಿ ಸಮರ್ಥರಾದರು.

ಹೊರಗಿನ ಚರ್ಯೆಗಳಲ್ಲಿ ಇಬ್ಬರೂ ವಿಭಿನ್ನರಾದವರು. ಏಂಗಲ್ಸ್ ಎತ್ತರದ ನಸು ಹೊಂಬಣ್ಣದ ವ್ಯಕ್ತಿ; ಒಬ್ಬ ಇಂಗ್ಲಿಷ್ ನಾಗರಿಕನ ನಡೆವಳಿಕೆ, ಠೀವಿ ಅವರದ್ದು. ಉಡುಪಿನ ಬಗೆಗೆ ಸಾಕಷ್ಟು ಕಳಕಳಿ ಅವರಲ್ಲಿ. ಸೈನ್ಯದಲ್ಲಿದ್ದು ನಂತರ ಕಛೇರಿಯಲ್ಲಿ ಕೆಲಸ ಮಾಡಿದ್ದ ಅವರಿಗೆ ಯಾವಾಗಲೂ ಒಂದು ನಮೂನೆಯ ಶಿಸ್ತು. ಅವರೊಮ್ಮೆ ಉದ್ಗರಿಸಿದ್ದುಂಟು : ''ಅರವತ್ತು ಜನ ಉನ್ನತ ಸಲಹೆಗಾರರಿದ್ದಾರೆನ್ನೋಣ. ಅವರು ಗುಂಡಗೆ ಬರೆಯಲೂ ಸಹ ಅಶಕ್ತರಿರಬಹುದು; ಪುಸ್ತಕಗಳನ್ನೇನೋ ಚೆನ್ನಾಗಿ ತಿರುವಿ ಹಾಕಿರಬಹುದು ಅವರೆಲ್ಲಾ. ಆದರೇನು ಪ್ರಯೋಜನ ? ಅವರು ಹೇಳುವ ವಿಷಯಗಳ ತಲೆ-ಬಾಲ ಕಡೆಗೆ ಅವರಿಗೇ ತಿಳಿಯದೆ ಹೋಗಬಹುದು. ಅಂತಹ ಅರವತ್ತು ಮಂದಿಗೆ ಬದಲು ಆರು ಜನ ಕಾರಕೂನರನ್ನು ಕೊಡಿ. ಅವರನ್ನುಪಯೋಗಿಸಿಕೊಂಡು ಸರಳವಾದ ಹಾಗೂ ಪರಿಣಾಮಕಾರಿಯಾದ ಆಡಳಿತ ಕ್ರಮವನ್ನು ನಾನು ರಚಿಸಬಲ್ಲೆ.'' ಏಂಗಲ್ಸ್ ಮ್ಯಾಂಚೆಸ್ಟರ್ ಸ್ಟಾಕ್ ಎಕ್ಸ್‌ಛೇಂಜ್‌ನಲ್ಲಿ ನುರಿತಿದ್ದವರು, ಆದರ ಗಳಿಸಿದ್ದವರು; ಬ್ರಿಟನ್ನಿನ ಬಂಡವಾಳಶಾಹಿಯಲ್ಲಿ ಪ್ರತ್ಯಕ್ಷ ಅನುಭವ ಪಡೆದಿದ್ದವರು, ಅದರ ಸುಖವನ್ನು ಸ್ವತಃ ಅರಿತಿದ್ದವರು. ಅಲ್ಲಿಯ ಕ್ರೀಡೆಗಳು, ಕ್ರಿಸ್‌ಮಸ್ ಪಾರ್ಟಿಗಳು, ಎಲ್ಲಾ ಅವರು ಕಂಡಿದ್ದರು. ಆದರೂ ಆತ ಬೌದ್ಧಿಕ ಕ್ಷೇತ್ರದ ನಾಯಕ; ದುಡಿಯುವ ಜನತೆಯ ಮುಂದಾಳು; ಅವರ ಹೋರಾಟಗಳಲ್ಲಿ ಸಹಭಾಗಿ. ಈ ಪಾತ್ರದಲ್ಲಿ ಲಂಡನ್ನಿನ ಒಂದು ನಿಕೃಷ್ಟಭಾಗದಲ್ಲಿ ಅವರಿಗೊಂದು ಪುಟ್ಟಮನೆ. ಆ ಮನೆಯಲ್ಲೊಂದು ಶ್ರೇಷ್ಠ ಸಂಪತ್ತು. ಆಕೆ ಐರ್ಲೆಂಡಿನ ಕನ್ಯೆ. ಬಂಡವಾಳ ಜಗತ್ತಿನಲ್ಲಿ ಸೊರಗಿಹೋದಾಗ ಆಕೆಯ ಮೃದು ತೆಕ್ಕೆಯಲ್ಲಿ ಇವರಿಗೆ ಸೌಭಾಗ್ಯದ ಪ್ರಾಪ್ತಿ.

ಇದಕ್ಕೆ ವಿರುದ್ಧವಾಗಿ ಮಾರ್ಕ್ಸ್ ಒಬ್ಬ ಮೋಟು ಮನುಷ್ಯ, ಸಾಕಷ್ಟು ದೃಢವಾಗಿ ಬೆಳೆದಿದ್ದ ವ್ಯಕ್ತಿ. ಮಿಂಚುವ ಕಪ್ಪನೆಯ ಕಣ್ಣುಗಳು. ಸಿಂಹದ ಕುತ್ತಿಗೆಯ ಕೂದಲಿನಂತೆ ಬೆಳೆದಿದ್ದ ಕಪ್ಪು ಕರಿ ಕೂದಲಿನ ತಲೆ. ಯಹೂದಿ ಜನಾಂಗದವನೆಂದು ಯಾರಾದರೂ ಗುರುತಿಸಬಹುದಿತ್ತು. ಸಂಕಷ್ಟಕ್ಕೆ ಸಿಲುಕಿದ ಸಂಸಾರವೊಂದರ ಯಜಮಾನ. ಲಂಡನ್ನಿನ ವ್ಯಾಪಾರ ವ್ಯವಹಾರಗಳ ನಡುವೆಯೇ ಇದ್ದರೂ ಅದರಲ್ಲಿ ಆತನದು ಕಿಂಚಿತ್ತಾದರೂ ಪಾಲಿಲ್ಲ. ಬೌದ್ಧಿಕ ಶ್ರಮಕ್ಕಂತೂ

ಮಿತಿಯೇ ಇಲ್ಲ. ಎಷ್ಟೋ ಬಾರಿ ಊಟಕ್ಕೂ ಪುರಸೊತ್ತಿಲ್ಲದಂತೆ ರಾತ್ರಿ ಅವೇಳೆಯವರೆಗೂ ಈತನ ಓದು ಬರಹ. ಅದರಿಂದಾಗಿ ಆತನ ಆರೋಗ್ಯವು ಅಷ್ಟಕ್ಕಷ್ಟೆ. ಆತನ ಬಹುಮೆಚ್ಚಿನ ಸುಖಾನುಭವವೆಂದರೆ ಚಿಂತನಾಶೀಲನಾಗುವುದರಲ್ಲಿ. ಕೌಂಟ್ ಫಿಕ್ಟೆ, ಹೆಗೆಲ್ ಇತ್ಯಾದಿ ಜರ್ಮನ್ ಬುದ್ಧಿಜೀವಿಗಳ ಸಾಲಿನಲ್ಲಿ ಮೊದಲಿಗ. ಅವರು ಆಗಾಗ ಹೇಳುತ್ತಿದ್ದುದುಂಟು: "ಸ್ವರ್ಗದ ಎಷ್ಟೋ ಅದ್ಭುತಗಳಿಗಿಂತಲೂ ಒಬ್ಬ ನಿಕೃಷ್ಟ ಮಂದ ಬುದ್ಧಿಯವನ ದೋಷಾತ್ಮಕ ಚಿಂತನೆಯ ತುಣುಕಿನಲ್ಲೂ ಸಹ ಹೆಚ್ಚು ಗಂಭೀರವಾದ ಅದ್ಭುತ ಅಡಕವಾಗಿರಲು ಸಾಧ್ಯ." ಆದರೆ ಮಾರ್ಕ್ಸ್ ಅವರ ಚಿಂತನೆಯಲ್ಲಿ ಒಂದು ಸೊಗಸಿದೆ. ಅದೆಂದರೆ ಎಲ್ಲ ಚಿಂತನೆಯನ್ನು ಕಾರ್ಯರೂಪಕ್ಕಿಳಿಸುವ ಹಂಬಲ, ಶಕ್ತಿ. ಚಿಕ್ಕ ವಿಷಯಗಳಲ್ಲಿ ಮಾರ್ಕ್ಸ್ ಎಷ್ಟೋ ಬಾರಿ ಅವ್ಯವಹಾರಿ. ಆದರೆ ಪ್ರಮುಖ ವಿಷಯಗಳಲ್ಲಿ ಅಸಾಧಾರಣವಾದ ಕಾರ್ಯಶಕ್ತಿ. ಒಂದು ಚಿಕ್ಕ ಸಂಸಾರವನ್ನು ಸರಿಯಾಗಿ ನಡೆಸಲಾರದಿದ್ದ ಈ ವ್ಯಕ್ತಿ ಜನತೆಯ ಒಂದು ಬೃಹತ್ಸೇನೆಯನ್ನು ಸಂಘಟಿಸಿ ವಿಶ್ವವನ್ನೇ ಬದಲಾಯಿಸಲು ಸಮರಕ್ಕಿಳಿದು ಯಶಸ್ಸನ್ನು ಪಡೆಯುವಷ್ಟು ಮೇಧಾಶಕ್ತಿ ಹೊಂದಿದ್ದ.

ಶೈಲಿಯು ವ್ಯಕ್ತಿತ್ವದ ಸೂಚಕವೆಂದು ಕೆಲವರ ಅಭಿಪ್ರಾಯ. ಲೇಖನಶೈಲಿಯಲ್ಲಿ ಮಾರ್ಕ್ಸ್-ಏಂಗಲ್ಸರು ತೀರಾ ಭಿನ್ನರೆಂದೇ ಹೇಳಬೇಕು. ಇಬ್ಬರೂ ಭಾಷಾ ಪ್ರಯೋಗದ ವೈವಿಧ್ಯಗಳಲ್ಲಿ ನುರಿತವರು, ಪಾಂಡಿತ್ಯ ಪಡೆದಿದ್ದವರು; ಇಬ್ಬರೂ ಹಲವಾರು ಭಾಷೆಗಳಲ್ಲಿ ಸುಲಲಿತವಾಗಿ ವ್ಯವಹರಿಸಬಲ್ಲವರಾಗಿದ್ದರು. (ಮಾರ್ಕ್ಸ್ ತಮ್ಮ ಕಡೆಯ ವರ್ಷಗಳಲ್ಲಿ ಸಂಸ್ಕೃತಾಭ್ಯಾಸ ಆರಂಭಿಸಿದ್ದರು.) ಹಾಗೆ ನೋಡಿದರೆ ಏಂಗಲ್ಸರಿಗಿದ್ದ ಭಾಷಾಪಾಂಡಿತ್ಯ ಹೆಚ್ಚಿನದು. ಆದರೆ ಅವರು ತಮ್ಮ ಭಾಷೆಯಲ್ಲಿ (ಜರ್ಮನ್) ಬರೆಯಲಾರಂಭಿಸಿದರೆ ಒಂದು ಪದ ಹೆಚ್ಚಿಲ್ಲ, ಒಂದು ಪದ ಕಡಿಮೆಯಿಲ್ಲ, ಎಂಬಂತೆ ಅರ್ಥದ ಅಭಿವ್ಯಕ್ತಿ ನೇರವಾಗಿ ಮಾಡಿಕೊಡಬಲ್ಲವರು. ಮಾರ್ಕ್ಸ್ ಅವರ ಶೈಲಿ ಇದರಿಂದ ಭಿನ್ನವಾದುದು. ಅವರ ಭಾಷಾಪ್ರಯೋಗದಲ್ಲಿ ಲಾಲಿತ್ಯ ಕಡಿಮೆ, ಪ್ರಯಾಸ ಸ್ವಲ್ಪ ಜಾಸ್ತಿ. ಅವರ ಪತ್ರಗಳಲ್ಲೂ ಅಷ್ಟೆ. ಹೇಳುವ ರೀತಿಯಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಅವರು ಶ್ರಮಪಟ್ಟಿರುವುದು ಅವರ ಬೇರೆ ಬೇರೆ ಕಾಲದ ಪತ್ರಗಳಿಂದ ತಿಳಿಯಬಹುದು. ಇಂಗ್ಲೆಂಡಿನಲ್ಲಿ ನೆಲೆಸಿದನಂತರ ಅವರು ಬರೆದ ಕೃತಿಗಳಲ್ಲಿ ಇಂಗ್ಲಿಷ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳ ಪದ ಸಮೂಹಗಳು ಆಗಾಗ್ಗೆ ಕಾಣಸಿಗುತ್ತವೆ. ಜರ್ಮನ್ ಭಾಷೆಯಲ್ಲಿ ಮಾತ್ರ ಅವರದು ಎತ್ತಿದ ಕೈ. ಈ ಭಾಷೆಯ ಬಳಕೆಯಲ್ಲಿ ಅವರದೆಷ್ಟು ಬಿಗಿ ಅಥವಾ ಹಿಡಿತವಿದೆಯೆಂದರೆ ಅವರ ಕೃತಿಗಳನ್ನು ಅನುವಾದಿಸುವುದು ಕಷ್ಟಸಾಧ್ಯವೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮಾರ್ಕ್ಸ್ ಅವರು ಜರ್ಮನ್ ಭಾಷೆಯಲ್ಲಿ ರಚಿಸಿದ್ದ ಕೃತಿಯೊಂದರ ಫ್ರೆಂಚ್ ಅನುವಾದವನ್ನು ಏಂಗಲ್ಸ್ ಒಮ್ಮೆ ಓದಿ, "ಮೂಲದ ಶಕ್ತಿ ಕಳೆದುಕೊಂಡಿದ್ದ ಸಪ್ಪೆಯಾದ ಕೃತಿ ಅದು" ಎಂದಿದ್ದರಂತೆ. ಆ ಫ್ರೆಂಚ್ ಅನುವಾದವನ್ನು ಸ್ವತಃ ಮಾರ್ಕ್ಸ್ ಅವರೇ ಪರಿಷ್ಕರಿಸಿದ್ದರಂತೆ! ಅಷ್ಟು ಅಚ್ಚುಕಟ್ಟು ಮಾರ್ಕ್ಸ್‌ರ ಜರ್ಮನ್ ಭಾಷಾಶೈಲಿ. ಲೆಸ್ಸಿಂಗ್ ಎಂಬೊಬ್ಬ ಜರ್ಮನ್ ಸಾಹಿತಿ ಶೈಲಿಯನ್ನು ಕುರಿತು ನುಡಿದಿದ್ದರು: "ಭಾಷಾ ಮಾಧ್ಯಮ ಹೇಗೆ ಪ್ರಯೋಗಿಸಬೇಕೆಂದರೆ ಕೃತಿಯೊಂದರಲ್ಲಿ ಸ್ವರೂಪ ಅಥವಾ ಪ್ರಕಾರ ಮತ್ತು ವಸ್ತು ಅಥವಾ ವಿಷಯಗಳು ಪರಸ್ಪರ ಗಂಡಹೆಂಡಿರಂತೆ ಹೊಂದಿಕೊಂಡಿರಬೇಕು." ಲೆಸ್ಸಿಂಗ್‌ರ ಶೈಲಿ ಹಾಗಿರಲಿಲ್ಲವೆಂದು ಕೆಲವರ ದೂಷಣೆ ಇದೆ. ಆದರೆ ಮಾರ್ಕ್ಸ್‌ರ ಶೈಲಿಯಲ್ಲಿ ಇದು ಅಕ್ಷರಶಃ ನಿಜ.

ಮಾರ್ಕ್ಸ್‌ರ ಉನ್ನತ ಮೇಧಾಶಕ್ತಿಯನ್ನು ಏಂಗಲ್ಸ್ ಮೊದಲಿನಿಂದಲೂ ಗುರುತಿಸಿ,

ತಾವೇನಿದ್ದರೂ ಪಕ್ಕವಾದ್ಯದವನಂತಿರಲು ಮಾತ್ರ ಸಾಧ್ಯವೆಂದೆಣಿಸಿ, ಅದಕ್ಕಿಂತಲೂ ಹೆಚ್ಚಿನ ಗಳಿಕೆಗೆ ಎಂದೂ ಅವರು ಹಾತೊರೆಯಲಿಲ್ಲ. ಹಾಗೆಂದಮಾತ್ರಕ್ಕೆ ಏಂಗಲ್ಸ್ ಕೇವಲ ಮಾರ್ಕ್ಸ್‌ರ ವ್ಯಾಖ್ಯಾನಕಾರ ಅಥವಾ ಸಹಾಯಕ ಎಂದು ಬಗೆಯಲಾಗದು. ಅವರು ಮಾರ್ಕ್ಸ್‌ರೊಡನೆ ಜೊತೆಗೂಡಿ ಕೆಲಸಮಾಡಿದ್ದು ನಿಜ; ಆದರೆ ಸಹಾಯಕರಾಗಲ್ಲ, ಸ್ವತಂತ್ರರಾಗಿ. ಬೌದ್ಧಿಕ ಕಾರ್ಯಗಳಲ್ಲಿ ಏಂಗಲ್ಸರದೇ ಒಂದು ಸ್ವತಂತ್ರ ಮಾರ್ಗವಿತ್ತು, ಪ್ರಕ್ರಿಯೆಯಿತ್ತು. ಮಾರ್ಕ್ಸ್ ಅವರಿಗೆ ಸಮನಾಗಿ ನಿಲ್ಲುವ ಧೀಶಕ್ತಿಯು ಅವರಲ್ಲಿತ್ತು. ಅವರಿಬ್ಬರ ಬಾಂಧವ್ಯ ಬೆಳೆದ ಮೊದಲ ದಿನಗಳಲ್ಲಿ ಒಂದು ಮುಖ್ಯ ಪ್ರಶ್ನೆಗೆ ಸಂಬಂಧಿಸಿದಂತೆ ಏಂಗಲ್ಸ್ ಮಾರ್ಕ್ಸ್‌ರಿಗಿಂತಲೂ ಹೆಚ್ಚಿನ ಕೊಡುಗೆ ನೀಡಿದ್ದರು. ಅದನ್ನು ಗಮನಿಸಿ ಆದಾದ ಇಪ್ಪತ್ತು ವರ್ಷಗಳ ನಂತರ ಒಮ್ಮೆ ಮಾರ್ಕ್ಸ್ ಒಂದು ಪತ್ರದಲ್ಲಿ ಬರೆದರು : ''ನಿನಗೆ ತಿಳಿದೇ ಇರುವಂತೆ ನಾನು ಸಿದ್ಧಾಂತ ರೂಪಿಸಿಕೊಳ್ಳುವುದರಲ್ಲಿ ಬಹಳ ನಿಧಾನಿಗ ; ಅಲ್ಲದೆ ನೀನು ಹೋದ ಹಾದಿಯಲ್ಲಿ ಬರುವುದು ತಾನೆ ನಾನು ಮಾಡುವುದು ?'' ಏಂಗಲ್ಸರ ಸ್ವತಂತ್ರ ವೈಚಾರಿಕ ಶಕ್ತಿಗೆ ಇದಕ್ಕಿಂತಲೂ ಉತ್ತಮ ನಿದರ್ಶನ ಬೇಕಿಲ್ಲ. ಮಾರ್ಕ್ಸ್‌ರಷ್ಟು ಆಳವಾಗಿ ಹೊಕ್ಕು ವಿಷಯಗಳ ಮೂಲಭೂತ ವಿಶ್ಲೇಷಣೆ ಮತ್ತು ನಿರೂಪಣೆಗಳಲ್ಲಿ ತೊಡಗುವುದು ಏಂಗಲ್ಸರ ಸ್ವಭಾವವಲ್ಲ. ಒಂದು ಪ್ರಶ್ನೆಗೆ ತಕ್ಷಣ ಅವರೊಂದು ಉತ್ತರ ನೀಡುವುದರಲ್ಲಿ ನಿಸ್ಸೀಮರು; ಆದರೆ ಅದರ ಆದ್ಯಂತಗಳನ್ನೆಲ್ಲಾ ಸಂಶೋಧಿಸಿ, ಏಕೆ ಆ ಉತ್ತರ ನೀಡಬೇಕು, ಅದೊಂದೇ ಉತ್ತರ ಹೇಗೆ ಸರಿ, ಬೇರೆ ಉತ್ತರಗಳು ಯಾವ ರೀತಿ ದುಷ್ಟವಾದುವು, ಎಂಬುದನ್ನೆಲ್ಲಾ ತಿಳಿಯಹೇಳಬೇಕಾದರೆ ಮಾರ್ಕ್ಸ್ ಅವರೇ ಗಟ್ಟಿಗರು. ಯಾವುದಾದರೊಂದು ಕ್ಷೇತ್ರದಲ್ಲಿ ಕಾರ್ಯನಿರತನಾಗಿರುವವನಿಗೆ ಏಂಗಲ್ಸರಿಗಿದ್ದ ಪರಿಜ್ಞಾನ ಬಹಳ ಉಪಯುಕ್ತ. ಆದ್ದರಿಂದಲೇ ರಾಜಕೀಯ ಪ್ರಶ್ನೆಗಳನ್ನು ಇತ್ಯರ್ಥ ಮಾಡುವಾಗ ಏಂಗಲ್ಸರೊಡನೆ ಚರ್ಚಿಸದೆ ಮಾರ್ಕ್ಸ್ ಯಾವ ತೀರ್ಮಾನವನ್ನೂ ಕೈಗೊಳ್ಳುತ್ತಿರಲಿಲ್ಲ.

ರಾಜಕೀಯ ಪ್ರಶ್ನೆಗಳಿಗೆ ಕೊಡುತ್ತಿದ್ದಷ್ಟು ಉತ್ತಮ ಸಲಹೆಗಳನ್ನು ಸೈದ್ಧಾಂತಿಕ ಪ್ರಶ್ನೆಗಳ ಸಂಬಂಧದಲ್ಲಿ ಏಂಗಲ್ಸರಿಂದ, ಮಾರ್ಕ್ಸ್‌ರಿಗೆ ನೀಡಲಾಗುತ್ತಿರಲಿಲ್ಲ. ಅದರಲ್ಲಿ ಮಾರ್ಕ್ಸ್‌ರ ಮುನ್ನಡೆಯೇ ಪ್ರಧಾನ. ಏಂಗಲ್ಸರ ಒಂದು ಸಲಹೆಯತ್ತ ಮಾತ್ರ ಮಾರ್ಕ್ಸ್ ಎಂದೆಂದೂ ಗಮನ ನೀಡಲಿಲ್ಲ. ತಮ್ಮ ವೈಜ್ಞಾನಿಕ ವಿಶ್ಲೇಷಣೆಯನ್ನು ಮುಗಿಸಿ ಬೇಗ ಬೇಗ ಕೃತಿಗಳನ್ನು ರಚಿಸಬೇಕೆಂದು ಹಲವೊಮ್ಮೆ ಏಂಗಲ್ಸ್ ಮಾರ್ಕ್ಸ್‌ಗೆ ಸೂಚಿಸಿದ್ದರು : ''ಅಷ್ಟೊಂದು ನಿಷ್ಠೆ ಮತ್ತು ಆತ್ಮಸಾಕ್ಷಿಯ ಕೆಲಸ ಕೈಬಿಡು. ಅದರಿಂದ ಜನಸಾಮಾನ್ಯರಿಗೆ ಯಾವ ನಷ್ಟವೂ ಸಂಭವಿಸುವುದಿಲ್ಲ. ಮುಖ್ಯ ವಿಷಯವೆಂದರೆ ನೀನು ಜಾಗ್ರತೆ ನಿನ್ನ ಪುಸ್ತಕಗಳನ್ನು ಬರೆದು ಮುಗಿಸಬೇಕು, ಅವನ್ನು ಪ್ರಕಟಿಸಬೇಕು; ನಿನ್ನ ವಿಷಯ ಸಂಗ್ರಹಣೆಯಲ್ಲಿ ಅಲ್ಲೊಂದು ಇಲ್ಲೊಂದು ಚಿಕ್ಕ ನ್ಯೂನತೆಯಿದ್ದರೆ ಏನೂ ಬಾಧಕವಿಲ್ಲ; ಆ ನ್ಯೂನತೆ ನಿನ್ನ ಕಣ್ಣಿಗೆ ಮಾತ್ರವಷ್ಟೇ ಬೀಳಲು ಸಾಧ್ಯ; ಬೇರೆಯವರಿಗೆ ಅಲ್ಲಿ ನ್ಯೂನತೆ ಕಾಣುವ ಸಂಭವವೇ ಇಲ್ಲ.'' ಹೀಗೆ ಉಪದೇಶಿಸುವುದು ಏಂಗಲ್ಸರ ಸ್ವಭಾವವಾದರೆ ಅಂತಹದನ್ನೆಲ್ಲಾ ತಿರಸ್ಕರಿಸುವುದು ಮಾರ್ಕ್ಸ್‌ರ ಸ್ವಭಾವ! ಯಾವೊಂದು ವಿಷಯವನ್ನೂ ಸಂಪೂರ್ಣ ಖಚಿತಪಡಿಸಿಕೊಳ್ಳದೆ ಮಾರ್ಕ್ಸ್ ಮುಂದುವರೆಯುತ್ತಿರಲಿಲ್ಲ.

ಮಹಾಭಾರತದ ಯಕ್ಷಪ್ರಶ್ನೆಯ ಪ್ರಸಂಗದಲ್ಲಿ ಧರ್ಮರಾಯನಿಗೆ ಯಕ್ಷನ ಒಂದು ಪ್ರಶ್ನೆ ''ಪಾಂಡಿತ್ಯ ಎಂದರೇನು ?'' ಎಂಬುದು. ಅದಕ್ಕೆ ವ್ಯಾಸರ ಉತ್ತರ : ''ಪಾಂಡಿತ್ಯವೆಂದರೆ ಪರಿಚ್ಛೇದ.'' ಅದನ್ನೇ ಇಂಗ್ಲಿಷಿನಲ್ಲಿ 'ಪ್ರಿಸಿಶನ್' (ಪಾಂಡಿತ್ಯ) (ನಿಷ್ಕೃಷ್ಟತೆ) ಎನ್ನುತ್ತೇವೆ. ಮಾರ್ಕ್ಸ್‌ರ ಪಾಂಡಿತ್ಯ ಅಂತಹದ್ದು. ಆದ್ದರಿಂದಲೇ ಅವರ ಜೀವಿತಕಾಲದಲ್ಲಿ ಬಂಡವಾಳವನ್ನು

ಕುರಿತ ಅವರ ಕೃತಿಗಳು ಸಮಗ್ರವಾಗಿ ಪ್ರಕಾಶವನ್ನು ಕಾಣಲಿಲ್ಲ. ಅವರ ಮರಣದ ನಂತರ ಏಂಗಲ್ಸ್ ಅವನ್ನು ಪ್ರಕಾಶಕ್ಕೆ ಸಿದ್ಧಗೊಳಿಸಬೇಕಾಯಿತು. ತಮ್ಮ ಕೃತಿಯ ಎರಡನೆಯ ಸಂಪುಟದ ರಚನೆಯಲ್ಲಿ ತೊಡಗಿದ್ದಾಗ ರಷ್ಯಾದೇಶದ ಕೃಷಿಕ್ಷೇತ್ರಕ್ಕೆ ಸಂಬಂಧಿಸಿದ ಒಂದು ಪ್ರಶ್ನೆ ಮಾರ್ಕ್ಸ್ ರವರನ್ನು ಕಾಡತೊಡಗಿತು. ಅದನ್ನು ಬಗೆಹರಿಸಿಕೊಳ್ಳದೆಯೂ ಅವರು ಮುಂದುವರೆಯ ಬಹುದಿತ್ತು. ಆದರೆ ಮಾರ್ಕ್ಸ್ ಅದಕ್ಕೆ ಸಿದ್ಧರಿರಲಿಲ್ಲ. ರಷ್ಯಾದ ವ್ಯವಸಾಯ ಇಲಾಖೆಯ ಎಲ್ಲ ವರದಿಗಳನ್ನೂ ಕಣ್ಣಲ್ಲಿ ಕಣ್ಣಿಟ್ಟು ಓದತೊಡಗಿದರು. ಹೀಗೆ ಎಷ್ಟೋ ತಿಂಗಳುಗಳೇ ಕಳೆದುವು. ತಮ್ಮ ಅಧ್ಯಯನವನ್ನು ಕುರಿತು ಏಂಗಲ್ಸರಿಗೆ ಒಂದು ಪತ್ರ ಬರೆದಾಗ ಅವರಿಗೆ ಬಂದ ಮಾರುತ್ತರ: ''ಆ ವರದಿಗಳೆಲ್ಲಾ ಬೆಂಕಿಯಲ್ಲಿ ಸುಟ್ಟುಹೋದರೆ ನನಗೆ ಆನಂದವೆನಿಸೀತು. ಆಗಲಾದರೂ ನಿನ್ನ ಎರಡನೆಯ ಸಂಪುಟ ತ್ವರಿತಗತಿಯಿಂದ ಸಾಗಬಹುದೆಂದು ನನ್ನ ನಂಬಿಕೆ.''

ಏಂಗಲ್ಸರ ಪಾಂಡಿತ್ಯ ಪೊಳ್ಳಾಗಿರಬೇಕೆಂದು ಇದರಿಂದ ತೋರಿದರೆ ಅದು ತಪ್ಪುಗ್ರಹಿಕೆ ಯಾಗುತ್ತದೆ. ಅವರ ತಾರ್ಕಿಕ ತೀಕ್ಷ್ಣಮತಿಗೆ ನಿಲುಕದ ವಸ್ತುವಿಲ್ಲ. ಸಾಹಿತ್ಯ-ತತ್ವಶಾಸ್ತ್ರ-ವಿಜ್ಞಾನ-ಅರ್ಥಶಾಸ್ತ್ರ ಇವೆಲ್ಲಾ ಅವರಿಗೆ ಕರತಲಾಮಲಕ. ಅವರ 'ಆ್ಯಂಟಿ-ಡ್ಯೂರಿಂಗ್' ಎಂಬ ಗ್ರಂಥದಲ್ಲೊಂದರಲ್ಲೇ ದೊರಕುವ ಪ್ರಾಸಂಗಿಕ ಪ್ರಸ್ತಾಪಗಳೇ ಸಾಕು ಇದಕ್ಕೆ ನಿದರ್ಶನ. ವೇದ, ಬೌದ್ಧಮತ, ಹೆಗೆಲ್ ಇತ್ಯಾದಿ ದಾರ್ಶನಿಕರು, ಟೆರೆನ್ಸ್ ಎಂಬ ಲ್ಯಾಟಿನ್ ನಾಟಕಕಾರ, ಬೈಬಲ್ಲಿನ ಅನೇಕ ಭಾಗಗಳು, ಮಧ್ಯಯುಗದ ಎಕ್ಹಾರ್ಟ್, ಫ್ರೆಂಚ್ ನಾಟಕಕಾರ ಮೋಲಿಯೆರ್, ಜರ್ಮನ್ ಕವಿ ಮತ್ತು ನಾಟಕಕಾರ ಗಯಟೆಯ ವಿವಿಧ ಕೃತಿಗಳು, ಹೊರೇಷಿಯೋ ಎಂಬ ಲ್ಯಾಟಿನ್ ಕವಿ, ಗ್ರೀಕ್ ಸಾಹಿತ್ಯದ ಅನೇಕ ಮೇರುಕೃತಿಗಳು, ಸ್ಪ್ಯಾನಿಷ್ ಭಾಷೆಯ ಡಾನ್ ಕ್ವಿಕ್ಸೋಟ್ (ಕಿಹೋಟೆ ಎಂದು ಇದರ ಉಚ್ಚಾರ), ಇಂಗ್ಲೆಂಡಿನ ಷೇಕ್ಸ್‌ಪಿಯರ್, ಹೀಗೆ ಎಲ್ಲದನ್ನೂ ಗ್ರಹಿಸಿರುವ ಕುಶಾಗ್ರಮತಿ ಏಂಗಲ್ಸರದು. ಅದನ್ನು ಮಾರ್ಕ್ಸ್ ಸಹ ಒಪ್ಪಿದ್ದರು. ಆದರೂ ದಿನನಿತ್ಯದ ಸಾರ್ವಜನಿಕ ಚಟುವಟಿಕೆಗಳಲ್ಲಿ ತಮಗಿಂತಲೂ ಹೆಚ್ಚು ಯಶಸ್ವಿಯಾಗ ಬಲ್ಲವರು ಏಂಗಲ್ಸ್ ಎಂಬುದು ಮಾರ್ಕ್ಸ್‌ರ ಗ್ರಹಿಕೆ. ಮಾರ್ಕ್ಸ್ ತಮ್ಮ ಸ್ನೇಹಿತನನ್ನೊಮ್ಮೆ ವಿವರಿಸಿದ್ದು ಹೀಗೆ: ''ಅವನೊಬ್ಬ ವಿಶ್ವಜ್ಞಾನಕೋಶ. ದಿನ ಅಥವಾ ರಾತ್ರಿಯ ಯಾವ ವೇಳೆಯಲ್ಲೇ ಆಗಲಿ ಆತ ಕೆಲಸಕ್ಕೆ ಸಿದ್ಧ. ಕುಡಿದಿರಲಿ, ಇಲ್ಲದಿರಲಿ, ಹೇಗೂ ಆತನ ಬುದ್ಧಿ ಸ್ಥಿಮಿತವೇ. ಬರೆಯುವುದರಲ್ಲಂತೂ ಅತಿಶೀಘ್ರ. ಚಟುವಟಿಕೆಯಲ್ಲಿ ದೆವ್ವವಿದ್ದಂತೆ; ಆತನಿಗೆ ಆಯಾಸದ ಪರಿಚಯವೇ ಇಲ್ಲ.''

'ನೋವೀ ರೈನಿಶ್ ರಿವ್ಯೂ' ಎಂಬ ಪತ್ರಿಕೆಯನ್ನು ಮಾರ್ಕ್ಸ್ ಕೆಲಕಾಲ ನಡೆಸಿದ್ದರು. ೧೮೫೦ರಲ್ಲಿ ಅದು ನಿಂತುಹೋಯಿತು. ಆದಾದಾಗ ಮಾರ್ಕ್ಸ್ ಮತ್ತು ಏಂಗಲ್ಸ್ ಜೊತೆಗೂಡಿ ಲಂಡನ್ನಿನಿಂದ ಒಂದು ಪತ್ರಿಕೆ ಹೊರಡಿಸಬೇಕೆಂದಿದ್ದರು. ೧೮೫೩ರ ಡಿಸೆಂಬರ್‌ನಲ್ಲಿ ಏಂಗಲ್ಸ್‌ಗೆ ಒಂದು ಪತ್ರದಲ್ಲಿ ಮಾರ್ಕ್ಸ್ ಹೀಗೆ ಬರೆದರು: ''ನಾವು ಮೊದಲೇ ಯೋಜಿಸಿದ್ದಂತೆ ಲಂಡನ್ನಿನಲ್ಲಿ ಇಂಗ್ಲಿಷ್ ವ್ಯವಹಾರ ಶಾಖೆ ಆರಂಭಿಸಿದ್ದಿದ್ದರೆ ನೀನೀಗ ಮ್ಯಾಂಚೆಸ್ಟರ್‌ನಲ್ಲಿರಬೇಕಾಗುತ್ತಿರಲಿಲ್ಲ. ಅಲ್ಲಿಯೋ ನಿನಗೆ ಸದಾ ನಿನ್ನ ವ್ಯವಹಾರಗಳದ್ದೇ ಬಾಧೆ. ನನಗೆ ಇಲ್ಲಿ ಸಾಲಗಳ ಸಂತಾಪ ತೀರುವಂತೆಯೂ ಇಲ್ಲ.'' ಏಂಗಲ್ಸ್ ತಮ್ಮ ತಂದೆಯ ವ್ಯಾಪಾರ ವ್ಯವಹಾರಗಳಲ್ಲಿ ಪಾಲ್ಗೊಂಡು ಕೆಲಸಮಾಡಲು ಮ್ಯಾಂಚೆಸ್ಟರ್‌ನಲ್ಲಿ ನೆಲೆಸಿದ್ದರು. ಅದರಿಂದಲಾದರೂ ಮಾರ್ಕ್ಸ್ ಅವರಿಗೆ ಹಣದ ಕೊರತೆ ಇರದಂತೆ ಮಾಡಲಾಗುತ್ತದೇನೋ ಎಂದು ಅವರ ಆಶಯ. ಸ್ವತಃ ವ್ಯಾಪಾರದಲ್ಲಿ ನಿರತರಾಗುವುದನ್ನು ಎಳ್ಳಷ್ಟೂ ಇಚ್ಛಿಸದಿದ್ದರೂ ಸಹ ಮಿತ್ರನ ಸಲುವಾಗಿ ಏಂಗಲ್ಸ್ ಈ ಸಂಪಾದನೆಯಲ್ಲಿ ತೊಡಗಿದ್ದರು. ೧೮೫೮ರ

ಬೇಸಿಗೆಯಲ್ಲಿ ವ್ಯಾಪಾರಕ್ಷೇತ್ರ ತೊರೆಯಬೇಕೆಂದು ಏಂಗಲ್ಸ್ ಬಯಸಿದರು; ಲಂಡನ್ನಿನಲ್ಲಿ ನಿಂತು ಬರವಣಿಗೆಗೆ ಗಮನ ನೀಡಬೇಕೆಂದು ಅವರ ಉದ್ದೇಶ. ಆದರೆ ಅದನ್ನು ಈಡೇರಿಸಲಿಲ್ಲ. ತಮ್ಮ ಸ್ನೇಹಿತನೂ ಪಕ್ಷದ ಉದ್ದಾಮ ಸೈದ್ಧಾಂತಿಕ ಪಟುವೂ ಆಗಿದ್ದ ಮಾರ್ಕ್ಸ್‌ಗಾಗಿ ತನ್ನ ಇಷ್ಟಕ್ಕೆ ವಿರುದ್ಧವಾಗಿಯಾದರೂ ಸರಿಯೆ, ಅಲ್ಲೇ ಇದ್ದು ಕೆಲಸ ಮಾಡಬೇಕೆಂದು ನಿರ್ಧರಿಸಿದರು. ಇಂತಹ ಉದ್ದೇಶಕ್ಕಲ್ಲವಾಗಿದ್ದರೆ ಏಂಗಲ್ಸ್ ಆ ತ್ಯಾಗಮಾಡಲು ಸಿದ್ಧರಿರುತ್ತಿರಲಿಲ್ಲವೇನೋ. ಅಂತೆಯೇ, ಅಂತಹ ವ್ಯಕ್ತಿಯ ತ್ಯಾಗವನ್ನಲ್ಲದೆ ಬೇರಿನ್ನೊಬ್ಬರ ತ್ಯಾಗಕ್ಕೆ ಕಟ್ಟುಬಿದ್ದಿರಲು ಮಾರ್ಕ್ಸ್ ಒಪ್ಪುತ್ತಿರಲಿಲ್ಲ.

ಮ್ಯಾಂಚೆಸ್ಟರ್‌ನಲ್ಲಿ ಬಹುಕಾಲ ಏಂಗಲ್ಸ್ ತಮ್ಮ ತಂದೆಯ ಕಾರ್ಖಾನೆಯಲ್ಲಿ ನೌಕರರಾಗಿಯೇ ಕೆಲಸಮಾಡಿದ್ದು; ನಂತರ ಪಾಲುದಾರರಾದರು. ಕೇವಲ ನೌಕರರಾಗಿದ್ದಾಗ ಅವರು ಆರ್ಥಿಕವಾಗಿ ಯಾವ ಮುಗ್ಗಟ್ಟೂ ಇಲ್ಲದೆ ದಿನಗಳನ್ನು ನೂಕಿದರೆನ್ನಲಾಗುವುದಿಲ್ಲ. ಆದಾಗ್ಯೂ ನೌಕರಿಗೆ ಸೇರಿದಾಗಿನಿಂದ ಮಾರ್ಕ್ಸ್ ಅವರಿಗೆ ಯಥೇಚ್ಛವಾಗಿ ಏಂಗಲ್ಸ್ ಸಹಾಯ ನೀಡಿದರು. ಅದರಿಂದ ಅವರಿಗೆ ಬೇಸರವಾಗಲಿ, ಪರಿತಾಪವಾಗಲಿ ಎಂದೂ ಉಂಟಾಗಲಿಲ್ಲ ವೆಂದರೆ ತಮ್ಮ ಮಿತ್ರನ ಬಗ್ಗೆ ಏಂಗಲ್ಸ್‌ರಿಗಿದ್ದ ಅಭಿಮಾನ ಮತ್ತು ಬಾಂಧವ್ಯದ ಆಳ ತಿಳಿಯುತ್ತದೆ. ಐದು, ಹತ್ತು ಮತ್ತು ಕಡೆಗೆ ನೂರು ಪೌಂಡುಗಳ ನೋಟುಗಳು ಮ್ಯಾಂಚೆಸ್ಟರ್ ನಿಂದ ಲಂಡನ್ನಿಗೆ ಬಂದುದಕ್ಕೆ ಯಾರೂ ಲೆಕ್ಕವಿಡಲಿಲ್ಲ. ಮಾರ್ಕ್ಸ್ ಮತ್ತು ಅವರ ಪತ್ನಿ ಸಂಸಾರ ಸರಿದೂಗಿಸುವುದರಲ್ಲಿ ವಿಮರ್ಶಾಬುದ್ಧಿಯನ್ನೇನೂ ತೋರುತ್ತಿರಲಿಲ್ಲ. ಹೀಗಾಗಿ ಆಗಾಗ್ಗೆ ಅವರಿಬ್ಬರೂ ಏಂಗಲ್ಸ್‌ಗೆ ಪತ್ರಗಳನ್ನು ಬರೆದು ಬಾಧಿಸುತ್ತಿದ್ದುದುಂಟು. ಅದು ಏಂಗಲ್ಸರಿಗೆ ಬೇಸರ ತರಲಿಲ್ಲ. ಒಮ್ಮೆ ಮಾರ್ಕ್ಸ್ ಎಲ್ಲೋ ಸಾಲ ಪಡೆದಿದ್ದರು. ಗಡುವಿನ ದಿನ ಬಂದು ಕಳೆದದ್ದು ಆಯಿತು. ಅದರ ಪರಿವೆಯೇ ಮಾರ್ಕ್ಸ್‌ಗೆ ಇರಲಿಲ್ಲ. ಇದೆಷ್ಟು ಅವ್ಯಾವಹಾರಿಕ ಪ್ರಜ್ಞೆ! ಆಗಲೂ ಏಂಗಲ್ಸ್ ತಮ್ಮ ಸಹನೆ ಕಳೆದುಕೊಳ್ಳಲಿಲ್ಲವಂತೆ. ಇನ್ನೊಮ್ಮೆ, ಮಾರ್ಕ್ಸ್‌ರ ಸಂಸಾರವನ್ನು ಚೊಕ್ಕಗೊಳಿಸಿ ಇನ್ನು ಮುಂದೆ ಯಾವ ಕ್ಲೇಶವೂ ಬರಬಾರದೆಂದು ಏಂಗಲ್ಸ್ ಸಾಕಷ್ಟು ಹಣ ಖರ್ಚುಮಾಡಿದರು. ಶ್ರೀಮತಿ ಮಾರ್ಕ್ಸ್ ಸಂಕೋಚಪಟ್ಟುಕೊಂಡು ತಮ್ಮ ಸಾಲಗಳ ಯಾದಿಯನ್ನು ಏಂಗಲ್ಸರಿಗೆ ಸಂಪೂರ್ಣವಾಗಿ ನೀಡಿರಲಿಲ್ಲ. ಮನೆಯ ಖರ್ಚುಗಳಲ್ಲಿ ಯಾವುದನ್ನಾದರೂ ಕಡಿಮೆ ಮಾಡಿ ತಾವೇ ಸಾಲ ತೀರಿಸಿಬಿಡಬೇಕೆಂದು ಅವರ ಸನ್ನಾಹ. ಆದರೆ ಹಾಗೆ ಮಾಡಲಾಗಲಿಲ್ಲ. ಸಂಸಾರ ಮತ್ತೆ ಯಥಾಸ್ಥಿತಿ. ''ಈ ಹೆಂಗಸರ ತಪ್ಪುಗಳಿಗೆ ಕೊನೆ ಮೊದಲುಂಟೆ ? ಯಾವಾಗಲೂ ಅವರನ್ನು ನಡೆಸಿಕೊಂಡು ಹೋಗುವವರು ಇರಲೇಬೇಕು.'' – ಹೀಗೆಂದು ಮೂದಲಿಕೆಯ ಮಾತು ಮಾರ್ಕ್ಸ್‌ರದು. ಆದರೆ ಸೌಜನ್ಯಮೂರ್ತಿ ಏಂಗಲ್ಸ್ ಹೇಳಿದ್ದಿಷ್ಟೆ: ''ಆಗಿದ್ದು ಆಯಿತಲ್ಲ, ಮತ್ತೆ ಹಾಗೆ ಆಗದಂತೆ ನಡೆದರೆ ಸಾಕು.''

ತನ್ನ ಮಿತ್ರನಿಗಾಗಿ ದಿನವಿಡೀ ವ್ಯಾಪಾರದಲ್ಲಿ ಮತ್ತು ಸ್ಟಾಕ್ ಎಕ್ಸ್‌ಛೇಂಜ್‌ನಲ್ಲಿ ದುಡಿಯುತ್ತಿದ್ದ ಏಂಗಲ್ಸ್ ರಾತ್ರಿಯ ವೇಳೆಯಲ್ಲೂ ಮಿತ್ರನಿಗಾಗಿ ಕೆಲಸಮಾಡಬೇಕಾಗಿ ಬರುತ್ತಿತ್ತು. ಮೊದಲ ದಿನಗಳಲ್ಲಿ ಮಾರ್ಕ್ಸ್‌ರ ಆಂಗ್ಲಭಾಷೆಯ ಮೇಲಿನ ಹಿಡಿತ ಅಷ್ಟು ಬಿಗಿಯಾಗಿರಲಿಲ್ಲ. ಆಗ ಅಮೆರಿಕಾದ ಪತ್ರಿಕೆ 'ನ್ಯೂಯಾರ್ಕ್ ಟ್ರಿಬ್ಯೂನ್'ಗೆ ಅವರು ಲೇಖನಗಳನ್ನು ಬರೆಯುತ್ತಿದ್ದರು. ಅದಕ್ಕಾಗಿ ಮಾರ್ಕ್ಸ್‌ರ ಅನೇಕ ಪತ್ರಗಳನ್ನೂ ಲೇಖನಗಳನ್ನೂ ಏಂಗಲ್ಸ್ ಭಾಷಾಂತರಿಸಿ ಕೊಡುತ್ತಿದ್ದರು. ನಂತರವೂ ಈ ಕಾರ್ಯವನ್ನೆಷ್ಟೋ ಬಾರಿ ಏಂಗಲ್ಸ್ ಮಾಡುತ್ತಿದ್ದುದುಂಟು.

ಇದೆಲ್ಲಕ್ಕಿಂತಲೂ ಹೆಚ್ಚಿನ ತ್ಯಾಗವೊಂದನ್ನು ಏಂಗಲ್ಸ್ ಮಾಡಿದ್ದರು. ಸ್ವಯಂ ತಾವು ಅನುಭವಿಗಳು, ಪಂಡಿತರು, ವೈಜ್ಞಾನಿಕ ವಿಶ್ಲೇಷಕರು. ಇವನ್ನೆಲ್ಲಾ ಉಪಯೋಗಿಸಿಕೊಂಡು

ಸ್ವತಂತ್ರವಾಗಿ ಎಂತಹ ಉನ್ನತ ಸ್ಥಾನವನ್ನಾದರೂ ಅವರು ಆಕ್ರಮಿಸಬಹುದಿತ್ತು. ಅಂದರೆ, ಮಾರ್ಕ್ಸ್‌ರ ಅಧ್ಯಯನ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ತಮ್ಮ ವಿದ್ವತ್ತನ್ನು ಪೂರಕವನ್ನಾಗಿ ಮಾತ್ರ ಮಾಡದೆ ಯಥೇಚ್ಛವಾಗಿ ಅವರದೇ ತತ್ವ ಪ್ರಣಾಲಿಕೆಯನ್ನು ಬೆಳೆಸಬಹುದಿತ್ತು. ಭಾಷಾಪ್ರಪಂಚ ಮತ್ತು ಮಿಲಿಟರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಮಾತ್ರವೇ ಏಂಗಲ್ಸ್ ಸಂಪೂರ್ಣ ಸ್ವತಂತ್ರರಾಗಿ ತಮ್ಮ ಅಧ್ಯಯನ, ಪ್ರಕಟಣೆಗಳನ್ನು ನಡೆಸಿದ್ದು. ಇನ್ನು ಮಿಕ್ಕ ಅವರ ಉದ್ಗ್ರಂಥಗಳೆಲ್ಲಾ ಮಾರ್ಕ್ಸ್‌ರ ಕೃತಿಗಳಿಗೆ ಪೂರಕವಾಗಿ ಬಂದಿವೆ. ದುಡಿಯುವ ವರ್ಗದ ಚಳುವಳಿ, ಹಿತ ಮತ್ತು ಧ್ಯೇಯಗಳಿಗಾಗಿ ಇಬ್ಬರೂ ಸಮನಾದ ಆಸ್ಥೆಯಿಂದ ಹೋರಾಡುತ್ತಿದ್ದುದರಿಂದ ಈ ರೀತಿಯ ಪೂರಕ ಅಧ್ಯಯನ ಸಾಧ್ಯವಾಗಿತ್ತು. ಇಬ್ಬರಲ್ಲಿ ಯಾರೇ ನೂತನ ವಿಷಯದತ್ತ ಗಮನ ಹೊರಳಿಸಲಿ, ಅದನ್ನು ತಕ್ಷಣ ದುಡಿಯುವ ವರ್ಗದ ಚಳುವಳಿಗೆ ಅಳವಡಿಸಲು ಆಸಕ್ತಿ ತೋರುತ್ತಿದ್ದರು. ಅಂತಹ ಪ್ರಯೋಜನ ದೊರೆತರೆ ಸಾಕು, ಇಬ್ಬರಿಗೂ ಒಂದೇ ತೆರನಾದ ತೃಪ್ತಿ. ಹೀಗೆ ಮಾರ್ಕ್ಸ್ ಏಂಗಲ್ಸರು ಬೌದ್ಧಿಕವಾಗಿ ಅವಿಭಾಜ್ಯವಾದಂತಹ ಜೀವನ ನಡೆಸಿದವರು.

ಪೂರ್ವ ಯೂರೋಪಿನಲ್ಲಿ ರಾಜಕೀಯ ಪ್ರಕ್ಷೋಭೆಯುಂಟಾಗುವ ಸೂಚನೆ ಕಂಡಾಗ ಏಂಗಲ್ಸ್ ಸ್ಲಾವ್ ಪಂಗಡದ ಭಾಷೆಗಳನ್ನು ಕಲಿಯಲಾರಂಭಿಸಿದರು. ''ನಮ್ಮಿಬ್ಬರಲ್ಲಿ ಒಬ್ಬರಿಗಾದರೂ ಆ ದೇಶಗಳ ಭಾಷೆ, ಇತಿಹಾಸ, ಸಾಮಾಜಿಕ ಸಂಸ್ಥೆಗಳು, ಇತ್ಯಾದಿಗಳು ತಿಳಿಯದಿದ್ದರೆ ಅವರ ಹೋರಾಟಕ್ಕೆ ನೇತೃತ್ವ ನೀಡುವುದು ಹೇಗೆ ?'' – ಇದು ಏಂಗಲ್ಸರ ಪ್ರಶ್ನೆ. ದೂರ ಪ್ರಾಚ್ಯದಲ್ಲಿ ಕೆಲವು ಘರ್ಷಣೆಗಳುಂಟಾದಾಗ ಪೌರ್ವಾತ್ಯ ಭಾಷೆಗಳನ್ನೂ ಕಲಿಯಲು ದ್ಯುಕ್ತರಾದರು. ಏಂಗಲ್ಸ್ ಅರಬ್ಬೀ ಭಾಷೆ ಕಲಿಯಲು ಹೊರಟು ಅಲ್ಲಿದ್ದ ನಾಲ್ಕುಸಾವಿರ ಕ್ರಿಯಾಧಾತುಗಳನ್ನು ಕಂಡು ಬೆಚ್ಚಿದರು; ಆದರೆ ಪರ್ಷಿಯನ್ ಭಾಷೆ ಸುಗಮವಾಗಿ ಮೂರು ವಾರಗಳಲ್ಲಿ ಕಲಿಯಬಹುದಲ್ಲಾ ಎಂದು ಹರ್ಷಿಸಿದರು. ಐರ್ಲೆಂಡಿನಲ್ಲಿ ಸಂಘರ್ಷ ಕಾವೇರಿದಾಗ ಏಂಗಲ್ಸ್ ಕೆಲ್ಟಿಕ್ ಭಾಷೆಯತ್ತ ಧಾವಿಸಿದರು. ಒಂದೇ ಮಿದುಳಿನಲ್ಲಿ ಎಷ್ಟು ಅಪಾರ ಶಕ್ತಿ ಕೂಡಿಕೊಳ್ಳಬಹುದೆಂಬುದಕ್ಕೆ ಮಾರ್ಕ್ಸ್-ಏಂಗಲ್ಸರ ನಿದರ್ಶನ ಮಹತ್ತರವಾಗಿದೆ.

ಮಿಲಿಟರಿ ಅಧ್ಯಯನದಲ್ಲಿ ಏಂಗಲ್ಸರದೇ ಕಡೆಯ ಮಾತು. 'ಜನರಲ್' (ದಂಡನಾಯಕ) ಎಂಬ ಅಡ್ಡ ಹೆಸರನ್ನು ಸಹ ಏಂಗಲ್ಸ್‌ಗೆ ಮಾರ್ಕ್ಸ್ ನೀಡಿದ್ದುದು ಈ ಕಾರಣದಿಂದಲೇ. ''ಬರುವ ಕ್ರಾಂತಿಕಾರಿ ಘಟ್ಟಗಳಲ್ಲಿ ಈ ಜ್ಞಾನದ ಸದುಪಯೋಗವಾಗುತ್ತದೆ'', ಎಂಬುದು ಏಂಗಲ್ಸರ ಆಳವಾದ ಅಧ್ಯಯನಕ್ಕೆ ಕಾರಣ. ಮಿಲಿಟರಿ ಸಂಘಟನೆಯ ಎಲ್ಲ ಅಂಶಗಳನ್ನೂ ಚಾಚೂ ತಪ್ಪದೆ ಅವರು ಅಭ್ಯಸಿಸಿದರು. ಅವರನ್ನು ಆಕರ್ಷಿಸಿದ ಇನ್ನೊಂದು ಕ್ಷೇತ್ರ ಪ್ರಾಕೃತಿಕ ವಿಜ್ಞಾನ. ಆದರೆ ಅವರು ನಡೆಸಿದ್ದ ಅಧ್ಯಯನವನ್ನೆಲ್ಲಾ ಒಂದು ಗ್ರಂಥರೂಪಕ್ಕಿಳಿಸುವುದು ಕಾಲದ ಅಭಾವದಿಂದಾಗಿ ಅವರಿಗೆ ಸಾಧ್ಯವಾಗಲಿಲ್ಲ.

ಅಧ್ಯಯನ, ಸಾಂಸಾರಿಕ ಜೀವನ, ರಾಜಕೀಯ ಸಂಘಟನೆ, ಆರ್ಥಿಕ ಚಿಂತನೆ, ಬೇರೆ ಹೋರಾಟಗಾರರಿಗೆ ಮಾರ್ಗದರ್ಶನ ನೀಡುವುದು, ವಿರೋಧಿ ರಾಜಕೀಯ ತತ್ವಗಳನ್ನು ವಿಶ್ಲೇಷಿಸಿ ಖಂಡಿಸುವುದು – ಹೀಗೆ ಮಾರ್ಕ್ಸ್-ಏಂಗಲ್ಸ್‌ರು ತೊಡಗಿದ ಕ್ಷೇತ್ರಗಳಿಗೆ ಲೆಕ್ಕವಿಲ್ಲ. ಯಾವ ಕ್ಷೇತ್ರದಲ್ಲೂ ಅವರನ್ನು ಮೀರಿಸುವಂತಹವರೂ ಯಾರೂ ಇಲ್ಲ. ಒಬ್ಬರಿಗೊಬ್ಬರು ಪರಸ್ಪರ ಬೆಂಬಲ ನೀಡಿಕೊಂಡು ನಲವತ್ತು ವರ್ಷಗಳ ಕಾಲ ಮಾನವ ಕಲ್ಯಾಣಕ್ಕೆ ಫಲಪ್ರದ ವಾಗುವಂತಹ ಶ್ರೇಷ್ಠ ಜೀವನ ನಡೆಸಿದ ಯುಗಪುರುಷರು ಮಾರ್ಕ್ಸ್ ಮತ್ತು ಏಂಗಲ್ಸ್. ಜನಸಾಮಾನ್ಯರ ಆಶೋತ್ತರಗಳನ್ನು ತಮ್ಮದನ್ನಾಗಿಸಿಕೊಂಡು ಎಂತಹ ತ್ಯಾಗಕ್ಕಾದರೂ

ಸಿದ್ಧರಾಗಿ, ಎಂದೆಂದಿಗೂ ತಮ್ಮ ಜೀವನದ ಕಷ್ಟಕಾರ್ಪಣ್ಯಗಳಿಗಾಗಿ ಮರುಗದೆ, ಮತ್ತು ಜಗತ್ತಿನ ಹೋರಾಟದ ಮಾರ್ಗದಲ್ಲಿ ತಮ್ಮಿರ್ವರ ಪ್ರಧಾನ ಪಾತ್ರಕ್ಕಾಗಿ ಯಾವತ್ತೂ ವೃಥಾ ಅಭಿಮಾನ ಪಟ್ಟುಕೊಳ್ಳದೆ, ನಿಸ್ವಾರ್ಥ ಹಾಗೂ ನಿಷ್ಕಪಟತೆಯಿಂದ ತಮ್ಮ ಸರ್ವಸ್ವವನ್ನೂ ವಿಶ್ವಕ್ಕೆ ನೀಡಿದ ಮಹಾನ್ ದಾರ್ಶನಿಕರು, ಹೋರಾಟಗಾರರು, ಮತ್ತು ಉತ್ತಮ ಮಾನವರು ಮಾರ್ಕ್ಸ್ ಮತ್ತು ಏಂಗಲ್ಸ್. ಅಷ್ಟು ಉದಾತ್ತ ಧ್ಯೇಯಗಳಿಗಾಗಿ ಅವರಿಬ್ಬರಲ್ಲಿ ಬೆಳೆದ ಎಂದೂ ಒಡೆಯಲಾಗದಂತಹ ಬಾಂಧವ್ಯ ಇತಿಹಾಸದಲ್ಲಿ ಇನ್ನಾವ ಇಬ್ಬರ ನಡುವೆಯೂ ಉಂಟಾಗಿಲ್ಲ. ಅಂತಹ ವಿಜ್ಞಾನಿ-ದಾರ್ಶನಿಕರ ತತ್ವಗಳ ಆಧಾರದ ಮೇಲೆ ಇಂದು ಹೋರಾಟ ನಡೆಸುವವರಿಗೆ ಅಂತಹ ಪ್ರತಿಭಾನ್ವಿತರ ನಾಯಕತ್ವ ದೊರಕಿದ್ದೇ ಒಂದು ಶ್ರೇಯಸ್ಸು. ಮಾರ್ಕ್ಸ್-ಏಂಗಲ್ಸರಂತಹ ಉದಾತ್ತ ವ್ಯಕ್ತಿತ್ವಗಳ ಆಸರೆಯಲ್ಲಿ ಮತ್ತು ನಿರ್ದೇಶನದಲ್ಲಿ ಕ್ರಾಂತಿಕಾರಿ ಹೋರಾಟ ನಡೆಸುವ ದುಡಿಯುವ ವರ್ಗಕ್ಕೆ ಅಂತಿಮ ಯಶಸ್ಸು ದೊರೆಯುವುದು ಚಾರಿತ್ರಿಕವಾಗಿ ಅನಿವಾರ್ಯ. ಮಾರ್ಕ್ಸ್ ಮತ್ತು ಏಂಗಲ್ಸ್ ಹೇಳಿದಂತೆ ''ಇತಿಹಾಸ ನಮ್ಮ ಕಡೆಗಿದೆ, ಯಶಸ್ಸು ನಮ್ಮದು.''

*– ಕೆಂಬಾವುಟ : ಆಗಸ್ಟ್ 1977*

# ಗಾಂಧೀಜಿ ನಮಗೆಷ್ಟು ಪ್ರಸ್ತುತರು ?

> ನ್ಯಾಯವಾದ ಕಾರಣವಿಲ್ಲದೆ ಆಸ್ತಿವಂತ ವರ್ಗದ ಖಾಸಗಿ ಆಸ್ತಿಯಿಂದ ಅವರನ್ನು ವಂಚಿಸುವುದಕ್ಕೆ ನಾನೆಂದೂ ಸಹಮತ ಹೊಂದಲಾರೆ. ...ನನ್ನ ಕನಸಿನ ರಾಮರಾಜ್ಯದಲ್ಲಿ ರಾಜಕುಮಾರ ಮತ್ತು ಭಿಕಾರಿಗಳಿಬ್ಬರ ಹಕ್ಕುಗಳನ್ನೂ ಕಾಯ್ದುಕೊಳ್ಳಲಾಗುವುದು. ವರ್ಗ ಯುದ್ಧವನ್ನು ತಡೆಯಲು ನನ್ನ ಇಡೀ ಶಕ್ತಿಯನ್ನು ವ್ಯಯಿಸಲು ಸಿದ್ಧನಿದ್ದೇನೆಂಬುದರ ಬಗ್ಗೆ ಅನುಮಾನ ಬೇಡ.
>
> **—ಎಂ. ಕೆ. ಗಾಂಧಿ**

> ಹಳ್ಳಿಗಳಲ್ಲಿ ರೈತರು ತೆರಿಗೆ ಪಾವತಿಸುವುದನ್ನು ನಿಲ್ಲಿಸುತ್ತಾರೆ. ...ಹಾಗೆ ನಿರಾಕರಿಸುವುದು ರೈತರಿಗೆ ಧೈರ್ಯವನ್ನು ತುಂಬುತ್ತದೆ, ತಾವು ಸ್ವತಂತ್ರ ಕ್ರಿಯೆಯಲ್ಲಿ ತೊಡಗಲು ಸಮರ್ಥರೆಂಬುದನ್ನು ಮನದಟ್ಟುಮಾಡಿಕೊಡುತ್ತದೆ. ಅವರ ಮುಂದಿನ ಹೆಜ್ಜೆ ಭೂಮಿಯನ್ನು ಆಕ್ರಮಿಸಿಕೊಳ್ಳುವುದೇ ಆಗಿರುತ್ತದೆ.
>
> **—ಮೋ. ಕ. ಗಾಂಧಿ**

ಗಾಂಧೀಜಿ ವಿಫಲರಾಗಿದ್ದಾರೆಂದು ತೀರ್ಮಾನಿಸಿರುವ ಕೆಲವು ಪಂಡಿತರು ಅವರು ಹಾಗೆ ವಿಫಲರಾದುದಕ್ಕೆ ಕಾರಣ ಕಂಡುಹಿಡಿಯುವುದರಲ್ಲಿ ಮಗ್ನರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಚಿಂತನೆಯನ್ನು ಅವರ ಚಾರಿತ್ರಿಕ ಸಂದರ್ಭದಲ್ಲಿ ಅರಿಯಲೆತ್ನಿಸುವ ಪ್ರಯತ್ನ ಸಂಗತವೆನಿಸುತ್ತದೆ.

ಗಾಂಧೀಜಿಯವರನ್ನು ಕುರಿತು ನವೀನವಾದ ದೃಷ್ಟಿಯಿಂದ ಏನಾದರೂ ಹೇಳಲು ನಾನು ಶಕ್ತನೆಂಬ ಭ್ರಮೆಯಾಗಲಿ ಮೌಢ್ಯವಾಗಲಿ ನನ್ನಲ್ಲಿಲ್ಲ. ೧೯೩೯ರಷ್ಟು ಹಿಂದೆಯೇ 'ಹರಿಜನ' ಪತ್ರಿಕೆಯಲ್ಲಿ ಬರೆಯುತ್ತಾ ಗಾಂಧೀಜಿ ಹೀಗೆಂದಿದ್ದರು: ''ನನ್ನ ಹಿತವಚನಗಳನ್ನೆಲ್ಲಾ ಮಿತಿಗೊಳಪಡಿಸುವ ಅಂಶವೊಂದಿದೆ. ತನ್ನ ಮತಿಗೂ ಅಂತಃಕರಣಕ್ಕೂ ಒಪ್ಪಿಗೆಯಾಗದ ನನ್ನ ನಿರ್ದೇಶನವನ್ನಾವುದನ್ನೂ ಯಾರೂ ಸ್ವೀಕರಿಸಬೇಕಾಗಿಲ್ಲ. ಅಂತಃಕರಣದ ಪ್ರೇರಣೆ ದೊರೆತಿದೆಯಾದರೆ ನನ್ನ ಬೋಧನೆಗೆ ಯಾರೂ ಕಟ್ಟುಬೀಳಬೇಡಿ. ಅಂತಹ ವಿಭಿನ್ನ ಅನುಭವವಿಲ್ಲದವರು ಮತ್ತು ನನ್ನ ಅನುಭವ ಹಾಗೂ ನಿರ್ಣಯಗಳು ಮಾಗಿದ ವ್ಯಕ್ತಿಯವೆಂದು ನಂಬುವವರು ಅದನ್ನು ಅನುಸರಿಸಬಹುದು.'' ತಮ್ಮ ನಾಯಕತ್ವದ ಬಗ್ಗೆ ಅನುಯಾಯಿಗಳು ಸ್ವಂತದ ವಿಶ್ಲೇಷಣೆಯಿಂದ ಹೊಮ್ಮುವ ಸ್ವತಂತ್ರ ನಿಲುವನ್ನು ತಾಳಲು ಇಷ್ಟು ದಾರ್ಢ್ಯದಿಂದ ಕರೆಕೊಟ್ಟ ಗಾಂಧೀಜಿಯವರು ತಮ್ಮ ಚಿಂತನೆಯನ್ನು ಕುರಿತು ನನ್ನಂತಹವರು ಕೂಡ ಮಾತನಾಡಿದರೆ ಕ್ರುದ್ಧರಾಗಲಾರರು; ಅದರ ಬದಲು ಉತ್ತೇಜನವಿತ್ತು ಚರ್ಚೆಯನ್ನು ಸ್ವಾಗತಿಸಿಯಾರು. ಮಂಥನದಿಂದ ಉದ್ಭವಿಸದ ನಿಷ್ಕರ್ಷೆಗೆ ಬೆಲೆಯಿಲ್ಲ. ಸದಾಕಾಲವೂ ಮಂಥನವು ಮುಂದುವರಿಯುತ್ತಿದ್ದರೆ ಗಾಂಧೀಜಿಯವರು ಜೀವಂತವಾಗಿ ಉಳಿಯಬಹುದೆಂಬ ಆಸೆ ನನ್ನಲ್ಲಿದೆ.

ಗಾಂಧೀಜಿಯವರಂತಹ ವ್ಯಕ್ತಿಗಳನ್ನು ಅವರ ಚಾರಿತ್ರಿಕ ಸಂದರ್ಭಗಳಿಂದ ಬೇರ್ಪಡಿಸಿ ಅಳತೆ ಮಾಡಿದರೆ ವಿನಾಕಾರಣ ತೆಗಳುವುದು ಅಥವಾ ಹೊಗಳುವುದು ಅನಿವಾರ್ಯ ವಾಗುತ್ತದೆ. ಅದರಿಂದ ಆಘಾತವೂ ಇಲ್ಲ, ಅನುಕೂಲವೂ ಇಲ್ಲ. ಉದಾಹರಣೆಗೆ, 'ಹಿಂದ್ ಸ್ವರಾಜ್' ಎಂಬ ಪ್ರಾಥಮಿಕ ಗ್ರಂಥದಲ್ಲಿ ಗಾಂಧೀಜಿಯವರು ೧೯೧೯ರಲ್ಲಿ ಹೇಳಿದ್ದನ್ನು ಸ್ಮರಿಸಬಹುದು : ''ಕಳೆದ ಐವತ್ತು ವರ್ಷಗಳಲ್ಲಿ ಕಲಿತಿರುವುದನ್ನು ತೊರೆಯುವುದರಿಂದ ಮಾತ್ರವೇ ಭಾರತ ಉದ್ಧಾರವಾಗಲು ಸಾಧ್ಯ. ರೈಲ್ವೆ, ಟೆಲಿಗ್ರಾಫ್, ಆಸ್ಪತ್ರೆಗಳು, ಲಾಯರುಗಳು, ಡಾಕ್ಟರುಗಳು ಇತ್ಯಾದಿಗಳೆಲ್ಲಾ ತೊಲಗಬೇಕು. ಉಚ್ಚ ವರ್ಗದವರೆನಿಸಿಕೊಂಡಿರುವವರು ಸಾಮಾನ್ಯ ರೈತರ ಜೀವನ ಮಾರ್ಗವನ್ನು, ನೈಜಸುಖವನ್ನು ನೀಡುವ ಒಂದೇ ಜೀವನ ವಿಧಾನವೆಂದು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸಬೇಕು.'' ಈ ಮಾತಿನ ಸಂಪೂರ್ಣಾರ್ಥವನ್ನು ಗ್ರಹಿಸಿದರೆ ಆ ತತ್ವಾರ್ಥವನ್ನೊಪ್ಪಲು ನಮ್ಮಿಂದ ಸಾಧ್ಯವಾಗದೆಂದು ನನ್ನ ನಂಬಿಕೆ. ಆಧುನಿಕ ಜೀವನದಿಂದುಂಟಾಗುವ ಜಟಿಲತೆಯನ್ನೆದುರಿಸಿ ಪರಿಹರಿಸುವುದೊಂದು ಮಾರ್ಗ, ಆ ಸಮಸ್ಯೆ ಬರಬಹುದೆಂಬ ಗಾಬರಿಯಿಂದ ಆಧುನಿಕ ತತ್ವವನ್ನೇ ತ್ಯಜಿಸುವುದಿನ್ನೊಂದು ಮಾರ್ಗ. ಎರಡನೇ ಮಾರ್ಗವನ್ನು ಹಿಡಿದರೆ ಮಾತ್ರ ನೈಜಸುಖ ದೊರೆಯುತ್ತದೆಂಬ ವಾದದಲ್ಲಿ 'ನೈಜಸುಖ' ಎಂದ ಪದದ ವ್ಯಾಪ್ತಿಯನ್ನು ಎಲ್ಲರೂ ಒಪ್ಪದಿರಬಹುದು. ''ಇರುವುದರಲ್ಲೇ ಸಂತೋಷಪಡು'' ಎಂಬುದನ್ನು ಬೋಧಿಸುವಾಗ ಸಾಮಾಜಿಕ ಏರುಪೇರುಗಳನ್ನು ಸಮರ್ಥಿಸುವ ದೃಷ್ಟಿಯಿಲ್ಲದಿದ್ದರೂ ಅದರ ಫಲಿತಾಂಶ ಅದೇ. ಇದರೊಟ್ಟಿಗೆ ಇನ್ನೊಂದಂಶ ವನ್ನೂ ಗಮನಿಸಬೇಕು. ಆಧುನಿಕ ಬೆಳವಣಿಗೆಗಳಿಂದ ಅಶಾಂತಿ ಹೆಚ್ಚುತ್ತದೆಂದು ಹೇಳಿದರೆ ಮಾನವ ತಾನು ನಿರ್ಮಿಸಿದ ವಸ್ತುಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವೇ ಇಲ್ಲವೆಂದೊಪ್ಪಬೇಕಾಗುತ್ತದೆ. ಸುವ್ಯವಸ್ಥಿತ ತಾತ್ವಿಕ ಆಧಾರದ ಮೇಲೆ ನಿಲ್ಲಬಹುದಾದ ಸಮಾಜದಲ್ಲಿ ಅಂತಹ ಭೀಕರ ಪರಿಸ್ಥಿತಿ ಅನಿವಾರ್ಯವೇನಲ್ಲ. ಗಾಂಧೀಜಿಯವರು ಮೂಲತಃ ಹೊರಸೂಸುವ ಭಾವನೆಯನ್ನು ಒಳಹೊಕ್ಕು ನೋಡಿದರೆ ಆಧುನಿಕ ಯಾಂತ್ರಿಕ ಬೆಳವಣಿಗೆಯಿಂದಾಗಿ ಕೆಲಸ ಮಾಡುವವನು ತಾನು ಉತ್ಪಾದನೆಗೆ ಉಪಯೋಗಿಸುವ ಯಂತ್ರದಿಂದ ದೂರೀಕರಿಸಲ್ಪಡುತ್ತಾನೆಂಬ ಕಳಕಳಿಯು ವ್ಯಕ್ತವಾಗುತ್ತದೆ. ಸಮಾಜದಲ್ಲಿ 'ದೂರೀಕರಣ' ಅಥವಾ ಅನಾಥಪ್ರಜ್ಞೆ ಒಂದು ಪೆಡಂಭೂತ. ಔದ್ಯೋಗೀಕರಣದ ಸಂದರ್ಭದಲ್ಲಿ ಇದು ಹೆಚ್ಚಿರುವುದನ್ನು ಕಳೆದ ಎರಡು ಶತಮಾನಗಳಲ್ಲಿ ಮಾನವ ಅನುಭವಿಸಿದ್ದಾನೆ. ಆದರೆ ಇದಕ್ಕೆ ಪರಿಹಾರ ಎರಡು ಶತಮಾನಗಳ ಹಿಂದಿನ ವ್ಯವಸ್ಥೆಯನ್ನು ಮರುಕಳಿಸುವುದಾಗಬೇಕಾಗಿಲ್ಲ. ಭಾರಿ ಉತ್ಪಾದಕ ಸಾಮಗ್ರಿಗಳನ್ನು ಸಾಮಾಜಿಕ ಆಸ್ತಿಯನ್ನಾಗಿ ಪರಿವರ್ತಿಸುವುದರ ಮುಖೇನ ಮಾನವನ ವ್ಯಾಕುಲತೆಯನ್ನು ನಿವಾರಿಸಲು ಸಾಧ್ಯ. ಇದನ್ನು ಯಶಸ್ವಿಯಾಗಿ ಪ್ರಯೋಗಕ್ಕೆ ತರುವ ಜವಾಬ್ದಾರಿ ನಮ್ಮದಾಗಬೇಕಷ್ಟೆ.

ಊಳಿಗಮಾನ್ಯತೆಯ ವಿರುದ್ಧ ಇಂದು ಮತ್ತು ಸ್ವಾತಂತ್ರ್ಯಪೂರ್ವದಲ್ಲಿ ಭಾರತ ಸೆಣಸಾಣ ನಡೆಸುತ್ತಲೇ ಬಂದಿದೆ. ಸಾಮಾಜಿಕ ಬದಲಾವಣೆಗಳು ಅನಿವಾರ್ಯವಾಗಿ ಮುಂದುವರಿ ಯುವುದು ಇತಿಹಾಸಸಿದ್ಧವಾದ ಅಂಶ. ಇಂತಹ ಬದಲಾವಣೆಯ ಮಾರ್ಗ ಮತ್ತು ವೇಗ ಎಲ್ಲೆಡೆಯಲ್ಲೂ ಒಂದೇ ತೆರನಾಗಿರುವುದಿಲ್ಲ. ಕೇವಲ ತೀವ್ರಾಸಕ್ತಿಯಿಂದಲೇ ಸಾಮಾಜಿಕ ಕ್ರಾಂತಿಯನ್ನುಂಟುಮಾಡಲು ಸಾಧ್ಯವಾಗಿದ್ದಿದ್ದರೆ ಕಳೆದ ಒಂದು ಶತಮಾನದಲ್ಲಿ ಭಾರತ ವೊಂದರಲ್ಲೇ ಹಲವಾರು ಕ್ರಾಂತಿಗಳಾಗಿಹೋಗಿರಬೇಕಾಗಿತ್ತು. ವೈಯಕ್ತಿಕ ಇಚ್ಛಾಶಕ್ತಿಯಿಂದ ಹೊರಗಣ ಪ್ರಪಂಚವನ್ನು ರೂಪಿಸಿಕೊಳ್ಳಲು ಬಹುಶಃ ಕನಸುಗಳಲ್ಲಿ ಮಾತ್ರ ಸಾಧ್ಯ.

ನಿಜಜೀವನದಲ್ಲಿ ಸುತ್ತಮುತ್ತಣ ವಿಶ್ವದ ಅರಿವು, ಅದರ ನಡತೆ, ಅಲ್ಲಿಯ ಜನಗಳ ಆಸೆ-ಆಕಾಂಕ್ಷೆಗಳು, ಅವರ ಪ್ರಜ್ಞಾಶಕ್ತಿ, ಅವರ ಹೋರಾಟಗಳ ಪರಂಪರೆ, ಅವರ ಆರ್ಥಿಕ ವ್ಯವಸ್ಥೆ, ಅವರ ಜೀವನತತ್ವ ಹೀಗೆ ಇನ್ನೂ ನೂರಾರು ವಿಷಯಗಳನ್ನು ಗಮನಿಸದೆ ಸಮಾಜವನ್ನು ಬದಲಿಸಹೊರಡುವುದು ಸಾಫಲ್ಯದ ಹಾದಿಯಲ್ಲ. ಈ ಅಂಶಗಳೆಲ್ಲಾ ದಶಕ-ದಶಕಕ್ಕೂ ಬದಲಾಗುವಂಥವು. ಒಂದೊಂದು ಚಾರಿತ್ರಿಕ ಸನ್ನಿವೇಶದಲ್ಲೂ ಹೊರಹೊಮ್ಮುವ ಭಾವನೆಗಳ ವ್ಯತ್ಯಾಸಕ್ಕೆ ಇದೂ ಒಂದು ಕಾರಣ. ಇದನ್ನೇಕೆ ಪ್ರಸ್ತಾಪಿಸಬೇಕಾಯಿತೆಂದರೆ ನಮ್ಮಲ್ಲಿ ಹಲವರು ಗಾಂಧೀಜಿಯವರನ್ನೋ ಅವರ ಸಮಕಾಲೀನರನ್ನೋ ಅಥವಾ ಅವರಿಗೂ ಹಿಂದಿನವರನ್ನೋ ಮೂದಲಿಸಿ ತರ್ಕವನ್ನು ಬೆಳೆಸುವುದುಂಟು. ಈ ತರ್ಕ ಬೆಳೆಸುವುದಷ್ಟೇ ಅವರು ಮಾಡುವ ಕೆಲಸ. ಇದು ಅವೈಜ್ಞಾನಿಕವೆಂದು ಒತ್ತಿಹೇಳಬೇಕಾದ ಅವಶ್ಯಕತೆ ಇದೆ. ಇದನ್ನು ಅರಿತುಕೊಳ್ಳಲು ನಿದರ್ಶನಗಳಿಗೆ ಪರದಾಡಬೇಕಾಗಿಲ್ಲ. ಗಾಂಧೀಜಿಯವರ ಹೋರಾಟವು ದಾದಾಭಾಯಿ ನವರೋಜಿಯವರು ಹೂಡಿದ ಹೋರಾಟಕ್ಕಿಂತಲೂ ತೀಕ್ಷ್ಣವಾಗಿತ್ತೆಂಬ ಕಾರಣದಿಂದ ದಾದಾಭಾಯಿಯವರು ಗಾಂಧೀಜಿಯವರಷ್ಟು ದೇಶಪ್ರೇಮಿಗಳಾಗಲಿ ಜನಪ್ರಿಯರಾಗಲಿ ಆಗಿರಲಿಲ್ಲವೆಂದು ತರ್ಕಿಸಿದರೆ ನೀವೇನೆನ್ನುತ್ತೀರಿ ? ಬಹುಶಃ ಮೂರ್ಖತನದ ಮಾತೆಂದೀರಿ. ಹಾಗಾದರೆ ಅವರಿಬ್ಬರ ನಡುವಣ ವ್ಯತ್ಯಾಸಕ್ಕೆ ಕಾರಣವೇನು ? ಅವರಿಬ್ಬರ ಕಾಲದ ಚಾರಿತ್ರಿಕ ಸಂದರ್ಭ, ಜನತೆಯ ಪ್ರಜ್ಞಾಮಟ್ಟ, ಹೋರಾಟದಲ್ಲಿ ಭಾಗವಹಿಸಿ ಬಲಪಡಿಸಿಕೊಂಡಿದ್ದ ಆಸ್ಥೆ ಮತ್ತು ಸಂವೇದನೆಗಳು. ಜನತೆಯ ನಾಡಿ ಮಿಡಿಯುವಂತೆ ಮಾಡುವುದು ನಾಯಕನ ಮಹತ್ವದ ಸಾಧನೆಯೆಂಬುದು ನಿಜ; ಆದರೆ ಮಿಡಿತ ಎಷ್ಟು ಪ್ರಖರವಾಗಿದೆಯೆಂದು ತಿಳಿದು ಆ ಮಟ್ಟಕ್ಕೊಪ್ಪುವ ಕಾರ್ಯಕ್ರಮವನ್ನು ರೂಪಿಸಿ ಜನತೆಯನ್ನು ಉನ್ನತ ಪ್ರಜ್ಞಾಮಟ್ಟಕ್ಕೊಯ್ದು ಕ್ರಮೇಣ ಸಮಾಜದ ನಿರ್ಧಾರಗಳನ್ನು ಕೈಗೂಡಿಸಿಕೊಳ್ಳುವ ಶಕ್ತಿಯನ್ನು ಜನತೆಗೆ ನೀಡುವುದು ನಾಯಕನ ಧೀಶಕ್ತಿಯನ್ನು ಸೂಚಿಸುತ್ತದೆ. ಗಾಂಧೀಜಿ ವಿಫಲರಾದರೆಂದಬ್ಬರಿಸುವವರೆಲ್ಲಾ ಈ ವಿಷಯವನ್ನರ್ಥ ಮಾಡಿಕೊಳ್ಳುವುದು ಅತ್ಯವಶ್ಯಕ. ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟವು ವಿಜಯದ ಪತಾಕೆಯನ್ನು ಹಾರಿಸುವ ಹಂತವನ್ನು ಮುಟ್ಟಿರುವ ಇಂದಿನ ದಿನಗಳಲ್ಲಿ ಗಾಂಧೀಜಿಯವರು ಆ ರಾಷ್ಟ್ರದಲ್ಲಿ ಆರಂಭಿಸಿದ ರಾಜಕೀಯ ಹೋರಾಟವನ್ನು ತೆಗಳಲು ಸಾಧ್ಯವೇ ? ಅಂದೇ ಅವರು ಈ ರೀತಿಯ ಹೋರಾಟವನ್ನು ಪ್ರಾರಂಭಿಸಲಿಲ್ಲವೆಂದು ಅವರನ್ನು ದೂರುವುದು ಬಾಲಿಶತ್ವದ ಪರಮಾವಧಿ ಎಂದು ಬೇರೆ ಹೇಳಬೇಕಾಗಿಲ್ಲ.

ಗಾಂಧೀಜಿಯವರನ್ನು ೧೯೩೩ರಲ್ಲಿ ಹಲವು ಜಮೀನ್ದಾರರು ಭೇಟಿಯಾಗಿ ತಮ್ಮ ಆಸ್ತಿಯ ಹಕ್ಕಿನ ರಕ್ಷಣೆಗಾಗಿ ಯಾಚಿಸಿದ್ದರು. ಅವರನ್ನು ಸಾಂತ್ವನಗೊಳಿಸಿ ಗಾಂಧೀಜಿಯವರು ಅವರಿಗೆ ಅಭಯ ನೀಡಿದರು. ಅವರ ಪಕ್ಷ ವಹಿಸಿ ಕಾದಾಡಲೂ ತಾವು ಸಿದ್ಧವೆಂದು ನುಡಿದು ಹೀಗೆಂದರು : ''ನನ್ನ ಕನಸಿನ ರಾಮರಾಜ್ಯದಲ್ಲಿ ರಾಜನಿಗೂ ರಕ್ಷಣೆಯುಂಟು, ಭಿಕಾರಿಗೂ ಉಂಟು.'' ರಾಮರಾಜ್ಯದಲ್ಲಿ ಭಿಕಾರಿಗೆ ರಕ್ಷಣೆ ನೀಡಬೇಕಾದರೆ ಅವನಿರಬೇಕೆಂದಾಗಲಿಲ್ಲವೇ ? ಭಿಕಾರಿಗಳಿರುವ ರಾಜ್ಯ ರಾಮರಾಜ್ಯ ಹೇಗಾದೀತು ? ಇಂತಹ ಪ್ರಶ್ನೆಗಳನ್ನು ಹಾಕಿ ಗಾಂಧೀಜಿಯವರನ್ನು ಜರಿಯುವುದು ಬಹಳ ಸುಲಭ; ಆದರೆ ಶತಮಾನಗಳ ದಾಸ್ಯದಲ್ಲಿ ತೊಳಲಿ, ತುಳಿತಕ್ಕೆ ಸಿಕ್ಕಿ ಸೊರಗಿಹೋಗಿದ್ದ ಶೋಷಿತಕೋಟಿಯನ್ನು ಮೇಲೆಬ್ಬಿಸಿ ತನ್ನ ಕಾಲಮೇಲೆ ನಿಲ್ಲುವಂತೆ ಸಂಘಟಿಸುವುದು ಸುಲಭದ ಮಾತಲ್ಲ. ಶೋಷಣೆಯಿಂದ ಹೊಟ್ಟೆ ಬೆಳೆಸಿಕೊಂಡು ಕುಳಿತಿರುವ ದರ್ಪದ ಪಾಳೆಯಗಾರರು ಉದ್ವೇಗದ ಮಾತುಗಳಿಂದ

ಸೋಲಿಸಲ್ಪಡುವುದಿಲ್ಲ; ಸರ್ಕಾರದ ಘೋಷಣೆಗಳಿಂದಲೂ ಅವರು ಕಂಗೆಡುವುದಿಲ್ಲ. ಅದಕ್ಕೆ ಸಾಕಷ್ಟು ನಿದರ್ಶನಗಳು ಇಂದಿನ ಪರಿಸ್ಥಿತಿಯಲ್ಲಿ ದೊರಕುತ್ತವೆ. ಭೂ ಸುಧಾರಣೆಯೊಂದರತ್ತ ದೃಷ್ಟಿ ಹೊರಳಿಸಿದರೆ ಸಾಕು; ಇನ್ನು ಜೀತಪದ್ಧತಿಯ ನಿರ್ಮೂಲನದ ಪ್ರಶ್ನೆ ಎತ್ತಬೇಕಾಗಿಲ್ಲ. ೧೯೩೪ರಲ್ಲಿ ಜಮೀನ್ದಾರರ ಹಿಡಿತ ಎಷ್ಟರಮಟ್ಟಿಗಿದ್ದಿತೆಂಬುದನ್ನು ಊಹಿಸದೆ ಗಾಂಧೀಜಿಯವರು ಜನಸಾಮಾನ್ಯರ ಹಿತಾಸಕ್ತಿಯನ್ನು ಅಲಕ್ಷಿಸಿ ಭೂಮಾಲೀಕರ ಪರವಾಗಿ ವಕಾಲತ್ತು ವಹಿಸಿದರೆಂದು ದೂರುವುದು ತಪ್ಪು. ಬ್ರಿಟಿಷ್ ವಸಾಹತುಶಾಹಿ, ಅವರ ಬೆಂಬಲಿಗರಾಗಿದ್ದ ಬಂಡವಳಿಗ ಹಾಗೂ ಭೂಮಾಲಿಕ ವರ್ಗ, ಮತ್ತು ಇವರಿಗೆಲ್ಲಾ ನಿಷ್ಠೆಯನ್ನು ಹೊಂದಿದ್ದ ಆಡಳಿತ ಯಂತ್ರ, ಇವುಗಳನ್ನೆಲ್ಲಾ ಒಟ್ಟಿಗೆ ಎದುರಿಸಬೇಕಾದರೆ ಬೇಕಾದ ಪ್ರಜ್ಞೆ ಮತ್ತು ಸಂಘಟನೆಗಳು ಎಂತಹವೆಂದು ಗಾಂಧೀಜಿಯವರಿಗೆ ತಿಳಿದಿರಲಿಲ್ಲವೇ? ಅವರಿಗೇ ತಿಳಿದಿರಲಿಲ್ಲವೆಂದರೆ ಬೇರಾರಿಗೂ ತಿಳಿಯಲು ಅಸಾಧ್ಯವಾಗಿದ್ದಿತೆಂಬುದನ್ನು ಮರೆಯಬಾರದು. ಹಾಗೆಂದರೆ ಗಾಂಧೀಜಿ ಅಶಕ್ತರಾಗಿದ್ದರೆಂದರ್ಥವೇ? ೧೯೩೪ರ ನಂತರದ ಚರಿತ್ರೆ ಅದಕ್ಕೆ ಉತ್ತರ ಕೊಡುತ್ತದೆ.

ಗಾಂಧೀಜಿಯವರ ಪ್ರತಿಯೊಂದು ಮಾತನ್ನೂ ಕಾರ್ಯಕ್ರಮವನ್ನೂ ಹೀಗೆ ವಿವರಿಸಬೇಕೆಂದು ನನ್ನ ವಾದವಲ್ಲ. ಬಿಹಾರದಲ್ಲುಂಟಾದ ಭೂಕಂಪದ ಪ್ರಹಾರವನ್ನೊಮ್ಮೆ ಗಾಂಧೀಜಿಯವರು ಅಲ್ಲಿಯ ಜನರ ಪಾಪಕ್ಕೆ ಭಗವಂತ ವಿಧಿಸಿದ ಶಿಕ್ಷೆಯೆಂದು ವರ್ಣಿಸಿದರು! ಇದರ ಪ್ರಕಾರ ಜಪಾನಿಯರು ಅತಿ ಕಟ್ಟಾ ಪಾಪಿಗಳು. ಭಗವಂತನಿಗೆ ಅವರ ಮೇಲೆ ವಿಪರೀತ ಸಿಟ್ಟು! ಹೀಗಾಗಿ ಹಲವಾರು ವಿಷಯಗಳನ್ನು ಕುರಿತು ಗಾಂಧೀಜಿ ನೀಡಿರುವ ವಿಶ್ಲೇಷಣೆಯನ್ನು ಕಂಡು ಅದರಲ್ಲಿ ಸಾಮರಸ್ಯ ಕಾಣುವುದರಲ್ಲಿ ನಾವು ವಿಫಲರಾದರೆ ಅಚ್ಚರಿಯೇನಿಲ್ಲ. ಆರೋಗ್ಯ ಭಾಗ್ಯಕ್ಕೆ ಸಂಬಂಧಿಸಿದ ಅವರ ಮಾತುಗಳನ್ನೆಲ್ಲಾ ನಾವು ಒಪ್ಪಲೇಬೇಕೇ? ೧೯೩೧ರ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರ ಧೋರಣೆಯನ್ನು ಆಗಲೇ ಹಲವರು ಸಿಟ್ಟಿನಿಂದ ಸಹಿಸಿದ್ದನ್ನು ಇತಿಹಾಸ ಉಲ್ಲೇಖಿಸುತ್ತದೆ. ಗಾಂಧಿ-ಇರ್ವಿನ್ ಒಪ್ಪಂದವನ್ನು ಮಾನಸಿಕ ತುಮುಲ ಮತ್ತು ದೈಹಿಕ ಸಂಕಷ್ಟಗಳಿಂದ ಅಧಿವೇಶನದ ಮುಂದಿಟ್ಟುದಾಗಿ ಜವಹರಲಾಲ್ ನೆಹರು ತಿಳಿಸುತ್ತಾರೆ. ಕರಾಚಿ ಅಧಿವೇಶನದಲ್ಲಿ ಗಾಂಧೀಜಿ ಹೇಳಿದ್ದನ್ನು ಬೇರಾರಾದರೂ ಹೇಳಿದ್ದಿದ್ದರೆ ಸದಸ್ಯರು ಅವನನ್ನು ಹತ್ತಿರದ ಸಮುದ್ರದೊಳಕ್ಕೆ ಎಸೆಯುತ್ತಿದ್ದರೆಂದು ಒಬ್ಬ ಪ್ರತಿನಿಧಿ ಉದ್ಗರಿಸಿದ್ದನಂತೆ. ಕ್ರಾಂತಿಕಾರಿ ಸಮಾಜವಾದದ ನಿಷ್ಠಾವಂತ ಪ್ರತಿಪಾದಕ ಭಗತ್ ಸಿಂಗ್ ಮತ್ತು ಆತನ ಇತರ ಸಂಗಾತಿಗಳು ಕರಾಚಿ ಅಧಿವೇಶನ ನಡೆಯುತ್ತಿದ್ದಾಗ ಗಲ್ಲಿಗೇರಿಸಲ್ಪಟ್ಟರೂ ಗಾಂಧೀಜಿ ಆ ಬಗ್ಗೆ ನಿರ್ಣಯವನ್ನು ಸ್ವೀಕರಿಸಲು ಒಪ್ಪಲಿಲ್ಲ. ಹರಿಜನರಿಗೆ ಪ್ರತ್ಯೇಕ ಚುನಾವಣಾರಂಗವನ್ನು ಕಲ್ಪಿಸಿದುದರ ವಿರುದ್ಧ ಸೆಪ್ಟೆಂಬರ್ ೧೯೩೨ರಲ್ಲಿ ಗಾಂಧೀಜಿ ಆಮರಣಾಂತ ಉಪವಾಸ ಕೈಗೊಂಡರು. ಅದನ್ನು ಕುರಿತು ಚರ್ಚಿಸುತ್ತಾ ನೆಹರು ಹೀಗೆ ಬರೆಯುತ್ತಾರೆ: ''ರಾಜಕೀಯ ಪ್ರಶ್ನೆಯೊಂದನ್ನು ಬಿಡಿಸಲು ಧಾರ್ಮಿಕ ಮತ್ತು ಭಾವೋದ್ರೇಕದ ಮಾರ್ಗವನ್ನು ಅನುಸರಿಸಿದ ಗಾಂಧೀಜಿಯವರನ್ನು ಕಂಡು ನಾನು ಉದ್ವಿಗ್ನನಾಗಿದ್ದೆ. ಅದೆಷ್ಟು ಸಲ ಅವರು ದೇವರ ಹೆಸರನ್ನು ಪ್ರಯೋಗಿಸಿದ್ದು! ಉಪವಾಸದ ದಿನವನ್ನು ಸಹ ದೇವರೇ ನಿಗದಿಮಾಡಿದ್ದೆಂದು ಹೇಳುವ ಮಟ್ಟಕ್ಕೂ ಅವರು ಹೋಗುತ್ತಿದ್ದರೇನೋ? ಇದೆಂತಹ ಅಪಾಯಕಾರಿ ಅಗ್ರಪಂಕ್ತಿಯನ್ನು ಹಾಕಿಕೊಡುವ ಮಾರ್ಗ!'' ೧೯೪೬ರಲ್ಲಿ ರಾಯಲ್ ಇಂಡಿಯನ್ ನೇವಿಯ ಸೈನಿಕರ ಪ್ರತಿಭಟನೆಯನ್ನು ಅಹಿಂಸೆಗೆ ವಿರುದ್ಧವೂ ಕೆಟ್ಟಮಾರ್ಗವನ್ನು ನಿರ್ದೇಶಿಸುವಂತಹ ಪ್ರವೃತ್ತಿಗೆ ಸಮಾನವಾದುದೆಂದೂ

ಗಾಂಧೀಜಿ ತೆಗಳಿ ತಳ್ಳಿಹಾಕಿದರು. ಇವೆಲ್ಲಾ ಅವರ ಅಂತಃಕರಣ ಪ್ರಮಾಣದ ಅನಿಸಿಕೆಗಳೆಂದು ಅದೆಷ್ಟೋ ಬಾರಿ ಅವರು ಹೇಳಿದ್ದಾರೆ. ಗಾಂಧೀಜಿಯವರ ಅಂತಃಕರಣದ ನಿರ್ದೇಶ ಬಲವತ್ತರವಾಗಿದ್ದುದು ನಿಜವಾದರೆ ಬೇರೆಯವರು ತಮ್ಮ ಅಂತಃಕರಣವನ್ನು ಶೋಧಿಸುವುದೂ ಅಷ್ಟೇ ಸಾಧುವಾಗಿದೆ. ಹಾಗೆ ಮಾಡಿದರೆ ಗಾಂಧೀಜಿಯವರ ನಿಷ್ಠೆಯನ್ನು ಪ್ರಶ್ನಿಸಿದಂತೇನೂ ಆಗುವುದಿಲ್ಲ. ಭಾರತದಲ್ಲಿ ಜಾತೀಯತೆಯ ಪಿಡುಗನ್ನು ಗಾಂಧೀಜಿಯವರು ಅರಿತು ಅದನ್ನು ತೊಡೆದುಹಾಕಲು ಶ್ರಮಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಪರಂಪರೆ, ಶಾಸ್ತ್ರೀಯ ಆಧಾರ, ಸಾಮಾಜಿಕ ಕರ್ತವ್ಯ ವಿಭಜನೆ ಇತ್ಯಾದಿ ವಿವಿಧ ರೀತಿಗಳಲ್ಲಿ ಜಾತೀಯ ವಿಂಗಡಣೆಯನ್ನು ವಿವರಿಸಬಹುದು. ಹಿಂದಾಗಲಿ ಇಂದಾಗಲಿ ಇಂತಹ ವ್ಯವಸ್ಥೆ ನ್ಯಾಯಯುತವಾಗಬಹುದೆಂದು ನನಗೆನಿಸುವುದಿಲ್ಲ. ಅಥವಾ ಅದು ಸಾರ್ವಕಾಲಿಕವಾದ ವ್ಯವಸ್ಥೆಯೆಂದೂ ಹೇಳಲಾಗದು. ಇಷ್ಟೆಲ್ಲಾ ಇರುವಾಗ ಗಾಂಧೀಜಿ ಹಲವು ಬಾರಿ ಸನಾತನಧರ್ಮಿಗಳು ತಾವೆಂದು ಘೋಷಿಸಿ ವರ್ಣಾಶ್ರಮ ವಿಭಜನೆಯನ್ನು ಒಪ್ಪಿಕೊಂಡಿದ್ದಾರೆ. ಅವರ ಒಂದು ಹೇಳಿಕೆ ಹೀಗಿದೆ: ''ವಂಶಪಾರಂಪರ್ಯಾಗತವಾದ ನಿಯಮಗಳು ನಿತ್ಯವಾದ ನಿಯಮಗಳೆಂದು ನನ್ನ ಅನಿಸಿಕೆ. ಅದನ್ನು ಬದಲಾಯಿಸಲೆತ್ನಿಸುವುದು ಗೊಂದಲಕ್ಕೆಡೆ ಮಾಡಿಕೊಡುತ್ತದೆ... ವರ್ಣಾಶ್ರಮ ಅಥವಾ ಜಾತಿವ್ಯವಸ್ಥೆಯು ಮಾನವ ಸ್ವಭಾವಕ್ಕೆ ಅಂಟಿಕೊಂಡು ಬಂದಿದೆ. ಹಿಂದೂ ಧರ್ಮವು ಅದನ್ನು ವಿಜ್ಞಾನದ ಮಟ್ಟಕ್ಕೇರಿಸಿದೆ.'' ಇದು ವಿವರಣಾತೀತವಾದ ಮತ್ತು ಒಪ್ಪಲಾಗದ ಹಾಗೂ ಅಪಾಯಕಾರಿ ಸಿದ್ಧಾಂತ. ಆದರೆ ಅದೇ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಅತ್ಯಂತ ಹೀನವಾದ ಅಮಾನವೀಯ ಕುಪದ್ಧತಿಯೆಂದು ಬಣ್ಣಿಸಿ ತಮ್ಮ ಇಡೀ ಜೀವನದಲ್ಲಿ ಆ ಪ್ರಶ್ನೆಗೆ ಪರಿಹಾರ ಹುಡುಕಿದರು. ತಮ್ಮ ಹೃದಯಾಂತರಾಳದಲ್ಲಿ ಈ ಜನತೆಗೆ ತಮ್ಮನ್ನು ತಾವು ಅರ್ಪಣೆ ಮಾಡಿಕೊಂಡರು. ಒಮ್ಮೆ ಅವರು ತಮ್ಮ ವೇದನೆಯನ್ನು ವ್ಯಕ್ತಪಡಿಸಿದ್ದು ಹೀಗೆ : ''ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತೀಯರು ಅಸ್ಪೃಶ್ಯರಾಗಿದ್ದಾರೆ, ಇದು ಅವರಿಗೆ ಭಗವಂತನು ವಿಧಿಸಿರುವ ಶಾಸ್ತಿ... ರಕ್ತಕಲುಷಿತವಾದ ನಮ್ಮ ಕೈಗಳನ್ನು ನಾವು, ಹಿಂದುಗಳು ತೊಳೆದುಕೊಳ್ಳದೆ ಬ್ರಿಟಿಷರು ಅವರು ಕೈ ತೊಳೆದುಕೊಳ್ಳಬೇಕೆಂದು ಒತ್ತಾಯಿಸಲು ನಮಗೆ ಹಕ್ಕುಂಟೆ ?... ಎಲ್ಲಿಯವರೆಗೆ ಅಸ್ಪೃಶ್ಯತೆಯನ್ನು ಹಿಂದೂಧರ್ಮದ ಅಂಗವಾಗಿ ನಾವಿಟ್ಟುಕೊಂಡಿರುತ್ತೇವೋ ಅಲ್ಲಿಯವರೆಗೆ ನಮಗೆ ಸ್ವಾತಂತ್ರ್ಯ ದಕ್ಕದು. ಭಾರತ ತಪ್ಪಿತಸ್ಥನ ಸ್ಥಾನದಲ್ಲಿದೆ... ನಮ್ಮ ಅಸಹಾಯಕ ಬಂಧುಗಳಿಗೆ ನಾವೆಸಗಿರುವ ಕ್ರೌರ್ಯದ ಪಾಪದಿಂದ ಮುಕ್ತರಾಗುವ ತನಕ ನಮಗೂ ಮೃಗಗಳಿಗೂ ಯಾವ ವ್ಯತ್ಯಾಸವೂ ಇಲ್ಲ.'' ಈ ಆಳವಾದ ಪರಿತಾಪ ಮತ್ತು ಕಾಳಜಿಯನ್ನು ಅಸ್ಪೃಶ್ಯತೆಯು ಹಿಂದೂಧರ್ಮದ ಸಿದ್ಧಾಂತದ ಭಾಗವಲ್ಲವೆಂದು ಸೂಚಿಸಿ ಒಂದೇ ಮಾತಿನಲ್ಲಿ ಎಗರಿಸಿಬಿಡಬಹುದು. ಆದರೆ ಆ ಹೀನ ಬುದ್ಧಿವಂತಿಕೆ ಗಾಂಧೀಜಿಯವರ ಅನುಯಾಯಿಗಳಲ್ಲಿ ಉಂಟಾಗಬಾರದಷ್ಟೇ. ಏಕೆಂದರೆ, ಇದು ಸಿದ್ಧಾಂತದ, ಪುಸ್ತಕದ ಬದನೇಕಾಯಿಯ ಪ್ರಶ್ನೆಯಲ್ಲ; ಇದು ಆಚಾರದ, ಅನುಭವದ, ಸಾಮಾಜಿಕ ಸತ್ಯದ ಅಂಶ. ಹರಿಜನರ ಗುಡಿಸಲುಗಳನ್ನೂ, ಹರಿಜನರನ್ನೂ ಜೀವಂತ ಸುಟ್ಟಿರುವ ಪ್ರಸಂಗಗಳು ಪತ್ರಿಕೆಗಳಲ್ಲಿ ೯೦ಶಿರಷ್ಟು ಈಚೆಗೆ ಸಹ ಪ್ರಕಟವಾಗಿವೆ.* ಭಾರತೀಯ ಸಂಸ್ಕೃತಿಯನ್ನು ನಿರರ್ಗಳವಾಗಿ ಹೊಗಳಿ ಬೆನ್ನುತಟ್ಟಿಕೊಳ್ಳುವ ಭಟ್ಟಂಗಿಗಳು ಇಂತಹ ದುಷ್ಟಾಚಾರದ ಪ್ರಸ್ತಾಪವನ್ನೇ ಮಾಡದಿರುವುದು ಆ 'ಸುಸಂಸ್ಕೃತ'ರ ಸಾಂಸ್ಕೃತಿಕ ಮಟ್ಟವನ್ನು ಸೂಚಿಸುತ್ತದೆ. ಅದು ಅವರಿಗಾಗಲಿ ಅವರ ಸಹಕಾರದಿಂದ 'ಸಮಗ್ರ

* ಆ ನಂತರದ ಕಾಲದಲ್ಲಿ ಅಂತಹ ಪ್ರಸಂಗಗಳು ಇನ್ನೂ ಹೆಚ್ಚಿವೆ.

ಕ್ರಾಂತಿ' ಮಾಡಹೊರಟ ವೀರಾಗ್ರಣಿಗಳಿಗಾಗಲಿ ಕೀರ್ತಿ ತರುವಂಥದಲ್ಲ. ಅದರ ಮಾತಿರಲಿ, ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಹಳ್ಳಿಯೊಂದರಲ್ಲಿದ್ದ ಎಲ್ಲ ಹರಿಜನರನ್ನೂ ಸಂಪೂರ್ಣವಾಗಿ ಧ್ವಂಸಮಾಡಿದ ದಾರುಣ ಕತೆಯನ್ನು ನಾವು ಮರೆತಿದ್ದೇವೆಯೆ ? ಅಥವಾ ಹಾಗೆಯೇ ಆಂಧ್ರಪ್ರದೇಶದ ಗುಂಜೇಪಲ್ಲಿಯಲ್ಲಿ ಜಮೀನ್ದಾರರ ಗುಂಪೊಂದು ಹರಿಜನರ ವಿರುದ್ಧ ನಡೆಸಿದ ವಿಧ್ವಂಸಕಾರ್ಯ ನಮಗೆ ಗೊತ್ತಿಲ್ಲವೇ ? ಆಗಿನ ಆಂಧ್ರದ ಮುಖ್ಯಮಂತ್ರಿಗಳು ಶಾಸನಸಭೆಯಲ್ಲಿ ಈ ಬಗ್ಗೆ ನೀಡಿದ ಹೇಳಿಕೆಯನ್ನು ಪ್ರಕಟಿಸಿದ್ದಕ್ಕಾಗಿ ದೆಹಲಿಯ 'ಜನಯುಗ' ಪತ್ರಿಕೆಯ ಹೈದರಾಬಾದ್ ಪ್ರತಿನಿಧಿಗೆ ಆಂಧ್ರದ ವಾರ್ತಾ ಇಲಾಖೆಯ ನಿರ್ದೇಶಕರು ಎಚ್ಚರ ನೀಡಿದ್ದಾರೆಂದು ಅಂದಿನ ರಾಜ್ಯಸಭೆಯಲ್ಲಿ ಹೊರಗೆಡಹಲಾಗಿತ್ತು. ಹಾಗಾದರೆ ಅತ್ಯಾಚಾರಗಳನ್ನು ಮುಂದುವರಿಸಬೇಕೆಂದೇ ಏನು ಗಾಂಧೀಜಿಯವರು ಅಷ್ಟು ಪರಿಶೋಧನೆ ಮತ್ತು ಹೋರಾಟ ನಡೆಸಿದ್ದು ? ನಮ್ಮ ಅನೇಕ ಬುದ್ಧಿಜೀವಿಗಳು ಈ ಸಂತ್ರಸ್ತ ಜನತೆಯನ್ನು 'ಸರ್ಕಾರಿ ಬ್ರಾಹ್ಮಣರು' ಎಂದು ಕರೆಯುವುದನ್ನು ನಾನು ಸ್ವತಃ ಕೇಳಿದ್ದೇನೆ. ಸ್ವತಂತ್ರ ಭಾರತದಲ್ಲಿ ಸಮಾನಾವಕಾಶವಿರಬೇಕಾಗಿರುವಾಗ ಈ ಜನರಿಗೇಕೆ ವಿಶೇಷ ಸವಲತ್ತುಗಳು ? ರಾಷ್ಟ್ರದ ಬೊಕ್ಕಸದಿಂದ ಅವರಿಗೆಲ್ಲಾ ನಿಧಿ ಕೂಡಿಸಿಕೊಡಲು ನಾವೇಕೆ ಬಾಧ್ಯರು ? ಇತ್ಯಾದಿ ಪ್ರಶ್ನೆಗಳನ್ನು ಹಾಕುವ ನಮ್ಮ ಪ್ರಜಾಪ್ರಭುತ್ವವಾದಿ ಸೂಕ್ಷ್ಮಜ್ಞಾನಿಗಳು ಇತಿಹಾಸದುದ್ದಕ್ಕೂ ಆಗಿರುವ ಅನಾಚಾರಗಳತ್ತ ಕಣ್ಣು ಹೊರಳಿಸಲೂ ಸಹ ತಯಾರಿಲ್ಲ. ಈ ಬೃಹದಾಕಾರದ ಪ್ರಶ್ನೆಯನ್ನು ಭಾರತದ ಮುಂದೆ ಸರ್ವತೋಮುಖವಾದ ರೀತಿಯಲ್ಲಿಟ್ಟ ಮಾನವೀಯತೆಯ ಶೃಂಗಗುಣ ಗಾಂಧೀಜಿಯವರದು. ಬೇರೆ ಕಠಿಣ ಪ್ರಶ್ನೆಗಳಂತೆ ಇದೂ ಸಹ ಇಚ್ಛಾಮಾತ್ರದಿಂದ ಅಥವಾ ಶಾಸನಬಲದಿಂದ ನಿವಾರಣೆಯಾಗುವ ಸಾಧ್ಯತೆಯಿಲ್ಲ. ಭಾರತದ ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸಲಾಗಿದೆಯಾದರೂ ಭಾರತದ ಸಮಾಜದಲ್ಲಿ ಹಾಗೆ ಮಾಡಲಾಗಿಲ್ಲ. ವಿಶಿಷ್ಟರೀತಿಯ ಹಿಂಸೆಗಳಿಗೆ ಗುರಿಯಾಗುವ ಹರಿಜನರಾಗಲಿ ಇತರರಾಗಲಿ ಆರ್ಥಿಕವಾಗಿ ಅತ್ಯಂತ ಹಿಂದುಳಿದವರು; ಅವರ ಮೇಲೆ ದಬ್ಬಾಳಿಕೆ ನಡೆಸುವವರು ಜಮೀನ್ದಾರರು, ಬಂಡವಳಿಗರು, ತನ್ಮುಖೇನ ಸ್ಥಾನಮಾನ ಗಳಿಸಿಕೊಂಡಿರುವವರು. ಆದ್ದರಿಂದ ಹರಿಜನರ ಕಂಟಕರ ಬಾಧೆ ತಪ್ಪಬೇಕಾದರೆ ಕಾನೂನಿನ ರಕ್ಷಣೆ, ಪಾಳೆಯಗಾರರಿಗೆ ನೀತಿಪಾಠ, ಇವುಗಳೇ ಸೂಕ್ತ ಪರಿಹಾರಗಳಲ್ಲ. ಅವುಗಳೆಲ್ಲಾ ಬೇಕು; ಆದರೆ ಅದೇ ಸಾಲದು. ಅದರ ಜೊತೆಗೆ ಈ ವರ್ಗದ ಆರ್ಥಿಕ ಶಕ್ತಿ ಹೆಚ್ಚಬೇಕು, ಸ್ವಾವಲಂಬನೆ ಸಾಧ್ಯವಾಗಬೇಕು. ಆಗ ಅವರನ್ನಿರಲಿ, ಅವರ ಗುಡಿಸಲನ್ನು ಸಹ ಮುಟ್ಟಲು ಪಾಳೆಯಗಾರರು ಅಂಜಬೇಕಾಗುತ್ತದೆ. ತುಳಿತಕ್ಕೆ ಸಿಕ್ಕಿರುವವರ ಸಂಕಷ್ಟ ಪರಿಸ್ಥಿತಿ ನಿವಾರಣೆಯಾಗಬೇಕಾದರೆ ಅವರ ಆರ್ಥಿಕ ಶಕ್ತಿ ಹೆಚ್ಚಬೇಕು; ಆಗ ಪಾಳೆಯಗಾರರು ಅವರನ್ನು ಹಿಂಸಿಸಲು ಹಿಂಜರಿಯಬೇಕಾಗುತ್ತದೆ. ಆದರೆ ಪಾಳೆಯಗಾರರಿರುವವರೆಗೂ ಹರಿಜನರ ಆರ್ಥಿಕ ಸ್ಥಿತಿ ಸುಧಾರಿಸುವುದಿಲ್ಲ. ಊಳಿಗಮಾನ್ಯ ಪದ್ಧತಿಯು ನಾಶವಾಗುವವರೆಗೂ ಪಾಳೆಯಗಾರರು ಇಲ್ಲವಾಗುವುದಿಲ್ಲ. ಈ ದೃಷ್ಟಿಯಿಂದ ಭೂಸುಧಾರಣೆ ಮತ್ತು ಜೀತವಿಮುಕ್ತಿಗಳ ಪ್ರಾಧಾನ್ಯವನ್ನು ಎಷ್ಟು ವಿವರಿಸಿದರೂ ಕಡಿಮೆಯೇ. ಗಾಂಧೀಜಿಯವರು ಭೂಸುಧಾರಣೆಯತ್ತ ಗಮನಹರಿಸಲಿಲ್ಲವೆಂದು ಹೀಯಾಳಿಸುವವರೂ ನಮ್ಮಲ್ಲಿದ್ದಾರೆ. ಎಲ್ಲವನ್ನೂ ಗಾಂಧೀಜಿಯೇ ಮಾಡಿದರೆ ಇವರು ಮಾಡುವುದೇನನ್ನು ? ಅವರ ಭಾವನೆಯನ್ನಾದರೂ ಇವರು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿಯಾರೇ ? ಸದಿಚ್ಛೆಯಿದ್ದರೆ ಎಲ್ಲವನ್ನು ಬಗೆಹರಿಸಬಹುದೆಂಬ ಮಾತು ಆಗಾಗ ಕೇಳುವುದುಂಟು. ಒಂದು ಗಾದೆಯಿದೆ : ''ನರಕದ ಹಾದಿಯು ಸದಿಚ್ಛೆಗಳಿಂದ ತುಂಬಿದೆ'' ಎಂಬುದದು. ಅಂದರೆ, ಕಾರ್ಯ

(ಅರ್ಥಾತ್, ಆರ್ಥಿಕ ಕಾರ್ಯಕ್ರಮ ಜಾರಿಗೊಳಿಸುವುದು) ಮುಖ್ಯವೇ ಹೊರತು ಸದಿಚ್ಛೆಯೊಂದೇ ಸಾಲದು ಎಂದರ್ಥ. ಗಾಂಧೀಜಿಯವರ ಹೆಸರನ್ನು ಹೇಳಿ ನಾಲಿಗೆ ಚಪಲ ತೀರಿಸಿಕೊಳ್ಳುವಂತಹ ನಮ್ಮ ಕೆಲವು ಯುವಕ ಪುಢಾರಿಗಳು ಇದನ್ನು ತಿಳಿದುಕೊಳ್ಳುವುದು ಒಳ್ಳೆಯದು. ಇಲ್ಲದಿದ್ದಲ್ಲಿ ಗಾಂಧೀಜಿಯವರು ಜನತೆಗೆ ನೀಡಿರುವ ಅಭಯಾಸ್ತ್ರವನ್ನು ಪ್ರಯೋಗಿಸಿ ಜನತೆ ತನ್ನ ಶಕ್ತಿಯನ್ನು ಸಿದ್ಧಪಡಿಸಿ ತೋರಿಸುತ್ತದೆ.

ಗಾಂಧೀಜಿಯವರು ಭಾರತಕ್ಕೆ ನೀಡಿದ ಅತ್ಯಂತ ಪ್ರಧಾನ ಅಸ್ತ್ರ ಅಭಯ. ಅಂದರೆ, ಯಾವುದಕ್ಕೂ ಅಂಜದೆ ಸತ್ಯದ ಆವಿಷ್ಕಾರಕ್ಕಾಗಿ ಮತ್ತು ನ್ಯಾಯಸಮ್ಮತವಾದ ಜೀವನ ಹಾಗೂ ವ್ಯವಸ್ಥೆಗಳಿಗಾಗಿ ಸಂಘಟಿತವಾಗಿ ಹೋರಾಡುವುದು. ತಲೆಯೆತ್ತಿ ನಡೆಯಲು ಹೇಸುತ್ತಿದ್ದ ಲಕ್ಷಗಟ್ಟಲೆ ಭಾರತೀಯರಿಗೆ ಗಾಂಧೀಜಿ ಒದಗಿಸಿದ ಸ್ಥೈರ್ಯ ಇದು. ಅನ್ಯಾಯವನ್ನು ಸಹಿಸದೆ ಸರ್ಕಾರಿ ಯಂತ್ರದ ವಿರುದ್ಧವಾಗಲಿ, ಪ್ರತಿಷ್ಠಿತ ಹಿತಾಸಕ್ತಿಗಳ ಅಥವಾ ಗುಂಪುಗಳ ವಿರುದ್ಧವಾಗಲಿ ಸೆಣಸುವುದು ಭಾರತವು ಗಾಂಧೀಜಿಯವರ ನಾಯಕತ್ವದಲ್ಲಿ ಅವರ ಮಾರ್ಗದರ್ಶನದಿಂದ ಕಲಿತಿರುವ ಪಾಠ. ನಮ್ಮ ಗುತ್ತೇದಾರಿ ಬಂಡವಳಿಗರಿಗೆ ಹಾಗೂ ಅವರ ಯಜಮಾನರಾದ ಸಾಮ್ರಾಜ್ಯಶಾಹಿ ಮತ್ತು ನವವಸಾಹತುಶಾಹಿ ಅಧ್ವರ್ಯುಗಳಿಗೆ ಭಾರತ ಏಕಕಂಠದಲ್ಲಿ ಇಂದು ಮತ್ತೆ ಇದನ್ನು ತಿಳಿಯಹೇಳಬೇಕಾಗಿದೆ. ಗಾಂಧೀಜಿಯವರು ಪ್ರಯೋಗಿಸಿದ ಅಸ್ತ್ರ ಅಹಿಂಸೆ. ಅದು ಹಿಂಸೆಯನ್ನು ಧಿಕ್ಕರಿಸಿ ಅದರಿಂದ ಹೊರಬರಲು ಉಪಯೋಗಕ್ಕೆ ಬರುವ ಆಯುಧ. ಗಾಂಧೀಜಿಯವರು ಪ್ರತಿಪಾದಿಸಿದ ಅಹಿಂಸಾತತ್ವದ ಮರೆಯಲ್ಲಿ ತಮ್ಮ ಹೀನಕೃತ್ಯಗಳನ್ನು ನಡೆಸಿಕೊಳ್ಳಬಹುದೆಂಬ ಭಾವನೆ ಕೆಲವರಲ್ಲಿ ಬೇರೂರಿದೆ. ಅತ್ಯಂತ ಹಿಂಸೆಯಿಂದ ತುಂಬಿರುವ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅವ್ಯವಸ್ಥೆಯನ್ನು ನಾವು ಹೇಗೆ ಚಿತ್ರಿಸಿದರೂ ಅದರಲ್ಲಡಗಿರುವ ಶೋಷಣೆಯನ್ನು ಮರೆಮಾಚಲು ಸಾಧ್ಯವಿಲ್ಲ. ಧರ್ಮದರ್ಶಿತ್ವದ ಕಲ್ಪನೆಯ ಮರೆಹೊಕ್ಕು ತಮ್ಮ ದುರಾಚಾರಗಳನ್ನು ಮರೆಮಾಚಲು ಯತ್ನಿಸುವ ಬಂಡವಳಿಗ ಕ್ರಿಮಿಗಳಿಗೆ ನಮ್ಮಲ್ಲಿ ಅಭಾವವಿಲ್ಲ. ಗಾಂಧೀಜಿಯವರ ಉದಾತ್ತ ವ್ಯಕ್ತಿತ್ವದ ಬಗ್ಗೆ ಮಾತನಾಡುವಾಗ ಇಂತಹ ಕಟುವಾದ ಭಾಷೆಯನ್ನುಪಯೋಗಿಸುವುದು ಅಸ್ವಾಭಾವಿಕವೆಂದೆನಿಸಬಹುದು. ಗಾಂಧೀಜಿಯವರ ಹೆಸರನ್ನೂ ವ್ಯಕ್ತಿತ್ವವನ್ನೂ ಶೋಷಕ ಪ್ರತಿನಿಧಿಗಳು ತಮ್ಮ ಕುತಂತ್ರಗಳ ಸ್ವರೂಪವನ್ನು ಮರೆಮಾಚಲು ಎಳೆಯುವುದು ನಿಜವಾದರೆ ಅವರ ವಿರುದ್ಧ ಯಾವ ಭಾಷೆಯ ಪ್ರಯೋಗವಾಗಬೇಕೋ ನೀವೇ ತೀರ್ಮಾನಿಸಿ. ಗಾಂಧೀಜಿಯವರ ಹತ್ಯೆಗೆ ಕಾರಣರಾದವರೂ ಅವರ ಹೆಸರು ಹೇಳಿ ಕ್ರಾಂತಿಕಾರಿಗಳಾಗಬಯಸುವುದನ್ನು ಕಂಡು ಈ ರಾಷ್ಟ್ರ ದಿಗ್ಭ್ರಮೆಗೊಂಡಿದೆಯಾದ್ದರಿಂದ ಸ್ಪಷ್ಟವಾದ ನಿಲುವು ತಾಳುವುದು ಇಂದು ಗಾಂಧೀಜಿಯವರ ಮಹತ್ವ ಗುರುತಿಸುವವರೆಲ್ಲಾ ಮಾಡಬೇಕಾದ ಮುಖ್ಯ ಕೆಲಸ. ''ಅಹಿಂಸೆಯು ಹೇಡಿಯು ಅನುಸರಿಸುವ ಮಾರ್ಗವಲ್ಲ, ಹೇಡಿತನದಿಂದ ಅಹಿಂಸೆಯನ್ನನು ಸರಿಸುವುದಕ್ಕಿಂತ ಧೈರ್ಯವಾಗಿ ಹಿಂಸಾಚಾರದಲ್ಲಿ ತೊಡಗುವುದು ಶ್ರೇಷ್ಠ'', ಎಂದು ಸಾರಿದವರು ಗಾಂಧೀಜಿ. ತಮ್ಮ ಮಾರ್ಗವು ನಿಶ್ಚಿತವಾಗಿ ನಿಷ್ಫಲವೆಂದು ಸಿದ್ಧವಾಗುವುದಾದರೆ ಅದಕ್ಕೆ ವಿರುದ್ಧವಾದ ಮಾರ್ಗವನ್ನುಪದೇಶಿಸಲು ತಾವು ಹಿಂದೆಗೆಯುವುದಿಲ್ಲವೆಂದು ಗಾಂಧೀಜಿ ಸಾರಿ ಹೇಳಿದ್ದರು. ಎನ್. ಕೆ. ಬೋಸ್ ಅವರು ನೀಡಿರುವ ಘಟನೆಗಳಲ್ಲಿ ಇದಕ್ಕೆ ಬೇರೆ ನಿದರ್ಶನಗಳು ಇವೆ. ೧೯೨೮ರಲ್ಲಿ ಮೀರತ್ ಪಿತೂರಿಯ ಹೆಸರಿನಲ್ಲಿ ಬಂಧಿತರಾಗಿದ್ದ ಸೆರೆಯಾಳುಗಳನ್ನು ಜೈಲಿನಲ್ಲಿ ಗಾಂಧೀಜಿ ಸಂಧಿಸಿದ್ದರು. ಚೌರಿ-ಚೌರಾ ಘಟನೆಯ ಹಿನ್ನೆಲೆಯಲ್ಲಿ ತಾವು ಹಿಂದೆಗೆದುಕೊಂಡಿದ್ದ ಚಳುವಳಿಯನ್ನು ಮುಂದುವರಿಸಬೇಕೆಂದು

ತೀರ್ಮಾನಿಸಿದ್ದ ಕಾಲ ಅದು. ಕೈದಿಗಳು ಗಾಂಧೀಜಿಯವರನ್ನು ಕೇಳಿದರು: ''ಅಂಥದೇ ಇನ್ನೊಂದು ಘಟನೆಯಾದರೆ ಮತ್ತೆ ತಾವು ಚಳುವಳಿಯನ್ನು ಹಿಂತೆಗೆದುಕೊಳ್ಳುತ್ತೀರಾ ?'' ಅದಕ್ಕೆ ಗಾಂಧೀಜಿಯವರ ಉತ್ತರ: ''ಇಲ್ಲ, ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ'' – ಚರಿತ್ರೆ ಈ ಮಾನವನನ್ನು ಅತಿಮಾನವನನ್ನಾಗಿ ಮಾಡಿದ ರೀತಿ ಇದು: ಜನತೆಯ ಆಸೆ, ಆಕಾಂಕ್ಷೆ ಮತ್ತು ಸಿದ್ಧತೆಗಳನ್ನು ಪರಿಪೂರ್ಣವಾಗಿ ಪ್ರತಿಫಲಿಸುವ ಮಾರ್ಗದಿಂದ.

ಅಹಿಂಸಾತತ್ವದ ಬಗ್ಗೆ ಇನ್ನೊಂದು ಮಾತು. 'ಅಹಿಂಸಾ' ಪದವನ್ನು ಸಂಸ್ಕೃತದಲ್ಲಿ ನಜ್ ಸಮಾಸಪದವೆಂದು ವ್ಯಾಖ್ಯಾನ ಮಾಡುವುದುಂಟು; ಅಂದರೆ ಅಭಾವ ಸೂಚಕಪದ ಎಂಬರ್ಥದಲ್ಲಿ. ಗಾಂಧೀಜಿಯವರ ದೃಷ್ಟಿಯಲ್ಲಿ ಅದು ಭಾವಸೂಚಕ ಪದವೇ ಹೊರತು ಅಭಾವಸೂಚಕವಲ್ಲ. ಪತಂಜಲಿಯ ಯೋಗಸೂತ್ರದ ಭಾಷ್ಯದಲ್ಲಿ ವ್ಯಾಸರು 'ಅವಿದ್ಯಾ' ಪದವನ್ನು ವಿವರಿಸುವಾಗ ಒಂದು ಮಾತು ಹೇಳಿದ್ದಾರೆ. ಅದಿಲ್ಲಿಗೂ ಸಮಂಜಸವಾಗಿ ಕಾಣುತ್ತದೆ. ಸಂಸ್ಕೃತದಲ್ಲಿ 'ಅಗೋಷ್ಪದ' ಎಂಬ ಪದವಿದೆ. ಇದರ ಪ್ರತಿಪದಾರ್ಥ 'ಕೊಟ್ಟಿಗೆಯಲ್ಲದ್ದು' ಎಂದಾದರೂ ರೂಢಾರ್ಥ ಭಾವಸೂಚಕವಾಗಿ 'ಮನೆ'ಯನ್ನು ಸೂಚಿಸುತ್ತದೆ. ಕಛೇರಿಯೂ ಕೊಟ್ಟಿಗೆಯಲ್ಲ; ಆದರೆ ಅದು 'ಅಗೋಷ್ಪದ' ಪದವಾಚಕವಲ್ಲ. ಹಾಗೆಯೇ ಅಹಿಂಸಾತತ್ವವೂ ಕೂಡ. ಹಿಂಸಾರಾಹಿತ್ಯವೇ ಅಹಿಂಸೆಯಲ್ಲ. ಅದೊಂದು ವಿಶಿಷ್ಟ ರೀತಿಯ ಪ್ರಯೋಗ ಸಾಧನ, ಹೋರಾಟದ ಅಸ್ತ್ರ. ಅಹಿಂಸೆಯ ಹೆಸರಿನಲ್ಲಿ ಹೋರಾಟವನ್ನು ತ್ಯಾಗಮಾಡಬೇಕೆಂದು ಗಾಂಧೀಜಿ ಯಾವಾಗಲೂ ಹೇಳಲಿಲ್ಲ. ತದ್ವಿರುದ್ಧವಾಗಿ ಹೋರಾಟವನ್ನು ಮಾನವನ ಉಚ್ಛ್ರಾಯದ ಮಾರ್ಗದರ್ಶಿ ಎಂದವರು ಬಗೆದರು. ಗಾಂಧೀಜಿಯವರ ಬರವಣಿಗೆಗಳಲ್ಲಿ ಉಚ್ಚಸ್ಥಾನವನ್ನಲಂಕರಿಸುವ ಅವರ ಲೇಖನವೊಂದಿದೆ. ರವೀಂದ್ರನಾಥ ಠಾಕೂರರೊಡನೆ ಗಾಂಧೀಜಿಯವರು ನಡೆಸಿದ ವಾಗ್ಯುದ್ಧದ ಸಂದರ್ಭದಲ್ಲಿ ಹೊರಬಂದ ಲೇಖನ ಅದು. ಅಕ್ಟೋಬರ್ ೧೯೨೧ರಲ್ಲಿ ಟಾಗೋರ್ ಅವರು ತಮ್ಮದೊಂದು ಲೇಖನದಲ್ಲಿ ಗಾಂಧೀಜಿಯವರ ಗುಣಗಾನವನ್ನು ಮಾಡಿ ಅವರು ಅನುಸರಿಸುತ್ತಿದ್ದ ಮಾರ್ಗವನ್ನು ಟೀಕಿಸಿ ಅದು ದ್ವೇಷದಿಂದ ಪ್ರೇರಿತವಾದದ್ದೆಂದು ಸಾರಿದರು. ಲೇಖನದ ಒಂದು ಭಾಗ ಹೀಗಿತ್ತು: ''ನಮ್ಮ ನಾಡಿನಲ್ಲಿ ಬಟ್ಟೆಯಿಲ್ಲದೆ ಚಳಿಯಲ್ಲಿ ನಡುಗುವ ಮಂದಿ ಲಕ್ಷಗಟ್ಟಲೆ ಇರುವಾಗ ಅವರ ಸಮ್ಮುಖದಲ್ಲಿ (ವಿದೇಶಿ) ಬಟ್ಟೆಯನ್ನು ಗುಡ್ಡೆಮಾಡಿ ಬೆಂಕಿ ಹಚ್ಚುವುದು ಗಾಂಧೀಜಿಯವರ ಮಾಂತ್ರಿಕ ನಿರೂಪಣೆಗಳಲ್ಲೊಂದು. ಆರ್ಥಿಕತತ್ವವನ್ನು ಗಾಳಿಗೆ ತೂರಿ ಸುಳ್ಳು ನೈತಿಕತೆಯನ್ನು ಅದು ಎತ್ತಿಹಿಡಿಯುತ್ತದೆ...'' ಅಕ್ಟೋಬರ್ ೧೩, ೧೯೨೧ರ 'ಯಂಗ್ ಇಂಡಿಯಾ'ದಲ್ಲಿ ಗಾಂಧೀಜಿ 'ಮಹಾನ್ ರಕ್ಷಕ' ಎಂಬ ಶೀರ್ಷಿಕೆಯಲ್ಲಿ ಇದಕ್ಕೆ ಉತ್ತರ ನೀಡಿದರು. ಜನತೆಯ ಹೋರಾಟವು ಅವರ ಭಾವನೆಯಲ್ಲಿ ಮೂರ್ತಿಮತ್ತಾಗಿ ಬೆಳೆದಿದ್ದಿತೆಂಬುದಕ್ಕೆ ಇದೊಂದು ಪಕ್ವನಿದರ್ಶನ. ಸೈದ್ಧಾಂತಿಕ ನಿರೂಪಣೆ ಮಾಡುವಾಗ ಕೆಲವರು ಕಾರ್ಯಾಚರಣೆಯನ್ನು ಬದಿಗೊತ್ತುವ ಹವ್ಯಾಸವನ್ನು ಗಾಂಧೀಜಿ ಕಟುವಾಗಿ ಮತ್ತು ಮಾರ್ಮಿಕವಾಗಿ ಟೀಕಿಸಿದರು. ಗಾಂಧೀಜಿಯವರ ಉತ್ತರದ ಕೆಲಭಾಗಗಳು ಈ ರೀತಿ ಇವೆ: ''ಸಂಗ್ರಾಮವು ಆರಂಭವಾದಾಗ ಕವಿಯು ತನ್ನ ವೀಣೆಯನ್ನು, ಲಾಯರು ತನ್ನ ಕಾನೂನು ವರದಿಗಳನ್ನು, ವಿದ್ಯಾರ್ಥಿ ತನ್ನ ಪಠ್ಯಪುಸ್ತಕಗಳನ್ನು ಬದಿಗೊತ್ತಿಡುತ್ತಾರೆ. ಸಂಗ್ರಾಮ ಮುಗಿದ ನಂತರವೇ ಕವಿಯು ಸತ್ಯದ ರಾಗವನ್ನು ಹಾಡುವುದು... ಮನೆಗೆ ಬೆಂಕಿ ಬಿದ್ದಾಗ ಅದರಲ್ಲಿ ವಾಸಮಾಡುವ ಪ್ರತಿಯೊಬ್ಬನೂ ಒಂದೊಂದು ಬಿಂದಿಗೆ ಹಿಡಿದು ಬೆಂಕಿಯನ್ನು ಆರಿಸಲು ಯತ್ನಿಸುತ್ತಾನೆ. ನನ್ನ ಸುತ್ತಲೂ ಅನ್ನವಿಲ್ಲದೆ ಜನ ಸಾಯುತ್ತಿರುವಾಗ, ಅವರಿಗೆ

ಉಣಬಡಿಸುವುದಷ್ಟೇ ನನ್ನ ಕರ್ತವ್ಯ. ಭಾರತದಲ್ಲಿ ಜ್ವಾಲೆ ಹತ್ತಿ ಉರಿಯುತ್ತಿದೆ. ರಾಷ್ಟ್ರದ ಶಕ್ತಿ ನಶಿಸಿಹೋಗುತ್ತಿದೆ. ಹಸಿವಿನಿಂದ ನರಳುತ್ತಿರುವವರು ಆಹಾರ ಕೊಳ್ಳಲು ಸಹ ಅಶಕ್ತರಾಗಿದ್ದಾರೆ; ಕಾರಣ ಅವರಿಗೆ ಉದ್ಯೋಗವಿಲ್ಲ...'' ''ವಿದೇಶಿ ಬಟ್ಟೆಗಳನ್ನು ಸುಡುವಾಗ ನನ್ನ ನಾಚಿಕೆಗೇಡುತನವನ್ನು ನಾನು ಸುಡುತ್ತಿದ್ದೇನೆ...'' ''ಕವಿಯ ನೈಜ ಭಾವನೆಗೆ ತಕ್ಕಂತೆ ಈ ಮಹಾನ್ ಕವಿಯು ನಾಳೆಗೆ ಜೀವಿಸುತ್ತಾರೆ; ನಾವೂ ಹಾಗೆಯೇ ಮಾಡಬೇಕೆಂದು ಅವರಿಚ್ಛೆ. ಉದಾತ್ತತ್ವದ ಹಾಡನ್ನು ಹಾಡುತ್ತಾ ಉದಯಕಾಲದಲ್ಲಿ ಗರಿಗೆದರಿ ಗಗನದತ್ತ ಹಾರುವ ಹಕ್ಕಿಯ ಸುಂದರ ಚಿತ್ರವನ್ನು ನಮ್ಮ ಮನಸನ್ನು ಸೂರೆಮಾಡುವಂತೆ ಕವಿಯು ನಮ್ಮ ಮುಂದಿಡುತ್ತಾನೆ. ಹಿಂದಿನ ದಿನ ಸಾಕಷ್ಟು ಉಂಡಿದ್ದ ಹಕ್ಕಿ ಮಾರನೆಯ ಬೆಳಿಗ್ಗೆ ರಕ್ತ-ಮಾಂಸಗಳಿಂದ ತುಂಬಿದ ತನ್ನ ದೇಹವನ್ನು ಸರಾಗವಾಗಿ ಎತ್ತಿಕೊಂಡು ಲವಲವಿಕೆಯಿಂದ ಎತ್ತರಕ್ಕೆ ಹಾರುತ್ತದೆ. ಆದರೆ ಉಸಿರಾಡಲಿಕ್ಕೂ ತ್ರಾಣವಿಲ್ಲದಂತಹ ಹಕ್ಕಿಗಳನ್ನು ನನ್ನ ಜೀವನದಲ್ಲಿ ನಾನು ಕಂಡಿದ್ದೇನೆ. ಅವಕ್ಕೆಂತಹ ಹುರುಪನ್ನು ತುಂಬಿ ಮೇಲೇರುವಂತೆ ಮಾಡುವುದೋ ಕಾಣೆ. ಭಾರತದ ಆಗಸದಡಿಯಲ್ಲಿ ಸೊರಗುತ್ತಿರುವ ಮಾನವ ಹಕ್ಕಿಯು ಹಿಂದಿನ ದಿನ ಮಲಗಿದ್ದಾಗ್ಗಿಂತಲೂ ಹೆಚ್ಚು ನಿಶ್ಶಕ್ತವಾಗಿ ಮಾರನೆಯ ದಿನ ಕಣ್ಣುಬಿಡುತ್ತದೆ. ಲಕ್ಷಾಂತರ ಜನಕ್ಕೆ ಇದು ಅನುದಿನದ ಚರ್ಯೆಯಾಗಿಬಿಟ್ಟಿದೆ. ಆ ನೋವಿನ ಪರಿಸ್ಥಿತಿಯನ್ನು ಬಣ್ಣಿಸಲಸದಳ; ಅದನ್ನರಿಯಬೇಕಾದರೆ ಅದನ್ನನುಭವಿಸಬೇಕು. ಕಬೀರನ ಗಾನದಿಂದ ನೊಂದಜೀವಕ್ಕೆ ಸಂತಸವನ್ನೊದಗಿಸಲಾಗ ದೆಂಬುದು ನನ್ನ ಅನುಭವದ ಮಾತು. ಹಸಿದ ಕೋಟಿಗಟ್ಟಲೆ ಜನ ಒಕ್ಕೊರಲಿಂದ ಚೀತ್ಕರಿಸುವುದು ಒಂದೇ ಕವನಕ್ಕಾಗಿ. ಅಂದರೆ ಸ್ಫೂರ್ತಿಯನ್ನೀಯುವ ಅನ್ನಕ್ಕಾಗಿ. ಅದನ್ನವರಿಗೆ ಕೊಡಲು ನಾವು ಅಶಕ್ತರಾಗಿದ್ದೇವೆ. ಅದನ್ನವರೇ ಸಂಪಾದಿಸುವಂತಾಗಬೇಕು. ತಮ್ಮ ಕಾಯಕಲ್ಪದಿಂದಲ್ಲದೆ ಬೇರಾವ ರೀತಿಯಲ್ಲೂ ಅದನ್ನವರು ಸಂಪಾದಿಸಿಕೊಳ್ಳಲಾರರು.''

ಈ ಸುಂದರ ಉದ್ಧೃತಭಾಗವು ಗಾಂಧೀಜಿಯವರು ಕವಿಗೆ ಕೊಟ್ಟ ಕಾವ್ಯಮಯ ಮತ್ತು ದಾರ್ಶನಿಕ ಉತ್ತರ. ಅವರ ಅನುಕಂಪ ಮತ್ತು ಮಾನವನು ಮುನ್ನಡೆಯುವ ಹಾದಿಯ ಬಗೆಗೆ ಅವರ ಕಲ್ಪನೆಗಳೆರಡೂ ಇದರಲ್ಲಿ ಸೊಗಸಾಗಿ ಚಿತ್ರಿತವಾಗಿವೆ. ಬಡಕಲು ದೇಹಿಗಳಿಗೆ ಬುದ್ಧಿಹೇಳುವ ಬಲಿಷ್ಠ ರಾಜಕಾರಣಿಗಳು ಇದನ್ನು ಮರೆಯದಿದ್ದರೆ ಒಳಿತು.

ಗಾಂಧೀಜಿಯವರ ಹೆಸರು ಹೇಳಲು ಸಹ ನೈತಿಕ ಅಧಿಕಾರವಿಲ್ಲದ ಶೋಷಕರು ಮತ್ತು ಅವರ ಏಜಂಟರು ಗಾಂಧೀಜಿಯವರ ಹೆಸರು ಹೇಳಿ ತಮ್ಮ ಮತ್ತು ತಮ್ಮ ವರ್ಗದ ಸ್ವಾರ್ಥವನ್ನು ರಕ್ಷಿಸಿಕೊಳ್ಳಲು ಶ್ರಮಿಸುತ್ತಿರುವಾಗ ಹೋರಾಟದ ಹಾದಿಯಲ್ಲಿ ಮುನ್ನುಗ್ಗುತ್ತಿರುವ ಭಾರತದ ಶೋಷಿತ ಹಾಗೂ ದಲಿತ ವರ್ಗವೇ ಗಾಂಧೀಜಿಯವರ ನಿತ್ಯನೂತನ ಹಾಗೂ ಚಿರಂತನ ಸಂವೇದನೆ ಮತ್ತು ಹೋರಾಟದ ರೂಪದ ಆಸ್ತಿಗೆ ಬಾಧ್ಯರು, ಹಕ್ಕುದಾರರು. ಗಾಂಧೀಜಿಯವರು ಅವರ ಕಾರ್ಯದಲ್ಲಿ ವಿಫಲರಾಗಲಿಲ್ಲ. ಅವರ ರಾಕ್ಷಸಶಿಶುಗಳು ಅವರನ್ನು ವಿಫಲರಾಗಿಸಲು ಸತತ ಪ್ರಯತ್ನ ನಡೆಸುತ್ತಿವೆ. ಆ ಪ್ರಯತ್ನವನ್ನು ಹತ್ತಿಕ್ಕಿ, ಗಾಂಧೀಜಿಯವರ ಸಾಫಲ್ಯವನ್ನು ರಕ್ಷಿಸಿ, ಅದನ್ನು ಇನ್ನೂ ಉನ್ನತ ಮಟ್ಟಕ್ಕೇರಿಸಿ ಸಾರ್ವಜನಿಕರಿಗೆ ಸಂಸ್ಕೃತಿಯನ್ನು ಉಜ್ವಲಗೊಳಿಸಲು ಭಾರತದ ಹೋರಾಟದ ಪರಂಪರೆಯಲ್ಲಿ ಬೆಳೆದವರಿಗೆ ಮತ್ತು ಪಳಗಿದವರಿಗೆ ಸಾಧ್ಯ. ಒಂದು ಗಾದೆಯಿದೆ: ಯಾವನಾದರೂ ಶ್ರೇಷ್ಠ ಮಾನವನನ್ನು ನಾಶಮಾಡಹೊರಟ ವಿಧಿ ವಿಫಲವಾದರೆ ಸೇಡು ತೀರಿಸಿಕೊಳ್ಳಲು ಆ ಶ್ರೇಷ್ಠನಿಗೆ ಶಿಷ್ಯರನ್ನು ಕೊಡುತ್ತದಂತೆ. ಅಂತಹ ಶಿಷ್ಯರಿಂದ ಗಾಂಧೀಜಿಯವರನ್ನು ಮತ್ತು ಭಾರತವನ್ನು ಉಳಿಸುವುದು ನಮ್ಮ ಇಂದಿನ ಹೊಣೆ. ಆ ಹೊಣೆಯನ್ನು ನಿರ್ವಹಿಸುವುದಕ್ಕೆ ಗಾಂಧೀಜಿಯವರ ಜೀವನದ

ಪುಟಗಳಲ್ಲಿ ಮಾರ್ಗದರ್ಶನ ಇದೆ. ಎಲ್ಲಿಯವರೆಗೆ ಮಾನವ ತನ್ನನ್ನು ತಾನು ಉತ್ತಮ ಪಡಿಸಿಕೊಂಡು ಮಾನವತ್ವದ ಉನ್ನತೋನ್ನತ ಹಂತಗಳತ್ತ ಬೆಳೆಯಲು ಇಚ್ಛೆಯನ್ನು ಮೂರ್ತಿವತ್ತಾಗಿ ಇಟ್ಟುಕೊಂಡು ಅದರ ಆವಿರ್ಭಾವಕ್ಕಾಗಿ ಮನಸಾ ದುಡಿಯುತ್ತಾನೋ ಅಲ್ಲಿಯವರೆಗೆ ಇತಿಹಾಸದ ಪುಟಗಳಲ್ಲಿ ಗಾಂಧೀಜಿಯವರಿಗೆ ಅಳಿಸಲಾಗದ ಸ್ಥಾನ ಮೀಸಲಾಗಿಯೇ ಇರುತ್ತದೆ. ಯಥಾಸ್ಥಿತಿವಾದಿಗಳು, ಕುತ್ಸಿತ ಹಿತಾಸಕ್ತಿಗಳ ಮಾರ್ಮಿಕ ರಕ್ಷಕರು, ಮಾನವತ್ವದ ವೈರಿಗಳು, ಸಾಮ್ರಾಜ್ಯಶಾಹಿ ಭಂಟರು, ನವವಸಾಹತುಶಾಹಿಯ ಪ್ರತಿಪಾದಕರು, ಮತೀಯ ಭಾವನೆಯ ಪ್ರಚೋದಕರು, ಜಾತಿವಾದಿಗಳು, ಇತ್ಯಾದಿ ಗುಂಪುಗಳವರಿಗೆ ಗಾಂಧಿ ನಿರ್ಜೀವಿಯಾಗಿ ಕಾಣಬಹುದು; ಆದರೆ ಕ್ರಾಂತಿಕಾರಿ ಸಮಾಜವಾದಿಗಳಿಗೆ, ಶ್ರಮಜೀವಿಗಳಿಗೆ, ಶ್ರೇಷ್ಠ ಮಾನವತ್ವದ ಆರಾಧಕರಿಗೆ ಮತ್ತು ಪಾಲಕರಿಗೆ, ಹಾಗೂ ವಿಶ್ವದ ಎಲ್ಲೆಡೆ ಹೋರಾಟದಲ್ಲಿ ಮಗ್ನರಾಗಿರುವವರಿಗೆ ಗಾಂಧಿ ಸದಾ ಅಭಯತತ್ವವನ್ನು ಸಾರಿ ಹೇಳುವ ಈ ಶತಮಾನದ ಭವ್ಯ ಮೂರ್ತಿ. ದಕ್ಷಿಣ ಆಫ್ರಿಕಾದಲ್ಲಿ ಇಂದು ವಿಮೋಚನಾಕ್ರಾಂತಿಯಲ್ಲಿ ತೊಡಗಿರುವವರು ಇದಕ್ಕೆ ಮಹೋನ್ನತ ನಿದರ್ಶನ. ಅವರ ತ್ಯಾಗ, ಬಲಿದಾನ ಮತ್ತು ಯಶಸ್ಸು ಮಾನವಕೋಟಿಯ ಯಶಸ್ಸು. ಅಂತಹ ಯಶಸ್ಸಿಗೆ ಹಾದಿ ತೋರಿಸಿದ ಯುಗಪುರುಷರಲ್ಲಿ ಗಾಂಧೀಜಿಯವರ ಸ್ಥಾನಕ್ಕೆ ಚ್ಯುತಿಯಿಲ್ಲ.

– ಅಕ್ಟೋಬರ್ ೧೯೭೬

*(ಸುವರ್ಣಮಹೋತ್ಸವ ದತ್ತಿ ಉಪನ್ಯಾಸ)*

# ಯುವಕರಿಗೆ ಲೆನಿನ್ ಕರೆ

ಲೆನಿನ್ನಿನಷ್ಟು
    ಜೀವಂತವಾಗಿರುವವರು
        ಜಗದೊಳಗಿನ್ನಾರು !
ಅವನೇ ನಮ್ಮ ಶಕ್ತಿ
    ನಮ್ಮ ಧೀಮಂತಿಕೆ
        ನಮ್ಮಾಯುಧಗಳಲ್ಲಿ ಅತಿ ಫಲಕಾರಿ.

– ವಿ. ಮಯಕೋವ್‌ಸ್ಕಿ

ಖ್ಯಾತ ಇಂಗ್ಲಿಷ್ ನಾಟಕಕಾರ ಜಾರ್ಜ್ ಬರ್ನಾರ್ಡ್ ಷಾ ಅವರ ಮೇಲೆ ವಿಶ್ವದ ಚರಿತ್ರೆಯಲ್ಲೇ ಅತ್ಯಧಿಕವಾಗಿ ಗಣ್ಯರೆನಿಸಿಕೊಂಡ ಯುಗಪ್ರವರ್ತಕ ಕಾರ್ಲ್ ಮಾರ್ಕ್ಸ್‌ರ ಪ್ರಭಾವದ ಬಗ್ಗೆ ಬರೆಯುತ್ತಾ ಷಾರವರ ಚರಿತ್ರಕಾರರಾದ ಹೆಸ್ಕೆತ್ ಪಿಯರ್ಸನ್ ಹೇಳುವ ಮಾತುಗಳಿವು : ''ಮಾರ್ಕ್ಸ್‌ನನ್ನು ಓದದ, ಓದಬೇಕೆಂದಿರದ, ಓದುವುದರ ಬದಲು ಸಾಯುವುದೇ ಲೇಸೆಂದು ಭಾವಿಸಿರುವ ನನಗೆ ಷಾ ಮೇಲಿನ ಮಾರ್ಕ್ಸ್ ಪ್ರಭಾವದ ಬಗೆಗೆ ಖಚಿತವಾಗಿ ಏನೂ ಹೇಳಲು ಬಾರದು; ಆದಾಗ್ಯೂ 'ದಾಸ್ ಕ್ಯಾಪಿಟಲ್' ಷಾ ಮೇಲೆ ಅಧಿಕವಾಗಿ ಪ್ರಭಾವವನ್ನು ಬೀರಿತೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅದು ಆತನನ್ನು ಸಮಾಜವಾದದ ಕಡೆಗೆ ಎಳೆಯಿತು, ಒಬ್ಬ ಕ್ರಾಂತಿಕಾರಿ ಬರಹಗಾರನನ್ನಾಗಿಸಿತು, ರಾಜಕೀಯ ಕಾರ್ಯರಂಗಕ್ಕೊಯ್ದಿತು, ಮನೋಭಾವವನ್ನೇ ಬದಲಿಸಿ ಆತನ ಶಕ್ತಿಗೆ ಒಂದು ಸೂಕ್ತ ಮಾರ್ಗದರ್ಶನ ನೀಡಿತು. ಕಲಾಕೃತಿಗಳ ಮೇಲೂ ಪ್ರಭಾವ ಬೀರಿ ಆತನಿಗೆ ಒಂದು ಜೀವನದ ಗುರಿಯನ್ನು ದೊರಕಿಸಿಕೊಟ್ಟು ನಿಜವಾದ ಮಾನವನನ್ನಾಗಿಸಿತು'' *(Bernard Shaw : His Life and Personality,* ಪು. *68).* ಮತ್ತೊಮ್ಮೆ ಪಿಯರ್ಸನ್ ಅವರು ಷಾ ಅವರನ್ನು ಕೇಳಿದ್ದರಂತೆ : ''ನಿಮ್ಮ ಸಮಕಾಲೀನರಾದ ರಾಜಕೀಯ ವ್ಯಕ್ತಿಗಳಲ್ಲಿ ಯಾರನ್ನಾದರೂ ನೀವು ಮೆಚ್ಚಿರುವಿರೇನು ?'' ಅದಕ್ಕೆ ಷಾರವರ ಉತ್ತರ : ''ಕಾರ್ಲ್ ಮಾರ್ಕ್ಸ್‌ರನ್ನು ಓದಿದವರು ಯಾರೂ ಗ್ಲಾಡ್‌ಸ್ಟನ್ ಅಂತಹವರನ್ನು ಕಂಡು ತಲೆದೂಗುವುದಿಲ್ಲ'' (ಪು. 68).

ರಸ್ಕಿನ್ನನ 'ಅನ್‌ಟು ದಿಸ್ ಲಾಸ್ಟ್' ಓದಿ ಗಾಂಧೀಜಿಯವರ ಜೀವನ ತತ್ವಗಳೇ ಬದಲಾಯಿಸಿದುವಂತೆ. ಈಗ ನಮ್ಮಲ್ಲಿ ರಸ್ಕಿನ್ನನ ಈ ಪುಸ್ತಕವನ್ನೋದುವವರು ಗಾಂಧೀಜಿಯವರು ಓದಿದ್ದ ಪುಸ್ತಕವೆಂದೋ, ಪರೀಕ್ಷೆಗೆ ಪಠ್ಯಪುಸ್ತಕವನ್ನಾಗಿ ಮಾಡಿದ್ದಾರೆಂಬ ಕಾರಣದಿಂದಲೋ, ಅಥವಾ ಯಾವುದಾದರೂ ಲೇಖನವನ್ನು ಬರೆಯಲೋ, ಭಾಷಣ ಮಾಡಲು ಅನುವಾಗುವುದೆಂದೋ ಓದುತ್ತಾರೆಯೇನೋ ಎಂದೆನಿಸುತ್ತದೆ. ಇನ್ನು ಮಾರ್ಕ್ಸ್ ಬಗೆಗೆ ಪ್ರಚಾರದಲ್ಲಿರುವ ಕೆಲವು ಭಾವನೆಗಳು ನಮ್ಮಲ್ಲಿ ಅನೇಕರ ಜ್ಞಾನದ ಮಟ್ಟ (ಎಂದರೆ ಅಜ್ಞಾನದ ಮಟ್ಟ ಎಂದೂ ಅರ್ಥ !)ವನ್ನು ಎತ್ತಿತೋರುತ್ತವೆ. ಹೆಸ್ಕೆತ್ ಪಿಯರ್ಸನ್ನರ ಸಹೋದರರರೆಂಬಂತೆ ನಡೆದುಕೊಳ್ಳುವ ವಿದ್ಯಾರ್ಥಿಗಳಿಗೂ, ಈ ವಿದ್ಯಾರ್ಥಿಗಳಲ್ಲಿ ಅಂತಹ

ಭಾವನೆಗಳು ಮೂಡಿಬರಲು ಕಾರಣರಾದ ಅಧ್ಯಾಪಕರುಗಳಿಗೂ ಕಡಿಮೆಯೇನಿಲ್ಲ. ಒಂದು ದುರ್ದೈವದ ಸಂಗತಿಯೆಂದರೆ ಯಾವ ತತ್ವವನ್ನೂ ಕೂಲಂಕಷವಾಗಿ ಅಭ್ಯಸಿಸದೆಯೇ ಅವುಗಳ ಬಗೆಗೆ ಒಂದು ನಿಲುವನ್ನು ತಾಳುವ ಮನೋಭಾವ ನಮ್ಮಲ್ಲನೇಕರಲ್ಲಿ ತಲೆದೋರುತ್ತಿರುವುದು. ಮಾರ್ಕ್ಸ್‌ರ ತತ್ವ ಪ್ರಚಾರದಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ಈ ಸ್ವಯಂ ನಿಯಮಿತ ಪೊಲೀಸರುಗಳ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೆಂಬ ತತ್ತ್ವ ಪ್ರಜೆಗಳ ಮೇಲೆ ಪ್ರಭುತ್ವ ನಡೆಸಬೇಕೆಂಬ ಧೋರಣೆಯಲ್ಲಿ ನೆಲೆಸಿದೆ. ಆದರೂ ಪ್ರಜಾಪ್ರಭುತ್ವವನ್ನು ಕುರಿತು ಮುಕ್ತಕಂಠದಿಂದ ಒರಲುವ ಈ ಪ್ರಜಾಶತ್ರುಗಳನ್ನು ಕಂಡು ನಮ್ಮಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳು ಔದಾಸೀನ್ಯ ಭಾವವನ್ನು ತಾಳಿದ್ದಾರೆ? ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ– ಇವುಗಳ ಹೆಸರಿನಲ್ಲಿ ನಮ್ಮ ಕೆಲವು ವಿಶ್ವವಿದ್ಯಾ ನಿಲಯಗಳಲ್ಲಿ ಕೇಳಿಬರುವ ಮಾತುಗಳು ಸತ್ಯಾನ್ವೇಷಣೆಯಲ್ಲಿ ತೊಡಗಲಿಚ್ಛಿಸುವವನನ್ನು ತಲೆತಗ್ಗಿಸುವಂತೆ ಮಾಡುತ್ತವೆ. ಸಂಸ್ಕೃತಿಯ ಹೆಸರೆತ್ತಿ ಅಮಾನವೀಯ ನಿಯಮಗಳನ್ನು ಪ್ರಶಂಸಿಸುವವರೆಷ್ಟೋ! ರಾಜಕೀಯ ರಂಗದಲ್ಲಿ ಅವರೇ ಸುಸಂಸ್ಕೃತರೆಂದು ತಿಳಿಯುವ ವಿದ್ಯಾವಂತರೆಷ್ಟೊ! ಇದನ್ನೆಲ್ಲ ನೋಡಿದರೆ ವಿದ್ಯಾರ್ಜನೆಯನ್ನು ಮಾಡಿ ಜ್ಞಾನವಂತರಾಗಿ ಕಂಗೊಳಿಸುತ್ತಿರುವ ನಮ್ಮ ಸಮಕಾಲೀನರಲ್ಲನೇಕರು ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸಮಾಡಿ ಕಲಿತಿದ್ದೇನು ಎಂದು ಅನಿಸುತ್ತದೆ.

'ಪ್ರಾವ್ಡಾ'ದ ೧೬ನೇ ಜೂನ್ ೧೯೧೩ರ ಸಂಚಿಕೆಯಲ್ಲಿ ಬರೆಯುತ್ತಾ ಲೆನಿನ್ ಹೇಳಿದರು : "ನಮ್ಮ ಹಿಂದಿನ ಪೀಳಿಗೆಯವರಿಗಿದ್ದುದಕ್ಕಿಂತಲೂ ನಮಗಿರುವ ಕಷ್ಟಗಳು ಅಧಿಕ. ಆದರೆ ಒಂದು ದೃಷ್ಟಿಯಲ್ಲಿ ಅವರಿಗಿಂತಲೂ ನಾವು ಹೆಚ್ಚು ಅದೃಷ್ಟವಂತರು ಎಂದೇ ಹೇಳಬೇಕು. ನಾವು ಕಲಿಯುವುದನ್ನು ಪ್ರಾರಂಭಿಸಿದ್ದೇವೆ ಮತ್ತು ಕ್ರಮೇಣ ಹೋರಾಡುವುದನ್ನೂ ಕಲಿಯುತ್ತಿದ್ದೇವೆ. ಈ ಹೋರಾಟವು ಹಿಂದಿನ ಪೀಳಿಗೆಯವರ ಹೋರಾಟದಂತೆ ವೈಯಕ್ತಿಕ ವಾದುದಲ್ಲ. ಈ ಹೋರಾಟದ ಧ್ಯೇಯದ ಬಗೆಗೂ ಹಲವು ವ್ಯತ್ಯಾಸಗಳುಂಟು. ತಮ್ಮ ಹಿತವನ್ನು ಬಯಸದ ಬೇರೊಂದು ವರ್ಗದವರು ತೋರಿಸಿಕೊಟ್ಟ, ಅವರೇ ನಿರ್ದೇಶಿಸಿದ ಕೆಲವು ಮೌಲ್ಯಗಳಿಗಾಗಿ, ಕೆಲವು ಪಂಕ್ತಿಗಳನ್ನನುಸರಿಸಿ ಹೋರಾಟವನ್ನು ಹಿಂದಿನ ಪೀಳಿಗೆಯವರು ನಡೆಸಿದರು. ಆದರೆ ಇಂದಿನ ಹೋರಾಟ ನಮ್ಮದೇ ಆದ ಧ್ಯೇಯಗಳಿಗಾಗಿ ಮತ್ತು ನಮ್ಮ ವರ್ಗಕ್ಕಾಗಿ. ಮುಂದಿನ ಪೀಳಿಗೆಯವರು ನಮಗಿಂತಲೂ ಹೆಚ್ಚಿನ ಹೋರಾಟ ನಡೆಸಿ ನಮಗಿಂತಲೂ ಹೆಚ್ಚಿನ ವಿಜಯ ಸಂಪಾದಿಸುವರು." ಈ ಆಶಾದಾಯಕವಾದಂತಹ ಧೋರಣೆಯಿಂದ ಲೆನಿನ್ ಸಾಧಿಸಿದ ಅದ್ಭುತಗಳನ್ನು ಕುರಿತು ಇಲ್ಲಿ ಹೇಳಬೇಕಾದ ಅವಶ್ಯಕತೆಯಿಲ್ಲ. ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳಿಷ್ಟೆ: ವೈಯಕ್ತಿಕವಾದ ಕೆಲವು ಕಾರಣಗಳಿಗಲ್ಲದೆ ಒಟ್ಟು ಸಮಾಜದ ಹಿತಕ್ಕಾಗಿ ನಾವು ಯೋಚಿಸುವುದೆಂದು? ನಾವು ಹೋರಾಟ ನಡೆಸುವುದೆಂದು? ಮತ್ತು ಅದರ ಧ್ಯೇಯಗಳೇನಾಗಿರಬೇಕು? ವರ್ಗರಹಿತ ಸಮಾಜದಲ್ಲಿ ನಮಗೆ ನಂಬಿಕೆಯಿರುವುದಾದರೆ ಅದನ್ನು ಸೃಷ್ಟಿಸುವ ಮಾರ್ಗದಲ್ಲಿ ನಾವು ನಡೆಯಲಾರಂಭಿಸಿದ್ದೇವೆಯೇ? ಶೋಷಣೆಯು ಒಂದು ಅನೀತಿ, ದುಷ್ಕೃತ್ಯ, ನೀಚ ಸ್ವಭಾವದ ಹೆಗ್ಗುರುತು, ಅಮಾನವೀಯತೆಯ ಕುರುಹು ಎಂಬುದನ್ನು ಮನಗಾಣಲು ಇನ್ನೂ ಎಷ್ಟು ಕಾಲ ಬೇಕು? ನ್ಯಾಯಪರವಾದ ದೃಷ್ಟಿ ನಮ್ಮಲ್ಲಿ ಇನ್ನೂ ಬೇರೂರದಿರಲು ಕಾರಣಗಳೇನು? ಅವುಗಳ ನಿರ್ಮೂಲನವೆಂತು? ಈ ಪ್ರಶ್ನೆಗಳನ್ನು ಕುರಿತು ನಮ್ಮ ಯುವಜನರು ಚರ್ಚಿಸಿದ್ದಾರೆಯೇ? ನಿಷ್ಕಪಟವಾಗಿಯೂ ಕೂಲಂಕಷವಾಗಿಯೂ ಅದನ್ನು

ಚರ್ಚಿಸಲು ಅವರಿಗೆ ಅವಕಾಶ ಕೊಡಲಾಗಿದೆಯೆ ?

ಗಾಂಧೀಶತಾಬ್ದಿಯ ಕಾಲದಲ್ಲಿ ಮಿತಿಯಿಲ್ಲದಷ್ಟು ಬೋಧನೆಗಳು ನಡೆದುವು. ಅದರಿಂದ ಗಾಂಧೀಜಿಯವರಿಗೆ ಅಪಚಾರವನ್ನೆಸಗಿದಂತೆ ಆಯಿತೇ ಹೊರತು ನಿಷ್ಕಲ್ಮಷ ಹೃದಯದಿಂದ ಗಾಂಧೀಜಿಯವರ ತತ್ತ್ವಗಳನ್ನಾಶ್ರಯಿಸುವ ಮನೋಭಾವ ತಳೆದುಬರಲಿಲ್ಲ. ಗಾಂಧೀಜಿಯವರ ಹೆಸರನ್ನೆತ್ತಲು ನೈತಿಕ ಅಧಿಕಾರವನ್ನೇ ಕಳೆದುಕೊಂಡಿರುವ ಅನೇಕರು ನಮ್ಮ ಯುವಕರಿಗೆ ಹಿತವಚನಗಳನ್ನು ನುಡಿದು ನಾಲಿಗೆಯ ಚಾಪಲ್ಯವನ್ನು ನೀಗಿಕೊಂಡರು.

ಲೆನಿನ್ ಶತಾಬ್ದಿಯನ್ನಾಚರಿಸುವ ಈ ಸಮಯದಲ್ಲಿ ಮುಖಶ್ರುತಿಯಿಂದ ನಾವು ಪಡೆಯಬಹುದಾದ ಲಾಭ ಏನೂ ಇಲ್ಲ. ಲೆನಿನ್ ತತ್ತ್ವಗಳಲ್ಲಿ ಶ್ರದ್ಧೆಯಿಲ್ಲದವರು ತಮ್ಮದೇ ಆದ ಕೆಲವು ಕಾರಣಗಳಿಗಾಗಿ ಗಾಂಧೀಜಿಯವರನ್ನು ಹೊಗಳಿದಂತೆ ಲೆನಿನ್ ಬಗೆಗೂ ಹೇಳಬಹುದು. ತೆಗಳಿಕೆಗಳಿಂದ ಹೇಗೆ ಲೆನಿನ್ ಕೀರ್ತಿ, ಕಾರ್ಯ, ಚಳವಳಿಗೆ ಅಪಚಾರ ವುಂಟಾಗುವುದಿಲ್ಲವೋ ಅಂತೆಯೇ ಲೆನಿನ್ ತತ್ತ್ವಗಳಲ್ಲಿ ನಂಬಿಕೆಯಿಲ್ಲದೆ ಅವುಗಳಿಗಾಗಿ ಹೋರಾಟ ನಡೆಸಲು ಸಿದ್ಧವಿಲ್ಲದವರ ಹೊಗಳಿಕೆಗಳಿಂದ ಲೆನಿನ್ ದೊಡ್ಡದಾಗಿ ಕಾಣುವುದು ಅಶಕ್ಯ. ಲೆನಿನ್ನರ ಕೀರ್ತಿ ಇರುವುದು ಅವರು ಕಟ್ಟಿದ ಸಂಸ್ಥೆಯಲ್ಲಿ, ಅವರು ಯಾವ ತತ್ತ್ವಗಳಿಗಾಗಿ ಜೀವನಾದ್ಯಂತ ಹೋರಾಡಿದರೋ ಆ ತತ್ತ್ವಗಳಲ್ಲಿ, ಮಾರ್ಕ್ಸ್ ಸೂಚಿಸಿದ್ದ ಸೂತ್ರಗಳ ಆಧಾರದ ಮೇಲೆ ಕಟ್ಟಿದ ಸಮಾಜದಲ್ಲಿ ಮತ್ತು ನಿಜವಾದ ಸ್ವಾತಂತ್ರ್ಯವನ್ನು ಪ್ರತಿಯೊಬ್ಬ ಪ್ರಜೆಯೂ ಅನುಭವಿಸುವಂತೆ ಮಾಡಿದ ಅವರ ಪ್ರಜಾತಂತ್ರದಲ್ಲಿ. ಲೆನಿನ್‌ರ ದೂರದೃಷ್ಟಿ, ಹಕ್ಕು-ಬಾಧ್ಯತೆಗಳ ಅರಿವು, ಸಾಮಾಜಿಕ ಯೋಜನೆಗಳ ನಿರೂಪಣೆ, ರಾಜಕೀಯವಾಗಿ ಎಲ್ಲಾ ಪ್ರಜೆಗಳನ್ನೂ ಕಾರ್ಯಬದ್ಧರನ್ನಾಗಿ ಸುವುದು, ಆರ್ಥಿಕ ಮುಗ್ಗಟ್ಟನ್ನು ಎದುರಿಸುವಾಗ ಪಾಲಿಸಬೇಕಾದ ರೀತಿ ನೀತಿ, ಶಿಕ್ಷಣ ಕ್ಷೇತ್ರದಲ್ಲಿ ಅನುಸರಿಸಬೇಕಾದ ನಿಯಮಗಳು ಇತ್ಯಾದಿಗಳೆಲ್ಲ ಅವರ ಕೃತಿಗಳಲ್ಲಿ, ಮೇಲಾಗಿ ಅವರು ನಿರ್ವಹಿಸಿದ ಕಾರ್ಯಗಳಲ್ಲಿ ಎದ್ದುಕಾಣುತ್ತವೆ. ೧೯೧೭ರ ಏಪ್ರಿಲ್-ಮೇ ತಿಂಗಳುಗಳಲ್ಲಿ ಅವರು ಪ್ರಚುರಪಡಿಸಿದ ಕಾರ್ಯಕ್ರಮಗಳ ವಿಮರ್ಶಿತ ಪಟ್ಟಿಯನ್ನು ನೋಡಿದರೆ ಲೆನಿನ್‌ರ ಯೋಜನೆಗಳ ಪರಿಚಯ ನಮಗೆ ದೊರೆಯುತ್ತದೆ.

ಮಾರ್ಕ್ಸ್‌ವಾದವನ್ನು ಪ್ರಚಾರಮಾಡಲು ೧೯೦೦ರಲ್ಲಿ ಲೆನಿನ್ ಅವರು ಆಗ ಪ್ರಚಲಿತ ವಾಗಿದ್ದ ಕಾನೂನಿನ ವಿರುದ್ಧ 'ಇಸ್ಕ್ರಾ' ಎಂಬ ಪತ್ರಿಕೆಯನ್ನು ಪ್ರಕಾಶಿಸಲು ಆರಂಭಿಸಿದರು. ಮ್ಯಾಕ್ಸಿಂ ಗಾರ್ಕಿಯವರನ್ನು ನಿಜ್ನಿ-ನೊವ್ಗೊರೋದ್‌ನಿಂದ ತ್ಸಾರ್ ಸರಕಾರವು ಉಚ್ಚಾಟಿಸಿದು ದರ ವಿರುದ್ಧ ನವೆಂಬರ್ ೭, ೧೯೦೧ರಂದು ಆ ಪಟ್ಟಣದಲ್ಲಿ ನಡೆದ ಸಭೆಯ ಬಗ್ಗೆ ಪ್ರಸ್ತಾಪಿಸುತ್ತಾ 'ಇಸ್ಕ್ರಾ'ದ ಡಿಸೆಂಬರ್ ೨೦, ೧೯೦೧ರ ಸಂಚಿಕೆಯಲ್ಲಿ ಲೆನಿನ್ ಬರೆದ ಮಾತು ಗಳಿವು : ''ಉತ್ತಮವಾದ ಜೀವನಕ್ಕೆ ತಮಗಿರುವ ಹಕ್ಕುಗಳನ್ನು ಒತ್ತಾಯಪೂರ್ವಕವಾಗಿ ಕೇಳಿದಾಗ ಕೆಲಸಗಾರರ ಮೇಲೆ ಕೈಮಾಡಲಾಗಿದೆ; ಜನಗಳನ್ನು ಮರ್ದಿಸುವ ನಿಷ್ಠುರ ಶಾಸನದ ವಿರುದ್ಧ ವಿದ್ಯಾರ್ಥಿಗಳು ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಕ್ಕಾಗಿ ಅವರ ಮೇಲೆ ಹಲ್ಲೆ ನಡೆಸ ಲಾಗಿದೆ. ಇವುಗಳಿಂದ ಕೂಡಿದ ಪ್ರತಿಯೊಂದು ವಾಣಿಯನ್ನೂ ಧ್ವಂಸಮಾಡಲಾಗುತ್ತಿದೆ. ಕೆಲಸಗಾರರು ಭಾಗವಹಿಸಿದ್ದ ಪ್ರತಿಭಟನಾ ಸಭೆಯೊಂದು ವಿದ್ಯಾರ್ಥಿಯೊಬ್ಬನ ಈ ಕೂಗುಗಳಿಂದ ಮುಕ್ತಾಯಗೊಂಡಿತು : 'ನಿರಂಕುಶ ಪ್ರಭುತ್ವದ ಪತನವಾಗುತ್ತದೆ. ಜನರು ಜಾಗೃತರಾಗಿ ಎದ್ದು ಶಕ್ತಿಯುತರೂ, ಸ್ವಾತಂತ್ರ್ಯಯುತರೂ ಆಗಿ ಮುಂದೆ ಬರುತ್ತಾರೆ.' '' ಮುಂದುವರೆದು ಖಾರ್ಕೋವ್‌ನಲ್ಲಿ ವಿದ್ಯಾರ್ಥಿಗಳು ಪ್ರತಿಭಟಿಸಿದ ರೀತಿಯನ್ನು ಕುರಿತು

ಹೇಳುತ್ತಾ ಲೆನಿನ್ ಬರೆಯುತ್ತಾರೆ : ''ಅಲ್ಲಿಯ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳಲ್ಲದ ಅನೇಕರು ಭಾಗವಹಿಸಿ ಕೊನೆಗೆ ಬೀದಿಬೀದಿಯಲ್ಲೂ ದ್ವಂದ್ವ ಸಮರವನ್ನೆಸಗಿದರು. ಸಾಮಾನ್ಯ ಜನರ, ಅದರಲ್ಲೂ ಕೆಲಸಗಾರರ, ಬೆಂಬಲವಿಲ್ಲದೆ ಯಾವುದನ್ನೂ ಜಯಿಸಲು ಸಾಧ್ಯವಿಲ್ಲವೆಂದರಿತ ವಿದ್ಯಾರ್ಥಿಗಳು ವಿದ್ಯಾಲಯಗಳಿಗೆ ಸಂಬಂಧಿಸಿದ ತಮ್ಮ ಕೆಲವು ಸ್ವಾತಂತ್ರ್ಯಗಳ ಬೇಡಿಕೆಗಳಿಗಾಗಿ ಮಾತ್ರ ಹೋರಾಡಿದಲ್ಲಿ ನಿಷ್ಫಲವಾಗುವುದೆಂದರಿತು ಜನಸಾಮಾನ್ಯರೆಲ್ಲರ ಸ್ವಾತಂತ್ರ್ಯಕ್ಕಾಗಿ, ಸಾಮಾನ್ಯ ಜನತೆಯ ರಾಜಕೀಯ ಸ್ವಾತಂತ್ರ್ಯಕ್ಕಾಗಿ, ಹೋರಾಡಲು ಪಣತೊಟ್ಟಿದ್ದಾರೆ.'' ಇದೇ ಸಮಯದಲ್ಲಿ ಕೆಲಸಗಾರರನ್ನುದ್ದೇಶಿಸಿ ಲೆನಿನ್ ಹೇಳುತ್ತಾರೆ: ''ಕೆಲಸಗಾರರೇ! ರಷ್ಯಾದ ಜನತೆಯನ್ನು ಹಿಂಸಿಸುತ್ತಿರುವ ದುಷ್ಟಶಕ್ತಿಯ ಬಗ್ಗೆ ತಮಗೆಲ್ಲಾ ಪೂರ್ಣವಾಗಿ ಅರಿವುಂಟಾಗಿದೆ. ಈ ದುಷ್ಟಶಕ್ತಿಯು ನಿಮ್ಮನ್ನೆಲ್ಲಾ ಪೂರ್ಣವಾಗಿ ಬಂಧಿಸಿ ಉತ್ತಮವಾದ ಜೀವನವನ್ನು ದೊರಕಿಸಿಕೊಳ್ಳಲು ಮತ್ತು ಮಾನವೀಯ ಪ್ರತಿಷ್ಠೆಯನ್ನು ಸಾಧಿಸಿಕೊಳ್ಳಲು ಅಡ್ಡಿಯನ್ನುಂಟುಮಾಡಿದೆ. ನಿಮಗಾಗಿ ಹೋರಾಡುವ ನಿಮ್ಮ ಬಂಧುಗಳನ್ನು ದುಷ್ಟರೆಂದು ಪರಿಗಣಿಸಲಾಗುತ್ತಿದೆ. ಅದೇ ದುಷ್ಟಶಕ್ತಿಯು ಇಂದು ವಿದ್ಯಾರ್ಥಿಗಳನ್ನು ದಮನ ಮಾಡುತ್ತಿದೆ. ವಿದ್ಯಾರ್ಥಿಗಳ ಶಕ್ತಿಯನ್ನು ನಾಶಮಾಡಿದ ನಂತರ ನಿಮ್ಮ ಶಕ್ತಿಯನ್ನು ಕುಗ್ಗಿಸಲು ಯತ್ನ ನಡೆಯುವುದು ಖಂಡಿತ. ಎಲ್ಲಾ ಕ್ಷೇತ್ರಗಳಲ್ಲೂ ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಡಲು ನೀವು ಸದಾ ಸಿದ್ಧರಿರಬೇಕು. ವಿದ್ಯಾರ್ಥಿಗಳಿಗೆ ಬೆಂಬಲ ನೀಡಬೇಕಾದುದು ನಿಮ್ಮ ಕರ್ತವ್ಯ.''

ಈ ಶತಮಾನದ ಆದಿಭಾಗದಲ್ಲಿ ರಷ್ಯಾದಲ್ಲಿದ್ದ ಉಲ್ಬಣಸ್ಥಿತಿ ಇಂದು ನಮ್ಮ ದೇಶದಲ್ಲಿ ಇಲ್ಲದಿರಬಹುದು. ಆದಾಗ್ಯೂ ಇಂದಿನ ವಿದ್ಯಾರ್ಥಿಗಳೇ ನಾಳೆಯ ಕೆಲಸಗಾರರು ಎಂಬುದರ ಪರಿವೆ ನಮ್ಮಲ್ಲಿ ಸಾಕಷ್ಟು ಕಂಡುಬರುತ್ತಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿನ ವಿದ್ಯಾರ್ಥಿಗಳು ತಮ್ಮದೇ ಆದ ಲೋಕದಲ್ಲಿ ವಿಹರಿಸಿಕೊಂಡಿದ್ದಾರೆಂದು ತೋರುತ್ತಿದೆ. ತಮ್ಮ ಸುತ್ತಣ ಸಮಾಜದಲ್ಲಿನ ಕುಂದುಕೊರತೆಗಳ ಬಗೆಗೆ ಒಂದು ಅನಿರ್ವಚನೀಯವಾದ ನಿರಪೇಕ್ಷೆ ಅವರಲ್ಲಿ ಕಂಡುಬರುತ್ತಿದೆ. ರಾಜಕೀಯ ರಂಗದಲ್ಲಿ ಅವರು ಆಸಕ್ತಿವಹಿಸಿ ವಿದ್ಯಾರ್ಜನೆಯನ್ನು ಕಡೆಗಾಣಬೇಕೆಂದು ಇದರ ಸೂಚ್ಯಾರ್ಥವಲ್ಲ. ಸಮಾಜದ ಆಗುಹೋಗುಗಳತ್ತ ತಮ್ಮ ಗಮನವನ್ನು ವಿಶೇಷತಃ ಕೊಟ್ಟು ವಿದ್ಯಾರ್ಥಿದೆಸೆಯಲ್ಲೇ ಒಂದು ಸೂಕ್ತ ಮನೋಭಾವವನ್ನು ರೂಪಿಸಿಕೊಳ್ಳಬೇಕೆಂದು ಇದರ ಸಾರಾಂಶ. ಕೆಲಸಗಾರರೆಂದರೆ ಒಂದು ತುಚ್ಛವಾದ ವರ್ಗ, ಅಜ್ಞಾನಿಗಳ ಗುಂಪು, ಮುಂಬರಲು ಯೋಗ್ಯರಲ್ಲದ ಜನ, ಸಂಸ್ಕೃತಿಬಾಹಿರವಾದ ಒಂದು ಸಂಘ, ನಾಗರಿಕತೆಯನ್ನೇ ಅರಿಯದ ಒಂದು ಸಮುದಾಯ – ಇತ್ಯಾದಿಯ ಕಲ್ಪನೆ ಅಸಂಗತವಾದದ್ದೆಂದು ವಿದ್ಯಾರ್ಥಿಗಳು ಮನಗಾಣಬೇಕು. ಕೆಲಸಗಾರರ ಏಳಿಗೆಯೇ ದೇಶದ ಏಳಿಗೆ, ವಿದ್ಯಾರ್ಥಿಗಳ ಹಿತ ಎಂಬುದನ್ನರಿಯಬೇಕು. ಸಮಾಜಸ್ಥಿತಿಯ ಬಗ್ಗೆ ಅರಿವು ಉಂಟಾಗದಿದ್ದರೆ ವಿದ್ಯಾರ್ಥಿಯು ಗಳಿಸುವ ಬೇರೆಲ್ಲ ವಿದ್ಯೆಯೂ ವ್ಯರ್ಥ, ಅವನ ಜ್ಞಾನ ಅಜ್ಞಾನಕ್ಕಿಂತಲೂ ಕೀಳು.

ಇತ್ತೀಚಿನ ದಿನಗಳಲ್ಲಿ ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಕೇಳಿಬರುತ್ತಿರುವ ಕೂಗೊಂದಿದೆ. ''ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಕೆಲಸಗಾರರು ಒಂದು ಮತ್ತು ಅವರೆಲ್ಲಾ ಸಮಾನರು'', ಎಂಬುದು ಆ ಕೂಗು. ಇಂದಿನ ವಿದ್ಯಾರ್ಥಿಗಣ ಇದನ್ನು ತಿಳಿದು, ಅದರಂತೆ ನಡೆಯುವುದರಲ್ಲಿದೆ ನಮ್ಮ ದೇಶದ ಹಿತ ಮತ್ತು ಉಗಮ. ಈ ಮನೋಭಾವವು ಬೆಳೆದರೆ ಮಾತ್ರ ದೇಶದ ಉಜ್ವಲ ಭವಿಷ್ಯ ನಿಜವಾದ ರೂಪು ತಳೆಯಲು ಸಾಧ್ಯ.

ಲೆನಿನ್ ವಾಣಿ ಪ್ರಪಂಚದ ನಾನಾ ಭಾಗಗಳಲ್ಲಿ ಈಗಾಗಲೇ ಪ್ರಚಾರದಲ್ಲಿದ್ದು

ಸಮಾಜವಾದವು ಸ್ಥಿರವಾಗಿ ನೆಲೆಸಲು ಪ್ರೇರಕವಾಗಿದೆ. ಸಮಾಜವಾದದಿಂದ ನೆಲೆಗೊಳಿಸಲ್ಪಡುವ ಶಕ್ತಿಯುತ ಸುಭದ್ರ ಸಮಾಜ ಕೇವಲ ಕನಸಲ್ಲವೆಂದು ಈಗ ಸ್ಪಷ್ಟವಾಗಿದೆ. ಸಮಾಜವಾದದಿಂದಲ್ಲದೆ ವಿಶ್ವಶಾಂತಿ ಅಸಾಧ್ಯ. ಈ ತತ್ತ್ವವನ್ನು ಮುಂದುವರೆಸಿಕೊಂಡು ಮಾನವ ಜನಾಂಗಕ್ಕೆ ಸೇರಲು ಯೋಗ್ಯರೆನಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯ; ವಿಶೇಷತಃ ಯುವಕರ ಜವಾಬ್ದಾರಿ. ಲೆನಿನ್ ವಾಣಿಯ ಅರ್ಥ ಮತ್ತು ಕರೆ ಇದರಲ್ಲಿದೆ. ೧ನೇ ಮೇ ೧೯೧೯ರಂದು ಮಾಸ್ಕೋವಿನ ಕೆಂಪುಚೌಕದಲ್ಲಿ ಭವಿಷ್ಯದತ್ತ ಕೈತೋರಿಸಿ ಲೆನಿನ್ ಕೆಲವು ಮಾತುಗಳನ್ನಾಡಿದರು. 'ಇಜ್ವೆಸ್ತಿಯಾ'ದ ೨ನೇ ಮೇ ೧೯೧೯ ರ ಸಂಚಿಕೆಯಲ್ಲಿ ಅದರ ಸಾರಾಂಶ ಪ್ರಕಟವಾಯಿತು. ಆ ಮಾತುಗಳನ್ನು ಸ್ಮರಿಸೋಣ ಮತ್ತು ಅದಕ್ಕಾಗಿ ದುಡಿಯೋಣ: ''ಬಂಡವಾಳಶಾಹಿ ಕಾಲದ ಕೆಲವು ಪತ್ರಗಳನ್ನೂ ಅವಶೇಷಗಳನ್ನೂ ನಮ್ಮ ಮೊಮ್ಮಕ್ಕಳು ವಿಸ್ಮಯದಿಂದ ಪರೀಕ್ಷಿಸುತ್ತಾರೆ. ಜನತೆಯು ಪ್ರಾಥಮಿಕವಾಗಿ ಅಪೇಕ್ಷಿಸುವ ವಸ್ತುಗಳನ್ನು ಕೆಲವೇ ಜನರು ತಮ್ಮ ನಿಯಂತ್ರಣಗಳಿಗೊಳಪಡಿಸುತ್ತಿದ್ದರೆಂದು ನಂಬಲು ಅವರಿಗೆ ಕಷ್ಟವಾಗಬಹುದು. ಅಂತೆಯೇ ಕೈಗಾರಿಕೋದ್ಯಮಗಳು ಕೆಲವೊಬ್ಬರ ಆಸ್ತಿಯಾಗಿರುತ್ತಿತ್ತು ಎಂದು ಭಾವಿಸಲು ಶಕ್ಯವಾಗಲಾರದು; ಕೆಲ ಜನರು ಸೇರಿ ಜನತೆಯನ್ನು ಶೋಷಿಸುತ್ತಿದ್ದರೆಂಬುದನ್ನು ಚಿತ್ರಿಸಿ ಕೊಳ್ಳಲು ಅವರಿಗೆ ಸಾಧ್ಯವಾಗಲಾರದು; ಕೆಲಸವನ್ನೇ ಮಾಡದೆ ಕೆಲವರು ಸುಖಜೀವನವನ್ನು ನಡೆಸುತ್ತಿದ್ದರೆಂದು ತಿಳಿದು ಅವರು ನಾಚಬಹುದು. ನಮ್ಮ ಮುಂದಿನ ಪೀಳಿಗೆಯವರು ಭವಿಷ್ಯದಲ್ಲಿ ಕಾಣಬಹುದಾದ ಸಮಾಜದ ಸ್ಥಿತಿ ಇಲ್ಲಿಯವರೆಗೆ ಒಂದು ಮಾಯಾಲೋಕದ ಕಥೆಯಂತೆ ಕಂಡುಬರುತ್ತಿತ್ತು. ಆದರೆ ಬಂಧುಗಳೇ, ಇಂದು ನೀವೇ ಆ ಸಮಾಜದ ಶಂಕುಸ್ಥಾಪನೆಯನ್ನು ಮಾಡಿ ಮನಸಾರೆ ಆನಂದಿಸಿದ್ದೀರಿ. ಆ ವರ್ಗರಹಿತ ಸಮಾಜವು ಕನಸಿನ ಸಾಮ್ರಾಜ್ಯವಲ್ಲವೆಂದು ತೋರಿಸಿದ್ದೀರಿ. ಈ ಸೌಧವನ್ನು ನಮ್ಮ ಮಕ್ಕಳು ಇನ್ನೂ ಹೆಚ್ಚಿನ ಆಸ್ಥೆಯಿಂದ ಕಟ್ಟುತ್ತಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.''

(ಏಪ್ರಿಲ್ 1970)

# ಅದಮ್ಯ ಚೇ ಗೆವಾರ

> ಹುತಾತ್ಮನಿಗೆಂದೂ ವಿಫಲವೆನಿಸುವ ಮರಣವಿಲ್ಲ; ಗಾಳಿಯ ಬೀಸುವಿಕೆಯಿಂದ ಗಾಢಚಿಂತನೆಯೊಂದು ಕಳೆದುಹೋಗದು. ಅದು ಹತ್ತಿರ ಬರಬಹುದು ಇಲ್ಲವೇ ದೂರ ಸರಿಯಬಹುದು, ಆದರೆ ಅಂಥದೊಂದು ಸನಿಹದಲ್ಲಿ ಸುಳಿದು ಹೋಯಿತೆಂಬ ಸ್ಮೃತಿ ಸದಾ ಜೀವಂತವಾಗಿರುತ್ತದೆ.
>
> –ಜೋಸೆ ಮಾರ್ತಿ

ಬೊಲಿವಿಯಾದ ಮಿಲಿಟರಿ ದಂಡನಾಯಕ ಬ್ಯಾರಿಯೆಂಟೋಸ್ ಸೆಪ್ಟೆಂಬರ್ ೧೧, ೧೯೬೭ರಂದು ರೇಡಿಯೋ ಪ್ರಸಾರದಲ್ಲಿ ಚೇ ಗೆವಾರ ಆಗಲೇ ಮಡಿದಿದ್ದಾನೆಂದೂ, ಆತನ ಕ್ರಾಂತಿಕಾರಿ ಹೋರಾಟದ ಸಮಾಚಾರಗಳೆಲ್ಲಾ ಶುದ್ಧ ಸುಳ್ಳೆಂದೂ ನುಡಿದು ಚೇ ಗೆವಾರಾಗೆ ಸಂಬಂಧಿಸಿದ ಪ್ರತೀತಿಗಳೆಲ್ಲಾ ಕೇವಲ ಪ್ರಚಾರವೆಂದು ಅಲ್ಲಗಳೆದಿದ್ದ. ಆದರೂ ಸತ್ತ ಅಥವಾ ಬದುಕಿರುವ ಚೇ ಗೇವಾರಾನನ್ನು ಪತ್ತೆಹಚ್ಚಲು ಸಹಾಯಕವಾಗುವ ಯಾವುದೇ ಮಾಹಿತಿಯನ್ನು ದೊರಕಿಸಿಕೊಡುವ ವ್ಯಕ್ತಿಗೆ ೫೦,೦೦೦ ಬೊಲಿವಿಯನ್ ಡಾಲರುಗಳ ಬಹುಮಾನ ನೀಡಲಾಗುವುದೆಂದು ಪ್ರಸಾರ ಮಾಡಲಾಗಿತ್ತು. ರೇಡಿಯೋ ಮುಖೇನ ಇದನ್ನೆಲ್ಲಾ ತಿಳಿದ ಚೇ ತನ್ನ ಗೊರಿಲ್ಲಾ ಪಡೆಯ ಕೆಚ್ಚು ಸಾಮರ್ಥ್ಯಗಳನ್ನು ಮೆಚ್ಚಿಕೊಂಡ.

ಅಕ್ಟೋಬರ್ ೭, ೧೯೬೭. ಬೊಲಿವಿಯಾದ ದಟ್ಟ ಅರಣ್ಯ ಪ್ರದೇಶದಲ್ಲಿ ಒಂದು ಗೊರಿಲ್ಲಾ ಸೈನ್ಯದ ತುಕಡಿ. ಅದರ ನಾಯಕ ಚೆ ಗೆವಾರ. ಬ್ಯಾರಿಯೆಂಟೋಸ್‌ನ ಸೈನ್ಯ ಈ ತುಕಡಿಯನ್ನು ಅಟ್ಟಿಕೊಂಡೇ ಬಂದಿದೆ ಮತ್ತು ಈಗ ಅದನ್ನು ಸುತ್ತುವರಿದು ನಿಂತಿದೆ. ಗೊರಿಲ್ಲಾಗಳು ಶತ್ರು ಸೇನೆಯನ್ನು ಹಿಮ್ಮೆಟ್ಟಿಸುತ್ತಾ ಕೆಲವೊಮ್ಮೆ ಆ ಸೇನೆಯ ಕಣ್ಣು ತಪ್ಪಿಸಿ ನಿರ್ಜನ ಪ್ರದೇಶಗಳಲ್ಲಿಯೂ ಹಳ್ಳಿಗಾಡುಗಳಲ್ಲಿಯೂ ಮುಂದುವರಿಯುತ್ತಾ ಬಂದಿದ್ದಾರೆ. ಮಧ್ಯಾಹ್ನ ಒಂದು ಗಂಟೆ. ಸುತ್ತುವರಿದ ಬ್ಯಾರಿಯೆಂಟೋಸ್‌ನ ಸೈನ್ಯದಿಂದ ಪಾರಾಗಬೇಕಾದರೆ ಕತ್ತಲಾಗುವವರೆಗಾದರೂ ಸೋಲದೆ ಹೋರಾಡಬೇಕು. ಗೊರಿಲ್ಲಾ ಪಡೆ ಹಂಚಿಹೋಗಿ ಸದ್ಯಕ್ಕೆ ಕೆಲವೇ ಮಂದಿ ಚೇ ಜೊತೆಯಲ್ಲಿದ್ದಾರೆ. ಅವರೆಲ್ಲಾ ಬೇರೆ ಬೇರೆ ರಾಷ್ಟ್ರಗಳವರು. ಪೆರು, ಕ್ಯೂಬ ಮತ್ತು ಬೊಲಿವಿಯಾದವರೇ ಹೆಚ್ಚು. ಇಂಟಿ ಮತ್ತು ಕೋಕೋ ಪೆರಿದೋ ಒಂದು ಕಡೆ ದಿಟ್ಟತನದಿಂದ ಶತ್ರುಸೇನೆಯನ್ನು ತಡೆಹಿಡಿದಿದ್ದಾರೆ. ಚೇ ಆಗಲೇ ಗಾಯಗೊಂಡಿದ್ದಾನೆ. ಅವನ ಎಂ-೨ ರೈಫಲ್ ನಿಷ್ಪ್ರಯೋಜಕವಾಗಿದೆ. ಅವನ ಇನ್ನೊಂದು ಪಿಸ್ತೂಲ್‌ನಲ್ಲಿ ಗುಂಡೇ ಇಲ್ಲ! ಕಾಲಿನ ಗಾಯದಿಂದಾಗಿ ಎಲ್ಲೂ ಓಡಲಾರ. ಹೀಗಾಗಿ ಬ್ಯಾರಿಯೆಂಟೋಸ್‌ನ ಸೈನ್ಯಕ್ಕೆ ಸೆರೆಯಾದ, ಶರಣಾಗಲಿಲ್ಲ. ದಕ್ಷಿಣ ಅಮೆರಿಕಾದಲ್ಲಿ ಯಾವನ ಹೆಸರು ಕಾಳ್ಗಿಚ್ಚಿನಂತೆ ಹರಡಿ ಆಗ್ಗೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಶಕ್ತಿ, ಪ್ರಭಾವಗಳಿಂದ ಮೆರೆಯುತ್ತಿದ್ದ ಬ್ಯಾರಿಯೆಂಟೋಸ್‌ನ ಮಿಲಿಟರಿ ಸರಕಾರಕ್ಕೆ ಹೃದ್ರೋಗವನ್ನುಂಟುಮಾಡಿದ್ದಿತೋ, ಆ ವ್ಯಕ್ತಿ ಕಡೆಗೂ ಸೆರೆಸಿಕ್ಕಿದನೆಂದು ಸಾಮ್ರಾಜ್ಯಶಾಹಿ ಭಂಟರು ಎಲ್ಲೆಲ್ಲೂ ಸಂತಸಪಟ್ಟರು. ಚೇ ಗೆವಾರಾ ಹಿಗೇರಸ್ ಪಟ್ಟಣಕ್ಕೆ ಸಾಗಿಸಲ್ಪಟ್ಟ. ಸೆರೆಹಿಡಿದವರೊಡನೆ ಸಂಭಾಷಿಸಲು ನಿರಾಕರಿಸಿದ;

ಅವನನ್ನು ರೇಗಿಸಹೊರಟವನೊಬ್ಬನ ಮತ್ತು ಮಿಲಿಟರಿ ಅಧಿಕಾರಿಯೊಬ್ಬನ ಮುಖದ ಮೇಲೆ ಮುಷ್ಟಿಯಿಂದ ಬಲವಾಗಿ ಗುದ್ದಿದ.

ಬ್ಯಾರಿಯೆಂಟೋಸ್, ಓವಾಂದೋ, ಮತ್ತಿತರ ಉನ್ನತ ಮಿಲಿಟರಿ ಅಧಿಕಾರಿಗಳು ಲಪಾಜ್‌ನಲ್ಲಿ ಸೇರಿದರು. ಚೇನನ್ನು ಕೊಲ್ಲಬೇಕೆಂದು ಅವರ ತೀರ್ಮಾನ. ಹಿಗೇರಸ್‌ನಲ್ಲಿ ಚೇ ಅಂತ್ಯವಾಗಬೇಕು. ಅಮೆರಿಕಾದಲ್ಲಿ ತರಬೇತಿ ಪಡೆದಿದ್ದ ಮೇಜರ್ ಆಯೋರೋ ಮತ್ತು ಕರ್ನಲ್ ಸೆಲ್ನಿಚ್ ಸೇರಿ ಮೇರಿಯೋ ಟೆರಾನ್‌ಗೆ ಈ ಕಾರ್ಯವನ್ನು ನಿರ್ವಹಿಸಿದರು. ಚೇ ಇದ್ದೆಡೆಗೆ ಸೆಲ್ನಿಚ್ ಹೋಗುವ ಮುಂಚೆಯೇ ಇಬ್ಬರು ಗೊರಿಲ್ಲಾಗಳನ್ನು ಗುಂಡಿಟ್ಟು ಕೊಂದಾಗಿತ್ತು. ಆ ಗುಂಡಿನ ಸದ್ದು ಚೇ ಕಿವಿಯನ್ನು ತಾಗಿತ್ತು. ಸೆಲ್ನಿಚ್ ಸ್ವಲ್ಪ ಹಿಂಜರಿದ : ''ಗುಂಡು ಹೊಡೆ, ಹೆದರಬೇಡ'' ಎಂದಬ್ಬರಿಸಿದ ಚೇ. ಸೆಲ್ನಿಚ್ ಚೇನನ್ನು ಕೊಲ್ಲದೆ ಅಲ್ಲಿಂದ ಕಾಲ್ತೆಗೆದ.

ಅರಣ್ಯದಲ್ಲಿ ಯುದ್ಧದ ಮಧ್ಯದಲ್ಲೇ ಚೇ ಸತ್ತಿದ್ದನೆಂದು ಆಗಲೇ ಸರ್ಕಾರ ಹೇಳಿಕೆ ಕೊಟ್ಟಾಗಿತ್ತು. ನೋವಿನಿಂದ ನರಳುತ್ತಿದ್ದ ಚೇ ಯಾವನೋ ಸೈನಿಕನ ಗುಂಡಿಗೆ ಬಲಿಯಾಗಿ ಅಸುವನ್ನು ನೀಗಿದ. ಇದು ಕ್ಯೂಬಾದ ನಾಯಕ ಡಾ॥ ಫಿಡೆಲ್ ಕ್ಯಾಸ್ಟ್ರೋ ಅವರ ವರದಿ. ಆದರೆ ಚೇ ಸತ್ತ ಬಗೆ ಇದೇ ಎಂದು ಹೇಳಲಾಗದಿರುವುದು ಆತನ ವಿರುದ್ಧದ ಹಲವಾರು ಸಂಚುಗಳ ಸ್ವರೂಪವನ್ನು ಬಯಲಿಗೆಳೆಯುತ್ತದೆ. ತನ್ನ ಜೀವನಕಾಲದಲ್ಲೇ ಐತಿಹ್ಯಗಳಿಗೆ ವಸ್ತುವಾದ ಚೇ ಗೆವಾರಾ ಸತ್ತ ರೀತಿಯೂ ಒಂದು ಐತಿಹ್ಯವಾಗಿಯೇ ಉಳಿದಿದೆ. ಆದರೆ ಆತನ ಜೀವನ ಮತ್ತು ಹೋರಾಟಗಳು ಮಾತ್ರ ನೈಜವಾಗಿದ್ದು ಐತಿಹಾಸಿಕವಾಗಿ ಚಿರಸ್ಥಾಯಿಯಾಗಿರುವಂತಹವು.

ಅಮೆರಿಕಾದ ಸಾಮ್ರಾಜ್ಯಶಾಹಿ ಕುನೀತಿಯ ವಿರುದ್ಧ ಚೇ ಸೆಟೆದೆದ್ದದ್ದು ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ. ಮಾರ್ಮಿಕ ವಸಾಹತುಶಾಹಿಯಿಂದಾಗಿ ದಕ್ಷಿಣ ಅಮೆರಿಕಾದ ಜನತೆ ಕಷ್ಟಕಾರ್ಪಣ್ಯಗಳಿಗೆ ತುತ್ತಾಗಿ ಹಲವಾರು ಶತಮಾನಗಳ ದಬ್ಬಾಳಿಕೆಯಿಂದ ಹೊರಬರಲು ಪ್ರಯತ್ನ ನಡೆಸುತ್ತಿದ್ದಾಗ ಅಮೆರಿಕಾದ ಜನವಿರೋಧಿನೀತಿಯು ಹಲವಾರು ಕ್ರಾಂತಿಗಳನ್ನು ಪ್ರಚೋದಿಸಿತು. ನವವಸಾಹತುಶಾಹಿಯ ಶೋಷಣೆಯ ಕ್ರಮವನ್ನು ಯಥಾವತ್ತಾಗಿ ಪ್ರತಿಪಾದಿಸುವುದು ದಕ್ಷಿಣ ಅಮೆರಿಕಾ ರಾಷ್ಟ್ರಗಳ ಪರಿಸ್ಥಿತಿಯನ್ನು ವಿಶ್ಲೇಷಿಸುವುದರಿಂದ ಸಾಧ್ಯವಾಗುತ್ತದೆ. ಅಮೆರಿಕಾಗಳ ಭೂಪಟದತ್ತ ಗಮನ ನೀಡೋಣ. ದಕ್ಷಿಣ ಅಮೆರಿಕೆಯಲ್ಲಿ ತೆಂಗಿನಮರದ ಬುಡ; ಅದಕ್ಕೆ ನೀರೆರೆಯುತ್ತಾನೆ ಒಬ್ಬ ದಕ್ಷಿಣ ಅಮೆರಿಕಾದ ರೈತ. ವೃಕ್ಷ ಬೆಳೆದು ಫಲ ಬಿಟ್ಟಿದೆ. ಆದರೆ ಮರದ ತುದಿ ಉತ್ತರ ಅಮೆರಿಕಾದವರೆಗೆ ಬೆಳೆದು ನಿಂತಿದೆ. ಅಲ್ಲಿ ಐಸೆನ್‌ಹೋವರ್, ಕೆನೆಡಿ, ಜಾನ್ಸನ್, ನಿಕ್ಸನ್ ಮತ್ತು ಕಾರ್ಟರ್ ಕಾಯಿಗಳನ್ನು ಕಿತ್ತು ತುಂಬಿಕೊಳ್ಳುತ್ತಿದ್ದಾರೆ. ಕ್ಯೂಬಾದ ಸಕ್ಕರೆ, ಮೆಕ್ಸಿಕೋವಿನ ತೈಲ, ಬ್ರೆಜಿಲ್‌ನ ಕಾಫಿ, ಚಿಲಿಯ ತಾಮ್ರ ಇತ್ಯಾದಿಗಳೆಲ್ಲಾ ಅಮೆರಿಕೆಯ ಕೆಲವು ಬಂಡವಳಿಗರ ಸ್ವತ್ತು. ಆ ದೇಶಗಳ ಜನತೆಯನ್ನು ಲೂಟಿಮಾಡಲು ಅಮೆರಿಕಾ ಸರ್ಕಾರದ (ಅ)ನೈತಿಕ ಮತ್ತು ಮಿಲಿಟರಿ ಬೆಂಬಲ. ಏಕಸ್ವಾಮ್ಯ ಚಕ್ರಾಧಿಪತ್ಯವು ದಕ್ಷಿಣ ಅಮೆರಿಕಾವನ್ನೆಲ್ಲ ಆಕ್ರಮಿಸಿ ಅಲ್ಲಿಯ ಜನತೆಯನ್ನು ಕಂಗಾಲು ಮಾಡಿದೆ. ಅಲ್ಲಿಯ ದುಡಿತ, ಪರಿಶ್ರಮಗಳಿಗೆ ಕ್ರಯವಿಲ್ಲ; ಅಲ್ಲಿಯ ಸಂಪತ್ತಿಗೆ ಬೆಲೆಯಿಲ್ಲ; ಅಲ್ಲಿನ ಜನತೆಗೆ ಗೌರವವಿಲ್ಲ. ಎಷ್ಟು ದಿನ ಹೀಗೆ ನಡೆದೀತು ?

ಈ ಪ್ರಶ್ನೆಗಳು ಚೇ ಗೆವಾರಾನನ್ನು ಬಾಧಿಸಲು ಮೊದಲುಮಾಡಿದ್ದು ಆತ ಒಂದು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ. ಹಲವು ದಕ್ಷಿಣ ಅಮೆರಿಕಾ ರಾಷ್ಟ್ರಗಳ ಮಂದಿಯನ್ನು ಕಾಲೇಜಿನಲ್ಲಿ ಅವನು ಭೇಟಿಯಾಗಿದ್ದ. ವಿಶ್ವದ ಇತಿಹಾಸವನ್ನು ವಿಶೇಷವಾಗಿ ಅಭ್ಯಾಸ ಮಾಡಲಿಲ್ಲವಾದರೂ ಚೇಗೆ ವಿಶ್ವದ ಬದಲಾವಣೆಗಳು ನಿರಂತರವಾಗಿ

ಕಂಡುಬಂದವು. ಸುಮಾರು ನಾಲ್ಕುನೂರು ವರ್ಷಗಳ ಕಾಲ ಸ್ಪೇನ್ ದಕ್ಷಿಣ ಅಮೆರಿಕಾದ ರಾಷ್ಟ್ರಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡಿತ್ತು. ಎರಡನೆಯ ಮಹಾಯುದ್ಧದ ನಂತರ ವಸಾಹತುಶಾಹಿ ಪದ್ಧತಿ ನೂತನ ಸ್ವರೂಪವನ್ನು ತಾಳಿತು. ವಿಶ್ವದ ಬೇರೆ ಕೆಲವೆಡೆಗಳಲ್ಲಿ ಆದಂತೆ ದಕ್ಷಿಣ ಅಮೆರಿಕಾದಲ್ಲೂ ತೋರಿಕೆಗೆ ರಾಷ್ಟ್ರಗಳು ಸ್ವತಂತ್ರವಾದುವು. ಆರ್ಥಿಕ ಶೋಷಣೆಯು ಮಾತ್ರ ಇನ್ನೂ ತೀವ್ರವಾಗಿಯೇ ಮುಂದುವರೆಯಿತು. ಇದರ ವಿರುದ್ಧ ಒಂದು ಪ್ರಜ್ಞೆ ಬೆಳೆಯುತ್ತಿದ್ದು ಕ್ಯೂಬಾದ ಹೋರಾಟವು ಒಂದು ಮಾರ್ಗದರ್ಶನವೆಂಬಂತೆ ಮೂಡಿಬಂತು. ದುರ್ದಮ್ಯವೆಂದು ನಂಬಲಾಗಿದ್ದ ಅಲ್ಲಿನ ಬಟಿಸ್ಟಾ ಸರ್ಕಾರ ಜನತೆಯ ವಿರುದ್ಧ ಅದೆಷ್ಟು ಪೊಲೀಸ್ ಮಿಲಿಟರಿ ಪಡೆಗಳನ್ನುಪಯೋಗಿಸಿದರೂ ಸಹ ಕಡೆಗೂ ಕುಸಿದುಬಿತ್ತು. ಫಿಡೆಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ ಡಿಸೆಂಬರ್ ೫, ೧೯೫೬ ರಂದು 'ಗ್ರಾನ್ಮಾ' ಎಂಬ ದೋಣಿಯಲ್ಲಿ ಕ್ಯೂಬಾದ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ತೀವ್ರಗೊಳಿಸಲು ಆ ದೇಶದ ತೀರದಲ್ಲಿ ಕೆಲಮಂದಿ ಕ್ರಾಂತಿಕಾರಿಗಳು ಬಂದಿಳಿದರು. ಕ್ಯೂಬಾದವನಲ್ಲದ ಚೇ ಗೆವಾರ ಆ ಗುಂಪಿನಲ್ಲಿದ್ದ. ಇಪ್ಪತ್ತೈದು ತಿಂಗಳ ಅವಿಶ್ರಾಂತ ಹೋರಾಟದಿಂದಾಗಿ ಕ್ಯೂಬಾ ನವೀನವಾದ ರೀತಿಯಲ್ಲಿ ಸ್ವಾತಂತ್ರ್ಯವನ್ನು ದಕ್ಕಿಸಿಕೊಂಡಿತು. ವೈದ್ಯಕೀಯ ತರಬೇತಿಯನ್ನು ಪಡೆದಿದ್ದ ಚೇ ಗೆವಾರ ಆ ಕಾಲದಲ್ಲೆಲ್ಲಾ ವೈದ್ಯನಿಗೂ ಹೆಚ್ಚಾಗಿ ಗೊರಿಲ್ಲಾ ಸೈನಿಕನಾಗಿ ಕಾದಾಡಿದ. ಸ್ವತಂತ್ರ ಕ್ಯೂಬಾದಲ್ಲಿ ಶಿಕ್ಷಣ ಮತ್ತು ತತ್ಸಂಬಂಧಿತ ಖಾತೆಗಳನ್ನು ಚೇ ನಿರ್ವಹಿಸಲನುವಾದ. ಉನ್ನತ ನಾಯಕತ್ವನ್ನು ನೀಡಿ ಕ್ಯೂಬಾವನ್ನು ಭವ್ಯ ಭವಿಷ್ಯದತ್ತ ಕೊಂಡೊಯ್ಯುವುದರಲ್ಲಿ ಕ್ಯಾಸ್ಟ್ರೋಗೆ ಸಹಭಾಗಿಯಾಗಿ ನಿಂತು ಕ್ಯೂಬಾದವನಲ್ಲದ ಚೇ ಹೆಸರಾಂತ ವ್ಯಕ್ತಿಯಾದ. ಪದವಿಯ ಅಭಿಲಾಷೆಯಿಲ್ಲದ ಚೇ ಕ್ಯೂಬಾಗಾಗಿ ಹೋರಾಟ ನಡೆಸಿದಂತೆ ಬೇರೆ ದಕ್ಷಿಣ ಅಮೆರಿಕಾ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ನಡೆಸಬೇಕಾದುದು ತನ್ನ ಅಂತರರಾಷ್ಟ್ರೀಯ ಸಹಯೋಗ ದೃಷ್ಟಿಯಿಂದ ನಿರ್ಧರಿಸಲಾದ ಕರ್ತವ್ಯವೆಂದು ಬಗೆದ. ಕ್ಯೂಬಾದ ಭವಿಷ್ಯ ಅಲ್ಲಿಯ ಜನತೆಯ ಕೈಸೇರಿತ್ತು. ಆದರೆ ಬೇರೆ ದಕ್ಷಿಣ ಅಮೆರಿಕಾ ರಾಷ್ಟ್ರಗಳ ವರ್ತಮಾನ ಇನ್ನೂ ಸಾಮ್ರಾಜ್ಯ ಶಾಹಿಗಳ ಕೈಯಲ್ಲೇ ಇತ್ತು. ಇದನ್ನು ಸಹಿಸದಾದ ಚೇ. ಎಂದೇ ಕ್ಯಾಸ್ಟ್ರೋವಿಗೆ ತನ್ನ ನಿರ್ಧಾರ ವ್ಯಕ್ತಪಡಿಸಿದ. ಪದವಿಯನ್ನು ಬಿಟ್ಟುಕೊಟ್ಟು, ಕ್ಯೂಬಾದಿಂದ ತೆರಳಿ, ಅರ್ಜೆಂಟೈನಾ, ಪೆರು, ಬೊಲಿವಿಯಾ, ಮೆಕ್ಸಿಕೋ ಇನ್ನಿತರ ರಾಷ್ಟ್ರಗಳಿಂದ ಬಂದ ಜನರ ಗೊರಿಲ್ಲಾ ತುಕಡಿಯನ್ನೊಂದು ಕಟ್ಟಿ ಆ ಎಲ್ಲ ದೇಶಗಳಲ್ಲೂ ಸಾಮ್ರಾಜ್ಯಶಾಹಿಯ ವಿರುದ್ಧ ಸೆಣಸಾಡಬೇಕೆಂಬುದೇ ಆ ನಿರ್ಧಾರ. ಆ ರಾಷ್ಟ್ರಗಳನ್ನು ಸಾಮ್ರಾಜ್ಯಶಾಹಿ ಹಿಡಿತದಿಂದ ವಿಮುಕ್ತಿಗೊಳಿಸುವುದೇ ಗುರಿ. ನಿರ್ಧಾರವನ್ನು ಕೈಗೊಂಡ ಮೇಲೆ ಅದನ್ನು ಕಾರ್ಯಗತ ಗೊಳಿಸುವುದಕ್ಕೆ ಮುನ್ನಡೆಯಲು ಚೇಗೆ ಬಹಳ ಕಾಲ ಹಿಡಿಯಲಿಲ್ಲ. ''ಎಲ್ಲ ಕಾಲಗಳಲ್ಲೂ ಎಲ್ಲ ಪರಿಸ್ಥಿತಿಗಳಲ್ಲೂ ಹೋರಾಟ ನಡೆಸದಿರಲು ಸಾಕಷ್ಟು ಕಾರಣಗಳನ್ನು ಹುಡುಕುವುದು ಅಸಾಧ್ಯವೇನಲ್ಲ. ಆದರೆ ವಿಮುಕ್ತಿಯನ್ನು ಪಡೆಯದಿರುವುದಕ್ಕೆ ಅವೇ ಕಾರಣವಾಗುತ್ತವೆ.'' ಇದನ್ನು ಸಂಪೂರ್ಣವಾಗಿ ಮನಗಂಡಿದ್ದ ಚೇ. ಯಾವ ತ್ಯಾಗಕ್ಕೂ ಹಿಂಜರಿಯದ ಮತ್ತು ಭಯವೇನೆಂಬುದರ ಸೋಂಕಿಲ್ಲದ ಚೇ ಅಂತರರಾಷ್ಟ್ರೀಯ ಅನ್ಯೋನ್ಯತೆಯ ಪ್ರತೀಕವಾದ. ಆಕ್ಸ್‌ಫರ್ಡ್, ಪ್ಯಾರಿಸ್, ಹಾರ್ವರ್ಡ್ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳ ಒಂದು ಬಣಕ್ಕೆ ಅತ್ಯುನ್ನತ ವ್ಯಕ್ತಿಯಾಗಿ ಕಂಗೊಳಿಸಿದ. ಕೆಲವರಿಗಂತೂ ಆರಾಧ್ಯದೇವತೆಯೇ ಆದನೆಂದರೂ ತಪ್ಪಾಗಲಾರದು. ನಿಷ್ಠೆ ಮತ್ತು ಯುವಕ ಪ್ರಜ್ಞೆಯ ಮೂರ್ತಿಯೆಂದು ಪ್ರಖ್ಯಾತನಾದ ಚೇ.

ಆತನದು ಕೇವಲ ಸಾವಿನೊಡನೆ ಸೆಣಸಾಟವಲ್ಲ; ತನ್ನ ಶೌರ್ಯವನ್ನು ತೋರಿಸಿ

ವಿಜೃಂಭಿಸುವುದೇ ಗುರಿಯೂ ಅಲ್ಲ. ದಾಸ್ಯದಲ್ಲಿ ತೊಳಲಿ ಕಂಗಾಲಾಗಿರುವ ಮುಗ್ಧಜನತೆಯ ಪ್ರಜ್ಞೆಯನ್ನು ಹೊಡೆದೆಬ್ಬಿಸಿ ಸ್ವಾತಂತ್ರ್ಯದತ್ತ ಆ ಜನತೆಯನ್ನು ಕೊಂಡೊಯ್ಯುವುದೇ ಆತನ ಅಂತಿಮ ಮತ್ತು ಏಕೈಕ ಗುರಿಯಾಗಿತ್ತು. ಅದಕ್ಕಾಗಿ ಆತನು ಅನುಸರಿಸಿದ ಮಾರ್ಗದ ಬಗ್ಗೆ ನಮ್ಮಲ್ಲಿ ಯಾವುದೇ ಅಭಿಪ್ರಾಯವಿದ್ದರೂ ಆತನ ತ್ಯಾಗಮಯೀ ಜೀವನಕ್ಕೆ ನಮ್ಮ ಪ್ರಣಾಮಗಳಿದ್ದೇ ತೀರುತ್ತದೆ.

ಹೋರಾಟ ಮತ್ತು ಮಾನವೀಯತೆಗಳು ಪರಸ್ಪರ ಹೊಂದಿಕೊಂಡೇ ನಡೆಯುತ್ತವೆಂಬುದಕ್ಕೆ ಚೇ ಗೆವಾರಾನ ಜೀವನವೇ ಒಂದು ನಿದರ್ಶನ. ಮಾನವೀಯತೆಯ ಆವಿಷ್ಕಾರವಾಗಲು ಹೋರಾಟವೇ ದಾರಿ ಎಂದು ಆತನ ನಿರ್ಧಾರ. ಹೋರಾಟವಿಲ್ಲದಿದ್ದರೆ ಶೋಷಣೆ, ದಬ್ಬಾಳಿಕೆ ಮತ್ತು ಹಿಂಸೆಗಳು ಮುಂದುವರೆದಾವೆಂದು ಆತನ ಕಾರ್ಯಪ್ರವೃತ್ತಿ. ಎಂದೇ ಚೇ ಗೆವಾರ ಹಲವು ಕ್ರಾಂತಿಕಾರಿಗಳಿಗೆ ಪ್ರೀತಿಯ ನಾಯಕ. ಆತನೊಮ್ಮೆ ನುಡಿದಿದ್ದ: ''ನಾವು ಅಂತರರಾಷ್ಟ್ರೀಯ ದುಡಿಯುವ ಜನತೆಯ ನಿಜವಾದ ಐಕ್ಯತೆಯನ್ನು ಸಾಧಿಸೋಣ. ನಾವು ಯಾವ ಪತಾಕೆಯ ಅಡಿಯಲ್ಲಿ ಹೋರಾಡುತ್ತೇವೋ ಅದು ಮಾನವನ ವಿಮುಕ್ತಿಯ ಕೀರ್ತಿಯನ್ನು ಹಾಡುವ ಪತಾಕೆ. ಅಮೆರಿಕಾದವನಾಗಲಿ, ಏಷ್ಯಾದವನಾಗಲಿ, ಆಫ್ರಿಕಾದವನಾಗಲಿ, ಅವನಿಗೆ ವಿಯೆಟ್ನಾಂ, ವೆನಿಜೂಲ, ಗ್ವಾಟೆಮಾಲ, ಲಾವೋಸ್, ಗಿನಿ, ಕೊಲಂಬಿಯಾ, ಬೊಲಿವಿಯಾಗಳಲ್ಲಿ ಎಲ್ಲಿ ಮರಣ ಬಂದರೂ ಶ್ರೇಷ್ಠವೇ. ನಾವು ಹುಟ್ಟಿದ ರಾಷ್ಟ್ರವಲ್ಲದಿರುವೆಡೆಯಲ್ಲಿನಾವು ಚೆಲ್ಲುವ ಪ್ರತಿಯೊಂದು ರಕ್ತಬಿಂದುವೂ ಜೀವಂತವಾಗಿರುವ ಜನಕ್ಕೆ ನಾವು ನೀಡಬಹುದಾದ ಅನುಭವ. ಆ ಬಿಂದುವಿಗೆ ತಮ್ಮ ರಕ್ತವನ್ನೂ ಸೇರಿಸಿದರೆ ಆ ಜನದ ವಿಮೋಚನೆಯ ಹೋರಾಟ ಸಫಲವಾಗುತ್ತದೆ. ವಿಮೋಚನೆಯನ್ನು ಪಡೆಯುವ ಪ್ರತಿಯೊಂದು ರಾಷ್ಟ್ರವೂ ಬೇರೆ ರಾಷ್ಟ್ರಗಳ ವಿಮೋಚನೆಗೆ ದಾರಿ ಮಾಡಿಕೊಡುತ್ತದೆ.'' ಹೀಗೆ ಫಲಪ್ರದವಾಗುವವರೆಗೂ ಕ್ರಾಂತಿ ಮತ್ತು ಹೋರಾಟಗಳಿಗಾಗಿ ಕರೆ ನೀಡಿದವನು ಚೇ ಗೆವಾರ.

ಒಟ್ಟು ಜನತೆಯ ವಿಮುಕ್ತಿಯು ಜನತಾ ಸಮುದಾಯದ ಪ್ರಜ್ಞಾಪೂರ್ವಕ ಹೋರಾಟದಿಂದ ಮಾತ್ರವೇ ಸಾಧ್ಯ. ಸಾಮಾಜಿಕ ಮತ್ತು ರಾಜಕೀಯ ಸಂಘಟನೆಯಿಂದಲ್ಲದೆ ವೈಯಕ್ತಿಕ ಧೀರತನದಿಂದ ಸಮಾಜವನ್ನು ಬದಲಾಯಿಸುವುದು ಅಸಾಧ್ಯ. ಚೇ ಗೆವಾರ ಅವರ ಸಾಮರ್ಥ್ಯವು ಕೆಲವೊಮ್ಮೆ ನಿಷ್ಫಲವಾಗಲು ಇದು ಕಾರಣ. ಬೊಲಿವಿಯಾದ ಜನತೆಯನ್ನು ವಿಮುಕ್ತಿಗೊಳಿಸಲು ಹೊರಟ ಚೇ ಮತ್ತಿತರ ಗೊರಿಲ್ಲಾಗಳು ಆ ದೇಶದ ಜನತೆಯ ಸಾಮ್ರಾಜ್ಯಶಾಹಿ ವಿರುದ್ಧದ ಪ್ರಜ್ಞೆಯ ಬೆಳವಣಿಗೆಗಾಗಿ ಯಾವ ಪ್ರಯತ್ನವನ್ನೂ ಮಾಡಲಾಗಲಿಲ್ಲ. ಬದಲಾಗಿ ಅಲ್ಲಿಯ ಜನತೆಯು ಈ ಗೊರಿಲ್ಲಾ ಪಡೆಗಳನ್ನು ಕಂಡು ಭೀತರಾಗುವಂತೆ ಮಾಡುವುದರಲ್ಲಿ ಸಾಮ್ರಾಜ್ಯಶಾಹಿ ಯಶಸ್ವಿಯಾಯಿತು. ಜನತೆಯನ್ನು ಸಂಘಟಿಸಿ ಹೋರಾಟ ನಡೆಸಲು ನಾಯಕತ್ವವನ್ನು ನೀಡಲು ಸಾಧ್ಯವಾಗಿದ್ದಿದ್ದರೆ ಬೊಲಿವಿಯಾದ ಮಿಲಿಟರಿ ಸರಕಾರದ ಗತಿ ಬೇರೆಯೇ ಆಗಿರುತ್ತಿತ್ತು! ಗಾಂಧೀಜಿ, ಲೆನಿನ್, ಹೋ ಚಿ ಮಿನ್ ಇತ್ಯಾದಿಗಳ ಪರಂಪರೆಗೆ ಸೇರುವ ಚೇ ಗೆವಾರ ಹಲವು ವಿಷಯಗಳಲ್ಲಿ ಅವರಿಗಿಂತ ತೀರಾ ಭಿನ್ನನಾದವನು. ಕೆಲವೊಮ್ಮೆ ವೈಯಕ್ತಿಕ ಕಾದಾಟದಲ್ಲಿ ಭರವಸೆ ಇಟ್ಟುಕೊಂಡಿದ್ದವನು ಈತ. ಆದರೆ ಜನತೆಯ ಪರವಾಗಿ ಕೆಲವು ನಾಯಕರು ಮಾತ್ರ ಯೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗದು. ಆ ನಿರ್ಧಾರಗಳನ್ನು ಕಾರ್ಯಗತಗೊಳಿಸುವುದು ಕೇವಲ ನಾಯಕರಲ್ಲ; ಆದ್ದರಿಂದ ಆ ನಿರ್ಧಾರಗಳು ಜನತೆಯ ನಿರ್ಧಾರವಾಗಿರಬೇಕು. ಈ ನಿರ್ಧಾರಗಳನ್ನು ರೂಪಿಸುವಲ್ಲಿ ಜನತೆಯ ಇಚ್ಛೆ ಮತ್ತು ಪ್ರಜ್ಞೆಯನ್ನು ಸರಿಯಾಗಿ

ಪ್ರತಿಫಲಿಸುವವನೇ ಉತ್ತಮ ನಾಯಕನಾಗಬಲ್ಲ, ಕ್ರಿಯಾವಂತ ಕ್ರಾಂತಿಕಾರಿಯಾಗಬಲ್ಲ. ಚೇ ಗೆವಾರಾಗಿದ್ದ ಆಸ್ಥೆ, ಧೈರ್ಯ, ಸಾಮರ್ಥ್ಯಗಳೆಲ್ಲಾ ಸ್ವಲ್ಪಮಟ್ಟಿಗೆ ವ್ಯರ್ಥವಾದದ್ದು ಈ ಚಾರಿತ್ರಿಕ ತತ್ವದೃಷ್ಟಿ ಇಲ್ಲದ್ದರಿಂದ ಎಂದು ಭಾವಿಸಿದರೆ ತಪ್ಪಾಗಲಾರದು.

ಚೇ ತನ್ನದೇ ಆದ ಮಾರ್ಗವನ್ನು ಹಿಡಿದು ಮುಂದುವರಿದ. ನಿಸ್ವಾರ್ಥತೆ, ಶೋಷಣೆಯ ವಿರುದ್ಧ ಕಳಕಳಿ, ಮಾನವನ ಸುಖ ಮತ್ತು ಭವಿಷ್ಯದ ಬಗ್ಗೆ ಅಪಾರವಾದ ಪ್ರೇಮ ಮತ್ತು ತಡೆಯಲಾಗದ ಹುಮ್ಮಸ್ಸು ಇತ್ಯಾದಿಗಳೆಲ್ಲಾ ಚೇ ಗೆವಾರಾನ ಗುಣಗಳಲ್ಲಿ ಎದ್ದುಕಾಣುತ್ತವೆ. ವಿಶ್ವದ ಯುವಜನಾಂಗದ ಅದಮ್ಯ ಶಕ್ತಿ ಮತ್ತು ಭಾವನೆಗಳ ಪ್ರತೀಕ ಚೇ ಗೆವಾರ. ಎಂದೇ ಆತನನ್ನು 'ಅದಮ್ಯ ಚೇ' ಎಂದು ಕರೆಯುವುದು.

– *ಪ್ರಜಾಮತ : ಜುಲೈ* 1973

4

# ಪ್ರಗತಿಯ ಹಾದಿಯಲ್ಲಿ

ತತ್ತ್ವಶಾಸ್ತ್ರಜ್ಞರು ವಿಶ್ವವನ್ನು ಹಲವು ವಿಧಗಳಲ್ಲಿ ವ್ಯಾಖ್ಯಾನಿಸಿದ್ದಾರೆ, ಅಷ್ಟೆ; ಆದರೆ ನಿಜಸಂಗತಿ ಇರುವುದು ಅದನ್ನು ಬದಲಾಯಿಸಬೇಕು ಎಂಬುದರಲ್ಲಿ.

—ಕಾರ್ಲ್ ಮಾರ್ಕ್ಸ್

# ವಿಜ್ಞಾನ ಮತ್ತು ಧರ್ಮ

> ಮತಧರ್ಮವಿರುವುದು ವಿಶ್ವವನ್ನು ಬದಲಾಯಿಸಲು ಅಲ್ಲ, ಅದನ್ನು ಇರುವಂತೆಯೇ ಸಂರಕ್ಷಿಸುವುದಕ್ಕೆ ; ಆದರಿಂದ ಯಾರಿಗೆ ಅತಿಹೆಚ್ಚಿನ ಲಾಭವಿದೆಯೋ ಅವರ ಲಾಭದ ಸಂರಕ್ಷಣೆಗೆ.
>
> –ಜೆ. ಡಿ. ಬರ್ನಾಲ್

ಧರ್ಮವನ್ನು ಬಿಟ್ಟರೆ ವಿಜ್ಞಾನ ಕುರುಡಾಗುತ್ತದೆ ಮತ್ತು ವಿಜ್ಞಾನವನ್ನು ಬಿಟ್ಟರೆ ಧರ್ಮ ಕುಂಟಾಗುತ್ತದೆ ಎಂಬ ಮಾತನ್ನು ನಾವು ಆಗಾಗ್ಗೆ ಕೇಳುತ್ತೇವೆ. ಅದನ್ನು ಯಾರೋ ಪ್ರಖ್ಯಾತ ವಿಜ್ಞಾನಿಯೊಬ್ಬರು ಹೇಳಿರುವುದರಿಂದ ಅದನ್ನು ನಾವು ಪ್ರಶ್ನಿಸುವಂತೆಯೇ ಇಲ್ಲವೇನೋ ಎಂಬ ಶೈಲಿಯಲ್ಲಿ ಈ ಮಾತನ್ನು ಉದಾಹರಿಸಲಾಗುತ್ತದೆ. ವಿಜ್ಞಾನ ಮತ್ತು ಧರ್ಮಗಳ ನಡುವೆ ತಿಕ್ಕಾಟದ ಅವಶ್ಯಕತೆಯಿಲ್ಲ; ಬದಲಾಗಿ ಅವೆರಡೂ ಒಂದಕ್ಕೊಂದು ಪೂರಕವಾಗಿವೆಯೆಂಬುದು ಇದರರ್ಥ. ಇದೇ ಸಮನ್ವಯ ದೃಷ್ಟಿಯೆಂಬ ಕಾರಣದಿಂದ ಅದನ್ನು ಒಪ್ಪಿದರೂ ಸಹ ವಿಜ್ಞಾನಿಯಾಗಲಿ ಧರ್ಮಜಿಜ್ಞಾಸುವಾಗಲಿ ತನ್ನ ನಿಯಮಗಳನ್ನಲ್ಲದೆ ಇತರ ನಿಯಮಗಳನ್ನೊಪ್ಪಿ ತನ್ನ ಕ್ಷೇತ್ರದಲ್ಲಿ ಮುನ್ನಡೆಯಲಾರ. ಧರ್ಮದ ನಿಟ್ಟಿನಿಂದ ಸತ್ಯಾನ್ವೇಷಣೆಯ ಮಾರ್ಗ ಯಾವುದಿದೆಯೋ ಅದನ್ನವಲಂಬಿಸಿ ವೈಜ್ಞಾನಿಕ ಸತ್ಯದತ್ತ ಹೋಗಲು ಸಾಧ್ಯವಿಲ್ಲ; ಅಂತೆಯೇ ವೈಜ್ಞಾನಿಕ ಅಳತೆಗೋಲನ್ನು ಧರ್ಮದ ಕ್ಷೇತ್ರದಲ್ಲಿ ಪ್ರಯೋಗಿಸಿದರೆ ಅದು ತನ್ನತನವನ್ನು ಕಳೆದುಕೊಳ್ಳುತ್ತದೆ. ವಿಜ್ಞಾನದಿಂದ ಅಗಾಧ ಪೆಟ್ಟನ್ನು ತಪ್ಪಿಸಿಕೊಳ್ಳಲು ಧರ್ಮ ಸಹಜವಾಗಿಯೇ ಸಮನ್ವಯ ತಂತ್ರವನ್ನನುಸರಿಸಬೇಕಾಗಿದೆ. ಆದರೆ ಈ ಅವಶ್ಯಕತೆ ವಿಜ್ಞಾನಕ್ಕಿಲ್ಲ.

ನಮಗೆ ಯಾವುದರ ಬಗೆಗೇ ಆಗಲಿ ಜ್ಞಾನ ಹೇಗೆ ಲಭಿಸುತ್ತದೆ? ಅದು ಕಾಲಗರ್ಭದಲ್ಲೆಲ್ಲೋ ಅಡಗಿ ಕುಳಿತಿರುವಂಥ ವಸ್ತುವೆ? ದಿವ್ಯದೃಷ್ಟಿಯಿಂದ ಅದನ್ನು ಪಡೆದುಕೊಳ್ಳಬಹುದೇ? ಅಥವಾ ಕಾಲಾನುಕ್ರಮವಾಗಿ ಅದು ವಿಕಾಸ ಹೊಂದುತ್ತಾ ಹೋಗುತ್ತದೆಯೇ? ಹದಿನೇಳನೆಯ ಶತಮಾನದ ನ್ಯೂಟನ್, ಇಪ್ಪತ್ತನೆಯ ಶತಮಾನದ ಐನ್‌ಸ್ಟೈನ್‌ಗಿಂತ ಕಡಿಮೆ ಜ್ಞಾನ ಪಡೆದಿದ್ದವ. ಆದರೆ ಐನ್‌ಸ್ಟೈನ್‌ಗಿದ್ದಷ್ಟು ಬುದ್ಧಿಮಟ್ಟ ಅವನಿಗಿರಲಿಲ್ಲವೆಂದು ಇದರರ್ಥವಲ್ಲ, ಅಂದಿನ ಒಟ್ಟು ಜ್ಞಾನದ ಸಂದರ್ಭದಲ್ಲಿ ನ್ಯೂಟನ್ ಅದಕ್ಕಿಂತಲೂ ಹೆಚ್ಚಿಗೆ ಮುಂದೆ ಹೋಗಲು ಸಾಧ್ಯವಿರಲಿಲ್ಲ. ಚಾರಿತ್ರಿಕವಾಗಿ ಜ್ಞಾನದ ಪರಿಧಿಯು ಪ್ರತಿಯೊಂದು ಕಾಲಘಟ್ಟದಲ್ಲೂ ಒಂದು ಹಂತಕ್ಕೆ ಸೀಮಿತಗೊಂಡಿರುತ್ತದೆ. ಆದರೆ ಅದು ಪ್ರತಿಘಟ್ಟದಲ್ಲೂ ವಿಸ್ತೃತಗೊಳ್ಳುತ್ತಿರುತ್ತದೆ ಕೂಡ. ಯಾವ ಕಾಲದಲ್ಲೂ ಜ್ಞಾನ ಪರಿಪೂರ್ಣವಾಗಿರುವುದಿಲ್ಲ ಮತ್ತು ಪರಿಸಮಾಪ್ತಿಯಾಗುವುದಿಲ್ಲ. ಸಂಪೂರ್ಣ ಜ್ಞಾನ ನಮಗಂತೂ ಸದ್ಯದಲ್ಲಿಲ್ಲ; ಬಹುಶಃ ಮುಂದಿನವರಿಗೂ ಇದೇ ಪರಿಸ್ಥಿತಿ ಇರುತ್ತದೆ. ಆದರೆ ಇಂದು ತಿಳಿಯದ್ದು ಸದಾಕಾಲಕ್ಕೂ ತಿಳಿಯದೆಯೇ ಇರಬೇಕಾಗುತ್ತದೆಂಬುದು ಸರಿಯಲ್ಲ. ಹಿಂದೆ ತಿಳಿಯದ್ದನ್ನು ನಾವೀಗ ಎಷ್ಟೋ ತಿಳಿದುಕೊಂಡಿಲ್ಲವೇ? ಹಾಗೆಯೇ ಇಂದು ತಿಳಿಯದಿದ್ದನ್ನೆಷ್ಟೋ ಮುಂದಿನವರು ತಿಳಿಯುತ್ತಾರೆ. ಆಗ ಮತ್ತೆ ಇಂದಿಲ್ಲದ ಅನೇಕ ಹೊಸ ಪ್ರಶ್ನೆಗಳು ಉದ್ಭವಿಸಬಹುದು.

ಹಾಗಿದ್ದಾಗ್ಯೂ ಮಾನವ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾನೆಂಬುದು ನಿಜ. ಇತಿಹಾಸದಲ್ಲಿ ನಮ್ಮದೇ ಕೊನೆಯ ಪೀಳಿಗೆಯಲ್ಲ. ಇಂದು ಮಾನವ ತನ್ನಲ್ಲಿರುವ ಮಾರಕಾಸ್ತ್ರಗಳನ್ನು ಬಳಸಿ ತನ್ನನ್ನು ತಾನು ನಿರ್ಮೂಲನಗೊಳಿಸಿಕೊಳ್ಳದಿದ್ದರೆ ಮಾನವ ಜನಾಂಗ ಇನ್ನೂ ಬಹುಕಾಲ ಮುಂದುವರಿಯುತ್ತದೆ. ಆ ಕಾಲದಲ್ಲಿ ಜ್ಞಾನದ ವೃದ್ಧಿಯೂ ಉಂಟಾಗುತ್ತದೆಂದು ನಿರೀಕ್ಷಿಸು ವುದು ತಪ್ಪೇನಲ್ಲ. ಹಿಂದಿನ ಇತಿಹಾಸವು ಮುಂದಿನ ಇತಿಹಾಸಕ್ಕೆ ದಿಕ್ಸೂಚಿಯಲ್ಲವೇ ?

ಇದಕ್ಕೆ ಉದಾಹರಣೆಯೊಂದನ್ನು ನೋಡಬಹುದು. ನಾಲ್ಕು ಸಾವಿರ ವರ್ಷಗಳ ಹಿಂದೆ ಮಾನವ ಸಮುದ್ರವನ್ನು ಕಂಡು ಅಥವಾ ಆಕಾಶದಲ್ಲಿ ನಕ್ಷತ್ರಗಳನ್ನು ಕಂಡು ವಿಸ್ಮಿತನಾಗುತ್ತಿದ್ದ. ವಿಸ್ಮಯವೇನೋ ಇಂದಿಗೂ ಉಳಿದಿದೆ. ಆದರೆ ಅದರ ಸ್ವಭಾವ ಮತ್ತು ವ್ಯಾಪ್ತಿಯಲ್ಲಿ ಬದಲಾವಣೆಯಿದೆ. ರಾತ್ರಿಯೆಲ್ಲಾ ಕಂಡು ಬೆಳಿಗ್ಗೆ ಮಾಯವಾಗುವ ನಕ್ಷತ್ರಗಳು ಎಲ್ಲಿ ಹೋಗುತ್ತವೆ ? – ಈ ಪ್ರಶ್ನೆ ಋಗ್ವೇದದ ಒಂದು ಭಾಗದಲ್ಲಿ ಪ್ರಮುಖವಾಗಿ ಮುಂದೆಬಂದಿದೆ (ಋ. ೧.೨೪.೧೦). ಇಂತಹ ಪ್ರಶ್ನೆಯೊಂದನ್ನು ಇಂದಿನ ಕವಿ ತನ್ನ ಕವನದಲ್ಲಿ ಹಾಕಲಾರ. ಏಕೆಂದರೆ ಅವನ ವಿಸ್ಮಯ ಈಗ ಬೇರೆ ತೆರನಾದದ್ದು. ಜ್ಞಾನದ ಬೆಳವಣಿಗೆಯಿಂದ ಕವಿಪದ್ಧತಿ ಸಂಪೂರ್ಣವಾಗಿ ಬದಲಾಗಬೇಕೆಂದು ಇದರ ಅರ್ಥವಲ್ಲ. ಚಂದ್ರನನ್ನು 'ಶಶಿ' ಎಂದು ಹಿಂದಿನಿಂದ ಕರೆಯುತ್ತಾ ಬಂದಿದ್ದಾರೆ. ('ಶಶಿ' ಎಂದರೆ ಮೊಲ. ಚಂದ್ರನಲ್ಲಿ ಮೊಲ ಇರುವಂತೆ ಭಾಸವಾಗುತ್ತದೆ. ಆದ್ದರಿಂದ ಅವನು ಶಶಿ). ಈ ಶಶಿಯ ಬಗ್ಗೆ ನಮಗೀಗ ಸಾಕಷ್ಟು ಮಾಹಿತಿ ದೊರೆತಿದೆ : ಅಲ್ಲಿ ಗುಂಡಿಗಳಿವೆ, ಕಲ್ಲುಗಳಿವೆ, ಗಾಳಿಯಿಲ್ಲ, ನೀರಿಲ್ಲ, ಪ್ರಾಣಿಯಿಲ್ಲ ಇತ್ಯಾದಿ. ಆದರೂ ಯುವತಿಯೊಬ್ಬಳನ್ನು 'ಶಶಿಮುಖಿ' ಎಂದು ಈಗಲೂ ವರ್ಣಿಸಬಹುದು. ಅದು ಕವಿಪದ್ಧತಿ. ಆದರೆ ಇದು ವಿಜ್ಞಾನಪದ್ಧತಿಯೂ ಆಗಲು ಬರುತ್ತದೆಯೇ ? – ಇಲ್ಲ. ಏಕೆಂದರೆ ನೂತನಜ್ಞಾನದಿಂದ ತಿಳಿದುಬಂದ ಅಂಶಕ್ಕೆ, ಪ್ರಯೋಗದಿಂದ ಸಾಬೀತಾಗಿರುವು ದಕ್ಕೆ ಅಲ್ಲಿ ಪ್ರಾಧಾನ್ಯ. ಕವಿಯು ಚಂದ್ರನನ್ನು 'ಶಶಿ' ಎಂದಾಗ ಅದರಲ್ಲಿ ಜಾಣ್ಮೆ ಮತ್ತು ನಿರ್ದಿಷ್ಟ ವಾದೊಂದು ಕಾರಣವಿದೆ. ವಿಜ್ಞಾನಿಯು ಅದನ್ನು ಹೇಳಿದರೆ ಅವನು ದಡ್ಡನೆನಿಸಿಕೊಳ್ಳುತ್ತಾನೆ. ಚಂದ್ರಗ್ರಹಣದ ಬಗ್ಗೆ ನಮಗೆ ತಿಳುವಳಿಕೆ ನೀಡುವ ವಿಜ್ಞಾನಿಯು ಗ್ರಹಣಮೋಕ್ಷದ ಕಾಲದಲ್ಲಿ ತೀರ್ಥಸ್ನಾನ ಮಾಡುವುದು ಈ ಕಾರಣದಿಂದ ಹಾಸ್ಯಾಸ್ಪದವಾಗುತ್ತದೆ.

ವಿಜ್ಞಾನವು ಉದ್ಧಟತನದ ಮಾರ್ಗವನ್ನು ಹಿಡಿಯುತ್ತದೆಂದು ಕೆಲವರ ಅಭಿಪ್ರಾಯ. ತನಗೆ ತಿಳಿಯದ್ದು ಏನೂ ಇಲ್ಲವೆಂಬ ರೀತಿಯಲ್ಲಿ ಬೇರೆ ಅಭಿಪ್ರಾಯಗಳನ್ನೆಲ್ಲಾ ವಿಜ್ಞಾನ ಪ್ರಶ್ನಿಸುತ್ತದೆ, ಆದರೆ ತಾನು ಉತ್ತರ ಕೊಡಲಾಗದಂತಹ ನೂರಾರು ಸನ್ನಿವೇಶಗಳಿವೆ, ಎಂಬುದು ಈ ಮೂದಲಿಕೆ. ಇದರಲ್ಲಿ ಮೂಲಭೂತವಾದ ತಪ್ಪುಗ್ರಹಿಕೆಯೊಂದಿದೆ. ಅದೇನೆಂದರೆ ವಿಜ್ಞಾನವು ತಾನು ಸರ್ವಜ್ಞತ್ವ ಪದವಿಯನ್ನು ಪಡೆದಿರುವುದಾಗಿ ಭಾವಿಸುವುದಿಲ್ಲ. ವಿಜ್ಞಾನಿಯೊಬ್ಬ ಹಾಗೇನಾದರೂ ಭಾವಿಸಿಕೊಂಡರೆ ಅವನು ವಿಜ್ಞಾನಕ್ಕೆ ಅಪಚಾರವೆಸಗಿದಂತೆ, ಅಷ್ಟೆ. ಹಾಗೆ ನೋಡಿದರೆ ಸರ್ವಜ್ಞತ್ವವನ್ನು ಧರ್ಮ ತನ್ನಲ್ಲಿ ಆರೋಪಿಸಿಕೊಳ್ಳುತ್ತದೆ. ಅತೀಂದ್ರಿಯ ಜ್ಞಾನದ ಸಾಧನೆಯಿಂದ ತಿಳಿದುಬಂದಿರುವ ಸತ್ಯ ಎಂಬ ಹೆಸರಿನಲ್ಲಿ ಅಜ್ಞಾತವಾದ ವಿಷಯವೇ ಇಲ್ಲವೆಂಬಂತೆ ನಡೆದುಕೊಳ್ಳುವುದು ಧರ್ಮ.

ವಿಜ್ಞಾನ ಮತ್ತು ಧರ್ಮಗಳ ನಡುವಣ ಹೊಂದಾಣಿಕೆಯಾಗಲಿ ವಿರೋಧವಾಗಲಿ ಈ ಎಲ್ಲ ವಿಷಯಗಳ ಹಿನ್ನೆಲೆಯಲ್ಲಿ ಗಮನಕ್ಕೆ ಬರಬೇಕು. ಧರ್ಮದ ಕಲ್ಪನೆಯ ಬಗ್ಗೆ ಇನ್ನೊಂದಂಶವನ್ನು ನೆನಪಿನಲ್ಲಿಡಬೇಕು. ಅದರ ಹೆಸರಿನಲ್ಲಿ ನಡೆಯುವ ಶೋಷಣೆ ಮತ್ತು ಅನಾಚಾರಗಳನ್ನು ವಿರೋಧಿಸುವವರೆಲ್ಲಾ ಅಧರ್ಮಿಗಳಲ್ಲ; ಹಾಗೇ ದಿನನಿತ್ಯ ಧರ್ಮದ

ಮಾತನ್ನೇ ಆಡುವವರೆಲ್ಲಾ ಸಜ್ಜನರೂ ಅಲ್ಲ. ಧರ್ಮವಿರೋಧಿಯೆಂದರೆ ಸಾಮಾಜಿಕ ಪ್ರಜ್ಞೆಯ, ವೈಚಾರಿಕ ಸ್ವಾತಂತ್ರ್ಯದ, ವೈಯಕ್ತಿಕ ಅಭಿಪ್ರಾಯದ ಮತ್ತು ಒಳ್ಳೆಯ ನಡತೆಯ ಶತ್ರುವೆಂದಲ್ಲ. ಅಧಿಕಾರವಾಣಿಯಿಂದ ಇದನ್ನೆಲ್ಲಾ ಮೊಟಕುಗೊಳಿಸುವುದು ಧರ್ಮವೇ ಹೊರತು ಧರ್ಮವಿರೋಧವಲ್ಲ.

ಧರ್ಮವೆಂದರೆ ಸಮಾಜವನ್ನು ಭರಿಸುವ ನಿಯಮ (ಧಾರಣಾದ್ಧರ್ಮಮಿತ್ಯಾಹುಃ), ಅದು ಕಾಲ ಕಾಲಕ್ಕೆ ಬದಲಾಗುತ್ತಿರುತ್ತದೆ, ಅದರ ವಿರುದ್ಧ ಯಾವ ಆಪಾದನೆಯೂ ಸರಿಯಲ್ಲ, ಎಂಬ ವಾದ ನಮ್ಮ ಮುಂದೆ ಬರಬಹುದು. ಅದಕ್ಕೆ ಉತ್ತರವಿಷ್ಟೆ: 'ಧರ್ಮ' ಎಂಬ ಪದದ ಅರ್ಥ ಏನೇ ಇರಲಿ, ನಿಜವಾಗಿ ಆಚಾರದಲ್ಲಿರುವುದೇನು ? ಧರ್ಮವೆಂದರೆ ಮತಧರ್ಮ. ಕೆಲವು ನಂಬಿಕೆಗಳ ಮತ್ತು ಆಚಾರಗಳ ವ್ಯವಸ್ಥಿತ ಕ್ರಮ. ಯಾವುದೋ ದೈವಿಕಶಕ್ತಿಯು ವಿಶ್ವವನ್ನೆಲ್ಲಾ ನಿಯಮಿಸಿದೆ; ಆ ಶಕ್ತಿಯನ್ನು ಪ್ರಾರ್ಥನೆ-ಪೂಜೆ, ಯಜ್ಞ ಇತ್ಯಾದಿಗಳಿಂದ ಒಲಿಸಿಕೊಳ್ಳಲು ಸಾಧ್ಯ; ಆ ಶಕ್ತಿಯು ಶ್ರದ್ಧಾಮಾತ್ರದಿಂದ ಸಿದ್ಧವಾಗುತ್ತದೆಯೇ ಹೊರತು ಜ್ಞಾನಕ್ಕೆ ನಿಲುಕುವಂಥದಲ್ಲ; ಕೆಲವು ಮಹಾತ್ಮರಿಗೆ ಆ ದಿವ್ಯಶಕ್ತಿಯೊಡನೆ ನೇರ ಸಂಪರ್ಕ ಸಾಧ್ಯವಾಗುತ್ತದೆ; ಇದರಿಂದಾಗಿ ಅವರಿಗೆ ಸಮ್ಯಗ್ದರ್ಶನ ಉಂಟಾಗಿ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಸತ್ಯದ ಅರಿವು ಅವರಲ್ಲಿ ಮೂಡುತ್ತದೆ; ಹುಲುಮಾನವನಿಗೆ ಅಂತಹವರ ಪ್ರೇರಣೆಯಿಂದ ಅಪರೋಕ್ಷಾನುಭೂತಿ ಲಭಿಸಬಹುದು. – ಇದು ಧರ್ಮಪಂಥದ ನಿಲುವು. ವಿಜ್ಞಾನ ಪಂಥದ ನಿಲುವು ಇದರಿಂದ ಭಿನ್ನವಾದುದು. ವಿಜ್ಞಾನವೂ ಕೆಲವು ನಂಬಿಕೆಗಳ ಮತ್ತು ಆಚಾರಗಳ (ಅಥವಾ ಪದ್ಧತಿಗಳ) ವ್ಯವಸ್ಥಿತ ಕ್ರಮ. ಆದರೆ ಆ ನಂಬಿಕೆಗಳ ಆಧಾರ ಬೇರೆ. ಪ್ರಕೃತಿ ನಿಯಮಗಳಿಂದ ನಿರ್ಧರಿತವಾಗಿರುವ ಭೌತಿಕ ಪ್ರಕ್ರಿಯೆಯ ಫಲವೇ ಈ ವಿಶ್ವ ಎಂಬುದು ಅದರ ಆಧಾರ. ಈ ನಿಯಮಗಳನ್ನು ಮಾನವ ಎಷ್ಟರಮಟ್ಟಿಗೆ ತಿಳಿಯುತ್ತಾನೋ ಅಷ್ಟರಮಟ್ಟಿಗೆ ಪ್ರಕೃತಿಯ ಮೇಲೆ ಅವನು ಹಿಡಿತ ಪಡೆಯಬಲ್ಲ. ಈ ನಿಯಮಗಳನ್ನು ಪೂಜೆ-ಪುನಸ್ಕಾರಗಳಿಂದ ಬದಲಿಸಲು ಸಾಧ್ಯವಿಲ್ಲ. ವಿಶ್ಲೇಷಣೆ, ತರ್ಕ ಮತ್ತು ಅನುಭವಗಳ ಅನುವಿಲ್ಲದೆ ಆ ನಿಯಮಗಳ ಜ್ಞಾನವನ್ನು ಪಡೆಯುವುದೂ ಅಶಕ್ಯ. ಆ ನಿಯಮಗಳು ನಮ್ಮ ತಿಳುವಳಿಕೆಗೆ ಬಾರದಂತಹವಲ್ಲ. ಪ್ರಕೃತಿಯೊಡನೆ ಮಾನವನ ಸತತ ಹೋರಾಟವು ಈ ತಿಳುವಳಿಕೆಯನ್ನು ವೃದ್ಧಿಗೊಳಿಸುತ್ತದೆ. ಆದ್ದರಿಂದ ಮಾನವ ಕೇವಲ ಅಸಹಾಯಕತೆಗೆ ತುತ್ತಾಗಿ ಸೊರಗಬೇಕಾಗಿಲ್ಲ. ತಾನು ಪಡೆದ ಜ್ಞಾನದ ಸತ್ಯಾಸತ್ಯತೆಯನ್ನು ಮಾನವ ಪ್ರಯೋಗದಿಂದ ದೃಢಪಡಿಸಿಕೊಳ್ಳಬಹುದು.

ಧರ್ಮದ ನೆಲೆಯಲ್ಲಿ ಈ ರೀತಿಯ ಮಾರ್ಗಕ್ಕೆ ಸ್ಥಾನವಿಲ್ಲ. ಪಾತಂಜಲ ಯೋಗಸೂತ್ರದಲ್ಲಿ "ಭುವನಜ್ಞಾನಂ ಸೂರ್ಯೇ ಸಂಯಮಾತ್" ಎಂಬ ಮಾತೊಂದಿದೆ. ಪ್ರಕೃತಿಯೊಡನೆ ಯಾವ ಸೆಣಸಾಟದಲ್ಲೂ ತೊಡಗದೆಯೇ ವಿಶ್ವಜ್ಞಾನ ಪಡೆಯಲು ಸಾಧ್ಯವೆಂದು ಅದರ ಸೂಚನೆ. ಸೂರ್ಯನಲ್ಲಿ ಸಂಯಮ (ಧಾರಣಾ, ಧ್ಯಾನ, ಸಮಾಧಿ) ಸಿದ್ಧಿಸಿಕೊಂಡರೆ ಜ್ಞಾನ ಸರ್ವಸ್ವವೂ ಲಭಿಸುತ್ತದೆ ! ಆದರೆ ಆ ಜ್ಞಾನವನ್ನು ಪ್ರಯೋಗಿಸಿ ಏನನ್ನೂ ದೃಢಪಡಿಸಿಕೊಳ್ಳಲು ಸಾಧ್ಯವಿಲ್ಲ, ಅಷ್ಟೆ!

ವಿಜ್ಞಾನ ಮತ್ತು ಧರ್ಮ ವಿಭಿನ್ನವಾದ ತಳಹದಿಗಳ ಮೇಲೆ ನಿಂತು ಪರಸ್ಪರ ವಿರುದ್ಧ ತತ್ವಗಳನ್ನು ಪ್ರತಿಪಾದಿಸುವುದರಿಂದ ಅವೆರಡರ ನಡುವಣ ತಿಕ್ಕಾಟ ಸಹಜವಾಗಿಯೇ ಉಂಟಾಗುತ್ತದೆ. ಭಾರತೀಯ ತತ್ವಶಾಸ್ತ್ರದಲ್ಲಿ ಕಂಡುಬರುವ ಸ್ವಭಾವವಾದ ಮತ್ತು ಈಶ್ವರವಾದಗಳ ನಡುವಣ ಘರ್ಷಣೆ ವಿಜ್ಞಾನ ಮತ್ತು ಧರ್ಮಗಳ ನಡುವಣ ದ್ವಂದ್ವವೇ ಆಗಿದೆ ಎನ್ನಬಹುದು. ಘಟನೆಗಳು ಒಂದು ನಿಯಮಕ್ಕೆ ಬದ್ಧವಾಗಿ ಸಂಭವಿಸುತ್ತವೆ. ಇದರಲ್ಲಿ ಆಕಸ್ಮಿಕವೇನೂ ಇಲ್ಲ. ದೈವೀಶಕ್ತಿಯ ಪ್ರೇರಣೆ ಎಂಬುದಂತೂ ಇಲ್ಲವೇ ಇಲ್ಲ. ಆ ನಿಯಮದ

ಅರಿವಿಲ್ಲದಿದ್ದಾಗ ಅದು ಆಕಸ್ಮಿಕವೆಂದೋ, ದೈವಶಕ್ತಿಯೆಂದೋ ತೋರಬಹುದು, ಅಷ್ಟೇ. ಇದು ಸ್ವಭಾವವಾದ. ಇಂದಿನ ವಿಜ್ಞಾನ ಮಾರ್ಗದ ಮೂಲಭೂತ ಭಾವನೆಯು ಹಿಂದಿನ ನಮ್ಮ ಸ್ವಭಾವವಾದದಲ್ಲಿ ಅಡಕವಾಗಿದೆಯೆನ್ನಲು ಅಡ್ಡಿಯಿಲ್ಲ.

ವಿಜ್ಞಾನ ಮತ್ತು ಧರ್ಮಗಳ ನಡುವೆ ಏಕತಾನತೆ ಕಾಣಬರುವುದು ಕೇವಲ ಅವುಗಳ ಉಗಮಸ್ಥಾನದಲ್ಲಿ ಮಾತ್ರ. ನಂತರದ ವಿಕಾಸದಲ್ಲಿ ಅವು ಭಿನ್ನ ಮಾರ್ಗಗಳಲ್ಲಿ ಬೆಳೆದಿರುವುದು ಸುಸ್ಪಷ್ಟ. ತತ್ವಶಾಸ್ತ್ರ ಪ್ರಣಾಳಿಕೆಯಲ್ಲೂ ಇದರ ಪ್ರತಿಫಲನವನ್ನು ಗಮನಿಸಬಹುದು. ಆದ್ದರಿಂದ ಅದನ್ನಿಲ್ಲಿ ಸ್ವಲ್ಪ ವಿಸ್ತಾರವಾಗಿ ಪ್ರಸ್ತಾಪಿಸಬೇಕಾಗಿದೆ. ಅದಕ್ಕಾಗಿ ಭಾರತದ ಪ್ರಾಚೀನ ಗ್ರಂಥಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಎರಡು ಮಾತು ಹೇಳಬಹುದು: ವೇದ ಮತ್ತು ಉಪನಿಷತ್ತುಗಳ ಸಾರವನ್ನು ಗ್ರಹಿಸಿದರೆ ಒಂದು ವ್ಯತ್ಯಾಸ ಪ್ರಮುಖವಾಗಿ ಕಾಣುತ್ತದೆ. ಋಗ್ವೇದದ ಒಬ್ಬ ಕವಿಯ ದೃಷ್ಟಿಯಲ್ಲಿ ತನ್ನ ಕವಿತೆಯು ರಥವನ್ನು ಮಾಡುವ ಬಡಗಿಯೊಬ್ಬನ ಕೆಲಸಕ್ಕೆ ಸಮಾನವಾದುದು. ಆತ ಬಡಗಿಯನ್ನು ಹೀಯಾಳಿಸುವುದಿಲ್ಲ. ದೈಹಿಕ ಶ್ರಮವನ್ನು ತೆಗಳುವುದಿಲ್ಲ. ಋಗ್ವೇದದ ಒಂದು ಮಂತ್ರದಲ್ಲಿ(೧.೧೩೦.೬) ಬಡಗಿಯನ್ನು ಜ್ಞಾನಿಯೆಂದು ಪರಿಗಣಿಸಲಾಗಿದೆ. ಆದರೆ ಉಪನಿಷತ್ತುಗಳಿಗೆ ಬಂದರೆ ಇದು ಸಾಧ್ಯವೇ ಇಲ್ಲ. ಅಲ್ಲಿ ಜ್ಞಾನಿಯೆಂದರೆ 'ಬ್ರಹ್ಮಜ್ಞಾನಿ' ಮಾತ್ರ: ಬಡಗಿಯ ಜ್ಞಾನ ತುಚ್ಛವಾದದ್ದು; ದೈಹಿಕ ಶ್ರಮಕ್ಕೆ ಬೆಲೆಯಿಲ್ಲ. ಮತ್ತು 'ಬ್ರಹ್ಮಜ್ಞಾನ' ಕೆಲವು ಬುದ್ಧಿವಂತ ಋಷಿಗಳ ಸ್ವತ್ತು ಮಾತ್ರ. ಅದೊಂದು ರಹಸ್ಯ ಜ್ಞಾನವಾದ್ದರಿಂದ ಅದನ್ನು ಎಲ್ಲರಿಗೂ ತಿಳಿಸುವಂತೆಯೂ ಇಲ್ಲ. ಹೀಗೆ ಜ್ಞಾನವೆಂಬುದು ವೈಭವಪೂರಿತವಾದ ಅನಿರ್ದಿಷ್ಟವಾದ ಅಮೂರ್ತ ಜ್ಞಾನವಾಗಿ ಮಾರ್ಪಡುತ್ತದೆ. ಯಾಜ್ಞವಲ್ಕ್ಯ, ಜನಕ ಇತ್ಯಾದಿ ಮೇಧಾವಿಗಳಿಗೆ ಮಾತ್ರ ಅದು ಲಭ್ಯ. ಆದರೆ ಅವರು ಈ ರಹಸ್ಯಜ್ಞಾನ ಪಡೆದುಕೊಳ್ಳಲು ಕಾಲ ವ್ಯಯಮಾಡುವಾಗ ಅವರ ಉಪಚಾರ ನಡೆಯ ಬೇಕಲ್ಲ, ಅದನ್ನಾರು ಮಾಡಬೇಕು? ಬೇರೆಯವರ ಉತ್ಪಾದನೆ ತಮ್ಮದಾಗುವಂತಿರುವಾಗ ರಹಸ್ಯಜ್ಞಾನಕ್ಕಾಗಿ ಇವರು 'ಶ್ರಮ' ವಹಿಸಬಹುದು! ವೇದದ ಕಾಲದಲ್ಲಿ ಉತ್ಪಾದನಾ ವ್ಯವಸ್ಥೆ ಇನ್ನೂ ಕೆಳಮಟ್ಟದಲ್ಲಿತ್ತು ಮತ್ತು ಪ್ರತಿಯೊಬ್ಬರೂ ದುಡಿಮೆಯಲ್ಲಿ ತೊಡಗಬೇಕಾಗಿತ್ತು. ಒಬ್ಬ ವ್ಯಕ್ತಿಯ ಉತ್ಪಾದನೆಯಿಂದಾಗಿ ಬೇರೊಬ್ಬ ಉತ್ಪಾದನಾ ಕಾರ್ಯದಲ್ಲಿ ತೊಡಗದೆಯೇ ಜೀವನ ಸಾಗಿಸುವಂತಿರಲಿಲ್ಲ. ಅರ್ಥಾತ್, ಶೋಷಣೆಯು ಸಾಮಾಜಿಕ ಪಿಡುಗಾಗಿ ಬೆಳೆದಿರಲಿಲ್ಲ. ರಹಸ್ಯಜ್ಞಾನದ ಕಲ್ಪನೆಯಾಗಲಿ, ದೈಹಿಕ ಶ್ರಮದ ತೆಗಳುವಿಕೆಯಾಗಲಿ ಆ ವ್ಯವಸ್ಥೆಯಲ್ಲಿ ಮೂಡಿಬರಲು ಸಾಧ್ಯವಿರಲಿಲ್ಲ. ಉತ್ಪಾದನಾ ಸಾಮಗ್ರಿಗಳು ಬೆಳೆದು, ತಾಂತ್ರಿಕ ಜ್ಞಾನವೂ ಹೆಚ್ಚಿ, ಅಧಿಕ ಮಟ್ಟದ ಉತ್ಪಾದನೆ ಸಾಧ್ಯವಾದಾಗ ರಾಜರು ಮತ್ತು ರಾಜಾಶ್ರಯ ಪಡೆದಿದ್ದ ತತ್ವಜ್ಞಾನಿಗಳು ತಮ್ಮದೇ ಆದ ಬೌದ್ಧಿಕ ಪ್ರಪಂಚದಲ್ಲಿ ವಿಹರಿಸುತ್ತಾ ಅವರ ವರ್ಗದ ತತ್ವ ಪ್ರಣಾಲಿಕೆಯನ್ನು ರೂಪಿಸಲಾರಂಭಿಸಿದ್ದು. ಅದೇ ಭಾವನಾವಾದದ *(idealism)* ಪ್ರಾರಂಭದ ದೆಸೆ. ಶೋಷಕವರ್ಗದ ಅತ್ಯಂತ ಪ್ರಬಲವಾದ ಸೈದ್ಧಾಂತಿಕ ಅಸ್ತ್ರ ಅದು. ಅದರೊಟ್ಟಿಗೆ ಶೋಷಿತವರ್ಗದ, ಅಂದರೆ ದುಡಿಯುವ ಜನರ, ತತ್ವಸಿದ್ಧಾಂತವೂ ಬೆಳೆಯಿತು. ಅದೆಂದರೆ ಭೌತವಾದ *(materialism)*. ದುಡಿಯುವ ವ್ಯಕ್ತಿಯು ಪ್ರಕೃತಿಯು ಸುಳ್ಳೆಂದು ವಾದ ಹೂಡಲಾರ. ಏಕೆಂದರೆ ಅವನ ಗದ್ದೆಗೆ ಬೇಕಾದ ನೀರು, ಅಗೆತ, ಪೈರು, ಗೊಬ್ಬರಗಳೆಲ್ಲಾ 'ರಹಸ್ಯ'ವಲ್ಲ. ಅವಿಲ್ಲದಿದ್ದರೆ ಬೆಳೆ ಇಲ್ಲ, ಆಹಾರವಿಲ್ಲ. ಅವಕ್ಕೆಲ್ಲಾ ಸ್ವತಂತ್ರ ಅಸ್ತಿತ್ವವಿಲ್ಲವೆಂದು ಅವನು ಕೈಕಟ್ಟಿ ಕೂತರೆ ಅವನಿಗೂ ಅನ್ನವಿಲ್ಲ, ಜನಕ ಮಹಾರಾಜನಿಗೂ ಅನ್ನವಿಲ್ಲ! ಪ್ರಕೃತಿಯೊಡನೆ ಪ್ರತಿನಿತ್ಯ ಸೆಣಸಾಟ ನಡೆಸಿ ತನ್ನ ಶಕ್ತಿ ಮತ್ತು ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ

ಆ ದುಡಿಮೆಗಾರ ಕಚ್ಚಾ ವೇದಾಂತಿಯಲ್ಲ. ಅವನೊಬ್ಬ ನಿಷ್ಠಾವಂತ ವಿಜ್ಞಾನಿ. ಭಾವನಾವಾದಿಯಂತೆ ಮಂತ್ರದಿಂದ ಮಾವಿನಕಾಯಿ ಉದುರಿಸುವುದರಲ್ಲಿ ಅವನಿಗೆ ನಂಬಿಕೆಯಿಲ್ಲ. ದುಡಿಮೆಯಿಂದ ಸತ್ಯವನ್ನರಿಯುವವನು ಅವನು. ತಾನು ಭಾವಿಸಿದ್ದೇ ಸತ್ಯವೆಂದುಕೊಂಡು ಭ್ರಮಿಸುವುದನ್ನು ಅವನು ಭಾವನಾವಾದಿಗೆ ಬಿಡುತ್ತಾನೆ. ಭಾವನಾವಾದಕ್ಕೆ ಊರುಗೋಲು ಧರ್ಮ; ಭೌತವಾದಕ್ಕೆ ಊರುಗೋಲು ವಿಜ್ಞಾನ.

ಇವೆರಡೂ ಈ ಸ್ವರೂಪವನ್ನು ತಾಳುವ ಮೊದಲು, ಅಂದರೆ ಅತ್ಯಂತ ಪ್ರಾಚೀನ ಕಾಲದಲ್ಲಿ, ಇವೆರಡೂ ಒಂದೇ ನೆಲೆಯಿಂದ ಹುಟ್ಟಿಕೊಂಡವು. ಅಂದಿನ ಮಾನವನ ಪ್ರಕೃತಿ ಜ್ಞಾನ ಅತ್ಯಲ್ಪ; ಆದ್ದರಿಂದ ಪ್ರಕೃತಿ ನಿಯಮಗಳು ಅವನಿಗೆ ಪಕ್ಕಾಗಿರಲಿಲ್ಲ. ಹೀಗಾಗಿ ಪ್ರಕೃತಿಯ ಮೇಲೆ ಅವನಿಗೆ ಹೇಳಿಕೊಳ್ಳುವಂತಹ ಹಿಡಿತವೇ ಇರಲಿಲ್ಲ. ಮುಂದಿನ ಕಾಲದಲ್ಲಿ ಯಜ್ಞದಿಂದ ಹೇಗೆ ಎಲ್ಲ ಫಲಗಳನ್ನೂ ಪಡೆಯಲು ಸಾಧ್ಯವೆಂದು ನಂಬಲಾಯಿತೋ ಹಾಗೆ ಪ್ರಾಚೀನ ಕಾಲದಲ್ಲಿ ಮಾಂತ್ರಿಕತೆಯಿಂದ ಹೊರಗಣ ಪ್ರಪಂಚದ ಮೇಲೆ ಹತೋಟಿ ಪಡೆಯಬಹುದೆಂಬ ಕಲ್ಪನೆ ಬಲವಾಗಿ ಬೆಳೆಯಿತು. ಮಾಂತ್ರಿಕತೆಯೆಂದರೆ ಪಿ. ಸಿ. ಸರ್ಕಾರ್ ಅವರ ಅಥವಾ ಅವರಷ್ಟು ಪ್ರಾಮಾಣಿಕರಲ್ಲದ ಸತ್ಯಸಾಯಿ ಬಾಬಾ ಅವರ ಮಾಂತ್ರಿಕತೆಯಲ್ಲ. ಪ್ರಕೃತಿ ನಿಯಮವನ್ನು ತಿಳಿಯುವ ಮೊದಲು ಮುಗ್ಧ ಮಾನವ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅನುಸರಿಸುತ್ತಿದ್ದ ಮಾರ್ಗವೇ ಈ ವೈಯಕ್ತಿಕ ಮಾಂತ್ರಿಕತೆ. ಅದರಿಂದ ನಿಜಕ್ಕೂ ಶಕ್ತಿ ಹೆಚ್ಚುತ್ತಿರಲಿಲ್ಲ; ಆದರೆ ತನ್ನ ಕೆಲಸದಲ್ಲಿನ ನಿಷ್ಠೆ ಹೆಚ್ಚುತ್ತಿತ್ತು, ಇಲ್ಲವೇ ಮಾನಸಿಕ ತುಮುಲ ಕಡಿಮೆಯಾಗುತ್ತಿತ್ತು. ಮಳೆ ಬಾರದಿದ್ದಾಗ ದಂಪತಿಗಳು ಬರಿಮೈಯಲ್ಲಿ ಹೋಗಿ ಹೊಲವನ್ನುತ್ತರೆ ಮಳೆ ಬರುತ್ತದೆಯೆಂಬ ಪ್ರತೀತಿ ಕೆಲವೆಡೆಗಳಲ್ಲಿ ಈಗಲೂ ಇದೆ. ಸಂಕಷ್ಟಕ್ಕೆ ಸಿಲುಕಿದವನು ತನ್ನ ಮುಜುಗರವನ್ನು ಕಡಿಮೆ ಮಾಡಿಕೊಳ್ಳಲು ಇದೊಂದು ಮಾರ್ಗ, ಅಷ್ಟೆ. ಹಲವು ತಾಪಗಳಿಗೆ ಗುರಿಯಾದವನು ಭಗವಂತನಲ್ಲಿ ಎಲ್ಲವನ್ನೂ ಅರ್ಪಿಸಿ ಸ್ವಲ್ಪ ಸ್ಥೈರ್ಯ ಪಡೆದುಕೊಳ್ಳುವ ಭಕ್ತಿಮಾರ್ಗದ ಪ್ರಾಚೀನ ಸ್ವರೂಪ ಇದೆನ್ನಬಹುದು.

ಜಾರ್ಜ್ ಥಾಮ್ಸನ್ ಎಂಬ ವಿಖ್ಯಾತ ವಿದ್ವಾಂಸರು ಮಾವೋರಿ ಪಂಗಡದ ಒಂದು ಪದ್ಧತಿಯನ್ನು ಇದಕ್ಕೆ ನಿದರ್ಶನವನ್ನಾಗಿ ಉದಾಹರಿಸುತ್ತಾರೆ. ಈ ಬುಡಕಟ್ಟಿನ ಜನಾಂಗದವರಲ್ಲಿ ಹೆಣ್ಣುಮಕ್ಕಳು ಆಲೂಗಡ್ಡೆ ಬೆಳೆಯಿರುವಲ್ಲಿ ನೃತ್ಯವೊಂದನ್ನು ಮಾಡುತ್ತಾರಂತೆ. ಸಸಿಯು ಸುಂಟರಗಾಳಿಯ ಪ್ರಕೋಪಕ್ಕೆ ಆಹುತಿಯಾಗಬಹುದಾದಂತಹ ಸಂದರ್ಭಕ್ಕೆ ಮುನ್ನ ಅವರು ಈ ನೃತ್ಯದಲ್ಲಿ ತೊಡಗುವುದು. ಸುಂಟರಗಾಳಿಯಿಂದಾಗಿ ಸಸಿ ಮತ್ತು ಲತೆ ಹೇಗೆ ತತ್ತರಿಸಿ ನಲುಗಾಡುವುವೋ ಹಾಗೆ ನಲುಗಾಡುವುದು ಆ ನೃತ್ಯಭಂಗಿಯ ಸಾರ. ಗಾಳಿಯ ಹೊಡೆತಕ್ಕೆ ಸಿಕ್ಕಿದವರಂತೆ ನಲುಗಾಡಿ ಆಮೇಲೆ ಅವರು ಹೇಗೆ ಚೇತರಿಸಿಕೊಳ್ಳುತ್ತಾರೋ ಹಾಗೆ ಸಸಿಯೂ ಚೇತರಿಸಿಕೊಳ್ಳುತ್ತದೆಯೆಂದು ಅವರ ಸುದೃಢ ನಂಬಿಕೆ. ನಿಜಕ್ಕೂ ನೃತ್ಯದಿಂದಾಗಿ ಸಸಿ ಚೇತರಿಸಿಕೊಳ್ಳುತ್ತದೆಯೆ ? – ಇಲ್ಲ. ಹಾಗಾದರೆ ಮಾವೋರಿಗಳ ನಂಬಿಕೆ ಏಕೆ ಹಾಗೆಯೇ ಉಳಿಯಿತು ? ವೈಯಕ್ತಿಕವಾಗಿ ಒಂದು ಗಾಢ ನಂಬಿಕೆಯನ್ನು ತಾಳಿದ ಮಾವೋರಿ ಹೆಣ್ಣುಮಕ್ಕಳು ನಂತರ ಆಲೂಗಡ್ಡೆ ಸಸಿಯನ್ನು ಎಚ್ಚರದಿಂದ ಸಲಹುತ್ತಾರೆ. ಅದು ಉಳಿದೇ ತೀರುತ್ತದೆಂಬ ಖಾತರಿ ಅವರಿಗೆ. ಹುಮ್ಮಸ್ಸಿನಿಂದ ಕೆಲಸಮಾಡಿ ಅವರು ಕೃಷಿಯನ್ನು ವೃದ್ಧಿಪಡಿಸುತ್ತಾರೆ. ಸಸಿ ಚೇತರಿಸಿಕೊಂಡು ಫಲ ನೀಡುತ್ತದೆ. ತಮ್ಮ ನೃತ್ಯದಿಂದ ಸಸಿಗೆ ಚೇತನ ಬಂದಿತೆಂದು ಅವರು ಬಗೆಯುತ್ತಾರೆ.

ಇಲ್ಲಿ ನಂಬಿಕೆ, ಪೂಜೆ, ಆದರಿಂದ ಪ್ರಕೃತಿ ಮಾತೆಯು ಸಾಂತ್ವನಗೊಳ್ಳುವುದು, ಎಲ್ಲಾ ಅಡಕವಾಗಿದೆ. ಮುಂದಿನ ಕಾಲದ ಧಾರ್ಮಿಕ ಶ್ರದ್ಧೆಗೆ ಇಂತಹ ಭಾವನೆಯೇ ಮೂಲಸ್ಥಾನ; ಈ

ಪದ್ಧತಿಗಳೇ ಯಜ್ಞಾದಿಗಳ ಪೂರ್ವಸ್ವರೂಪ. ಅಂತೆಯೇ ಇದು ವಿಜ್ಞಾನಕ್ಕೂ ಆಗರ. ಏಕೆಂದರೆ, ಕ್ರಮೇಣ ಪ್ರಕೃತಿ ನಿಯಮವನ್ನರಿತು ಕೃಷಿಯ ವಿಧಾನದಲ್ಲಿ ಬದಲಾವಣೆಯನ್ನುಂಟು ಮಾಡುವುದು ಇಂತಹ ಅನೇಕ ಆಚಾರಗಳ ಮೂಲಕವೇ. ತನ್ನ ಭಾವನೆಗಿಂತಲೂ ಹೊರಗಣ ಪ್ರಪಂಚದ ನಡತೆಯ ನಿಯಮ ಹೆಚ್ಚು ಮುಖ್ಯವೆಂಬ ಅರಿವುಂಟಾಗುವುದೂ ಈ ಸಂದರ್ಭದಲ್ಲೇ. ಈ ಅರ್ಥದಲ್ಲಿ ಹೇಳುವುದಾದರೆ ವಿಜ್ಞಾನ ಮತ್ತು ಧರ್ಮಗಳೆರಡೂ ಏಕಸ್ಥಾನದಲ್ಲಿ ಹುಟ್ಟಿ ಬೆಳೆಯುತ್ತವೆ ಎನ್ನಬಹುದು. ತನ್ನ ಉತ್ಪಾದನಾ ಸಾಮರ್ಥ್ಯವು ಹೆಚ್ಚದಿರಲು ಪ್ರಕೃತಿಯ ನಿಯಮದ ಬಗ್ಗೆ ಜ್ಞಾನದ ಅಭಾವ ಕಾರಣವೆಂದು ಪ್ರಾಚೀನ ಮಾನವನಿಗೆ ಅನಿಸದಿದ್ದರೂ ಕ್ರಮೇಣ ಆ ಕಡೆಗೆ ಅವನು ದೃಷ್ಟಿ ಹರಿಸುತ್ತಾನೆ. ವೈಯಕ್ತಿಕ ಊಹೆಯ ಮಟ್ಟದಲ್ಲಿರುತ್ತಿದ್ದ ತನ್ನ ಶಕ್ತಿಯನ್ನು ವಸ್ತುನಿಷ್ಠವಾದ ಶಕ್ತಿಯನ್ನಾಗಿ ಆಗ ಮಾರ್ಪಡಿಸಲು ಅವನು ಶಕ್ತನಾಗುತ್ತಾನೆ.

ಪ್ರಾಚೀನ ಯುಗದ ಕಾಲದಲ್ಲಿ ಹೀಗೆ ಪ್ರಾರಂಭವಾದ ಧರ್ಮ ಮತ್ತು ವಿಜ್ಞಾನಗಳು ಮಾನವ ಇತಿಹಾಸದಲ್ಲಿ ಇಲ್ಲಿಯವರೆಗೂ ಎರಡು ಬೇರೆ ಬೇರೆ ಹೊಳೆಗಳಾಗಿ ಹರಿಯುತ್ತಾ ಬಂದಿವೆ. ತನಗೆ ಎಟುಕದ ಆಕಾಂಕ್ಷೆಗಾಗಿ ತೀವ್ರವಾಗಿ ಹಂಬಲಿಸಿ, ಅದರ ಪೂರೈಕೆಯಿಂದ ಲಭಿಸುವ ಭವ್ಯತೆಯ ಕಲ್ಪನೆಯಲ್ಲಿ ಮುಳುಗಿ ಆ ಸಿರಿಯನ್ನು ಮೆಲುಕುಹಾಕಿ ಅದಕ್ಕಾಗಿ ಹಾತೊರೆಯುವುದು ಅನಾದಿ ಕಾಲದಿಂದಲೂ ಮಾನವನಲ್ಲಿ ಕಂಡುಬಂದಿರುವ ಸ್ವಭಾವ. ಈ ಮಹತ್ವಾಕಾಂಕ್ಷೆಯನ್ನು *Romantic dream* ಅಥವಾ *Utopian dream* ಎಂದು ಆಂಗ್ಲ ಭಾಷೆಯಲ್ಲಿ ಹೆಸರಿಸುತ್ತಾರೆ. ಅದನ್ನು ಪಡೆಯಲು ಬೇಕಾದ ಪರಿಕರ ಮಾನವನಲ್ಲಿಲ್ಲದಿದ್ದಾಗ ಅದೊಂದು ಕನಸಿನ ಸಾಮ್ರಾಜ್ಯವಾಗಿ ಮಾತ್ರ ಉಳಿಯಬಲ್ಲುದು. ಧರ್ಮದ ಉತ್ತಮ ಕೊಡುಗೆಗಳಲ್ಲಿ ಈ ಮಹತ್ವಾಕಾಂಕ್ಷೆಗಳ ಕಲ್ಪನೆಗೆ ಆದ್ಯಸ್ಥಾನ ನೀಡಬೇಕು. ದುರ್ಬಲನಾದ ಮಾನವ ಪ್ರಬಲನೋ ಎಂಬಂತೆ ಭಾನಿಸಿಕೊಂಡು ಆ ಪ್ರಾಬಲ್ಯವನ್ನು ತನಗೆ ನೀಡಬಹುದಾದ ದೈವೀಶಕ್ತಿಯನ್ನು ಮೊರೆಹೋಗುತ್ತಾನೆ, ಭ್ರಾಮಕ ಸುಖವನ್ನುಣ್ಣುತ್ತಾನೆ, ಅಂತರಿಕ್ಷದಲ್ಲಿ ವಿಹರಿಸುತ್ತಿರುವಂತೆ ಭಾವಿಸಿಕೊಳ್ಳುತ್ತಾನೆ. ನೈಜವಾಗಿ ಮಾನವ ಸಮಾಜ ಇದಾವುದನ್ನೂ ಧರ್ಮದ ನೆಲೆಯಲ್ಲಿ ನಿಂತು ಸಾಧಿಸಿಕೊಳ್ಳಲಾರದು. ವಸ್ತುಸ್ಥಿತಿಯು ವೈಯಕ್ತಿಕ ಭಾವನೆಯಿಂದ ರೂಪುಗೊಂಡಿಲ್ಲ, ರೂಪಾಂತರವನ್ನು ಹೊಂದಲಾರದು. ಆದಕ್ಕೆ ಜ್ಞಾನವೊಂದೇ ಏಕೈಕ ಸಾಧನೆ, ವಿಶ್ಲೇಷಣೆಯೊಂದೇ ಮಾರ್ಗದರ್ಶಿ.

ಧರ್ಮ ಮತ್ತು ವಿಜ್ಞಾನಗಳು ಒಂದೇ ನೆಲೆಯಲ್ಲಿ ಹುಟ್ಟಿದರೂ ಅವು ಅನುಸರಿಸಿದ ಮಾರ್ಗ ಹಾಗೂ ಧ್ಯೇಯಗಳಲ್ಲಿ ವ್ಯತ್ಯಾಸವಿದೆ. ಆಗ್ಗೆ ಅಜ್ಞಾನಾಂಧಕಾರದಲ್ಲಿ ತೊಳಲಿ, ಪ್ರಕೃತಿಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗದೆ ಬಳಲಿ ಬೆಂಡಾಗುತ್ತಿದ್ದ ಮಾನವನ ಅಸಹಾಯಕತೆಯ ಅಂಶವನ್ನು ಧರ್ಮವು ಪ್ರತಿಬಿಂಬಿಸಿತು ಮತ್ತು ಬೆಳೆಸಿತು. ತನ್ನ ಭಾವನೆಯನ್ನು ಬದಲಾಯಿಸಿಕೊಳ್ಳುವುದನ್ನು ಹೊರತುಪಡಿಸಿ ಮಾನವ ಹೊರಗಣ ಪ್ರಪಂಚದ ಮೇಲೆ ಇನ್ನೆಂತಹ ಹತೋಟಿಯನ್ನೂ ಪಡೆಯಬಲ್ಲವನಲ್ಲ, ಎಂಬುದು ಈ ಅಸಹಾಯಕತೆಯಿಂದ ಹೊರಹೊಮ್ಮಿದ ತೀರ್ಮಾನ. ಅಜ್ಞಾನದಿಂದಾಗಿ ತನ್ನನ್ನಾವರಿಸಿದ್ದ ಅಸಹಾಯಕತೆಯನ್ನು ಬದಿಗೊತ್ತಿ, ಎಷ್ಟು ಜ್ಞಾನ ಲಭ್ಯವಿತ್ತೋ ಅಷ್ಟನ್ನೇ ಮುಂದುಮಾಡಿ ಅಲ್ಲಿಂದ ಮುಂದಕ್ಕೆ ಇನ್ನೊಂದು ಹೆಜ್ಜೆಯನ್ನಿಡುವ ಪ್ರಯತ್ನದಲ್ಲಿ ಮಾನವ ತೊಡಗಿದಾಗ ವಿಜ್ಞಾನದ ಬೀಜ ಬಲಿಯತೊಡಗಿತೆನ್ನಬಹುದು. ಅದು ಬೆಳೆದಂತೆ ಮಾನವನ ಸ್ವಾತಂತ್ರ್ಯವೂ ಹೆಚ್ಚುತ್ತಾ ಹೋಯಿತು. ಪ್ರಕೃತಿಯ ನಿಯಮವನ್ನರಿತು ಅದನ್ನು ಕ್ರಿಯೆಯಲ್ಲಿ ಪ್ರಯೋಗಿಸಿದಾಗ ಅವನಿಗೆ ಲಭಿಸುವ ಸವಲತ್ತುಗಳೂ ಹೆಚ್ಚುವುದು ಸ್ವಾಭಾವಿಕವಾಗಿದೆ. ಅದಕ್ಕೆ ಪೂರ್ವದಲ್ಲಿ

ಅವನಿಗಿದ್ದ ಮಾರ್ಗಗಳೆರಡು: ಒಂದು, ಇಲ್ಲದ ಶಕ್ತಿ ಮತ್ತು ಸುಖಗಳನ್ನು ವೈಯಕ್ತಿಕ ಭಾವನೆಯಿಂದ ಮನಸ್ಸಿನಲ್ಲಿ ಬೇರುಬಿಡುವಂತೆ ಮಾಡುವುದರಲ್ಲಿ ಉದ್ಯುಕ್ತನಾಗುವುದು; ಇನ್ನೊಂದು, ಹೊಸಶಕ್ತಿಯನ್ನು ಪಡೆಯುವುದರತ್ತ ಹೊರಳಿ ನೈಜಸುಖವನ್ನು ಎಷ್ಟು ದೊರಕಿಸಿಕೊಳ್ಳಬಹುದೋ ಅಷ್ಟನ್ನು ದೊರಕಿಸಿಕೊಳ್ಳಲು ಮತ್ತು ಅದನ್ನು ವೃದ್ಧಿಗೊಳಿಸಲು ತವಕಿಸುವುದು. ಒಂದು ಧರ್ಮ, ಇನ್ನೊಂದು ವಿಜ್ಞಾನ. ಹೀಗಿರುವಲ್ಲಿ ಅವುಗಳ ನಡುವೆ ಸಾಮರಸ್ಯ ಹೇಗೆ ತಾನೆ ಏರ್ಪಟ್ಟೀತು ? ಚಾರಿತ್ರಿಕವಾಗಿ ಜ್ಞಾನಕ್ಕೆ ಪರಿಮಿತಿಯಿರುವುದರಿಂದ ಮಾನವನ ಸ್ವಾತಂತ್ರ್ಯಕ್ಕೂ ಪರಿಮಿತಿ ಇದ್ದೇ ತೀರಬೇಕು.

ಚರಿತ್ರೆಯುದ್ದಕ್ಕೂ ವಿಜ್ಞಾನದ ಪ್ರಗತಿಗೆ ಧರ್ಮ ಅಡ್ಡಿಯುಂಟುಮಾಡಿರುವುದನ್ನು ಗುರುತಿಸದಿರುವಷ್ಟು ಬೌದ್ಧಿಕ ದೃಷ್ಟಿಮಾಂದ್ಯ ನಮ್ಮಲ್ಲಿ ಬೆಳೆದಿದೆಯೆ ? ಹದಿನಾರನೆಯ ಶತಮಾನದಲ್ಲಿ ಇಟಲಿಯಲ್ಲಿ ಕ್ಯಾಥೊಲಿಕ್ ಕ್ರೈಸ್ತ ಸಂಪ್ರದಾಯದ ಎಣೆಯಿಲ್ಲದ ಪ್ರಾಬಲ್ಯವನ್ನೆದುರಿಸಿದ ಗೆಲಿಲಿಯೋವಿನಂತಹ ವಿಜ್ಞಾನಿಯ ಜೀವನ ಇದಕ್ಕೊಂದು ನಿದರ್ಶನ. ಗೆಲಿಲಿಯೋ ಇನ್ನೂ ಪ್ರಖ್ಯಾತನಾಗಿಲ್ಲದಿದ್ದಾಗ ಇಟಲಿಯಲ್ಲಿ ಗಿಯಾರ್ದೊನೋ ಬ್ರೂನೋ ಎಂಬ ಖಗೋಳಶಾಸ್ತ್ರಜ್ಞನೊಬ್ಬನಿದ್ದ. ಅವನೇನೂ ಕ್ರೈಸ್ತ ಧರ್ಮದ ಶತ್ರುವಾಗಿರಲಿಲ್ಲ. ಚರ್ಚಿನ ಬಗ್ಗೆ ಅವನಲ್ಲಿ ಅಪಾರವಾದ ಗೌರವ ಮತ್ತು ವಿಶ್ವಾಸಗಳಿದ್ದವು. ಆದರೂ ತನ್ನ ಅಧ್ಯಯನದಿಂದ ಸೂಚಿತವಾದ ಫಲಿತಾಂಶವನ್ನು ಪ್ರಚಾರ ಮಾಡಿದ. ಕ್ರೈಸ್ತಮತ ಅದನ್ನು ಸ್ವೀಕರಿಸಲು ಸಿದ್ಧವಿರಲಿಲ್ಲ. ಅವನನ್ನು ಧರ್ಮದ ಮತ್ತು ಸಮಾಜದ ಶತ್ರುವೆಂದು ತೆಗಳಿ ಜೀವಂತ ಸುಡುವಷ್ಟು ನೀಚಮಟ್ಟಕ್ಕೆ ಹೋಗಲು ಕೂಡ ಕ್ಯಾಥೊಲಿಕ್ ಚರ್ಚ್ ಹೇಸಲಿಲ್ಲ. ಆತನನ್ನು ಚಿತೆಗೇರಿಸಿ ಸುಟ್ಟರು. ಹಾಗೆ ಆತ ಚಿತೆಯೇರಿ ಸುಟ್ಟುಹೋಗುತ್ತಿದ್ದಾಗ ಒಬ್ಬ ಪಾದ್ರಿ ಕ್ರೈಸ್ತಧರ್ಮದ ಹೆಗ್ಗುರುತಾದ ಶಿಲುಬೆಯೊಂದನ್ನು ಆತನತ್ತ ನೀಡಿ ಅದನ್ನು ಚುಂಬಿಸಿ ಯಾದರೂ ಪಾಪವನ್ನು ನೀಗಿಕೊಳ್ಳಬೇಕೆಂದು ಸಲಹೆ ನೀಡಿದನಂತೆ. ಬ್ರೂನೋವಿಗೆ ಅಂತಹ ಪ್ರಾಯಶ್ಚಿತ್ತದ ಅಗತ್ಯ ಕಾಣಲಿಲ್ಲ. ಶಿಲುಬೆಯಿಂದ ತನ್ನ ಮುಖವನ್ನು ತಿರುಗಿಸಿ ಸುಖವಾಗಿ ಸುಟ್ಟು ಬೂದಿಯಾದನಂತೆ ಅವನು. ವಿಜ್ಞಾನ ಪೂರ್ಣಸ್ವರೂಪದಲ್ಲಿ ಆ ಕ್ಷಣದಲ್ಲಿ ಉದ್ಭವವಾಯಿ ತೆಂದರೆ ತಪ್ಪಲ್ಲ. ಇಂತಹ ನಿಷ್ಠುರದ ಮಾರ್ಗ ವಿಜ್ಞಾನದ ಮಾರ್ಗ. ಪ್ರಾಚೀನ ಭಾರತದಲ್ಲಿ ವೈದ್ಯಕೀಯ ಪದ್ಧತಿಯನ್ನು ಬೆಳೆಸಲು ಶ್ರಮಿಸಿದವರು ಇದಕ್ಕಿಂತಲೂ ಕಠಿಣವಾದ ನಿಷ್ಠುರವನ್ನು ಬೆಳೆಸಿಕೊಳ್ಳಬೇಕಾಯಿತು. ಧರ್ಮಶಾಸ್ತ್ರಕಾರರ ವಕ್ರದೃಷ್ಟಿಯ ಘೋರ ಪರಿಣಾಮಗಳನ್ನೆದುರಿಸಿ ತಮ್ಮ ವೈಜ್ಞಾನಿಕ ಮಾರ್ಗದಿಂದ ಹಿಂಜರಿಯದೆ ಮಾನವ ಜನಾಂಗದ ಶ್ರೇಯೋಭಿವೃದ್ಧಿಗೆ ಭದ್ರಬುನಾದಿ ಹಾಕಹೊರಟ ಇವರು ವಿಜ್ಞಾನಿಗಳ ಪಂಕ್ತಿಯಲ್ಲಿ ಅಗ್ರಮಾನ್ಯರಾಗಿ ಉಳಿದಿದ್ದಾರೆ. ಅಂತೂ ಧರ್ಮವು ತನ್ನ ಪರಂಪರಾಗತವಾದ ಹಠಮಾರಿ ವಿರೋಧವನ್ನು ನಿರಾಕರಿಸಿದ ಹೊರತು ವಿಜ್ಞಾನ ಮತ್ತು ಧರ್ಮಗಳ ನಡುವೆ ಸಾಮರಸ್ಯ ಸಾಧ್ಯವಾಗಲಾರದು.

ಇಷ್ಟೆಲ್ಲಾ ಹೇಳಿದ್ದು ಧರ್ಮವೆಂದರೆ ಕಸದಬುಟ್ಟಿಗೆ ಹೋಗಬೇಕಾದ ತುಚ್ಛ ಸಾಮಗ್ರಿ ಎಂದು ಸೂಚಿಸುವುದಕ್ಕಾಗಿಯಲ್ಲ. ಧರ್ಮದಿಂದ ಸ್ಫೂರ್ತಿಯನ್ನು ಹೊಂದಿ ಜನಸಾಮಾನ್ಯರ ಸಂಕಷ್ಟಗಳ ನಿವಾರಣೆಗಾಗಿ ನಿರಂತರವಾಗಿ ದುಡಿದಿರುವ ಧೀಮಂತರನೇಕರು ಚರಿತ್ರೆಯಲ್ಲಿ ಆಗಿಹೋಗಿದ್ದಾರೆ. ಬದರಿಯಿಂದ ಹೈದರಾಬಾದ್‌ವರೆಗೆ ಹಲವು ಕಡೆಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಸುವುದೂ ಸಹ ಬಂಡವಾಳದ ಹೂಡಿಕೆಯ ಒಂದು ಅಂಗವನ್ನಾಗಿ ಮಾಡಿಕೊಂಡಿರುವ ಧರ್ಮಾಧಿಕಾರಿ (ಅಥವಾ, ಧರ್ಮಧಿಕ್ಕಾರಿ) ಜಿ. ಡಿ. ಬಿರ್ಲಾ ಅವರನ್ನೂ ಅಂತಹವರನ್ನೂ ಕಂಡು ನಮ್ಮೆಲ್ಲ ತೀರ್ಮಾನಗಳನ್ನೂ ಕೈಗೊಳ್ಳಬೇಕಾಗಿಲ್ಲ. ಅನೇಕ ಪುರೋಗಾಮಿ ತಾತ್ವಿಕ

ಭಂಡಾರಗಳು ಧರ್ಮದ ನೆಲೆಯಲ್ಲಿ ಸೃಷ್ಟಿಯಾಗಿವೆ. ಭಕ್ತಿ ಸಂಪ್ರದಾಯದ ಸಂತರಾಗಲಿ, ನಂತರದ ವಚನಕಾರರಾಗಲಿ ಈ ಗುಂಪಿಗೆ ಸೇರುವಂತಹವರೇ. ಅವರ ಮಾರ್ಗ ಇಂದಿನ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ಸಾಕಷ್ಟು ಕ್ರಾಂತಿಕಾರಕವಾಗಿ ಕಾಣದಿರಬಹುದು. ಆದರೆ ಖಂಡಿತಕ್ಕೂ ಅದು ಪ್ರಗತಿಪರವಾದ ಚಳುವಳಿ ಹೌದು. ಪ್ರಾಥಮಿಕ ಘಟ್ಟದ ಕ್ರೈಸ್ತಧರ್ಮ ಕೂಡ ಇದಕ್ಕೆ ಹೊರತಾದುದಲ್ಲ. ಇದರ ಆಸರೆಯಿಂದ ರೈತ ಚಳುವಳಿಗಳನ್ನು ಹೂಡಿದ ಕಟ್ಟಾ ಧಾರ್ಮಿಕವಾದಿಗಳನ್ನು ಕೂಡ ನಾವು ಹೆಸರಿಸಬಹುದು. ಏಂಗಲ್ಸರು ತಮ್ಮ 'ಜರ್ಮನಿಯಲ್ಲಿ ರೈತರ ಹೋರಾಟ' ಎಂಬ ಗ್ರಂಥದಲ್ಲಿ ಇದನ್ನು ಆಮೂಲಾಗ್ರವಾಗಿ ಚರ್ಚಿಸಿದ್ದಾರೆ. ಸಮಷ್ಟಿಯ ದೃಷ್ಟಿಯಿಂದ ಧರ್ಮವು ಹೋರಾಟದ ಆಗರವಾಗಿ ಕೆಲವೊಮ್ಮೆ ವರ್ತಿಸಿರುವುದಕ್ಕೆ ಇದೊಂದು ನಿದರ್ಶನ ಅಷ್ಟೆ. ವ್ಯಕ್ತಿಯ ದೃಷ್ಟಿಯಿಂದ ನೋಡಿದರೂ ಈ ಮಾತು ಸುಳ್ಳಲ್ಲ. ಇಲ್ಲಿಯ ದುಃಖ ದುಮ್ಮಾನಗಳನ್ನು ವಸ್ತುನಿಷ್ಠವಾಗಿ ಗ್ರಹಿಸಿ, ದೌರ್ಜನ್ಯ-ಶೋಷಣೆ-ಅನ್ಯಾಯಗಳ ವಿರುದ್ಧ ಸಿಡಿದೆದ್ದು, ಅವನ್ನು ನಿರ್ಮೂಲನಗೊಳಿಸಲು ಮಾರ್ಗವನ್ನು ಕಾಣದೆ, ಕಡೆಗೆ ಪ್ರಪತ್ತಿ ಮಾರ್ಗವನ್ನು ಎತ್ತಿ ಹಿಡಿದರೂ ಭಕ್ತಿಪಂಥದ ಪ್ರಮುಖ ನಿರ್ಮಾತೃಗಳಲ್ಲಿ ಪ್ರತಿಭಟನೆಯ ಸೂಚನೆ ಯಥೇಚ್ಛವಾಗಿದೆ. ತಮ್ಮ ಅಳಲನ್ನು ತೋಡಿಕೊಂಡು ಅಶಕ್ತತೆಯನ್ನು ಗುರುತಿಸಿ ಕೊಂಡಾಗ ಮತ್ತು ವಿರೋಧಿಗಳ ಅಧಿಕಶಕ್ತಿಯಿಂದಾಗಿ ಸಂಘಟಿತ ಪ್ರತಿಭಟನೆಯು ದುಸ್ಸಾಧ್ಯ ವಾದಾಗ ಧರ್ಮದ ಆಸರೆ ಅವರಿಗೆ ಅವಶ್ಯಕವೆಂದೇ ಕಂಡುಬಂದಿದ್ದರೆ ಅದರಲ್ಲಿ ಆಶ್ಚರ್ಯ ವೇನಿಲ್ಲ. ಕುತ್ಸಿತ ಪಾತಕಗಳ ಮಧ್ಯೆ ಧರ್ಮವು ಸ್ವಚ್ಛವಾದ ಪಾತಳಿಯಂತೆ ಕಂಗೊಳಿಸಿದ್ದು ಸಹಜವಾಗಿದೆ. ಸದಾ ಕಷ್ಟನಷ್ಟಗಳ ಪ್ರಪಾತದಲ್ಲಿ ಸಿಲುಕಿಕೊಂಡಿದ್ದವನಿಗೆ ಧರ್ಮವು ನೆಮ್ಮದಿ ತಂದುಕೊಡುವ ನಿಟ್ಟುಸಿರಿನಂತೆ ತೋರಿಬಂತು. ಆದೇ ಸಮಯದಲ್ಲಿ ಮಾನವನ ಕ್ರಿಯಾಶಕ್ತಿಯನ್ನು ಕುಂಠಿತಗೊಳಿಸುವ ಮಾದಕದ್ರವ್ಯದಂತೆಯೂ ಅದು ಪರಿಣಮಿಸಿತು. ಏಕೆಂದರೆ ಧರ್ಮವು ಸೂಚಿಸಿದ ಮತ್ತು ಇಂದಿಗೂ ಸೂಚಿಸುವ ಪರಿಹಾರವು ಸಮಸ್ಯೆಯನ್ನು ಬಗೆಹರಿಸಬಲ್ಲ ಪರಿಹಾರವಲ್ಲ. ಸಮಸ್ಯೆಯತ್ತ ಔದಾಸೀನ್ಯಭಾವವನ್ನು ಹುಟ್ಟಿಹಾಕುವ ಅಥವಾ ಸಮಸ್ಯೆಯ ತೀವ್ರತೆಯನ್ನು ಕಡಿಮೆಮಾಡುವ ಕಾರ್ಯವನ್ನು ಮಾತ್ರ ಧರ್ಮ ನಿರ್ವಹಿಸುತ್ತದೆ. ಸಾಂಘಿಕ ದೃಷ್ಟಿಯಿಂದ ನೋಡಿದರೆ ಅದು ಸಾಮಾಜಿಕ ಕ್ಷೋಭೆಗೆ ಕಾರಣವಾಗಿದೆಯೇ ವಿನಾ ಸಾಮಾಜಿಕ ಪರಿವರ್ತನೆಗಲ್ಲ. ಕಾವ್ಯದ ಪ್ರಯೋಜನವನ್ನು ಗುರುತಿಸುವಾಗ ಅದು ''ಸದ್ಯಃ ಪರನಿರ್ವೃತಿ''ಯನ್ನು, ಅಂದರೆ ತಕ್ಷಣದ ಸಮಸ್ಯೆಯಿಂದ ವಿಮುಖರಾಗುವ ಶಕ್ತಿಯನ್ನು, ನೀಡುತ್ತದೆಂದು ಹೇಳುತ್ತಾರೆ. ಹಾಗೆ ಧರ್ಮವೂ ಕೂಡ ದುಗುಡವನ್ನು ದ್ವಿಗುಣಿತವಾಗದಂತೆ ತಡೆಹಿಡಿಯಬಲ್ಲುದು; ಆದರೆ ಅದನ್ನು ನಿವಾರಿಸಲಾರದು. ನಿವಾರಣೆಯು ಮಾನವ ಪ್ರವೃತ್ತಿ, ಪ್ರಕೃತಿಯೊಡನೆ ಸೆಣಸಾಟ, ಜ್ಞಾನವೃದ್ಧಿ ಇತ್ಯಾದಿಗಳಿಂದ ಮಾತ್ರ ಸಾಧ್ಯ. ಪರಲೋಕದ ಶಾಶ್ವತ ಸುಖದ ಭ್ರಮೆಯಿಂದ ಆವೃತರಾಗಿ ಇಹಲೋಕದ ಬೇನೆಯನ್ನು ಎಲ್ಲರೂ, ಎಲ್ಲ ಕಾಲಕ್ಕೂ ಸಹಿಸಿಕೊಂಡು ಹೋದಾರೆಂದು ಊಹಿಸುವುದೇ ಒಂದು ಮೌಢ್ಯ !

ಮಾನವಿಕ ಮೌಲ್ಯಗಳ ದೃಷ್ಟಿಯಿಂದ ಧರ್ಮವು ಅನಿವಾರ್ಯ ಮತ್ತು ಆ ಕಾರಣದಿಂದ ಅದು ವಿಜ್ಞಾನಕ್ಕಿಂತಲೂ ಹೆಚ್ಚು ಶ್ರೇಷ್ಠ ಎಂಬ ವಾದವನ್ನು ಆಗಾಗ್ಗೆ ನಮ್ಮ ಮುಂದಿಡಲಾಗುತ್ತದೆ. ವಿಜ್ಞಾನಕ್ಕೂ ಒಂದು ಮೌಲ್ಯದ ಬಲವಿದೆ. ಮಾನವಿಕ ಮೌಲ್ಯಗಳನ್ನು ವಿಜ್ಞಾನ ತಿರಸ್ಕರಿಸುವುದಿಲ್ಲ. ವಿಜ್ಞಾನವು ಅನೈತಿಕತೆಯನ್ನು ಎತ್ತಿಹಿಡಿಯುತ್ತದೆಂಬ ಮಿಥ್ಯಾಕಲ್ಪನೆಯನ್ನು ಧರ್ಮಧುರಂಧರರೇ ಹೆಚ್ಚು ಪ್ರಚಾರಮಾಡುತ್ತಾರೆಂಬುದು ಕಟುಸತ್ಯ. ಇಂದಿನ ಜಾಗತಿಕ ಆರ್ಥಿಕ ಮತ್ತು ರಾಜಕೀಯ ವಾತಾವರಣದಲ್ಲಿ ವಿಜ್ಞಾನದ ವಿಷಗಾಳಿಯು ಎಲ್ಲೆಲ್ಲೂ

ಆವರಿಸಿರುವಂತೆ ತೋರುತ್ತಿರುವುದು ನಿಜ. ಇಂದಿನ ಚಾರಿತ್ರಿಕ ಘಟ್ಟದಲ್ಲಿ ಅಸ್ತಿತ್ವದಲ್ಲಿರುವ ಸಮಾಜದ ವ್ಯವಸ್ಥೆಯಿಂದಾಗಿ (ಅಂದರೆ ಸಾಮ್ರಾಜ್ಯಶಾಹಿಯು ಸಮಾಜವಾದಿ ವ್ಯವಸ್ಥೆಯನ್ನು ನಾಶಮಾಡಲು ಹವಣಿಸುತ್ತಿರುವುದರಿಂದ) ಬೇರೆಲ್ಲ ಸಾಮಗ್ರಿಗಳ ಮತ್ತು ಜ್ಞಾನದ ಬಳಕೆಯಲ್ಲಿ ಕಂಡುಬರುವ ಅಸ್ತವ್ಯಸ್ತತೆಯು ವಿಜ್ಞಾನದ ಕ್ಷೇತ್ರದಲ್ಲೂ ಹಬ್ಬಿನಿಂತಿದೆ. ಅದು ಸಮಾಜದ ಆಂತರಿಕ ಸಂಘರ್ಷದ ಅನಿವಾರ್ಯ ಪರಿಣಾಮ. ವರ್ಗ ಹೋರಾಟವು ಉನ್ನತ ಮಟ್ಟಕ್ಕೇರುತ್ತಿರುವ ಈ ಸಂದರ್ಭದಲ್ಲಿ ಧರ್ಮವು ಸಾಮಾಜಿಕ ಮೌಲ್ಯಗಳನ್ನು ಪ್ರಖರವಾಗಿ ಪ್ರತಿಪಾದಿಸುತ್ತದೆಯೋ ಅಥವಾ ಸಮಾಜ ವಿಜ್ಞಾನವು ಆ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುತ್ತದೋ ಎಂಬುದನ್ನು ಸ್ವಾನುಭವದಿಂದ ಗ್ರಹಿಸಿಕೊಳ್ಳಬಹುದು. ಮೇಲಾಗಿ, ನಮ್ಮ ನೈತಿಕ ಮತ್ತು ಸಾಂಸ್ಕೃತಿಕ ವ್ಯಕ್ತಿತ್ವವು ಜಗದ್ಗುರುಗಳ ಮತ್ತು ಬಾಬಾಗಳ ಪವಿತ್ರ ಸಾನ್ನಿಧ್ಯದಲ್ಲಿ ರೂಪುಗೊಳ್ಳುವುದಿಲ್ಲವೆಂಬುದನ್ನು ಮರೆಯಬಾರದು. ದಿನನಿತ್ಯದ ಜೀವನ ಸನ್ನಿವೇಶದಲ್ಲಿ ಪ್ರತಿಕ್ರಿಯೆಗಳನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳುವುದರಲ್ಲಿ ವ್ಯಕ್ತಿತ್ವದ ವಿಕಾಸವಾಗುತ್ತದೆ. ಬೆಲ್ಚಿ-ಪಿಪ್ರಾ-ಹುಣಸೇಕೋಟೆ ಇತ್ಯಾದಿ ಬೀಭತ್ಸ ಕಾಂಡಗಳು ಸರಪಳಿಯಂತೆ ಒಂದರ ಮೇಲೊಂದು ಈಚಿನ ದಿನಗಳಲ್ಲಿ ಘಟಿಸಿವೆ. ಮಹಿಳೆಯರ ಮೇಲಿನ ಹೀನ ಅತ್ಯಾಚಾರಗಳ ಸುದ್ದಿಗಳು ದಿನಂಪ್ರತಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಎಷ್ಟೋ ಹತ್ಯಾಕಾಂಡಗಳೂ ಅತ್ಯಾಚಾರಗಳೂ ಪ್ರಕಟವಾಗದೆಯೂ ಉಳಿದಿವೆ. ಈ ರೀತಿಯ ನರಮೇಧಗಳು ಮತ್ತು ಪಾಶವೀವೃತ್ತಿಗಳು ಸೈದ್ಧಾಂತಿಕವಾಗಿ ಧಾರ್ಮಿಕ ಮೌಲ್ಯಗಳಲ್ಲ; ಮಾನವೀಯ ಮೌಲ್ಯಗಳಂತೂ ಅಲ್ಲವೇ ಅಲ್ಲ. ಈ ಎಲ್ಲ ಘಟನೆಗಳು ಜರುಗಿದಾಗಲೂ ಪ್ರಜ್ಞಾವಂತರು, ವಿವೇಕಿಗಳು, ಸಾಮಾಜಿಕ ಜವಾಬ್ದಾರಿಯನ್ನರಿತಿರುವವರು ಮತ್ತು ವರ್ಗದೃಷ್ಟಿಯಿಂದ ಹೋರಾಟ ನಡೆಸುತ್ತಿರುವವರು ಸಿಟ್ಟಿಗೆದ್ದಿದ್ದಾರೆ, ಮೌಲ್ಯಗಳ ಬಗ್ಗೆ ಅವರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ನಾವು ಅಪೇಕ್ಷಿಸುವಷ್ಟು ತೀವ್ರವಾಗಿ ಮತ್ತು ಪರಿಣಾಮಕಾರಿಯಾಗಿ ಅವರು ಪಾತ್ರ ವಹಿಸಿಲ್ಲದಿರಬಹುದೆಂಬುದು ನಿಜ. ಅದು ಅಷ್ಟೇ ಮಟ್ಟದಲ್ಲಿ ಏಕೆ ಉಳಿದಿದೆ ಮತ್ತು ಇನ್ನೂ ಹೆಚ್ಚಿನ ಮಟ್ಟಕ್ಕೇರದಿರಲು ಕಾರಣವೇನು, ಎಂಬಿತ್ಯಾದಿ ಪ್ರಶ್ನೆಗಳಿಗೆ ನಾವು ಉತ್ತರ ಕೊಡಬೇಕಾಗಿದೆ ಹಾಗೂ ಉತ್ತರ ಕಂಡುಕೊಂಡು ಕಾರ್ಯಪ್ರವೃತ್ತರಾಗಬೇಕಾಗಿದೆ. ಆದರೂ ಪ್ರತಿಕ್ರಿಯೆ ಸೂಚಿಸಿದ್ದಾರೆ, ಪ್ರತಿಭಟನೆ ಸಲ್ಲಿಸಿದ್ದಾರೆ. ಆದರೆ ಪ್ರಶ್ನೆ ಇಷ್ಟೆ: ಅನಸೂಯಮ್ಮನವರ ಮೇಲೆ ದೌರ್ಜನ್ಯ ನಡೆದಾಗ ಮತ್ತು ಶೇಷಗಿರಿಯಪ್ಪನವರ ಕೊಲೆಯಾದಾಗ ದಲಿತ ಸಂಘರ್ಷ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆ, ಕಮ್ಯುನಿಸ್ಟ್ ಪಕ್ಷಗಳು ಇತ್ಯಾದಿಗಳಂತೆ ಯಾವ ಧಾರ್ಮಿಕ ಗುರು ಧಾರ್ಮಿಕ ಮೌಲ್ಯಗಳಿಂದ ಪ್ರೇರಿತನಾಗಿ ಕಾರ್ಯಪ್ರವೃತ್ತನಾದ ? ''ಬ್ರಹ್ಮ ಸತ್ಯಂ ಜಗನ್ಮಿಥ್ಯಾ'' ಇತ್ಯಾದಿ ತತ್ವಗಳನ್ನು ನಿರರ್ಗಳವಾಗಿ ಬೋಧಿಸುವ ಮತ್ತು ಪ್ರೌಢಶಾಲೆಗಳಲ್ಲಿ ಸಂಸ್ಕೃತಕ್ಕೆ ಪ್ರಥಮಭಾಷೆಯ ಸ್ಥಾನವಿರಬೇಕೆಂದು ಬೀದಿಗಿಳಿಯುವ ಮಹಾಮಹಿಮರ ಮತ್ತು ಸುಸಂಸ್ಕೃತರ ಸೊಲ್ಲು ಎಲ್ಲಿ ಅಡಗಿಹೋಗಿದೆ ? ಅಥವಾ ಅನಸೂಯಮ್ಮ, ಶೇಷಗಿರಿಯಪ್ಪ, ಇವರೆಲ್ಲಾ ಅವರ ದೃಷ್ಟಿಯಲ್ಲಿ ಲೆಕ್ಕಕ್ಕೆ ಬರುವಂತಹ ಮನುಷ್ಯರೇ ಅಲ್ಲವೋ ? ಅವರ ಮೌಲ್ಯಗಳೆಲ್ಲಾ ಪುಸ್ತಕದ ಬದನೆಕಾಯಿ ಮಾತ್ರವೇನು ? ಪ್ರಸಕ್ತ ಭೀಕರ ಪರಿಸ್ಥಿತಿಯಲ್ಲಿ ಒಬ್ಬನ ಚೇತನವನ್ನು ಸ್ಫುರಿಸದಂತಹ ಧಾರ್ಮಿಕ ಮೌಲ್ಯಕ್ಕೆ ನಾವು ಯಾವ ಬೆಲೆ ಕಟ್ಟಬೇಕು ? ಅಥವಾ ಈ ಕೊಲೆಗಳೂ ಪರಬ್ರಹ್ಮನ ಲೀಲೆಯೆಂದು ನಾವು ತಲೆದೂಗಬೇಕೆಂದೇನಾದರೂ ಇವರು ಅಪೇಕ್ಷಿಸುತ್ತಾರೋ ?

ಇಂತಹ ಪ್ರಕರಣಗಳಾದಾಗ ಗೊಡ್ಡು ತತ್ವಗಳ ಜಡ್ಡು ಪ್ರಜ್ಞೆಯಿಂದಾಗಿ ನಿಷ್ಕ್ರಿಯರಾದವರು

ಒಂದು ಕಡೆ; ವರ್ಗಪ್ರಜ್ಞೆಯಿಂದ ಹೋರಾಟದಲ್ಲಿ ಪಾಲ್ಗೊಳ್ಳುವವರು ಇನ್ನೊಂದು ಕಡೆ. ಒಬ್ಬರು ಧರ್ಮದ ಸೆರೆಯಾಳುಗಳು, ಇನ್ನೊಬ್ಬರು ಸಮಾಜ ವಿಜ್ಞಾನದ ಸಕ್ರಿಯ ಪ್ರತಿಪಾದಕರು. ಅವರಿಗೆ ಪ್ರೇರಣೆ ಬಂದದ್ದು ಮಾರಣಹೋಮ ನಡೆಸಿದವರ ಪರವಾಗಿ ಗುಟ್ಟಾಗಿ ವರ್ಗಮೈತ್ರಿ ಸಾಧಿಸಿರುವ ಧಾರ್ಮಿಕ ಜಗದ್ಗುರುಗಳಿಂದಲ್ಲ; ಮಾನವತೆ, ವರ್ಗಪ್ರಜ್ಞೆ, ಸಾಮಾಜಿಕವಾಗಿ ಉಂಟಾಗಿರುವ ಆಂತರಿಕ ಸಂಬಂಧಗಳು, ಭವಿಷ್ಯ ಸಮಾಜದ ಬಗೆಗಿರುವ ಉದಾತ್ತ ಧ್ಯೇಯ ಮತ್ತು ನಿಷ್ಠೆ, ಮಾನವನು ತನ್ನ ಸಂಕೋಲೆಗಳನ್ನು ಕಿತ್ತೆಸೆದು ಸ್ವತಂತ್ರವಾಗಿ ಜೀವಿಸಬಲ್ಲ ಮತ್ತು ಜೀವಿಸಬೇಕು ಎಂಬ ದೃಢ ಸಂಕಲ್ಪ, ಇತ್ಯಾದಿಗಳು ನೈತಿಕ ಪ್ರಜ್ಞೆಯನ್ನು ಮೂಡಿಸುವುದರಲ್ಲಿ ಹೆಚ್ಚು ಪಾತ್ರ ವಹಿಸಿವೆ. ಮೌಲ್ಯಗಳಲ್ಲಿ ಯಾವುವು ಸ್ವೀಕಾರಾರ್ಹವೆಂಬುದು ಸಮಾಜದ ಆಗುಹೋಗುಗಳಿಗೆ ಸಂಬಂಧಿಸಿದ ಪ್ರಶ್ನೆ; ಅದು ಸಹನೆಯ ಹೆಸರಿನಲ್ಲಿ ಅನಾಚಾರವನ್ನು ಖಂಡಿಸದೆ ಮೂಕಪ್ರೇಕ್ಷಕನಾಗಿ ಉಳಿಯುವ ಧರ್ಮದ ಪ್ರಶ್ನೆಯಲ್ಲ. ಧರ್ಮಕ್ಕೆ ಪ್ರತಿಗಾಮಿ ಎಂಬ ಕಳಂಕವು ಲೇಪಗೊಂಡಿರುವುದು ಸ್ವಾಭಾವಿಕವಾಗಿದೆ ಯೆಂಬುದನ್ನು ಇಂದಿನ ಧರ್ಮಾಧಿಕಾರಿಗಳು ಮತ್ತೆ ರುಜುವಾತು ಮಾಡಿ ತೋರಿಸಿದ್ದಾರೆ.

ವಿಜ್ಞಾನ ಮತ್ತು ಧರ್ಮಗಳ ನಡುವಿನ ವ್ಯತ್ಯಾಸವನ್ನು ಇನ್ನೊಂದು ದೃಷ್ಟಿಯಿಂದಲೂ ಗಮನಿಸಬೇಕು. ವಿಜ್ಞಾನವನ್ನು ಅಭ್ಯಸಿಸುವ ಯಾವನೂ ಅದರ ವ್ಯಾಪ್ತಿ ಈಗಾಗಲೇ ಸಮಗ್ರವಾಗಿ ಪೂರೈಸಿದೆಯೆಂದು ಹೇಳಲಾರ. ಅದು ಇನ್ನೂ ಬೆಳೆಯಬೇಕಾದ ತರುಣಾವಸ್ಥೆಯ ಜ್ಞಾನಕ್ಷೇತ್ರ. ಆದರೆ ಧರ್ಮ ಹಾಗಲ್ಲ. ಯಾವ ಗಹನವಾದ ಪ್ರಶ್ನೆಯೇ ಆಗಲಿ ಧರ್ಮವು ಅದಕ್ಕೆ 'ಸಮರ್ಪಕ'ವಾದ ಮತ್ತು ಕಟ್ಟುನಿಟ್ಟಾದ ಡಾಂಭಿಕ ಉತ್ತರವನ್ನು ಕೊಟ್ಟೇ ತೀರುತ್ತದೆ. ಈಗ ತರ್ಕಿಸಿ : ಉದ್ಧಟತನ ಯಾರದ್ದೆಂದು ; ವಿಜ್ಞಾನದ್ದೋ, ಧರ್ಮದ್ದೊ? ಉದಾಹರಣೆಗೆ, ಸತ್ತ ಮೇಲೆ ನನಗೇನಾಗುತ್ತದೆ ? ಧರ್ಮಗಳೆಲ್ಲಾ ಈ ಪ್ರಶ್ನೆಗೆ ಖಡಾಖಂಡಿತವಾದ, ಆದರೆ ಭಿನ್ನ ಭಿನ್ನವಾದ ಉತ್ತರ ಕೊಡುತ್ತವೆ. ಅವನ್ನು ಶ್ರದ್ಧೆಯಿಂದ ಒಪ್ಪಿಕೊಳ್ಳಬೇಕೆಂದು ಅವು ನನ್ನನ್ನು ಒತ್ತಾಯಿಸುತ್ತವೆ. ಅವರಿಗೆ ತಿಳಿಯದ ವಸ್ತುವಿಲ್ಲ, ದೊರಕಿಲ್ಲದ ಜ್ಞಾನವಿಲ್ಲ. ಆದರೂ ಧರ್ಮ ನಶಿಸಿಹೋಗುತ್ತಿದೆಯೆಂದು ಪದೇ ಪದೇ ಬೊಬ್ಬೆ ಹಾಕುತ್ತಾರೆ. – ಸಾರ್ವಕಾಲಿಕವಾದ ಜ್ಞಾನ ಅವರಲ್ಲಿರುವುದು ನಿಜವಾದರೆ ಧರ್ಮವು ನಾಶವಾಗುತ್ತದೆಯೆಂಬ ಭೀತಿ ಏತಕ್ಕೆ ? ಜೊತೆಗೆ, ಒಂದು ಧರ್ಮಕ್ಕಿಂತ ಇನ್ನೊಂದು ಶ್ರೇಷ್ಠ ಎಂಬ ಜಗಳ ಬೇರೆ. ಒಂದು ಧರ್ಮದವರಿಗೆ ಪುನರ್ಜನ್ಮ, ಇನ್ನೊಂದು ಧರ್ಮದವನಿಗೆ ಮರಣಾನಂತರ ಅಂತಿಮ ನ್ಯಾಯದ ದಿನದವರೆಗೆ ನಿರಂತರ ಅಸ್ತಿತ್ವ ! ಒಂದು ಧರ್ಮದ ಪ್ರಕಾರ ಪಾಪಿಯ ಆತ್ಮವನ್ನು ನರಕದಲ್ಲಿ ಬೆಂಕಿಯ ಮೇಲಿರುವ ಬಾಣಲೆಯಲ್ಲಿ ಹಾಕಿ ಹುರಿಯಲಾಗುತ್ತದೆ; ಇನ್ನೊಂದು ಧರ್ಮದ ಪ್ರಕಾರ ಅಂತಹ ಇನ್ನೊಬ್ಬ ಪಾಪಿಗೆ ಈ ಬಾಣಲೆ ಶಿಕ್ಷೆ ಇಲ್ಲ. ಒಂದು ಧರ್ಮದ ಪ್ರಕಾರ ಚಂದ್ರನಿಗೆ ರಾಹು, ಕೇತುಗಳಿಂದ ಫಜೀತಿ; ಇನ್ನೊಂದು ಧರ್ಮದ ಪ್ರಕಾರ ಮುಲ್ಲಾ ನೋಡಿಲ್ಲದಿದ್ದರೆ ಚಂದ್ರನೇ ಇಲ್ಲ! ಅವನು ಕುರುಡನಾದರೆ ಬೇರೆಲ್ಲರಿಗೂ ಕಣ್ಣಿದ್ದೂ ಪ್ರಯೋಜನವಿಲ್ಲ. ಹೀಗೆ ವೈವಿಧ್ಯಪೂರ್ಣವಾದ ಧರ್ಮಗಳಿಗೆ ನಾವೇಕೆ ಸೇರಿದ್ದೇವೆಂಬ ಪ್ರಶ್ನೆಯನ್ನು ಹಾಕಿಕೊಳ್ಳುವಷ್ಟು ತಾಳ್ಮೆಯೂ ಇಲ್ಲದ ಜನ ಆ ಧರ್ಮಗಳನ್ನು ರಕ್ಷಿಸುವ ಮಹಾನುಭಾವರು, ಪರೋಪಕಾರಿಗಳು !

ಒಂದು ಧರ್ಮಕ್ಕೆ ಸೇರಿದವರ ಬಾಳು ಹೀಗಾದರೆ ಒಂದು ಧರ್ಮದಿಂದ ಬೇರೊಂದು ಧರ್ಮಕ್ಕೆ ಜಿಗಿಯುವವರ ಬಾಳು ಇಮ್ಮಡಿ ಮೌಢ್ಯದಿಂದ ತುಂಬಿರಬೇಕಷ್ಟೆ! ಧರ್ಮದ ಈ ಗೊಂದಲವನ್ನು ಯಾರೋ ಒಬ್ಬ ತುಂಟ ವಿದ್ವಾಂಸ ಸಂಸ್ಕೃತದಲ್ಲಿ ಹೀಗೆ ನಿವೇದಿಸಿ ಕೊಂಡಿದ್ದಾನೆ : ಸುಗತೋ ಯದಿ ಧರ್ಮಜ್ಞಃ ಕಪಿಲೋ ನೇತಿ ಕಾ ಪ್ರಮಾ । ತಾವುಭೌ ಯದಿ

ಧರ್ಮಜ್ಞೌ ಮತಭೇದಃ ಕಥಂ ತಯೋಃ॥ (ಬುದ್ಧನು ಧರ್ಮವನ್ನು ತಿಳಿದಿರುವವನೆಂದಾದರೆ ಕಪಿಲನಿಗೆ ಧರ್ಮ ತಿಳಿಯದೆಂಬುದಕ್ಕೆ ಸಾಕ್ಷಿ ಏನಿದೆ ? ಅವರಿಬ್ಬರಿಗೂ ಧರ್ಮವು ತಿಳಿದಿದೆಯೆನ್ನುವುದಾದರೆ ಅವರ ನಡುವಣ ವ್ಯತ್ಯಾಸವನ್ನು ಹೇಗೆ ವಿವರಿಸಬೇಕು ?) – ಧರ್ಮದ ಇಂತಹ ಗೊಂದಲಗಳನ್ನು ವಿಜ್ಞಾನ ಮಾತ್ರ ಬಿಡಿಸಬಲ್ಲದು. ಇನ್ನೊಂದು ವೈಶಿಷ್ಟ್ಯವೇನೆಂದರೆ ಧರ್ಮವು ತನ್ನ ಗೊಂದಲವನ್ನು ವಿಜ್ಞಾನದ ಮೇಲೆ ಹೇರಲು ಇಲ್ಲಿಯ ತನಕವೂ ಅಸಮರ್ಥವಾಗಿಯೇ ಉಳಿದಿದೆ. ಆದರೆ ವಿಜ್ಞಾನವು ಬೆಳೆದಂತೆ ಧರ್ಮದ ಗೊಡ್ಡುತನ ಕ್ರಮೇಣ ಕಡಿಮೆಯಾಗುತ್ತಿದೆ. ಅಂತಿಮವಾಗಿ ಜಯ ಯಾರದಾಗುತ್ತದೆಯೆಂಬುದಕ್ಕೆ ಇದಕ್ಕಿಂತಲೂ ಬೇರೆ ನಿದರ್ಶನ ಬೇಕಿಲ್ಲ. ''ಮಾರ್ಕ್ಸ್‌ವಾದವು ಜಯಿಸುತ್ತದೆ; ಏಕೆಂದರೆ ಅದು ಸತ್ಯ'' ಎಂಬ ಮಾತಿನ ಅರ್ಥವನ್ನು ಇದರಿಂದಲೂ ತಿಳಿದುಕೊಳ್ಳಬಹುದು.

ಧರ್ಮದಲ್ಲಿ ಹಲವು ಕುಂದುಗಳಿದ್ದರೂ ಅದರ ನೆಲೆಯಿಂದ ಅತ್ಯಂತ ಶ್ರೇಷ್ಠ ವ್ಯಕ್ತಿಗಳನೇಕರು ಹೊರಬಂದಿದ್ದಾರೆಂದು ಹಿಂದೆಯೇ ಪ್ರಸ್ತಾಪಿಸಿದ್ದೇವೆ. ಇದನ್ನು ಸರಿದೂಗಿಸಲೋ ಎಂಬಂತೆ ವಿಜ್ಞಾನದ ಕ್ಷೇತ್ರದಿಂದ ಕೆಲವೊಮ್ಮೆ ಯಹೂದ್ಯ ವಿಜ್ಞಾನ ಮತ್ತು ಆರ್ಯ ವಿಜ್ಞಾನ ಎಂಬ ಪ್ರಭೇದಗಳನ್ನು ಸೃಷ್ಟಿಸಿದ ದುಷ್ಕರ್ಮಿ ಫಿಲಿಪ್ ಲೆನಾರ್ಡ್‌ನಂತಹ ವಿಜ್ಞಾನಿಗಳು ಹೊರಬಂದಿದ್ದಾರೆ. ನ್ಯೂಟ್ರಾನ್ ಬಾಂಬನ್ನು ಶ್ಲಾಘಿಸಿದ ಎಡ್ವರ್ಡ್ ಟೆಲರ್‌ನಂತಹ ಕಟುಕ ವಿಜ್ಞಾನಿಗಳೂ ಉಂಟು. (ಆತನ ಪ್ರಾಧ್ಯಾಪಕ ಮಾಕ್ಸ್ ಬಾರ್ನ್ ಈ ಟೆಲರ್‌ನನ್ನು ಸಂಧಿಸಲು ಹೇಸಿಗೆ ಪಟ್ಟಿದ್ದರಂತೆ ಮತ್ತು ಅಂತಹ ದುಷ್ಟ ಶಿಷ್ಯನನ್ನು ಪಡೆದೆನಲ್ಲಾ ಎಂದು ಪರಿತಪಿಸಿದ್ದರಂತೆ.) ಮತ್ತು ಈ ಪಟ್ಟಿಯಲ್ಲಿ ನಮ್ಮ ಬಾಬಾ ಭಕ್ತಮಂಡಲಿಯ ನವೋದಯ ಮೂರ್ಖ ವಿಜ್ಞಾನಿಗಳೂ ಸೇರಿಕೊಳ್ಳುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಸಮಾಜದ ಆಗುಹೋಗುಗಳನ್ನು ಗುರುತಿಸಿ ಅವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ ವ್ಯಕ್ತಿಗಳ ಮತ್ತು ಸಮಷ್ಟಿಯ ವ್ಯಕ್ತಿತ್ವ, ಭಾವನೆ, ಪ್ರತಿಕ್ರಿಯೆ, ಆಕಾಂಕ್ಷೆ, ವರ್ಗಪ್ರಜ್ಞೆ ಇತ್ಯಾದಿಗಳು ಹೇಗೆ ಹುಟ್ಟಿ ಬೆಳೆಯುತ್ತವೆಯೆಂದು ಗೊತ್ತಾಗುತ್ತದೆ; ಸಾಮೂಹಿಕ ಜೀವನದ ದೃಷ್ಟಿಯಿಂದ ಸಮಾಜದ ವರ್ಗಗಳ ಆಕಾಂಕ್ಷೆಗಳ ಪೂರೈಕೆಗೆ ಮತ್ತು ಧ್ಯೇಯಸಾಧನೆಗೆ ಧರ್ಮಕ್ಕಿಂತಲೂ ಧರ್ಮನಿರಪೇಕ್ಷತೆಯ ಆದ್ಯತೆ ಮನವರಿಕೆಯಾಗುತ್ತದೆ; ಮತ್ತು ವರ್ಗಹೋರಾಟದ ಯಶಸ್ಸಿನಿಂದಾಗಿ ಸಮಾಜವು ವಿಮುಕ್ತಿ ಹೊಂದುವುದು ಹಾಗೂ ಭವಿಷ್ಯದ ಭವ್ಯಸಮಾಜದ ವಿನೂತನ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ಉನ್ನತ ಮಟ್ಟವು ರಚನೆಗೊಳ್ಳುವುದು ವಿಜ್ಞಾನದ ಕೊಡುಗೆಯಾಗಿರುತ್ತದೆಯೇ ವಿನಾ ಇತಿಹಾಸದಲ್ಲಿ ತನ್ನ ಪಾತ್ರವನ್ನು ಈಗಾಗಲೇ ಪೂರೈಸಿಕೊಂಡು ವೃದ್ಧಾಪ್ಯದಲ್ಲಿ ದಿನ ಕಳೆಯುತ್ತಿರುವ ಧರ್ಮದ ದತ್ತಿಯಾಗಿರುವುದಿಲ್ಲ. ಮಾನವ ಸಮಾಜಕ್ಕೆ ತಕ್ಕುದಾದ ಮೌಲ್ಯಗಳು ಕೇವಲ ಧರ್ಮದ ಮೌಲ್ಯಗಳೆಂದು ಗಣನೆಗೆ ಬಾರದಿರುವುದರಿಂದ ಸೂಕ್ತವಾದವುಗಳನ್ನು ಭದ್ರಪಡಿಸಿ ಯೋಜಿಸಿಕೊಳ್ಳಲಾಗುತ್ತದೆ ಮತ್ತು ಸೂಕ್ತವಲ್ಲದವುಗಳನ್ನು ನಿರಾಕರಿಸಲಾಗುತ್ತದೆ. ಹಾಗೂ ನೂತನ ಮಾನವಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. ಅಂತಹ ಮೌಲ್ಯಗಳ ಅತಿಶಯವಾದ ಪ್ರಯೋಜನವನ್ನು ಮಾನವ ಎಂದೆಂದೂ ಪಡೆದುಕೊಳ್ಳುತ್ತಾನೆ. ಧರ್ಮವು ಪ್ರತಿಪಾದಿಸಿ ಸಾಧಿಸದೆ ಹೋದುದನ್ನು ವಿಜ್ಞಾನದ ಬಳಕೆಯಿಂದ ಮಾನವ ಸಾಧಿಸಿಕೊಳ್ಳುತ್ತಾನೆ. ಆಗ ಏಂಗಲ್ಸರು ಹೇಳುವಂತೆ ಮಾನವ ಇತಿಹಾಸಪೂರ್ವದ ಘಟ್ಟದಿಂದ ಹೊರಬಂದು ಇತಿಹಾಸ ನಿರ್ಮಿತಿಯಲ್ಲಿ ತೊಡಗುತ್ತಾನೆ.

– *ಕೆಂಬಾವುಟ : ಆಗಸ್ಟ್* 1980

# ಇತಿಹಾಸದ ಅಧ್ಯಯನ : ಒಂದು ಟಿಪ್ಪಣಿ

> ರಾಜಕೀಯ ಸಂಸ್ಥೆಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ಸಮಾಜದಲ್ಲಿರುವ ವಿವಿಧ ವಿಭಾಗಗಳು ಹಾಗೂ ಅವುಗಳ ಪಾರಸ್ಪರಿಕ ಸಂಬಂಧಗಳನ್ನು ಅಧ್ಯಯನ ಮಾಡಬೇಕು. ಈ ವಿವಿಧ ಸಾಮಾಜಿಕ ವಿಭಾಗಗಳನ್ನು ತಿಳಿದುಕೊಳ್ಳಬೇಕಾದರೆ ಭೂಮಿಯೆಂಬ ಆಸ್ತಿಗೆ ಸಂಬಂಧಿಸಿದಂತೆ ಅದರ ಸ್ವರೂಪ ಮತ್ತು ಸಂಬಂಧಗಳನ್ನು ಅರಿತುಕೊಳ್ಳಬೇಕು.
>
> **–ಫ್ರಾನ್‌ಸ್ವಾ ಗ್ವಿಝೋ**

೧೯೭೭ರ ಪಾರ್ಲಿಮೆಂಟ್ ಚುನಾವಣೆಯು ಭಾರತಕ್ಕೆ ಎರಡನೆಯ ಸ್ವಾತಂತ್ರ್ಯವನ್ನು ತಂದುಕೊಟ್ಟಿತೆಂದು ಕೆಲವು ರಾಜಕೀಯ ಪಕ್ಷಗಳು ಸಾರುತ್ತಿದ್ದವು. ತುರ್ತು ಪರಿಸ್ಥಿತಿಯನ್ನು ಕೊನೆಗಾಣಿಸಿದ್ದನ್ನು ಈ ರೀತಿ ಸೂಚಿಸಲಾಗುತ್ತಿತ್ತು. ಈ 'ಎರಡನೆಯ ಸ್ವಾತಂತ್ರ್ಯ'ದಿಂದ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯೇನೂ ಉತ್ತಮಗೊಳ್ಳಲಿಲ್ಲ. ಅದು ಎಷ್ಟನೆಯ ಸ್ವಾತಂತ್ರ್ಯದಿಂದ ಲಭಿಸುತ್ತದೆಯೋ ಕಾದು ನೋಡಬೇಕು. ಆಗಲಾದರೂ ಮತೀಯ ಗಲಭೆಗಳು, ಹರಿಜನರನ್ನು ಜೀವಂತ ಸುಡುವ ಕ್ರೌರ್ಯ, ಇತ್ಯಾದಿಗಳು ಇಲ್ಲವಾಗುವುವೆಂಬ ಆಶಾಭಾವನೆ ಮಾತ್ರ ಸದ್ಯಕ್ಕಿರಲು ಸಾಧ್ಯ. ಬುದ್ಧಿಜೀವಿಗಳ ಮೇಲಿನ ಮಾರ್ಮಿಕ ಗದಾಪ್ರಹಾರಗಳೂ ಆಗ ಅಸಾಧ್ಯ ಮತ್ತು ಅನವಶ್ಯಕವಾದೀತು. ೧೯೭೭ರ ಚುನಾವಣೆಯ ನಂತರ ಪ್ರಜಾಪ್ರಭುತ್ವಕ್ಕೆ ಹೊಸ ಉಸಿರು ತುಂಬಿಬಂತು. ಅದರ ಹಿನ್ನೆಲೆಯಲ್ಲಿ ನಡೆದ ಒಂದು ಘಟನೆ ಮಾತ್ರ ಅತ್ಯಂತ ಹೇಯವಾಗಿದ್ದು ಉಸಿರು ಸಿಕ್ಕಿಸುವಂಥದಾಗಿತ್ತು. ಅದಕ್ಕೆ ಕಾರಣಕರ್ತರಾಗಿದ್ದವರು ಧೈರ್ಯವಾಗಿ ಹೊರಬಂದು ತಮ್ಮ ನಿಲುವನ್ನು ಸ್ಪಷ್ಟಪಡಿಸುವ ಗೋಜಿಗೆ ಹೋಗಲಿಲ್ಲ. ತೆರೆಯ ಮರೆಯಲ್ಲಿ ತಮ್ಮ ಕಪಟ ತಂತ್ರವನ್ನು ಪೂರೈಸಿಕೊಳ್ಳಲು ಅವರು ಅನಾಮಧೇಯರಾಗಿ ಉಳಿದು ನೇರವಾಗಿ ಪ್ರಧಾನ ಮಂತ್ರಿಯವರಿಗೆ ಒಂದು ಅಹವಾಲನ್ನು ಸಲ್ಲಿಸಿದರು. ಅನಾಮಧೇಯರಿಂದ ಬಂದ ಅಹವಾಲುಗಳಿಗೆ ಸಾಮಾನ್ಯವಾಗಿ ಸರ್ಕಾರಿ ಕಛೇರಿಗಳಲ್ಲಿ ಗಮನ ನೀಡಲಾಗುವುದಿಲ್ಲ. ಆದರೆ ಈ ಪ್ರಮುಖರ ಅಹವಾಲು ತಮ್ಮ ಹೆಸರುಗಳಿಲ್ಲದಿದ್ದರೂ ವಿಶೇಷವಾದ ಮನ್ನಣೆಗೆ ಪಾತ್ರವಾಯಿತು. ಪತ್ರದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯವಿದು : ಶಿಕ್ಷಣ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಲಿಯು (ಎನ್.ಸಿ.ಇ.ಆರ್.ಟಿ.) ಪ್ರಕಟಿಸಿರುವ ಕೆಲವು ಇತಿಹಾಸದ ಪಠ್ಯಪುಸ್ತಕಗಳು ಹೈಯರ್ ಸೆಕೆಂಡರಿ ತರಗತಿಗಳಿಗೆ ಆರಿಸಿಡಲ್ಪಟ್ಟಿವೆ, ಅವನ್ನು ಬರೆದಿರುವವರು ಕೆಲವು ಸಿದ್ಧಾಂತಗಳಿಗೆ ಕಟ್ಟುಬಿದ್ದಿರುವ ಪೂರ್ವಗ್ರಹ ಪೀಡಿತರು (ಅಂದರೆ, ಮಾರ್ಕ್ಸ್‌ವಾದಿಗಳು ಅಥವಾ ಕಮ್ಯುನಿಸ್ಟರು) ! ಅವರು ಭಾರತೀಯ ಸಂಸ್ಕೃತಿಗೆ ಅವಮಾನವಾಗುವಂತಹ ಕೆಲವು ಮಾತುಗಳನ್ನು ಬರೆದಿದ್ದಾರೆ, ಮತ್ತು ಹಿಂದೂಗಳ ಮನ ನೋಯುವಂತಹ ಕೆಲವು ವಿಷಯಗಳನ್ನು ಚರ್ಚಿಸಿದ್ದಾರೆ. ಈ ಕಾರಣಗಳಿಂದ ಆ ಪುಸ್ತಕಗಳನ್ನು ಪಠ್ಯಪುಸ್ತಕಗಳ ಪಟ್ಟಿಯಿಂದ ಹೊರಹಾಕಬೇಕು ಮತ್ತು ಆ ಪುಸ್ತಕಗಳನ್ನು ಪ್ರಕಾಶಕರು ಹಿಂತೆಗೆದುಕೊಳ್ಳಬೇಕು (ಅಂದರೆ ಮಾರುಕಟ್ಟೆಯಲ್ಲಿ ಅವನ್ನು ಮಾರಬಾರದು).

ಹೀಗೆ ಒಂದು ತೀರ್ಮಾನಕ್ಕೆ ಬರಲು ಈ ಪ್ರಮುಖರಿಗಿದ್ದ ವಿಶೇಷ ಹಕ್ಕು ಯಾವುದೋ

ನಮಗೆ ತಿಳಿಯದು. ಅಥವಾ ಅವರ ಒತ್ತಾಯಕ್ಕೆ ಮಣಿಯಲು ಪ್ರಧಾನ ಮಂತ್ರಿಗಳಿಗಿದ್ದ ಕಾರಣವೂ ನಮಗೆ ತಿಳಿದಿಲ್ಲ. ಕೇವಲ ರಾಜಕೀಯ ಕಾರಣಗಳಿಂದ ತೀರ್ಮಾನ ತೆಗೆದುಕೊಂಡಿದ್ದರೆ ಅದು ಪ್ರಜಾಪ್ರಭುತ್ವಕ್ಕೆ ಮತ್ತು 'ಎರಡನೆಯ ಸ್ವಾತಂತ್ರ್ಯ'ಕ್ಕೆ ಅಪಚಾರ. ಮೇಲಾಗಿ ಈ ಪುಸ್ತಕಗಳನ್ನು ಬರೆದಿರುವ ರೋಮಿಲಾ ಥಾಪರ್, ಆರ್. ಎಸ್. ಶರ್ಮ, ಇರ್ಫಾನ್ ಹಬೀಬ್, ಬರುಣ್ ಡೇ, ಮುಂತಾದವರೆಲ್ಲಾ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ವಿದ್ವಾಂಸರು ಮತ್ತು ಅವನ್ನು ಪ್ರಕಟಿಸುವ ಮುನ್ನ ಹಲವು ತಜ್ಞರು ತಮ್ಮ ಅನುಮತಿ ಸೂಚಿಸಿದ್ದರು. ಅವೇ ಪುಸ್ತಕಗಳನ್ನು ಹಿಂತೆಗೆದುಕೊಳ್ಳಲು ಒಂದು ಸಮಿತಿಯನ್ನು ನೇಮಿಸಿ ಸಲಹೆ ಕೂಡ ಪಡೆಯಲಿಲ್ಲ, ಅದು ಹೋಗಲಿ, ಕೇಂದ್ರ ಸರ್ಕಾರದ ವಿದ್ಯಾಭ್ಯಾಸ ಇಲಾಖೆಯ ಅಭಿಪ್ರಾಯವನ್ನು ಸಹ ಕೇಳಲಿಲ್ಲ.

ಅದಂತಿರಲಿ. – ಈ ಘಟನೆಯಿಂದಾಗಿ ಭಾರತದ ಇತಿಹಾಸ ರಚನೆಯ ಬಗ್ಗೆ ಸಮಗ್ರವಾದ ಚರ್ಚೆ ಮತ್ತೊಮ್ಮೆ ನಡೆಯಲು ಪ್ರಾರಂಭವಾಗಿದೆ. ಇದನ್ನು ಕುರಿತು ಎರಡು ಮಾತು ಹೇಳುವುದು ಈ ಲೇಖನದ ಉದ್ದೇಶ. ಒಂದು ಬಣದವರು ಎತ್ತುವ ಆಕ್ಷೇಪದ ಸಾರಾಂಶ ಹೀಗಿದೆ : ಕೆಲವು ಚರಿತ್ರಕಾರರು ಇತಿಹಾಸದ ರಚನೆಯಲ್ಲಿ ತಮಗೆ ಒಪ್ಪಿಗೆಯಾಗಿರುವ ಕೆಲವು ಸಿದ್ಧಾಂತಗಳನ್ನು ತೊಡಗಿಸಿಕೊಂಡಿದ್ದಾರೆ; ಆದರಿಂದಾಗಿ ನಿಷ್ಪಕ್ಷಿಕತೆಗೆ ಕೊಡಲಿಪೆಟ್ಟು ಬಿದ್ದಿದೆ. – ಈ ರೀತಿಯ ಟೀಕೆಯು ಒಂದು ಬಣದವರ ಸಿದ್ಧಾಂತಕ್ಕೆ ಭಿನ್ನವಾದ ಇನ್ನಾವುದೋ ಸಿದ್ಧಾಂತಕ್ಕೆ ಕಟ್ಟುಬಿದ್ದಿರುವವರಿಂದ ಬರುತ್ತದೆಯೆಂಬುದು ಸ್ವಯಂವೇದ್ಯವಾಗಿದೆ. ಅರ್ಥಾತ್, ಈ ಟೀಕೆ ಮಾಡುವವರೂ ಒಂದು ಸಿದ್ಧಾಂತ ಅಥವಾ ದೃಷ್ಟಿಕೋನಕ್ಕೆ ಹೊರತಾದವರಲ್ಲ. ಆದರೆ ಬುದ್ಧಿವಂತಿಕೆಯಿಂದ ಅದನ್ನು ಮುಚ್ಚಿಡಲಾಗುತ್ತಿದೆ. ತತ್ವಶಾಸ್ತ್ರ ಮತ್ತು ಕಲೆಗಳಿಗೆ ಸಂಬಂಧಿಸಿದಂತೆ ಅವುಗಳ ನಿಯಮ ಮತ್ತು ಉದ್ದೇಶಗಳ ಬಗ್ಗೆ ಬಹಳ ಕಾಲದಿಂದಲೂ ವಾಗ್ವಾದಗಳಿದ್ದೇ ಇವೆ. ಇತಿಹಾಸದ ಬಗ್ಗೆ ಸಹ ಇಂತಹ ಭಿನ್ನಾಭಿಪ್ರಾಯ ಉದ್ಭವಿಸಿದರೆ ಆಶ್ಚರ್ಯವೇನೂ ಇಲ್ಲ.

೧೯ನೆಯ ಶತಮಾನದ ಉತ್ತರಾರ್ಧ ಮತ್ತು ೨೦ನೆಯ ಶತಮಾನದ ಆದಿಭಾಗದಲ್ಲಿ ಚರಿತ್ರಕಾರರ ಸಂಶೋಧನೆಯ ಮತ್ತು ಇತಿಹಾಸದ ರಚನೆಯ ಪ್ರಯತ್ನಗಳನ್ನು ಗಮನಿಸಿದರೆ ವಿಶಿಷ್ಟವಾದ ಒಂದು ಪ್ರವೃತ್ತಿ ಕಾಣಸಿಗುತ್ತದೆ. ಅದೇನೆಂದರೆ, ಬ್ರಿಟನ್ನಿನ ವಿದ್ವಾಂಸರು ಮತ್ತು ಭಾರತದ ರಾಷ್ಟ್ರೀಯವಾದಿಗಳು ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಪರಸ್ಪರ ವಿರೋಧಿ ತೀರ್ಮಾನಗಳಿಗೆ ಬಂದಿದ್ದಾರೆಂಬುದು. ಪ್ರಾಚೀನ ಭಾರತದ ಸ್ವರೂಪ, ಜನಜೀವನ ವ್ಯವಸ್ಥೆ, ಸಾಮಾಜಿಕ ಸಂಬಂಧ, ರಾಜಕೀಯ ನಿಲುವು ಮತ್ತು ಅವುಗಳು ಇಂದಿನ ಸಂದರ್ಭಕ್ಕೆ ಹೇಗೆ ಮತ್ತು ಎಷ್ಟರಮಟ್ಟಿಗೆ ಸಂಗತವಾದುವು ಎಂಬುದು ಪ್ರಶ್ನೆ. ಭಿನ್ನಭಿನ್ನವಾದ ತೀರ್ಮಾನಕ್ಕೆ ಬರಲು ಕಾರಣವೇನು ? ಒಂದು ಕಡೆ ಬ್ರಿಟನ್ನಿನ ವಸಾಹತುವಾದವನ್ನು ಸಮರ್ಥಿಸುವಂತಹ ಮಿಲ್ಸ್, ಮೆಕಾಲೆ, ವಿನ್ಸೆಂಟ್ ಸ್ಮಿತ್ ಮುಂತಾದವರು; ಮತ್ತೊಂದು ಕಡೆ ಅದನ್ನು ವಿರೋಧಿಸುವ ಮತ್ತು ಅದನ್ನು ಕಿತ್ತೆಸೆಯಲು ಹೋರಾಟ ನಡೆಸುವಂತಹ ಬಾಲ ಗಂಗಾಧರ ತಿಲಕ್, ಘೋಶಾಲ್, ಜಯಸ್ವಾಲ್, ಡಾಂಗೆ ಮುಂತಾದವರು. ಉದ್ದೇಶದ ಭಿನ್ನತೆಯಿಂದಾಗಿ ದೃಷ್ಟಿಕೋಣದಲ್ಲೂ ಭಿನ್ನತೆಯಿದ್ದದ್ದು ಅನಿವಾರ್ಯವಾಗಿದ್ದಿರಬೇಕು. ಅಂತೂ ಅವರು ಉಲ್ಲೇಖಿಸುವ ಮಹತ್ವದ ಸಂಗತಿಗಳಲ್ಲಿ ಏಕಾಭಿಪ್ರಾಯವಿಲ್ಲ. ಪ್ರಾಚೀನ ಭಾರತದ ಜನಜೀವನದಲ್ಲಿ ಅಸ್ತವ್ಯಸ್ತತೆ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅಪಕ್ವವಾದ ಸಾಂಘಿಕ ಸಂಸ್ಥೆಗಳು, ಆರ್ಥಿಕ ಅನಿಶ್ಚಿತತೆ, ಗುಂಪುಗಳ ನಡುವಣ ಘರ್ಷಣೆ, ರಾಷ್ಟ್ರೀಯತೆಯ ಅಭಾವ ಇತ್ಯಾದಿಗಳನ್ನು

ಒಂದು ಬಣದ ಚರಿತ್ರಕಾರರು ನಮೂದಿಸಿದರೆ ತದ್ವಿರುದ್ಧವಾಗಿ ಪ್ರಾಚೀನ ಭಾರತವೆಂದರೆ ಸ್ವರ್ಗಲೋಕ, ರಾಮರಾಜ್ಯ ಇತ್ಯಾದಿಗಳ ಕಲ್ಪನೆಯನ್ನಿಟ್ಟುಕೊಂಡು ಅಲ್ಲಿ ಭವ್ಯವಾದ ಸುವರ್ಣ ಯುಗಗಳನ್ನು ಕಂಡ ಭಾರತೀಯ ಚರಿತ್ರಕಾರರು ಇಲ್ಲದಿಲ್ಲ. ಭಾರತದ ರಾಷ್ಟ್ರೀಯತಾವಾದಿ ಚರಿತ್ರಕಾರರೊಡಗೂಡಿ ಕೆಲವು ಪಾಶ್ಚಾತ್ಯ ವಿದ್ವಾಂಸರೂ ಇಂಥದೇ ನಿಲುವನ್ನು ತಾಳಿದ್ದರು. ಪ್ರಾಚೀನ ಭಾರತವನ್ನು ಹೊಗಳಿದ ಈ ವಿದ್ವಾಂಸರು ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಕೂಲಂಕಷವಾಗಿ ವಿಶ್ಲೇಷಿಸಿದ್ದರೆಂದು ಹೇಳಲು ಬರುವುದಿಲ್ಲ. ಅಂದಿನ ಜೀವನದಲ್ಲಿ ಕೆಲವು ಉಚ್ಛ್ರಾಯಗತಿಗಳನ್ನು, ದಾರ್ಶನಿಕ ಚಿಂತನೆಯನ್ನು ಮತ್ತು ಧಾರ್ಮಿಕ ಸಮನ್ವಯ ದೃಷ್ಟಿಯನ್ನು ಗಮನಿಸಿ ಅವರು ಕೆಲವು ಸ್ವಾಭಾವಿಕ ತೀರ್ಮಾನಗಳಿಗೆ ಬಂದಿದ್ದರು. ಪ್ರಾಚೀನ ಭಾರತದಲ್ಲಿ ಎಲ್ಲವೂ ಸುಂದರಮಯವಾಗಿಯೇ ಇದ್ದಿತ್ತೇ ಎಂಬುದನ್ನು ಕೆದಕಿ ತೆಗೆಯಲು ಅವರು ಹೋಗಲಿಲ್ಲ. ಬ್ರಿಟನ್ನಿನ ವಸಾಹತುವಾದಿಗಳ ಸಿದ್ಧಾಂತಕ್ಕೆ ಪ್ರತ್ಯುತ್ತರವಾಗಿ ಈ ನಿಲುವು ಸಹಜವಾಗಿಯೇ ಬೆಳೆದುಬಂದಿತು.

ಇತಿಹಾಸದ ಅಧ್ಯಯನ ಆಗಿನಿಂದೀಚೆಗೆ ಸಾಕಷ್ಟು ವಿಸ್ತಾರವಾಗಿ ಬೆಳೆದಿದೆ. ಆದರೂ ಪ್ರಾಚೀನ ಭಾರತದ ಸುವರ್ಣಯುಗಗಳ ಹೊಂಗನಸಿನ ಛಾಯೆಯಲ್ಲೇ ಬೆಳೆದು ಬಂದಿರುವವರು ನಮ್ಮಲ್ಲಿ ಇಂದಿಗೂ ಹೇರಳವಾಗಿದ್ದಾರೆ. ಅವರಿಗೆ ಹಿಂದಿನ ಮತ್ತು ಇಂದಿನ ವಾಸ್ತವಿಕ ಪರಿಸ್ಥಿತಿಯ ಪರಿಚಯ ಬೇಕಿಲ್ಲ. ಕನಸಿನ ಸಾಮ್ರಾಜ್ಯದ ಇತಿಹಾಸದ ಆಭಾಸ ಜ್ಞಾನವೇ ಅವರಿಗೆ ತೃಪ್ತಿಯನ್ನು ಕೊಡುವಂಥದು! ಆದ್ದರಿಂದಲೇ ಅಂತಹವರು ಪದೇಪದೇ ಆಧುನಿಕ ಜ್ಞಾನ ಎಷ್ಟೇ ಬೆಳೆದರೂ ಪ್ರಾಚೀನರ ವಿವೇಕಕ್ಕೆ ಅದು ಸಮನಾಗಲಾರದು ಎಂದು ಒತ್ತಿಹೇಳುತ್ತಿರುತ್ತಾರೆ. ಅತ್ಯಂತ ಆಧುನಿಕ ಜ್ಞಾನಭಾಗಕ್ಕೆ ಸೇರಿದ ಅಣುವಿಜ್ಞಾನ, ತಾಂತ್ರಿಕತೆ, ಕ್ವಾಂಟಮ್ ಸಿದ್ಧಾಂತ, ಇತ್ಯಾದಿಗಳೆಲ್ಲಾ ಅವರ ಪ್ರಕಾರ ನಮ್ಮ ಪ್ರಾಚೀನ ಉದ್ಗ್ರಂಥಗಳಲ್ಲಿಯೇ ಹುದುಗಿವೆ. ಇವರಲ್ಲಿ ಇನ್ನೊಂದು ಪಂಥದವರೂ ಇದ್ದಾರೆ. ಅವರ ನಿಶ್ಚಿತ ಅಭಿಪ್ರಾಯದಂತೆ ನಮ್ಮ ಪ್ರಾಚೀನರ ಸಮಗ್ರ ಜ್ಞಾನವನ್ನು ಶ್ರದ್ಧೆಯಿಂದ ಒಪ್ಪಿಕೊಳ್ಳಬೇಕೇ ವಿನಾ ಅದನ್ನು ಆಧುನಿಕ ಪ್ರಯೋಗಗಳಿಗೆ ಗುರಿಮಾಡಿ ಅಳೆಯಲಾಗದು. ಸ್ವಮೂತ್ರ ಚಿಕಿತ್ಸೆಯ ಅದ್ಭುತ ಪ್ರತಿಪಾದಕರಂತಹವರು ಈ ತತ್ವದ ಅಚಲ ಭಕ್ತರಾಗಿರುತ್ತಾರೆ. ಇಲ್ಲಿ ಒಂದು ಸಂಗತಿಯನ್ನು ನಿದರ್ಶನವನ್ನಾಗಿ ಕೊಡಬಹುದು. ೧೯೩೦ರ ದಶಕದಲ್ಲಿ ಸ್ವಾಮಿ ಕುವಲಯಾನಂದ ಎಂಬ ಯೋಗಾಭ್ಯಾಸಿಯೊಬ್ಬರು ವಿಜ್ಞಾನದ ಆಳವಾದ ಅಭ್ಯಾಸ ಮಾಡಿ ಅನೇಕ ಯೋಗಕ್ರಿಯೆಗಳನ್ನು ವಿಜ್ಞಾನದ ಅಳತೆಗೋಲಿನಿಂದ ವಿಶ್ಲೇಷಿಸಲು ತೊಡಗಿ ಜಗದೀಶ ಚಂದ್ರ ಬೋಸರಂತಹವರಿಂದ ಪ್ರಶಂಸೆಗೆ ಪಾತ್ರರಾದರು. ಅದೇ ಮೊರಾರ್ಜಿ ದೇಸಾಯಿಯವರು ಕುವಲಯಾನಂದರಿಗೆ ೧೯೩೪ರಷ್ಟು ಹಿಂದೆಯೇ ಪತ್ರವೊಂದನ್ನು ಬರೆದು ಇಂತಹ ವೈಜ್ಞಾನಿಕ ಪ್ರಯೋಗಗಳು ನಿಷ್ಪ್ರಯೋಜಕವೆಂದೂ ಪ್ರಾಚೀನ ಭಾರತದ ಜ್ಞಾನದ ವ್ಯಾಪ್ತಿಯನ್ನು ನಿಷ್ಠೆ ಮತ್ತು ಶ್ರದ್ಧೆಗಳಿಂದ ಮಾತ್ರ ತಿಳಿದುಕೊಳ್ಳಲು ಸಾಧ್ಯವೆಂದೂ ಪ್ರತಿಪಾದಿಸಿದ್ದರು. ಮಾನ್ಯ ದೇಸಾಯಿಯವರ ರಾಜಕೀಯ ಮತ್ತು ಆರ್ಥಿಕ ವಿಶ್ಲೇಷಣೆಗಳೂ ಬಹುಶಃ ಇದೇ ಮಾದರಿಯ 'ಶ್ರದ್ಧೆ'ಯಿಂದ ಹುಟ್ಟಿ ಬೆಳೆದಿರಬೇಕೆಂದು ನಮಗನಿಸುತ್ತದೆ! ಹೀಗೆ ''ಶ್ರದ್ಧಾತ್ಮಕ ಜ್ಞಾನವಿಜ್ಞಾನ ಗಳು'' ನಮ್ಮ ಅಹಮಿಕೆಗೆ ನೀರೆರೆಯಬಹುದು. ನಮ್ಮ ಅನ್ಯಾಕ್ರಮಣಶೀಲತೆಗೆ ಸೊಪ್ಪುಹಾಕಬಹುದು. ಆದರೆ ಅದು ಅತಾರ್ಕಿಕ, ಅವೈಜ್ಞಾನಿಕ. ಇತಿಹಾಸ ಮತ್ತು ವಿಜ್ಞಾನದ ಕ್ಷೇತ್ರಗಳಲ್ಲಿ ಈ ಮಾರ್ಗಕ್ಕೆ ಸ್ಥಾನ ನೀಡಲಾಗದು.

ಮೇಲೆ ಹೇಳಿದ ಚರಿತ್ರಕಾರರ ಎರಡು ಬಣಗಳಲ್ಲೂ ಕೆಲವರನ್ನುಳಿದು ಇತರರೆಲ್ಲಾ

ಇತಿಹಾಸದ ಸೃಷ್ಟಿಯಲ್ಲಿ ಮೂಲಭೂತವಾದ ಪಾತ್ರ ವಹಿಸುವ ಜನಸಮುದಾಯದ ಕಡೆಗೆ ದೃಷ್ಟಿಹರಿಸಲೇ ಇಲ್ಲ. ಇಂದಿನ ಇತಿಹಾಸವನ್ನು ಅರ್ಥೈಸುವಾಗಲೂ ಅವರಿಗೆ ಈ ಜನ ಸಮುದಾಯದ ಪಾತ್ರ ಹಿರಿದೆನ್ನಿಸಲಾರದು. ಅತ್ಯಂತ ಪುರಾತನ ಕಾಲದಿಂದಲೂ ಮಾನವ ಬದಲಾಗುತ್ತಿರುವ ವಿವಿಧ ಸಾಮಾಜಿಕ ವ್ಯವಸ್ಥೆಗಳ ನಡುವೆ ಬದುಕಿ ಮುನ್ನಡೆಯುತ್ತಾ ಬಂದಿದ್ದಾನೆಂಬ ನೈಜ ಸಂಗತಿಯನ್ನು ಮರೆಯಲಾಗುವುದಿಲ್ಲ. ಈ ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯಲ್ಲೂ ತನ್ನದೇ ಆದ ವಿಶಿಷ್ಟ ರೀತಿಯ ಉತ್ಪಾದನಾ ಸಂಬಂಧಗಳು ಇರುತ್ತವೆ; ಅಂತೆಯೇ ವಿವಿಧ ಆಸ್ತಿ ಸಂಬಂಧಗಳೂ ಇರುತ್ತವೆ. ಸಮಾಜ ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿರುವ ಈ ಅಂಶಗಳು ಆ ಸಮಾಜದ ಇತಿಹಾಸಕ್ಕೆ, ಇತಿಹಾಸ ಸೃಷ್ಟಿಗೆ ಪೂರಕ ವಾಗಿಲ್ಲದಿರಲು ಸಾಧ್ಯವೇ ? ವ್ಯಕ್ತಿಗತ ಸಂಬಂಧಗಳು ಈ ಅಂಶಗಳಿಂದ ನಿರ್ಧಾರವಾಗುತ್ತವೆ ಯಾದರೆ ಮತ್ತು ಅಂತಹ ಸಂಬಂಧಗಳಿಂದ ಸಮಾಜ ರೂಪುಗೊಳ್ಳುತ್ತದೆಯಾದರೆ ಇತಿಹಾಸಕ್ಕೂ ಈ ಅಂಶಗಳಿಗೂ ಅವಿಚ್ಛಿನ್ನವಾದ ಸಂಬಂಧವಿದ್ದೇ ತೀರಬೇಕು. ನಮ್ಮ ಚರಿತ್ರಕಾರರಲ್ಲಿ ಅಗ್ರಮಾನ್ಯತೆ ಪಡೆಯುವ ಡಿ. ಡಿ. ಕೋಸಾಂಬಿಯವರು ೧೯೫೬ರಲ್ಲಿ ಪ್ರಕಟವಾದ ತಮ್ಮ 'ಭಾರತೀಯ ಇತಿಹಾಸದ ಅಧ್ಯಯನಕ್ಕೆ ಪ್ರವೇಶಿಕೆ'ಯೆಂಬ ಗ್ರಂಥದಲ್ಲಿ ಹೀಗೆಂದಿದ್ದಾರೆ : ''ಉತ್ಪಾದನೆಯ ಸಾಧನಗಳು ಮತ್ತು ಸಂಬಂಧಗಳ ಅನುಕ್ರಮವಾದ ಬೆಳವಣಿಗೆಯನ್ನು ಕಾಲಕ್ರಮವಾಗಿ ಪ್ರತಿಪಾದಿಸುವುದೇ ಇತಿಹಾಸ ಎನಿಸಿಕೊಳ್ಳುತ್ತದೆ'' (ಪಾಪ್ಯುಲರ್ ಪ್ರಕಾಶನ, 1975ರ ಮುದ್ರಣ, ಪುಟ 1). ಈಚಿನ ದಿನಗಳಲ್ಲಿ ಕೆಲವರ ಅಪಪ್ರಚಾರ ಮತ್ತು ನಿಂದೆಗೆ ಗುರಿಯಾಗಿರುವ ಶ್ರೇಷ್ಠ ಚರಿತ್ರಕಾರ್ತಿ ರೋಮಿಲಾ ಥಾಪರ್ ಸಹ ಅದನ್ನೇ ಬೇರೆ ಮಾತುಗಳಲ್ಲಿ ಹೀಗೆನ್ನುತ್ತಾರೆ : ''ರಾಜಕೀಯ ಚರಿತ್ರೆ ಮತ್ತು ವಿವಿಧ ವಂಶಾವಳಿಗಳ ಅಧ್ಯಯನಗಳು ಇತಿಹಾಸದ ನಿರೂಪಣೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರುತ್ತವೆ. ಆದರೆ ಒಂದು ಜನಸಮುದಾಯ ಮತ್ತು ಸಂಸ್ಕೃತಿ ಹೇಗೆ ರಚಿತವಾಗುತ್ತವೆಂಬುದರ ಹಿನ್ನೆಲೆಯಲ್ಲಿ ಇವನ್ನು ನೋಡಬೇಕು. ರಾಜಕೀಯ ವಿಧಾನಗಳ ಬದಲಾವಣೆ ಮತ್ತು ಆರ್ಥಿಕ ವ್ಯವಸ್ಥೆ, ಇವುಗಳ ನಡುವೆ ಅವಿಭಾಜ್ಯವಾದ ಸಂಬಂಧವಿದೆ. ತತ್ಪರಿಣಾಮವಾಗಿ ಅವು ಸಾಮಾಜಿಕ ಸಂಬಂಧಗಳನ್ನು ರೂಪಿಸುವುದರಲ್ಲೂ ಕಾರಣ ವಾಗುತ್ತವೆ.'' (ಭಾರತದ ಇತಿಹಾಸ, ಮೊದಲನೆಯ ಸಂಪುಟ, ಪೆಲಿಕನ್ ಮಾಲೆ, ಪುಟ 22). ೧೯೭೭ರಲ್ಲಿ ಭುವನೇಶ್ವರದಲ್ಲಿ ಜರುಗಿದ ಭಾರತೀಯ ಇತಿಹಾಸ ಸಮ್ಮೇಳನದ ೩೮ನೆಯ ಅಧಿವೇಶನದಲ್ಲಿ ಅಧ್ಯಕ್ಷ ಸ್ಥಾನದಲ್ಲಿದ್ದ ಸತೀಶ್ ಚಂದ್ರ ಅವರು ಇದನ್ನು ಸೂಕ್ಷ್ಮವಾಗಿ ಮತ್ತು ಸಾರವತ್ತಾಗಿ ಹೀಗೆ ವಿವರಿಸಿದ್ದಾರೆ : ''ಇತಿಹಾಸವೆಂದರೆ ಯುದ್ಧಗಳ, ಆಂತರಿಕ ಪ್ರಕ್ಷುಬ್ಧತೆಯ, ದಮನದ ಮತ್ತು ಕೆಲವು ವೀರರ ಧೀರ ಕೃತಿಗಳ ದೀರ್ಘವಾದ ಪಟ್ಟಿ ಮಾತ್ರವಲ್ಲ; ಮೂಲಭೂತವಾಗಿ ಇತಿಹಾಸವು ಮಾನವನ ಸತ್ವದ ಹಾಗೂ ಮಾನವನ ನಾಗರಿಕತೆಯ ಬೆಳವಣಿಗೆಯನ್ನು ಒಟ್ಟು ಸಮಾಜದ ಬೆಳವಣಿಗೆಯ ಸಂದರ್ಭದಲ್ಲಿ ಅಭ್ಯಸಿಸುತ್ತದೆ.''

ಆದಿಕಾಲದ ಅಂದಿನ ದಿನಗಳಿಂದ ಇಂದಿನವರೆಗೆ ಮಾನವ ಹಾದುಬಂದಿರುವ ಅಗಾಧವಾದ ಮಾರ್ಗದಲ್ಲಿ ಎಷ್ಟು ಸಾಹಸಮಯ ಪ್ರಕರಣಗಳಿವೆ ! ಆಗಿಂದಾಗ್ಗೆ ಮಾನವ ಎದುರಿಸಬೇಕಾಗಿಬಂದ ಪರಿಸ್ಥಿತಿಗಳೆಷ್ಟು, ಅವಕ್ಕೆ ಅವನು ಕಂಡುಕೊಂಡ ಪರಿಹಾರ ಗಳೆಂತಹವು ! ಇಂತಹ ಅನೇಕ ಪ್ರಸಂಗಗಳಿಂದ ಮಾನವ ಮಾನವನಾಗಿ ವಿಜೃಂಭಿಸಲು ಸಾಧ್ಯಮಾಡಿಕೊಂಡ. ಹೀಗೆ ಮೈನವಿರೇಳಿಸುವ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಯಾರು ? ಸಾಮೂಹಿಕಾರ್ಥದಲ್ಲಿ ಇಡೀ ಮಾನವ ಜನಾಂಗ. ಈ ಜನಾಂಗದ ಅಸಾಧಾರಣ

ಕ್ರಿಯಾಶಕ್ತಿ, ಮೇಧಾಶಕ್ತಿ ಎಷ್ಟು ಅದ್ಭುತ! ಕ್ರಮೇಣ ನವೀಕರಿಸಲ್ಪಟ್ಟ ಸಾಧನಗಳ ಪ್ರಯೋಗ, ಬರುಬರುತ್ತಾ ಹೆಚ್ಚು ಹೆಚ್ಚು ಸಂಕೀರ್ಣಗೊಳ್ಳುತ್ತಿದ್ದ ಪರಿಕರಗಳ ವಿನ್ಯಾಸ, ಇವೆಲ್ಲಾ ರಮಣೀಯವಾಗಿಯೂ ಸಹಜವಾಗಿಯೂ ತೋರಿದರೂ ಮೊದಲಿಗೆ ಅದನ್ನು ರೂಪಿಸಿದ ಸನ್ನಿವೇಶದಲ್ಲಿ ಮಾನವ ಜನಾಂಗ ತೋರಿದ ಕ್ರಿಯಾಶಕ್ತಿ ಮತ್ತು ವಿನ್ಯಾಸಶಕ್ತಿಯನ್ನು ವಿವರಿಸುವುದಸದಳ. ಎಂದೂ ಅಕ್ಷಯವಾಗಿಯೇ ಉಳಿಯುವ ಈ ಸೊಬಗಿನ ಜಾಣ್ಮೆಯ ಹಿರಿಮೆಗೆ ಯಾವೊಬ್ಬನೂ ಅಥವಾ ಕೆಲವು ಜನಗಳ ಸಮ್ಮಿಳಿತ ಪ್ರಯತ್ನವೂ ಕಾರಣವಲ್ಲ. ಅದು ಇಡೀ ಮಾನವ ಜನಾಂಗದ ಕಿರೀಟಪ್ರಾಯವಾದ ಪ್ರತಿಭೆಯ ಫಲ. ನಾಗರಿಕತೆ ಮತ್ತು ಸಂಸ್ಕೃತಿಗಳ ನೈಜ ರಚಯಿತರಾದ ಮಾನವ ಕೋಟಿಯ ಸ್ಥಾನದಲ್ಲಿ ಇತಿಹಾಸದ ಪ್ರೇರಕರೆಂದು ಒಬ್ಬಿಬ್ಬ ಧೀರೋದಾತ್ತ ವ್ಯಕ್ತಿಗಳ ಉಜ್ವಲ ಕ್ರಿಯೆಗಳನ್ನರಸಹೊರಡುವುದು ಕೆಲವು ಮರಗಳ ಸಂಘಾತವನ್ನು ಇಡೀ ವನ ಎಂದು ಭ್ರಮಿಸುವುದಕ್ಕೆ ಸಮಾನ. ಭಾರತೀಯ ಸಮಾಜದ ವಿಕಾಸ ಮತ್ತು ಬೆಳವಣಿಗೆಯನ್ನು ವಿವರಿಸುವಾಗ ಕೆಲವು ಚರಿತ್ರಕಾರರು ಸೃಷ್ಟಿಸುವ ತೊಡಕಿನ ಚಕ್ರವ್ಯೂಹಕ್ಕೆ ಹೀಗೆ ಧೀರೋದಾತ್ತ ವ್ಯಕ್ತಿಗಳನ್ನು ಹುಡುಕಹೊರಡುವುದೇ ಕಾರಣ. ಹಾಗೆ ಮಾಡುವುದರಲ್ಲಿ ಅವರಿಗೇನೋ ಸಂತಸವುಂಟಾಗಿರಬಹುದು, ಆದರೆ ಅದು ಬೇಜವಾಬ್ದಾರಿತನದ ಸೂಚಕವೂ ಆಗಿದೆ. ಇಂತಹವನಿದ್ದ, ಅಂತಹವನಿದ್ದ, ಆದ್ದರಿಂದ ಸುವರ್ಣಯುಗ ಬಂತು, ರಾಮರಾಜ್ಯದ ಹೊನಲಿತ್ತು, ಅತಿಶಯ ಸೌಭಾಗ್ಯ ತಾಂಡವ ವಾಡುತ್ತಿತ್ತು. – ಇದು ಒಂದು ಬಗೆಯ ವಿಪರ್ಯಾಸ. ಇಷ್ಟು ವಿಜೃಂಭಿಸುತ್ತಿದ್ದ ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಗೆ ಯಾವನೋ ಒಬ್ಬ ದುಷ್ಟ ವಲಸೆಗಾರ ಕೊಡಲಿಪೆಟ್ಟು ಹಾಕಿದ, ಅಂದಿನಿಂದ ಮತ್ತು ಆದ್ದರಿಂದ ಅವು ಕ್ಷೀಣಿಸಿದವು, ಅವನು ಬಾರದಿದ್ದಿದ್ದರೆ ನಾವು ಸ್ವರ್ಗ ಸುಖವನ್ನು ಇನ್ನೂ ಅನುಭವಿಸುತ್ತಿದ್ದಿರಬಹುದಾಗಿತ್ತು, ಇತ್ಯಾದಿ ಇನ್ನೊಂದು ವಿಪರ್ಯಾಸ. ಎರಡೂ ಇತಿಹಾಸದ ನಿಯಮಗಳಿಗೆ ಬಾಹಿರವಾದವು, ಇತಿಹಾಸದ ವೈಜ್ಞಾನಿಕ ಅಧ್ಯಯನಕ್ಕೆ ಹೊರತಾದವು.

ಮೇಲಿನ ಚರ್ಚೆಯನ್ನು ಅಪ್ರಸ್ತುತವೆಂದು ಜರಿಯುವವರು ಸಾಕಷ್ಟಿದ್ದಾರೆ. ಹೀಗೆ ಮೂಗು ಮುರಿಯುವವರ ದೃಷ್ಟಿಯಲ್ಲಿ ಚರಿತ್ರೆಯ ವೈಜ್ಞಾನಿಕ ವ್ಯಾಖ್ಯಾನವನ್ನು ಮುಂದಿಡುವವರೆಲ್ಲಾ ಆರ್ಥಿಕ ವ್ಯವಸ್ಥೆಗೆ ಪ್ರಾಧಾನ್ಯ ನೀಡಿ ಜೀವನದ ಮಿಕ್ಕೆಲ್ಲ ವ್ಯವಹಾರಗಳೂ ಈ ವ್ಯವಸ್ಥೆಯಿಂದಲೇ ಹೊರಹೊಮ್ಮುತ್ತವೆಂದು ನಂಬುವಂತಹವರು. ಆರ್ಥಿಕ ವ್ಯವಸ್ಥೆಯೇ (economic determinism) ಜೀವನ-ಸಂಸ್ಕೃತಿಗಳ ಸರ್ವಸ್ವ ಅಥವಾ ನಾಡಿ ಎಂದು ಮಾರ್ಕ್ಸ್‌ವಾದಿಗಳು ಭಾವಿಸುತ್ತಾರೆಂಬುದು ಕೇವಲ ಅರ್ಧಸತ್ಯ. ಬೇರೆ ಅಂಶಗಳ ಮಹತ್ವವನ್ನು ಗುರುತಿಸಲು ಮಾರ್ಕ್ಸ್‌ವಾದಿಗಳು ಸರ್ವಥಾ ಪ್ರಯತ್ನಶೀಲರಾಗಿಯೇ ಇರುತ್ತಾರೆ. ಸಮಾಜದ ರಚನೆ ಮತ್ತು ಚಿಂತನಗಳಲ್ಲಿ ಆರ್ಥಿಕ ವ್ಯವಸ್ಥೆಯು ಅಪ್ರಾಸಂಗಿಕವಲ್ಲವೆಂಬುದನ್ನು ಮಾರ್ಕ್ಸ್‌ವಾದ ಒತ್ತಿ ಹೇಳುತ್ತದೆ. ಇತಿಹಾಸದ ಅಧ್ಯಯನದ ಸಂದರ್ಭದಲ್ಲೂ ಇದು ನಿಜ.

ಸಾಮಾಜಿಕ ಸ್ವರೂಪ, ಜ್ಞಾನ ಮತ್ತು ವಿಜ್ಞಾನಗಳ ಬೆಳವಣಿಗೆ, ಇತ್ಯಾದಿಗಳನ್ನು ಇತಿಹಾಸದಲ್ಲಿ ಗುರುತಿಸುವಾಗ ಕೇವಲ ವ್ಯಕ್ತಿ ಮಾತ್ರ ಪ್ರಮುಖ ಎಂಬ ವಾದ ಎಷ್ಟು ಹುರುಳಿಲ್ಲದ್ದೆಂಬುದಕ್ಕೆ ಒಂದು ನಿದರ್ಶನವನ್ನು ನೋಡಬಹುದು. ಪ್ರಕೃತಿಯ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ವಿಜ್ಞಾನ ಮತ್ತು ವಿಜ್ಞಾನಿಯ ಉದ್ದೇಶ. ಹಿಂದೆ ಅದನ್ನು ನ್ಯೂಟನ್ ಮಾಡಿದ್ದ, ಈಗ ಐನ್‌ಸ್ಟೈನ್ ಮಾಡಿದ್ದಾರೆ, ಮತ್ತು ಮುಂದೆ ಇನ್ನಾರೋ ಮುಂದುವರಿಸುತ್ತಾರೆ. ಈ ದಿಸೆಯಲ್ಲಿ ನ್ಯೂಟನ್ ಮಾಡಿದ್ದುದಕ್ಕಿಂತಲೂ ಹೆಚ್ಚು ಸಮಗ್ರವಾದ ಕಾರ್ಯ ಐನ್‌ಸ್ಟೈನ್‌ರಿಂದ ನಡೆದಿದೆ. ಮುಂದಿನವರು ಇನ್ನೂ ಹಲವು ಹೆಜ್ಜೆ ಮುಂದೆ ಹೋಗುತ್ತಾರೆ. ಅಥವಾ ಇನ್ನೊಂದು

ಪ್ರಸಂಗ ಗಮನಿಸೋಣ: ಭಾರತವನ್ನು ಬ್ರಿಟನ್ನಿನ ವಸಾಹತುಶಾಹಿ ಕಪಿಮುಷ್ಟಿಯಿಂದ ಸ್ವತಂತ್ರಗೊಳಿಸಲು ಹಲವು ವರ್ಷಗಳ ಚಳುವಳಿ ನಡೆಯಿತು. ದಾದಾಭಾಯಿ ನವರೋಜಿ, ಬಾಲ ಗಂಗಾಧರ ತಿಲಕ್, ಗಾಂಧೀಜಿ ಮುಂತಾದವರು ಈ ಚಳುವಳಿಯ ನೇತಾರರು. ಸ್ವತಃ ತಿಲಕ್ ಅವರೇ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳಲಿಲ್ಲವೆಂದರೆ ಸ್ವಾತಂತ್ರ್ಯವನ್ನು ಗಳಿಸಲಾದಾಗ ಇನ್ನೂ ಜೀವಂತವಾಗಿದ್ದ ಗಾಂಧೀಜಿಯವರಿಗಿಂತ ಅವರು ಕಡಿಮೆ ಮಟ್ಟದ ನಾಯಕರು ಎಂದು ಹೇಳಲಾದೀತೆ? ಇದರ ತಾತ್ಪರ್ಯವಿಷ್ಟೆ: ಜ್ಞಾನದ ಮತ್ತು ಸಮಾಜದ ಚಾರಿತ್ರಿಕ ಬೆಳವಣಿಗೆಯ ಘಟ್ಟಗಳಲ್ಲಿ ಅಸ್ತಿತ್ವದಲ್ಲಿರುವ ಚಾರಿತ್ರಿಕ ಸನ್ನಿವೇಶವು ಜ್ಞಾನ ಮತ್ತು ಸಮಾಜಗಳ ಬೆಳವಣಿಗೆಯನ್ನು ನಿರ್ಧರಿಸುತ್ತದೆ. ಅಂತಹ ಸನ್ನಿವೇಶದಲ್ಲಿ ಮಾನವಕೋಟಿಯ ಒಟ್ಟು ಅನುಭವ ಯಾವ ಸೀಮಾರೇಖೆಯನ್ನು ಹಾಕುತ್ತದೋ ಅದನ್ನು ದಾಟಿ ಮುಂದೆ ಹೋಗಲಾಗದು. ಅಲ್ಲಿಂದ ಮುನ್ನಡೆಯಲು ಇನ್ನೂ ಪ್ರಯತ್ನ ಬೇಕು, ಅನುಭವ ಬೇಕು, ನೂತನ ಸಾಮಗ್ರಿಗಳ ರಚನೆಯಾಗಬೇಕು. ವ್ಯಕ್ತಿಯಾಗಿ ನ್ಯೂಟನ್ ಬಹುಶಃ ಐನ್‌ಸ್ಟೈನರಷ್ಟೇ ಮೇಧಾವಿಯಾಗಿದ್ದಿರಬಹುದು. ಆದರೆ ಅಂದಿನ ಚಾರಿತ್ರಿಕ ಸನ್ನಿವೇಶ ಆತನ ವೈಜ್ಞಾನಿಕ ಕೊಡುಗೆಯನ್ನು ಸೀಮಿತಗೊಳಿಸಿತು. ಅಂತೆಯೇ ತಿಲಕ್, ಗಾಂಧಿ ಇತ್ಯಾದಿಯವರ ಚಾರಿತ್ರಿಕ ಮಹತ್ವವು ಕೂಡ ಅವರವರ ಚಾರಿತ್ರಿಕ ಸನ್ನಿವೇಶದಿಂದ ಸ್ವತಂತ್ರವಾಗಿರಲಾರದು. ಆದರೆ, ಜ್ಞಾನದ ಕ್ಷೇತ್ರದಲ್ಲಿ ಕೆಲವು ವ್ಯಕ್ತಿಗಳು ಅವರ ಸೀಮಿತ ಸನ್ನಿವೇಶದಿಂದ ಮುಕ್ತರಾದವರು, ಏಕೆಂದರೆ ಅವರ ವ್ಯಕ್ತಿಗತ ಪ್ರತಿಭೆ ಅಥವಾ ಒಳ ಅರಿವು ಯಾವೊಂದು ಮಾಧ್ಯಮ ಅಥವಾ ಸಾಧನೆಯು ಇಲ್ಲದೆಯೂ ಅವರ ಜ್ಞಾನವನ್ನು ಹೊರಹೊಮ್ಮಿಸುತ್ತದೆ, ಎಂಬ ವಾದ ನಮ್ಮ ಮುಂದೆ ಬರಬಹುದು. ''ಒಳ ಅರಿವು'' ಎಂಬ ಕಲ್ಪನೆಯ ವಿವೇಚನೆಗೆ ಇಲ್ಲಿ ಅವಕಾಶವಿಲ್ಲ. ಆದಾಗ್ಯೂ, ಇಷ್ಟು ಮಾತ್ರ ಧಾರಾಳವಾಗಿ ಹೇಳಬಹುದು: ಇಪ್ಪತ್ತನೆಯ ಶತಮಾನದ ವಿಜ್ಞಾನಿಯೊಬ್ಬನಿಗೆ ''ಒಳ ಅರಿವಿ''ನಿಂದ ದೊರೆತ ಪ್ರೇರಣೆ ಮತ್ತು ಫಲ ಹದಿನೆಂಟನೆಯ ಶತಮಾನದ ವಿಜ್ಞಾನಿಗೆ ದೊರಕಲು ಸಾಧ್ಯವಾಗುತ್ತಿರಲಿಲ್ಲ! ಒಳ ಅರಿವೂ ಸಹ ಒಂದು ಚಾರಿತ್ರಿಕ ಪರಿಧಿಯಿಂದ ಹೊರತಾಗುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಜ್ಞಾನದ ಪರಿಧಿಗೆ ನಿಯಾಮಕ ಚಾರಿತ್ರಿಕ ಸಂದರ್ಭಗಳಿರುವಂತೆ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳು ಮತ್ತು ಸಂಸ್ಥೆಗಳನ್ನು ನಿರ್ಬಂಧಿಸುವ ಚಾರಿತ್ರಿಕ ಸಂದರ್ಭಗಳೂ ಇರುತ್ತವೆ. ಆದ್ದರಿಂದಲೇ ಪ್ರಾಚೀನ ಗ್ರಂಥಗಳಲ್ಲಿ ಅತ್ಯಾಧುನಿಕವಾದ ಜ್ಞಾನ ಅಥವಾ ವಿಜ್ಞಾನವನ್ನು ಅನ್ವೇಷಿಸುವ ಪ್ರವೃತ್ತಿ ಅಸಾಧುವಾದುದು ಹಾಗೂ ಅವೈಜ್ಞಾನಿಕವಾದುದು. ಹಾಗೆ ಪ್ರಾಚೀನ ಗ್ರಂಥಗಳಲ್ಲಿ ಇಂದಿನ ಸಂಶೋಧನೆಯ ಫಲವೆಲ್ಲಾ ಅಡಕವಾಗಿರುವುದು ನಿಜವಾದರೆ ಅಂತಹ ಜ್ಞಾನವನ್ನು ಬಳಸಿಕೊಂಡು ನೂತನ ತಂತ್ರಜ್ಞಾನವನ್ನು ಹಿಂದೆಯೇ ನಾವೇಕೆ ಬೆಳೆಸಲಿಲ್ಲ? ಮತ್ತು ಆಧುನಿಕ ಸಂಶೋಧನೆಗಳ ನಂತರವೇ ಏಕೆ ಈ ಜ್ಞಾನವು ಪ್ರಾಚೀನ ಗ್ರಂಥಗಳಲ್ಲಿಯೇ ಇತ್ತೆಂಬುದು ಪತ್ತೆಯಾಗುತ್ತದೆ? ಪ್ರಾಚೀನ ಗ್ರಂಥಗಳ ಮೇಲೆ ಈ ರೀತಿಯ ಹೇರಿಕೆ ಇಲ್ಲದಿದ್ದರೆ ಅವುಗಳ ಮಹತ್ವ ಕಡಿಮೆಯಾಗಿಬಿಡಬಹುದೆಂಬ ಶಂಕೆ ಯಾರನ್ನೂ ಬಾಧಿಸಬೇಕಾಗಿಲ್ಲ. ಅವುಗಳ ಸ್ವಂತ ಶ್ರೇಷ್ಠತೆಯಿಂದ ಅವು ಜೀವಿಸಬಲ್ಲವು.

ಪ್ರಾಚೀನ ಗ್ರಂಥಗಳ ಪಾಡೇ ಇತಿಹಾಸದ ಕೆಲವು ಘಟನೆಗಳ ಮತ್ತು ಯುಗಗಳ ಪಾಡೂ ಆಗಿದೆ. ಉದಾಹರಣೆಗೆ 'ಸುವರ್ಣ ಯುಗ'ವೆಂದೆನಿಸಿಕೊಂಡಿರುವ ಮೂರು-ನಾಲ್ಕನೆಯ ಶತಮಾನಗಳನ್ನು ಗಮನಿಸಬಹುದು. ಆ ಶತಮಾನಗಳಲ್ಲಿ ವರ್ಣಭೇದದಿಂದುಂಟಾಗಿದ್ದ

ಪೀಡೆ ಸಮಾಜವನ್ನು ಬಾಧಿಸುತ್ತಿರಲಿಲ್ಲವೇನು? ಊಳಿಗಮಾನ್ಯ ಪದ್ಧತಿಯ ಪರಂಪರಾಗತವಾದ ನೀತಿಗಳನ್ನು ಆ ಕಾಲದಲ್ಲಿ ಕೈಬಿಡಲಾಗಿತ್ತೆ? ಮನು, ಗೌತಮ, ಆಪಸ್ತಂಬ ಮುಂತಾದ ಧರ್ಮಶಾಸ್ತ್ರಕಾರರು ಕರಾರುವಾಕ್ಕಾಗಿ ಸಮಾಜವನ್ನು ವಿಭಜಿಸಿ ಯಾವ ವರ್ಣದವರಿಗೆ ಯಾವ ಸ್ಥಾನ ನೀಡಬೇಕು ಎಂಬುದನ್ನು ತಮ್ಮ ಗ್ರಂಥಗಳಲ್ಲಿ ನಿರೂಪಿಸುತ್ತಿದ್ದ ಕಾಲ ಅದು. ಸಂಸ್ಕೃತ ನಾಟಕಗಳ ಪೈಕಿ ಸಾಮಾಜಿಕ ಪ್ರಶ್ನೆಯೊಂದನ್ನು ನೇರವಾಗಿ ವಿಮರ್ಶಿಸುವಂತಹ ಉತ್ತಮ ನಾಟಕ 'ಮೃಚ್ಛಕಟಿಕ' ಸುಮಾರು ಈ ಕಾಲಕ್ಕೆ ಸೇರಿದ್ದು. ಅನೇಕ ಪ್ರದೇಶಗಳನ್ನು ಗೆದ್ದುಕೊಂಡ ಒಬ್ಬ ರಾಜ ಮತ್ತು ಅವನ ಆಸ್ಥಾನದಲ್ಲಿದ್ದರೆಂದು ಹೇಳಲಾದ 'ನವರತ್ನ'ಗಳು ಇಡೀ ಸಮಾಜದ ಇತಿಹಾಸವನ್ನು ಸುವರ್ಣಮಯವನ್ನಾಗಿಸುವುದಿಲ್ಲ. ಸಂಸ್ಕೃತಿಯ ಪುನಶ್ಚೇತನ ಈ ಶತಮಾನ ಗಳಲ್ಲಾಯಿತೆಂಬ ಕಾರಣದಿಂದ ಅದನ್ನು ಸುವರ್ಣಯುಗವೆಂದು ಕರೆಯುವುದಾದರೆ ಆ ಕಾಲದ ಬೇರೆ ಕ್ರೂರ ಪದ್ಧತಿಗಳತ್ತ ನಾವು ಕಣ್ಣುಹಾಯಿಸಬೇಕಾಗಿಲ್ಲವೆಂದು ಅರ್ಥವೇ? ಆಗ ಪುನಶ್ಚೇತನಗೊಂಡ ಸಂಸ್ಕೃತಿ ಯಾವುದೋ ಒಂದು ವರ್ಗದ ಸಂಸ್ಕೃತಿಯೇ ಅಥವಾ ಇಡೀ ಸಮಾಜದ ಸಂಸ್ಕೃತಿಯೇ? ಅದು ಸುವರ್ಣಯುಗವಾಗಿ ಪರಿಣಮಿಸಿದ್ದು ಸಮಾಜದ ಕೆಲವು ಶಾಖೆಗಳಿಗೆ ಮಾತ್ರವೋ ಅಥವಾ ಇಡೀ ಸಮಾಜಕ್ಕೋ?

ಈ ಪ್ರಶ್ನೆಗಳನ್ನು ಹಾಕಿಕೊಳ್ಳದೆ ಮುಂದುವರಿಯುವುದು ಇತಿಹಾಸದ ಅಧ್ಯಯನವನ್ನು ನಿರರ್ಥಕಗೊಳಿಸುತ್ತದೆ, ಕುಂಠಿತಗೊಳಿಸುತ್ತದೆ. ಈಗಲೂ ನಾವು ಆ ಶತಮಾನಗಳನ್ನು ಸುವರ್ಣಯುಗವೆಂದು ಬಣ್ಣಿಸುವುದು ನಮ್ಮ ಇಂದಿನ ಸಂಸ್ಕೃತಿಯ ಬಗೆಗಿನ ನಮ್ಮ ನಿಲುವನ್ನು ಸ್ಪಷ್ಟಪಡಿಸುತ್ತದೆಯೆಂದರೆ ತಪ್ಪಾಗಲಾರದು. ಅಂದರೆ, ಒಂದು ವರ್ಗದ ಸಂಸ್ಕೃತಿಯ ಪರವಾದ ಧೋರಣೆ ಆದಾಗುತ್ತದೆ.

ಈಗಲೂ ಸಮಾಜದ ಒಂದು ಭಾಗಕ್ಕೆ ಈ ನಮ್ಮ ಯುಗ ಸುವರ್ಣಮಯವಾಗಿಯೇ ಇದೆ. ಆದರೆ ಅದು ಸಮಾಜದ ಒಂದು ಕನಿಷ್ಠ ಭಾಗ, ಅನಿಷ್ಟ ಭಾಗ. ಇಂದು ನಮ್ಮ ಸಂಸ್ಕೃತಿ ಜೋಪಡಿ ಮತ್ತು ಕ್ಯಾಬರೆಗಳ ಸಂಸ್ಕೃತಿ. ಜೋಪಡಿಗಳನ್ನು ನೋಡಬೇಕಾಗಿಬಂದಾಗ ಕಣ್ಣು ಮುಚ್ಚಿಕೊಂಡರೆ ಸುವರ್ಣಯುಗ ಮತ್ತು ಸುವರ್ಣಪಾತ್ರಗಳನ್ನು ಕಾಣಲು ಈಗಲೂ ಸಾಧ್ಯ. ಆದರೆ ಅದು ಸಮಾಜದ ಸಂಪೂರ್ಣ ಚಿತ್ರವಾಗುವುದಿಲ್ಲ, ಸಮಾಜದ ಪ್ರಕೃತದ ಇತಿಹಾಸದ ಪೂರ್ಣ ಸ್ವರೂಪವನ್ನು ತೋರಿಸುವುದಿಲ್ಲ. ಇಂದಿನ ಸಮಾಜದ ಬಗ್ಗೆ ನಾವು ಯಾವ ದೃಷ್ಟಿಯನ್ನಿಡುತ್ತೇವೋ ಅದು ಇತಿಹಾಸದ ಬಗ್ಗೆ ನಮ್ಮ ಕಲ್ಪನೆಯನ್ನು ಸೂಚಿಸುತ್ತದೆ, ಭವಿಷ್ಯದ ಸಮಾಜ ಹೇಗಿರಬೇಕೆಂಬ ನಮ್ಮ ಅನಿಸಿಕೆಯನ್ನು ಪ್ರತಿಬಿಂಬಿಸುತ್ತದೆ. ಜಾತಿಯ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಸಮಾಜದ ನಿರ್ದಿಷ್ಟವಾದೊಂದು ಸಾಮಾಜಿಕ-ಆರ್ಥಿಕ ಹಿನ್ನೆಲೆಯಲ್ಲಿ ಜಾತಿ ವಿಂಗಡಣೆ ಅಸ್ತಿತ್ವಕ್ಕೆ ಬಂತು ಮತ್ತು ಅದನ್ನು ಇಚ್ಛಾಮಾತ್ರದಿಂದ ಹೊರದೂಡ ಲಾಗುವುದಿಲ್ಲ. ಅದರ ಬದಲಾವಣೆಗೆ ನಿರ್ದಿಷ್ಟವಾದ ಬೇರೊಂದು ಸಾಮಾಜಿಕ-ಆರ್ಥಿಕ ಹಿನ್ನೆಲೆ ಸೃಷ್ಟಿಯಾಗಬೇಕು. ಆದಾದ ಕೆಲಕಾಲದ ಮೇಲೆ ಜಾತಿಯ ಪ್ರಭಾವ ಹಾಗೂ ಜಾತೀಯ ರಾಜಕೀಯ ಇಲ್ಲವಾಗಬಹುದು. ಮೂಲಭೂತವಾದ ಪ್ರಶ್ನೆಗೆ ಹೋಗದೆ ಜಾತೀಯತೆಯನ್ನು ತೆಗಳುವುದರಿಂದ ಅಥವಾ ಅಂತರ್ಜಾತೀಯ ವಿವಾಹದಿಂದ ಜಾತೀಯತೆಯನ್ನು ತೊಲಗಿಸ ಬಹುದು ಎಂಬ ಬಾಲಿಶವಾದ ಪರಿಹಾರಗಳನ್ನು ಸೂಚಿಸುವುದರಿಂದ ಸಮಸ್ಯೆಯನ್ನು ಎದುರಿಸಿದಂತಾಗುವುದಿಲ್ಲ. ಇತಿಹಾಸದ ವೈಜ್ಞಾನಿಕ ಅಧ್ಯಯನದ ಕೆಲಸವೇ ಇದು: ಸಮಾಜದಲ್ಲಿ ಕಾಣಬರುವ ಚಿಂತನೆಗಳು, ಸಂಸ್ಥೆಗಳು, ಘರ್ಷಣೆಗಳು ಇತ್ಯಾದಿಗಳು ಯಾವಾಗ

ಮತ್ತು ಹೇಗೆ ಉಗಮವಾದುವು? ಸಾಮಾಜಿಕ ಉತ್ಪಾದನಾ ಕ್ರಿಯೆಯ ಸ್ವರೂಪ ಆಗ ಹೇಗಿತ್ತು? ಬೆಳವಣಿಗೆಯ ಘಟ್ಟಗಳಲ್ಲಿ ಇವು ಹೇಗೆ ನಡೆದುಕೊಂಡವು? ನಮ್ಮ ಇಂದಿನ ಸಮಾಜದ ವಿಶ್ಲೇಷಣೆಗೆ ಇದರಿಂದ ಯಾವ ಪ್ರಯೋಜನವಿದೆ? ನಮ್ಮ ಭವಿಷ್ಯತ್ತಿನ ಉದ್ದೇಶವನ್ನು ಸಾಧಿಸಲು ಈ ಸಮಾಜದ ಇತಿಹಾಸದ ಅಧ್ಯಯನ ನಮಗೆ ಸಹಾಯಕ ವಾಗುತ್ತದೆಯೇ? ಹಾಗಿದ್ದರೆ ಹೇಗೆ?

ಇತಿಹಾಸದಲ್ಲಿ ಇನ್ನೊಂದು ಘಟನೆಯನ್ನು ನೋಡೋಣ. ಅದರಿಂದ ಚರಿತ್ರಕಾರರ ದೃಷ್ಟಿಕೋನವನ್ನು ಇನ್ನೂ ಸುಲಭವಾಗಿ ಗ್ರಹಿಸಬಹುದು. ಬ್ರಿಟನ್ನಿನ ಪಂಡಿತರು ಭಾರತದ ಚರಿತ್ರೆಯನ್ನು ಬರೆಯುವಾಗ 'ಮೊಗಲ್ ಸಂತತಿಯ ಕಾಲ' ಎಂದು ಒಂದು ವಿಭಾಗವನ್ನು ಪ್ರಸಿದ್ಧಗೊಳಿಸಿದರು. ಆ ಹೆಸರು ಅವೈಜ್ಞಾನಿಕವಾದರೂ ಬಳಕೆಯಲ್ಲಿರುವುದರಿಂದ ನಾವೂ ಅದನ್ನು ಬಳಸಿದರೆ ತಪ್ಪೇನೂ ಇಲ್ಲ. ಈ ಕಾಲವನ್ನು ಕುರಿತು ಇಂದಿನ ಭಾರತೀಯ ಚರಿತ್ರಕಾರ ಯಾವ ಧೋರಣೆಯನ್ನು ತಾಳುತ್ತಾನೆಂಬುದು ಅವನ ಇಂದಿನ ಸಾಮಾಜಿಕ ಮತ್ತು ರಾಜಕೀಯ ನಿಲುವನ್ನು ಬಹುಮಟ್ಟಿಗೆ ಪ್ರತಿಪಾದಿಸುತ್ತದೆ. ಆ ಕಾಲದಲ್ಲೂ ಸಾಮಾಜಿಕ ಉತ್ಪಾದನ ಕ್ರಿಯೆ ಸಾಗುತ್ತಿತ್ತು. ಘರ್ಷಣೆ ಕೇವಲ ಹೊರಗಿನಿಂದ ಬಂದವರ ಮತ್ತು ಒಳಗೆ ಇದ್ದವರ ನಡುವಣ ಘರ್ಷಣೆಯಾಗಿರಲಿಲ್ಲ. ಒಳಗಣ ಘರ್ಷಣೆ ಅನೂಚಾನವಾಗಿ ನಡೆಯುತ್ತಲೇ ಇತ್ತು. ಅದು ಕೇವಲ ಮತೀಯ ತಿಕ್ಕಾಟವೂ ಆಗಿರಲಿಲ್ಲ. ಬ್ರಿಟನ್ನಿನ ವಸಾಹತುಶಾಹಿ ಕಾಲವನ್ನು ಕುರಿತು ಚಿಂತಿಸುವಾಗ ಮತೀಯ ಪ್ರಶ್ನೆ ಇಲ್ಲವೇಕೆ? ಅಷ್ಟೇಕೆ, ಈ 'ಬ್ರಿಟಿಷ್ ಕಾಲ'ದ ಬಗ್ಗೆ ಚರ್ಚಿಸುವಾಗ ಎಷ್ಟು ಮಂದಿ ಚರಿತ್ರಕಾರರು ಸಾಮ್ರಾಜ್ಯಶಾಹಿಯ ಉಗಮ ಮತ್ತು ಕುತಂತ್ರಗಳನ್ನು ಸಮಂಜಸವಾಗಿ ನಿರೂಪಿಸುತ್ತಾರೆ? ಅಲ್ಲೂ ಒಬ್ಬ ಕ್ಲೈವನೋ ಮಿಂಟೋನೋ ಪಿಂಟೋನೋ ಕೆಟ್ಟವನಾಗಿದ್ದುದರಿಂದ ಪ್ರಜಾಪ್ರಭುತ್ವವಾದಿ ಬ್ರಿಟನ್ ಭಾರತದಲ್ಲಿ ಸರಿಯಾಗಿ ನಡೆದುಕೊಳ್ಳಲಿಲ್ಲವೆಂದು ಚಿತ್ರಿಸುವ ಚರಿತ್ರಕಾರರು ಸಹ ನಮ್ಮಲ್ಲಿದ್ದಾರೆ. ತನ್ನ ಉದ್ಯಮಗಳಲ್ಲಿ ತಯಾರಾದ ಸರಕುಗಳಿಗೆ ಮಾರುಕಟ್ಟೆಯ ಅವಶ್ಯಕತೆ ಮತ್ತು ಭಾರತದಲ್ಲಿ ದೊರೆಯುತ್ತಿದ್ದ ಕಚ್ಚಾಸಾಮಗ್ರಿಗಳನ್ನು ತನ್ನದನ್ನಾಗಿಸಿಕೊಳ್ಳುವ ಬ್ರಿಟನ್ನಿನ ತವಕವನ್ನು ಪ್ರಸ್ತಾಪಿಸಿದರೂ ಅದನ್ನು ಪ್ರಯೋಗಿಸಿಕೊಂಡು ಇಂದಿನ ನಮ್ಮ ಸಮಾಜದ ಸಾಮಾಜಿಕ-ಆರ್ಥಿಕ-ರಾಜಕೀಯ ಪರಿಸ್ಥಿತಿಯನ್ನು ನಮ್ಮ ಎಲ್ಲ ಚರಿತ್ರಕಾರರೂ ವಿಶ್ಲೇಷಿಸಿದ್ದಾರೆಯೇ?

ಅದಿರಲಿ, 'ಮೊಗಲರ ಕಾಲ'ಕ್ಕೆ ಮತ್ತೆ ಹಿಂದಿರುಗೋಣ: (ಅದನ್ನು ಕುರಿತು ಅತ್ಯಂತ 'ಅದ್ಭುತವಾದ' ಗ್ರಂಥಗಳನ್ನು ರಚಿಸಿರುವ 'ಮಹಾ ಸಂಶೋಧಕ' ಪಿ. ಎನ್. ಓಕ್‌ರಂತಹ ದೇವಾನಾಂಪ್ರಿಯರನ್ನು ನಾವಿಲ್ಲಿ ಗಣನೆಗೆ ತೆಗೆದುಕೊಳ್ಳುವುದು ಸರಿಯಲ್ಲ; ಏಕೆಂದರೆ, ನಮಗೆ ಈಗ ಇರುವ ವಿಷಯ 'ಇತಿಹಾಸ'ವೇ ಹೊರತು 'ಉಪಹಾಸ'ವಲ್ಲ). ಹತ್ತು-ಹನ್ನೊಂದನೆಯ ಶತಮಾನಗಳಲ್ಲಿ ನಡೆದ ದಾಳಿಗಳ ಪರಿಣಾಮವಾಗಿ ನಮ್ಮ ಪವಿತ್ರ ದೇವಸ್ಥಾನಗಳೂ ಸಹ ಕೊಳ್ಳೆಹೊಡೆಯಲ್ಪಟ್ಟುವು ಎಂಬ ಮಾತು ಎಷ್ಟು ಚರಿತ್ರಕಾರರಿಂದ ಹೇಳಲ್ಪಟ್ಟಿಲ್ಲ? ಹಾಗೆ ಕೊಳ್ಳೆಹೊಡೆದವರ ಪರವಾಗಿ ನಮ್ಮ ಚರಿತ್ರಕಾರರು ವಕಾಲತ್ತು ವಹಿಸಬೇಕೆಂದು ನಮ್ಮ ಸೂಚನೆಯಲ್ಲ. ಆದರೆ ಇಂತಹ ವಿಷಯಗಳಲ್ಲಿ ಅಪೂರ್ಣ ಸತ್ಯವನ್ನಾಡುವುದು ಮಿಥ್ಯೆಯ ಪ್ರಚಾರಕ್ಕೆಡೆಗೊಡುತ್ತದೆ. ಕ್ರಿ.ಶ. ೧೧೦೦ರ ಸುಮಾರಿನಲ್ಲಿ ಕಾಶ್ಮೀರವನ್ನಾಳುತ್ತಿದ್ದ ಶ್ರೀಹರ್ಷ ಎಂಬ 'ಹಿಂದೂ ದೊರೆ' ತನ್ನ ಸಚಿವರಲ್ಲಿ ಒಬ್ಬನನ್ನು 'ದೇವೋತ್ಪಾಟನ ಮಂತ್ರಿ' ಎಂದು ಹೆಸರಿಸಿದ್ದ. ಯುದ್ಧ ಮತ್ತು ಶಾಂತಿಯ ಕಾಲಗಳಲ್ಲಿ ದೇವಸ್ಥಾನಗಳಲ್ಲಿರುತ್ತಿದ್ದ ಸಂಪತ್ತನ್ನು ರಾಜ್ಯದ ಕೋಶಕ್ಕೆ ತುಂಬಿಕೊಳ್ಳುವ ಏರ್ಪಾಟು ಮಾಡುವುದು ಅವನ ಕೆಲಸವಾಗಿತ್ತು.

ದೇವತಾ ವಿಗ್ರಹಗಳನ್ನು ಕರಗಿಸಿ ಚಿನ್ನ, ಬೆಳ್ಳಿ ಮುಂತಾದ ಲೋಹಗಳನ್ನು ಖಜಾನೆಗೆ ತುಂಬುವುದೂ ಅವನ ಕೆಲಸವಾಗಿತ್ತೆಂದು ಕಲ್ಹಣ ತನ್ನ 'ರಾಜತರಂಗಿಣಿ'ಯಲ್ಲಿ ತಿಳಿಸಿದ್ದಾನೆ. ಸಂಪತ್ತನ್ನು ಲೂಟಿ ಮಾಡುವವನಿಗೆ ಮತೀಯ ಭೇದ ಕಾರಣವಾಗಬೇಕಾಗಿಲ್ಲ. ವಿಶ್ವದ ಚರಿತ್ರೆಯ ಪ್ರತಿಯೊಂದು ಘಟ್ಟದಲ್ಲೂ ಇದರ ಸತ್ಯತೆಯನ್ನು ನಾವು ಕಾಣುತ್ತೇವೆ.

ದೇವಸ್ಥಾನಗಳ ಲೂಟಿ ಮಾಡಿದವರಲ್ಲಿ ಕುಪ್ರಸಿದ್ಧನಾದ ಅಲ್ಲಾವುದ್ದೀನ್ ಖಿಲ್ಜಿ ಮೂಲತಃ ಲೂಟಿಕೋರ; ಅವನು ಇಸ್ಲಾಂ ಧರ್ಮದವನಾಗಿದ್ದನೆಂಬುದು ಕೇವಲ ಪ್ರಾಸಂಗಿಕ. ಹಿಂದೂ ಧರ್ಮದವರು ಹೊರಗಿನಿಂದ ಬಂದು ನಮ್ಮ ದೇವಸ್ಥಾಗಳನ್ನು ಲೂಟಿಮಾಡಲು ಸಾಧ್ಯವಿತ್ತೆ? ಹೊರಗಿನಿಂದ ಬಂದ ಅವರು ಹೇಗೂ ಅ-ಹಿಂದೂಗಳೇ ಆಗಿರಬೇಕಿರುತ್ತಿತ್ತು! ಅಲ್ಲದೆ, ಇದೇ ಅಲ್ಲಾವುದ್ದೀನ್ ಖಿಲ್ಜಿಯನ್ನು ಇಸ್ಲಾಂವಿರೋಧಿಯೆಂದು ಆತನ ಸಮಕಾಲೀನನಾಗಿದ್ದ ಜಿಯಾ ಬರಾನಿ ಕಟುವಾಗಿ ಟೀಕಿಸಿದ್ದಾನೆ. ಹೀಗಿರುವಾಗ ಇಸ್ಲಾಂ ಧರ್ಮಕ್ಕೆ ಸೇರಿದ್ದ ರಾಜರುಗಳ ಆಡಳಿತ ವೈಖರಿಯನ್ನು ಚರ್ಚಿಸುವಾಗ ಚರಿತ್ರಕಾರ ಯಾವುದಕ್ಕೆ ಪ್ರಾಧಾನ್ಯ ನೀಡಬೇಕು? ಅಂದಿನ ಸಮಾಜದ ರಚನೆ, ಆಂತರಿಕ ಘರ್ಷಣೆಗಳು, ಹೊರಗಿನವರ ಪ್ರಭಾವ, ಅವರ ವಿರುದ್ಧದ ಹೋರಾಟಗಳು, ಇತ್ಯಾದಿಗಳಿಗೋ ಅಥವಾ ಹೀಗೆ ಭಾಗವಹಿಸುತ್ತಿದ್ದವರ ಮತಗಳಿಗೋ? ನಮ್ಮ ಇಂದಿನ ಮತೀಯ ಸಮಸ್ಯೆಗಳಿಗೆ ಪ್ರತ್ಯುತ್ತರವಾಗಿ ಹಿಂದಿನ ಚರಿತ್ರೆಯನ್ನು ತಿರುಗು ಮುರುಗು ಮಾಡಬೇಕಾಗಿಲ್ಲ. ಆದರ ಬದಲು ಇಂದಿನ ಪರಿಸ್ಥಿತಿಯು ಹೇಗೆ ಉಗಮಗೊಂಡಿತು ಮತ್ತು ಇಂದಿನ ಸಮಸ್ಯೆಗೆ ಪರಿಹಾರವೇನು ಎಂಬುದನ್ನು ಸ್ವತಂತ್ರವಾಗಿ ಕಂಡುಕೊಳ್ಳಬೇಕು. ಈಗಿನ ಪರಿಸ್ಥಿತಿಯನ್ನು ವೈಯಕ್ತಿಕ ದೃಷ್ಟಿಕೋನದಿಂದ ಗಮನಿಸಿ ಅದಕ್ಕೆ ಯಾವುದೋ ಪರಿಹಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಚರಿತ್ರಕಾರ ಹಿಂದಿನ ಇತಿಹಾಸವನ್ನು ಬರೆಯಹೊರಡುವುದು ಅಥವಾ ತಿದ್ದಲುಪಕ್ರಮಿಸುವುದು ನಿಷ್ಠಾವಂತ ವೈಜ್ಞಾನಿಕ ಚರಿತ್ರಕಾರನ ಮಾರ್ಗವಲ್ಲ.

ಆದ್ದರಿಂದಲೇ ಚರಿತ್ರಕಾರನಿಗೆ ಸ್ಫುಟವಾದ ಒಂದು ವೈಜ್ಞಾನಿಕ ಮಾರ್ಗದ ಅವಶ್ಯಕತೆ ಎಂದಿಗಿಂತಲೂ ಈಗ ಹೆಚ್ಚಾಗಿದೆ. ಅಂತಹ ಮಾರ್ಗವೂ ಸಿದ್ಧವಾಗಿದೆ, ಲಭ್ಯವಾಗಿದೆ. ಅದರ ಪರಿಚಯ ಮಾಡಿಕೊಂಡು ತನ್ನ ಸಂಶೋಧನೆಯಲ್ಲಿ ಅದನ್ನು ಉಪಯೋಗಿಸದಿದ್ದರೆ ಅದು ಚರಿತ್ರಕಾರನ ಅಕ್ಷಮ್ಯ ಅಪರಾಧ. ಮುಖ್ಯವಾಗಿ ಮನಸ್ಸಿನಲ್ಲಿಡಬೇಕಾದ್ದಿಷ್ಟು: ಮಾನವ ಕೇವಲ ವ್ಯಕ್ತಿಯಾಗಿ ಜೀವಿಸುವುದಿಲ್ಲ, ಅವನು ಸಮಷ್ಟಿಜೀವಿಯೂ ಆಗಿದ್ದಾನೆ. ಮಾನವಕುಲದ ಇತಿಹಾಸ ಈ ಸಮಷ್ಟಿಜೀವಿಗಳಿಂದ ನಿರ್ಮಿತವಾದ ಇತಿಹಾಸ. ಅವರು ಕೂಡ ತಮ್ಮ ಇಚ್ಛಾನುಸಾರವಾಗಿ ಮನಬಂದಂತೆ ಇತಿಹಾಸ ಸೃಷ್ಟಿಸಲಾರರು; ಅದಕ್ಕೆ ನಿರ್ದಿಷ್ಟವಾದ ಪರಿಮಿತಿಗಳಿವೆ. ಉತ್ಪಾದನಾ ಸಾಮಗ್ರಿಗಳು, ಉತ್ಪಾದನಾ ಸಂಬಂಧ ಇತ್ಯಾದಿಗಳು ಸಮಾಜದ ಪ್ರತಿಯೊಂದು ಘಟ್ಟದಲ್ಲೂ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಸಮಾಜ ರೂಪುಗೊಳ್ಳುವುದರಲ್ಲಿ ಅವುಗಳ ಕಾಣಿಕೆ ಹೇರಳವಾಗಿದೆ. ಇತಿಹಾಸದ ವಿವಿಧ ಘಟ್ಟಗಳಲ್ಲಿ ಈ ಸಾಧನಗಳು ಯಾವುವಾಗಿತ್ತು, ಅವುಗಳನ್ನು ಯಾರು ಹೊಂದಿದ್ದರು, ಅದರ ಪರಿಣಾಮವಾಗಿ ಸಮಾಜದಲ್ಲಿ ಯಾವ ಯಾವ ಭಾಗಗಳು ಎಂತೆಂತಹ ಕ್ರಿಯೆಗಳಲ್ಲಿ ತೊಡಗಿದ್ದವು, ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಏನು? – ಇವನ್ನು ವಿಶ್ಲೇಷಿಸಿದರೆ ಚರಿತ್ರಕಾರ ವೈಜ್ಞಾನಿಕವಾಗಿ ಚರಿತ್ರೆಯನ್ನು ರಚಿಸುವುದರಲ್ಲಿ ಫಲಪ್ರದನಾಗುತ್ತಾನೆ.

*– ಕೆಂಬಾವುಟ : ಆಗಸ್ಟ್ 1979*

# ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಕುರಿತು

ಲಕ್ಷೋಪಲಕ್ಷ ಬೆರಳುಗಳ ಹಸ್ತ
ಅವನ್ನೆಲ್ಲಾ ಮಡಿಚಿದ ಒಂದು ಭದ್ರ ಮುಷ್ಟಿ
ಅದಕ್ಕಿದೆ ಅತ್ಯದ್ಭುತ ಸಾಹಸಶಕ್ತಿ
ಅದುವೇ ನಮ್ಮ ಪಕ್ಷ.

–ವಿ. ಮಯಕೋವ್‌ಸ್ಕಿ

ಜರ್ಮನಿಯ ತತ್ವಜ್ಞಾನಿ ಫಾವರ್‌ಬಾಕ್ ಅವರ ವಿಚಾರಧಾರೆಯನ್ನು ವಿಶ್ಲೇಷಿಸುತ್ತ ೧೮೪೫ರಲ್ಲಿ ಕಾರ್ಲ್ ಮಾರ್ಕ್ಸ್ ''ತತ್ವಜ್ಞಾನಿಗಳು ವಿವಿಧ ರೀತಿಗಳಲ್ಲಿ ಪ್ರಪಂಚವನ್ನು ವಿವರಿಸಿದ್ದಾರೆ; ಆದರೆ ನಿಜವಾಗಿ ಆಗಬೇಕಾಗಿರುವುದು ಪ್ರಪಂಚದ ಬದಲಾವಣೆ'' ಎಂದು ಹೇಳಿದರು. ಬದಲಾವಣೆಗೆ ಬೇಕಾದ ಮೂಲಭೂತ ತಾತ್ವಿಕ ಮತ್ತು ವೈಜ್ಞಾನಿಕ ವಿವರಣೆಯನ್ನು ಮಾರ್ಕ್ಸ್ ಮತ್ತು ಏಂಗಲ್ಸರು ತಮ್ಮ 'ಕಮ್ಯುನಿಸ್ಟ್ ಪಕ್ಷದ ಘೋಷಣಾಪತ್ರ'ದ ಮುಖೇನ ನೀಡಿ ಇಂದಿಗೆ ೧೨೫ ವರ್ಷಗಳು ಸಂದವು. ೧೮೪೮ನೇ ಫೆಬ್ರವರಿಯಲ್ಲಿ ಪ್ರಥಮಬಾರಿಗೆ ಜರ್ಮನ್ ಭಾಷೆಯಲ್ಲಿ ಪ್ರಕಾಶಿತವಾದ ಈ ಘೋಷಣಾಪತ್ರವು ಮಾರ್ಕ್ಸ್‌ವಾದದ ಬ್ರಹ್ಮಸೂತ್ರದಂತಿದೆ. ಅದೇ ವರ್ಷದ ಜೂನ್ ತಿಂಗಳಲ್ಲಿ ಫ್ರೆಂಚ್ ಭಾಷೆಯಲ್ಲೂ ಪೋಲಿಷ್ ಭಾಷೆಯಲ್ಲೂ ಈ ಘೋಷಣಾಪತ್ರ ಪ್ರಕಟವಾಯಿತು. ೧೮೫೦ರಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಾಶಿತವಾಯಿತು. ಜರ್ಮನಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದ 'ಕಮ್ಯುನಿಸ್ಟ್ ಲೀಗ್' ಎಂಬ ಗುಪ್ತ ಸಂಸ್ಥೆಯು ಅಂತರ ರಾಷ್ಟ್ರೀಯ ಸ್ಥಾನಮಾನ ಪಡೆದದ್ದು ಲಂಡನ್ನಿನಲ್ಲಿ. – ೧೮೪೭ರ ನವಂಬರ್‌ನಲ್ಲಿ ನಡೆದ ಆ ಸಂಸ್ಥೆಯ ಎರಡನೆಯ ಮಹಾಧಿವೇಶನದ ಕಾಲದಲ್ಲಿ. ಆ ವೇಳೆಗಾಗಲೇ ಜರ್ಮನಿ ಮತ್ತು ಫ್ರಾನ್ಸ್ ದೇಶಗಳಿಂದ ಮಾರ್ಕ್ಸ್ ಅವರನ್ನು ಹೊರಹಾಕಿದ್ದಾಗಿತ್ತು. ಅವರು ನಡೆಸುತ್ತಿದ್ದ ಪತ್ರಿಕೆಗಳು, ಸಭೆಗಳು, ಕಾರ್ಮಿಕ ವರ್ಗದ ಸಂಘಟನೆ ಮತ್ತು ಚಳುವಳಿಗಳು ಅವರಿಗೆ 'ಅಪಾಯಕಾರಿ ಕ್ರಾಂತಿಕಾರಿ' ಎಂಬ ಬಿರುದನ್ನು ಗಳಿಸಿಕೊಟ್ಟಿದ್ದುವು. ಅಂದಿನ ಪ್ರತಿಗಾಮಿಗಳು ಈ ಕ್ರಾಂತಿಕಾರಿ ಮಹಾನಾಯಕನಿಗೆ 'ಅಪಾಯಕಾರಿ' ಎಂಬ ವಿಶೇಷಣವನ್ನು ನೀಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆ ವೇಳೆಗಾಗಲೇ ಮಾರ್ಕ್ಸ್ ಮತ್ತು ಏಂಗಲ್ಸರ ಪ್ರಥಮ ಭೇಟಿ (ಸೆಪ್ಟೆಂಬರ್ ೧೮೪೪) ಆಗಿತ್ತು. ಇಬ್ಬರೂ ಒಟ್ಟಿಗೆಯೇ 'ಕಮ್ಯುನಿಸ್ಟ್ ಲೀಗ'ನ್ನು ಪ್ರವೇಶಿಸಿದ್ದರು. ಪರಂಪರಾಗತವಾದ ತಾತ್ವಿಕ ಹಿನ್ನೆಲೆಯಲ್ಲಿ ಧೀಮಂತ ಶಕ್ತಿಯನ್ನು ಬೆಳೆಸಿಕೊಂಡಿದ್ದ ಕಾರ್ಲ್ ಮಾರ್ಕ್ಸ್ ಮತ್ತು ಬ್ರಿಟನ್ನಿನ ಕಾರ್ಮಿಕ ವರ್ಗದ ದುಃಸ್ಥಿತಿಯನ್ನು ನೇರವಾಗಿ ಕಂಡು ವಿಶ್ಲೇಷಿಸಿದ್ದ ಫ್ರೆಡರಿಕ್ ಏಂಗಲ್ಸ್ ಸ್ವಾಭಾವಿಕವಾಗಿಯೇ ಪರಸ್ಪರರ ವಿಚಾರಸರಣಿಗಳನ್ನು ಒಗ್ಗೂಡಿಸಿ ಶ್ರಮಿಸಲು ಮುಂದಾದರು. ನವಂಬರ್ ೧೮೪೭ರಲ್ಲಿ ನಡೆದ 'ಕಮ್ಯುನಿಸ್ಟ್ ಲೀಗ್'ನ ಎರಡನೆಯ ಮಹಾಧಿವೇಶನದಲ್ಲಿ ಈ ಇಬ್ಬರಿಗೂ ವಹಿಸಲಾದ ಕಾರ್ಯದ ಫಲವೇ 'ಕಮ್ಯುನಿಸ್ಟ್ ಘೋಷಣಾಪತ್ರ.'

ಏಂಗಲ್ಸರು ೧೮೮೮ರಲ್ಲಿ ಹೇಳಿದಂತೆ ಈ ಘೋಷಣಾಪತ್ರದ ಚರಿತ್ರೆ ಬಹುಮಟ್ಟಿಗೆ ಕಾರ್ಮಿಕ ವರ್ಗದ ಚಳುವಳಿಯ ಇತಿಹಾಸವನ್ನೇ ಪ್ರತಿಬಿಂಬಿಸುತ್ತದೆ. ಇಂದು ಸಮಾಜವಾದಿ

ಸಾಹಿತ್ಯದಲ್ಲಿ ಬಹು ಹೆಚ್ಚಿನ ಅಂತರರಾಷ್ಟ್ರೀಯತೆಯನ್ನು ಮತ್ತು ಹೆಚ್ಚು ಪ್ರಸಾರವನ್ನು ಪಡೆದಿರುವುದು ಈ ಘೋಷಣಾಪತ್ರವೇ. ಸೈಬೀರಿಯಾದಿಂದ ಕ್ಯಾಲಿಫೋರ್ನಿಯಾವರೆಗೆ ಲಕ್ಷಗಟ್ಟಲೆ ಕೆಲಸಗಾರರಿಂದ ಸ್ವೀಕೃತವಾಗಿರುವ ಏಕೈಕ ಪ್ರಣಾಳಿಕೆ ಎಂದರೆ ಈ ಘೋಷಣಾಪತ್ರ. ಒಂದೂಕಾಲು ಶತಮಾನದ ಹಿಂದೆ ಜನತೆಯ ಮುಂದಿಡಲಾದ ಘೋಷಣಾಪತ್ರದ ವೈಜ್ಞಾನಿಕ ಮತ್ತು ಸಾಮಾಜಿಕ ವಿಶ್ಲೇಷಣೆಯ ಪ್ರಭಾವವನ್ನು ಕ್ರಿಯಾಶೀಲ ಮಾರ್ಕ್ಸ್‌ವಾದಿಗಳಲ್ಲಿ ಅಗ್ರ ಗಣ್ಯರಾದ ಲೆನಿನ್ನರು ಈ ರೀತಿ ನಿರ್ದೇಶಿಸಿದ್ದಾರೆ : ಕಾರ್ಮಿಕ ವರ್ಗವು ತನ್ನನ್ನು ತಾನು ತಿಳಿದು ಕೊಳ್ಳಲು ಮತ್ತು ತನ್ನ ವರ್ಗದ ಬಗ್ಗೆ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಮಾರ್ಕ್ಸ್ ಮತ್ತು ಏಂಗಲ್ಸರು ಹೇಳಿಕೊಟ್ಟರಲ್ಲದೆ ಎಲ್ಲ ಪರಿಸ್ಥಿತಿಗಳನ್ನೂ ವೈಜ್ಞಾನಿಕ ದೃಷ್ಟಿಕೋನದಿಂದ ನೋಡಲು ನೆರವಾದರು.

ಈ ಶತಮಾನದ ಖ್ಯಾತ ಭೌತವಿಜ್ಞಾನಿ ಜೆ. ಡಿ. ಬರ್ನಾಲ್ 'ಇತಿಹಾಸದಲ್ಲಿ ವಿಜ್ಞಾನ' ಎಂಬ ತಮ್ಮ ಉದ್ಗ್ರಂಥದಲ್ಲಿ ಹೀಗೆಂದಿದ್ದಾರೆ : ''ಹತ್ತೊಂಬತ್ತನೆಯ ಶತಮಾನದಲ್ಲಿ ಬೇಕಾಗಿದ್ದುದು ಸಮಾಜದ ಬಗೆಗಿನ ಒಂದು ವೈಜ್ಞಾನಿಕ ಕಲ್ಪನೆ. ಕೈಗಾರಿಕಾ ಕ್ರಾಂತಿಯಿಂದುಂಟಾಗಿದ್ದ ತಾಂತ್ರಿಕ ಬೆಳವಣಿಗೆಯು ಹೇಗೆ ಉತ್ಪಾದನೆಯನ್ನು ಸಮಾಜದ ಅವಶ್ಯಕತೆಗಳನ್ನು ಪೂರೈಸಲು ಶಕ್ತಿಯುತವಾಗಿರುವಂತೆ ನಿಯತಗೊಳಿಸಿದ್ದಿತೋ ಅಂತೆಯೇ ಸಮಾಜದ ವಿವಿಧ ಶಕ್ತಿಗಳನ್ನು ನಿಯಂತ್ರಿಸುವ ಒಂದು ವಿಜ್ಞಾನದ ಅವಶ್ಯಕತೆಯಿತ್ತು. ಆ ಅವಶ್ಯಕತೆಯನ್ನು ಉಚ್ಚಮಟ್ಟದಲ್ಲಿ ಪೂರೈಸಿದ ವ್ಯಕ್ತಿಗಳೆಂದರೆ ಮಾರ್ಕ್ಸ್ ಮತ್ತು ಏಂಗಲ್ಸ್.'' ಭಾರತದ ಇತಿಹಾಸದಲ್ಲಿ ಪರ್ವ ಕಾಲವೊಂದನ್ನು ಗುರುತಿಸುವ ೧೮೫೭ರ ಹೋರಾಟವನ್ನು ಇತ್ತೀಚಿನವರೆಗೂ 'ಸಿಪಾಯಿ ದಂಗೆ' ಎಂದು ವಿವರಿಸಲಾಗುತ್ತಿದ್ದಿತೆಂಬುದನ್ನು ಪ್ರತಿಯೊಬ್ಬ ಇತಿಹಾಸದ ವಿದ್ಯಾರ್ಥಿಯೂ ಬಲ್ಲ. ಇದು ವಸಾಹತುಶಾಹಿ ನೀತಿಗೆ ಪೂರಕವಾಗಿ ಇತಿಹಾಸವನ್ನು ಬಳಸುತ್ತಿದ್ದುದರ ಫಲ. ಸಾಮ್ರಾಜ್ಯಶಾಹಿ ನೀತಿಗೆ ಬೆಂಬಲ ದೊರಕುವಂತಹ ಇತಿಹಾಸವನ್ನು ರೂಪಿಸುವ ಪ್ರವೃತ್ತಿ ಇಂದಿಗೂ ಕೊನೆಗೊಂಡಿಲ್ಲವೆಂಬುದು ಸ್ಪಷ್ಟವೇ ಆಗಿದೆ. ಆದರೆ ಸ್ವಾರ್ಥತೆಯ ಲವಲೇಶವೂ ಇಲ್ಲದಿದ್ದ ಕಾರ್ಲ್ ಮಾರ್ಕ್ಸ್ ಆ ಕಾಲದಲ್ಲೇ ತಮ್ಮ ವೈಜ್ಞಾನಿಕ ದೃಷ್ಟಿಯ ಆಧಾರದ ಮೇಲೆ ೧೮೫೭ರ ಹೋರಾಟವನ್ನು 'ಭಾರತದ ಸ್ವಾತಂತ್ರ್ಯ ಸಂಗ್ರಾಮ' ಎಂದು ಬಣ್ಣಿಸಿದರು. ಸಾಮಾಜಿಕ ಬದಲಾವಣೆಗಳನ್ನು ಕುರಿತ ಅಧ್ಯಯನಗಳಿಂದ ಮಾರ್ಕ್ಸ್ ತೃಪ್ತರಾಗಲಿಲ್ಲ; ನೈಜವಾದ ಬದಲಾವಣೆಯೊಂದು ಸಹಸ್ರಾರು ಮಾನವರ ಸಂವೇದನೆಯಿಂದ ಮಾತ್ರ ಸಾಧ್ಯ ಎಂದವರು ಅರಿತಿದ್ದರು. ಸಮಾಜದ ಬದಲಾವಣೆಯನ್ನು ನಿರೂಪಿಸುವ ವಿಜ್ಞಾನವನ್ನು ಜನತೆ ಎಷ್ಟು ಆಳವಾಗಿ ತಿಳಿದಿರುತ್ತದೋ ಆ ಸಮಾಜದ ಬದಲಾವಣೆ ಅಷ್ಟೂ ಪ್ರಭಾವಶಾಲಿ ಯಾಗುತ್ತದೆ ಮತ್ತು ಅಷ್ಟೇ ಮಟ್ಟಿಗೆ ಜನತೆ ತನ್ನನ್ನು ತಾನು ವ್ಯವಸ್ಥೆಗೊಳಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ೧೮೪೮ರ ಕಮ್ಯುನಿಸ್ಟ್ ಘೋಷಣಾಪತ್ರವು ಮಾನವನ ಇತಿಹಾಸವನ್ನು ತಿಳಿಸುವ ಅತ್ಯಂತ ಹಿರಿಮೆಯ ಒಂದು ಪುಟ್ಟಗ್ರಂಥ ಎಂದು ಹೇಳಬಹುದು.

ಮಾರ್ಕ್ಸ್ ಒಂದೆಡೆ ಬರೆಯುತ್ತಾರೆ: ''ನಾನು ನಡೆಸಿದ ಹಲವಾರು ಅಧ್ಯಯನಗಳು ಒಂದಂಶವನ್ನು ಸೂಚಿಸುತ್ತವೆ; ಏನೆಂದರೆ, ಕಾನೂನಿನಿಂದ ನಿರ್ಧರಿಸಲ್ಪಡುವ ವ್ಯವಹಾರ ಗಳನ್ನು ಕೇವಲ ಕಾನೂನು ಅಥವಾ ಪ್ರಭುತ್ವಗಳ ಆದಾರದ ಮೇಲೆ ವಿವರಿಸಲಾಗುವುದಿಲ್ಲ. ಮಾನವನ ಬುದ್ಧಿಯ ಸಾಮಾನ್ಯ ಬೆಳವಣಿಗೆಯ ಆಧಾರದ ಮೇಲೂ ಇದನ್ನು ವಿವರಿಸ ಲಾಗದು. ಮಾನವನ ಸಂಬಂಧಗಳು ಅವನ ಉತ್ಪಾದನಾ ಶಕ್ತಿ ಮತ್ತು ಉತ್ಪಾದನಾ ರೀತಿಗಳನ್ನು ಅವಲಂಬಿಸಿವೆ. ಹೇಗೆಲ್ ಅವರು ೧೮ನೇ ಶತಮಾನದ ಆಂಗ್ಲ ಮತ್ತು ಫ್ರೆಂಚ್ ತತ್ವಜ್ಞಾನಿ ಗಳನ್ನನುಸರಿಸಿ ಯಾವುದನ್ನು 'ನಾಗರಿಕ ಸಮಾಜ' ಎಂದು ಕರೆದರೋ ಅದು ನಿಜಕ್ಕೂ

ರಾಜಕೀಯ ಆರ್ಥಿಕತೆಯನ್ನವಲಂಬಿಸಿದೆ''. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮಾನವನ ಪ್ರಜ್ಞೆಯು ಅವನ ಅಸ್ತಿತ್ವವನ್ನು ರೂಪಿಸಲಾರದು; ಬದಲು ಅವನ ಅಸ್ತಿತ್ವವು ಅವನ ಪ್ರಜ್ಞೆಯನ್ನು ರೂಪಿಸುತ್ತದೆ. ಇಚ್ಛಾಶಕ್ತಿ ಮಾತ್ರದಿಂದಲೇ ವ್ಯಕ್ತಿಯ ಅಥವಾ ಸಮಾಜದ ಸ್ವರೂಪದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರಲಾಗಲೀ, ತಡೆಯ ಲಾಗಲೀ ಸಾಧ್ಯವಿಲ್ಲ. ಮಾನವನ ಹಲವಾರು ಶತಮಾನಗಳ ಚರಿತ್ರೆ ಇದಕ್ಕೆ ಸಾಕ್ಷಿ. ಕಳೆದ ನೂರಾರು ವರ್ಷಗಳಲ್ಲಿ ಉತ್ಪಾದನಾ ಸಾಮಗ್ರಿಗಳು ಬೆಳೆದಂತೆ ಅದಕ್ಕನುಗುಣವಾಗಿ ಸಮಾಜರಚನೆಯಲ್ಲಿ ವ್ಯತ್ಯಾಸಗಳು ಕಂಡುಬಂದಿವೆ. ಇಂದಿನ ಚಾರಿತ್ರಿಕ ಘಟ್ಟದಲ್ಲಿ ಎಂತಹ ಬದಲಾವಣೆಗಳನ್ನು ನಿರೀಕ್ಷಿಸಬಹು ದೆಂಬುದನ್ನು ವೈಜ್ಞಾನಿಕ ವಿಶ್ಲೇಷಣೆಯಿಂದ ಅರಿತು ಕೊಂಡಲ್ಲಿ ಆ ಬುದ್ಧಿಯೂ ಒಂದು ಶಕ್ತಿಯಾಗಿ ಪರಿಣಮಿಸಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು ತೀವ್ರಗತಿಯಲ್ಲಿ ಸಾಗಲು ಸಾಧ್ಯವಾಗುತ್ತದೆ. ಈ ವೈಜ್ಞಾನಿಕ ತತ್ವವೇ ಕಮ್ಯುನಿಸ್ಟ್ ಘೋಷಣಾಪತ್ರದ ಮುಖ್ಯವಾದ ಸಾರ.

ಇಂತಹ ಸಮಗ್ರ ವಿಶ್ವನೋಟದಿಂದ ಹೊಮ್ಮುವ ವಿಚಾರಗಳನ್ನು ಘೋಷಣಾಪತ್ರ ಸಾರಿ ಹೇಳುತ್ತದೆ. ಸತ್ಯಪ್ರಕಾಶವನ್ನೇ ಧ್ಯೇಯವಾಗಿರಿಸಿಕೊಂಡಿದ್ದ ಮಾರ್ಕ್ಸ್ ಮತ್ತು ಏಂಗಲ್ಸರು ಯಾವೊಂದು ಸಂಕೋಚವೂ ಇಲ್ಲದೆ ನಿರ್ಭೀತರಾಗಿ ತಮ್ಮ ವಿಚಾರಗಳನ್ನು ಮಂಡಿಸಿರುವುದು ಈ ಘೋಷಣಾಪತ್ರದ ವೈಶಿಷ್ಟ್ಯ. ಆರ್ಥಿಕ ಮುಗ್ಗಟ್ಟಿನಿಂದಾಗಿ ಮಾರ್ಕ್ಸ್ ಅವರ ವೈಯಕ್ತಿಕ ಕುಟುಂಬ ಜೀವನದಲ್ಲಿ ಭೀಕರವಾದ ಕಷ್ಟ ಪರಿಸ್ಥಿತಿ ಬಂದಿದ್ದಾಗ್ಯೂ ಅವರ ಪತ್ನಿ ಜೆನ್ನಿ ಒಂದು ಪತ್ರದಲ್ಲಿ "ಪ್ರಪಂಚವು ನಿರ್ಭೀತರಾದವರಿಗೆ ಸೇರಿದ್ದು'' ಎಂದು ಹೇಳಿದ್ದನ್ನಿಲ್ಲಿ ಸ್ಮರಿಸಬಹುದು. ಘೋಷಣಾಪತ್ರವನ್ನು ಪ್ರಕಟಿಸುವ ಮುನ್ನ ಏಂಗಲ್ಸರು ಬರೆದಿದ್ದ ಒಂದು ಕಿರುಹೊತ್ತಿಗೆಯಲ್ಲಿನ ಕೆಲವು ವಾಕ್ಯಗಳಿಂದ ಘೋಷಣಾಪತ್ರದ ಮುಖ್ಯ ತತ್ವಗಳನ್ನು ತಿಳಿಯಬಹುದು. "ಕ್ರಾಂತಿಯು ಕೇವಲ ಮೋಜಿಗಾಗಿ ಅಥವಾ ಪೂರ್ವ ಯೋಜನೆ ಇಲ್ಲದೆ ಮಾಡುವ ಕಾರ್ಯವಲ್ಲ. ಕ್ರಾಂತಿ ನಡೆದಿರುವ ಎಲ್ಲ ಕಡೆಗಳಲ್ಲೂ ಮತ್ತು ಯಾವಾಗಲೂ ಅವು ಅಲ್ಲಿಯ ಆಗಿನ ಸಂದರ್ಭಗಳಲ್ಲೇ ಉದ್ಭವಿಸಿದುವು. ಯಾವೊಬ್ಬ ನಾಯಕ ಅಥವಾ ಪಕ್ಷಗಳ ಅಥವಾ ವರ್ಗಗಳ ಕೇವಲ ಇಚ್ಛೆಯಿಂದ ಕ್ರಾಂತಿ ನಡೆದೂ ಇಲ್ಲ, ನಡೆದ ಕ್ರಾಂತಿಗೆ ತಡೆಯೂ ಉಂಟಾಗಿಲ್ಲ. ಎಲ್ಲ ಕ್ರಾಂತಿಕಾರಿ ಕಮ್ಯುನಿಸ್ಟರೂ ಕಾಣುತ್ತಿರುವುದೇನೆಂದರೆ ಕಾರ್ಮಿಕ ವರ್ಗದ ಬೆಳವಣಿಗೆಯನ್ನು ಸಾಮಾನ್ಯವಾಗಿ ಪ್ರತಿಯೊಂದು ನಾಗರಿಕ ರಾಜ್ಯದಲ್ಲೂ ಅನೇಕ ಕ್ರಮಗಳಿಂದ ನಿರ್ಬಂಧಿಸ ಲಾಗುತ್ತಿದೆ. ಹೀಗಾಗಿ ಕ್ರಾಂತಿಯ ವಿರೋಧಿಗಳೇ ಕ್ರಾಂತಿಯನ್ನು ಪ್ರಚೋದಿಸುತ್ತಿದ್ದಾರೆ. ಕಾರ್ಮಿಕವರ್ಗವು ಕ್ರಾಂತಿಯ ಹಾದಿಯನ್ನು ಹಿಡಿದಾಗ ಪ್ರಗತಿಗಾಮಿಗಳು ಆ ವರ್ಗದ ಹಿತವನ್ನು ಕಾರ್ಯರೂಪದಲ್ಲಿ ರಕ್ಷಿಸಲು ಹಿಂಜರಿಯುವುದಿಲ್ಲ.'' ಸಮಾಜದ ಬೆಳವಣಿಗೆಯಲ್ಲಿ ಸಮಾಜವಾದಿ ಹಂತವು ಚಾರಿತ್ರಿಕವಾಗಿ ಅನಿವಾರ್ಯವಾದ ಘಟ್ಟವಾಗಿದೆಯೆಂಬ ಕಮ್ಯುನಿಸ್ಟ್ ಘೋಷಣಾಪತ್ರದ ಮುಖ್ಯ ತತ್ವವನ್ನು ಏಂಗಲ್ಸರು ನಿರೂಪಿಸಿದ್ದಾರೆ. ಬಂಡವಾಳಶಾಹಿಯು ತನ್ನಲ್ಲಿಯ ಆಂತರಿಕ ವಿರೋಧಗಳಿಂದಾಗಿ ಅಂತ್ಯಹೊಂದುವುದನ್ನು ತಪ್ಪಿಸಲಾಗದು. ಮಧ್ಯಯುಗದ ಊಳಿಗಮಾನ್ಯತನವನ್ನು ಕ್ರಾಂತಿಕಾರಿ ಕಾರ್ಯಕ್ರಮದ ಬಂಡವಾಳಶಾಹಿಯು ನಿರ್ಮೂಲನಗೊಳಿಸಿತು. ಅದು ಇನ್ನೂ ನಿರ್ಮೂಲನವಾಗದಿರುವೆಡೆಗಳಲ್ಲಿ ಇನ್ನು ಮುಂದೆ ನಿರ್ಮೂಲಗೊಳಿಸುತ್ತದೆ. ಮತ್ತೊಂದು ಕ್ರಾಂತಿಕಾರಿ ಚಳುವಳಿಯು ಕಾರ್ಮಿಕವರ್ಗದ ನೇತೃತ್ವದಲ್ಲಿ ನಡೆದು ಬಂಡವಳಿಗ ಸಮಾಜವು ಸಮಾಜವಾದಿ ಸಮಾಜವಾಗಿ ಪರಿವರ್ತನಗೊಳ್ಳುತ್ತದೆ. ಈ ಪರಿವರ್ತನವನ್ನು ತಡೆಗಟ್ಟಲಾಗದಿದ್ದರೂ ಪರಿವರ್ತನೆಯನ್ನು ಮುಂದೂಡಲು ಸಾಧ್ಯವಾಗುವಂತೆ ಉತ್ಪಾದನಾ ಸಾಮಗ್ರಿಗಳ ರೂಪದಲ್ಲಿರುವ ಖಾಸಗಿ

ಆಸ್ತಿಯ ರಕ್ಷಣೆಗಾಗಿ ಪ್ರಭುತ್ವದ ವಿವಿಧ ಅಂಗಗಳನ್ನು ಬಂಡವಳಿಗ ಸಮಾಜವು ರೂಪಿಸಿ ಕೊಂಡಿದೆಯಲ್ಲದೆ ಅವುಗಳನ್ನು ಪೂರ್ಣರೂಪದಲ್ಲಿ ಉಪಯೋಗಿಸುತ್ತಿದೆ. ಕಾನೂನು, ವಿದ್ಯಾಭ್ಯಾಸ, ಸಾಂಸ್ಕೃತಿಕ ಶಾಖೆಗಳು, ರಕ್ಷಣಾದಳ – ಇತ್ಯಾದಿಗಳೇ ಈ ಅಂಗಗಳು. ವರ್ಗಗಳ ಆಧಾರದ ಮೇಲೆ ರಚಿತವಾಗಿರುವ ಸಮಾಜದಲ್ಲಿ ವರ್ಗಸಮರವಿಲ್ಲದಿರಲು ಸಾಧ್ಯವೇ ಇಲ್ಲ. ಇದು ಈವರೆಗಿನ ಎಲ್ಲಾ ಸಮಾಜಗಳ ಚರಿತ್ರೆಯೇ ಆಗಿದೆ. ವರ್ಗರಹಿತ ಸಮಾಜದ ರಚನೆಯಿಂದ ಮಾತ್ರ ವರ್ಗಸಮರ ಕೊನೆಗೊಳ್ಳಲು ಸಾಧ್ಯ. ಆದ್ದರಿಂದಲೇ ಖಾಸಗಿ ಆಸ್ತಿಯ ರೂಪದ ಉತ್ಪಾದನಾ ಸಾಮಗ್ರಿಗಳಿಂದಾಗಿ ವ್ಯಕ್ತಿಯಿಂದ ವ್ಯಕ್ತಿಯ ಮತ್ತು ವರ್ಗದಿಂದ ವರ್ಗದ ಶೋಷಣೆ ಅಸಾಧ್ಯವಾಗುವಂತೆ ಮುಂಬರುವ ಸಮಾಜದಲ್ಲಿ ಬದಲಾವಣೆಯಾಗುತ್ತದೆ. ಘೋಷಣಾಪತ್ರವೇ ಹೇಳುವಂತೆ ಖಾಸಗಿ ಆಸ್ತಿಯ ನಿರ್ಮೂಲನವು ಯಾರನ್ನೂ ಗಾಬರಿ ಗೊಳಿಸಬೇಕಾಗಿಲ್ಲ. ಈಗಿನ ಬಂಡವಳಿಗ ಸಮಾಜದಲ್ಲಿ ಶೇಕಡಾ ೯೦ ಮಂದಿಯ ಖಾಸಗಿ ಆಸ್ತಿ ಈಗಾಗಲೇ ನಿರ್ಮೂಲನಗೊಂಡಿದೆ. ಅವರಲ್ಲಿ ಯಾವ ಆಸ್ತಿಯೂ ಇಲ್ಲವೇ ಇಲ್ಲ!! ಕೆಲವರಿಗೆ ಖಾಸಗಿ ಆಸ್ತಿ ಇರುವುದು ಹಲವರಿಗೆ ಅದು ಇಲ್ಲದಿರುವುದರಿಂದ ಮಾತ್ರವೇ ಆಗಿದೆ. ಚರಿತ್ರೆಯಲ್ಲಿ ಅನೇಕ ರೀತಿಯ ಬದಲಾವಣೆ ಕಾಣಸಿಗುವುದೇ ಇನ್ನು ಮುಂದೆಯೂ ಬದಲಾವಣೆ ಯಾಗುತ್ತದೆಂಬುದಕ್ಕೆ ನಿದರ್ಶನ. ಇಂದಿನ ವಿದ್ಯಾಭ್ಯಾಸ ಕ್ರಮ ಕೂಡ ಸಾಮಾಜಿಕ ಸನ್ನಿವೇಶ ಗಳಿಂದ ನಿರ್ಧರಿತವಾಗಿದೆಯಲ್ಲವೇ ? ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸಮಾಜವು ಮಧ್ಯಪ್ರವೇಶ ಮಾಡಿಲ್ಲವೆ ? ಈ ಮಧ್ಯಪ್ರವೇಶದ ಸ್ವರೂಪ ಮತ್ತು ಗುರಿಗಳ ಬದಲಾವಣೆಯನ್ನು ಮಾತ್ರ ನಾವಿನ್ನೂ ಮಾಡಬೇಕಾಗಿದೆಯಷ್ಟೆ. ಈ ಹಿಂದೆ, ಪ್ರತಿಯೊಂದು ಯುಗದಲ್ಲೂ ಪ್ರಧಾನ ವಿಚಾರ ಗಳೆಲ್ಲಾ ಆ ಯುಗದ ಆಡಳಿತ ವರ್ಗಗಳ ವಿಚಾರಗಳೇ ಆಗಿವೆ. ಆದರೂ ಕಾರ್ಮಿಕ ವರ್ಗವು ತನ್ನ ಹೋರಾಟಗಳಿಂದ ವರ್ಗಸಮರವನ್ನು ಅಂತ್ಯಗೊಳಿಸಿ ಸರ್ವತೋಮುಖವಾದ ಪ್ರಗತಿಯನ್ನು ಶೋಷಣಾರಹಿತ ಆಯಕಟ್ಟಿನಲ್ಲಿ ಸಾಧಿಸುವುದನ್ನು ಯಾವ ಶಕ್ತಿಯೂ ತಪ್ಪಿಸಲಾರದು.

ಕಮ್ಯುನಿಸ್ಟ್ ಘೋಷಣಾಪತ್ರದ ಮೂಲ ತತ್ವಗಳನ್ನು ವಿವಿಧ ದಶಕಗಳಲ್ಲಿ ವ್ಯಾವಹಾರಿಕವಾಗಿ ವಿಶ್ವದ ಕಾರ್ಮಿಕ ವರ್ಗವು ಅನುಭವಿಸಿದೆ, ಅನೇಕ ರೀತಿಯ ಹೋರಾಟ ಗಳಿಂದ ತನ್ನ ಮುನ್ನಡೆಯನ್ನು ಸಾಧಿಸಿದೆ. ೧೮೪೮ರ ಆ ಗಂಭೀರವಾದ ಘೋಷಣೆಯು ೧೨೫ ವರ್ಷಗಳ ನಂತರವೂ ಜೀವಂತವಾಗಿದೆ ಎಂಬುದನ್ನು ಇಪ್ಪತ್ತನೆಯ ಶತಮಾನದ ಚಾರಿತ್ರಿಕ ಬೆಳವಣಿಗೆಗಳು ತೋರುತ್ತಿವೆ. ದಕ್ಷಿಣ ಆಫ್ರಿಕಾದ ಗಣಿಗಳಲ್ಲಾಗಲೀ, ಬ್ರೆಜಿಲ್-ಬೊಲಿವಿಯಾಗಳ ವ್ಯವಸಾಯ ಕ್ಷೇತ್ರಗಳಲ್ಲಾಗಲೀ, ವಿಯಟ್ನಾಮಿನ ಅಸಾಮಾನ್ಯ ಹೋರಾಟಗಳಲ್ಲಾಗಲೀ ನಾವು ಕಾಣುವುದು ಕಮ್ಯುನಿಸ್ಟ್ ಘೋಷಣಾಪತ್ರದ ವೈಜ್ಞಾನಿಕ ವಿಶ್ಲೇಷಣೆಯ ಪ್ರಭಾವವನ್ನೇ. ೧೯೭೩ರ ಫೆಬ್ರವರಿ ೧೨ರಂದು ನವದೆಹಲಿಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ಏರ್ಪಡಿಸಿದ್ದ ಅಭಿನಂದನಾ ಸಭೆಯಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ವಿಷ್ಣು ಡೇ ಅವರು ಆಡಿದ ಮಾತುಗಳಿವು : ''೧೯೨೦ರ ಸುಮಾರಿನಲ್ಲಿ ಕಮ್ಯೂನಿಸಂ ಮತ್ತು ರಷ್ಯಾದ ಕ್ರಾಂತಿಗಳ ಬಗೆಗೆ ಹೆಚ್ಚು ಸಾಹಿತ್ಯವೇನೂ ನಮಗೆ ದೊರಕುತ್ತಿರಲಿಲ್ಲ. ಆದರೆ ದೊರಕಿದ ಅಲ್ಪ ಸಾಹಿತ್ಯವು ನಮ್ಮ ಮೇಲೆ ಅಸಾಧಾರಣ ಪ್ರಭಾವವನ್ನು ಬೀರಿ ನಮ್ಮ ವ್ಯಕ್ತಿತ್ವವು ವಿಕಾಸವಾಗುವಂತೆ ಮಾಡಿತು. ಕಮ್ಯುನಿಸ್ಟ್ ಘೋಷಣಾಪತ್ರವನ್ನು ಸರಿಯಾಗಿ ಅರ್ಥಮಾಡಿಕೊಂಡವರು ಯಾರೂ ಪ್ರಗತಿ ಪಥದ ನಾವೀನ್ಯತೆಯನ್ನು ಕಂಡುಕೊಳ್ಳದಿರುವುದಿಲ್ಲ. ವಿಶ್ವದ ಇತಿಹಾಸದಲ್ಲಿ ಆ ಘೋಷಣಾಪತ್ರದ ಸ್ಥಾನ ಅಮೋಘವಾದದ್ದು.''

*– ಕನ್ನಡ ಪ್ರಭ : ಫೆಬ್ರವರಿ 1973*

# ಮಾರ್ಕ್ಸ್‌ವಾದಿ ಅರ್ಥಶಾಸ್ತ್ರ– ಒಂದು ಸರಳ ನಿರೂಪಣೆ

> ಯಾವ ದುಡಿಮೆಯ ವೇಳೆಯಿಂದ ತನ್ನ ದುಡಿಮೆಯ ಶಕ್ತಿಯ ಇಂತಿಷ್ಟು ಮೌಲ್ಯವನ್ನು ದುಡಿಮೆಗಾರನು ಪುನರುತ್ಪಾದಿಸುತ್ತಾನೋ ಅದು ಅವಶ್ಯಕ ದುಡಿಮೆ. ಅದು ಬಂಡವಾಳಶಾಹಿ ಯಡಿಯಲ್ಲಾಗಬಹುದು ಅಥವಾ ಬೇರೆ ಯಾವುದಾದರೂ ಸನ್ನಿವೇಶದಲ್ಲಾಗಬಹುದು. ಅದರಿಂದಾಚೆಗೆ ಪುನರುತ್ಪಾದನೆಯಾಗುವುದನ್ನು ಮಿಗುತಾಯ ಮೌಲ್ಯ ಎನ್ನಬಹುದು; ಅದು ಬಂಡವಾಳಗಾರನಿಗಾಗಿ ಮಿಗುತಾಯ ಮೌಲ್ಯ. ಮಿಗುತಾಯ ಮೌಲ್ಯದಲ್ಲಿ ಮಿಗುತಾಯ ದುಡಿಮೆ ಅಡಕಗೊಂಡಿದೆ. ಅದನ್ನು ಸೆಳೆದುಕೊಳ್ಳುವ ವಿಧಾನಗಳು ಹಲವು. ವಿಧಾನದ ಆಧಾರದ ಮೇಲೆ ವಿವಿಧ ಸಾಮಾಜಿಕ ಸಂರಚನೆಗಳು ಭಿನ್ನಭಿನ್ನವಾಗಿರುತ್ತವೆ.
>
> –ಕಾರ್ಲ್ ಮಾರ್ಕ್ಸ್

ಅರ್ಥಶಾಸ್ತ್ರದ ರಾಜಕೀಯ ನಿರೂಪಣೆಯನ್ನು ಮೊದಲಿಗೆ ಆಡಂ ಸ್ಮಿತ್ ಮತ್ತು ಡೇವಿಡ್ ರಿಕಾರ್ಡೊ ಎಂಬಿಬ್ಬರು ಬ್ರಿಟಿಷ್ ಅರ್ಥಶಾಸ್ತ್ರಜ್ಞರು ನೀಡಿದರು. ಮಾರ್ಕ್ಸ್‌ವಾದಿ ಅರ್ಥಶಾಸ್ತ್ರವು ಈ ತಜ್ಞರ ಚಿಂತನೆಯನ್ನು ಮುಂದುವರಿಸುತ್ತದೆಯಾದರೂ ಅದರಿಂದ ಮೂಲಭೂತವಾಗಿ ಭಿನ್ನವಾಗಿಯೂ ಇದೆ. ಎರಡು ಸಿದ್ಧಾಂತಗಳಿಗೂ ಸಮಾನವಾದ ಒಂದು ಅಂಶ ಇದೆ. ಪ್ರತಿಯೊಂದು ಉತ್ಪಾದಿತ ವಸ್ತು(ಸರಕು)ವಿನಲ್ಲೂ ಸಾಮಾಜಿಕವಾಗಿ ಅಗತ್ಯವಾದ ದುಡಿಮೆಯ ಎಷ್ಟೋ ನಿಗದಿತ ಭಾಗ ಕೂಡಿಕೊಂಡಿರುತ್ತದೆ. ಅಂತಹ ಎಷ್ಟು ದುಡಿಮೆ ಒಂದು ವಸ್ತುವಿನಲ್ಲಿರುತ್ತದೋ ಅದರ ಆಧಾರದ ಮೇಲೆ ಆ ವಸ್ತುವು ಬೇರೊಂದು ವಸ್ತುವಿನೊಡನೆ ವಿನಿಮಯಕ್ಕೆ ಅರ್ಹವಾಗುತ್ತದೆ; ಅಂದರೆ, ಒಂದು ವಸ್ತುವನ್ನು ಕೊಟ್ಟು ಬೇರೊಂದು ವಸ್ತುವನ್ನು ಪಡೆಯಲಾಗುತ್ತದೆ. ಯಾವ ವಸ್ತುವಿನಲ್ಲಿ ಎಷ್ಟು ದುಡಿಮೆಯ ಮೌಲ್ಯವಿದೆ ಯೆಂಬುದು ವಸ್ತುಗಳ ಪರಸ್ಪರ ವಿನಿಮಯಕ್ಕೆ ಆಧಾರವಾಗುತ್ತದೆ. ಇದನ್ನು ಸ್ಮಿತ್-ರಿಕಾರ್ಡೋ ಹಾಗೂ ಮಾರ್ಕ್ಸ್ ಒಪ್ಪುತ್ತಾರೆ. ಆದರೆ ಮಾರ್ಕ್ಸ್ ಇಷ್ಟಕ್ಕೆ ತೃಪ್ತರಾಗುವುದಿಲ್ಲ. ವಿನಿಮಯವು ಯಾವ ಬೆಲೆ ಅಥವಾ ಮಟ್ಟದಲ್ಲಿ ಆಗುತ್ತದೆಯೆಂಬುದು ಮಾರುಕಟ್ಟೆಯಲ್ಲಿ ತಿಳಿಯುತ್ತದೆ. ಆದರೆ ಇದು ಸಮಾಜದ ವ್ಯಕ್ತಿಗಳ ನಡುವಣ ನೈಜ ಸಂಬಂಧಗಳನ್ನು ಆಮೂಲಾಗ್ರವಾಗಿ ತಿಳಿಸಿಕೊಡುವುದಿಲ್ಲ. ಅದನ್ನು ತಿಳಿಯುವುದು ಮಾರುಕಟ್ಟೆಯ ನಡವಳಿಕೆಗಿಂತಲೂ ಹೆಚ್ಚು ಅಗತ್ಯವೆಂದು ಮಾರ್ಕ್ಸ್ ಬಗೆದಿದ್ದರು. ಮಾರುಕಟ್ಟೆಯಲ್ಲಿ ವಸ್ತುಗಳು ವಿನಿಮಯವಾಗುವಾಗ ಅದರ ಹಿನ್ನೆಲೆಯಲ್ಲಿ ಈ ಸಾಮಾಜಿಕ ಸಂಬಂಧಗಳೂ ಇರುತ್ತವೆ. ಬೇರೆಲ್ಲಾ ವಿಷಯಗಳಲ್ಲಿ ಒಳಹೊಕ್ಕು ಆಳವಾದ ವಿಶ್ಲೇಷಣೆಯನ್ನು ಮಾರ್ಕ್ಸ್ ಹೇಗೆ ನಡೆಸುತ್ತಾರೋ ಹಾಗೆಯೇ ಈ ವಿಷಯದಲ್ಲೂ ಮೂಲಭೂತವಾದ ಸತ್ಯವನ್ನರಸುವುದು ಮಾರ್ಕ್ಸ್ ಅವರ ಗುರಿ. ಈ ದೃಷ್ಟಿಯಿಂದ ಅವರ ಹಿಂದಿನ ಅರ್ಥಶಾಸ್ತ್ರಜ್ಞರಿಗಿಂತಲೂ ತೀರಾ ಭಿನ್ನರಾದವರು ಕಾರ್ಲ್ ಮಾರ್ಕ್ಸ್. ಆದ್ದರಿಂದಲೇ ಸಾಮಾಜಿಕ ವಿಜ್ಞಾನಕ್ಕೆ ಮಾರ್ಕ್ಸ್ ಅವರ ಕೊಡುಗೆ ಅಗಾಧವೂ, ನೂತನವೂ, ಶ್ರೇಷ್ಠವೂ ಆಗಿದೆ.

ಸರಕುಗಳೆಂದರೆ ಮಾನವನ ದುಡಿಮೆಯಿಂದ ತಯಾರಾಗಿದ್ದು ಸ್ವಂತ ಅನುಭೋಗ

ಕ್ಕಿಂತಲೂ ಹೆಚ್ಚಾಗಿ ಮಾರಾಟಕ್ಕಾಗಿ ಇರುವ ವಸ್ತುಗಳು ಎಂದರ್ಥ. ಸರಕುಗಳನ್ನು ಮಾರುವುದರಿಂದ ಅವುಗಳ ತಯಾರಕನಿಗೆ ಹಣ ದೊರೆಯುತ್ತದೆ. ಆ ಹಣದಿಂದ ಆತ ಬೇರೆ ಉತ್ಪಾದಿತ ವಸ್ತುಗಳನ್ನು ಕೊಳ್ಳಬಲ್ಲ. ಆ ವಸ್ತುಗಳು ಅವನ ಅಗತ್ಯಗಳನ್ನು ಪೂರೈಸುವಂತಹವು. ಇದು ಹೀಗೇ ಮುಂದುವರಿಯುತ್ತದೆ. ಮಾರ್ಕ್ಸ್ ಅವರು ಈ ಚಕ್ರ ಚಲನೆಯನ್ನು ಸರಕು-ಹಣ-ಸರಕು ಎಂಬ ಸರಣಿಯಿಂದ ಸೂಚಿಸುತ್ತಾರೆ. (ಒಂದು ಚಾಪೆಯನ್ನು ತಯಾರಿಸಿದವನು ಅದನ್ನು ಮಾರಿ ಹಣಗಳಿಸಿ ತನಗೆ ಬೇಕಾದ ಅಕ್ಕಿ ಕೊಳ್ಳಬಹುದು. ಚಾಪೆ ಮತ್ತು ಅಕ್ಕಿ ಎರಡೂ ಸರಕುಗಳು. ಒಂದನ್ನು ಮಾರಿ ಮತ್ತೊಂದನ್ನು ಕೊಳ್ಳುವಾಗ ಮಧ್ಯೆ ಹಣದ ಪ್ರವೇಶವಾಗಿದೆ.) ಮೊದಲ ಮತ್ತು ಕಡೆಯ ಸರಕುಗಳಲ್ಲಿ (ಚಾಪೆ, ಅಕ್ಕಿ) ಒಂದೇ ಮೊತ್ತದ ವಿನಿಮಯ ಮೌಲ್ಯ ಸಮಾನವಾಗಿದೆ. ಆದರೆ ತಯಾರಕನಿಗೆ ಲಭ್ಯವಾಗುವ ಅನುಭೋಗ ಮೌಲ್ಯದಲ್ಲಿ *(use value)* ವ್ಯತ್ಯಾಸವಿದೆ. ವಿನಿಮಯ ಕ್ರಮದಲ್ಲಿ ಉಂಟಾಗುವ ಈ ವ್ಯತ್ಯಾಸವು ಮಾರುಕಟ್ಟೆಯ ವ್ಯವಹಾರಗಳಿಗೆ ಒಂದು ನಿರ್ದಿಷ್ಟ ಸ್ಥಾನವನ್ನು ಕೊಡುತ್ತದೆ. ಯಾವ ಸಮಾಜದಲ್ಲಿ ಉತ್ಪಾದಿತವಾಗುವ ಎಲ್ಲ ವಸ್ತುಗಳೂ ಸರಕು-ಹಣ-ಸರಕು ಎಂಬ ಸೂತ್ರದಂತೆ ವಿನಿಮಯಕ್ಕೆ ಮೀಸಲಾಗಿರುತ್ತವೋ ಅಲ್ಲಿ ವಿವಿಧ ಉತ್ಪಾದಕರು ಪರಸ್ಪರ ಯಾವ ಅವಲಂಬನೆಯೂ ಇಲ್ಲದೆ ಕೆಲಸ ಮಾಡುವಂತಹವರು. ಅವರ ನಡುವೆ ನೇರವಾದ ಯಾವ ಸಂಬಂಧವೂ ಇಲ್ಲ. ಎಲ್ಲರೂ ಮಾರಾಟಕ್ಕಾಗಿ ವಸ್ತುಗಳನ್ನು ತಯಾರಿಸಿ ಮಾರುಕಟ್ಟೆಯನ್ನು ಪ್ರವೇಶಿಸುತ್ತಾರೆ. ಅವರ ನಡುವೆ ಸಂಬಂಧವೇರ್ಪಡುವುದು ಮಾರುಕಟ್ಟೆಯ ಮೂಲಕ ಮಾತ್ರ. ವೈಯಕ್ತಿಕವಾಗಿ ಸಂಬಂಧಗಳು ಸಂಪೂರ್ಣವಾಗಿ ಕಳಚಿಬಿದ್ದು ಕೇವಲ ವಸ್ತುಗಳ ನಡುವೆ ಸಂಬಂಧವೇರ್ಪಟ್ಟಿರುತ್ತದೆ ಎಂದಾದರೂ ಹೇಳಬಹುದು. ವಸ್ತುಗಳ ಮುಖೇನ ವ್ಯಕ್ತಿಗಳ ಸಂಬಂಧ ಇದು ಎಂದಾಯಿತು. ಅಂತಹ ವ್ಯವಸ್ಥೆಯಲ್ಲಿ ಜೀವಿಸುವ ಜನಗಳ ಪಾಲಿಗೆ ಸಮಾಜವೆಂದರೆ ಮಾನವ ನಿರ್ಮಿತವಾದ ಮತ್ತು ಮಾನವ ನಿರ್ದೇಶಕ್ಕೊಳಪಡುವ ಸಂಸ್ಥೆ ಎನಿಸಿಕೊಳ್ಳುವುದಿಲ್ಲ.

ಲುಕಾಕ್ಸ್ ಎಂಬ ದಾರ್ಶನಿಕನು ಹೇಳುವಂತೆ ಅಂತಹ ವ್ಯವಸ್ಥೆಯಲ್ಲಿ ಜೀವಿಸುವ ವ್ಯಕ್ತಿಗಳಿಗೆ ಸಮಾಜವೆಂಬುದು 'ಎರಡನೆಯ ಪ್ರಕೃತಿ'ಯ ರೂಪದಲ್ಲಿ ಅನುಭವಕ್ಕೆ ಬರುತ್ತದೆ. ಪ್ರಕೃತಿಯಲ್ಲಿ ಕೆಲವು ನಿಯಮಗಳಿವೆ. ಅವನ್ನು ಮಾನವ ಬದಲಾಯಿಸಲಾರ, ಆದರೆ ಅವನ್ನು ಅರ್ಥ ಮಾಡಿಕೊಂಡು ತನ್ನ ಜೀವನವನ್ನು ರೂಪಿಸಿಕೊಳ್ಳಬಹುದು ಮಾತ್ರ. ಅಂತೆಯೇ ಸಾಮಾಜಿಕ ಸಂಬಂಧಗಳೂ ಕೂಡ! ಅವು ಮಾನವ ನಿರ್ಮಿತವಲ್ಲ; ಆದ್ದರಿಂದ ಅವುಗಳ ಮೇಲೆ ಮಾನವನ ಹತೋಟಿ ಇಲ್ಲ, ಅವಕ್ಕೆ ದಾಸನಾಗಿ ಜೀವನ ಸವೆಸುವುದು ಅನಿವಾರ್ಯ, ಎಂಬಂತೆ ತೋರುತ್ತದೆ. ಇದಕ್ಕೆಲ್ಲಾ ಮೂಲವೇನು? ಉತ್ಪಾದಿತ ವಸ್ತುಗಳೆಲ್ಲ ಸರಕಿನ ರೂಪದಲ್ಲಿರುವುದು ಮತ್ತು ಅದರಿಂದಾಗಿ ವೈಯಕ್ತಿಕ ಸಂಬಂಧಗಳು ಕಡಿದುಬಿದ್ದಿರುವುದು. ಇದನ್ನೇ ಮಾರ್ಕ್ಸ್ ಅವರು ''ಸರಕುಗಳ ಆರಾಧನೆ'' ಎಂದು ಕರೆಯುವುದು. ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು ಈ ನಿಲುವನ್ನು ಸ್ವೀಕರಿಸದೆ ಸಮಾಜದ ವಿಶ್ಲೇಷಣೆ ಮಾಡಹೊರಡುತ್ತಾರಾದ್ದರಿಂದ ಮಾನವೀಯ ಸಂಬಂಧಗಳು ಅವರ ಪಾಲಿಗೆ ನಿರ್ಜೀವವಾಗುತ್ತವೆ. ಮಾರ್ಕ್ಸ್‌ವಾದಿ ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಭದ್ರಬುನಾದಿ ಇರುವುದು ಇದರಲ್ಲಿ ಮತ್ತು ಎರಡು ಶಾಸ್ತ್ರಗಳೂ ಒಂದರಲ್ಲೊಂದು ಹೆಣೆದುಕೊಂಡಿರುವುದನ್ನೂ ನಾವು ಕಾಣುತ್ತೇವೆ. ಮಾರ್ಕ್ಸ್ ಅವರ ಕಲ್ಪನೆಗಳು ಮಾಪನಕ್ಕೆ ಸಿಲುಕುವುದು ಮಾತ್ರವಲ್ಲ, ಅವು ಜೀವಂತವಾಗಿದ್ದು ಬದಲಾವಣೆ ಹೊಂದುತ್ತಿರುವ ಹಾಗೂ ಚಾರಿತ್ರಿಕವಾಗಿ ಸ್ಪಷ್ಟವಾದ

ಕಲ್ಪನೆಗಳು. ಆ ಕಲ್ಪನೆಗಳೆಲ್ಲ ನಿರ್ದಿಷ್ಟ ಅಥವಾ ವಿರೋಧಸೂಚಕವಾದ ಸಾಮಾಜಿಕ ಸಂಬಂಧಗಳನ್ನು ಎತ್ತಿತ್ತೋರಿಸುತ್ತವೆ. ಆದ್ದರಿಂದ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರವೆಂದರೆ ಖಚಿತವಾದ ಅಥವಾ ಭವಿಷ್ಯ ನುಡಿಯುವ ವಿಜ್ಞಾನವಲ್ಲ, ಅತಿ ಸಂಕೀರ್ಣವಾದ ಸಾಮಾಜಿಕ ಸ್ಥಿತಿಯೊಂದನ್ನು ಅರ್ಥಮಾಡಿಕೊಂಡು ಅದನ್ನು ಮಾರ್ಪಾಟು ಮಾಡಲು ಹೇಗೆ ಸಾಧ್ಯವೆಂಬುದನ್ನು ಸೂಚಿಸುವ ಫಲಕ ಅಷ್ಟೆ.

ಸರಕುಗಳ ಉತ್ಪಾದನೆ ಬಹಳ ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಆದರೆ ಅದಕ್ಕೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸರಕುಗಳ ಉತ್ಪಾದನೆಗೂ ಇರುವ ವ್ಯತ್ಯಾಸವೇನು? ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸ್ವತಃ ದುಡಿಮೆಯು ಒಂದು ಸರಕಿನಂತೆ ಕಾಣಬರುವುದಿಲ್ಲ. ದುಡಿಮೆಯ ಸಾಮರ್ಥ್ಯ ಸರಕಿನ ರೂಪದಲ್ಲಿರುತ್ತದೆ. ಆ ಸಾಮರ್ಥ್ಯವನ್ನು ಕೆಲಸಗಾರರು ಮಾರಿಕೊಳ್ಳುತ್ತಾರೆ, ಬಂಡವಳಿಗರು ಕೊಂಡುಕೊಳ್ಳುತ್ತಾರೆ. ಆದ್ದರಿಂದ ಬಂಡವಳಿಗನ ಮೂಲ ಶಕ್ತಿ ಸರಕಿನ ರೂಪದ್ದಲ್ಲ, ಹಣದ ರೂಪದ್ದು. ಸರಕಿನಿಂದ ಪ್ರಾರಂಭಿಸಿ, ಅದನ್ನು ಮಾರಿ ಬೇರೊಂದು ಸರಕು ಕೊಳ್ಳುವ ಸೂತ್ರಕ್ಕೆ ಭಿನ್ನವಾದ ಮಾದರಿ ಇದು. ಆತ ಪ್ರಾರಂಭಿಸುವುದು ಹಣದಿಂದ. ಆ ಹಣದಿಂದ ಆತ ಉತ್ಪಾದನಾ ಸಾಮಗ್ರಿಗಳನ್ನೂ ದುಡಿಮೆಯ ಸಾಮರ್ಥ್ಯವನ್ನೂ ಕೊಳ್ಳುತ್ತಾನೆ. ಆತನಲ್ಲಿ ಮೊದಲಿಗೆ ಚಾಪೆ ಇಲ್ಲ; ಚಾಪೆ ಮಾಡಲು ಬೇಕಾದ ಸಾಮಗ್ರಿ ಮತ್ತು ಚಾಪೆ ನೇಯಲು ಬರುವ ವ್ಯಕ್ತಿಯ ದುಡಿಮೆಯ ಸಾಮರ್ಥ್ಯವನ್ನು ಅವನು ಕೊಳ್ಳುತ್ತಾನೆ. ಚಾಪೆಯನ್ನು ಮಾಡಿಸಿ ಮಾರಿ ಲಾಭ ಗಳಿಸುತ್ತಾನೆ. ಹೀಗೆ ಕೊಂಡ ಉತ್ಪಾದನಾ ಸಾಮಗ್ರಿಗಳು ಮತ್ತು ದುಡಿಮೆಯ ಸಾಮರ್ಥ್ಯಗಳು ಉತ್ಪಾದನಾ ಕ್ರಿಯೆಯಲ್ಲಿ ಲೀನವಾಗುತ್ತವೆ. ಆದರಿಂದ ಹೊರಬಂದ ಸರಕನ್ನು ಮಾರುಕಟ್ಟೆಯಲ್ಲಿ ಬಂಡವಳಿಗ ಮಾರಾಟ ಮಾಡುತ್ತಾನೆ. ಹೀಗಾಗಿ ಅವನು ಪ್ರಾರಂಭಿಸಿದ್ದು ಹಣದಿಂದ, ಮುಕ್ತಾಯ ಮಾಡಿದ್ದೂ ಹಣದಿಂದ (ಹಣ-ಸರಕು-ಹಣ).

ಸರಕು-ಹಣ-ಸರಕು ಸೂತ್ರದಲ್ಲಿ ಮೊದಲ ಸರಕು ನಂತರದ ಸರಕಿಗೆ ಸಮಾನವೆಂದು ಹಿಂದೆಯೇ ನೋಡಿದ್ದೇವೆ. ಹಣ-ಸರಕು-ಹಣ ಸೂತ್ರದಲ್ಲಿ ಮೊದಲಿನ ಹಣ ಮತ್ತು ನಂತರದ ಹಣ ಸಮಾನವಾಗಿರುತ್ತವೆಯೆ? ಸಮಾನವಾಗಿದ್ದರೆ ಉತ್ಪಾದನಾ ಕ್ರಿಯೆ ಮತ್ತು ಮಾರಾಟಗಳಿಂದ ಯಾವ ಲಾಭವೂ ಬಂದಂತಾಗಲಿಲ್ಲ. ಹಾಗಿದ್ದರೆ ಬಂಡವಳಿಗನಿಗೆ ಯಾವ ಪ್ರಯೋಜನ ಬಂತು? ಮೊದಲಿನ ಹಣಕ್ಕಿಂತ ನಂತರದ ಹಣ ಹೆಚ್ಚಾಗುವಂತೆ ಮಾಡುವುದೇ ಬಂಡವಳಿಗನ ಮರ್ಮ, ಬಂಡವಾಳಶಾಹಿ ವ್ಯವಸ್ಥೆಯ ಮರ್ಮ. ಮೊದಲಿನ ಹಣವನ್ನು 'ಹಣ' ಎನ್ನೋಣ; ನಂತರದ ಹಣವನ್ನು 'ಹಣ1' ಎನ್ನೋಣ. ಇವುಗಳ ವ್ಯತ್ಯಾಸವನ್ನು '∆ ಹಣ' ಎನ್ನೋಣ. ಈಗಿನ ಸಮೀಕರಣ ಹೀಗಿರುತ್ತದೆ : ಹಣ1 - ಹಣ = ∆ ಹಣ. ಒಂದು ವೇಳೆ ಉತ್ಪಾದನಾ ಕ್ರಿಯೆ ಮುಗಿದಿದೆಯೆನ್ನೋಣ; ಈಗ ಉತ್ಪಾದನಾ ಸಾಮಗ್ರಿ, ದುಡಿಮೆ ಸಾಮರ್ಥ್ಯ ಮತ್ತು ಉತ್ಪಾದಿತ ವಸ್ತು ಹೀಗೆ ಮೂರು ಲಬ್ಧವಾಗಿವೆ. ಅವನ್ನೆಲ್ಲಾ ಅವುಗಳ ನಿರ್ಧಾರಿತ ಮೌಲ್ಯಕ್ಕೆ ಮಾರಿದೆವೆನ್ನೋಣ. ಆಗ ∆ ಹಣ ಬರುತ್ತದೆ. ಅದು ಕೇವಲ ಮಿಗಿತಾಯ ಮೌಲ್ಯವೂ ಕೂಡ ಆಗಿರುತ್ತದೆ. ಅದನ್ನೇ ಮಾರ್ಕ್ಸ್ ಅವರು 'ಮಿಗಿತಾಯ ಮೌಲ್ಯ' *(Mehrwert = Surplus Value)* ಎಂದು ಕರೆಯುವುದು. ಈ 'ಮಿಗಿತಾಯ ಮೌಲ್ಯ' ಎಲ್ಲಿಂದ ಬಂತು?

ಇದಕ್ಕೆ ಉತ್ತರವಿರುವುದು ದುಡಿಮೆ ಮತ್ತು ದುಡಿಮೆ ಸಾಮರ್ಥ್ಯಗಳ ನಡುವಣ ವ್ಯತ್ಯಾಸದಲ್ಲಿ. ಮೌಲ್ಯವನ್ನು ಸೃಷ್ಟಿಸುವಂತಹ ಮಾನವನ ಕ್ರಿಯಾತ್ಮಕತೆಯನ್ನು ದುಡಿಮೆ ಯೆನ್ನುತ್ತೇವೆ. ಅಂತಹ ದುಡಿಮೆಯನ್ನು ಮಾಡುವುದು ದುಡಿಮೆಯ ಸಾಮರ್ಥ್ಯ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದನ್ನು ಕೊಳ್ಳುವ ಮತ್ತು ಮಾರುವ ವ್ಯವಸ್ಥೆ ಇದೆ. ಆದ್ದರಿಂದಲೇ ದುಡಿಮೆಯ ಸಾಮರ್ಥ್ಯವೂ ಒಂದು ಸರಕಿನ ರೂಪದಲ್ಲಿರುವುದು. ಈ ಸರಕಿನ ಬೆಲೆಯೇನು ? ಬೇರೆಲ್ಲಾ ಸರಕುಗಳಿಗಿದ್ದಂತೆಯೇ ಇದರಲ್ಲೂ ಒಂದು ಪ್ರಮಾಣವಿದೆ. ಸರಕಿನ ಉತ್ಪಾದನೆಗೆ ಬೇಕಾಗುವ ಸಾಮಾಜಿಕವಾಗಿ ಅಗತ್ಯವಾದ ದುಡಿಮೆಗೆ ತಕ್ಕಂತೆ ಸರಕಿಗೆ ಬೆಲೆಯಿರುತ್ತದೆ. ದುಡಿಮೆಯ ಸಾಮರ್ಥ್ಯವೂ ಒಂದು ಸರಕಾದ್ದರಿಂದ ಅದರ ಬೆಲೆಯೂ ಸಾಮಾಜಿಕವಾಗಿ ಅಗತ್ಯವಾದ ದುಡಿಮೆಯನ್ನಾಧರಿಸಿರುತ್ತದೆ. ಹಾಗೆಂದರೇನು ? ದುಡಿಮೆಗಾರನು ಉತ್ಪಾದನೆಯಲ್ಲಿ ತೊಡಗಲು ಮತ್ತು ತನ್ನಂತಹ ದುಡಿಮೆಗಾರರನ್ನು ಮತ್ತೆ ಸೃಷ್ಟಿಸಲು (ಅಂದರೆ, ಜೀವಂತವಾಗಿದ್ದು ಸಂಸಾರ ನಡೆಸಲು) ಯಾವ ಪ್ರಮಾಣದಲ್ಲಿ ಬೆಲೆ ನೀಡಬೇಕೋ, ಅದೇ ದುಡಿಮೆಯ ಸಾಮರ್ಥ್ಯಕ್ಕೆ ದಕ್ಕುವ ಬೆಲೆ. ತನ್ನ ಮತ್ತು ತನ್ನ ಸಂಸಾರದ ಇತರರ ಜೀವನೋಪಾಯಕ್ಕೆ ತಗಲುವಷ್ಟು ವೆಚ್ಚವೇ ದುಡಿಮೆಗಾರನ ಬೆಲೆ. ಅವನು ತನ್ನ ದುಡಿಮೆಯಿಂದ ಎಷ್ಟೋ ಬೆಲೆಬಾಳುವ ಸರಕನ್ನು ಉತ್ಪಾದಿಸಿದರೂ ಆತನ ಬೆಲೆ ಮಾತ್ರ ಆ ಸರಕಿನ ಬೆಲೆಗೆ ಸಮನಾಗಿ ಹೆಚ್ಚುವುದಿಲ್ಲ; (ಅದು ಕಡಿಮೆಯಾಗಲಾರದೆಂದೇನೂ ಇಲ್ಲ).

ಒಂದು ಉದಾಹರಣೆ ತೆಗೆದುಕೊಳ್ಳೋಣ : ತನ್ನ ಅವಶ್ಯಕತೆಗಳನ್ನು ಯಾವುದೋ ಒಂದು ಮಟ್ಟದಲ್ಲಿ ಪೂರೈಸಿಕೊಳ್ಳಲು ಒಬ್ಬ ವ್ಯಕ್ತಿ ಐದು ಘಂಟೆಗಳ ಕಾಲ ದುಡಿಯಬೇಕಾಗಿದೆ ಎಂದಿಟ್ಟುಕೊಳ್ಳೋಣ. ತನ್ನ ದುಡಿಮೆ ಸಾಮರ್ಥ್ಯವನ್ನು ಆತ ಮಾರಿಕೊಳ್ಳುವಾಗ ಬಂಡವಳಿಗನು ಕೇವಲ ಐದು ಗಂಟೆಗಳ ದುಡಿಮೆ ಸಾಮರ್ಥ್ಯವನ್ನು ಮಾತ್ರವೇ ಕೊಳ್ಳುವುದಿಲ್ಲ; ಇಡೀ ದಿನಕ್ಕೆ ದುಡಿಮೆಗಾರನ ಸಾಮರ್ಥ್ಯವನ್ನವನು ಕೊಳ್ಳುತ್ತಾನೆ. ಒಟ್ಟು ದಿನದಲ್ಲಿ ಅವನು ಉತ್ಪಾದಿಸುವ ಮೌಲ್ಯವು ತನ್ನ ಅವಶ್ಯಕತೆಗಳನ್ನು ಪೂರೈಸಲು ಎಷ್ಟು ಬೇಕೋ ಅದಕ್ಕಿಂತಲೂ ಹೆಚ್ಚಾಗಿಯೇ ಇರುತ್ತದೆ. ತನ್ನಲ್ಲಿ ಉತ್ಪಾದನಾ ಸಾಮಗ್ರಿಗಳಿಲ್ಲದಿರುವುದರಿಂದ ಕೇವಲ ಐದು ಘಂಟೆಗಳ ಸಾಮರ್ಥ್ಯವನ್ನು ಮಾತ್ರ ದುಡಿಮೆಗಾರ ಮಾರಿಕೊಳ್ಳುವುದು ಸಾಧ್ಯವಿಲ್ಲ. ಆ ಸಂದರ್ಭದಲ್ಲಿ ತಾನು ಸ್ವತಃ ಉತ್ಪಾದಕನಾಗಿ, ಉತ್ಪಾದಿತ ಸರಕಿನ ಮಾಲೀಕನಾಗಿ ಅದರ ಪೂರ್ಣ ಮೌಲ್ಯವನ್ನು ತಾನೇ ಅನುಭೋಗಿಸುವುದೂ ಸಾಧ್ಯವಾಗದು. ಆದ್ದರಿಂದ ದುಡಿಮೆಗಾರ ದಿನಕ್ಕೆ ಹತ್ತು ಗಂಟೆಗಳ ಕಾಲ ಕೆಲಸ ಮಾಡಿದರೆ ಅದರಲ್ಲಿ ಐದು ಘಂಟೆಗಳ ಉತ್ಪಾದನೆಯ ಬೆಲೆ ಅವನಿಗೆ ದೊರಕಿ ಇನ್ನುಳಿದ ಐದು ಘಂಟೆಗಳ ಚಾಕರಿ ಬಂಡವಳಿಗನಿಗೆ ಮುಫತ್ತಾಗಿ ಕೊಟ್ಟಂತಾಗುತ್ತದೆ. ಐದು ಘಂಟೆಗಳಲ್ಲಿ ಅವನು ಉತ್ಪಾದಿಸಿದ ಮೌಲ್ಯವು ಅವನಿಗೆ ಕೂಲಿಯ ರೂಪದಲ್ಲಿ ವಾಪಸ್ಸಾಗುತ್ತದೆ; ಇನ್ನುಳಿದ ಐದು ಗಂಟೆಗಳ ದುಡಿಮೆ ಸಾಮರ್ಥ್ಯ ದಿಂದ ತಯಾರಾದ ಮೌಲ್ಯವು ಬಂಡವಳಿಗನಿಗೆ ದೊರೆಯುವ ಮಿಗಿತಾಯ ಮೌಲ್ಯ. ಅವನಿಗೆ ಅದು ದೊರೆಯಲು ಇರುವ ಒಂದೇ ಕಾರಣವೆಂದರೆ ಉತ್ಪಾದನಾ ಸಾಮಗ್ರಿಗಳ ಮೇಲೆ ಅವನಿಗಿರುವ ಒಡೆತನ.

ಹೀಗೆ ದುಡಿಮೆಗಾರನ ದುಡಿಮೆಯು ಎರಡು ವಿಧವಾಗಿದೆ ಎಂದಾಯಿತು. ಮಾರ್ಕ್ಸ್ ಅವರು ಒಂದನ್ನು ಅವಶ್ಯಕ ದುಡಿಮೆಯೆಂದೂ ಮತ್ತೊಂದನ್ನು ಅಧಿಕ ದುಡಿಮೆಯೆಂದೂ ಕರೆಯುತ್ತಾರೆ. ದುಡಿಮೆಯ ಸಾಮರ್ಥ್ಯವನ್ನು ಮಾರಿಕೊಳ್ಳದಿದ್ದರೆ ಹೊಟ್ಟೆಗಿಲ್ಲದ ಪರಿಸ್ಥಿತಿ ಬಂದೊದಗುವಂತಿಲ್ಲದಿದ್ದರೆ ದುಡಿಮೆಗಾರನ ಅಧಿಕ ದುಡಿಮೆಯ ಮೌಲ್ಯ ಬಂಡವಳಿಗನಿಗೆ ದೊರೆಯುವುದಿಲ್ಲ! ಆದರೆ ಬಂಡವಾಳಶಾಹಿ ವ್ಯವಸ್ಥೆಯ ವ್ಯೂಹರಚನೆಯೇ ದುಡಿಮೆಗಾರನನ್ನು ಅಂತಹ ಪೇಚಿಗೆ ಸಿಲುಕಿಸುತ್ತದೆ. ಹಾಗಾದರೆ ದುಡಿಮೆಗಾರನು ಉತ್ಪಾದನಾ ಸಾಮಗ್ರಿಗಳನ್ನು ತನ್ನದನ್ನಾಗಿ ಮಾಡಿಕೊಂಡು ಏಕೆ ಸ್ವತಂತ್ರನಾಗಬಾರದು ? ಈ

ಪ್ರಶ್ನೆಗೆ ಅಷ್ಟು ಸುಲಭವಾದ ಉತ್ತರವಿಲ್ಲ. ಬಂಡವಾಳಶಾಹಿ ವ್ಯವಸ್ಥೆಯೆಂದರೆ ಕೇವಲ ಉತ್ಪಾದನಾ ಸಾಮಗ್ರಿಗಳ ಒಡೆತನ ಮಾತ್ರವಲ್ಲ; ಆ ಒಡೆತನವನ್ನು ರಕ್ಷಿಸಿಕೊಳ್ಳಲು ಮತ್ತು ಉಪಯೋಗಿಸಲು ಬೇಕಾದ ಇತರ ಉಪಕರಣಗಳೂ ವ್ಯವಸ್ಥೆಯ ಅಂಗವಾಗಿರುತ್ತವೆ. ಇದಕ್ಕೆ ಕಾನೂನಿನ ವ್ಯವಸ್ಥೆ ಎಂದು ಹೆಸರು. ಅದರ ಜೊತೆಗೇ ಪ್ರಭುತ್ವದ ಶಕ್ತಿಯೂ ಕೂಡಿ ಕೊಂಡಿರುತ್ತದೆ. ಉತ್ಪಾದನಾ ಸಾಮಗ್ರಿಗಳ ಮೇಲಿನ ಒಡೆತನವನ್ನು ಸುಭದ್ರವಾಗಿರಿಸುವುದು ಕಾನೂನಿನ ಕರ್ತವ್ಯವಾದರೆ ಅಂತಹ ಕಾನೂನನ್ನು ರಚಿಸಿ ಅದನ್ನು ಪೋಷಿಸುವುದು ಪ್ರಭುತ್ವದ ಧ್ಯೇಯ. ಇವೆರಡರ ಕೋಟೆಯಲ್ಲಿ ಕುಳಿತ ಬಂಡವಳಿಗನಿಗೆ ತನ್ನ ಆಸ್ತಿಯನ್ನು ಕಳೆದುಕೊಳ್ಳುವ ಭೀತಿ ಕಡಿಮೆ. ಕೆಲಸಗಾರರು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ತನ್ನ ಆರ್ಥಿಕ ಶಕ್ತಿಯನ್ನು ಹರಣ ಮಾಡಲಾಗದಂತಹ ಸುವ್ಯವಸ್ಥೆ ಇದೆಯೆಂಬುದೇ ಅವನಿಗೆ ಸಂತೃಪ್ತಿ.

ಈವರೆಗಿನ ಚರ್ಚೆಯು ಒಂದಂಶವನ್ನು ಹೊರಗೆಡಹಿದೆ. 'ಬಂಡವಾಳ' ಎಂದರೆ ಕೇವಲ ಹಣ ಎಂದರ್ಥವಲ್ಲ; ಕೇವಲ ಉತ್ಪಾದನಾ ಸಾಮಗ್ರಿಗಳು ಎಂದೂ ಅಲ್ಲ. ಬಂಡವಾಳವೆಂದ ಕೂಡಲೆ ಒಂದು ನಿರ್ದಿಷ್ಟವಾದ ಸಾಮಾಜಿಕ ಸಂಬಂಧವೆಂಬ ಕಲ್ಪನೆ ಮೂಡುತ್ತದೆ. ಎಂತಹ ಸಾಮಾಜಿಕ ಸಂಬಂಧ ? ಸಮಾಜವನ್ನು ವರ್ಗಗಳನ್ನಾಗಿ ಒಡೆದು ಬೇರ್ಪಡಿಸಿ ಬಂಡವಳಿಗ ವರ್ಗಕ್ಕೆ ದುಡಿಯುವ ವರ್ಗವನ್ನು ದಾಸರನ್ನಾಗಿಸುವ ಸಂಬಂಧ. ಆಸ್ತಿಯನ್ನು ಹೊಂದಿರ ದಂತಹ ದುಡಿಯುವ ವರ್ಗವನ್ನು ಸೃಷ್ಟಿಸುವುದೊಂದು ಕಡೆ ಮತ್ತು ಬಂಡವಾಳಶಾಹಿ ವರ್ಗಾಡಳಿತಕ್ಕೆ ಬೇಕಾದ ಸಲಕರಣೆಗಳನ್ನು ಸೃಷ್ಟಿಸುವುದು ಇನ್ನೊಂದು ಕಡೆ. ಇದು ಬಂಡವಾಳಶಾಹಿ ವ್ಯವಸ್ಥೆಗೆ ಮುನ್ನ ಇದ್ದ ವ್ಯವಸ್ಥೆಯ ಫಲಶ್ರುತಿ.

ಹಣ-ಸರಕು-ಹಣ1 ಎಂಬ ರೀತಿಯಲ್ಲಿ ಚಲಿಸುವ ಆರ್ಥಿಕ ಯಂತ್ರ ವರ್ಷಕ್ಕೊಮ್ಮೆ ಒಂದು ಚಲನೆಯನ್ನು ಮುಗಿಸುತ್ತದೆಯೆಂದಿಟ್ಟುಕೊಳ್ಳೋಣ. ಮುಂದಿನ ವರ್ಷದ ಪ್ರಾರಂಭದಲ್ಲಿ ಬಂಡವಳಿಗನಲ್ಲಿ ಹಿಂದಿನ ವರ್ಷದ ಪ್ರಾರಂಭ ಕಾಲದಲ್ಲಿದ್ದುದಕ್ಕಿಂತಲೂ ಹೆಚ್ಚಿನ ಹಣ ಇರುತ್ತದೆ. ಅದರಿಂದ ಅವನೇನು ಮಾಡುತ್ತಾನೆ ? ಮಾರ್ಕ್ಸ್ ಅವರ ಪ್ರಕಾರ ಮೂಲತಃ ಅವನು ತನ್ನ ಬಂಡವಾಳವನ್ನು ಹೆಚ್ಚಿಸುತ್ತಾನೆ ಅಥವಾ ಕೂಡಿಹಾಕಿಕೊಳ್ಳುತ್ತಾನೆ. ಅದರ ಮುಂದಿನ ವರ್ಷ ಇನ್ನೂ ಹೆಚ್ಚು ಹಣ ಕೂಡಿಕೊಳ್ಳುತ್ತದೆ; ಹೀಗೆ ಅವಿರತವಾಗಿ ಹಣ ಹೆಚ್ಚುತ್ತಲೇ ಹೋಗುತ್ತದೆ. ಇದಕ್ಕೆ ಇನ್ನೂ ಎರಡು ಪೂರಕವಾದ ಕಾರಣಗಳಿವೆ. ಮೊದಲನೆಯದಾಗಿ ಬಂಡವಳಿಗನ ಸ್ಥಾನಮಾನ ಮತ್ತು ಶಕ್ತಿಯು ತನ್ನ ಬಂಡವಾಳದ ಆಧಿಕ್ಯ ವನ್ನವಲಂಬಿಸಿದೆ; ಎರಡನೆಯದಾಗಿ ತನ್ನಂತೆ ಇತರ ಬಂಡವಳಿಗರೂ ಕ್ರಿಯಾಶೀಲರಾಗಿರುತ್ತಾ ರಾದ್ದರಿಂದ ಅವರ ಕೈಯಲ್ಲಿ ಸೋಲನ್ನನುಭವಿಸದೆ ಮುಂದುವರಿಯಬೇಕಾದರೆ ಅವರಿಗಿಂತ ಹೆಚ್ಚಿನ ಹಣ ಕೂಡಿಹಾಕಿಕೊಳ್ಳುತ್ತಲೇ ಇರಬೇಕು. ಇಲ್ಲವೆಂದರೆ ಬೇರೆಯವರು ಅವನನ್ನು ಮಾರುಕಟ್ಟೆಯಿಂದ ಹೊರದೂಡುತ್ತಾರೆ! ಆದ್ದರಿಂದ ಒಬ್ಬ ಬಂಡವಳಿಗನಿಗೆ ಸದಾಕಾಲವೂ ಇರುವುದೊಂದೇ ಮಂತ್ರ. ಮಾರ್ಕ್ಸ್ ಹೇಳುವಂತೆ ಆ ಮಂತ್ರ : ''ಕೂಡಿ ಹಾಕು, ಇನ್ನೂ ಕೂಡಿ ಹಾಕು; ಅದೇ ವೇದ, ಅದೇ ಪುರಾಣ !'' ಒಟ್ಟು ಬಂಡವಾಳಶಾಹಿಗೆ ಅನ್ವಯ ಮಾಡಿದರೆ ಅದರರ್ಥ ಅದು ಯಾವಾಗಲೂ ಹೆಚ್ಚುತ್ತಿರಬೇಕು, ಬೆಳೆಯುತ್ತಿರಬೇಕು, ಎಂದು. ಅದು ಪಲ್ಲಟವಾಗುವವರೆಗೂ ಹೀಗೇ ಬೆಳೆಯುತಿರಬೇಕು; ಬೆಳೆಯುತ್ತಾ ತನ್ನ ಸುತ್ತಣ ಪರಿಸರಕ್ಕೆ ವಿರೋಧವಾಗಿ ಕಡೆಗೆ ತನ್ನನ್ನೇ ಅದು ಆಹುತಿ ಕೊಟ್ಟುಕೊಳ್ಳುತ್ತದೆ.

ಈಗಾಗಲೇ ನಿರೂಪಿಸಿರುವಂತೆ ಯಾವೊಂದು ಸರಕಿನ ಮೌಲ್ಯವನ್ನೂ ಮೂರು ಭಾಗಗಳಾಗಿ ನೋಡಬಹುದು. ಉತ್ಪಾದನೆಗಾಗಿ ಉಪಯೋಗಿಸಲ್ಪಟ್ಟಿರುವ ಉಪಕರಣಗಳ

ಮೌಲ್ಯ (ಅಥವಾ ಮಾರ್ಕ್ಸ್ ಕರೆಯುವಂತೆ ಸ್ಥಿರ ಬಂಡವಾಳ = C), ಅವಶ್ಯಕವಾದ ದುಡಿಮೆಯಿಂದ ಉತ್ಪಾದಿತವಾದ ಮೌಲ್ಯ (ಅಥವಾ ಮಾರ್ಕ್ಸ್ ಕರೆದಿರುವಂತೆ ಅಸ್ಥಿರ ಬಂಡವಾಳ = V) ಮತ್ತು ಅಧಿಕ ದುಡಿಮೆಯಿಂದ ಉತ್ಪಾದಿತವಾದ ಮಿಗಿತಾಯ ಮೌಲ್ಯ (ಮಾರ್ಕ್ಸ್ ಹೇಳುವ ಮಿಗಿತಾಯ ಮೌಲ್ಯ = S). ಒಟ್ಟು ಮೌಲ್ಯವು ಸ್ಥಿರ, ಅಸ್ಥಿರ, ಮತ್ತು ಮಿಗಿತಾಯ ಮೌಲ್ಯಗಳ ಮೊತ್ತ (V=C+V+S). ಮೌಲ್ಯಗಳ ಈ ಅಂಶಗಳನ್ನೊಳಗೊಂಡ ಮೂರು ಪ್ರಮಾಣಗಳು ಮಾರ್ಕ್ಸ್ ಅವರ ಆರ್ಥಿಕ ವಿಶ್ಲೇಷಣೆಯಲ್ಲಿ ಸಾರಭೂತವಾಗಿವೆ. ಮಿಗಿತಾಯ ಮೌಲ್ಯದ ಪ್ರಮಾಣ (S/V), ಲಾಭದ ಪ್ರಮಾಣ [S/(C+V)], ಮತ್ತು ಬಂಡವಾಳದ ರಚನೆ (C/V). ಮಿಗಿತಾಯ ಮೌಲ್ಯವನ್ನು $S^1$, ಲಾಭವನ್ನು P, ಮತ್ತು ಬಂಡವಾಳ ರಚನೆಯನ್ನು O ಎಂದು ಕರೆದರೆ ಅವುಗಳಿಗಿರುವ ಪರಸ್ಪರ ಸಂಬಂಧವನ್ನು ಈ ಸಮೀಕರಣ ತೋರಿಸುತ್ತದೆ : $P=S^1/(1+0)$. ಇದರ ಅರ್ಥವಿಷ್ಟೆ: ಲಾಭದ ಪ್ರಮಾಣವು ಮಿಗಿತಾಯ ಮೌಲ್ಯದ ಪ್ರಮಾಣವು ಹೆಚ್ಚಿದಂತೆ ಹೆಚ್ಚುತ್ತದೆ ಮತ್ತು ಬಂಡವಾಳ ರಚನೆಯು ಹೆಚ್ಚಿದಂತೆ ಕಡಿಮೆಯಾಗುತ್ತದೆ. ಹಿಂದಿನ ಚರಿತ್ರೆ ಮತ್ತು ಇಂದಿನ ಬಂಡವಾಳಶಾಹಿ ವ್ಯವಸ್ಥೆಯ ಪಥಕ್ಕೆ ಸಂಬಂಧಿಸಿದ ಮಾರ್ಕ್ಸ್ ಅವರ ಬಹುತೇಕ ವಿಶ್ಲೇಷಣೆಗಳು ಈ ಸೂತ್ರವನ್ನಾಧರಿಸಿವೆ. ಕ್ರಮೇಣ ಬಂಡವಾಳ ರಚನೆಯಲ್ಲಿ ಹೆಚ್ಚುವರಿ ಕಾಣುವ ಸಾಧ್ಯತೆಯನ್ನು ಮಾರ್ಕ್ಸ್ ಗ್ರಹಿಸಿದ್ದರು; ಅದು ಎಷ್ಟರ ಮಟ್ಟಿಗೆ ಹೆಚ್ಚುತ್ತದೆಂದರೆ ಮಿಗಿತಾಯ ಮೌಲ್ಯದ ಪ್ರಮಾಣವು ಹೆಚ್ಚುವುದಕ್ಕಿಂತಲೂ ಹೆಚ್ಚು ಜಾಗ್ರತೆಯಾಗಿ ಹೆಚ್ಚುತ್ತದೆ. ತತ್ಫಲವಾಗಿ ಲಾಭದ ಪ್ರಮಾಣದಲ್ಲಿ ಇಳುವರಿಯುಂಟಾಗುತ್ತದೆ. ಇದನ್ನು ''ಲಾಭದ ಪ್ರಮಾಣದಲ್ಲಿ ಕ್ರಮೇಣ ಕಂಡುಬರುವ ಕುಸಿತದ ನಿಯಮ'' ಎಂದು ಕರೆಯಬಹುದು. ಮಾರ್ಕ್ಸ್ ಅವರ ಅನುಯಾಯಿಗಳಲ್ಲಿ ಇದರ ಬಗ್ಗೆ ವಿಪುಲವಾದ ಚರ್ಚೆ ಮತ್ತು ವಾದಗಳು ನಡೆದಿವೆ.

'ಬಂಡವಾಳ' ಎಂಬ ಹೆಸರಿನ ಉದ್ಗ್ರಂಥವು ಮಾರ್ಕ್ಸ್ ಅವರ ಆರ್ಥಿಕ ವಿಶ್ಲೇಷಣೆಗಳನ್ನೊಳಗೊಂಡ ಪ್ರಖ್ಯಾತ ಗ್ರಂಥ. ಅದನ್ನು ರಚಿಸಿ ಗ್ರಂಥದ ಮೊದಲನೆಯ ಸಂಪುಟವನ್ನು ಪ್ರಕಟಣೆಗೆ ಸ್ವತಃ ಮಾರ್ಕ್ಸ್ ಅವರೇ ಸಿದ್ಧಪಡಿಸಿದ್ದು. ಗ್ರಂಥದ ಈ ಪ್ರಥಮ ಸಂಪುಟದ ಅರ್ಧ ಭಾಗಕ್ಕೂ ಹೆಚ್ಚು, ಮಿಗುತಾಯ ಮೌಲ್ಯದ ತತ್ವವನ್ನು ಕುರಿತ ಚರ್ಚೆಗೆ ಮೀಸಲಾಗಿದೆ. ಮಿಗುತಾಯ ಮೌಲ್ಯದ ಪ್ರಮಾಣ ಮತ್ತು ಬಂಡವಾಳಶಾಹಿಯ ಚರಿತ್ರೆಯಲ್ಲಿ ಆ ಪ್ರಮಾಣದ ಬದಲಾವಣೆಗಳು ಮಾರ್ಕ್ಸ್ ಅವರಿಗೆ ಪ್ರಮುಖ ವಿಷಯಗಳು. ಇದು ಸಮಂಜಸವಾಗಿರುವುದೇಕೆಂದರೆ ಮಿಗುತಾಯ ಮೌಲ್ಯದ ಪ್ರಮಾಣವು ಬಂಡವಾಳಶಾಹಿಯಡಿಯಲ್ಲಿ ವರ್ಗಹೋರಾಟಕ್ಕೆ ಮೂಲಭೂತವಾದ ಆಡಿಪಾಯವಾಗಿದೆ, ಮತ್ತು ಮಾರ್ಕ್ಸ್ ಅವರ ಸಕಲ ಸೈದ್ಧಾಂತಿಕ ಮತ್ತು ಚಾರಿತ್ರಿಕ ಗ್ರಂಥಗಳಲ್ಲೂ ವರ್ಗಹೋರಾಟವು ಪ್ರಮುಖ ವಿಷಯವಾಗಿದೆ.

ಮಿಗುತಾಯ ಮೌಲ್ಯದ ಪ್ರಮಾಣವನ್ನು ಹೆಚ್ಚಿಸಲು ಎರಡು ಮಾರ್ಗಗಳುಂಟು. ದುಡಿಮೆಯ ಕಾಲಾವಧಿಯನ್ನು ಅವಶ್ಯಕ ಮತ್ತು ಅಧಿಕ ದುಡಿಮೆಯನ್ನಾಗಿ ಬೇರ್ಪಡಿಸುವಾಗ ಉಂಟಾಗುವ ಅನುಪಾತದಲ್ಲಿ ವ್ಯತ್ಯಾಸ ಮಾಡುವುದು. (ಅಂದರೆ, ಒಬ್ಬ ಕೂಲಿಯಾಳು ಖಾಸಗಿ ಮಾಲೀಕನ ಕಾರ್ಖಾನೆಯಲ್ಲಿ ಹತ್ತು ಗಂಟೆ ದುಡಿದರೆ ಐದು ಗಂಟೆಗಳ ಅವಶ್ಯಕ ದುಡಿಮೆ ಇದೆ ಎನ್ನೋಣ. ಐದು ಗಂಟೆಗಳ ದುಡಿಮೆಗೆ ತಕ್ಕ ಕೂಲಿ ಕೊಡುವ ಬದಲು ನಾಲ್ಕು ಗಂಟೆಗಳ ಕೂಲಿ ಮಾತ್ರ ನೀಡಿದರೆ ಕೂಲಿಯಾಳಿನ ಅವಶ್ಯಕ ದುಡಿಮೆಯ ಕಾಲ ನಾಲ್ಕು ಗಂಟೆಗಳಾಯಿತು. ಕೂಲಿಯಾಳಿನ ಜೀವನ ಮಟ್ಟ ಕೆಳಗಿಳಿಯುತ್ತದೆಯಾದರೂ ಮಿಗಿತಾಯ ಮೌಲ್ಯದ ಪ್ರಮಾಣ ಬಂಡವಳಿಗನಿಗೆ ಹೆಚ್ಚಿದಂತಾಗುತ್ತದೆ). ಇದರಲ್ಲಿ ಮೊದಲನೆಯ

ಮಾರ್ಗ (ದುಡಿಮೆಯ ಕಾಲಾವಧಿಯ ಏರಿಕೆ) ನೇರವಾಗಿ ವರ್ಗಹೋರಾಟವನ್ನು ತೀವ್ರಗೊಳಿಸುತ್ತದೆ. ಏಕೆಂದರೆ ಬಂಡವಾಳಶಾಹಿಯ ಇತಿಹಾಸದುದ್ದಕ್ಕೂ ದುಡಿಮೆಯ ಕಾಲಾವಧಿಯನ್ನು ಎಷ್ಟು ಸಾಧ್ಯವೋ ಅಷ್ಟು ಏರಿಸಲು ಬಂಡವಳಿಗರು ಯತ್ನಿಸಿದ್ದಾರೆ ಮತ್ತು ಅದನ್ನೆಷ್ಟು ಕಡಿಮೆ ಮಾಡಲು ಸಾಧ್ಯವೋ ಅಷ್ಟೂ ಮಾಡಲು ದುಡಿಮೆಗಾರರು ಹೋರಾಡಿದ್ದಾರೆ. ಹೀಗೆ ಮಾಡದೆ ತಮ್ಮದೆನ್ನಬಹುದಾದ ಕಾಲವನ್ನು ಹೆಚ್ಚಿಸಿಕೊಳ್ಳಲು ದುಡಿಮೆಗಾರರಿಗೆ ಅನ್ಯಮಾರ್ಗವಿಲ್ಲ. ಎರಡನೆಯ ಮಾರ್ಗ (ಅವಶ್ಯಕ ಮತ್ತು ಅಧಿಕ ದುಡಿಮೆಯ ಕಾಲಾವಧಿಗಳ ಅನುಪಾತದ ಮಾರ್ಪಾಟು) ಸ್ವಲ್ಪ ಕಠಿಣವಾದದ್ದು ಹಾಗೂ ಜಟಿಲವಾದದ್ದು. ಅದರಲ್ಲೂ ವರ್ಗಹೋರಾಟದ ಪ್ರಶ್ನೆ ಅಡಕವಾಗಿಯೇ ಇದೆ. ಏಕೆಂದರೆ ದುಡಿಮೆಗಾರರು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳಲು ಯಾವಾಗಲೂ ಮುಂದಾಗಿಯೇ ಇದ್ದಾರೆ ಮತ್ತು ದುಡಿಮೆಯ ಸಾಮರ್ಥ್ಯದ ಬೆಲೆಯನ್ನು ಹೆಚ್ಚಿಸಿಕೊಳ್ಳಲು ಅವರಿಗಿರುವ ಸಾಧನವೇ ಇದು. ಈ ಸಂಬಂಧದಲ್ಲಿ ಬಂಡವಳಿಗರು ಸಾಕಷ್ಟು ಪ್ರಧಾನ ಪಾತ್ರವನ್ನು ವಹಿಸಿದ್ದಾರೆನ್ನಬಹುದು. ದುಡಿಮೆಯ ಪ್ರಕ್ರಿಯೆಯನ್ನು ಪುನಸ್ಸಂಘಟನೆಯ ಮೂಲಕ ಆಗಾಗ್ಗೆ ಬದಲಾಯಿಸುತ್ತಾ ಮತ್ತು ದುಡಿಮೆಯ ಫಲವನ್ನು ಹೆಚ್ಚಿಸುವ ಸಲುವಾಗಿ ಆಗಿಂದಾಗ್ಗೆ ಹೊಸ ಹೊಸ ತಾಂತ್ರಿಕ ಜ್ಞಾನವನ್ನು ಬಳಸುತ್ತಾ ದುಡಿಯುವವನು ತನ್ನ ಅವಶ್ಯಕತೆಯನ್ನು ಪೂರೈಸಲು ಉಪಯೋಗಿಸಬೇಕಾದ ಕಾಲವನ್ನು ಕ್ರಮೇಣ ಕಡಿಮೆ ಮಾಡುವಲ್ಲಿ ಬಂಡವಳಿಗರು ಸಫಲರಾಗಿದ್ದಾರೆ. ಈ ಮುನ್ನಡೆದ ತಾಂತ್ರಿಕಜ್ಞಾನದ ಬಳಕೆಯಿಂದಾಗಿ ಬಂಡವಳಿಗರಿಗೆ ಲಭಿಸುವ ಮಿಗಿತಾಯ ಮೌಲ್ಯದ ಮೊತ್ತವೂ ಜಾಸ್ತಿಯಾಗುತ್ತಾ ಬಂದಿದೆ. ಹೀಗೆ ಬೆಳೆಯುತ್ತಾ ಬಂದಿರುವ ಉತ್ಪಾದನಾ ವಿಧಾನಗಳನ್ನು ಮಾರ್ಕ್ಸ್ ಅವರು ಕೂಲಂಕಷವಾಗಿ ವಿಮರ್ಶೆ ಮಾಡಿದ್ದಾರೆ. ಮೊದಲಿಗೆ ದುಡಿಮೆಯ ವಿಧಾನವು 'ತಯಾರಿಕೆ'ಯಲ್ಲಿ ಸರ್ವೇಸಾಮಾನ್ಯವಾದ ಸಹಕಾರದ ರೂಪದಲ್ಲಿತ್ತು; (ಇಲ್ಲಿ ದುಡಿಮೆಯ ವಿಭಜನೆಯು ಸವಿಸ್ತಾರವಾದುದು). ನಂತರ ಬದಲಾಗುತ್ತಾ ಇಂದು 'ಆಧುನಿಕ ಔದ್ಯೋಗೀಕರಣ'ದಲ್ಲಿ ಮುಕ್ತಾಯವಾಗಿದೆ. (ಇದರಲ್ಲಿ ದುಡಿಮೆಗಾರರು ಯಂತ್ರಗಳ ಭಾಗವೊಂದರಂತಾಗುತ್ತಾರೆ; ಆ ದುಡಿಮೆಗಾರರೆಂಬ ಯಂತ್ರದ ಭಾಗಗಳನ್ನು ಯಂತ್ರದ ನವೀಕರಣದಿಂದ ಕಡಿಮೆ ಮಾಡಬಹುದು ಅಥವಾ ಇನ್ನೂ ಮುಂದೆ ಹೋಗಿ ತೆಗೆದುಹಾಕಬಹುದು). ಇವೆಲ್ಲದರಿಂದಲೂ ಬಂಡವಳಿಗನ ಮಿಗಿತಾಯ ಮೌಲ್ಯ ಹೆಚ್ಚುತ್ತದೆ. ಆದರೆ ದುಡಿಮೆಗಾರನ ಸ್ಥಾನದಲ್ಲಿ ಮಾತ್ರ ಯಾವ ಬದಲಾವಣೆಯೂ ಅಷ್ಟಾಗಿ ಆಗುವುದಿಲ್ಲ.

ಇಲ್ಲಿಯವರೆಗೆ ಮೌಲ್ಯ ಮತ್ತು ಮಿಗುತಾಯ ಮೌಲ್ಯಗಳ ಉತ್ಪಾದನೆಯನ್ನೇ ಕುರಿತು ಚರ್ಚೆ ನಡೆಸಿದ್ದಾಗಿದೆ. ಬಂಡವಾಳಗಾರನಿಗೆ ಅಷ್ಟೇ ಪ್ರಮುಖವಾದ ಅಂಶವೆಂದರೆ ಉತ್ಪಾದಿತ ಮೌಲ್ಯವನ್ನು ಹಣದ ರೂಪಕ್ಕೆ ಮಾರ್ಪಡಿಸುವುದು. ಇದನ್ನು ಮಾರ್ಕ್ಸ್ ಅವರು ''ಹಣವಾಗಿ ಪರಿವರ್ತನೆ ಮಾಡುವ ಸಮಸ್ಯೆ'' ಎಂದು ಕರೆದಿದ್ದಾರೆ. ಯೋಜನಾರಹಿತವಾದ, ಅರ್ಥಾತ್ ಅವ್ಯವಸ್ಥೆಯಿಂದ ತುಂಬಿರುವ, ಬಂಡವಾಳಶಾಹಿಯಲ್ಲಿ ಉತ್ಪಾದನೆಗೆ ಹೆಚ್ಚು ಕಮ್ಮಿ ಸರಿತೂಗುವಷ್ಟಾದರೂ ಬೇಡಿಕೆ ಇದ್ದೇ ತಿರುತ್ತದೆಂಬ ಖಾತ್ರಿ ಏನೂ ಇಲ್ಲ. ಸ್ವಲ್ಪ ಲೆಕ್ಕಾಚಾರದಲ್ಲಿ ತಪ್ಪಾದರೂ ಸರಿಯೆ, ಅವರ ಸಮತೋಲನದಲ್ಲಿ ವ್ಯತ್ಯಾಸ ಬರುತ್ತದೆ. ಸಮತೋಲನದಲ್ಲಿ ಬರಬಹುದಾದ ವ್ಯತ್ಯಾಸಗಳನ್ನು ಮಾರ್ಕ್ಸ್ ಸೂಕ್ಷ್ಮವಾಗಿ ಮಾತ್ರ ಚರ್ಚಿಸಿದ್ದಾರೆ. ಇದರಲ್ಲಿ ಎದ್ದುಕಾಣುವ ಅಂಶವೆಂದರೆ ಸಮಾಜದ ಉತ್ಪಾದನಾಶಕ್ತಿಯಲ್ಲಿ ತೋರಿಬರುವ ಹೆಚ್ಚುವಿಕೆ. ಬಂಡವಾಳವು ಹೆಚ್ಚು ಹೆಚ್ಚು ಶೇಖರಣೆಯಾದಂತೆ ಉತ್ಪಾದನೆಯೂ ಹೆಚ್ಚುತ್ತದೆ. ಆದರೆ ಅದೇ

ಸಮಾಜದಲ್ಲಿ ಈ ಹೆಚ್ಚುವರಿಗೆ ಸಮಾನವಾದ ಅನುಭೋಗ ಅಥವಾ ಬಳಕೆ ಕಾಣಬರುವುದಿಲ್ಲ ಹಾಗೂ ಸಾಧ್ಯವಾಗುವುದಿಲ್ಲ. ಬಳಕೆಯಲ್ಲಿ ಹೆಚ್ಚುವರಿ ಬಾರದಿರಲು ಕಾರಣವೇನು? ದುಡಿಯುವವರಿಗೆ ನೀಡಲಾಗುವ ಕೂಲಿಯು ಸ್ಥಗಿತವಾಗಬಹುದು. ಹೀಗಾಗಿ ಉತ್ಪಾದಿತ ವಸ್ತುವಿಗೆ ಅವರಿಂದ ಹೆಚ್ಚಿನ ಬೇಡಿಕೆ ಬರಲಾರದು. ಮಾತ್ರವಲ್ಲ, ಬಂಡವಳಿಗನ ಆಸ್ಥೆಯು ಕೂಡಿಹಾಕಿಕೊಳ್ಳುವುದರಲ್ಲಿರುವಷ್ಟು ಅನುಭೋಗಿಸುವುದರಲ್ಲಿರುವುದಿಲ್ಲ. ಆದ್ದರಿಂದ ಆ ವರ್ಗದಿಂದ ಬರುವ ಬೇಡಿಕೆಯೂ ಮಹತ್ವದ್ದಾಗಲಾರದು. ಮಾರ್ಕ್ಸ್ ಅವರ ಈ ವಿಶ್ಲೇಷಣೆಯು 'ಅತಿ ಶೇಖರಣೆ' ಮತ್ತು / ಅಥವಾ 'ಕಡಿಮೆ ಅನುಭೋಗ' ಎಂಬ ಎರಡು ರೀತಿಗಳಲ್ಲಿ ವರ್ಣಿಸಲಾಗಿದೆ. ಕೆಲವು ಮಾರ್ಕ್ಸ್‌ವಾದಿ ಚಿಂತಕರು ಈ ತರ್ಕವನ್ನೊಪ್ಪಿದರೆ ಇನ್ನು ಕೆಲವರು ಅದನ್ನು ನಿರಾಕರಿಸುತ್ತಾರೆ. ಈ ತರ್ಕವನ್ನೊಪ್ಪಲಿ ಬಿಡಲಿ ಒಂದು ಸತ್ಯವನ್ನಂತೂ ಕಡೆಗಣಿಸಲಾಗದು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ವಿರೋಧಗಳು ಕಡೆಗೆ ಆ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತವೆ ಮತ್ತು ಅದರ ಸ್ಥಾನದಲ್ಲಿ ಇನ್ನೂ ಹೆಚ್ಚು ತಾರ್ಕಿಕವೂ ಮಾನವೀಯವೂ ಆದ ಬೇರೊಂದು ಸಾಮಾಜಿಕ ಪದ್ಧತಿಯ ಆವಿರ್ಭಾವ ವಾಗುತ್ತದೆ. ಇದನ್ನು ಎಲ್ಲ ಮಾರ್ಕ್ಸ್‌ವಾದಿಗಳೂ ಒಪ್ಪಿಯೇ ತೀರುತ್ತಾರೆ. ಬಂಡವಾಳಶಾಹಿಯ ಪರಸ್ಪರ ವಿರೋಧಗಳ ಅಂತ್ಯವಾಗಿ ಅದರ ಬದಲು ಉತ್ಪಾದನೆ ಮತ್ತು ಗಳಿಕೆ-ಬಳಕೆಗಳ ಸಮತೆಯುಂಟಾಗಲು ಆ ಸಂದರ್ಭದಲ್ಲಿ ಮಾತ್ರ ಸಾಧ್ಯ.

*– ಕೆಂಬಾವುಟ : ಏಪ್ರಿಲ್ 1977*

# ಖಾಸಗಿ ಆಸ್ತಿ: ಒಂದು ಅಮಾನವೀಯ ಪರಿಕಲ್ಪನೆ

> ಮೊದಲಿಗೆ ಯಾವನೋ ಒಬ್ಬ ಒಂದಷ್ಟು ಜಮೀನಿಗೆ ಬೇಲಿ ಹಾಕಿ ಆಲೋಚನೆ ಮಾಡಿದ, 'ಇದು ನನ್ನದು' ಎಂದು ಘೋಷಿಸುತ್ತೇನೆ, ಎಂದು. ಜನ ಅಮಾಯಕರು. ಅವರು ಅವನನ್ನು ನಂಬಿದರು. ಅವನೇ ನಾಗರಿಕ ಸಮಾಜದ ಆದ್ಯ ಪ್ರವರ್ತಕ. ಯಾವನಾದರೊಬ್ಬ ಆ ಸಂದರ್ಭದಲ್ಲಿ ಬೇಲಿಯನ್ನು ಕಿತ್ತೊಗೆದಿದ್ದರೆ ಅಥವಾ ಬೇಲಿಗೆಂದು ತೋಡಿದ್ದ ಗುಂಡಿಗಳನ್ನು ತುಂಬಿದ್ದರೆ ಎಷ್ಟು ಚೆನ್ನಿರುತ್ತಿತ್ತು! ಅವನು ತನ್ನ ಸಹಜೀವಿಗಳಿಗೆ ಕೂಗಿ ಹೇಳಬಹುದಿತ್ತು: ''ಈ ಮೋಸಗಾರನಿಂದ ಎಚ್ಚರವಾಗಿರಿ. ಈ ಇಡೀ ಭೂಮಿಯ ಫಲ ನಮ್ಮೆಲ್ಲರಿಗೂ ಸೇರಿದ್ದೆಂಬುದನ್ನು ನೀವು ಮರೆತಿರಾದರೆ ನಿಮ್ಮ ಜೀವನ ಹಾಳಾದೀತು. ಭೂಮಿ ಯಾರೊಬ್ಬನಿಗೂ ಸೇರಿದ್ದಲ್ಲ, ಅದು ನಮ್ಮೆಲ್ಲರದು.'' ಹಾಗವನು ಹೇಳಿದ್ದರೆ ಅದೆಷ್ಟು ಭಯಾನಕ ಅಪರಾಧಗಳನ್ನು, ಯುದ್ಧಗಳನ್ನು, ಹತ್ಯೆಗಳನ್ನು ಹಾಗೂ ಎಂತೆಂತಹ ಭೀಕರ ಘಟನೆಗಳನ್ನು ಮತ್ತು ಅನ್ಯಾಯಗಳನ್ನು ತಡೆಯಬಹುದಿತ್ತು! ಮಾನವ ಜನಾಂಗಕ್ಕೆ ಅದೆಷ್ಟು ಹಿತವಿರುತ್ತಿತ್ತು!
>
> –ಜಾನ್ ಜಾಕ್ ರೂಸೋ

ಖಾಸಗಿ ಆಸ್ತಿಯ ಮೇಲಿನ ಸ್ವಾಮ್ಯವು ಚಾರಿತ್ರಿಕವಾಗಿ ಬೆಳೆದುಬಂದಿದೆ. ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಊಳಿಗಮಾನ್ಯತ್ವವು ಒಡೆದು ಹೊಸ ಮಧ್ಯಮ ವರ್ಗವು ಅಸ್ತಿತ್ವಕ್ಕೆ ಬಂತು. ಯೂರೋಪಿನ ಹಲವಾರು ದೇಶಗಳಲ್ಲಿ ಖಾಸಗಿ ಆಸ್ತಿಯು ಹುಟ್ಟಿಕೊಂಡ ಬಗೆ, ಅವರ ಆಸ್ತಿಯ ಸ್ವಾಮ್ಯಕ್ಕೂ-ಸಮಾಜಕ್ಕೂ ಮತ್ತು ಈ ಸ್ವಾಮ್ಯಕ್ಕೂ ಸರ್ಕಾರಕ್ಕೂ ಇರುವ ಸಂಬಂಧಗಳನ್ನು ಕುರಿತು ಕೆಲವು ತತ್ವಜ್ಞಾನಿಗಳು ತಮ್ಮದೇ ಆದ ವಿಶಿಷ್ಟ ರೀತಿಗಳಲ್ಲಿ ತರ್ಕ ನಡೆಸಿದ್ದುಂಟು, ತಮ್ಮ ಸ್ವಂತವಾದ ಕೆಲವು ಅಭಿಪ್ರಾಯಗಳನ್ನು ಪ್ರತಿಪಾದಿಸಿದ್ದುಂಟು. ಹದಿನೇಳನೇ ಶತಮಾನದ ಇಂತಹ ತತ್ವಜ್ಞಾನಿಗಳಲ್ಲಿ ಗ್ರೋಶಿಯಸ್, ಹಾಬ್ಸ್, ಪ್ಯೂಫೆನ್ಡಾರ್ಫ್ ಮತ್ತು ಲಾಕ್ ಇವರುಗಳೇ ಪ್ರಮುಖರು. ನಿರಂಕುಶ ದೊರೆತನವನ್ನು ಮಾನ್ಯಮಾಡುವ ಗ್ರೋಶಿಯಸ್ ಖಾಸಗಿ ಆಸ್ತಿಯ ಜನ್ಮದ ಸಿದ್ಧಾಂತವನ್ನು ಪ್ರತಿಪಾದಿಸುವಾಗ ಪೂರ್ವಭಾವಿಯಾಗಿ ತಮ್ಮ ಅಧೀನಕ್ಕೆ ಒಳಪಡಿಸಿಕೊಂಡಿದ್ದ ಆಸ್ತಿಯ ಮೇಲೆ ತಮ್ಮ ಹಕ್ಕುಗಳನ್ನು ಸ್ಥಾಪಿಸಿಕೊಳ್ಳುವ ಮೂಲಕ ಪ್ರಥಮತಃ ಜನರು ಖಾಸಗಿ ಸ್ವಾಮ್ಯದ ಹಕ್ಕನ್ನು ಘೋಷಿಸಿ ಕೊಂಡರೆಂದು ವಿವರಣೆ ನೀಡಿದ್ದಾನೆ. ಖಾಸಗಿ ಹಕ್ಕುದಾರಿಕೆ ಬೆಳೆಯಲು ಸ್ವಾಭಾವಿಕವಾಗಿ ಇದ್ದುದು ಇದೊಂದೇ ಮಾರ್ಗ.

ಆದರೆ ಇದನ್ನು ಪೂರ್ಣವಾಗಿ ಒಪ್ಪದ ಜಾನ್ ಲಾಕ್ ಸ್ವಾಮ್ಯವು ಆಕ್ರಮಣದಿಂದಲ್ಲದೆ, ಸ್ವಂತ ದುಡಿಮೆಯಿಂದ ಬೆಳೆಯಿತೆಂದು ತರ್ಕಿಸುತ್ತಾನೆ. ಹಾಬ್ಸ್‌ನಂತೆ ಹಾಲೆಂಡಿನಲ್ಲಿ ಕೆಲಕಾಲ ಕಳೆದ ಈ ತತ್ವಜ್ಞಾನಿಯು ವ್ಯಕ್ತಿಗಳು ಆಸ್ತಿಯನ್ನು ನಿರ್ಬಾಧಿತರಾಗಿ ಅನುಭವಿಸಲು ಬೇಕಾದ ಸನ್ನಿವೇಶಗಳಿಗೆ ಪ್ರಾಶಸ್ತ್ಯ ನೀಡಿದ್ದಾನೆ. ಅವನ ಅಭಿಪ್ರಾಯದಲ್ಲಿ 'ಮಾನವರು ಬೇರೆಯವರೊಡನೆ ಬೆರೆತು ತನ್ನನ್ನು ಸರ್ಕಾರದ ಅಧೀನಕ್ಕೆ ಒಳಪಡಿಸಿಕೊಳ್ಳುವುದು ತನ್ನ ಆಸ್ತಿಯ

ರಕ್ಷಣೆಗಾಗಿಯೂ ಸರಿ'. ಆದರಂತೆ ಖಾಸಗಿ ಆಸ್ತಿಯ ಮೇಲಿನ ಹಕ್ಕು ಪ್ರತಿಯೊಬ್ಬನ ಸ್ವಾಭಾವಿಕ ಹಕ್ಕೇ ಆಗಿದೆ. ''ಭೂಮಿಯ ಮೇಲಿನ ಪ್ರತಿಯೊಂದು ವಸ್ತುವೂ ಮಾನವನ ಹಿತಕ್ಕಾಗಿ, ಅವನ ಅನುಕೂಲಕ್ಕಾಗಿ ಇದೆ. ಆದ್ದರಿಂದ ಯಾವೊಬ್ಬನೂ ಈ ಪ್ರಕೃತಿದತ್ತ ವಸ್ತುವಿನ ಮೇಲೆ, ಬೇರೆಯವರನ್ನು ಕಿತ್ತೊಗೆದು ತನ್ನ ಅಧಿಕಾರವನ್ನು ಸ್ಥಾಪಿಸಿಕೊಳ್ಳುವಂತಿಲ್ಲ. ಸ್ವಪ್ರಯತ್ನದಿಂದ ಪ್ರಕೃತಿಯಲ್ಲಿ ದೊರಕುವ ವಸ್ತುವನ್ನು ಉತ್ಪಾದಿಸಿಕೊಳ್ಳುವವನಿಗೆ ಆ ವಸ್ತುವು ಸೇರುತ್ತದೆ. ಅವನ ಶ್ರಮದಿಂದಲೇ ಆಸ್ತಿಯು ನಿರ್ಮಾಣವಾಗಿ ಆ ಆಸ್ತಿಯ ಮೇಲೆ ಅವನ ಹಕ್ಕು ಸ್ಥಾಪಿತ ವಾಗುವುದು. ಪ್ರಕೃತಿಯ ನಿಯಮಾನುಸಾರವಾಗಿ ಆಸ್ತಿಯು ಹುಟ್ಟಿರುವುದರಿಂದ ಆಸ್ತಿವಂತನನ್ನು ಪ್ರಕೃತಿಯೇ ಬಂಧಿಸುತ್ತದೆ. ತನಗೆ ಅಗತ್ಯವಾಗಿರುವುದಕ್ಕಿಂತ ಹೆಚ್ಚಿನದನ್ನು ಹೊಂದುವುದು ತರ್ಕ ಹಾಗೂ ನ್ಯಾಯಬಾಹಿರವಾದದ್ದು. ಏಕೆಂದರೆ ಪ್ರಕೃತಿಯಿಂದ ಬೇರೆಯವರು ಪಡೆಯಬಹುದಾದುದನ್ನು ಈತ ತನ್ನದನ್ನಾಗಿಸಿಕೊಂಡಿದ್ದಾನೆ.'' ಈ ಕಾರಣದಿಂದ ಲಾಕ್‌ನ ಪ್ರಕಾರ ತನ್ನ ಅನುಭೋಗಕ್ಕೆ ಬೇಕಾದುದಕ್ಕಿಂತ ಹೆಚ್ಚಿನದನ್ನು ಪಡೆದವನು ಬೇರೆಯವರ ಸ್ವತ್ತನ್ನು ಅಪಹರಿಸಿದಂತಾಗುತ್ತದೆ.

ದೊರೆತನವನ್ನೇ ಅಲ್ಲಗಳೆಯುವ ಮನೋಭಾವವುಳ್ಳ ಪ್ಯೂಫೆಂಡೋರ್ಫನ ದೃಷ್ಟಿಯಲ್ಲಿ ಮಾನವನ ಅವಶ್ಯಕತೆಗಳೇ ಅವನು ಆಸ್ತಿಯ ಮೇಲೆ ಹಕ್ಕನ್ನು ಸ್ಥಾಪಿಸಿಕೊಳ್ಳುವ ಹಕ್ಕನ್ನು ನೀಡುತ್ತವೆ. ಆದರೆ ಆಸ್ತಿಯ ಮೇಲೆ ಸ್ವಭಾವಜನ್ಯವಾದ ಯಾವ ಹಕ್ಕೂ ಮಾನವನಿಗಿಲ್ಲ. ಪ್ರಕೃತಿಯ ಸಿರಿಯಲ್ಲಿ 'ಆಸ್ತಿ' ಎಂಬ ತತ್ವವೊಂದು ಇಲ್ಲವೇ ಇಲ್ಲ. ಒಂದು ರೀತಿಯ ಕಟ್ಟಳೆ, ಮಾನ್ಯತೆ, ಸಮ್ಮತಿ ಅಥವಾ ನಾವೇ ಕಲ್ಪಿಸಿಕೊಳ್ಳುವ ನಿಯಮಗಳಿಂದಲೇ ಆಸ್ತಿಯ ಪ್ರಜ್ಞೆಯು ಉಂಟಾಗುತ್ತದೆ. ಇವುಗಳಿಂದಾಗಿ ಪ್ರಕೃತಿಯ ಯಾವುದೋ ಒಂದು ಭಾಗವು ಒಬ್ಬನ ಆಸ್ತಿಯಾಗಿ ಪರಿಣಮಿಸುತ್ತದೆ. ಸಮ್ಮತಿಯಿಂದಲೇ ಉಂಟಾಗುವುದರಿಂದ, ಆಸ್ತಿಯ ಹಕ್ಕು ಸಮ್ಮತಿ ಇರುವ ತನಕ ಮಾತ್ರವೇ ಉಳಿಯುತ್ತದೆ. ಈ ರೀತಿಯ ಸಮ್ಮತಿಯ ಮಿತಿಯಲ್ಲಿ ಈ ಹಕ್ಕು ನಿರಂತರವೂ ಹೌದು; ನಿರ್ಬಂಧಿತವೂ ಹೌದು. ಆದರೆ ಈ ಹಕ್ಕಿನಿಂದ ಅಸಮಾನತೆ ಬೆಳೆದರೆ ಈ ಹಕ್ಕು ನ್ಯಾಯಯುತವಾದುದಲ್ಲ.

ಪ್ಯೂಫೆಂಡೋರ್ಫನ ಈ ಧೋರಣೆಗೆ ಹಾಬ್ಸನ ಸಮ್ಮತಿಯೂ ಇದೆ. ಅವನ ದೃಷ್ಟಿಯಲ್ಲಿ ಮಾನವನ ಪೂರ್ವ ಸ್ಥಿತಿಯಲ್ಲಿ 'ಆಸ್ತಿ' ಎಂಬುದರ ಕಲ್ಪನೆಯೇ ಇರಲಿಲ್ಲ. ಸಮಾಜದ ರಚನೆ ಪ್ರಾರಂಭವಾದಾಗಿನಿಂದ ಅದು ಬೆಳೆಯಲಾರಂಭಿಸಿತು. ಆಸ್ತಿಯು ಪ್ರತ್ಯೇಕವೂ, ಸ್ವಾಭಾವಿಕವೂ ಅಲ್ಲ. ಏಕೆಂದರೆ ಅದು ಸಮಾಜದ ವ್ಯಕ್ತಿಯು ನಿರ್ಮಿಸಿಕೊಂಡ ನಿಯಮಗಳ ಮೇಲೆ ನಿರ್ಧಾರ ವಾಗಿದೆ. ಈ ನಿಯಮಗಳ ಪರಿಪಾಲನೆಯೂ ಕೂಡ ಸಮಾಜದ ಒಟ್ಟು ಶಕ್ತಿಯಿಂದ ನಿರ್ಧರಿಸಲ್ಪಡುತ್ತದೆ. ಈ ದೃಷ್ಟಿಯಲ್ಲಿ ಆಸ್ತಿಯ ಮೇಲಿನ ಹಕ್ಕು ಸಮಾಜದ ಮತ್ತು ವ್ಯಕ್ತಿಯ ಸಾಮರ್ಥ್ಯವನ್ನು ಅವಲಂಬಿಸಿದೆ. ಈ ಸಾಮರ್ಥ್ಯ ಸಾಧನೆಗಾಗಿಯೇ ಸರಕಾರದ ಕಲ್ಪನೆಯಾಗಿ ಮಾನವ ಸಮಾಜವನ್ನು ಒಟ್ಟುಗೂಡಿಸುತ್ತದೆ. ತತ್ಪರಿಣಾಮವಾಗಿ ಸ್ವಾಭಾವಿಕವಾಗಿ ಒಂದು ಜನಾಂಗವು ಸಮಾನತೆಯನ್ನು ಪಡೆದಿದ್ದರೂ ಅಸಮಾನತೆ ಬೆಳೆದುಬರುತ್ತದೆ. 'ಆಸ್ತಿ' 'ಅಧಿಕಾರ' ಇತ್ಯಾದಿಗಳಲ್ಲಿರುವ ಅಸಮಾನತೆಗೆ ಸರಕಾರದ ಅಥವಾ ರಾಜ್ಯದ ಕಲ್ಪನೆಯೇ ಕಾರಣ.

೧೮ನೆಯ ಶತಮಾನದಲ್ಲಿ ಆಸ್ತಿಯ ಬಗ್ಗೆ ಚರ್ಚೆಯು ವಿಶೇಷತಃ ಫ್ರಾನ್ಸಿನಲ್ಲಿ ಮುಂದುವರಿಯಿತು. ಮಾನವ ನಾಗರಿಕತೆಯು ಖಾಸಗಿ ಆಸ್ತಿಯನ್ನವಲಂಬಿಸಿಯೇ ಬೆಳೆದು ಬಂದಿತೆಂದು ಪ್ರತಿಪಾದಿಸಿದ ತತ್ವಜ್ಞಾನಿ ರೂಸೋ. ಸಮಾಜ ಹಾಗೂ ಖಾಸಗಿ ಆಸ್ತಿಗಳು ಏಕಕಾಲದಲ್ಲಿ ಹುಟ್ಟಿದುವೆಂದು ಅವನ ವಾದ. ಅದರಿಂದಾಗಿ ಒಂದು ಮತ್ತೊಂದರ

ಮೇಲೆ ಆಧಾರಿತವಾಗಿದೆ ಎಂದು ಅವನ ತೀರ್ಮಾನ. ಅವನ ಮಾತುಗಳು ಉದ್ಧರಿತಗೊಳ್ಳಲು ಯೋಗ್ಯವಾದಂತಹವು :

''ಹಿಂದೆಂದೋ ಒಬ್ಬ ಮಾನವ ತನಗೆ ಬೇಕೆಂದೆನಿಸಿದ ಭೂಮಿಯನ್ನು ಸುತ್ತುಗಟ್ಟಿ 'ಇದು ನನ್ನದು' ಎಂದು ಘೋಷಿಸಿದನು. ಇನ್ನಿತರ ಮಾನವರು ಅವನ ಈ ಕೃತಿಯನ್ನು ಮೆಚ್ಚಿ ಮಾನವೀಯ ಸಮಾಜದ ಸೃಷ್ಟಿಕರ್ತನಿವನೆಂದು ಪರಿಗಣಿಸಿದರು. ಹೀಗೆ ಅವನನ್ನು ಗಣ್ಯನೆಂದು ತಿಳಿಯುವುದರ ಬದಲು 'ಅವನ ಮಾತನ್ನು ಕೇಳಬೇಡಿ; ಪ್ರಕೃತಿದತ್ತವಾದ ಸಂಪತ್ತು ಯಾರೊಬ್ಬನಿಗೂ ಸೇರುವಂತಹದಲ್ಲ ಮತ್ತು ಭೂಮಿಯ ಮೇಲೆ ಒಡೆತನ ಸ್ಥಾಪಿಸಲು ಯಾರಿಗೂ ಹಕ್ಕಿಲ್ಲ', ಎಂದು ಆ ಜನ ಕೂಗಿದ್ದರೆ ಚರಿತ್ರೆಯಲ್ಲಿ ನಮಗೆ ಕಾಣಸಿಗುವ ಯುದ್ಧಗಳು, ಹಿಂಸಾಕೃತ್ಯಗಳು, ಘೋರ ಪಾಪಗಳು ಇತ್ಯಾದಿಗಳು ಇರುತ್ತಿರಲಿಲ್ಲ.''

ಹೀಗೆಂದು ರೂಸೋ ತರ್ಕಿಸಿದರೂ ಖಾಸಗಿ ಆಸ್ತಿಯಿಂದಾಗಿ ಮಾನವ ಜನಾಂಗ ನಾಗರಿಕತೆಯ ಹಾದಿಯಲ್ಲಿ ಮೇಲೇರಲು ಸಹಾಯ ಮಾಡಿತೆಂದೇ ಆತ ಭಾವಿಸುತ್ತಾನೆ. ಆದ್ದರಿಂದ ಖಾಸಗಿ ಆಸ್ತಿಯ ಮೇಲಿನ ಹಕ್ಕನ್ನು ನಿವಾರಿಸುವುದು ನಾಗರಿಕತೆಯ ಪತನಕ್ಕೆ ಕಾರಣವಾಗುವುದೆಂದು ಅವನ ಭಾವನೆ. ಆದಾಗ್ಯೂ ಅವನು ಒಂದು ಕೊಕ್ಕೆಯನ್ನು ಹಾಕಿಟ್ಟಿದ್ದಾನೆ. ಪ್ರತಿಯೊಬ್ಬನಿಗೂ ತನ್ನ ಅವಶ್ಯಕತೆಗಳ ಪೂರೈಕೆಗಾಗಿ ಸ್ವಾಭಾವಿಕವಾದ ಹಕ್ಕುಂಟು. ಅವನ ಸ್ಥಿತಿಯು ನಿರ್ಧರಿಸಲ್ಪಟ್ಟ ನಂತರ ಅವನದಾಗಿರುವುದರ ಹೊರತು ಬೇರೆಯ ಸಂಪತ್ತಿನ ಮೇಲೆ ಅಧಿಕಾರ ಸ್ಥಾಪಿಸಿಕೊಳ್ಳುವ ಹಕ್ಕು ಅವನಿಗಿಲ್ಲ.

ಕೈಗಾರಿಕಾ ಕ್ರಾಂತಿಯ ತರುವಾಯ ಉಂಟಾದ ಕ್ಷುಬ್ಧ ಪರಿಸ್ಥಿತಿಯನ್ನು ಪರಿಶೀಲಿಸಿದ ರಾಬರ್ಟ್ ಓವೆನ್ನನು ಪರಸ್ಪರ ಸಹಕಾರ ನೀತಿಯ ಲಕ್ಷಣಗಳನ್ನು ವಿವರಿಸಿ ಖಾಸಗಿ ಸ್ವಾಮ್ಯವಿದ್ದೆಡೆಯೆಲ್ಲಾ ಶೋಷಣೆಗೆ ಅವಕಾಶವಿರುವುದು ಮಾತ್ರವಲ್ಲ, ಈ ಬಗೆಯ ಶೋಷಣೆ ನಡೆದೇ ನಡೆಯುತ್ತದೆಯೆಂಬುದಾಗಿ ವಾದಿಸಿದನು.

ಇವೆಲ್ಲ ಅಭಿಪ್ರಾಯ, ವಾದಗಳಿಗಿಂತಲೂ ತೀರ ಭಿನ್ನವಾದದ್ದು ಮಾರ್ಕ್ಸ್‌ವಾದ. ಮಾರ್ಕ್ಸ್‌ನ ಪ್ರಕಾರ ಬಂಡವಾಳಶಾಹಿ ತಂತ್ರದ ಬೆಳವಣಿಗೆಯು ಖಾಸಗಿ ಆಸ್ತಿಯ ನಿರ್ಮೂಲನಕ್ಕೆ ಹಾದಿಮಾಡಿಕೊಡುವುದು ಸ್ವತಃಸಿದ್ಧವಾದ ಅಂಶ. ಈ ನಿರ್ಮೂಲನದಲ್ಲಿ ಆಸ್ತಿಯು ಒಟ್ಟು ಸಮಾಜಕ್ಕೆ ಸೇರಿದಂತೆ ಪರಿವರ್ತನೆಗೊಳ್ಳುತ್ತದೆ. ಕಾರ್ಮಿಕರ ಅಥವಾ ಶ್ರಮಜೀವಿಗಳ 'ನಿರಾಸ್ತಿವಂತ' ವರ್ಗವು ಸರ್ಕಾರವನ್ನು ತನ್ನದನ್ನಾಗಿ ಮಾಡಿಕೊಂಡರೆ, ಆಸ್ತಿವಂತರು ತಮ್ಮದೆಂದು ಮಾಡಿಕೊಂಡಿರುವ ಖಾಸಗಿ ಆಸ್ತಿಯ ನಿರ್ಮೂಲನವಾದಂತೆಯೇ ಸರಿ. ಮಾರ್ಕ್ಸ್‌ನ ಈ ವಾದವನ್ನು ವಿವೇಚಿಸಬೇಕಾದರೆ ಖಾಸಗಿ ಸ್ವಾಮ್ಯದಿಂದ ಉಂಟಾಗುವ ಕಷ್ಟನಷ್ಟಗಳ ಪೂರ್ಣ ತಿಳುವಳಿಕೆ ಅವಶ್ಯಕ.

ಮೇಲ್ನೋಟಕ್ಕೆ ಖಾಸಗಿ ಆಸ್ತಿಯಿರುವೆಡೆಯಲ್ಲೆಲ್ಲೂ ಶೋಷಣೆಯು ಗೋಚರಿಸದಿದ್ದರೂ ಆ ಆಸ್ತಿಯ ಉಪಯೋಗದ ಹಿನ್ನೆಲೆಯಲ್ಲಿ ಈ ಶೋಷಣೆಯ ರಹಸ್ಯವಿದೆ. ಕೆಲಸಮಾಡುವ ಪ್ರತಿಯೊಬ್ಬನೂ ತನ್ನ 'ಕೆಲಸ'ಕ್ಕೆ 'ಪ್ರತಿಫಲ'ವನ್ನು ಪಡೆಯುತ್ತಿರುವಂತೆ ತೋರುತ್ತದೆ. ಈ ತೋರಿಕೆಯಲ್ಲೇ ಶೋಷಣೆಯ ರಹಸ್ಯ ಅಡಗಿದೆ. ಪ್ರಥಮತಃ ಒಂದು ಕೆಲಸಕ್ಕೆ 'ಪ್ರತಿಫಲ' ಏನಿರಬೇಕೆಂಬುದನ್ನು 'ನಿರ್ಧರಿಸುವವರು' ಒಡೆತನವನ್ನು ಸ್ಥಾಪಿಸಿಕೊಂಡಿರುವ 'ಮಾಲೀಕರೆ' ಹೊರತು 'ಕೆಲಸಗಾರ'ರಲ್ಲ. ಆಸ್ತಿಯನ್ನು ಹೊಂದಿರುವೆನೆಂಬ ಕಾರಣ ಒಂದರಿಂದಲೇ ಆಸ್ತಿಯ ಒಡೆಯನು ಯಾವ ದುಡಿಮೆಯೂ ಇಲ್ಲದೆ ಸುಖಜೀವನವನ್ನು ಸಾಗಿಸುತ್ತಾನೆ. ಎರಡನೆಯದಾಗಿ, ಖಾಸಗಿ ಸ್ವಾಮ್ಯವುಳ್ಳವನ ಸಂಪತ್ತು ಕಾರ್ಮಿಕನ ಶ್ರಮದಿಂದ ಅಕ್ಷಯವಾಗಿ

ವೃದ್ಧಿಹೊಂದುತ್ತದೆಯಾದರೂ ಕಾರ್ಮಿಕನು ತನ್ನ ದುಡಿಮೆಯಿಂದ ತನ್ನ ಸಂಪತ್ತನ್ನೇನೂ ಹೆಚ್ಚಿಸಿಕೊಳ್ಳಲಾಗುವುದಿಲ್ಲ.

'ಆಸ್ತಿ'ಯನ್ನು ಹೊಂದಿರುವವನು 'ಆಸ್ತಿ'ಯನ್ನು ಹೆಚ್ಚಿಸಿಕೊಳ್ಳಲು ತನ್ನ ಆಸ್ತಿಯೊಂದರಿಂದಲೇ ಸಾಧ್ಯವಾಗಲಾರದು; ಇದಕ್ಕೆ ಕೆಲಸಗಾರರ ದುಡಿಮೆ ಬೇಕು. ಉತ್ಪಾದನೆಯನ್ನು ಹೆಚ್ಚಿಸುವುದೇ ಆಸ್ತಿಯನ್ನು ಹೆಚ್ಚಿಸುವುದಕ್ಕಿರುವ ಮಾರ್ಗ. ಉತ್ಪಾದನಾ ಸಾಮಗ್ರಿಗಳಿಂದ ಉತ್ಪಾದನೆಯನ್ನು ಪ್ರಾರಂಭಿಸಬೇಕಾದರೆ 'ಬಂಡವಾಳ'ದಿಂದ ಮಾತ್ರ ಸಾಧ್ಯವಿಲ್ಲ. ಬಂಡವಾಳಕ್ಕಿಂತಲೂ ಹೆಚ್ಚಾಗಿ ಉತ್ಪಾದನಾ ಕಾರ್ಯಕ್ಕೆ ಅಗತ್ಯವಾದದ್ದು 'ದುಡಿಮೆ'. 'ಬಂಡವಾಳ' ಮತ್ತು 'ದುಡಿಮೆ'ಗಳ ಸಂಯೋಗದಿಂದಲೇ, ಭೂಮಿ ಮತ್ತು ದುಡಿಮೆಗಳ ಸಂಯೋಗದಿಂದಲೇ ಉತ್ಪಾದನೆ ಸಾಧ್ಯ. ಅರ್ಥಾತ್ ದುಡಿಮೆ ವಿನಾ ಉತ್ಪಾದನೆಯಿಲ್ಲ, ದುಡಿಮೆಯಿಲ್ಲದಿದ್ದಲ್ಲಿ ಉತ್ಪಾದನಾ ಸಾಮಗ್ರಿಗಳು ಅಪ್ರಯೋಜಕ. ಬಂಡವಾಳದಿಂದ ಬಂಡವಾಳವಾಗಲೀ, ಭೂಮಿಯಿಂದ ಭೂಮಿಯಾಗಲೀ ಹೆಚ್ಚಳಗೊಳ್ಳದು. ಅವು ಹೊಸ ಸೃಷ್ಟಿಗೆ ಕಾರಣವಾಗವು. ದುಡಿಮೆಯು ಮಾತ್ರ ಇವುಗಳಿಂದ ಭಿನ್ನವಾದುದು. ಏಕೆಂದರೆ ಅದರಿಂದ ಹೊಸ ವಸ್ತುವು ಉತ್ಪಾದನೆಗೊಳ್ಳುತ್ತದೆ. ಮುಂದಿನ ಪ್ರಶ್ನೆ ದುಡಿಮೆಗೆ ಸಲ್ಲುವ ಬೆಲೆಗೆ ಸಂಬಂಧಿಸಿದ್ದು. ಕೆಲಸಗಾರನಿಗೆ ಕೊಡಲಾಗುವ ಕೂಲಿ ದುಡಿಮೆಯ ಫಲಕ್ಕೆ ಸಮವಾಗಿರುವುದಿಲ್ಲ, ಅದು ಅವನ ದುಡಿಮೆಗೆ ದೊರೆಯುವ ಬೆಲೆ ಮಾತ್ರ. ಆದರೆ ವಾಸ್ತವವಾಗಿ ಅವನ 'ದುಡಿಮೆ'ಯ ಫಲದ ಬೆಲೆಯಾದರೋ, ದುಡಿಮೆಗೆ ದೊರೆಯುವ ಬೆಲೆಗಿಂತ ಎಷ್ಟೋ ಹೆಚ್ಚಾಗಿದ್ದು ಇವೆರಡರ ನಡುವೆ ಸಾಮಂಜಸ್ಯದ ಅಭಾವವಿದೆ. ಇಲ್ಲೇ ಶೋಷಣೆಯ ರಹಸ್ಯ ಅಡಗಿದೆ.

ಸುಮಾರು ಆರು ಗಂಟೆಗಳ ಕೆಲಸದಿಂದ ಒಬ್ಬನ ಜೀವನ ನಿರ್ವಹಣೆ ಸಾಧ್ಯವಿದೆ ಎಂದಿಟ್ಟುಕೊಳ್ಳೋಣ. ಎಂದರೆ ಆರು ಗಂಟೆಯ ದುಡಿಮೆಯ ಬೆಲೆ ಅವನಿಗೆ ಕೊಟ್ಟರೆ ಅವನ 'ಬೇಕು'ಗಳ ಪೂರೈಕೆಯಾಗುತ್ತದೆ. ಸ್ವತಃ ಕೆಲಸಮಾಡಿ ಉತ್ಪಾದಿಸುವ ಶಕ್ತಿ ಅವನಲ್ಲಿದ್ದರೂ ಕೆಲಸಕ್ಕಾಗಿ ಬೇರೆಯವರ ಆಶ್ರಯ ಪಡೆಯಬೇಕಾದಂತಹ ಸಮಾಜದ ಪರಿಸ್ಥಿತಿಯಲ್ಲಿ ಅವನು ಸಿಕ್ಕಿಕೊಂಡಿದ್ದಾನೆ. ಹೀಗಾಗಿ ಬಂಡವಾಳವಿರುವವರಲ್ಲೋ, ಭೂಮಿಯಿರುವವರಲ್ಲೋ ಅವನು ಕೆಲಸಕ್ಕೆ ನಿಲ್ಲುತ್ತಾನೆ; ಅರ್ಥಾತ್, ಉತ್ಪಾದನಾ ಸಾಮಗ್ರಿಗಳ ಮೇಲೆ ಯಾರ ಖಾಸಗಿ ಸ್ವಾಮ್ಯ ಏರ್ಪಟ್ಟಿದೆಯೋ ಅವರನ್ನು ಅವಲಂಬಿಸುತ್ತಾನೆ. ಈ ಸ್ವಾಮ್ಯವನ್ನು ಗಳಿಸಿಕೊಂಡಿರುವವರೇ ಸಮಾಜದ ಆರ್ಥಿಕ ವ್ಯವಸ್ಥೆಯನ್ನು ಮಾಡಿರುವವರು ಮತ್ತು ಈ ವ್ಯವಸ್ಥೆಯಲ್ಲೇ ಸಮಾಜದ ಆಗುಹೋಗುಗಳು ಅಡಗಿರುವುದು. ರಾಜ್ಯದ ಎಲ್ಲಾ ಕಾನೂನುಗಳೂ, ಕಟ್ಟಳೆಗಳೂ ಉಳ್ಳವರ ವರ್ಗದವರಿಂದಲೇ ತೀರ್ಮಾನಿಸಲ್ಪಡುತ್ತವೆ. ಈ ವ್ಯವಸ್ಥೆಯಲ್ಲಿ ಕಾರ್ಮಿಕನ ಆರು ಗಂಟೆಗಳ ದುಡಿತದ ಬೆಲೆಯನ್ನು ವೇತನವನ್ನಾಗಿ ನೀಡಬೇಕಾದಾಗ ಅವನಿಂದ ಹತ್ತು ಗಂಟೆಗಳ ಕೆಲಸವನ್ನು ಬಂಡವಾಳಗಾರ ಮಾಡಿಸಿಕೊಳ್ಳುತ್ತಾನೆ. ಈ ಹೆಚ್ಚಿನ ನಾಲ್ಕು ಗಂಟೆಗಳ ದುಡಿಮೆಯ ಬೆಲೆಯು ಯಾವ ವಿಶಿಷ್ಟ ಕಾರಣವೂ ಇಲ್ಲದೆಯೇ ಖಾಸಗಿ ಆಸ್ತಿಯ ಮೇಲೆ ಹಕ್ಕನ್ನು ಸ್ಥಾಪಿಸಿಕೊಂಡಿರುವವನಿಗೆ ಸಲ್ಲುತ್ತದೆ. ಖಾಸಗಿ ಆಸ್ತಿಯನ್ನು ಹೊಂದಿ, ಉತ್ಪಾದನಾ ಸಾಮಗ್ರಿಗಳ ಮೇಲೆ ಸ್ವಾಮ್ಯವನ್ನು ಗಳಿಸಿಕೊಂಡಿರುವವನ ಆಸ್ತಿಯು ವೃದ್ಧಿಗೊಳ್ಳುವುದು ಹೀಗೆಯೇ; ಎಂದರೆ, ಕೆಲಸಗಾರನ ದುಡಿಮೆಯಿಂದ. ಇದರ ವೃದ್ಧಿಯಾದಷ್ಟೂ ಏಕಸ್ವಾಮ್ಯವು ಬೆಳೆಯುವುದು ಸಹಜ ಕ್ರಿಯೆ. ಕೆಲಸಗಾರನು ದುಡಿದರೂ ದುಡಿಮೆಯ ಫಲಾನುಭವ ಅವನಿಂದ ಅಸಾಧ್ಯವಾಗುತ್ತದೆ. ಆರ್ಥಿಕ ವ್ಯವಸ್ಥೆ (ಅಥವಾ

ಅವ್ಯವಸ್ಥೆ)ಯ ರೀತಿ ನೀತಿಗಳಿವು. ದುಡಿಮೆಯಿಂದೊದಗುವ ಹೆಚ್ಚಿನ ಮೌಲ್ಯವೇ ಶೋಷಣೆಯ ಪ್ರೇರಕ ಶಕ್ತಿ. ಸ್ವಂತ ದುಡಿಮೆಯಿಂದ ಜೀವಿಸದವನು ಬೇರೊಬ್ಬರನ್ನು ಶೋಷಿಸದೆ ಬದುಕುವುದು ದುಸ್ತರವೆಂದು ಹೇಳಬೇಕಾಗಿಲ್ಲವಷ್ಟೆ!

'ಉತ್ಪಾದನಾ ಸಾಮಗ್ರಿಗಳ' ಮೇಲೆ 'ಒಡೆತನ'ವನ್ನು ಸ್ಥಾಪಿಸಿಕೊಂಡರೆ ಅವುಗಳ ಉಪಯೋಗ ಮತ್ತು ಉತ್ಪಾದಿತ ವಸ್ತುಗಳ 'ವಿತರಣೆ' ಇವುಗಳ ಮೇಲೂ ಒಡೆತನ ಸ್ವಯಂಪ್ರಾಪ್ತವಾಗುತ್ತದೆ. ಈ ಹೆಚ್ಚಿನ ಮಹತ್ವದ ಶಕ್ತಿಯಿಂದ ವೇತನವನ್ನು ನಿರ್ಧರಿಸಿದರೂ 'ಉತ್ಪಾದಿತ ವಸ್ತುಗಳ ಮೌಲ್ಯ'ವನ್ನು ಅಧಿಕಗೊಳಿಸಲು ಸಾಧ್ಯ. ಖಾಸಗಿ ಸ್ವಾಮ್ಯ ದಿಂದುಂಟಾಗುವ ಹಲವಾರು ದುಷ್ಪರಿಣಾಮಗಳಲ್ಲಿ ಇದು ಪ್ರಮುಖವಾದುದು. ಈ ವ್ಯವಸ್ಥೆಯ ಶಕ್ತಿಯಿಂದಾಗಿ ಮಾರುಕಟ್ಟೆಯನ್ನೂ ಕೂಡ ಬಂಡವಳಿಗರು ತಮ್ಮ ಅನುಕೂಲಕ್ಕಾಗಿ ಮಾರ್ಪಡಿಸಿಕೊಳ್ಳಬಹುದಾಗಿದೆ. ಅದರ ಪ್ರಭಾವವು ಕೆಲಸಗಾರನಿಗೆ ಹೆಚ್ಚಿನ ಹಾನಿಯನ್ನುಂಟು ಮಾಡುವುದರಲ್ಲಿ ಸಹಕಾರಿಯಾಗುತ್ತದೆ.

ಮಾರ್ಕ್ಸ್-ಏಂಗಲ್ಸರು ಕೆಲಸಗಾರರಿಗೆ ನೀಡಿರುವ ಕರೆ ಇದಕ್ಕೇ ಸಂಬಂಧಿಸಿದ್ದು. ದುಷ್ಪರಿಣಾಮಗಳ ಮೂಲೋತ್ಪಾಟನೆಯಾಗಬೇಕಾದರೆ ಖಾಸಗಿ ಆಸ್ತಿಯ ಮೇಲಿನ ಸ್ವಾಮ್ಯವು ನಿಯಮಿತವಾಗಿರುವ ರೀತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಬೇಕು. ಒಬ್ಬ ವ್ಯಕ್ತಿಯ ಭಾವನೆ ಹಾಗೂ ಇಚ್ಛೆಗಳಿಗಾಗಿ ಸಮಾಜದ ಕೆಲಸಗಾರರೆಲ್ಲರ ಶೋಷಣೆಯು ಅನೀತಿಯುತವಾದ ಮಾರ್ಗ. ಉತ್ಪಾದನಾ ಸಾಮಗ್ರಿಗಳನ್ನು ಬಂಡವಾಳದ ರೂಪದಲ್ಲಿ ಖಾಸಗಿಯಾಗಿ ಹೊಂದಿರುವುದರಿಂದ ಉಂಟಾಗುವ ಪರಿಣಾಮಗಳನ್ನು ತಡೆಗಟ್ಟಿ ನಿರ್ಮೂಲನಗೊಳಿಸಬೇಕಾದರೆ ಈ ಸ್ವಾಮ್ಯವನ್ನೇ ಕೊನೆಗಾಣಿಸಬೇಕು. ಇಲ್ಲವಾದರೆ ಈಗಾಗಲೇ ಅದು ತಾಳಿರುವ ಸ್ವರೂಪಗಳು ಇನ್ನೂ ಹೆಚ್ಚಾಗಿ ಇನ್ನೂ ಹೆಚ್ಚಿನ ಕ್ಷೋಭೆಗೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ. ಉತ್ಪಾದನಾ ಸಾಮಗ್ರಿಗಳ ಮೇಲೆ ಸಮಾಜದ ಒಡೆತನ ಇದರಿಂದಾಗಿ ಅತ್ಯಾವಶ್ಯಕ.

ಈ ವಾದದಲ್ಲಿ ತಿರುಳಿಲ್ಲವೆಂದೋ, ಆಸ್ತಿಯ ಪ್ರಮಾಣದಲ್ಲಿ ಒಂದು ಮಿತಿಯನ್ನು ವಿಧಿಸ ಬೇಕೆಂದೋ ತರ್ಕಿಸುವ ಪ್ರಣಾಳಿಕೆಗಳೂ ಹಿಂದಿನಿಂದ ಬೆಳೆದುಬಂದಿವೆ. ೧೯ನೆಯ ಶತಮಾನದ ಆರ್ಥಿಕ ವ್ಯವಸ್ಥೆಯ ನೀತಿಯನ್ನು ಕುರಿತಾದ ''ಮಾಡುವುದಕ್ಕೆ ಬಿಡು'' *(laissez-faire)* ಎಂಬ ತತ್ವವು ಬಹಳ ಪ್ರಸಿದ್ಧವಾದುದು. ಈ ತತ್ವದ ಹಿನ್ನೆಲೆಯಲ್ಲಿ ಅರ್ಥಶಾಸ್ತ್ರಜ್ಞರಾದ ಆಡಂ ಸ್ಮಿತ್ ಮತ್ತು ಡೇವಿಡ್ ರಿಕಾರ್ಡೊ ಇವರ ತತ್ವ ಪ್ರತಿಪಾದನೆ ಇದೆ. ಖಾಸಗಿ ಸ್ವಾಮ್ಯ, ಖಾಸಗಿ ಉದ್ಯಮ, ಪೈಪೋಟಿ, ಇತ್ಯಾದಿಗಳಿಂದಲೇ 'ಅಧಿಕ ಉತ್ಪಾದನೆ' ಸಾಧ್ಯವೆಂದೂ ಉತ್ಪಾದಿತ ವಸ್ತುಗಳ ಬೆಲೆಯು ಸರಬರಾಜು ಮತ್ತು ಗಿರಾಕಿಗಳನ್ನು ಅವಲಂಬಿಸಿದೆಯೆಂದೂ ಈ ತತ್ವ ನಂಬುತ್ತದೆ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಿಂದ ದುಷ್ಪರಿಣಾಮವೇನೂ ಉಂಟಾಗಿಲ್ಲವೆಂದೂ ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯ-ಯೋಗ್ಯತೆಗಳಿ ಗನುಸಾರ ಸುಖಸಂಪತ್ತುಗಳನ್ನು ಅದು ಉಂಟುಮಾಡಿಕೊಟ್ಟಿದೆಯೆಂದೂ ಈ ತತ್ವದಲ್ಲಿ ಆಸ್ಥೆಯಿರುವವರ ವಾದ. ಖಾಸಗಿ ಉದ್ಯಮಕ್ಕೆ ಸಾಕಷ್ಟು ಅವಕಾಶವಿರಬೇಕೆಂದು ನಿರೀಕ್ಷಿಸುವ ಈ ಮತವು ಉದ್ಯಮದ ನಡೆಯನ್ನು ಸ್ಥಗಿತಗೊಳಿಸಬಾರದೆಂದಿದ್ದರೆ ಸರಕಾರವು ಮಧ್ಯೆ ಪ್ರವೇಶಿಸಕೂಡದೆಂದು ವಾದಿಸಿ, ಉದ್ದಿಮೆಗೆ ಸ್ವಾತಂತ್ರ್ಯವಿರಬೇಕೆಂದು ಅಪೇಕ್ಷಿಸುತ್ತದೆ. ವ್ಯಕ್ತಿಯ ಸ್ವಂತ ಏಳಿಗೆ ಎಂಬ ಮಹತ್ವಾಕಾಂಕ್ಷೆಯು ದುಡಿಮೆಯಲ್ಲಿ ವ್ಯಕ್ತಿಯ ಆಸ್ಥೆಯನ್ನು ಹೆಚ್ಚಿಸಿ ಉತ್ಪಾದನೆಯನ್ನೂ ಹೆಚ್ಚಿಸಲು ನೆರವಾಗುತ್ತದೆ. ಅಧಿಕ ಉತ್ಪಾದನೆಯಾಗುತ್ತಿದೆಯೆಂದರೆ

ದೇಶದ ಅಭಿವೃದ್ಧಿಯಾಗುತ್ತಿದೆಯೆಂದೇ ಅರ್ಥ. ಪ್ರತಿ ವ್ಯಕ್ತಿಗೂ ಈ ಸ್ವಾತಂತ್ರ್ಯವಿದ್ದಲ್ಲಿ ಸಮಾಜದ ಅಭಿವೃದ್ಧಿ ತಾನಾಗಿಯೇ ಆಗುತ್ತದೆ. ಉತ್ಪಾದಿತ ವಸ್ತುಗಳ ಬೆಲೆಯು ಮಾರುಕಟ್ಟೆಯಲ್ಲಿ ನಿರ್ಧರಿಸಲ್ಪಡುವ ರೀತಿಯಲ್ಲಿ, ಈ ಉತ್ಪಾದನೆಯಲ್ಲಿ ತೊಡಗಿರುವ ಪ್ರತಿಯೊಬ್ಬನಿಗೂ ಎಷ್ಟು ಹೆಚ್ಚು ಸಾಧ್ಯವೋ ಅಷ್ಟು ತೃಪ್ತಿ ದೊರಕುತ್ತದೆ. 'ಉತ್ಪಾದನಾ ಸಾಮಗ್ರಿಗಳೂ' ಕೂಡ ಅತಿ ಹೆಚ್ಚಿನ ಉತ್ಪಾದನೆಯನ್ನು ಕೊಡಲು ಯಾವ ರೀತಿಯಲ್ಲಿ 'ಸಂಘಟಿತವಾಗಬೇಕೋ' ಆ ರೀತಿಯಲ್ಲಿ ಸಂಘಟಿಸಲ್ಪಡುತ್ತವೆ. 'ಬಂಡವಾಳ' ಹಾಗೂ 'ದುಡಿಮೆ'ಗಳಿಗೆ ಕೂಡ ಸೂಕ್ತ ಸಂಭಾವನೆಯೂ ದೊರಕುತ್ತದೆ. ಆದರಿಂದಾಗಿ 'ಬಂಡವಾಳ' ಹೂಡಿರುವವನ ಮತ್ತು ದುಡಿಯುವ 'ಕಾರ್ಮಿಕ'ನ ಮಧ್ಯೆ ಒಂದು ರೀತಿಯ ಅವಿರೋಧವು ಹುಟ್ಟುತ್ತದೆ. ಇದರ ಒಟ್ಟು ಫಲವೇ ಮಾನವ ಸಮಾಜದ ಪುರೋಭಿವೃದ್ಧಿ. ಆದರೆ ಇದು ಸಾಧ್ಯವಾಗಬೇಕಾದಲ್ಲಿ ವ್ಯಕ್ತಿಯ ಖಾಸಗಿ ಆಸ್ತಿಗೂ, ಅವನ ಉದ್ಯಮಕ್ಕೂ ರಕ್ಷಣೆ ನೀಡುವುದು ಅವಶ್ಯಕ. ಆಸ್ತಿಯಿರುವುದು ಸುಖ ಜೀವನ ನಡೆಸಲು ಸಹಕಾರಿಯಾಗುವುದಕ್ಕೆ. ಆದ್ದರಿಂದ ಅದನ್ನು ರಕ್ಷಿಸಬೇಕಾದುದು ಒಂದು 'ಸ್ವಾಭಾವಿಕ ಧರ್ಮ'. ಇದು ಒಂದು ವಾದ.

ಇಂತಹ ಕೆಲವು ಭಾವನೆಗಳಿಂದ ಪ್ರೇರಿತರಾಗಿಯೇ ಕೆಲವರು ಆಗಾಗ್ಗೆ ಖಾಸಗಿ ಆಸ್ತಿಯ ರಕ್ಷಣೆಯನ್ನು, ವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತು ಮಾತನಾಡುವಾಗ ಜನರು ಜಾಗ್ರತರಾಗಿರ ಬೇಕೆಂದು ಕರೆ ನೀಡುವುದು. ನಮ್ಮ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ಪರಿಶೀಲಿಸಿ ರಾಜಕೀಯ ಪಕ್ಷಗಳ ಸ್ವರೂಪ ಮತ್ತು ಧ್ಯೇಯಗಳನ್ನು ಗುರುತಿಸುವಾಗ, ಈ ಪಕ್ಷಗಳು ಖಾಸಗಿ ಸ್ವಾಮ್ಯದ ಬಗ್ಗೆ ತಾಳಿರುವ ಧೋರಣೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳುವವರೂ ಇದ್ದಾರೆ. 'ಪ್ರಜಾಸತ್ತೆ'ಯಲ್ಲಿ ಸಮಾನವಾದ ಹಕ್ಕು, ಅವಕಾಶ ಮತ್ತು ಪ್ರಾತಿನಿಧ್ಯ ನೀಡಲಾಗುವುದರಿಂದ ಅಸಮಾನತೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದೂ, 'ಶೋಷಣೆ' ನಡೆಯುತ್ತಿದೆಯೆಂಬ ಮಾತು ಅರ್ಥರಹಿತವಾದುದೆಂದೂ, ಹೇಳುವವರಿದ್ದಾರೆ. ಆದರೆ ಉತ್ಪಾದನಾ ಸಾಧನಗಳ ನಿರ್ವಹಣೆಯಲ್ಲಿ ಮತ್ತು ಆಡಳಿತ ಕ್ಷೇತ್ರದಲ್ಲಿ ದುಡಿಯುವವರಿಗೆ 'ಪ್ರಾತಿನಿಧ್ಯ'ವಿಲ್ಲದುದರಿಂದ ಸಮಾಜಕ್ಕೆ ಹಾನಿಕರವಾದ ಧೋರಣೆಗಳಿಗೆ ಬೆಂಬಲ ದೊರಕಿ, ಪ್ರಜಾಸತ್ತೆಯು ಕೇವಲ ನಾಮಾವಶೇಷವಾಗಿದೆಯೆಂದು ಘೋಷಿಸು ವವರೂ ಇದ್ದಾರೆ. ರಾಜ್ಯಾಂಗ ಅಥವಾ ಸಂವಿಧಾನದ ಪ್ರಕಾರ ಪ್ರಜೆಗಳೆಲ್ಲರಿಗೂ ಸಮಾನತೆಯನ್ನು ಕಲ್ಪಿಸಿಕೊಟ್ಟಿರುವುದರಿಂದ ಖಾಸಗಿ ಆಸ್ತಿಯ ಮೇಲಿನ ಸ್ವಾಮ್ಯವನ್ನು ಖಂಡಿಸುವುದಕ್ಕಾಗಲೀ, ಅದನ್ನು ನಿರ್ಮೂಲನಗೊಳಿಸುವ ಪ್ರಯತ್ನಗಳಿಗಾಗಲೀ ಸಮರ್ಥನೆ ಯಿಲ್ಲವೆಂದು ಇನ್ನೊಂದು ವಾದ.

ಮೇಲ್ಕಂಡ ವಾದಗಳಲ್ಲಿ ಸತ್ಯವಿಲ್ಲವೆಂದು ಪರಿಗಣಿಸುವ ಪ್ರತಿವಾದಿಗಳ ತತ್ವ ಈ ರೀತಿಯಿದೆ : ನಿಜವಾದ ಸಮಾನತೆಯುಂಟಾಗಬೇಕಾದರೆ ಸಂವಿಧಾನದ ಘೋಷಣೆಯಿಂದ ಆಗದು. ವರ್ಗಗಳ ವಿನಾಶವಾಗುವುದರಿಂದ ಇದರ ಸಾಧನೆ ಸಾಧ್ಯ. ಸಮಾಜವಾದಿ ಅರ್ಥ ವ್ಯವಸ್ಥೆಯಲ್ಲಿ ಸ್ವಾಮ್ಯವುಳ್ಳವರು ಸ್ವಾಮ್ಯವಿಲ್ಲದವರು ಎಂಬ ಭೇದವಿಲ್ಲ. ಅದು ಉತ್ಪಾದನಾ ಸಾಮಗ್ರಿಗಳ ಸಮಾಜೀಕರಣದಿಂದ ಮಾತ್ರ ಸಾಧ್ಯ. ಮಾರ್ಕ್ಸ್ ಮತ್ತು ಏಂಗಲ್ಸರ ತತ್ವಾನುಸಾರ ಸಮಾನತೆಯೆಂದರೆ ವ್ಯಕ್ತಿಗಳ ಮತ್ತು ಸಮಾಜದ ಅವಶ್ಯಕತೆಗಳನ್ನಾಗಲೀ ಜೀವನ ವಿಧಾನ ಗಳನ್ನಾಗಲೀ 'ಸಮ'ಗೊಳಿಸುವುದಲ್ಲ. ಸಮಾನತೆಯೆಂದರೆ ವರ್ಗಗಳ ನಾಶವೆಂದರ್ಥ. ಶೋಷಣೆಯನ್ನು ತಪ್ಪಿಸುವುದರಿಂದಲೂ ಉತ್ಪಾದನಾ ಸಾಮಗ್ರಿಗಳನ್ನೂ ವಿಧಾನವನ್ನೂ ಖಾಸಗಿ ಸ್ವಾಮ್ಯದಿಂದ ಬೇರ್ಪಡಿಸುವುದರಿಂದಲೂ, ಸಮಾನತೆಯ ಸಾಧನೆ ಸಾಧ್ಯ

ವಾಗುತ್ತದೆ. ಇದರ ಪ್ರಕಾರ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಶಕ್ತಿಗನುಸಾರವಾಗಿ ಕೆಲಸ ಮಾಡುವ ಸಮಾನ ಕರ್ತವ್ಯವನ್ನು ಹೊಂದಿದ್ದು, ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯ. ಶೋಷಣೆಗೆ ಅವಕಾಶವಿಲ್ಲದಿರುವಂತಹ ಸಮಾಜ ವ್ಯವಸ್ಥೆಯೇ ಸ್ವಾತಂತ್ರ್ಯಯುತವಾದ ಸಮಾಜದ ರಚನೆಗೆ ಹಾದಿ.

ಆದ್ದರಿಂದ ಸಮಾಜವಾದದ ತತ್ವಾನುಸಾರ ಖಾಸಗಿ ಆಸ್ತಿಯ ಮೇಲಿನ ಸ್ವಾಮ್ಯವನ್ನು ಸೀಮಿತಗೊಳಿಸುವುದೆಂದರೆ, ಆಸ್ತಿ ಅಥವಾ ಸಂಪತ್ತನ್ನೇ ನಿರ್ಮೂಲನಗೊಳಿಸುವುದೆಂದಲ್ಲ. ಒಬ್ಬ ವ್ಯಕ್ತಿಯ ಬಟ್ಟೆಗಳಾಗಲೀ, ಉಂಗುರ, ಗಡಿಯಾರ, ವಾಹನಗಳಾಗಲೀ, ಮನೆ ಬಾಗಿಲು ಗಳಾಗಲೀ 'ಖಾಸಗಿ ಆಸ್ತಿಯ ಹಕ್ಕನ್ನು' ನಿವಾರಿಸಿದಾಗ ಅವನದಾಗಿ ಉಳಿಯುವುದಿಲ್ಲವೆಂದು ಹೇಳುವವರ ಕಲ್ಪನೆ ಬಹಳ ತಪ್ಪಾದದ್ದು; ಅನೇಕ ವೇಳೆ ಮುಗ್ಧರನ್ನೂ ಮೋಸಗೊಳಿಸುವ ದೃಷ್ಟಿಯಿಂದ ಪ್ರೇರಿತವಾದದ್ದು ಈ ಮಾತು. ಯಾವ ಆಸ್ತಿಯ ಮೇಲಿನ ಸ್ವಾಮ್ಯವು ಬೇರೆಯವರ 'ದುಡಿಮೆ'ಯನ್ನು ಕೊಳ್ಳಲು ಶಕ್ತಿಯುತವಾದದ್ದೋ, ಯಾವುದು ಶೋಷಣೆಗೆ ಎಡೆಕೊಡುವಂತಹುದೋ ಆ ಆಸ್ತಿಯ ಮೇಲಿನ ಸ್ವಾಮ್ಯವನ್ನು 'ಸಮಾಜ'ವೇ ವಹಿಸಿ ಕೊಳ್ಳುತ್ತದೆ ಎಂದೇ ವಾಸ್ತವವಾದ ಅರ್ಥ. ಪ್ರಪ್ರಥಮವಾಗಿ ೧೮೪೮ರಲ್ಲಿ ಪ್ರಕಾಶಿತವಾದ ಮಾರ್ಕ್ಸ್-ಏಂಗಲ್ಸರ ಕಮ್ಯುನಿಸ್ಟ್ ಪಕ್ಷದ ಘೋಷಣಾಪತ್ರವೂ ಇದನ್ನೇ ಸ್ಪಷ್ಟಪಡಿಸುತ್ತದೆ.

*– ಅರುಣ : ಫೆಬ್ರವರಿ 1970*

# ಕಾರ್ಮಿಕ ಚಳುವಳಿಯ ಹಾದಿ

> ತನ್ನ ವರ್ಗದ ನಾಯಕತ್ವವಿರಬೇಕು ಎಂಬುದರ ಪ್ರಜ್ಞೆ ಇಲ್ಲದ ಅಥವಾ ಆ ತಿಳುವಳಿಕೆಯನ್ನು ತಳ್ಳಿಹಾಕಿದ ಕಾರ್ಮಿಕ ನಿಜಕ್ಕೂ ಒಬ್ಬ ಗುಲಾಮ. ಬಹಳ ಹೆಚ್ಚೆಂದರೆ ತನ್ನ ಗುಲಾಮಿತನದ ಅಸ್ತಿತ್ವವನ್ನು ಸ್ವಲ್ಪ ನವಿರುಗೊಳಿಸಿಕೊಳ್ಳಲು ಹೋರಾಡುವ ಗುಲಾಮ ಅವನು; ಗುಲಾಮಗಿರಿಯನ್ನು ನಿರ್ಮೂಲನಗೊಳಿಸಲು ಹೋರಾಡುವವನು ಅವನಲ್ಲ.
>
> **–ವಿ. ಐ. ಲೆನಿನ್**

ಸಂಘಟಿತ ಕಾರ್ಮಿಕ ಚಳುವಳಿಯ ಬಗೆಗಾಗಲಿ ಅಸಂಘಟಿತ ದುಡಿಯುವ ಜನರನ್ನು ಚಳುವಳಿಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದರಲ್ಲಾಗಲಿ ನನ್ನ ಅನುಭವ ಅತ್ಯಲ್ಪ. ಕೇವಲ ವೀಕ್ಷಕನಾಗಿ ಚಳುವಳಿ ಅಥವಾ ಚಳುವಳಿಗಳನ್ನು ಕುರಿತು ಏನನ್ನು ಹೇಳಹೊರಟರೂ ಅಂತಹ ವಿಶ್ಲೇಷಣೆಯಲ್ಲಿ ಅನೇಕ ಕೊರತೆಗಳಿರುವುದು ಸಹಜ. ೧೯೦೨ರಷ್ಟು ಹಿಂದೆಯೇ ಲೆನಿನ್ ತಮ್ಮ 'ಕರ್ತವ್ಯವೇನು ?' *(What is to be done ?)* ಎಂಬ ಕೃತಿಯಲ್ಲಿ ಇದನ್ನು ವಿಶ್ಲೇಷಿಸಿ ಒಂದು ಸೂಚನೆ ನೀಡಿದ್ದಾರೆ. ಅವರ ಮಾತುಗಳ ಹೀಗಿವೆ: ''ನೀವು ಭಾವಿಸಿರುವುದಕ್ಕಿಂತಲೂ ಹೆಚ್ಚಾಗಿ ನಾವು ಕಾರ್ಯನಿರತರಾಗಿದ್ದೇವೆ. ತಕ್ಷಣದಲ್ಲಿ ಪ್ರತಿಫಲ ದೊರೆಯಲಾರದಂತಹ ಸಂದರ್ಭಗಳಲ್ಲೂ ಹೋರಾಟಗಳನ್ನು ಬೆಂಬಲಿಸಿ, ಅವು ಬೀದಿಯ ಕಾಳಗಗಳಾಗಿ ಪರಿಣಮಿಸಿದರೂ ಅವನ್ನು ಮುಂದುವರಿಸುವ ಶಕ್ತಿ ನಮಗಿದೆ. ನಮ್ಮ ಚಟುವಟಿಕೆಗಳನ್ನು ಉಚ್ಚಮಟ್ಟಕ್ಕೇರಿಸುವುದು ನಿಮ್ಮ ಪಾಲಿಗೆ ಬಿಟ್ಟಿದ್ದಲ್ಲ; ಏಕೆಂದರೆ, ಪ್ರಥಮತಃ ನಿಮ್ಮಲ್ಲಿ ಕಂಡುಬಾರದ ಮುಖ್ಯಾಂಶವೆಂದರೆ, ಚಟುವಟಿಕೆ. ಅಯತ್ನಪೂರ್ವಕವಾಗಿ ಬೆಳವಣಿಗೆ ಯುಂಟಾಗುತ್ತದೆಂಬ ಮಿಥ್ಯಾವಾದಕ್ಕೆ ಶರಣಾಗುವುದನ್ನು ಬಿಟ್ಟು, ಮೊದಲಿಗೆ ನಿಮ್ಮ ಚಟುವಟಿಕೆಗಳನ್ನು ಉಚ್ಚಮಟ್ಟಕ್ಕೇರಿಸುವುದನ್ನು ಗಮನಿಸಿ, ಸ್ವಾಮಿ.'' ಆರ್ಥಿಕ ಪ್ರಶ್ನೆಗಳನ್ನು ಬಗೆಹರಿಸುವ ವಿಧಾನವೇನೆಂಬುದನ್ನು ಚರ್ಚಿಸುವಾಗ ಮಾರ್ಟಿನೋವ್ ಪಂಗಡಕ್ಕೆ ಲೆನಿನ್ ಕೊಟ್ಟ ಮುನ್ನೆಚ್ಚರಿಕೆ ಇದು. ದುಡಿಯುವ ವರ್ಗದ ಚಳುವಳಿಯ ಪಥವನ್ನು ಗುರುತಿಸಿ ಟೀಕಿಸುವಾಗೆಲ್ಲ ಈ ಮಾತುಗಳನ್ನು ಮನದಟ್ಟು ಮಾಡಿಕೊಳ್ಳುವುದೊಳ್ಳೆಯದು. ಮಾರ್ಕ್ಸ್‌ವಾದ ವನ್ನಾಧರಿಸಿ ಹೋರಾಟದ ಕಣಕ್ಕೆ ಇಳಿದಿರುವ ಚಳುವಳಿಗಳನ್ನೂ ರಾಜಕೀಯ ಪಕ್ಷಗಳನ್ನೂ ವಿಶ್ಲೇಷಿಸುವಾಗ ಅವುಗಳ ನ್ಯೂನತೆಗಳನ್ನೋ ತಪ್ಪು ಸಿದ್ಧಾಂತಗಳನ್ನೋ ಮೂದಲಿಸಿ ಕ್ರಾಂತಿಯ ಅಗತ್ಯವನ್ನು ಸಾರಿ ಹೇಳುವುದು ಅಷ್ಟೇನೂ ದುಷ್ಕರವಲ್ಲ. ಆ ನ್ಯೂನತೆಗಳನ್ನು ತೊಡೆದುಹಾಕು ವುದರಲ್ಲಿ ಸಕ್ರಿಯಪಾತ್ರ ವಹಿಸುವುದು ಮಾತ್ರ ಅಷ್ಟು ಸುಲಭದ ಮಾತಲ್ಲ.

ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿ ನಮ್ಮ ಅನಿಸಿಕೆಗಳಿಂದಲೇ ರೂಪಿತವಾಗುವುದಿಲ್ಲ. ಹಲವು ಶತಮಾನಗಳ ಕಾಲದಲ್ಲಿ ವಿಕಾಸಹೊಂದಿರುವ ಮಾನವ ಮತ್ತು ಮಾನವ ಸಮಾಜ ಇಚ್ಛಾಮಾತ್ರದಿಂದ ಬದಲಾಗಲಿಲ್ಲ, ಮುಂದೆಯೂ ಬದಲಾಗುವುದಿಲ್ಲ. ಸಂವಿಧಾನವನ್ನು ತಿದ್ದುಪಡಿ ಮಾಡಿ ಸಮಾಜವಾದಿ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವ ಚಿಟಿಕೆಯ ಮಾತು ಎಷ್ಟು ಬೆಲೆಯುಳ್ಳದ್ದೆಂದು ತಿಳಿದುಕೊಳ್ಳಲು ವಿಶೇಷ ಬುದ್ಧಿವಂತಿಕೆಯ ಅಗತ್ಯವಿಲ್ಲ. ಸಮಾಜ ಒಂದು

ಘಟ್ಟದಿಂದ ಇನ್ನೊಂದು ಉನ್ನತ ಘಟ್ಟಕ್ಕೇರಬೇಕಾದರೆ ಕಾರಣೀಭೂತವಾಗಿ ಮನುಷ್ಯನ ಸಂಕಲ್ಪದ ಜೊತೆಗೆ ಆವನ ಸಮಾಜ ರಚನೆ, ವಿವಿಧ ವರ್ಗಗಳ ಶಕ್ತಿ, ಉತ್ಪಾದನಾ ಸಾಮಗ್ರಿಗಳು, ಉತ್ಪಾದನೆಯ ಮಟ್ಟ, ಸಮಾಜಶಕ್ತಿಗಳ ನಡುವಣ ಪರಸ್ಪರ ವಿರೋಧಗಳ ಸ್ವರೂಪ ಇತ್ಯಾದಿಗಳೆಲ್ಲಾ ತಮ್ಮ ತಮ್ಮ ಪಾತ್ರ ವಹಿಸಿಯೇ ತೀರುತ್ತವೆ. ಅವನ್ನೆಲ್ಲಾ ಕಡೆಗಣಿಸಿ ಶೋಷಣೆಯ ಸ್ವರೂಪವನ್ನಾಗಲಿ ಅದನ್ನು ಅಂತ್ಯಗೊಳಿಸುವ ಮಾರ್ಗವನ್ನಾಗಲಿ ಅರಸುವುದು ಸಾಧ್ಯವಿಲ್ಲ.

ಈಚಿನ ದಿನಗಳಲ್ಲಿ ಸಂಘಟಿತ ಕಾರ್ಮಿಕ ಚಳುವಳಿಯನ್ನು ಹೀಯಾಳಿಸುವ ಸ್ವಾತಂತ್ರ್ಯದ ಉಪಯೋಗ ಜಾಸ್ತಿಯಾದಂತೆ ಕಾಣುತ್ತದೆ. ಅದಕ್ಕೆ ನಮ್ಮ ನಗರದ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಸಂಪಾದಕರಾದ ಗುರೂಜಿ ಶಿಷ್ಯರೂ* ಅವರ ಬುಡಕಟ್ಟಿನವರೂ ಮಾತ್ರವೇ ಕಾರಣವೆಂದು ಹೇಳಿ ಮುಗಿಸುವಂತಿಲ್ಲ. ನನ್ನಂತೆ ಅಧ್ಯಾಪಕರಾಗಿರುವ ಅನೇಕ ನನ್ನ ವೃತ್ತಿಬಾಂಧವರೂ ಅಂಥದೇ ಜಾಡಿನಲ್ಲಿ ನಡೆಯುವುದನ್ನು ಸ್ವತಃ ನಾನು ಕಂಡಿದ್ದೇನೆ. "ಟ್ರೇಡ್ ಯೂನಿಯನ್ ಮನೋಭಾವ" ಎಂಬುದೊಂದು ಮಹಾಪಾತಕವೆಂಬ ವೇದಾಂತವನ್ನು ಬೋಧಿಸುವವರಿಗೆ ನಮ್ಮಲ್ಲಿ ಕೊರತೆಯಿಲ್ಲ.

ಕಾರ್ಮಿಕ ಚಳುವಳಿಯನ್ನು ವಿಮರ್ಶಿಸುವವರು ಎರಡು ಭಿನ್ನ ಭಿನ್ನವಾದ ನಿಲುವುಗಳನ್ನು ತಳೆಯಲು ಸಾಧ್ಯ. ಒಂದು, ಈ ಚಳುವಳಿ ರಾಜಕೀಯ ಶಾಲೆಯಂತೆ ಕೆಲಸ ಮಾಡಬೇಕು; ದಿನನಿತ್ಯದ ಕೂಲಿನಾಲಿಯ ಸಮಸ್ಯೆಗಳನ್ನು ಬಗೆಹರಿಸುವಾಗ ಸಾಮಾಜಿಕ-ಆರ್ಥಿಕ ಕ್ರಾಂತಿಯತ್ತ ಧಾವಿಸುವುದಕ್ಕೆ ಅನುವಾಗುವ ರಾಜಕೀಯ ಸಿದ್ಧಾಂತವನ್ನು ಪ್ರಚುರಪಡಿಸಬೇಕು; ಹಾಗೆ ಮಾಡದಿದ್ದರೆ ಅದು ಚಳುವಳಿಯ ವೈಫಲ್ಯವನ್ನು ಸೂಚಿಸುತ್ತದೆಂಬ ನಿಲುವು. ಇನ್ನೊಂದು: ಸಂಘಟಿತರಾಗಿರುವ ಈ ಜನ ಚಳುವಳಿಗಳಲ್ಲಿ ತೊಡಗಿ ಸಮಾಜಕಂಟಕರಾಗಿದ್ದಾರೆ. ಇವರ ಉಪಟಳವನ್ನು ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಈ ಚಳುವಳಿಗಳಲ್ಲಿ ಭಾಗವಹಿಸಲು ರಾಜಕೀಯ ಪಕ್ಷಗಳು ಮುಂಬರಬಾರದು, ಎಂಬ ನಿಲುವು. ಮೂಲಭೂತವಾಗಿ ಸಮಾಜದ ಬೆಳವಣಿಗೆ ಯಾವ ದಿಕ್ಕಿನಲ್ಲಿ ಸಾಗಬೇಕೆಂಬುದರ ಕಲ್ಪನೆಯ ವ್ಯತ್ಯಾಸದಿಂದ ತೋರಿಬರುವ ನಿಲುವುಗಳಿವು ಎಂದು ಸಾಮಾನ್ಯವಾಗಿ ಹೇಳಬಹುದು.

ಇದೇನೂ ನಮ್ಮ ದೇಶಕ್ಕೆ ಮಾತ್ರ ಸೀಮಿತವಾದ ಅಥವಾ ಇತ್ತೀಚಿನ ವರ್ಷಗಳಲ್ಲಿ ಆವಿರ್ಭೂತವಾಗಿರುವ ಸಮಸ್ಯೆಯಲ್ಲ. ಕೆಲಸಗಾರರನ್ನು ಇಬ್ಭಾಗವಾಗಿ ಅಥವಾ ಹಲವಾರು ಭಾಗಗಳನ್ನಾಗಿ ವಿಂಗಡಿಸಿ ಒಂದು ಭಾಗದವರಿಗೂ ಮತ್ತೊಂದು ಭಾಗದವರಿಗೂ ಯಾವ ಸಂಬಂಧವೂ ಇಲ್ಲ ಮತ್ತು ಇರಲಾರದು ಎಂಬ ಮಾತುಗಳನ್ನು ಪದೇ ಪದೇ ಹೇಳುವುದು ಬಂಡವಾಳಶಾಹಿ ಪದ್ಧತಿಯ ಅಸ್ತಿತ್ವಕ್ಕೆ ಸಹಕಾರಿಯಾಗುತ್ತದಾದ್ದರಿಂದ ಅಂತಹ ಸಿದ್ಧಾಂತಕ್ಕೆ ಸೊಪ್ಪು ಹಾಕಬೇಕಾದ್ದು ಬಂಡವಾಳಶಾಹಿಯ ಧರ್ಮ. ರೈತಕಾರ್ಮಿಕ ವರ್ಗವು ಎಂದಿದ್ದರೂ ಅಧಿಕಾರಕ್ಕೆ ಬಂದು ಸಮಾಜವಾದಿ ಪದ್ಧತಿಯನ್ನು ನಿರ್ಮಿಸುವುದು ಚಾರಿತ್ರಿಕವಾಗಿ ಅನಿವಾರ್ಯವಾಗಿದ್ದರೂ ಸಹ ಆ ವರ್ಗವು ಶೋಷಕವರ್ಗದ ವಿರುದ್ಧ ಹೋರಾಟವನ್ನು ನಿರಂತರವಾಗಿ ನಡೆಸಿದಮೇಲೆಯೇ ಅದು ಸಾಧ್ಯವಾಗಬಲ್ಲದು. ಈ ಹೋರಾಟದ ತೀವ್ರತೆಯನ್ನು ಕುಗ್ಗಿಸಿ ತನ್ನ ಜೀವವನ್ನು ಹಿಡಿದಿಟ್ಟುಕೊಂಡಿರಲು ಬಂಡವಾಳಶಾಹಿಯು ಪ್ರತಿನಿಮಿಷದಲ್ಲೂ ಪ್ರಯತ್ನಿಸುತ್ತದೆ. ಅದಕ್ಕಾಗಿ ಉಪಯೋಗಿಸಲಾಗುವ ತಂತ್ರದಲ್ಲಿರುವ

---

* ಇದು 1978ರಲ್ಲಿ ಬರೆಯಲಾದ ಲೇಖನವೆಂದು ಗಮನಿಸಬೇಕು.

ವೈವಿಧ್ಯದಿಂದಾಗಿ ಕೆಲವೊಮ್ಮೆ ಆ ತಂತ್ರದ ಹಿಂದೆ ಅಡಕವಾಗಿರುವ ಮೋಸದ ಮರ್ಮವನ್ನು ಸುಲಭವಾಗಿ ಗ್ರಹಿಸಲಾಗುವುದಿಲ್ಲ.

ಇದಕ್ಕಿಂತಲೂ ಸೂಕ್ಷ್ಮವಾದ ಮರ್ಮವಿರುವುದು ಸಂಘಟಿತ ಕಾರ್ಮಿಕರ ಚಳುವಳಿಯು ಅಸಂಘಟಿತ ಕಾರ್ಮಿಕರ ಹಿತಕ್ಕೆ ಧಕ್ಕೆಯನ್ನುಂಟುಮಾಡುತ್ತದೆಂಬ ಕೂಗಿನಲ್ಲಿ. ಈ ಸಂದರ್ಭದಲ್ಲಿ, ಔದ್ಯಮಿಕ ಕ್ಷೇತ್ರದಲ್ಲಿ ದುಡಿಯುವವರು ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಮಾರಕವಾಗಿದ್ದಾರೆಂಬ ಜಾಣತನದ ಮಾತನ್ನು ನಮ್ಮ ಮುಂದಿಡಲಾಗುತ್ತದೆ. ಕೆಲವು ಅಂಕಿ-ಅಂಶಗಳ ಮಂತ್ರಜಾಲದಿಂದ ಇದೆಲ್ಲಾ ಸಂಪೂರ್ಣವಾಗಿ ಸತ್ಯವೆಂಬ ಭ್ರಮೆಯನ್ನುಂಟು ಮಾಡುವುದರಲ್ಲಿ ಕೆಲವರು ಪ್ರಾವೀಣ್ಯ ಪಡೆದಿದ್ದಾರೆ. ಈ ಎಲ್ಲ ಸಂದರ್ಭಗಳಲ್ಲೂ ಗಣನೆಗೆ ಬಾರದ ಒಂದು ಪ್ರಮುಖ ಸತ್ಯವಿದೆ. ಅದೆಂದರೆ, ನಮ್ಮ ಸಾಮಾಜಿಕ-ಆರ್ಥಿಕ ವ್ಯವಸ್ಥೆ, ಉತ್ಪಾದನಾ ಸಾಮಗ್ರಿಗಳ ಮೇಲಣ ಹತೋಟಿ, ಲಾಭಬಡುಕತನದ ಯಥೇಚ್ಛ ತಾಂಡವ, ಏಕಸ್ವಾಮ್ಯದ ಹೆಚ್ಚುತ್ತಿರುವ ಪ್ರಭಾವ, ನವವಸಾಹತುಶಾಹಿಯ ಉದ್ಭವ, ಇತ್ಯಾದಿ. ಅಸಂಘಟಿತರಾಗಿರುವ ದುಡಿಯುವ ಜನರನ್ನು ಸಂಘಟಿಸದಿರುವುದು ಈಗಾಗಲೇ ಸಂಘಟಿತ ರಾಗಿರುವವರು ಎಸಗಿರುವ ಅಪರಾಧವೆಂದು ಬೇಕಾದರೆ ಒಪ್ಪೋಣ. ಆದರೆ ಸಂಘಟಿತ ರಾಗಿರುವವರು ಈ ಕ್ಷಣದಲ್ಲಿ ಅಸಂಘಟಿತರಾದರೆ, ಎಲ್ಲ ಅಸಂಘಟಿತರ ಸಮಸ್ಯೆಗಳಿಗೂ ಪರಿಹಾರ ದೊರಕುತ್ತದೆಯೇ ? ಎರಡನೆಯದಾಗಿ, ಈಗ ಅಸಂಘಟಿತ ರಾಗಿರುವವರ ಬಗ್ಗೆ ಮೊಸಳೆಯ ಕಣ್ಣೀರನ್ನು ಸುರಿಸುವ ನಮ್ಮ ಸಮಾಜ ಸುಧಾರಕರು ಅವರನ್ನೇಕೆ ಸಂಘಟಿಸಿ ಅವರ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸಬಾರದು ? ಇದು ಸಂಘಟಿತರ-ಅಸಂಘಟಿತರ ಪ್ರಶ್ನೆಯಲ್ಲ; ಇದು ನಮ್ಮ ಆರ್ಥಿಕ ಅನೀತಿಯ ಪ್ರಶ್ನೆ, ಸಮಾಜವಾದದ ವಿರೋಧದ ಪ್ರಶ್ನೆ, ನೂತನ ಜೀವನ ಸಿದ್ಧಾಂತಗಳನ್ನು ಅಲ್ಲಗಳೆಯುವ ಪ್ರಶ್ನೆ. ಬೇರಾವ ಆಸ್ತಿಯೂ ಇಲ್ಲದೆ ದುಡಿಮೆ ಯೊಂದನ್ನೇ ಮಾರಿ ಜೀವಿಸಬೇಕಾದ ಅಸಂಖ್ಯಾತರು ನಮ್ಮಲ್ಲಿ ನಿರುದ್ಯೋಗದ ಬವಣೆಗೆ ಸಿಲುಕಿ ನರಳುತ್ತಿದ್ದಾರೆ. ಜನಸಂಖ್ಯೆಯ ಶೇಕಡ ನಲವತ್ತರಷ್ಟು ಮಂದಿ ಬಡತನದಲ್ಲಿದ್ದಾರೆ. ನೆಲೆ, ಕಾಣಿ ಇಲ್ಲದ ಅಶಕ್ತರಿಗೆ ಕೊಡಲಾಗುತ್ತಿರುವ ಹಿಂಸೆಗೆ ಪಾರವಿಲ್ಲ. ಇವನ್ನೆಲ್ಲ ದುರಸ್ತಿ ಮಾಡಬಾರದೆಂದು ಯಾವ ಕಾರ್ಮಿಕ ಚಳುವಳಿ ನಮ್ಮ 'ಪ್ರಜಾಪ್ರಭುತ್ವವಾದಿ' ಸರ್ಕಾರಗಳಿಗೆ ಆದೇಶ ನೀಡಿತ್ತೋ ನನಗೆ ತಿಳಿಯದು. ಬೆಲೆಗಳನ್ನು ಏರದಂತೆ ತಡೆಹಿಡಿಯಕೂಡದೆಂದು ಸಂಘಟಿತ ಕಾರ್ಮಿಕರು ಆಗ್ರಹಪಡಿಸಿದರೆಂದು ಏಕೆ ಹೇಳುವುದಿಲ್ಲವೋ ನಾನು ಕಾಣೆ! "ತುಟ್ಟಿಭತ್ಯ ಜಾಸ್ತಿ ದೊರಕಲೆಂಬ ಕಾರಣದಿಂದ ಸಂಘಟಿತ ಕಾರ್ಮಿಕರು ಬೆಲೆಗಳ ಏರುವಿಕೆಯನ್ನೇ ಅಪೇಕ್ಷಿಸುತ್ತಾರೆ", ಎಂಬ ನವೀನತರ್ಕ ಭೂತಲಿಂಗಂ ವರದಿಯ ನಂತರ ಬಂದರೆ ಆಶ್ಚರ್ಯಪಡಬೇಕಾಗಿಲ್ಲ. ಕಾರ್ಮಿಕರಿಗೆ ವೇತನ ರೂಪದಲ್ಲಿ ರಾಷ್ಟ್ರೀಯ ವರಮಾನದ ಎಷ್ಟು ಭಾಗ ನೀಡಲಾಗುತ್ತದೆ ಮತ್ತು ತದ್ವಿರುದ್ಧವಾಗಿ ಭಾರಿ ಉದ್ದಿಮೆಗಳಲ್ಲಿ ತೊಡಗಿರುವ ಸಂಸ್ಥೆಗಳು ಆ ವರಮಾನದ ಎಷ್ಟು ಭಾಗವನ್ನು ಲಾಭದ ರೂಪದಲ್ಲಿ ಪಡೆಯುತ್ತಿದ್ದಾರೆಂಬುವ ಪ್ರಶ್ನೆಗಳ ಗೋಜಿಗೆ ಹೋಗದೆ ಸಂಘಟಿತ ಕಾರ್ಮಿಕರು ನಮ್ಮೆಲ್ಲ ಸಮಸ್ಯೆಗಳಿಗೂ ಕಾರಣರೆಂಬುವ ಕುತರ್ಕ ನಮ್ಮನ್ನು ಅಷ್ಟಾಗಿ ಬಾಧಿಸಬೇಕಾಗಿಲ್ಲ. ಕಾರ್ಮಿಕರ ಉತ್ಪಾದನಾ ಸಾಮರ್ಥ್ಯ ಎಷ್ಟರಮಟ್ಟಿಗೆ ಹೆಚ್ಚಿದೆಯೋ ಅಷ್ಟರಮಟ್ಟಿಗೆ ಅವರ ವೇತನಗಳ ಏರಿಕೆಯಾಗಿಲ್ಲವೆಂಬುದನ್ನು ಅಧಿಕೃತ ಸರ್ಕಾರಿ ವಕ್ತಾರರೂ ಒಪ್ಪಿಕೊಂಡಿದ್ದಾರೆ. ೧೯೭೨ರಿಂದ ೧೯೭೫ರವರೆಗಿನ ವರ್ಷಗಳಲ್ಲಿ ಕೆಲವು ಬಂಡವಳಿಗ ಸಂಸ್ಥೆಗಳ ಲಾಭದ ಗಳಿಕೆ ಏರಿರುವುದು ವಿಸ್ಮಯಕಾರಕವಾಗಿದೆ. ಉದಾಹರಣೆಗೆ, ಕಿರ್ಲೋಸ್ಕರ್ ಸಂಸ್ಥೆಯು ೧೯೭೫ರಲ್ಲಿ ೧೯೭೨ರ

ಮಟ್ಟಕ್ಕಿಂತ ಶೇಕಡಾ ೬೬೩ರಷ್ಟು ಹೆಚ್ಚಿನ ಲಾಭವನ್ನು ಗಳಿಸಿದೆ; ಬಿರ್ಲಾ ಸಂಸ್ಥೆಯದು ಶೇಕಡಾ ೧೯೦ರಷ್ಟು ಹೆಚ್ಚಿದೆ. ಸಿಂಡಿಯಾ ಸಂಸ್ಥೆಯದು ಶೇಕಡಾ ೩೦೦ಕ್ಕಿಂತಲೂ ಹೆಚ್ಚಾಗಿ ಏರಿದೆ. ಇದೇ ರೀತಿಯಲ್ಲಿ ಒಟ್ಟು ಆಸ್ತಿಯಲ್ಲೂ ಏರಿಕೆ ಯಥೇಚ್ಛವಾಗಿ ಆಗಿದೆ. ಆದಾಯ ತೆರಿಗೆ ಪಾವತಿ ಯಾಗದೆ ಉಳಿದಿರುವುದನ್ನು ಗಮನಿಸಿದರೆ ನಮಗೆ ದೊರಕುವ ಚಿತ್ರ ಇದಕ್ಕೆ ಭಿನ್ನವಾಗಿಲ್ಲ. ಈ ಗಳಿಕೆಗಳನ್ನು ನಿಯಂತ್ರಿಸಿ ಅಸಂಘಟಿತರಾದ ದುಡಿಯುವ ಜನ ಅನುಭವಿಸುತ್ತಿರುವ ಪರಿತಾಪವನ್ನು ನೀಗಲು ಸರ್ಕಾರ ಸೂಕ್ತವಾದ ನೀತಿಯನ್ನು ಕೈಗೊಂಡಿದ್ದಿದ್ದರೆ ಅಥವಾ ಇನ್ನು ಮುಂದೆ ಕೈಗೊಳ್ಳುವುದಾದರೆ ಸಂಘಟಿತ ಕಾರ್ಮಿಕ ವರ್ಗ ಯಾವ ರೀತಿಯಲ್ಲೂ ಅಡ್ಡಿ ಬರುತ್ತಿರಲಿಲ್ಲ, ಬರುವುದಿಲ್ಲ. ಅದಕ್ಕೆ ಅನುವಾಗುವಂತಹ ಆರ್ಥಿಕ ನೀತಿಗಳನ್ನು ರೂಪಿಸ ಬೇಕೆಂಬುದು ಸಂಘಟಿತ ಕಾರ್ಮಿಕರ ಪ್ರಮುಖವಾದುದೊಂದು ಬೇಡಿಕೆಯಾಗಿದೆ. ಆ ಬಗ್ಗೆ ಈಗಾಗಲೇ ಸಂಘಟಿತ ಕಾರ್ಮಿಕರು ಸಾಕಷ್ಟು ಪ್ರಬಲವಾಗಿ ಹೋರಾಟಕ್ಕಿಳಿದಿಲ್ಲವೆಂಬುದನ್ನು ಒಪ್ಪಬಹುದಾದರೂ ಅವರು ಪ್ರತಿಷೇಧವಾವುದನ್ನೂ ಒಡ್ಡಿಲ್ಲವೆಂಬುದೂ ಅಷ್ಟೇ ನಿಜ. ಉತ್ಪಾದಕ ಸಾಮಗ್ರಿಗಳ ಖಾಸಗಿ ಹತೋಟಿಯಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ದುಡಿಯುವ ಜನ ವಿವಿಧ ಸ್ತರಗಳಿಗೆ ಸೇರಿರುವುದು ಸಹಜ ಹಾಗೂ ಅನಿವಾರ್ಯ. ಆದ್ದರಿಂದ ಯಾವೊಂದು ವಿಭಾಗದ ದುಡಿಯುವ ಜನವೇ ಆಗಲಿ ಈಗಿರುವುದಕ್ಕಿಂತಲೂ ಹೆಚ್ಚಿನ ಸೌಲಭ್ಯವನ್ನಪೇಕ್ಷಿಸಿದರೂ ಬೇರೊಂದು ವಿಭಾಗದತ್ತ ಕೈತೋರಿಸಿ ಆ ವಿಭಾಗದೊಂದಿಗಿರುವ ತಾರತಮ್ಯವನ್ನು ಎತ್ತಿಹಿಡಿಯಬಹುದು. ನಿರುದ್ಯೋಗಿಗಿಂತಲೂ ಅಲ್ಪೋದ್ಯೋಗಿಯಾಗಿರು ವವನ ಸ್ಥಿತಿ ಮೇಲಾದ್ದು; ಅವನಿಗಿಂತಲೂ ಪೂರ್ಣೋದ್ಯೋಗಿ ಇನ್ನೂ ಮೇಲು; ಪೂರ್ಣೋದ್ಯೋಗಿಗಳಲ್ಲೂ ಅಂತರವಿರುವುದು ಪ್ರತ್ಯಕ್ಷ ಗಮ್ಯ. ಆದರೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇವರೆಲ್ಲಾ ಶೋಷಿತರೇ. ಇದಕ್ಕಿರುವ ಪರಿಹಾರ ಮಾರ್ಕ್ಸ್ ಸೂಚಿಸಿದಂತೆ ಒಂದೇ: ''ದುಡಿಮೆಗೆ ತಕ್ಕಂತೆ ನ್ಯಾಯಯುತವಾದ ದಿನಗೂಲಿಗೆ ಬದಲು ಕೂಲಿಯ ದಾಸ್ಯತ್ವದ ನಿರ್ಮೂಲನ.'' (Inscribe on your banners not 'a fair wage for a fair day's labour', but 'abolition of wage slavery'). ಬಂಡವಾಳಶಾಹಿಯ ದುಷ್ಟಜಂತುಗಳು ಈ ಮಾರ್ಗವನ್ನನುಸರಿಸುವುದರ ಬದಲು ಸಂಘಟಿತ ಕಾರ್ಮಿಕರನ್ನು ದೂರುವುದರಿಂದ ತಮ್ಮ ಅನೈತಿಕತೆಯನ್ನು ಮರೆಮಾಚಲು ಸಾಧ್ಯವಾಗುವುದಿಲ್ಲ. ಅಖಿಲ ಭಾರತ ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಅಧ್ಯಾಪಕ ಸಂಘಗಳ ಫೆಡರೇಷನ್ ಈಗ ಮೂರು ವರ್ಷಗಳ ಹಿಂದೆ ಅಸ್ಸಾಮಿನ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ಯು.ಜಿ.ಸಿ. ವೇತನಶ್ರೇಣಿಯನ್ನು ತಮ್ಮ ರಾಜ್ಯದಲ್ಲಿ ಜಾರಿಮಾಡಬೇಕೆಂದು ಕೇಳಿದಾಗ ಅವರು ನೀಡಿದ ಉತ್ತರ ಇದು: ''ಅದು ಸಾಧ್ಯವಿಲ್ಲ: ಏಕೆಂದರೆ ನಮ್ಮ ರಾಜ್ಯದಲ್ಲಿ ಬಡಜನರ ಸಂಖ್ಯೆ ಹೇರಳವಾಗಿದೆ. ವಿವಿಧ ಬುಡಕಟ್ಟುಗಳ ಜನಾಂಗಗಳವರೂ ಹಿಂದುಳಿದಿದ್ದಾರೆ. ಅವರ ಪ್ರಗತಿ ಯಾಗುವವರೆಗೆ ಬೇರೆ ವಿಭಾಗಗಳ ವೇತನ ಹೆಚ್ಚಿಸಲಾಗುವುದಿಲ್ಲ.'' ನಮ್ಮ ಫೆಡರೇಷನ್ನಿನ ಅಸ್ಸಾಂ ಘಟಕದ ಪ್ರತಿಕ್ರಿಯೆ ಹೀಗಿತ್ತು: ''ಇದನ್ನು ಸಾರ್ವತ್ರಿಕವಾದ ತತ್ವವನ್ನಾಗಿ ಮಾಡಿ ಆರ್ಥಿಕ ಕಾರ್ಯಕ್ರಮ ರೂಪಿಸುವುದಾದರೆ ಅಡ್ಡಿಯಿಲ್ಲ; ಆದರೆ ಇದು ನಮ್ಮ ಬೇಡಿಕೆಯನ್ನು ತಿರಸ್ಕರಿಸಲು ಮಾತ್ರ ಉಪಯೋಗಿಸಲಾಗುವ ಶುಷ್ಕತರ್ಕ. ಸರ್ವಥಾ ಅದು ನಿಮ್ಮ ತಾತ್ವಿಕ ಸಿದ್ಧಾಂತವಾಗಿರುವುದಾದರೆ, ಸಮಿತಿಯೊಂದನ್ನು ರಚಿಸಿ, ಅದಕ್ಕೆ ಸರಿಹೊಂದುವ ಯೋಜನೆ ಗಳನ್ನು ರಚಿಸೋಣ.'' ಅಸ್ಸಾಂ ಸರ್ಕಾರ ಅದಕ್ಕೆ ಸಿದ್ಧವಿರಲಿಲ್ಲ. ಇಂದಿನ ಆಳುವ ವರ್ಗವನ್ನು ಪ್ರತಿನಿಧಿಸುವ ಯಾವ ಸರ್ಕಾರವೂ ಅದನ್ನೊಪ್ಪುವುದಿಲ್ಲ! ಕಡು ಬಡತನದಲ್ಲಿ ತೊಳಲುತ್ತಿರುವ

ರಾಷ್ಟ್ರದ ಶೇಕಡಾ ೪೦ರಷ್ಟು ಜನಸಂಖ್ಯೆಯ ಜೀವನ ಉತ್ತಮವಾಗಲು ಬೇಕಾದ ಆಮೂಲಾಗ್ರ ಆರ್ಥಿಕ ಪರಿವರ್ತನೆಗೆ ಯೋಜನೆ ತಯಾರಿಸಿ ಅದಕ್ಕೆ ತಕ್ಕಂತೆ ಕಾರ್ಯನಿರತರಾಗುವುದಾದರೆ ಯಾವ ಸರ್ಕಾರವನ್ನೂ ಸಂಘಟಿತ ಕಾರ್ಮಿಕರು ವಿರೋಧಿಸಬೇಕಾಗುವುದಿಲ್ಲ. ಬೆಲೆಗಳ ಏರಿಕೆಯನ್ನು ತಡೆಹಿಡಿದು, ಉತ್ಪಾದನಾ ಸಾಮಗ್ರಿಗಳನ್ನು ಸಾಮಾಜಿಕ ಸ್ವಾಮ್ಯಕ್ಕೆ ಗುರಿಪಡಿಸಿ, ಲಾಭಕೋರ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸುವುದು ಅದಕ್ಕಿರುವ ಏಕೈಕ ಮಾರ್ಗ. ಸಮಾಜವಾದವನ್ನು ತತ್ವಶಃ ಒಪ್ಪದಿರುವ ಕಾರ್ಮಿಕ ಸಂಘಟನೆಗಳು ನಮ್ಮಲ್ಲಿವೆ ಯಾದರೂ ಇಂತಹ ಬೆಳವಣಿಗೆಗೆ ಅಡ್ಡಿಯುಂಟುಮಾಡುವಷ್ಟು ಶಕ್ತವಾಗಿಲ್ಲ ಅವು. ಆದ್ದರಿಂದ ಇಂತಹ ಕಾರ್ಯಕ್ರಮಕ್ಕೆ ಸಂಘಟಿತ ಕಾರ್ಮಿಕ ವರ್ಗ ಒಂದು ಅಡಚಣೆಯಲ್ಲ.

ಇನ್ನು ಹಳ್ಳಿ ಮತ್ತು ದಿಲ್ಲಿಗಳ ನಡುವಣ ಅಂತರದ ಪ್ರಶ್ನೆ. ಅದೂ ಸಂಘಟಿತ-ಅಸಂಘಟಿತ ವಿಭಾಗಗಳ ನಡುವಣ ಘರ್ಷಣೆಯ ಮಾದರಿಯಲ್ಲೇ ನಮ್ಮ ಮುಂದಿಡಲಾಗುತ್ತದೆ. 'ಹಸಿರು ಕ್ರಾಂತಿ'ಯ ವ್ಯಂಗ್ಯ ಕತೆ ನಮ್ಮ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ. ಈ ದಾರುಣ ಕ್ರಾಂತಿಯಿಂದ ಹಳ್ಳಿಯ ಯಾವ ವಿಭಾಗದ ಜನ ಲಾಭ ಪಡೆದರೆಂಬುದು ಸರ್ವವಿದಿತ. ಹಸಿರು ಕ್ರಾಂತಿಯ ಆವೇಶದ ಫಲವಾಗಿ ಹಳ್ಳಿಗಳಲ್ಲಿ ಹರಿಜನರ ಕೆಂಪು ರಕ್ತ ಹರಿಯುವುದೇನೂ ನಿಂತಿಲ್ಲ. ಔದ್ಯೋಗಿಕ ಕ್ಷೇತ್ರದಲ್ಲಿ ಹೇಗೆ ಉತ್ಪಾದನಾ ಸಾಮಗ್ರಿಗಳ ಮೇಲಿನ ಸ್ವಾಮ್ಯ ಬಂಡವಾಳಶಾಹಿ ಪ್ರವೃತ್ತಿಯಿಂದಾಗಿ ಏಕಸ್ವಾಮ್ಯವಾಗಿ ಪರಿವರ್ತಿತವಾಗುತ್ತಿದೆಯೋ ಹಾಗೆ ಕೃಷಿಕ್ಷೇತ್ರದಲ್ಲೂ ನಡೆಯುತ್ತಿದೆ. ಈ ಎರಡೂ ಕ್ಷೇತ್ರಗಳಲ್ಲಿ ನಡೆಯುವ ಶೋಷಣೆಯಲ್ಲಿ ವಿವಿಧ ಶ್ರೇಣಿಗಳಿರಬಹುದು. ಆದರೆ ಸ್ವರೂಪದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಕೃಷಿಕ್ಷೇತ್ರದಲ್ಲಿ ಇಂದಿನ ವ್ಯವಸ್ಥೆ ಬದಲಾಗಿ ಭೂಸ್ವಾಮ್ಯದ ಪ್ರಶ್ನೆ ಇತ್ಯರ್ಥವಾಗದ ಹೊರತು ಸಾಮಾಜಿಕ-ಆರ್ಥಿಕ ಜೀವನದಲ್ಲಿ ಸಮಾಧಾನಕಾರಕವಾದ ಬದಲಾವಣೆ ಸಾಧ್ಯವಾಗದು. ಈ ಸಂದರ್ಭದಲ್ಲಿ ಇತಿಹಾಸದ ಒಂದು ಘಟನೆಯನ್ನು ಸ್ಮರಿಸಲಿಚ್ಛಿಸುತ್ತೇನೆ. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಪಟ್ಟಣಗಳಲ್ಲಿ ಜೀವನ ಬದಲಾಯಿತು, ಆದರೆ ಹಳ್ಳಿಗಳಲ್ಲಿ ಪರಿಸ್ಥಿತಿ ಯಾವ ರೀತಿಯಲ್ಲೂ ಸುಧಾರಿಸಿಲ್ಲವೆಂದು ೧೯೨೯ರಲ್ಲಿ, ಅಂದರೆ ಕ್ರಾಂತಿಯ ಹನ್ನೆರಡು ವರ್ಷಗಳ ನಂತರ, ಕೆಲವು ಆರ್ಥಿಕ ತಜ್ಞರು ತಮ್ಮ ಅಭಿಪ್ರಾಯವನ್ನು ರಷ್ಯಾದಲ್ಲಿ ಸೂಚಿಸಿದ್ದರು. ಅವರ ಸೂಚ್ಯಾರ್ಥವಿಷ್ಟೆ: ಔದ್ಯೋಗಿಕ ಕ್ಷೇತ್ರದ ಸಂಘಟಿತ ಕಾರ್ಮಿಕರು ಕೃಷಿಕ್ಷೇತ್ರದ ಅಷ್ಟು ಸಂಘಟಿತರಲ್ಲದವರಿಗಿಂತ ಹೆಚ್ಚು ಅನುಕೂಲ ಪಡೆದಿದ್ದಾರೆ. – ಡಿಸೆಂಬರ್ ೧೯೨೯ರಲ್ಲಿ ಇದನ್ನು ದೀರ್ಘವಾಗಿ ಪ್ರಸ್ತಾಪಿಸಿದ ಸ್ಟಾಲಿನ್ ತಮ್ಮ ಒಂದು ವಿಶ್ಲೇಷಣೆಯಲ್ಲಿ ಈ ವಾದದ ಅಯಥಾರ್ಥತೆಯನ್ನು ಎತ್ತಿ ತೋರಿಸಿದರು. ಅದಕ್ಕೆ ಅವರು ನೀಡಿದ ಅಂಕಿ-ಅಂಶಗಳು ಗಮನಾರ್ಹವಾಗಿವೆ : ಕ್ರಾಂತಿಯ ಮುನ್ನ ಒಂದು ವರ್ಷದಲ್ಲಿ ಜಮೀನ್ದಾರರು ಉತ್ಪಾದಿಸಿದ್ದ ಒಟ್ಟು ಆಹಾರಧಾನ್ಯ ೬೦ ಕೋಟಿ ಪೂಡ್‌ಗಳು. ೧೯೨೭ರಲ್ಲಿ ಅವರು ಉತ್ಪಾದಿಸಿದ್ದು ಸೊನ್ನೆ ಪೂಡ್‌ಗಳು. – ಕಾರಣ : ಜಮೀನ್ದಾರರು ಆಗ್ಗೆ ಅಸ್ತಿತ್ವದಲ್ಲೇ ಇರಲಿಲ್ಲ. ಕ್ರಾಂತಿಯ ಮುನ್ನ ಭಾರಿ ರೈತರು (ಕುಲಕ್‌ಗಳೆಂದು ಹೆಸರಾಗಿದ್ದವರು) ಉತ್ಪಾದಿಸಿದ್ದ ಆಹಾರಧಾನ್ಯ ೧೯೦ ಕೋಟಿ ಪೂಡ್‌ಗಳು; ೧೯೨೭ರಲ್ಲಿ ೪೦೦ ಕೋಟಿ ಪೂಡ್‌ಗಳು. ಕ್ರಾಂತಿಯ ನಂತರದಲ್ಲಿ ರೈತಾಪಿ ಜನರ ಉತ್ಪಾದನಾ ಸಾಮರ್ಥ್ಯ ಹೆಚ್ಚಿದ್ದುದು ನಿರ್ವಿವಾದವಾಗಿತ್ತು. ಅದು ಕೇವಲ ಅಧಿಕ ಬಂಡವಾಳದ ಹೂಡಿಕೆಯಿಂದ ಉಂಟಾಗಿದ್ದ ಬದಲಾವಣೆಯಲ್ಲ; ವ್ಯವಸ್ಥೆಯ ಬದಲಾವಣೆಯಿಂದ ಉಂಟಾಗಿದ್ದ ಪರಿಣಾಮ ಅದು. ನಮ್ಮ ಮುಂದಿರುವ ಇಂದಿನ ಪ್ರಶ್ನೆ ಇದೇ: ಅಧಿಕ ಬಂಡವಾಳದ ಹೂಡಿಕೆಯನ್ನು ಇಂದಿನ ವ್ಯವಸ್ಥೆಯಲ್ಲೇ ಮಾಡುವುದಾದರೆ ಅದರಿಂದ

ನಿರ್ಗತಿಕ ಮತ್ತು ಸಣ್ಣ ಪುಟ್ಟ ರೈತರ ಹಿತದ ರಕ್ಷಣೆ ಪರಿಣಾಮಕಾರಿಯಾಗಬಲ್ಲುದೆ? ಕೃಷಿಕ್ಷೇತ್ರದಲ್ಲಿ ಜನಸಂಖ್ಯೆಯ ಹೆಚ್ಚುಭಾಗ ನಿರತರಾಗಿರುವುದರಿಂದ ಅಸಂಘಟಿತ ವಿಭಾಗವೂ ಆ ಕ್ಷೇತ್ರದಲ್ಲಿಯೇ ಹೆಚ್ಚಾಗಿದೆ. ಅಲ್ಲಿ ಸಂಘಟನೆ ಸಮಗ್ರವಾಗಿ ಬೆಳೆಯದಿರುವುದು ನಮ್ಮ ರಾಜಕೀಯ ಪಕ್ಷಗಳ ಕಾರ್ಯಕ್ರಮದ ಲೋಪವೆಂಬುದನ್ನು ಒಪ್ಪಬೇಕು. ಆದರೆ ಸಂಘಟಿತ ರಿಂದಾಗಿ ಅಸಂಘಟಿತರ ಶೋಷಣೆ ನಡೆಯುತ್ತದೆಂಬುದನ್ನು ತಿರಸ್ಕರಿಸಬೇಕಾಗುತ್ತದೆ ಮಾತ್ರ. ಅಲ್ಲಿಯೂ ಸಂಘಟನೆ ಬೇಕಾಗಿರುವುದು ವ್ಯವಸ್ಥೆಯ ಮೂಲಭೂತ ಬದಲಾವಣೆಯನ್ನುಂಟು ಮಾಡುವ ಸಲುವಾಗಿಯೇ ಹೊರತು ಸಂಘಟಿತರನ್ನು ವಿರೋಧಿಸುವುದಕ್ಕಾಗಿಯಲ್ಲ.

ಅಸಂಘಟಿತರನ್ನು ಸಂಘಟಿಸುವುದರಲ್ಲಿ ಮತ್ತು ಸಂಘಟಿತರ ಮೂಲಧ್ಯೇಯವನ್ನು ಪ್ರಚುರ ಪಡಿಸುವುದರಲ್ಲಿ ಇಂದು ಅನೇಕ ನ್ಯೂನತೆಗಳನ್ನು ಗುರುತಿಸಲು ಶಕ್ಯವಿದೆ. ಸೈದ್ಧಾಂತಿಕವಾಗಿ ಈ ಸಂಘಟನೆಗಳನ್ನು ಬೆಳೆಸುವುದರಲ್ಲಿರುವ ಸಮಸ್ಯೆಗಳನ್ನು ನಾನಿಲ್ಲಿ ಪ್ರಸ್ತಾಪಿಸುವುದಿಲ್ಲ. ಸಂಘಟಿತ ಕಾರ್ಮಿಕರ ಹೋರಾಟವು ರಾಜಕೀಯ ಪ್ರಶ್ನೆಗಳನ್ನೆದುರಿಸಲು ಈವರೆಗೆ ಬಹುಮಟ್ಟಿಗೆ ಅಸಮರ್ಥವಾಗಿದೆಯೆಂಬುದನ್ನು ಸಂಘಟಿತ ಕಾರ್ಮಿಕರ ಶಕ್ತಿಯಿಂದ ಬೆಳೆದಿರುವ ರಾಜಕೀಯ ಪಕ್ಷಗಳೂ ಒಪ್ಪುತ್ತವೆ. ಹಲವು ಬಾರಿ ಸಂಘಟಿತ ಕಾರ್ಮಿಕರ ಚಳುವಳಿಗಳು ಸಮಾಜಸೇವಾ ಸಂಸ್ಥೆಗಳಿಗಿಂತಲೂ ಭಿನ್ನವಾದುವಲ್ಲವೆಂದೂ ನನ್ನ ಅನಿಸಿಕೆ. ಅದಕ್ಕೆ ನನ್ನಂತಹವರೂ ಸ್ವಲ್ಪ ಮಟ್ಟಿಗೆ ಕಾರಣವಿರಬಹುದು. ಇದರ ಪರಿಣಾಮವಾಗಿ ಈ ಸಂಘಟನೆಗಳ ಮೂಲೋದ್ದೇಶಕ್ಕೆ ಚ್ಯುತಿ ಬರಬಹುದೆಂಬ ಭೀತಿಗೂ ಎಡೆಯಿದೆ. ಕಾರ್ಮಿಕ ಚಳುವಳಿಯ ಹಾದಿಯೆಂದರೆ ಈ ಪರಿಸ್ಥಿತಿಯನ್ನು ವಿಷಮವಾಗದಂತೆ ತಡೆಹಿಡಿಯುವುದು ಮತ್ತು ವೈಜ್ಞಾನಿಕ ಸಮಾಜವಾದಿ ಆರ್ಥಿಕ ಹಾಗೂ ರಾಜಕೀಯ ಸಿದ್ಧಾಂತವು ಚಳುವಳಿಯ ಬೆನ್ನೆಲುಬಾಗುವಂತೆ ಮಾಡುವುದು. ಅದರಿಂದ ಸಂಘಟಿತರ ಮತ್ತು ಅಸಂಘಟಿತರ ಸಾಮಾಜಿಕ ಸ್ಥಾನ ಮತ್ತು ಮೌಲ್ಯಗಳು ವಿಸಂಗತವಾಗಿ ಬೆಳೆಯದೆ ಪರಸ್ಪರ ಹೊಂದಿಕೊಂಡು ಮುನ್ನಡೆಯಲು ಸಾಧ್ಯ. ಈ ಮುನ್ನಡೆಗೆ ಸಾಧಕವಾದ ತತ್ವವನ್ನು ಲೆನಿನ್ ತಮ್ಮ 'ಕರ್ತವ್ಯವೇನು ?' *(What is to be done ?)* ಎಂಬ ಗ್ರಂಥದಲ್ಲಿ ಸರಳವಾಗಿ ಮತ್ತು ಸಮರ್ಥವಾಗಿ ನಿರೂಪಿಸಿದ್ದಾರೆ. ಅವರ ಮಾತುಗಳನ್ನುದ್ಧರಿಸಿ ನನ್ನ ಈ ಪುಟ್ಟ ಪ್ರಬಂಧವನ್ನು ಮುಕ್ತಾಯಗೊಳಿಸುತ್ತೇನೆ : ''ಕ್ರಾಂತಿಕಾರಿ ಪಕ್ಷವಾದ ಸಾಮಾಜಿಕ -ಪ್ರಜಾಪ್ರಭುತ್ವವಾದಿ ಪಕ್ಷವು ದುಡಿಯುವ ವರ್ಗದ ಹೋರಾಟವನ್ನು, ದುಡಿಮೆಯ ಸಾಮರ್ಥ್ಯವನ್ನು ಮಾರಿ ಜೀವಿಸುವವರಿಗೆ ಹೆಚ್ಚಿನ ಪರಿಹಾರ ದೊರಕಿಸಿಕೊಡುವುದಕ್ಕಷ್ಟೇ ಸೀಮಿತಗೊಳಿಸುವುದಿಲ್ಲ; ಆದರೆ ಆಸ್ತಿರಹಿತರು ಆಸ್ತಿಯುತರಾಗಿರುವವರಿಗೆ ತಮ್ಮನ್ನು ತಾವು ಮಾರಿಕೊಳ್ಳಬೇಕಾಗಿಬರುವಂತಹ ಸಾಮಾಜಿಕ ವ್ಯವಸ್ಥೆಯ ಮೂಲೋತ್ಪಾಟನೆಗಾಗಿ ಹೋರಾಟ ನಡೆಸುತ್ತದೆ. ದುಡಿಯುವ ವರ್ಗ ಮತ್ತು ಧಣಿಗಳ ನಡುವಣ ಸಂಬಂಧವನ್ನು ಮಾತ್ರ ಪ್ರತಿನಿಧಿ ಸುವುದಲ್ಲ ಕ್ರಾಂತಿಕಾರಿ ಪಕ್ಷ, ಆಧುನಿಕ ಸಮಾಜದ ಎಲ್ಲ ವರ್ಗಗಳೊಡನೆ ಮತ್ತು ರಾಜಕೀಯ ಶಕ್ತಿಯಾದ ರಾಜ್ಯ ಪ್ರಭುತ್ವದೊಡನೆ ತನ್ನ ಸಂಬಂಧವೇನೆಂಬುದನ್ನು ಪ್ರತಿನಿಧಿಸುತ್ತದೆ ಕ್ರಾಂತಿಕಾರಿ ಪಕ್ಷ. ಆದ್ದರಿಂದ ಕ್ರಾಂತಿಕಾರಿ ಸಾಮಾಜಿಕ-ಪ್ರಜಾಪ್ರಭುತ್ವ ವಾದಿಗಳು ಕೇವಲ ಆರ್ಥಿಕ ಹೋರಾಟದಲ್ಲಿ ತೊಡಗುವುದು ಸಾಧುವಲ್ಲ; ಮಾತ್ರವಲ್ಲದೆ, ತಮ್ಮ ಚಟುವಟಿಕೆಗಳಲ್ಲಿ ಆರ್ಥಿಕ ಅನಾಚಾರಗಳನ್ನು ಬಹಿರಂಗಗೊಳಿಸುವುದನ್ನೇ ಅವರು ಪ್ರಧಾನವಾಗಿಟ್ಟುಕೊಳ್ಳಕೂಡದು. ದುಡಿಯುವ ವರ್ಗಕ್ಕೆ ರಾಜಕೀಯವಾಗಿ ತರಬೇತಿ ಕೊಡುವುದು ಮತ್ತು ಆ ವರ್ಗದ ರಾಜಕೀಯ ಪ್ರಜ್ಞೆಯನ್ನು ವೃದ್ಧಿಪಡಿಸುವುದು, ಇವನ್ನು ಮಾಡುವುದರಲ್ಲಿ ನಾವು ಕಾರ್ಯಶೀಲರಾಗಬೇಕು.''

*–ಶೂದ್ರ : 1978 (ಸಂಪುಟ 3, ಸಂಚಿಕೆ 11-12)*

# ಜೀತಪದ್ಧತಿ – ಒಂದು ಉಲ್ಲೇಖ

ಶೂದ್ರಂ ತು ಕಾರಯೇದ್ದಾಸ್ಯಂ ಕ್ರೀತಮಕ್ರೀತಮೇವ ವಾ ॥

– ಮನುಸ್ಮೃತಿ

ಮನುಷ್ಯರನ್ನು ಖಾಸಗಿ ಆಸ್ತಿಯನ್ನಾಗಿ ಮಾಡಿಕೊಂಡು, ಅವರನ್ನು ಹೀರಿ ಹಿಪ್ಪೆಕಾಯಿ ಮಾಡಿ ಅವರ ವ್ಯಕ್ತಿತ್ವವನ್ನು ನಾಶಮಾಡುವ ಕೆಟ್ಟಪದ್ಧತಿಗಿಂತಲೂ ಹೀನ ಸಂಸ್ಕೃತಿ ಇನ್ನೊಂದಿರಲಾರದು. ಭಾರತೀಯ ಸಂಸ್ಕೃತಿಯ ಒಂದು ಅಂಗವಾಗಿ ಉಳಿದುಬಂದಿರುವ ಜೀತಪದ್ಧತಿ ಇಂತಹದೊಂದು ಅನಿಷ್ಟಪದ್ಧತಿ.

ಈ ಜೀತಪದ್ಧತಿ ಇವತ್ತು ನಿನ್ನೆ ಹುಟ್ಟಿಕೊಂಡ ಪದ್ಧತಿಯು ಅಲ್ಲವೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಒಂದನ್ನು ಇಲ್ಲಿ ಉದಾಹರಿಸಬಹುದು : ೧೮೦೮ರಲ್ಲಿ, ಅಂದರೆ ೧೬೭ ವರ್ಷಗಳ ಹಿಂದೆ, ಜೀತ ಮತ್ತು ದಾಸ್ಯಪದ್ಧತಿ ಹೇಗೆ ತಾಂಡವವಾಡುತ್ತಿದ್ದಿತೆಂದು ತೋರಿಸುವ ಒಂದು ದಾಖಲೆ ಅದು. ಶಿವಮೊಗ್ಗ ಜಿಲ್ಲೆಯ ಆದಿನಹಳ್ಳಿ ಹೋಬಳಿ ಹುಲಿಮನೆ ಗ್ರಾಮದ ಪಟೇಲ್ ಸುಬ್ಬಯ್ಯನವರ ಮನೆಯಲ್ಲಿದ್ದ ಕಡತದಲ್ಲಿ ದೊರೆತ ತಾಮ್ರಶಾಸನವೊಂದನ್ನು ೧೯೭೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿತು. ಅದು ಹೀಗಿದೆ :– ''ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೭೩೦ನೇ ಪರಿವರ್ತಮಾನಕ್ಕೆ ಸಂದು ಸಲುವ ವಿಭವನಾಮ ಸಂವತ್ಸರದ ಆಶ್ವೀಜ ಶುಕ್ಲ ೧೩ ರವಿವಾರದಲ್ಲೂ ಶ್ರೀಮತು ಹುಲಿಮನೆ ಕಾಳಿ ಸುಬ್ಬಣ್ಣನವರ ಮಗ ಶೇಷಯ್ಯನವರಿಗೆ ವೇದಮೂರ್ತಿಗಳಾದ ಯಿಕ್ಕೇರಿ ಶೇಷಾಚಾರ್ಯರ ಮಗ ಭೀಮಾಚಾರ್ಯನು ಬರೆಸಿಕೊಟ್ಟ ಹೊಲೆಯಾಳು ಹೆಣ್ಣಾಳು ಕ್ರಯಚೀಟಿಯ ಕ್ರಮವೆಂತೆಂದರೆ ನಾನು ನನ್ನ ಅವಸರ ನಿಮಿತ್ತವಾಗಿ ನನ್ನ ಹೊಲೆಯಾಳು ಕನ್ನನ ಹೆಂಡತಿ ಚೌಡಿಯೆಂಬ ಹುಡುಗಿಯನ್ನು ನಿಮಗೆ ಕ್ರಯಕ್ಕೆ ಕೊಟ್ಟೆನಾಗಿ ಈ ಹೆಣ್ಣು ಆಳಿಗೆ ಬುದ್ಧಿವಂತರು ಕಂಡು ಕಟ್ಟಿದ ಕ್ರಯ ಮೂರು ವರಹವನ್ನು ತೆಗೆದುಕೊಂಡು ಈ ಹೆಣ್ಣಾಳು ಹುಡುಗಿಯನ್ನು ನಿಮಗೆ ಕ್ರಯ ಮೂಲಕ್ಕೆ ಮಾರಿದೆನಾಗಿ ಈ ಹೆಣ್ಣಿಗೆ ಆದಿ ಅಡಮು ಅಡ್ಡಿ ಸಡ್ಡಿಯೇನು ಉಂಟಾದ್ದನ್ನು ನಾನೇ ನೋಡಿಕೊಂಡೇನು ಎಂದು ಬರೆಸಿಕೊಟ್ಟ ಕ್ರಯ ಚೀಟು ಹಣ ಸಂದ ನಿಶಿಧಿಯಾಗಿದೆ. ಸಾಧನಯಿಂತಪ್ಪುದಕ್ಕೆ ಸಾಕ್ಷಿಗಳು ಬೇದೂರ ಸುಬ್ಬಯ್ಯ, ಬಾಳೆಹಳ್ಳಿ ಪಂಡ್ರಿ ದೊಡ್ಡಯ್ಯ.'' ಇದು 'ವೇದಮೂರ್ತಿಗಳು' ಅನೂಚಾನವಾಗಿ ಅನುಸರಿಸಿಕೊಂಡುಬಂದ ಕ್ರೂರಪದ್ಧತಿ. ಇಂತಹ ಎಷ್ಟು 'ಚೌಡಿ'ಯರನ್ನು ಎಷ್ಟು 'ಭೀಮಾಚಾರ್ಯ'ರುಗಳು 'ಮೂರುವರಹ'ಗಳಿಗೆ ಮಾರಿ ತಮ್ಮ ನೀಚ ಸಂಸ್ಕೃತಿಯನ್ನು ಪಾಲಿಸಿಕೊಂಡರೆಂಬುದನ್ನು ಯೋಚಿಸಿದರೆ ಮೈ ಉರಿಯುವುದು ಸಹಜ. ಭಾರತದ ಜನತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದು ಈ ಪುಣ್ಯಫಲಗಳನ್ನು ಮುಂದುವರೆಸಿಕೊಂಡು ಬರುವುದಕ್ಕೆ ಏನು ? ಪ್ರತಿಗಾಮಿಗಳ ಅಮಾನುಷ ವರ್ತನೆಗಳ ನಿದರ್ಶನಗಳಿಗೆ ಕಡಿಮೆಯೇ ?

ಅದೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಯಲ್ಲಿ ಇನ್ನೂ ಕೆಲವು ಶಾಸನಗಳ ಪೂರ್ಣಪಾಠ ಕೊಡಲಾಗಿದೆ. ಭೂಮಿಯ ಒಡೆಯರು ದೇವರು ಮತ್ತು 'ಮೇಲುಜಾತಿ'ಯ

ಹೆಸರಿನಲ್ಲಿ ಉಳುವವನಿಗೆ ಭೂಮಿಯ ಒಡೆತನ ತಪ್ಪಿಸುವುದರಲ್ಲಿ ಎಂತಹ ನಿಸ್ಸೀಮ ಉಪಾಯಗಳನ್ನು ಹೂಡಿದ್ದರೆಂದು ಈ ಕೆಲವು ಶಾಸನಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಶಿಕಾರಿಪುರ ತಾಲ್ಲೂಕಿನ ಕಾಡೇಯನಂದಿ ಹಳ್ಳಿಯ ಹತ್ತಿರದ ಬಾಳು ಬೀಡು ದೇವಸ್ಥಾನದ ಹತ್ತಿರ ದೊರೆತ ಶಾಸನದಲ್ಲಿ 'ಬುದ್ಧಿವಂತ' ಜನರು ಭಾರಿ ಜಮೀನ್ದಾರರ ಅಡಿಯಾಳುಗಳಾಗಿ ನುಡಿದದ್ದು ಹೀಗಿದೆ : ''ದೇವರು ಮತ್ತು ಬ್ರಾಹ್ಮಣರಿಗೆ ಸೇರಿದ ಆಸ್ತಿಯನ್ನು ಪಡೆದುಕೊಂಡರೆ ಅಂತಹ ಪಾಪಿಗಳು ಬೇರೆ ಲೋಕದಲ್ಲಿ ಹದ್ದಿನ ಎಂಜಲನ್ನು ತಿಂದು ಜೀವಿಸುತ್ತಾರೆ.'' (ದೇವಸ್ವಂ ಬ್ರಾಹ್ಮಣಸ್ವಂ ಚ ಲೋಭೇನೋಪಹಿನಸ್ತಿ ಯಃ। ಸ ಪಾಪಾತ್ಮಾ ಪರೇ ಲೋಕೇ ಗೃದ್ಧ್ರೋಚ್ಛಿಷ್ಟೇನ ಜೀವತಿ ॥ – 73ನೇ ಶಾಸನ, ಪುಟ 29.)

ಈ ಜನ ಭೂಮಿಯನ್ನು ಪಡೆದದ್ದಾದರೂ ಹೇಗೆ ? ಯಾವನೋ ಪಾಳೆಗಾರನಿಂದ ದಾನ ಪಡೆದದ್ದು! ಆ ಭೂಮಿಯಲ್ಲಿ ಬೇಸಾಯ ಮಾಡುವವನು ಅದರ ಒಡೆಯನಾಗಬೇಕೆಂದು ಇಚ್ಛಿಸಿದರೆ ಬೇಸಾಯ ಮಾಡದೆ ತಿಂದು ತೇಗುವ ಪರತಂತ್ರಜೀವಿಗೆ ಹಾನಿಯಾಗುತ್ತದಲ್ಲ. ಆದ್ದರಿಂದ ಈ ಜನ ಬಿತ್ತಿದ ಭಾವನೆ ಮತ್ತು ನೈತಿಕತೆ ಯಾವುದು ? ಮೈಸೂರು ವಿಶ್ವವಿದ್ಯಾನಿಲಯದ ೧೯೨೯ರ ಪ್ರಕಟಣೆಯ ೧೦ನೇ ಶಾಸನದಲ್ಲಿ ಅದಕ್ಕೂ ಉತ್ತರವಿದೆ : "ಸಗರಾದಿ ಅನೇಕ ರಾಜರುಗಳು ಭೂಮಿಯನ್ನು ದಾನ ಮಾಡಿದ್ದಾರೆ. ಆ ಭೂಮಿ ಯಾರಿಗೆ ಸೇರಿದೆಯೋ ಅವರೇ ಅದರ ಫಲ ಪಡೆಯಬೇಕು.'' (ಬಹುಭಿರ್ವಸುಧಾ ದತ್ತಾ ರಾಜಭಿಸ್ಸಗರಾದಿಭಿಃ। ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಮ್ ॥) – ಇದು ಹೊಯ್ಸಳ ರಾಜನಾದ ಎರಡನೇ ಬಲ್ಲಾಳನು ಕ್ರಿ.ಶ. ೧೧೮೯ರಲ್ಲಿ ಮಾಡಿದ ಭೂಮಿಯ ದಾನವನ್ನು ಉಲ್ಲೇಖಿಸುವ ಶಾಸನದ ಮಾತುಗಳು. ಮುಂದುವರಿದು ಶಾಸನ ಹೀಗೆ ತಿಳಿಸುತ್ತದೆ : ''ಈ ಧರ್ಮಮಂ ಪ್ರತಿಪಾಲಿಸಿದವರಿಗೆ ವಾರಣಾಸಿಯಲ್ಲಿ ಸಹಸ್ರ ಗೋವುಗಳನ್ನು ಬ್ರಾಹ್ಮಣರಿಗೆ ಕೊಟ್ಟ ಫಲ, ಈ ಧರ್ಮಮಂ ಕೆಡಿಸಿದವರಿಗೆ ಸಹಸ್ರ ಗೋವುಗಳನ್ನೂ, ಕೋಟಿ ಬ್ರಾಹ್ಮಣರುಗಳನ್ನೂ ಕೊಂದ ದೋಷ.'' ಅಷ್ಟಕ್ಕೇ ಮುಗಿಯಲಿಲ್ಲ ಈ ಮೋಸದ ಕಥೆ. ಶಾಸನದ ಕಡೆಯಲ್ಲಿ ಹೀಗೆ ಹೇಳಲಾಗಿದೆ : ''ತಾನು ಅಥವಾ ಇತರರು ದಾನಮಾಡಿದ ಭೂಮಿಯನ್ನು ಕಿತ್ತುಕೊಂಡರೆ ನರಕದಲ್ಲಿ ೬೦,೦೦೦ ವರ್ಷಗಳ ಕಾಲ ಕ್ರಿಮಿಯಾಗಿ ಬಾಳಬೇಕಾಗುತ್ತದೆ !''

ಇಂತಹ ಮೌಢ್ಯವನ್ನು ತುಂಬಿ ತಮ್ಮ ಶೋಷಣೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದ ದಾರುಣಕತೆಯ ಫಲವೇ ಇಂದಿನ ಜೀತ ಪದ್ಧತಿ. ಈ ಜೀತದ ನರಕವನ್ನು ತೊರೆದು ಮಾನವತೆಯತ್ತ ನಡೆಯಲು ಭಾರತದ ದುಡಿಯುವ ಜನತೆ ಪಣತೊಟ್ಟಿದೆ. ಸ್ವಾತಂತ್ರ್ಯೋತ್ತರ ಭಾರತ ಜೀತಪದ್ಧತಿಯನ್ನು ರದ್ದುಪಡಿಸಲು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾಗ್ಯೂ ಈ ಸಮಸ್ಯೆ ತನ್ನ ವಿವಿಧ ಸ್ವರೂಪಗಳಿಂದ ಇನ್ನೂ ಕಾಡುತ್ತಲೇ ಇದೆ. ಆದ್ದರಿಂದ ಜೀತಪದ್ಧತಿಯ ನಿರ್ಮೂಲನವನ್ನು ಕಾರ್ಯಗತಗೊಳಿಸಿ ಸಹಸ್ರಾರು ಮಂದಿ ಶೋಷಿತ ಕೆಲಸಗಾರರು ತಲೆಯೆತ್ತಿ ಬಾಳುವಂತೆ ಮಾಡಬೇಕಾದುದು ದುಡಿಯುವ ವರ್ಗದ ಜವಾಬ್ದಾರಿ.

# ಆರ್ಥಿಕ ಸ್ವಾವಲಂಬನೆಗಾಗಿ ಒಂದು ಕಾರ್ಯಕ್ರಮ

> ರಾಜಕೀಯ ಅಧಿಕಾರದ ಬೆಂಬಲದ ಅಭಾವದಿಂದಾಗಿ ಭಾರತದ ಜನತೆ ತಮ್ಮ ಆಂತರಿಕ ಅವ್ಯವಸ್ಥೆಯನ್ನು ನೀಗಿಕೊಳ್ಳಲಾಗಿಲ್ಲ. ಪ್ರತಿಕೂಲವಾದ ಆಡಳಿತಾತ್ಮಕ ಮತ್ತು ಹಣಕಾಸಿನ ಸೂತ್ರಗಳಿಂದಾಗಿ ನಮ್ಮ ದೇಶವು ತನ್ನ ಆರ್ಥಿಕ ಸ್ವಾವಲಂಬನೆ ಮತ್ತು ದಾರ್ಢ್ಯವನ್ನು ಕಳೆದುಕೊಂಡಿದೆ. ಬದಲಾವಣೆಗಾಗಿ ಜನ ತಹತಹಿಸುತ್ತಿದ್ದಾರೆ. ಅದು ನಿಜಕ್ಕೂ ಫಲಪ್ರದ ವಾಗಬೇಕಾದರೆ, ಬದಲಾವಣೆಯು ಶೀಘ್ರದಲ್ಲಿ ಆಗಬೇಕು ಮತ್ತು ಅದು ತೀವ್ರಸ್ವರೂಪದ್ದಾಗಿರಬೇಕು. ನಮ್ಮ ದೇಶದ ರಾಜಕೀಯ ಮತ್ತು ಔದ್ಯಮಿಕ ಜೀವನದ ಮೂಲ ಸಂಬಂಧಗಳಲ್ಲಿ ಇಡಿಯಾಗಿ ಹೊಸ ಪ್ರಕ್ರಿಯೆಗಳನ್ನು ಅದು ಒಳಗೊಳ್ಳಬೇಕು.
>
> —ಡಾ॥ ಎಂ. ವಿಶ್ವೇಶ್ವರಯ್ಯ

ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ೩೨ ವರ್ಷಗಳ ನಂತರ ನಮ್ಮ ರಾಷ್ಟ್ರದಲ್ಲಿರುವ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಏನು? ಜನತೆಯ ಸಾಂಸ್ಕೃತಿಕ ಜೀವನಮಟ್ಟ ಎಷ್ಟರಮಟ್ಟಿಗೆ ಏರಿದೆ? ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟಾಗ ನಮ್ಮಲ್ಲಿ ಅಸಮಾಧಾನ ಎದ್ದು ತೋರಿದರೆ ಅದಕ್ಕೆ ಸಾಕಷ್ಟು ಕಾರಣಗಳಿವೆ. ದಟ್ಟದಾರಿದ್ರ್ಯದಲ್ಲಿ ಬಾಳುವೆ ನಡೆಸುತ್ತಿರುವವರ ಸಂಖ್ಯೆ ನಮ್ಮಲ್ಲಿ ಸಂಪೂರ್ಣವಾಗಿ ಶೂನ್ಯವಾಗುವ ಮಾತಂತಿರಲಿ, ಗಮನಾರ್ಹವಾಗಿ ಕಡಿಮೆ ಸಹ ಆಗಿಲ್ಲ. ಇತ್ತೀಚೆಗೆ ಅಂಕಿಅಂಶಗಳ ಪ್ರಕಾರ ನಮ್ಮ ಜನಸಂಖ್ಯೆಯ ಶೇಕಡಾ ೪೦ರಷ್ಟು ಮಂದಿ ವರ್ಷಕ್ಕೆ ಕೇವಲ ೩೪೧ ರೂಪಾಯಿಗಳ ಆದಾಯದ ಮೇಲೆ ಜೀವನ ನಡೆಸುತ್ತಿದ್ದಾರೆ. ದಿನಕ್ಕೆ ಸುಮಾರು ೯೦ ಪೈಸೆಗಳಿಂದ ಜೀವನ ಹೊರೆಯಬೇಕಾದವನ ವಿದ್ಯಾಭ್ಯಾಸ, ಸಾಂಸ್ಕೃತಿಕ ಜೀವನ, ಸಂಸಾರ ಸುಖ, ಮೂಲಭೂತ ಹಕ್ಕುಗಳ ಅನುಭವ, ಇಂದಿನ ಹೋರಾಟಕ್ಕೆ ಬೇಕಾದ ಶಕ್ತಿ ಮತ್ತು ಭವಿಷ್ಯದ ರಾಮರಾಜ್ಯದ ಕಲ್ಪನೆ ಇವುಗಳು ಎಷ್ಟು ಪ್ರಖರವಾಗಿರಬಹುದೆಂಬುದನ್ನು ಊಹಿಸುವುದು ಕಷ್ಟವೇನಲ್ಲ. ಹಾಗೆಂದಮಾತ್ರಕ್ಕೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತ ಆರ್ಥಿಕ ಪ್ರಗತಿಯನ್ನು ಸುತರಾಂ ಸಾಧಿಸಿಲ್ಲವೆಂದು ಅರ್ಥವಲ್ಲ. ಬೆಳವಣಿಗೆಗೆ ಅತ್ಯವಶ್ಯಕವಾಗಿ ಬೇಕಾದ ತಾಂತ್ರಿಕ ಕುಶಲತೆ ಮತ್ತು ಜ್ಞಾನವನ್ನು ಪಡೆದಿರುವವರ ಸಂಖ್ಯೆಯ ದೃಷ್ಟಿಯಿಂದ ಭಾರತವು ಇಂದು ವಿಶ್ವದಲ್ಲಿ ಮೂರನೆಯ ಸ್ಥಾನವನ್ನು ಪಡೆದಿದೆ. ಕೈಗಾರಿಕಾಕ್ಷೇತ್ರದ ಉತ್ಪಾದನೆಯು ೧೯೫೦-೫೧ರಲ್ಲಿ ಇದ್ದುದಕ್ಕಿಂತ ಈಗ ಸುಮಾರು ಶೇಕಡಾ ೨೦೦ರಷ್ಟು ಹೆಚ್ಚಿದೆ. ಅದಲ್ಲದೆ ಬೇರೆ ಕೈಗಾರಿಕೆಗಳ ಬೆಳವಣಿಗೆಗೆ ಅನಿವಾರ್ಯವಾಗಿ ಬೇಕಾಗುವ ಮೂಲ ಮತ್ತು ಭಾರಿ ಕೈಗಾರಿಕೋದ್ಯಮಗಳು ಹೇರಳವಾಗಿ ಬೆಳೆದಿವೆ. ಸಾರ್ವಜನಿಕ ಕ್ಷೇತ್ರದಲ್ಲಿ ನಾಲ್ಕು ಬೇರೆ ಬೇರೆ ಆಧುನಿಕ ಉಕ್ಕಿನ ಕಾರ್ಖಾನೆಗಳ ಜೊತೆಗೆ ಭಾರಿ ಇಂಜಿನಿಯರಿಂಗ್ ಉದ್ದಿಮೆಯೊಂದು ರಾಂಚಿಯಲ್ಲಿ ನೆಲೆಗೊಂಡಿದೆ. ತೈಲ ಶುದ್ಧೀಕರಣಾಗಾರಗಳು, ಭಾರಿ ಎಲೆಕ್ಟ್ರಿಕಲ್ ಉದ್ದಿಮೆಗಳು, ಯಂತ್ರೋಪಯುಕ್ತ ಉಪಕರಣಗಳನ್ನು ತಯಾರಿಸುವ ಕಾರ್ಖಾನೆಗಳು, ರಸಗೊಬ್ಬರವನ್ನು ಉತ್ಪಾದಿಸುವ ಕಾರ್ಖಾನೆಗಳು, ಇತ್ಯಾದಿ ಇನ್ನೂ ಎಷ್ಟೋ ಅಭಿವೃದ್ಧಿಯನ್ನು ಭಾರತ ಸಾಧಿಸಿರುವುದು ಯಾರ ಗಮನಕ್ಕಾದರೂ ಸಹಜವಾಗಿಯೇ

ಬರುತ್ತದೆ. ವರ್ಷಕ್ಕೆ ಸುಮಾರು ೭ ದಶಲಕ್ಷ ಟನ್ನುಗಳಷ್ಟು ಉಕ್ಕು ನಮ್ಮಲ್ಲಿ ತಯಾರಾಗುತ್ತಿದೆ; ಯಂತ್ರೋಪಕರಣಗಳ ಉತ್ಪಾದನೆಯು ಕಳೆದ ೨೫ ವರ್ಷಗಳಲ್ಲಿ ೨೦೦ ಪಟ್ಟು ಹೆಚ್ಚಿದೆ; ವರ್ಷಕ್ಕೆ ಬಹಳವೆಂದರೆ ೨ ಲಕ್ಷ ಟನ್ನುಗಳಷ್ಟು ಉತ್ಪಾದನೆಯಾಗುತ್ತಿದ್ದ ತೈಲ ಈಗ ನಮ್ಮಲ್ಲಿ ೨೦ ದಶಲಕ್ಷ ಟನ್ನುಗಳನ್ನು ಮುಟ್ಟಿದೆ. ಅದಿನ್ನೂ ಹೆಚ್ಚುವ ಸಾಧ್ಯತೆ ಈಗ ಖಚಿತವಾಗಿದೆ.

ಸ್ವಾತಂತ್ರ್ಯವನ್ನು ಗಳಿಸಿದ ತರುವಾಯದಲ್ಲಿ ನಮ್ಮ ಮುಂದಿದ್ದ ಅತ್ಯಂತ ಮುಖ್ಯ ಪ್ರಶ್ನೆಯು ಆರ್ಥಿಕ ಸ್ವಾತಂತ್ರ್ಯವನ್ನು ಸ್ಥಾಪಿಸುವುದಾಗಿತ್ತು. ಅದರೊಟ್ಟಿಗೆ ರಾಷ್ಟ್ರದ ಜನತೆಗೆ ಈ ಸ್ವಾತಂತ್ರ್ಯದ ಫಲ ದೊರಕುವಂತೆ ಯೋಜಿಸುವುದೂ ಅಷ್ಟೇ ಮುಖ್ಯವಾಗಿದ್ದ ಪ್ರಶ್ನೆಯಾಗಿತ್ತು. ಅಂದರೆ ಉದ್ಯೋಗ ಮತ್ತು ಆದಾಯಗಳತ್ತ ಗಮನ ನೀಡಬೇಕಾದ ಅವಶ್ಯಕತೆ ಬಹಳವಾಗಿತ್ತು. ಉತ್ಪಾದನೆಯಷ್ಟೇ ಗಂಭೀರವಾದ ಸಮಸ್ಯೆ ವಿತರಣೆಯದು. ವಿತರಣಾ ವಿಧಾನದಲ್ಲಿ ದುಷ್ಟ ನೀತಿಯನ್ನನುಸರಿಸಿ ಉತ್ಪಾದನೆಯತ್ತ ಮಾತ್ರ ರಾಷ್ಟ್ರದ ಕೆಲಸಗಾರರೆಲ್ಲಾ ನಿಷ್ಠೆಯನ್ನಿಡ ಬೇಕೆಂದು ಬಯಸುವುದು ಬಂಡವಾಳ ವರ್ಗದ ಪರವಾಗಿ ವಕಾಲತ್ತು ವಹಿಸುವುದೆಂದು ಹೇಳಬಹುದು.

ನಮ್ಮ ಆರ್ಥಿಕ ವ್ಯವಸ್ಥೆಯನ್ನು ವಸಾಹತುಶಾಹಿಯ ಹಿಡಿತದಿಂದ ತಪ್ಪಿಸಿ ಸ್ವಾವಲಂಬನೆಯ ಮಾರ್ಗದಲ್ಲಿ ನಡೆಸಲು ಕೈಗೊಳ್ಳುವ ಕಾರ್ಯಕ್ರಮಗಳಲ್ಲಿ ಮಹತ್ವದ ಸ್ಥಾನವಿರುವುದು ಎರಡು ಅಂಶಗಳಿಗೆ: ಒಂದು, ಯೋಜನಾಬದ್ಧ ಅಭಿವೃದ್ಧಿಗೆ ಗಮನ ನೀಡುವುದು; ಮತ್ತೊಂದು, ವಿದೇಶಿ ಸಹಕಾರ ಪಡೆಯುವುದರಲ್ಲಿ ನಮ್ಮ ರಾಷ್ಟ್ರ ಅನುಸರಿಸುವ ವಿಧಾನ. ೧೯೬೬ ರಿಂದ ೧೯೬೯ರವರೆಗೆ ಹಿಂದೊಮ್ಮೆ ಯೋಜನೆಗೆ ರಜೆ ಘೋಷಿಸಲಾಗಿತ್ತು; ಮತ್ತೆ ಈಗ ಅಂಥದೇ ಪರಿಸ್ಥಿತಿ ಜಾರಿಯಲ್ಲಿದೆ. ಮಾರ್ಚ್ ೧೯೭೪ಕ್ಕೆ ನಾಲ್ಕನೆಯ ಯೋಜನೆ ಮುಕ್ತಾಯವಾಗಿ ಏಪ್ರಿಲ್ ೧೯೭೪ರಿಂದ ಐದನೆಯ ಯೋಜನೆಗೆ ನಾವು ಧುಮುಕಿದ್ದೆವು. ಆದರೆ ಅದಕ್ಕೆ ಸಂಬಂಧಪಟ್ಟ ಕಾರ್ಯಕ್ರಮವಾವುದೂ ನಿಗದಿ ಮಾಡಲಾಗಲಿಲ್ಲ. ಅದರ ಬದಲು ಈಗ ವಾರ್ಷಿಕ ಯೋಜನೆಯನ್ನು ರೂಪಿಸಹೊರಟಿದ್ದೇವೆ. ಅದರ ಮುಂದಿನ ಸ್ವರೂಪವೇನೋ ತಿಳಿಯದಾಗಿದೆ. ನಾಲ್ಕನೆಯ ಯೋಜನೆಯು ಕೊನೆ ಮುಟ್ಟುವಾಗ್ಗೆ ೭೫ ಗುತ್ತೇದಾರಿ ಮನೆತನಗಳ ನೆಲೆ ಎಷ್ಟರಮಟ್ಟಿಗೆ ಬಲಗೊಂಡಿತ್ತೆಂಬುದು ಇಂದು ನಮಗೆಲ್ಲಾ ಮನವರಿಕೆ ಯಾಗುವ ಅಂಶ. ೫೦ ಕೋಟಿ ಪ್ರಜಾಸಂಖ್ಯೆ ಇರುವ ನಮ್ಮ ರಾಷ್ಟ್ರದಲ್ಲಿ ಕೇವಲ ೭೫ ಗುತ್ತೇದಾರಿ ಮನೆತನಗಳು ೧೯೬೩-೬೪ರಲ್ಲಿ ರಾಷ್ಟ್ರದ ಖಾಸಗಿ ಕೈಗಾರಿಕೋದ್ಯಮದ ಶೇಕಡಾ ೪೭ರಷ್ಟು ಆಸ್ತಿಯನ್ನು ತಮ್ಮದನ್ನಾಗಿಸಿಕೊಂಡಿದ್ದರು; ೧೯೬೭-೬೮ರ ವೇಳೆಗೆ ಇದು ಇನ್ನೂ ಹೆಚ್ಚಿ ಶೇಕಡಾ ೫೪.೭ರ ಮಟ್ಟವನ್ನು ಮುಟ್ಟಿತ್ತು. ಅದಾದನಂತರವೂ ಈ ರೀತಿಯ ಆರ್ಥಿಕ ಪ್ರವೃತ್ತಿ ಕೊನೆಗೊಂಡಿಲ್ಲ.

ಇದು ನಮ್ಮ ಆರ್ಥಿಕ ವ್ಯವಸ್ಥೆಯ ನ್ಯೂನತೆಯ ಕುರುಹು; ಬಂಡವಾಳಶಾಹಿ ಪಥದ ಅನುಕರಣೆಯಿಂದ ಉದ್ಭವಿಸಿರುವ ಕೆಡುಕು. ನಮ್ಮ ಸಂಪನ್ಮೂಲಗಳನ್ನು ಉತ್ತಮವಾಗಿ ಶೋಧಿಸದಿರುವುದೊಂದು ಕಡೆಯಾದರೆ, ಅವನ್ನು ಖಾಸಗಿ ಬಂಡವಳಿಗರ ಅಥವಾ ವಿದೇಶಿ ಗುತ್ತೇದಾರರ ಪಾಲಿಗೆ ಬಿಟ್ಟಿರುವುದು ಮತ್ತೊಂದು ಕಡೆ. ಅಂತಹ ಪರಿಸ್ಥಿತಿಯಲ್ಲೂ ನಾವು ಔದ್ಯಮೀಕರಣದಲ್ಲಿ ಸಾಕಷ್ಟು ಯಶಸ್ವಿಯಾಗಿರುವುದು ನಮ್ಮ ರಾಷ್ಟ್ರವು ಸಮಾಜವಾದಿ ರಾಷ್ಟ್ರಗಳೊಡನೆ ಬೆಳೆಸಿಕೊಂಡಿರುವ ನಿಕಟ ಸಂಬಂಧಗಳಿಂದಾಗಿ ಎಂದು ಹೇಳಿದರೆ ಅದರಲ್ಲಿ ಅತಿಶಯೋಕ್ತಿಯೇ ಇಲ್ಲ. ವಿಶೇಷತಃ ಸೋವಿಯೆತ್ ಒಕ್ಕೂಟದಿಂದ ದೊರೆತಿರುವ ಬೆಂಬಲ ಮತ್ತು ನೆರವನ್ನು ನಾವಿಲ್ಲಿ ಗಮನಿಸಬೇಕು. ಕೈಗಾರಿಕೆಗಳ ಹೆಚ್ಚಳಕ್ಕೆ ಅಗತ್ಯವಾಗಿ ಬೇಕಾದ ಬಂಡವಾಳವನ್ನು ಶೇಖರಿಸುವಲ್ಲಿ ವಿದೇಶಿ ನೆರವಿನ ಪಾತ್ರವಿದೆ. ಅದೆಂತಹ ನೆರವು ನಮಗೆ ದೊರೆಯುತ್ತದೆಯೋ ಅದರಿಂದ ನಮ್ಮ ಆರ್ಥಿಕ ಚಿತ್ರ ಬದಲಾಗುತ್ತದೆ. ಸಂಪೂರ್ಣ

ಔದ್ಯಮೀಕರಣವೆಂದರೆ ನಮ್ಮ ಸಂಪನ್ಮೂಲಗಳನ್ನುಪಯೋಗಿಸಿ ಉತ್ಪಾದಿತ ಸಿದ್ಧವಸ್ತುಗಳನ್ನು ಹೊರತರುವುದನ್ನು ಒಳಗೊಂಡಂತೆ ನಡೆಯುವ ಸಮಗ್ರ ಕಾರ್ಯಾಚರಣೆ. ನಮ್ಮಲ್ಲಿರುವ ಕಬ್ಬಿಣದ ಅದುರನ್ನು ಹೊರತೆಗೆಯುವುದು ಅದರ ಒಂದು ಭಾಗ; ಅದನ್ನು ರಫ್ತು ಮಾಡದೆ ಅದರಿಂದ ವಿವಿಧ ಮಾದರಿಯ ಉಕ್ಕನ್ನು ತಯಾರಿಸುವುದು ಔದ್ಯಮೀಕರಣದ ಇನ್ನೊಂದು ಭಾಗ. ಹಾಗೆ ಮಾಡದಿದ್ದಲ್ಲಿ ನಮ್ಮ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸಿದಂತಾಗುವುದಿಲ್ಲ. ಅಥವಾ, ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಹಿಂದೆಯೇ ತಿಳಿಸಿದಂತೆ ನಮ್ಮಲ್ಲೀಗ ಸುಮಾರು ಏಳು ದಶಲಕ್ಷ ಟನ್ನುಗಳಷ್ಟು ಉಕ್ಕು ತಯಾರಾಗುತ್ತಿದೆ. ಆದರೆ ನಾವು ವಿನಿಯೋಗಿಸುವುದೆಷ್ಟು? – ಕೇವಲ ಐದು ದಶಲಕ್ಷ ಟನ್ನುಗಳು. ಉಳಿದ ಎರಡು ದಶಲಕ್ಷ ಟನ್ನುಗಳಷ್ಟು ಉಕ್ಕು ನಮಗೆ 'ಅಧಿಕ'. ಅದರರ್ಥವೇನು ? ಭಾರತದ ಅಭಿವೃದ್ಧಿಗೆ ಬೇಕಾದ ಉಕ್ಕನ್ನೆಲ್ಲಾ ಕಳೆದು ಅಧಿಕವಾಗಿ ಏನಾದರೂ ಉಳಿದಿದೆಯೇ? ಅಥವಾ, ನಾವು ರೂಪಿಸಿಕೊಂಡಿರುವ ಅಭಿವೃದ್ಧಿಯ ದೃಷ್ಟಿಯಿಂದ ಐದು ದಶಲಕ್ಷ ಟನ್ನುಗಳನ್ನು ಮಾತ್ರ ಉಪಯೋಗಿಸಲು ಸಾಧ್ಯವೋ ? ಸೋವಿಯೆತ್ ಒಕ್ಕೂಟದಲ್ಲಿ ೧೪೩ ದಶಲಕ್ಷ ಟನ್ನುಗಳಷ್ಟು ಉಕ್ಕು ತಯಾರಾಗುತ್ತಿದೆ; ಅಮೆರಿಕಾದಲ್ಲಿ ೧೨೦ ದಶಲಕ್ಷ ಟನ್ನುಗಳು. ನಮ್ಮಲ್ಲಿ 'ಅಧಿಕ' ಉಕ್ಕು ಕಂಡುಬರಲು ಕಾರಣ ಉಕ್ಕನ್ನುಪಯೋಗಿಸುವಂತಹ ಬೇರೆ ಅಭಿವೃದ್ಧಿ ಕಾರ್ಯಕ್ರಮಗಳ ಅಭಾವವೇ ಹೊರತು ನಮಗಿನ್ನು ಉಕ್ಕು ಬೇಕಿಲ್ಲವೆಂದಲ್ಲ. ಇಷ್ಟರಮಟ್ಟಿನ ಹಂತವನ್ನು ತಲುಪಿರುವುದೂ ಸಹ ಸೋವಿಯತ್ ಒಕ್ಕೂಟದ ನೆರವಿನಿಂದ ಎಂಬುದನ್ನು ಮರೆಯಬಾರದು.

ಈ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ರಾಷ್ಟ್ರಗಳ ನಡುವಣ ವ್ಯತ್ಯಾಸವನ್ನು ಗುರುತಿಸಿಕೊಳ್ಳುವುದುತ್ತಮ. ನೆರವಿನ ಹೆಸರಿನಲ್ಲಿ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡು ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರದ ಮೇಲೆ ತನ್ನ ಆರ್ಥಿಕ ಹಿಡಿತವನ್ನು ಬಲಪಡಿಸಿಕೊಳ್ಳುವಂತಹ ನೆರವು ಸಾಮ್ರಾಜ್ಯಶಾಹಿ ನೆರವು. ಇದರ ಮರ್ಮವನ್ನು ಗುರುತಿಸಿದ ಬ್ರಿಟನ್ನಿನ ಅರ್ಥಶಾಸ್ತ್ರಜ್ಞೆ ಟೆರೆಸಾ ಹೇಟರ್ ಅವರು 'ನೆರವಿನಿಂದ ಸಾಮ್ರಾಜ್ಯಶಾಹಿ' ಎಂಬ ಒಂದು ಗ್ರಂಥವನ್ನೇ ರಚಿಸಿದ್ದಾರೆ. ೧೯೬೮ರಲ್ಲಿ ಬ್ರಿಟನ್ನಿನ ವಿದೇಶಿ ಅಭಿವೃದ್ಧಿ ಸಚಿವರಾಗಿದ್ದ ಅರ್ಲ್ ಗ್ರಿನ್‌ಸ್ಟೆಡ್ ಒಮ್ಮೆ ನೀಡಿದ್ದ ಹೇಳಿಕೆ ಇದು : ''ನಾವು ನೀಡುವ ನೆರವಿನ ಮೂರನೆಯ ಎರಡು ಭಾಗವನ್ನು ನೆರವು ಪಡೆಯುವ ರಾಷ್ಟ್ರಗಳು ಬ್ರಿಟನ್ನಿನಲ್ಲೇ ಖರ್ಚು ಮಾಡುತ್ತವೆ. ನೆರವು ಯಾವಾಗಲೂ ವ್ಯಾಪಾರಕ್ಕೆ ದಾರಿ ಮಾಡಿಕೊಡುತ್ತದೆ. ಹೊರದೇಶದಲ್ಲಿ ಕಾರ್ಖಾನೆಯೊಂದನ್ನು ಸ್ಥಾಪಿಸಲು ನಾವು ನೆರವು ನೀಡಿದರೆ ನಂತರ ಬಿಡಿಭಾಗಗಳಿಗೆ ಮತ್ತು ಇತರೆ ಅಗತ್ಯಗಳಿಗೆ ಅವರು ನಮ್ಮಲ್ಲಿಯೇ ಬರಬೇಕಾಗುತ್ತದೆ. ಆದ್ದರಿಂದ ನೆರವು ನಮ್ಮ ಹಿತಕ್ಕಾಗಿ ಒಳಿತೆಂಬುದನ್ನು ನಾವು ಮನಗಾಣಬೇಕು.'' ಬ್ರಿಟನ್ನಿನ ನೆರವಿನ ಕಾರ್ಯಕ್ರಮವನ್ನು ವಿಶ್ಲೇಷಿಸಿದ ಪಾರ್ಲಿಮೆಂಟ್ ಸಮಿತಿಯೊಂದು ತನ್ನ ವರದಿಯಲ್ಲಿ ಹೀಗೆ ನುಡಿಯಿತು : ''ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವುದಕ್ಕೆ ನೆರವು ನೀಡುವುದೊಂದು ಮಾರ್ಗ. ಬ್ರಿಟನ್ನಿನಲ್ಲಿ ಉತ್ಪಾದನೆಯಾಗುವ ವಸ್ತುಗಳಿಗೆ ಹೆಚ್ಚು ಹೆಚ್ಚು ಬೇಡಿಕೆ ಬರುವಂತಹ ರಾಷ್ಟ್ರಗಳಿಗೆ ನಾವು ಅಧಿಕ ನೆರವನ್ನು ನೀಡಬೇಕು.'' ಬಂಡವಾಳಶಾಹಿ ರಾಷ್ಟ್ರಗಳ ನೆರವನ್ನು ವಿಮರ್ಶಿಸುತ್ತಾ ಖ್ಯಾತ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್ಡಾಲ್ ಹೇಳುತ್ತಾರೆ : ''ಪ್ರತಿಯೊಂದು ನೆರವಿನ ಹಿನ್ನೆಲೆಯಲ್ಲೂ ಇಂತಹುದೇ ಪ್ರವೃತ್ತಿ ಅಡಕವಾಗಿದೆ. ಫ್ರಾನ್ಸ್, ಜಪಾನ್, ಪಶ್ಚಿಮ ಜರ್ಮನಿ, ಇತ್ಯಾದಿ ರಾಷ್ಟ್ರಗಳಂತೂ ನೆರವು ನೀಡುವುದೇ ಈ ದೃಷ್ಟಿಯಿಂದ.'' ಮುಂದುವರಿದು ಅವರು ವಿವರಿಸುತ್ತಾರೆ : ''ನೆರವನ್ನು ನೀಡುವ ರಾಷ್ಟ್ರದಲ್ಲೇ ಅನಭಿವೃದ್ಧ ರಾಷ್ಟ್ರಗಳು ನೆರವಿನ ಹಣವನ್ನು

ಖರ್ಚುಮಾಡಬೇಕೆಂಬ ನಿಯಮವು ಅತ್ಯಂತ ಸೂಕ್ತವಾದ ವಸ್ತುಗಳನ್ನು ಕೊಳ್ಳುವ ಸ್ವಾತಂತ್ರ್ಯವನ್ನು ಈ ರಾಷ್ಟ್ರಗಳಿಂದ ಕಸಿದುಕೊಂಡಂತೆ. ಅದಕ್ಕೆ ಅವರು ನೀಡುವ ಬೆಲೆಯೂ ಹೆಚ್ಚುತ್ತದೆ. ಸರಾಸರಿ ಶೇಕಡಾ ೨೦ರಿಂದ ೪೦ರವರೆಗೆ ಈ ಹೆಚ್ಚಳವನ್ನು ಅವರು ತೆರುತ್ತಿದ್ದಾರೆ.'' ದಕ್ಷಿಣ ಅಮೆರಿಕಾದ ತಜ್ಞರೊಬ್ಬರು ವಿಶ್ವಸಂಸ್ಥೆಯ ಪ್ರಕಟಣೆಯೊಂದರಲ್ಲಿ ಇದನ್ನೇ ಪ್ರಸ್ತಾಪಿಸಿ ಹೀಗೆ ಹೇಳಿದ್ದಾರೆ: ''ಅಮೆರಿಕಾದ ನೆರವಿನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪದ ಪ್ರಯೋಗದಲ್ಲೇ ತಪ್ಪಿದೆಯಾದ್ದರಿಂದ ನಿಜಸ್ವರೂಪ ತಿಳಿಯುವುದು ಕಷ್ಟವಾಗಿದೆ. ಅಮೆರಿಕಾದ ನೆರವು ದಾನವಲ್ಲವೆಂಬುದು ಪ್ರಮುಖ ವಿಷಯ. ಈ ನೆರವಿನಿಂದ ಅಮೆರಿಕಕ್ಕೆಷ್ಟು ಪ್ರಯೋಜನವಿದೆಯೆಂಬುದನ್ನು ಮರೆಯಬಾರದು. ಅವರು ನೀಡುವ ನೆರವೆಲ್ಲಾ ಅವರ ದೇಶದಲ್ಲೇ ಖರ್ಚುಮಾಡಲಾಗುತ್ತಿದೆ. ಇದರಿಂದ ಅವರಲ್ಲಿ ಉದ್ಯೋಗದ ಹೆಚ್ಚಳ, ಲಾಭ, ಎಲ್ಲಾ ಉಂಟು.'' ಪಿ. ಎಲ್. ೪೮೦ ಎಂದು ಕುಪ್ರಸಿದ್ಧಿಗೆ ಬಂದಿರುವ ವ್ಯವಹಾರದಲ್ಲೂ ಇದೇ ಅಂಶ ಅಡಗಿದೆ. ಅದು ಪಿ. ಎಲ್. ೪೨೦. ಆಗಿದ್ದಿದ್ದರೆ ಸೂಕ್ತವಾಗಿರುತ್ತಿತ್ತೇನೋ! ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳಿಗೆ ಅಮೆರಿಕಾ ಪಡೆಯಬಹುದಾದ ಬೆಲೆಗಿಂತಲೂ ಹೆಚ್ಚು ಬೆಲೆ ಈ ನೆರವಿನಲ್ಲಿ ಅವರಿಗೆ ದೊರೆಯುತ್ತಿದೆ. ನೆರವು ಪಡೆದ ರಾಷ್ಟ್ರಗಳಿಗೆ ಆ ಧಾನ್ಯವನ್ನು ಸಾಗಿಸುವುದರಲ್ಲೂ ಅಮೆರಿಕೆಯ ನೌಕೆಗಳನ್ನೇ ಉಪಯೋಗಿಸ ಬೇಕೆಂಬ ಕಟ್ಟಾಜ್ಞೆ ಬೇರೆ! ಹೀಗಿರುವಾಗ ಸಾಗಾಣಿಕೆಗೆ ಅವರು ನಿಗದಿ ಮಾಡಿದ್ದೇ ಬೆಲೆ. ವಿಲಿಯಂ ಗಾಡ್ ಎಂಬ ಅಮೆರಿಕಾದ ಅರ್ಥಶಾಸ್ತ್ರಜ್ಞರು ತಮ್ಮ ಕೃತಿಯೊಂದರಲ್ಲಿ ಹೇಳುವುದಿದು: ''ನೆರವು ನೀಡುವುದರಿಂದ ಅಮೆರಿಕಾದ ಹಣ ಹೊರ ರಾಷ್ಟ್ರಗಳಿಗೆ ಹೋಗುವುದೆಂಬ ತಪ್ಪು ಕಲ್ಪನೆ ನಮ್ಮಲ್ಲಿದೆ. ಹಾಗಾಗುವುದಿಲ್ಲ. ಅಮೆರಿಕಾದಲ್ಲಿ ಸರಂಜಾಮು, ಕಚ್ಚಾ ಪದಾರ್ಥಗಳು, ತಜ್ಞರ ಸಲಹೆ, ಆಹಾರ ಇತ್ಯಾದಿಗಳನ್ನು ಕೊಳ್ಳಲು ಆ ಹಣ ಇಲ್ಲೇ ವ್ಯಯವಾಗುತ್ತದೆ. ನೆರವಿನ ಶೇಕಡಾ ೯೩ರಷ್ಟನ್ನು ಅಮೆರಿಕಾದಲ್ಲೇ ಅವರು ಖರ್ಚುಮಾಡ ಬೇಕಾಗುತ್ತದೆ. ಕಳೆದ ಒಂದು ವರ್ಷದಲ್ಲೇ ಅಮೆರಿಕಾದ ೪೦೦೦ ಉದ್ಯಮಗಳು ೧೩೦ ಕೋಟಿ ಡಾಲರುಗಳ ವಸ್ತುಗಳನ್ನು ಮಾರಿ ಹಣ ಶೇಖರಿಸಿದ್ದಾರೆ.'' ಇಷ್ಟೆಲ್ಲಾ ಸಾಲದೆಂಬಂತೆ ವಿದೇಶಿ ನೆರವಿಗೆ ಸಂಬಂಧಿಸಿದ ರೂಪರೇಖೆಗಳನ್ನು ಸ್ಪಷ್ಟಪಡಿಸಲು ನೇಮಕಗೊಂಡಿದ್ದ ಅಮೆರಿಕಾದ ಕ್ಲೇ ಸಮಿತಿಯು ತನ್ನ ೧೯೬೩ರ ವರದಿಯಲ್ಲಿ ಹೀಗೆ ನಮೂದಿಸಿತು: ''ಅಮೆರಿಕಾವು ವಿದೇಶಿ ಸರ್ಕಾರಗಳಿಗೆ ನೆರವು ನೀಡುವಾಗ ಸರ್ಕಾರಿ ಕ್ಷೇತ್ರದಲ್ಲಿ ರಚಿತವಾಗುವ ಉದ್ಯಮಗಳಿಗೆ ನೆರವು ನೀಡಕೂಡದೆಂದು ನಮ್ಮ ಸಲಹೆ. ಏಕೆಂದರೆ ಆಯಾ ದೇಶಗಳಲ್ಲಿರುವ ಖಾಸಗಿ ಉದ್ಯಮಗಳಿಗೆ ಪ್ರತಿಸ್ಪರ್ಧಿಯಾಗಿ ಸರ್ಕಾರಿ ಉದ್ಯಮವು ಬೆಳೆಯುತ್ತದೆ.'' – ಇದು ಸಾಮ್ರಾಜ್ಯಶಾಹಿ ರಾಷ್ಟ್ರಗಳ ವಿದೇಶಿ ನೆರವಿನ ತತ್ವಪ್ರಣಾಳಿಕೆ, ಸ್ವರೂಪ ಮತ್ತು ಕಾರ್ಯಾಚರಣೆ. ಇಂತಹ ಸಂದರ್ಭದಲ್ಲಿ ಭಾರತವು ಅನುಭವಿಸುವ ಕಷ್ಟನಷ್ಟಗಳೇನು?

ಅಮೆರಿಕಾ, ಬ್ರಿಟನ್, ಇತ್ಯಾದಿ ರಾಷ್ಟ್ರಗಳಲ್ಲಿ ನಾವು ನೆರವಿನಿಂದ ಪಡೆದ ಸಂಪೂರ್ಣ ಹಣವನ್ನು ಅಲ್ಲೇ ಖರ್ಚುಮಾಡಿ ಅವರು ನಿಗದಿ ಮಾಡಿದ ಬೆಲೆಗೆ ಅವರ ಉತ್ಪಾದಿತ ವಸ್ತುಗಳನ್ನು ಕೊಂಡು ತರಬೇಕು; ಮತ್ತು ಆ ಹಣಕ್ಕೆ ಶೇಕಡಾ ೧೦ರಿಂದ ೧೬ರವರೆಗೆ ಬಡ್ಡಿಯನ್ನೂ ತೆರಬೇಕು. ಹಾಗೆ ಪಡೆದ ಸಾಲವನ್ನು ಹಿಂದಿರುಗಿಸಲು ನಮ್ಮಲ್ಲಿ ಉತ್ಪಾದಿಸಲ್ಪಟ್ಟ ಸರಕುಗಳನ್ನು ಕೊಡುವಂತೆಯೂ ಇಲ್ಲ. ನಮ್ಮ ಕಚ್ಚಾವಸ್ತುಗಳನ್ನೋ, ಸೆಣಬು, ಟೀ, ಸಕ್ಕರೆ ಇತ್ಯಾದಿಗಳನ್ನು ಮಾರಿ ಗಳಿಸಿದ ವಿದೇಶಿ ವಿನಿಮಯವನ್ನೋ ನಾವು ನೀಡಿ ಸಾಲವನ್ನು

ಹಿಂದಿರುಗಿಸಬೇಕು. ಈ ಎಲ್ಲ ಕಾರಣಗಳಿಂದ ಸಾಮ್ರಾಜ್ಯಶಾಹಿಯ ನೆರವು ನೆರವಲ್ಲ, ಅದೊಂದು ಹೊರೆ. ಈ 'ನೆರವು' ಎನಿಸಿಕೊಂಡ ಸಾಲದ ಜೊತೆಗೆ ಸಾಮ್ರಾಜ್ಯಶಾಹಿಯ ಕ್ಷುಲ್ಲಕ ರಾಜಕೀಯ, ಸಿ.ಐ.ಎ. ಬೇಹುಗಾರಿಕೆ, ಸರ್ಕಾರಗಳನ್ನು ಪಲ್ಲಟಗೊಳಿಸುವ ಅವರ ಅಸಂಸ್ಕೃತ ಪದ್ಧತಿ, ಎಲ್ಲಾ ನಮ್ಮ ರಾಷ್ಟ್ರಗಳನ್ನು ಹೊಗುತ್ತವೆ. ಇದರಿಂದ ಉಂಟಾಗಬಹುದಾದ ಕುತ್ತಿನ ವಿಮರ್ಶೆ ಇಲ್ಲಿ ಅನಗತ್ಯ. ಬಹುರಾಷ್ಟ್ರೀಯ ಕಂಪನಿಗಳ ರಕ್ಷಣೆಯೇ ಸಾಮ್ರಾಜ್ಯಶಾಹಿಯ ಆದ್ಯಕರ್ತವ್ಯವಿದ್ದಂತೆ ತೋರುತ್ತದೆ. ಅದಕ್ಕಾಗಿ ವಿವಿಧ ರಾಷ್ಟ್ರಗಳ ಸರ್ಕಾರಗಳನ್ನುರುಳಿಸಲು ಅಥವಾ ರಾಷ್ಟ್ರನಾಯಕರನ್ನು ಕೊಲ್ಲಲು ಸಹ ಈ ದುಷ್ಟಶಕ್ತಿಗಳು ಹೇಸುವುದಿಲ್ಲ. 'ಅಸ್ಥಿರೀಕರಣ' ಎಂಬೊಂದು ಪದವನ್ನು ಸಾಮ್ರಾಜ್ಯಶಾಹಿಯು ಹೊಸದಾಗಿ ಸೃಷ್ಟಿಸಿಕೊಂಡಿದೆ. ಈ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಬಂಡವಾಳವನ್ನಾಗಲಿ ತಾಂತ್ರಿಕ ಜ್ಞಾನವನ್ನಾಗಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಬಳುವಳಿಯನ್ನಾಗಿ ನೀಡುವುದಿಲ್ಲ. ಹಾಥಿ ಸಮಿತಿಯವರು ನಮ್ಮ ರಾಷ್ಟ್ರದ ಔಷಧ ಸಾಮಗ್ರಿಗಳ ತಯಾರಿಕೆಯನ್ನು ಕುರಿತು ನೀಡಿರುವ ವರದಿಯನ್ನು ನೋಡಿದರೆ ಸಾಕು, ನಮಗೆ ಸಾಮ್ರಾಜ್ಯಶಾಹಿಯ ಕುನೀತಿಯು ಮನದಟ್ಟಾಗುತ್ತದೆ. ವಿಶ್ವಸಂಸ್ಥೆಯ ಅಂಗವಾದ ಅಂಕ್ಟಾಡ್ ತಿಳಿಸಿರುವಂತೆ, ನಮ್ಮ ವಿಜ್ಞಾನಿಗಳನ್ನು ಹಾಗೂ ತಾಂತ್ರಿಕಜ್ಞರನ್ನು ಸೆಳೆದುಕೊಳ್ಳುವುದರಿಂದಲೇ ಸಾಮ್ರಾಜ್ಯಶಾಹಿಗಳು ನಮ್ಮಿಂದ ವರ್ಷಕ್ಕೆ ೬೦೦ ಕೋಟಿ ರೂಪಾಯಿಗಳನ್ನು ಅಪಹರಿಸುತ್ತಿದ್ದಾರೆ. ಸೆಪ್ಟೆಂಬರ್ ೧೯೭೪ರಲ್ಲಿ ಮದ್ರಾಸಿನಲ್ಲಿ ಮಾತನಾಡುತ್ತಾ ಅಂದಿನ ಭಾರತದ ಪ್ರಧಾನ ಮಂತ್ರಿ ಇದನ್ನು ೬೫೬ ಕೋಟಿ ರೂಪಾಯಿಗಳೆಂದು ನಮೂದಿಸಿದ್ದರು.

ಇದಕ್ಕೆ ವಿರುದ್ಧವಾಗಿ ಸಮಾಜವಾದಿ ರಾಷ್ಟ್ರಗಳೊಡನೆ ನಾವಿಟ್ಟುಕೊಂಡಿರುವ ಆರ್ಥಿಕ ಸಂಬಂಧಗಳೆಂತಹವು ? ಅವರಿಂದ ನಾವು ಪಡೆಯುವ ನೆರವಿನ ಸ್ವರೂಪವೇನು ? ಆರ್ಥಿಕ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗಳಿಗೆ ಈ ನೆರವು ಅತ್ಯಂತ ಪ್ರಯೋಜನಕಾರಿಯಾಗಿದೆ ಎಂಬುದು ಸ್ವಲ್ಪ ವಿಮರ್ಶೆ ಮಾಡಿದರೆ ಅರಿವಾಗುತ್ತದೆ. ಸಮಾಜವಾದಿ ರಾಷ್ಟ್ರಗಳೊಡನೆ ಸಂಪರ್ಕ ಬೆಳೆಸಿದ್ದೇ ಉತ್ಪಾದನಾ ಸಾಮಗ್ರಿಗಳ ಮೂಲೋತ್ಪಾದನೆಯನ್ನು ನಾವು ಸ್ವತಃ ಮಾಡಿಕೊಳ್ಳುವುದಕ್ಕೆ ಶಕ್ತಿ ನೀಡಿದ್ದು ಮತ್ತು ಅವುಗಳ ಉಪಯೋಗದಿಂದ ಬೇರೆ ವಸ್ತುಗಳನ್ನು ಉತ್ಪಾದಿಸುವುದಕ್ಕೆ ಸಾಧ್ಯ ಮಾಡಿದ್ದು. ೧೯೫೫ರಲ್ಲಿ ಭಿಲೈ ಉಕ್ಕಿನ ಕಾರ್ಖಾನೆ ಸ್ಥಾಪಿಸಿದಾಗ ನಾವು ಹೊರಗಿನಿಂದ ತಂದುಕೊಂಡ ಯಂತ್ರಭಾಗಗಳು ಮತ್ತು ಇತರೆ ಸರಂಜಾಮುಗಳು ಶೇಕಡಾ ೬೦ರಷ್ಟಿತ್ತು. ಇಪ್ಪತ್ತು ವರ್ಷಗಳ ನಂತರ ಭಿಲೈಗಿಂತಲೂ ಮಹತ್ತಾದ ಬೊಕಾರೊ ಉಕ್ಕಿನ ಕಾರ್ಖಾನೆ ಸ್ಥಾಪಿಸಿದಾಗ ನಾವು ಹೊರಗಿನಿಂದ ತಂದುಕೊಂಡ ಸರಂಜಾಮು ಶೇಕಡಾ ೩೫ರಷ್ಟು ಮತ್ತು ಉಕ್ಕಿನ ಯಂತ್ರೋಪಕರಣಗಳು ಕೇವಲ ಶೇಕಡಾ ೧೦ರಷ್ಟು. ವಿದೇಶಗಳಲ್ಲಿ ಉಕ್ಕಿನ ಯಂತ್ರಾಗಾರಗಳನ್ನು ಸ್ಥಾಪಿಸುವಷ್ಟು ಸಹ ನಮ್ಮಲ್ಲೀಗ ತಾಂತ್ರಿಕ ಕುಶಲತೆ ಇದೆ. ಸೋವಿಯೆತ್ ಒಕ್ಕೂಟದ ನೆರವಿನ ಸ್ವರೂಪವನ್ನು ತಿಳಿಯಲು ಇದಕ್ಕಿಂತ ಬೇರೆ ನಿದರ್ಶನವೇ ಬೇಕಿಲ್ಲ. ಸಾಮ್ರಾಜ್ಯಶಾಹಿಯ ಯಾವ ನೆರವಿನಿಂದಲಾದರೂ ಇಂತಹ ಪ್ರತಿಫಲ ದೊರಕಿರುವ ಒಂದೇ ಒಂದು ನಿದರ್ಶನ ನಮಗೆ ಸಿಗಲಾರದು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತವು ಔದ್ಯೋಗಿಕ ರಂಗದಲ್ಲಿ ಹಾದುಬಂದಿರುವುದನ್ನು ಗಮನಿಸಿದರೆ ಮೊದಲಿಗೆ ನಮಗೆ ಕಾಣುವುದು ಅಮೆರಿಕಾ ಮತ್ತು ಬ್ರಿಟನ್‌ಗಳ ಉದ್ಧಟತನ ಮತ್ತು ಕುತಂತ್ರಗಳು. ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆ ಮತ್ತು ಎಲೆಕ್ಟ್ರಿಕಲ್ ಉಪಕರಣಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಭಾರತದಲ್ಲಿ ಪ್ರಾರಂಭಿಸಲು ಸಹಕಾರ ನೀಡಲು ಮೊದಲಿಗೆ ಅಮೆರಿಕಾ ಖಡಾಖಂಡಿತವಾಗಿ

ನಿರಾಕರಿಸಿದ್ದುದನ್ನು ನಾವು ಮರೆಯುವಂತಿಲ್ಲ. ಅಂತೆಯೇ ನಮ್ಮ ತೈಲ ಸಂಪತ್ತನ್ನು ರೂಢಿಸಿಕೊಳ್ಳಲು ಸಹ ಅವರು ಸಹಕಾರ ನೀಡಲಿಲ್ಲ. ನಮ್ಮಲ್ಲಿ ಬೇರುಬಿಟ್ಟಿದ್ದ ವಿದೇಶಿ ಕಂಪನಿಗಳ ಲಾಭಕೋರತನವನ್ನು ಕಾಪಾಡುವುದಕ್ಕಾಗಿ ಭಾರತದ ಔದ್ಯೋಗೀಕರಣವನ್ನೇ ವಿರೋಧಿಸಿದ ಕುಪ್ರಸಿದ್ಧಿ ಸಾಮ್ರಾಜ್ಯಶಾಹಿಗಣಕ್ಕೆ ಸದಾ ಕಾಲವೂ ಅಂಟಿಕೊಂಡೇ ಇರುತ್ತದೆ. ಸಾರ್ವಜನಿಕ ಕ್ಷೇತ್ರದ ಬೆಳವಣಿಗೆಗಂತೂ ಅದು ಒಡ್ಡಿರುವ ಅಡ್ಡಿಗೆ ಎಲ್ಲೆಯಿಲ್ಲ. ನಮ್ಮ ಇಂದಿನ ಆರ್ಥಿಕ ಜೀವನದಲ್ಲಿ ಸಾರ್ವಜನಿಕ ಕ್ಷೇತ್ರವೇ ಬೆನ್ನಲುಬಾಗಿ ಮಾರ್ಪಟ್ಟಿರುವುದು ಸಮಾಜವಾದಿ ರಾಷ್ಟ್ರಗಳು ನೀಡಿದ ನೆರವಿನಿಂದ. ಅವರೊಡನೆ ನಾವಿಟ್ಟುಕೊಂಡಿರುವ ಆರ್ಥಿಕ ಸಂಪರ್ಕಗಳಿಂದಾಗಿ ಬಂಡವಾಳಶಾಹಿ ರಾಷ್ಟ್ರಗಳೊಡನೆ ಆರ್ಥಿಕ ಸಂಪರ್ಕವನ್ನು ಬೆಳೆಸಿಕೊಳ್ಳುವಾಗ ಅವರ ಸ್ವೇಚ್ಛಾವೃತ್ತಿಯನ್ನು ತಡೆಗಟ್ಟಲು ಸಹ ನಮಗೆ ಸಾಧ್ಯವಾಗಿದೆ. ಇಲ್ಲದಿದ್ದಲ್ಲಿ ಸಾಮ್ರಾಜ್ಯಶಾಹಿಯು ಈ ವೇಳೆಗೆ ನಮ್ಮನ್ನು ಸುಲಿದು ತೇಗಿ ನಲಿದಾಡುತ್ತಿರ ಬಹುದಾಗಿತ್ತು. ನವವಸಾಹತುಶಾಹಿ ಧೋರಣೆಗಳ ವಿರುದ್ಧ ಸ್ಥೈರ್ಯದಿಂದ ಕಾದಾಡಲು ನಮಗೆ ಚೈತನ್ಯ ಬಂದಿರುವುದು ಸಮಾಜವಾದಿ ರಾಷ್ಟ್ರಗಳ ನೆರವಿನಿಂದ. ಇಲ್ಲಿ ಇನ್ನೊಂದಂಶವನ್ನೂ ಗಮನಿಸಬಹುದು: ಅಮೆರಿಕಾವು ವ್ಯಾಪಾರದ ರೀತಿಯಲ್ಲಿ ನಮಗೆ ನೀಡಿರುವ ಆಹಾರ ಧಾನ್ಯಗಳ 'ನೆರವು' ಎಂತಹದ್ದು? ನ್ಯೂಯಾರ್ಕಿನ ಕೋರ್ಟಿನಲ್ಲಿ ಭಾರತ ಸರ್ಕಾರ ಅಮೆರಿಕಾ ಮಾಡಿರುವ ಮೋಸ ಪ್ರಕರಣಗಳ ಬಗೆಗೆ ಹಿಂದೊಮ್ಮೆ ಮೊಕದ್ದಮೆ ಹೂಡಿತ್ತೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಅದಕ್ಕೆ ಉತ್ತರ ದೊರೆತೀತು. ಬೇರೆ ಕ್ಷೇತ್ರಗಳಲ್ಲಿಯೂ ಇದೇ ಕಥೆ. ಸಮಾಜವಾದಿ ರಾಷ್ಟ್ರಗಳ ಚಾರಿತ್ರ್ಯದಲ್ಲಿ ಇಂತಹ ಕುತಂತ್ರದ ಸೋಂಕೇ ಇಲ್ಲದಿರುವುದು ಸಮಾಜವಾದವು ಮಾನವೀಯತೆಯಲ್ಲಿಡುವ ನಿಷ್ಠೆಗೆ ಕುರುಹಾಗಿದೆ. ಈ ಕಾರಣದಿಂದಲೇ ೧೯೩೬ರಷ್ಟು ಹಿಂದೆಯೇ ಜವಹರಲಾಲ್ ನೆಹರೂ ಅವರು ಲಕ್ನೋ ಕಾಂಗ್ರೆಸ್ ಸಭೆಯಲ್ಲಿ ಘೋಷಿಸಿದ್ದುದು: ''ವಿಶ್ವದ ಮತ್ತು ಭಾರತದ ಸಮಸ್ಯೆಗಳಿಗೆಲ್ಲಾ ಸಮಾಜವಾದವೇ ಏಕೈಕ ಪರಿಹಾರವೆಂದು ನನಗೆ ಮನದಟ್ಟಾಗಿದೆ. ಈ ಪದವನ್ನುಪಯೋಗಿಸುವಾಗ ಮಾನವರು ಪರಸ್ಪರ ಸಹಾಯದಿಂದ ಬಾಳಬೇಕೆಂಬ ಅರ್ಥದಲ್ಲಿ ನಾನು ಪ್ರಯೋಗ ಮಾಡಿಲ್ಲ. ಅದನ್ನು ಆರ್ಥಿಕ ದೃಷ್ಟಿ ಎಂಬರ್ಥದಲ್ಲಿ ನಾನು ಪ್ರಯೋಗಿಸುತ್ತೇನೆ. ನಮ್ಮ ಕಡುಬಡತನ, ಕ್ರೂರ ನಿರುದ್ಯೋಗ, ಅನಿಷ್ಟ ಕೀಳುತನ ಮತ್ತು ದಾಸ್ಯಗಳೆಲ್ಲಾ ಸಮಾಜವಾದವೊಂದರಿಂದಲೇ ಮುಕ್ತಾಯವಾಗಲು ಸಾಧ್ಯ. ನಮ್ಮ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಹಲವು ಕ್ರಾಂತಿಕಾರಿ ಬದಲಾವಣೆಗಳಾಗದೆ ಸಮಾಜವಾದ ಅಸ್ತಿತ್ವಕ್ಕೆ ಬರಲಾರದು. ಭೂಮಿ ಮತ್ತು ಉದ್ಯಮಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ನಾಶವಾಗಬೇಕು. ವೈಯಕ್ತಿಕವಾದ ಖಾಸಗಿ ಆಸ್ತಿಯನ್ನುಳಿದು ಬೇರೆ ಖಾಸಗಿ ಆಸ್ತಿಯು ಅಂತ್ಯವಾಗಿ ಲಾಭಬಡುಕತನದ ಜಾಗದಲ್ಲಿ ಸಹಕಾರಿ ಮನೋವೃತ್ತಿ ಮತ್ತು ಕಾರ್ಯಾಚರಣೆ ಉಂಟಾಗಬೇಕು. ಸೂಕ್ಷ್ಮವಾಗಿ ಹೇಳುವುದಾದರೆ ಅದೊಂದು ನವೀನ ನಾಗರಿಕತೆಯ ಆವಿಷ್ಕಾರ; ಇಂದಿನ ಕುತ್ಸಿತ ಬಂಡವಾಳಶಾಹಿಯಿಂದ ತೀರ ಭಿನ್ನವಾದ ವ್ಯವಸ್ಥೆ ಅದು.''

ಇಂತಹ ವ್ಯವಸ್ಥೆಯುಂಟಾಗಿರುವ ರಾಷ್ಟ್ರಗಳ ಮನೋಧರ್ಮ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳ ಹಿನ್ನೆಲೆಯೇ ಬೇರೆ. ಮಾನವ ಮಾನವನಿಂದ ಶೋಷಣೆಗೆ ಸಿಲುಕದಂತಹ ವ್ಯವಸ್ಥೆಯನ್ನು ನಿರ್ಮಿಸುವುದೊಂದೇ ಆ ಸಂಸ್ಕೃತಿಯ ಆದ್ಯ ಗುರಿ. ಸಾಮ್ರಾಜ್ಯಶಾಹಿಯ ಹಿಡಿತದಿಂದ ತಪ್ಪಿಸಿಕೊಳ್ಳುವುದೂ ಇಂತಹದೊಂದು ಶೋಷಣೆಯಿಂದ ಹೊರಬರುವುದೇ ಆಗಿದೆ. ಅದಕ್ಕೆ ಸ್ವಯಂಪರಿಪೂರ್ಣವಲ್ಲದಿದ್ದರೂ ಸ್ವಾವಲಂಬನೆಯಿಂದ ಕೂಡಿದ ಆಂತರಿಕ

ಆರ್ಥಿಕ ಶಕ್ತಿಯು ಅವಶ್ಯಕ. ಈ ದೃಷ್ಟಿಯಿಂದ ಸಹಕಾರ ನೀಡುವುದು ಸಮಾಜವಾದಿ ರಾಷ್ಟ್ರಗಳ ನೆರವಿನ ಸ್ವರೂಪ. ಇಂತಹ ಆಧಾರದ ಮೇಲೆ ರೂಪಿತವಾಗುವುದು ನೂತನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ. ೧೯೭೪ರಲ್ಲಿ ವಿಶ್ವಸಂಸ್ಥೆಯು ಇದಕ್ಕೆ ಸಂಬಂಧಿಸಿದ ನಿರ್ಣಯವೊಂದನ್ನು ಅಂಗೀಕರಿಸಿತು. ಅದರಂತೆ ನೂತನ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧವು ''ಸಮಾನ ನೀತಿ, ಸಾರ್ವಭೌಮಿಕ ಸಮಾನತೆ, ಪರಸ್ಪರ ಹೊಂದಾಣಿಕೆ, ಸಾಮೂಹಿಕ ಹಿತಾಸಕ್ತಿ ಮತ್ತು ಸಹಕಾರಗಳ ಆಧಾರದ ಮೇಲೆ ರಚಿತವಾಗುತ್ತದೆ. ವಿವಿಧ ರಾಷ್ಟ್ರಗಳ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳು ಎಷ್ಟೇ ಭಿನ್ನವಾಗಿರಲಿ ಇಂತಹ ಸಹಕಾರದ ಆಧಾರ ಅವಶ್ಯಕ. ಅಸಮಾನತೆ ಮತ್ತು ಅನ್ಯಾಯಗಳ ನಿರ್ಮೂಲನ ಇದರಿಂದ ಮಾತ್ರ ಸಾಧ್ಯ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮತ್ತು ಆರ್ಥಿಕ ಮುನ್ನಡೆ ಸಾಧಿಸಿರುವ ರಾಷ್ಟ್ರಗಳ ನಡುವೆ ಉಂಟಾಗಿರುವ ತಾರತಮ್ಯವನ್ನು ತೊಲಗಿಸಲು ಸಹ ಇದು ಅನಿವಾರ್ಯವಾಗಿದೆ. ಈ ತಾರತಮ್ಯವನ್ನು ನೀಗಿಸದಿದ್ದರೆ ಇಂದಿನ ಮತ್ತು ಮುಂದಿನ ಪೀಳಿಗೆಗಳಿಗೆ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆ, ಶಾಂತಿ ಮತ್ತು ನ್ಯಾಯಗಳು ದೊರಕಲಾರವು.'' ಈ ನಿರ್ಣಯಕ್ಕೆ ಸಂಪೂರ್ಣ ಬೆಂಬಲ ದೊರೆತದ್ದು ಸಮಾಜವಾದಿ ರಾಷ್ಟ್ರಗಳಿಂದ. ''ನೂತನ ಅಂತರ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯೊಂದರ ಕಲ್ಪನೆಯನ್ನು ಒಪ್ಪಲು ನಮಗೆ ಸಾಧ್ಯವಿಲ್ಲ'', ಎಂದು ನುಡಿದವರು ಅಮೆರಿಕಾದ ಪ್ರತಿನಿಧಿ.

ಸೋವಿಯೆತ್ ಒಕ್ಕೂಟ ಮತ್ತಿತರ ಸಮಾಜವಾದಿ ರಾಷ್ಟ್ರಗಳ ನಡುವಣ ಆರ್ಥಿಕ ಒಪ್ಪಂದಗಳ ಪರಿಶೀಲನೆ ಮಾಡುವಾಗ ಇದನ್ನೆಲ್ಲಾ ನೆನಪಿನಲ್ಲಿಡುವುದು ಸಹಜವಾಗಿದೆ. ಸೋವಿಯೆತ್ ಸಹಕಾರದಿಂದ ಇಂದು ನಮ್ಮ ರಾಷ್ಟ್ರದಲ್ಲಿ ಎಂಭತ್ತಕ್ಕೂ ಹೆಚ್ಚು ಪ್ರಮುಖ ಯೋಜನೆಗಳು ಕಾರ್ಯಗತವಾಗಿವೆ. ಆರ್ಯಭಟ ಮತ್ತು ಕ್ಲುಪ್ತಮಾರುತದ ಅಧ್ಯಯನಗಳನ್ನು ಸೇರಿಸಿದರೆ ಇದರ ಪ್ರಮಾಣ ಇನ್ನೂ ಅದ್ಭುತವಾಗುತ್ತದೆ. ಉಕ್ಕು, ಎಣ್ಣೆ, ವಿದ್ಯುತ್, ಭಾರಿ ಯಂತ್ರೋಪಕರಣ, ಇತ್ಯಾದಿಗಳ ಬಹುಭಾಗದ ಉತ್ಪಾದನೆಯು ಈ ಯೋಜನೆಗಳ ಕೊಡುಗೆ ಯಾಗಿದೆ. ಅತಿ ಮಹತ್ವದ ಆರ್ಥಿಕ ಕ್ಷೇತ್ರಗಳಲ್ಲಿ ಬಿಕ್ಕಟ್ಟುಂಟಾದಾಗಲೆಲ್ಲಾ ಸೋವಿಯೆತ್ ನೆರವು ಬಿಕ್ಕಟ್ಟನ್ನು ಪರಿಹರಿಸಿ ನಮ್ಮ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಸಾಧ್ಯಮಾಡಿಕೊಟ್ಟಿದೆ. ೧೯೫೩ರಲ್ಲಿ ನಮ್ಮೆರಡು ರಾಷ್ಟ್ರಗಳ ನಡುವೆ ಇದ್ದ ವ್ಯಾಪಾರವು ೧.೩ ಕೋಟಿಯ ರೂಪಾಯಿಗಳಷ್ಟು ಮಾತ್ರ. ೧೯೭೪ರಲ್ಲಿ ಅದು ೬೪೬ ಕೋಟಿಯ ಗಡಿಯನ್ನು ದಾಟಿತ್ತು. ೧೯೭೫ರಲ್ಲಿ ೭೭೦ ಕೋಟಿ ರೂಪಾಯಿಗಳ ವ್ಯವಹಾರ ನಡೆಸಬೇಕೆಂಬ ತೀರ್ಮಾನಕ್ಕೂ ನಮ್ಮೆರಡು ರಾಷ್ಟ್ರಗಳು ಬಂದಿದ್ದುವು. ಈ ವ್ಯಾಪಾರದಲ್ಲಿ ನಾವು ತಯಾರಿಸುವ ಸಿದ್ಧವಸ್ತುಗಳ ಮಾರಾಟವೂ ಸೇರಿದೆಯೆಂಬುದು ಗಮನಾರ್ಹ. ಕಚ್ಚಾವಸ್ತುಗಳು, ಹೊಗೆಸೊಪ್ಪು, ಕಾಫಿ, ಟೀ ಇತ್ಯಾದಿಗಳನ್ನು ಮಾತ್ರ ಕೊಳ್ಳಲು ಹಾತೊರೆಯುವ ಸಾಮ್ರಾಜ್ಯಶಾಹಿ ರಾಷ್ಟ್ರಗಳಂತಲ್ಲದೆ ಸೋವಿಯೆತ್ ಒಕ್ಕೂಟವು ಭಾರತದಿಂದ ಉಕ್ಕು, ಅಲ್ಯೂಮಿನಂ, ವಿದ್ಯುದ್ವಾಹಕ ತಂತಿ, ಉಣ್ಣೆ ಹೆಣಿಗೆ ಉಡುಪು, ಬೇರೆ ಉಡುಪುಗಳು, ಇತ್ಯಾದಿಗಳನ್ನು ಕೊಳ್ಳಲು ಮುಂದೆ ಬಂದಿದೆ. ಇದರಿಂದ ನಮ್ಮ ಉತ್ಪಾದಕ ಶಕ್ತಿಗೆ ಹೆಚ್ಚಿನ ಬೆಂಬಲವೂ ದೊರೆತಂತಾಗಿದೆ. ಭಾರತಕ್ಕೆ ಕಚ್ಚಾವಸ್ತುವನ್ನೊದಗಿಸಿ ಅದರಿಂದ ತಯಾರಿಸಲಾದ ಸಿದ್ಧವಸ್ತುಗಳನ್ನು ಕೂಡ ಕೊಳ್ಳಲು ಮುಂದಾಗಿರುವ ಸೋವಿಯೆತ್ ಒಕ್ಕೂಟವು ವಸಾಹತುಶಾಹಿ ಪದ್ಧತಿಯನ್ನನುಸರಿಸುತ್ತಿದ್ದ ಪಾಶ್ಚಾತ್ಯ ರಾಷ್ಟ್ರಗಳಿಗಿಂತ ಸಂಪೂರ್ಣ ಭಿನ್ನವಾದ ಮಾದರಿ ವ್ಯಾಪಾರ ಸಂಬಂಧಗಳನ್ನು ಬೆಳೆಸಿದೆ.

ಇದೇ ರೀತಿಯ ಆರ್ಥಿಕ ಸಂಬಂಧಗಳು ಇನ್ನಿತರ ಸಮಾಜವಾದಿ ರಾಷ್ಟ್ರಗಳೊಡನೆಯೂ

ಬೆಳೆದಿರುವುದು ಭಾರತವು ಸಾಮ್ರಾಜ್ಯಶಾಹಿಯ ಬೆದರಿಕೆಗಳನ್ನೆದುರಿಸಲು ಸಾಮರ್ಥ್ಯವನ್ನೊದಗಿಸಿದೆ. ಆದರೆ ಆಂತರಿಕ ಆರ್ಥಿಕ ವ್ಯವಸ್ಥೆಯ ಪುನರ್‌ರಚನೆ ಮತ್ತು ಪ್ರತ್ಯೇಕ ರಾಜ್ಯಗಳ ಯೋಜನಾಬದ್ಧ ಸಹಕಾರ ಕಾರ್ಯಕ್ರಮಗಳ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಸ್ವಾತಂತ್ರ್ಯೋತ್ತರ ಕಾಲದ ಚರಿತ್ರೆಯಲ್ಲಿ ನಾವಿಂದು ಪರ್ವಕಾಲವನ್ನು ತಲುಪಿದ್ದೇವೆ. ಇಂದು ನಾವಿಡುವ ಹೆಜ್ಜೆಯು ನಮ್ಮ ಭವಿಷ್ಯವನ್ನು ಸುಭದ್ರಗೊಳಿಸಬಹುದು, ಇಲ್ಲವೇ ಅಸ್ತವ್ಯಸ್ತಗೊಳಿಸಬಹುದು. ಒಳಗಣ ಪ್ರತಿಗಾಮಿ ಶಕ್ತಿಗಳು ಹೊರಗಣ ಪ್ರತಿಗಾಮಿ ವರ್ಗಸ್ಸಿನಿಂದ ಪಿತೂರಿಯನ್ನು ನಡೆಸಿ ರಾಷ್ಟ್ರೀಯ ಜೀವನವನ್ನು ತಿರುಗು ಮುರುಗು ಮಾಡಿ ಕಾಲಚಕ್ರವನ್ನು ಹಿಂದಕ್ಕೊಯ್ಯಲು ಹವಣಿಸುತ್ತಿರುವುದನ್ನು ನಾವು ಮರೆತೆವಾದರೆ ನಮ್ಮ ಜನತೆಗೆ ಹಸಿ ಹಸಿ ಮೋಸ ಮಾಡಿದಂತಾಗುತ್ತದೆ. ಪ್ರತಿಗಾಮಿ ದುಷ್ಟ ಶಕ್ತಿಗಳ ವಿರುದ್ಧ ಸೆಣಸಾಟದಲ್ಲಿ ಯಶಸ್ಸು ದೊರಕಬೇಕಾದರೆ ಆ ಶಕ್ತಿಗಳ ನೆಲೆಯಾದ ಆರ್ಥಿಕ ಅವ್ಯವಸ್ಥೆ ಮತ್ತು ಬಂಡವಾಳಶಾಹಿ ಪದ್ಧತಿಯನ್ನು ಕೊನೆಗಾಣಿಸಲೇಬೇಕು. ಅದಕ್ಕಾಗಿ ನಮ್ಮ ಸಂಪನ್ಮೂಲಗಳ ಪುನರ್ಮೌಲ್ಯ, ಅವುಗಳ ಯೋಜಿತ ಮತ್ತು ಸುಧಾರಿತ ಉಪಯೋಗ ಹಾಗೂ ಹೊಸ ಮೂಲಗಳ ಅನ್ವೇಷಣೆ ಮತ್ತು ಪ್ರಯೋಜನ ನಮ್ಮ ಇಂದಿನ ಪ್ರಥಮ ಜವಾಬ್ದಾರಿ. ಸೀಮಿತವಾದ ಯೋಜನೆ ಇದಾಗಬಾರದು. ಸಮಗ್ರ ಸಂಪತ್ತಿನ ನವೀಕರಣ ನಮ್ಮ ಗುರಿಯಾಗಬೇಕು.

ಭಾರತದ ಇನ್ನಿತರ ರಾಜ್ಯಗಳಿಗಿಂತಲೂ ಸಂಪೂರ್ಣವಾಗಿ ವಿಭಿನ್ನವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆಯೆಂದು ಹೇಳಲಾಗದು. ಆಯಾಯ ರಾಜ್ಯಗಳ ಉತ್ಪಾದಕ ಶಕ್ತಿ, ಸಂಪನ್ಮೂಲಗಳು ಹಾಗೂ ರಾಷ್ಟ್ರೀಯ ಅವಶ್ಯಕತೆಗಳ ದೃಷ್ಟಿಯಿಂದ ರಾಜ್ಯಗಳ ಪ್ರತ್ಯೇಕ ಯೋಜನೆಗಳು ಮತ್ತು ಅವುಗಳ ಫಲಪ್ರದ ಕಾರ್ಯಾಚರಣೆಗೆ ನಾವು ತೊಡಗಬೇಕು. ಇಂತಹ ಹಲವಾರು ಯೋಜನೆಗಳ ಪೂರೈಕೆಗಾಗಿ ಅನುವಾಗುವಂತಹ ಸಮಾಜವಾದಿ ರಾಷ್ಟ್ರಗಳೊಡನೆ ಅಂತರರಾಷ್ಟ್ರೀಯ ಸಹಕಾರ ರೂಪುಗೊಳ್ಳಬೇಕು. ನಮ್ಮ ರಾಜ್ಯದಮಟ್ಟಿಗೆ ಹೇಳಬೇಕಾದರೆ ಕೃಷ್ಣಾ ನದಿಯ ಮೇಲ್ದಂಡೆಯ ಯೋಜನೆ, ಕಬ್ಬಿಣದ ಅದುರಿನ ಉಪಯೋಗ, ವಿದ್ಯುದುತ್ಪಾದನೆ, ಉಣ್ಣೆಯ ತಯಾರಿಕೆ, ಅಲ್ಯೂಮಿನಂ ತಯಾರಿಕೆಯ ಹೆಚ್ಚಳ (ಬಾಕ್ಸೈಟ್ ಉಪಯೋಗ), ಎಣ್ಣೆ ಬೀಜಗಳ ಅಧಿಕ ಉತ್ಪಾದನೆ, ಎಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆಯ ಅಭಿವೃದ್ಧಿ ಹಾಗೂ ನವೀಕರಣ, ಚರ್ಮದಿಂದ ತಯಾರಾಗುವ ವಸ್ತುಗಳ ಆಧುನಿಕ ಮಾದರಿಯ ಉತ್ಪಾದನೆ, ಅಭಿವೃದ್ಧಿ ಹಾಗೂ ನವೀಕರಣ, ನ್ಯೂಕ್ಲಿಯರ್ ಮತ್ತು ಸೌರಶಕ್ತಿಗಳ ಯೋಜನೆ, ಹೊಗೆಸೊಪ್ಪಿನ ಮಾದರಿ ಉತ್ಪಾದನೆ, ರೇಷ್ಮೆ ಬೆಳೆಯ ಹಾಗೂ ಬಟ್ಟೆಗಳ ಅಧಿಕ ಉತ್ಪಾದನೆ ಮತ್ತು ರಫ್ತು, ಹತ್ತಿಗಿರಣಿಗಳ ಅಧಿಕ ವಿಸ್ತೃತ ಬೆಳವಣಿಗೆ, ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ, ಉತ್ತಮ ತಳಿಯ ಆಹಾರ ಧಾನ್ಯ ಬೀಜಗಳ ಉತ್ಪಾದನೆ ಮತ್ತು ಶೇಖರಣೆ, ಅಧಿಕ ಗೊಬ್ಬರದ ತಯಾರಿಕೆ, ಇತ್ಯಾದಿಗಳಿಗೆ ತುರ್ತು ಆದ್ಯತೆ ನೀಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಯುರೇನಿಯಂ ನಿಕ್ಷೇಪದ ಪತ್ತೆಯಾಗಿದೆ ಎಂಬ ವರದಿಯು ನಮಗೆ ಹೊಸ ಹುರುಪನ್ನು ನೀಡುವಂಥದು; ಆದರೆ ಯಾವ ಕಾರಣದಿಂದಲೂ ಅದು ಸಾಮ್ರಾಜ್ಯಶಾಹಿ ರಾಷ್ಟ್ರಗಳ ಸಹಕಾರದಿಂದ ಹೊರತೆಗೆಯುವಂತಾಗಬಾರದು ಅಥವಾ ಅವರ ಪಾಲಿಗೂ ಹೋಗಕೂಡದು. ಅದಕ್ಕೆ ಸೂಕ್ತ ಕಾರ್ಯಕ್ರಮವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಳ್ಳಬೇಕು. ಕೃಷ್ಣಾ ಮೇಲ್ದಂಡೆಯು ಹಲವು ಲಕ್ಷ ಎಕರೆ ಭೂಮಿಗೆ ನೀರೊದಗಿಸಲು ಸಮರ್ಥವಾದ್ದರಿಂದ ಅದಕ್ಕೆ ಅಗ್ರಸ್ಥಾನ ನೀಡಬೇಕಾದದ್ದು ರಾಜ್ಯದ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಸಹಜವಾಗಿದೆ. ಈ ಯೋಜನೆಗೆ ತಗಲುವ ಖರ್ಚು

೧೧೬ ಕೋಟಿ ರೂಪಾಯಿಗಳಿಗಿಂತಲೂ ಸ್ವಲ್ಪ ಹೆಚ್ಚು. ಈವರೆವಿಗೆ ಯೋಜನೆಯ ಕೆಲಸ ಕುಂಟುತ್ತಲೇ ಸಾಗುತ್ತಿದೆ. ಸಾಮ್ರಾಜ್ಯಶಾಹಿಯ ಕೈಗೂಸಾದ ವಿಶ್ವಬ್ಯಾಂಕ್ ಈ ಯೋಜನೆಯಲ್ಲಿ ಮೊದಲಿಗೆ ನಿರಾಸಕ್ತಿಯನ್ನು ತೋರಿ ಈಗ ಮತ್ತೆ ಸಹಕಾರ ನೀಡಲು ಒಪ್ಪಿದೆ. ಏನೇ ಆದರೂ ಕುಸಿಯುತ್ತಿರುವ ಬಂಡವಾಳಶಾಹಿಯ ಆಸರೆ ಪಡೆದು ಈ ಯೋಜನೆಯನ್ನು ಗುರಿಮುಟ್ಟಿಸುವುದಶಕ್ಯ. ಆದ್ದರಿಂದ ಸಮಾಜವಾದಿ ರಾಷ್ಟ್ರಗಳಿಂದ ತಾಂತ್ರಿಕ ಮತ್ತು ಆರ್ಥಿಕ ನೆರವನ್ನು ಪಡೆದು ಈ ಯೋಜನೆಯನ್ನು ಪೂರೈಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾರ್ಯಕ್ರಮ ಹಾಕಿಕೊಳ್ಳಬೇಕು. ವಿಶ್ವದಾದ್ಯಂತ ೩೦೦೦ಕ್ಕೂ ಹೆಚ್ಚು ಔದ್ಯಮಿಕ ಮತ್ತಿತರ ಯೋಜನೆಗಳಲ್ಲಿ ತೊಡಗಿರುವ ಸಮಾಜವಾದಿ ಒಕ್ಕೂಟವು ಈ ಪ್ರಮುಖ ಯೋಜನೆಯಲ್ಲಿ ಪಾಲ್ಗೊಂಡರೆ ನಮ್ಮ ರಾಜ್ಯದ ಸುಭದ್ರತೆ ಹೆಚ್ಚುತ್ತದೆ. ವರ್ಗಾವಣೆಗೆ ನಿಲುಕುವ ರೂಬಲ್‌ನಿಧಿ *(Transferable Rouble Fund)*ಯಿಂದ ಯೋಜನೆಗೆ ಬೇಕಾದ ಹಣವನ್ನೊದಗಿಸಲು ಮಾತುಕತೆ ಪ್ರಾರಂಭಿಸಬೇಕು. ಸಮಾಜವಾದಿ ರಾಷ್ಟ್ರಗಳ ಒಕ್ಕೂಟವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನೊದಗಿಸುವ ಸಲುವಾಗಿಯೇ ಒಂದು ವಿಶೇಷ ನಿಧಿಯನ್ನು ಅಂತರರಾಷ್ಟ್ರೀಯ ಹಣ ತೊಡಗಿಸುವ ಬ್ಯಾಂಕಿನ ಆಶ್ರಯದಲ್ಲಿ ಸ್ಥಾಪಿಸಿದೆ. ಈ ಬ್ಯಾಂಕಿನ ಮುಖೇನ ನೆರವನ್ನು ಪಡೆಯುವುದರಿಂದ ಕೆಲವು ವಿಶಿಷ್ಟ ಸೌಲಭ್ಯ ಗಳನ್ನು ನಾವು ಪಡೆಯಬಹುದು. ಸಮಾಜವಾದಿ ರಾಷ್ಟ್ರಗಳ ಒಕ್ಕೂಟಕ್ಕೆ ಸೇರಿದ ಯಾವೊಂದು ರಾಷ್ಟ್ರಕ್ಕಾದರೂ ವಸ್ತುಗಳನ್ನು ರಫ್ತುಮಾಡಿ ನಾವು ಪಡೆದ ಹಣವನ್ನು ಹಿಂದಿರುಗಿಸಬಹುದು, ಮತ್ತು ನಾವು ಯಾವ ರಾಷ್ಟ್ರದಲ್ಲಾದರೂ ನಮಗೆ ಬೇಕಾದ ವಸ್ತುಗಳನ್ನು ಕೊಳ್ಳಬಹುದು. ನಮ್ಮ ರಾಜ್ಯವು ಪಡೆಯಬಹುದಾದ ಆರ್ಥಿಕ ನೆರವನ್ನು ನಮ್ಮ ರಾಜ್ಯದಿಂದಲೇ ರಫ್ತು ಮಾಡಲ್ಪಡುವ ವಸ್ತುಗಳಿಂದ ಸರಿದೂಗಿಸಬಹುದು, ಅಥವಾ ಸರಿದೂಗಿಸಬೇಕು. ನಮ್ಮ ರಾಜ್ಯ ಸರ್ಕಾರವು ಇದರತ್ತ ತೀವ್ರವಾಗಿ ಗಮನಹರಿಸಬೇಕು.

ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಸಾರ್ವಜನಿಕ ಕ್ಷೇತ್ರದ ಹಲವು ಕಾರ್ಖಾನೆಗಳಿವೆ. ಆದರೆ ಭಾರತ-ಸೋವಿಯೆತ್ ಸಹಕಾರದಿಂದ ಸ್ಥಾಪಿಸಲಾದ ಒಂದಾದರೂ ಉದ್ಯಮವಿಲ್ಲದಿರುವುದು ಆಶ್ಚರ್ಯಕರ. ಎಲೆಕ್ಟ್ರಾನಿಕ್ ಉಪಕರಣಗಳ ಹೆಚ್ಚಳ ಉತ್ಪಾದನೆಗಾಗಿ ಅಂತಹ ಒಂದು ಉದ್ಯಮವನ್ನು ನಮ್ಮ ರಾಜ್ಯದಲ್ಲೆಲ್ಲಾದರೂ ಸ್ಥಾಪಿಸಬೇಕು. ರಫ್ತಿಗೇ ಮೀಸಲಾದಂತಹ ಬಟ್ಟೆಯನ್ನು ತಯಾರಿಸುವ ಹತ್ತಿಗಿರಣಿಯೊಂದನ್ನು ಸಹಕಾರಿ ಕ್ಷೇತ್ರದಲ್ಲಿ ಅಥವಾ ಸಾರ್ವಜನಿಕ ಕ್ಷೇತ್ರದಲ್ಲಿ ಸೋವಿಯೆತ್ ಸಹಕಾರದಿಂದ ಪ್ರಾರಂಭಿಸಿ ನಮ್ಮ ಉದ್ಯೋಗದ ಸಮಸ್ಯೆಯನ್ನು ಕಿಂಚಿತ್ತಾದರೂ ಪರಿಹರಿಸಬೇಕು, ಮತ್ತು ಸನ್ನಿಪಾತದಿಂದ ನರಳುತ್ತಿರುವ ಗಿರಣಿಗಳಿಗೆ ಜೀವದಾನ ಮಾಡಬೇಕು. ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಹೇರಳವಾಗಿ ಮಾತು ಕೇಳಿಬರುತ್ತಿದೆಯಾದರೂ ಕಾರ್ಯತಃ ಸಮಾಧಾನಕಾರಕ ಪರಿಸ್ಥಿತಿ ಒದಗಿಬಂದಿಲ್ಲ. ಬೊಕಾರೋಗೆ ಬೇಕಾದ ಸಹಕಾರ ನೀಡಿರುವ ಸೋವಿಯೆತ್ ಒಕ್ಕೂಟ ಇಲ್ಲವೇ ಜರ್ಮನ್ ಜನವಾದೀ ಗಣತಂತ್ರ, ಅಥವಾ ಬೇರಾವುದಾದರೂ ಸಮಾಜವಾದಿ ರಾಷ್ಟ್ರದಿಂದ ನೆರವು ಪಡೆದು ಇನ್ನು ವೇಳೆಯನ್ನು ವ್ಯಯಮಾಡದೆ ನಾವು ಈ ಕಾರ್ಖಾನೆಯನ್ನು ಕೂಡಲೆ ಸ್ಥಾಪಿಸಬೇಕು. ನಮ್ಮ ರಾಜ್ಯದಲ್ಲಿ ಇಂತಹ ಉಕ್ಕಿನ ಕಾರ್ಖಾನೆಗೆ ಬೇಕಾದ ಸಂಪನ್ಮೂಲಗಳು ಹೇರಳವಾಗಿವೆ. ಇರಾನಿಗೆ ರಫ್ತು ಮಾಡಬೇಕಾದ ಕಬ್ಬಿಣದ ಅದುರನ್ನು ಕಡಿಮೆ ಮಾಡಿ ಕುದುರೆಮುಖ ಯೋಜನೆಯನ್ನು ವಿಸ್ತೃತ ರೀತಿಯಲ್ಲಿ ಬೆಳೆಸಿದರೆ ರಾಜ್ಯದ ಕಲ್ಯಾಣ ಸಾಧ್ಯವಾದೀತು. ಅಂತೆಯೇ ನ್ಯೂಕ್ಲಿಯರ್ ಶಕ್ತಿಯ ಉತ್ಪಾದನೆಗೆ ನಮ್ಮ

ರಾಜ್ಯದಲ್ಲಿರುವ ಯುರೇನಿಯಂ ನಿಕ್ಷೇಪದ ಬಗೆಗಿನ ವಾರ್ತೆಯು ಹುರುಪಿನ ಸಂದೇಶ ನೀಡಿದಂತಾಗಿದೆ. ಇದನ್ನುಪಯೋಗಿಸಿಕೊಳ್ಳಲು ನಮ್ಮ ರಾಜ್ಯದಲ್ಲೇ ಉದ್ಯಮವನ್ನು ಹೂಡಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಬೇಕಾದುದು ನಮ್ಮ ಕರ್ತವ್ಯ. ನಮ್ಮ ರಾಜ್ಯದ ಬಹುಮುಖವಾದ ಔದ್ಯೋಗಿಕ ಬೆಳವಣಿಗೆಯು ಯಥಾವತ್ತಾಗಿ ಮುಂದೆ ಸಾಗಲು ಅತ್ಯಗತ್ಯವಾದ ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಅಣುಶಕ್ತಿಯನ್ನು ತೊಡಗಿಸಬೇಕು.

ಹೀಗೆ ಇನ್ನೂ ಎಷ್ಟೋ ಬೇರೆ ಬೇರೆ ಯೋಜನೆಗಳನ್ನು ನಾವು ನಿರೂಪಿಸಬೇಕು. ಸ್ವತಃ ನಾವೇ ಪೂರೈಸಬಹುದಾದ ಯೋಜನೆಗಳನ್ನು ಬಿಟ್ಟು ಮಿಕ್ಕ ಕಾರ್ಯಕ್ರಮಗಳಿಗೆ ಸೋವಿಯೆತ್ ಒಕ್ಕೂಟ ಅಥವಾ ಬೇರಾವುದಾದರೂ ಸಮಾಜವಾದಿ ರಾಷ್ಟ್ರದ ನೆರವು ಪಡೆದು ನಮ್ಮ ಆರ್ಥಿಕ ಶಕ್ತಿಯನ್ನು ಉತ್ತಮಪಡಿಸಿಕೊಳ್ಳಬೇಕು. ವ್ಯವಸಾಯ ಕ್ಷೇತ್ರದಲ್ಲಿ ಈಗಾಗಲೇ ಸಣ್ಣ ಪ್ರಮಾಣದಲ್ಲಿ ನಮ್ಮ ರಾಜ್ಯವು ಬಲ್ಗೇರಿಯಾದೊಡನೆ ಸಂಪರ್ಕ ಬೆಳೆಸಿದೆ. ಇದನ್ನು ಸ್ಥಿರೀಕರಿಸಿ ವ್ಯವಸಾಯ ತಾಂತ್ರಿಕತೆಯ ಸಂಪರ್ಕವನ್ನೂ ವಿಸ್ತರಿಸಿಕೊಳ್ಳಬೇಕು. ಸಾಮ್ರಾಜ್ಯಶಾಹಿ ರಾಷ್ಟ್ರಗಳು ನಮ್ಮ ವ್ಯವಸಾಯ ಕ್ಷೇತ್ರದಿಂದ ಹೊರದೂಡಲ್ಪಡಬೇಕು. ಅತ್ಯಗತ್ಯವಾದ ವ್ಯಾವಸಾಯಿಕ ಕಾರ್ಯಕ್ರಮಗಳಿಗೆ ಈ ರಾಷ್ಟ್ರಗಳು ಅಡ್ಡ ಬಂದಿರುವುದಕ್ಕೆ ನಿದರ್ಶನಗಳಿವೆ. ಅಮೆರಿಕಾವು ರಾಸಾಯನಿಕ ಗೊಬ್ಬರದ ತಯಾರಿಕೆಯಲ್ಲಿ ನಮಗೊಡ್ಡಿದ್ದ ಆತಂಕಗಳನ್ನು ನಾವಿಲ್ಲಿ ಸ್ಮರಿಸಬಹುದು. ಮೇಲಾಗಿ ಅಮೆರಿಕಾ ತನ್ನ ಗೋಧಿಯನ್ನು ನಮಗೆ ಮಾರುವ ಆಸ್ಥೆ ಇಟ್ಟುಕೊಂಡಿರುವುದರಿಂದ ನಮ್ಮ ಕೃಷಿ ಕ್ಷೇತ್ರದ ಬೆಳವಣಿಗೆಗೆ ನಿರ್ವ್ಯಾಜವಾದ ನೆರವನ್ನು ನೀಡುವುದು ಆಗಿಹೋಗದ ಮಾತು. ನಮ್ಮ ವಿದ್ಯಾಸಂಸ್ಥೆಗಳಲ್ಲೂ ಸಾಮ್ರಾಜ್ಯಶಾಹಿಯ ಪರವಾದ ಧೋರಣೆಗಳು ಬೇರೂರದಿರಬೇಕಾದರೆ ಕೃಷಿ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಸಮಾಜವಾದಿ ರಾಷ್ಟ್ರಗಳ ನೆರವನ್ನು ಪಡೆಯಬೇಕಾದುದು ಅತ್ಯಗತ್ಯ. ನಮ್ಮ ರಾಜ್ಯದ ಆರ್ಥಿಕ ಸ್ವಾವಲಂಬನೆಯ ಸಾಧ್ಯತೆಯು ಈಗ ಪ್ರಮುಖ ಚಾರಿತ್ರಿಕ ಘಟ್ಟವನ್ನು ಮುಟ್ಟಿದೆ. ಈಗ ಮುನ್ನುಗ್ಗದೆ ಹಿಂಜರಿಯುವುದು ಸರ್ವಥಾ ಸಾಧುವಲ್ಲ. ಸಮಾಜವಾದಿ ಬಣದೊಡನೆ ಐಕ್ಯ ಕಾರ್ಯಕ್ರಮವನ್ನು ರೂಪಿಸಿ ಸ್ವತಃ ನಾವೂ ಸಮಾಜವಾದಿ ವ್ಯವಸ್ಥೆಯೊಂದನ್ನು ರೂಢಿಸಿಕೊಳ್ಳುವುದು ನಮ್ಮ ಇಂದಿನ ಚಾರಿತ್ರಿಕ ಕರ್ತವ್ಯ ಮತ್ತು ನಮ್ಮ ರಾಜ್ಯದ ಜನತೆಯು ಹೊತ್ತಿರುವ ಅತ್ಯಧಿಕ ಜವಾಬ್ದಾರಿ.

*–ಸೆಪ್ಟೆಂಬರ್ 1976*

---

(ಷರಾ : ಮೂವತ್ತು ವರ್ಷಗಳ ಹಿಂದಿನ ಈ ಲೇಖನವನ್ನು ಕೇವಲ ಕುತೂಹಲಕ್ಕಾಗಿ ದಾಖಲು ಮಾಡಲಾಗಿಲ್ಲ. ಅನೇಕ ಬದಲಾವಣೆಗಳ ನಡುವೆಯೂ ಸ್ವಾವಲಂಬನೆಯ ಹಾದಿಯನ್ನು ಮತ್ತೆ ಅನುಸರಿಸಬೇಕು ಮತ್ತು ಸಾಮ್ರಾಜ್ಯಶಾಹಿಯ ಕುತ್ತಿಗೆ ಹಿಡಿಯಬೇಕು.)

# ರಾಷ್ಟ್ರೀಯ ಶಿಕ್ಷಣ ನೀತಿ – ಒಂದು ವಿಮರ್ಶೆ

> ದುಡಿಯುವ ವರ್ಗದ ಶಿಕ್ಷಣವೆಂದರೆ ಬಂಡವಳಿಗರ ವರ್ಗಕ್ಕೆ ಸ್ವಲ್ಪ ಆತಂಕವೇ ಹೊರತು ವಿಶೇಷ ಆದರವೇನೂ ಇಲ್ಲ. ಬಂಡವಾಳಶಾಹಿಯು ದುಡಿಯುವವರಿಗೆ ನೀಡಲು ತಯಾರಾಗಿರುವ ಜೀವನ ಅತ್ಯಂತ ಕನಿಷ್ಠಮಟ್ಟದ್ದು. ಹೀಗಿರುವಾಗ ಅವರಿಗೆ ಇನ್ನೆಂತಹ ಶಿಕ್ಷಣ ನೀಡಬೇಕೆಂಬ ಆಶಯ ಬಂಡವಾಳಶಾಹಿಗೆ ಇದ್ದೀತು! ತನ್ನ ವರ್ಗದ ಹಿತಾಸಕ್ತಿಗೆ ತಕ್ಕಂತೆ ಮಾತ್ರ ದುಡಿಯುವ ವರ್ಗಕ್ಕೆ ಬಂಡವಾಳಶಾಹಿಯು ಶಿಕ್ಷಣ ನೀಡುತ್ತದೆ. ನಿಜವಾಗಿ ನೋಡಿದರೆ, ಅದು ಹೆಚ್ಚಿನ ಮಟ್ಟದ್ದೇನೂ ಅಲ್ಲ.
>
> – ಫ್ರೆಡರಿಕ್ ಏಂಗೆಲ್ಸ್

೧೯೭೭ರ ಚುನಾವಣೆಯಲ್ಲಿ ಆರಿಸಿಬಂದ ಪಕ್ಷದ ಸರ್ಕಾರ ಇಂದು ಕೇಂದ್ರದಲ್ಲಿ ಇಲ್ಲದಿದ್ದರೂ ಆ ಪಕ್ಷ ರಾಷ್ಟ್ರದ ಮುಂದಿಟ್ಟ ಶಿಕ್ಷಣ ನೀತಿ ಇನ್ನೂ ಚರ್ಚಾ ವಿಷಯವಾಗಿ ಉಳಿದಿದೆ. ಆ ನೀತಿಯ ಕರಡಿನ ಮೇಲೆ ಅನೇಕ ಅಭಿಪ್ರಾಯಗಳು ಹೊರಬಿದ್ದಿವೆ. ಈ ನೀತಿಯನ್ನು ಅನುಸರಣೆಗೆ ತಂದರೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮೂಲಭೂತವಾದ ಬದಲಾವಣೆಗಳಾಗಬಹುದೆಂದು ಯಾರೂ ಭಾವಿಸಿದಂತಿಲ್ಲ. ಅದು ಸೂಕ್ತವಾದ ಪ್ರತಿಕ್ರಿಯೆಯೇ ಆಗಿದೆಯೆನ್ನಬಹುದು. ಆಯೋಗಗಳು, ಕರಡುಗಳು, ಕಾರ್ಯಕ್ರಮಗಳ ಘೋಷಣೆ, ಹೊಸ ನಿಯಮಗಳ ಉಚ್ಚಾರ, ಇವೆಲ್ಲಾ ನಮ್ಮ ಆರ್ಥಿಕ ಕ್ಷೇತ್ರದ ಉಸಿರಾಗಿರುವಂತೆ ವಿದ್ಯಾಭ್ಯಾಸ ಕ್ಷೇತ್ರಕ್ಕೂ ಉಸಿರಾಗಿದೆ. ಆಡಳಿತ ಯಂತ್ರವನ್ನು ಉತ್ತಮಪಡಿಸುವುದರಿಂದ ಎಲ್ಲವನ್ನೂ ಸುಧಾರಿಸಿದಂತಾಗುತ್ತದೆಯೆಂಬ ನಿಲುವನ್ನು ತಳೆಯುವವರು ಕೂಡ ಇಂತಹ ಕೆಲವು ಆಯೋಗಗಳ ವರದಿಗಳಿಂದ ತೃಪ್ತರಾಗಿಲ್ಲ. ತೇಪೇದಾರಿ ಕೆಲಸದಿಂದ ಯಾವ ಹುರುಪಿನ ಬೆಳವಣಿಗೆಯೂ ಸಾಧ್ಯವಿಲ್ಲವೆಂದು ಭಾವಿಸಿರುವಂತಹವರಿಗಂತೂ ಈ ಆಯೋಗಗಳು ಮತ್ತು ಕರಡು ನೀತಿಗಳು ಅರ್ಥವತ್ತಾಗಿ ಉಳಿಯಲಾರವು.

ಇಂದಿನ ಕರಡು ನೀತಿಯನ್ನು ನಮ್ಮ ಮುಂದಿಟ್ಟ ಜನತಾ ಪಕ್ಷದ ಸರ್ಕಾರ ವಿದ್ಯಾಭ್ಯಾಸ ಕ್ರಮವನ್ನು ರೂಪಿಸಹೊರಟಿದ್ದು ಮೊದಲಿಗೆ ಕೆಲವು ಇತಿಹಾಸ ತಜ್ಞರು ಬರೆದಿದ್ದ ಪುಸ್ತಕಗಳನ್ನು ಉದ್ಧಟತನದಿಂದ ಹಿಂತೆಗೆದುಕೊಳ್ಳುವ ಮೂಲಕ ಎಂಬುದನ್ನು ಗಮನಿಸಬೇಕು. ತಮಗಿಂತಲೂ ಹೆಚ್ಚಿನ ರಾಷ್ಟ್ರಪ್ರೇಮ ಮತ್ತು ಮೇಧಾಶಕ್ತಿ ಬೇರೆಯವರಾರಿಗೂ ಇಲ್ಲವೆಂದು ಬಗೆದ ಇಬ್ಬರು ಲೋಕಸಭಾ ಸದಸ್ಯರು ಕುತ್ಸಿತ ಮತೀಯ ಭಾವನೆಯಿಂದ ಪ್ರೇರಿತರಾಗಿ ನೇರವಾಗಿ ಪ್ರಧಾನಮಂತ್ರಿಯವರಲ್ಲಿ ಈ ಪುಸ್ತಕಗಳ ವಿರುದ್ಧ ದೂರಿತ್ತು ಅವುಗಳನ್ನು ರದ್ದುಗೊಳಿಸಿದ್ದರು. ಅನಾಮಧೇಯರಾಗಿದ್ದುಕೊಂಡು ಇಂತಹ ಅಪಮಾರ್ಗಕ್ಕಿಳಿದ ಆ ಸದಸ್ಯರಿಗಾಗಲಿ ಇತಿಹಾಸ ತಜ್ಞರ ಸಲಹೆಯನ್ನೇ ಪಡೆಯದೆ ಅವರ ಬೇಡಿಕೆಯನ್ನು ಈಡೇರಿಸಿಕೊಟ್ಟ ಪ್ರಧಾನಿಯವರಿಗಾಗಲಿ ವಿದ್ಯಾಕ್ಷೇತ್ರದ ಬಗ್ಗೆ ಎಂತಹ ಸೂಕ್ಷ್ಮಭಾವನೆಗಳಿದ್ದುವೆಂಬುದಕ್ಕೆ ಇದೊಂದು ನಿದರ್ಶನ. ಇತಿಹಾಸತಜ್ಞರು ಈ ಕ್ರಮದ ವಿರುದ್ಧ ಪ್ರತಿಭಟಿಸಿದಾಗ ಅಂದಿನ ಸರ್ಕಾರ ಮಾಡಿದ್ದು ಯಾರಿಗೂ ಗೌರವ ತರುವಂತಹ ಕ್ರಮವಲ್ಲ.

ಬೇರೊಂದು ಇತಿಹಾಸ ಮಂಡಳಿಯನ್ನು ಹುಟ್ಟುಹಾಕಿ ಅದರ ಮುಖಾಂತರ 'ಸಂಶೋಧನೆ' ನಡೆಸಲು ಲಕ್ಷಗಟ್ಟಲೆ ಹಣವನ್ನು ಸರ್ಕಾರ ಅಪವ್ಯಯಗೊಳಿಸಿತು. ಆ ಸಂಸ್ಥೆಗೆ ಈಗಲೂ ಸರ್ಕಾರದಿಂದ ಹಣ ಅನುದಾನದ ರೂಪದಲ್ಲಿ ದೊರೆಯುತ್ತಿದೆ. ಕೇವಲ ಅವಿಷಯಕವಾಗಿ ಚರ್ಚಿಸಬೇಕಾಗಿದ್ದ ಒಂದು ಕ್ರಮಕ್ಕೆ ಸರ್ಕಾರ ಅತ್ಯಂತ ಪೂರ್ವಪೀಡಿತ ದೃಷ್ಟಿಯ ಪರಿಹಾರ ನೀಡಿತು. ಅಂತಹ ಅಂಧಮಾರ್ಗದ ಚರ್ಯೆ ವಿದ್ಯಾಭ್ಯಾಸಕ್ಕೆ ಮಾರಕವಾಗಿ ಪರಿಣಮಿಸ ಬಹುದೆಂಬ ಕಾಳಜಿಯೂ ಇಲ್ಲದೆ ಹೋದದ್ದು ಆಶ್ಚರ್ಯ. ಅಂತಹ ದೂರದೃಷ್ಟಿ ರಹಿತವಾದ ಧೋರಣೆಗೆ ಇನ್ನೊಂದು ಉದಾಹರಣೆಗೆ ಈಗ ನಮ್ಮ ಮುಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು.

ಕಳೆದ ಮೂವತ್ತು ವರ್ಷಗಳಲ್ಲಿ ಶಿಕ್ಷಣ ನಡೆದುಬಂದಿರುವ ಹಾದಿಯನ್ನು ಗಮನಿಸಿದರೆ ಕ್ರಮೇಣ ಪರಿಮಾಣದಲ್ಲಿ ವಿಸ್ತರಣೆಯಾಗಿರುವುದು ಯಾರಿಗಾದರೂ ತಿಳಿಯುತ್ತದೆ. ಆದರೆ ಇದೇ ಕಾಲದಲ್ಲಿ ಈ ವ್ಯತ್ಯಾಸದಿಂದಾಗಿ ಸೂಚ್ಯವಾದಂತಹ ಪರಿಣಾಮ ಯಾವುದೂ ಉಂಟಾಗಿಲ್ಲ. ಐದನೆಯ ಪಂಚವಾರ್ಷಿಕ ಯೋಜನೆಯ ನೀತಿಯಲ್ಲಿ ವಿದ್ಯಾಭ್ಯಾಸ ಕ್ಷೇತ್ರದ ಬಗ್ಗೆ ನಮೂದಿಸಿದ್ದುದರ ಪರಿಷ್ಕಾರ ರೂಪವಾಗಿ ಈ ಕರಡು ನೀತಿ ಬಂದಿದೆ. ಯೋಜನೆಗಳಿಗೆ ವಿದಾಯ ಹೇಳುವಂತಹ ಮಾರ್ಗವನ್ನು ಅನುಸರಿಸಿದ ಹಿಂದಿನ ಸರ್ಕಾರದ ಈ ಕರಡು ನೀತಿಗೆ ಹೊಸ ಸರ್ಕಾರ ಯಾವ ಪ್ರತಿಕ್ರಿಯೆ ಸೂಚಿಸುತ್ತದೆಂಬುದನ್ನು ಕಾದುನೋಡಬೇಕು. ಬಹುಶಃ ಅದನ್ನು ನಿರಾಕರಿಸಿ ಅದರಷ್ಟೇ ಅಸಮರ್ಪಕವಾದ ಇನ್ನೊಂದು ಕರಡನ್ನು ನಮ್ಮ ಮುಂದಿಡಬಹುದು !

ಕರಡು ನೀತಿಯಲ್ಲಿ ವಿಶೇಷ ಮನ್ನಣೆಗೆ ಪಾತ್ರವಾಗಿರುವ ಅಂಗವೆಂದರೆ ಖಾಸಗಿ ಸಂಸ್ಥೆಗಳು. ವಿದ್ಯಾಭ್ಯಾಸದ ಸಮಸ್ಯೆಗಳಿಗೆ ಪರಿಹಾರ ನೀಡಲು ಇವಕ್ಕೆ ಆಹ್ವಾನ ನೀಡಿರು ವಂತಿರುವುದು ಸೋಜಿಗದ ಸಂಗತಿ ಮಾತ್ರವಲ್ಲ, ಒಂದು ತರಹ ಈಸ್ಟ್ ಇಂಡಿಯಾ ಕಂಪನಿ ಧೋರಣೆಗೆ ಸಮಾನವಾದುದಾಗಿದೆ ಇದು. ಪ್ರೈಮರಿ ಘಟ್ಟದಲ್ಲಿ ಕೂಡ ಖಾಸಗಿತನಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಲು ಮುಂದಾಗಿರುವುದು ಸರ್ಕಾರದ ವೈಫಲ್ಯಕ್ಕೆ ಕಲಶವಿಟ್ಟಂತಿದೆ. ಜನಸಮುದಾಯದ ಹೆಚ್ಚು ಹೆಚ್ಚು ವಿಭಾಗಗಳು ಉನ್ನತ ಶಿಕ್ಷಣ ಪಡೆಯುವ ದಿಸೆಯಲ್ಲಿ ಹೊರಡುತ್ತಿರುವಾಗ ಅದಕ್ಕೆ ಅಡಚಣೆ ಉಂಟುಮಾಡುತ್ತದೆ ಈ ಹೊಸನೀತಿ. ನಮ್ಮಲ್ಲಿ ಈಗಲೂ ಸಮಾಜದ ಎಲ್ಲ ವಿಭಾಗಗಳೂ ಉನ್ನತ ಹಂತದ ಶಿಕ್ಷಣ ದೊರಕಿಸಿಕೊಳ್ಳಲು ಸಾಕಷ್ಟು ಅಡ್ಡಿಗಳಿವೆ. ಪ್ರಪ್ರಥಮ ಬಾರಿಗೆ ಈ ಛಾಯೆ ಸ್ವಲ್ಪ ಬದಲಾಗುತ್ತಿದ್ದಂತೆ ಹೊಸ ನೀತಿಯ ಆಘಾತ ತಟ್ಟಿದರೆ ಬೆಳವಣಿಗೆಯ ಹಾದಿಯನ್ನು ಮುಚ್ಚಿದಂತೆಯೇ ಸರಿ. 'ಸೀಮಿತ ಪ್ರವೇಶಾವಕಾಶ' ಮತ್ತು 'ಮಾದರಿಗಳಾಗಬಲ್ಲ ಶ್ರೇಷ್ಠಮಟ್ಟದ ಕಾಲೇಜುಗಳು' ಇತ್ಯಾದಿ ಕಲ್ಪನೆಗಳೆಲ್ಲಾ ಪ್ರಚ್ಛನ್ನವಾಗಿ ಸಮಾಜದ ಒಂದು ಭಾಗಕ್ಕೆ ಅಧಿಕ ಸವಲತ್ತುಗಳನ್ನು ಕಲ್ಪಿಸಿಕೊಡುವ ಮಾರ್ಗ, ಅಷ್ಟೆ. ಈಗಾಗಲೇ ಆರ್ಥಿಕ ಮತ್ತು ಸಾಮಾಜಿಕ ರಂಗಗಳಲ್ಲಿರುವಂತೆ ವಿದ್ಯಾಕ್ಷೇತ್ರದಲ್ಲಿ ಕೆಲವರಿಗೆ ಮಾತ್ರ ಸೌಲಭ್ಯ ಎಂಬುದು ಹಬ್ಬಿ ಬೆಳೆದಿದೆ. ಅದಕ್ಕೆ ಇನ್ನೂ ಹೆಚ್ಚಿನ ಪುಷ್ಟಿ ನೀಡುವ ನೀತಿಯನ್ನು ರಾಷ್ಟ್ರೀಯ ಶಿಕ್ಷಣದ ಕರಡು ನೀತಿ ಅನುಸರಿಸಿದೆ. ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗವು (ಯು.ಜಿ.ಸಿ.) ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆಯನ್ನು ಕುರಿತ ತನ್ನ 1978ರ ಧೋರಣಾ ಹೇಳಿಕೆಯಲ್ಲಿ ಹೀಗೆ ನುಡಿದಿತ್ತು: ''ಸೆಕೆಂಡರಿ ಹಂತದಲ್ಲಿ ಜರೂರಾಗಿ ಆಗಬೇಕಾದ ಅಗತ್ಯಗಳಲ್ಲಿ ಉದ್ಯೋಗ ಶಿಕ್ಷಣದತ್ತ ಆದ್ಯತೆ ನೀಡಬೇಕಾದದ್ದು ಪ್ರಮುಖವಾಗಿದೆ. ಇದರಿಂದಾಗಿ ಮಧ್ಯಮ ಶ್ರೇಣಿಗೆ ಸೇರುವ ತರಬೇತಿ ಹೊಂದಿದ ಮತ್ತು

ಅರೆತರಬೇತಿ ಪಡೆದ ಕೆಲಸಗಾರರು ನಮಗೆ ದೊರಕುತ್ತಾರೆ. ಶಿಕ್ಷಣ ಮತ್ತು ಉತ್ಪಾದನೆಗಳ ನಡುವೆ ಸಾಮಂಜಸ್ಯವನ್ನುಂಟುಮಾಡಲು ಈ ಕಾರ್ಯಕ್ರಮದಿಂದ ಸಾಧ್ಯ. ಮೇಲಾಗಿ, ವಿಶ್ವವಿದ್ಯಾನಿಲಯಗಳ ಮೇಲಿರುವ ಭಾರವನ್ನು ಇದು ತಗ್ಗಿಸುತ್ತದೆ.'' ಈ ಧೋರಣೆಯು ರಾಷ್ಟ್ರದ ಭವಿಷ್ಯದಲ್ಲಿನ ಅಗತ್ಯ ಮತ್ತು ಶಕ್ತಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಈ ಕ್ಷಣದ ಸಮಸ್ಯೆಯನ್ನು ಮಾತ್ರವೇ ಪರಿಹರಿಸಲು ಹೊರಟಿದೆ. ಬೇರೊಂದು ಕ್ಷೇತ್ರದಿಂದ ಉದಾಹರಣೆ ತೆಗೆದುಕೊಳ್ಳುವುದಾದರೆ, ಈಗ ನಮ್ಮ ರಾಷ್ಟ್ರ ಉಕ್ಕನ್ನು ರಫ್ತು ಮಾಡುತ್ತಿದೆ. ಅದರರ್ಥ, ನಮ್ಮ ರಾಷ್ಟ್ರಕ್ಕೆ ಸದಾ ಕಾಲಕ್ಕೂ ಬೇಕಾಗಬಹುದಾದಷ್ಟು ಉಕ್ಕನ್ನು ನಾವು ತಯಾರಿಸುತ್ತಿದ್ದೇವೆಂದಲ್ಲ. ಹಲವು ರೀತಿಯ ರಚನಾತ್ಮಕ ಯೋಜನೆಗಳಲ್ಲಿ ರಾಷ್ಟ್ರವು ತೊಡಗಿದರೆ ಉಕ್ಕಿಗೆ ಎಷ್ಟು ಬರ ಇದೆಯೆಂಬುದು ತಿಳಿದೀತು. ಉನ್ನತ ಶಿಕ್ಷಣದ ಗೋಳೂ ಇದೇ. ಸರ್ವಾಂಗೀಣವಾದ ಬೆಳವಣಿಗೆಗೆ ಬೇಕಾದಷ್ಟು ಮಂದಿ ಈಗಾಗಲೇ ನಮ್ಮ ರಾಷ್ಟ್ರದಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆಂದು ಭಾವಿಸುವುದು ವಿಪರ್ಯಾಸವಾಗುತ್ತದೆ. ಬೆಳವಣಿಗೆ ಹೊಂದದ ಸಂದರ್ಭದಲ್ಲಿ ಹೇಗೆ ಕೃತಕವಾಗಿ ಉಕ್ಕಿನ ಆಧಿಕ್ಯ ತೋರಿಬರುತ್ತದೋ ಹಾಗೆ ಉನ್ನತ ಶಿಕ್ಷಣದಲ್ಲೂ ಉಬ್ಬರವಿರುವಂತೆ ಭಾಸವಾಗುತ್ತದೆ. ರಾಷ್ಟ್ರದ ನಿಜ್ಜಳ ಅವಶ್ಯಕತೆಯ ದೃಷ್ಟಿಯಿಂದ ಅದರಲ್ಲಿ ಉಬ್ಬರವೇನೂ ಇಲ್ಲ, ಇನ್ನೂ ಕೊರತೆಯೇ ಇದೆ. ಹಾಗಿದ್ದೂ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆಯನ್ನು ಮಿತಗೊಳಿಸಿ ಕೆಳಗಿನ ವರ್ಗದವರನ್ನು ಅದರಿಂದ ದೂರವಿಡುವುದು ಒಂದು ಕುಚೋದ್ಯ ಮತ್ತು ಕುತರ್ಕ. ಒಂದು ಕಡೆ ಅತ್ಯಂತ 'ನಿಗದಿತ ಪ್ರವೇಶ' ಮತ್ತು 'ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ' ಐ.ಐ.ಟಿ. ಗಳಂತಹ ಸಂಸ್ಥೆಗಳು, ಇನ್ನೊಂದೆಡೆ ಉನ್ನತ ಶಿಕ್ಷಣಕ್ಕೆ ಕಡಿವಾಣ; ಹೀಗಾಗಿ ಇದೀಗ ಮೊದಲಬಾರಿಗೆ ಕಾಲೇಜುಗಳಿಗೆ ಪ್ರವೇಶ ಪಡೆಯಹೊರಟಿದ್ದ ಕೆಳ ವರಮಾನದ ಜನರಿಗೆ ನಿರಾಸೆ ಕಾದಿದೆ. ಹಿಂದೆ ಹೇಳಿದ ಯು.ಜಿ.ಸಿ. ಧೋರಣಾ ಹೇಳಿಕೆಯಲ್ಲಿ ಈ ಮಾತುಗಳು ಇವೆ : ''ಜನತೆಯ ಎಲ್ಲ ಭಾಗಗಳಿಂದ, ವಿಶೇಷತಃ ಕೆಳಮಟ್ಟದ ಜನರಿಂದ, ಉನ್ನತಶಿಕ್ಷಣಕ್ಕಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ನಾವು ಕಡೆಗಣಿಸುವಂತಿಲ್ಲ. ಅವರು ಸಾಮಾಜಿಕವಾಗಿ ಮೇಲಿನ ಮೆಟ್ಟಿಲುಗಳಿಗೆ ಹೋಗಲು ಇದೇ ಸಾಧನವೆಂಬುದು ಗಮನಾರ್ಹ. ಆದರೆ ಅದೇ ವೇಳೆಯಲ್ಲಿ ನಮ್ಮ ವ್ಯವಸ್ಥೆಯ ಇಂದಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಉತ್ಪನ್ನ ವಸ್ತುಗಳು ಪೂರ್ಣವಾಗಿ ವಿನಿಯೋಗವಾಗದಿರುವುದು, ವಿದ್ಯಾವಂತ ನಿರುದ್ಯೋಗಿಗಳ ಹೆಚ್ಚಳ, ಶಿಕ್ಷಣಕ್ಕೆ ಅಗತ್ಯವಾದ ಹಣದ ಅಭಾವ, ಇತ್ಯಾದಿ...''

ಉತ್ಪಾದಿತ ವಸ್ತುಗಳು ಗ್ರಾಹಕರಿಗೆ ತಲುಪದಿರಲು ಕೊಳ್ಳುವ ಶಕ್ತಿ ಅವರಿಗಿಲ್ಲದಿರುವುದೂ ಒಂದು ಕಾರಣ. ಅದರ ಕಡೆಗೆ ಗಮನ ನೀಡುವುದರ ಬದಲು ಉತ್ಪಾದನೆಯನ್ನು ತಗ್ಗಿಸುವುದು ಇನ್ನಷ್ಟು ನಿರುದ್ಯೋಗ ಮತ್ತು ಹತಾಶೆಗೆ ಕಾರಣವಾಗುತ್ತದೆಯಷ್ಟೆ. ನಿರುದ್ಯೋಗಕ್ಕೆ ಪರಿಹಾರ ಕಂಡುಕೊಂಡರೆ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಗೂ ಉತ್ತರ ದೊರೆತಂತೆಯೇ ಸರಿ. ಇನ್ನು ವಿದ್ಯಾಭ್ಯಾಸಕ್ಕೆ ತಗಲುವ ಹಣದ ಪೂರೈಕೆಯ ಪ್ರಶ್ನೆ: ಐ.ಐ.ಟಿ. ಮತ್ತು ವಿಶ್ವವಿದ್ಯಾನಿಲಯಗಳಂತಹ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದವರು ಉದ್ಯಮಗಳಲ್ಲಿ ಇಷ್ಟು ದುಡಿಯುತ್ತಾರಲ್ಲ, ಈ ಉದ್ಯಮಗಳಿಂದ, ಅರ್ಥಾತ್ ಖಾಸಗಿ ಉದ್ಯಮದಿಂದ, ಶಿಕ್ಷಣ ಕ್ಷೇತ್ರಕ್ಕೆ ಯಾವ ಆರ್ಥಿಕ ಬೆಂಬಲ ದೊರೆತಿದೆ ? ಕರ್ತವ್ಯ ದೃಷ್ಟಿಯಿಂದ ಸಮಾಜದಲ್ಲಿ ನಡೆಯಲೇ ಬೇಕಾದ ಕೆಲವು ಅಂಶಗಳನ್ನು 'ಸಮಾಜಸೇವೆ'ಯ ಹೆಸರಿನಲ್ಲಿ ಹಣ ಲಪಟಾಯಿಸುವ ಖಾಸಗಿ ಕ್ಷೇತ್ರಕ್ಕೆ ಬಿಟ್ಟುಕೊಟ್ಟು ಆಮೇಲೆ ತಾರಮ್ಮಯ್ಯ ಮಾಡುವುದು ಸರ್ಕಾರಕ್ಕೆ ಕೀರ್ತಿ ತರುವುದಿಲ್ಲ.

ವಂತಿಕೆಗಳನ್ನು ವಸೂಲು ಮಾಡಿಕೊಳ್ಳುವ ಉದಾರ ಬುದ್ಧಿಯ ಖಾಸಗಿ ಶಿಕ್ಷಣ ಸಂಸ್ಥೆಗಳು ಅಣಬೆಗಳಂತೆ ಬೆಳೆದುನಿಲ್ಲುವುದು ಒಂದು ಕಡೆ, ವಿದ್ಯಾಕ್ಷೇತ್ರಕ್ಕೆ ಹಣವಿಲ್ಲವೆಂಬುದು ಇನ್ನೊಂದು ಕಡೆ. ಈ ಅವ್ಯವಸ್ಥೆಯನ್ನು ಇನ್ನೂ ಚೆನ್ನಾಗಿ ಬೇರೂರುವಂತೆ ಮಾಡಹೊರಟಿದೆ ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು.

ಶಿಕ್ಷಣ ಕ್ಷೇತ್ರದಲ್ಲಿ ಹಣದ ವಿನಿಯೋಗವಾಗಿರುವ ಮಾದರಿಯನ್ನೇ ನೋಡೋಣ: ಮೊದಲನೆಯ ಯೋಜನೆಯಲ್ಲಿ ಅದು ಒಟ್ಟು ಯೋಜನೆಯ ಮೊತ್ತದ ಶೇಕಡ ೭ರಷ್ಟಿದ್ದುದು ಎರಡನೆಯ ಯೋಜನೆಯಲ್ಲಿ ಶೇಕಡ ೬.೪ಕ್ಕೆ ಇಳಿಯಿತು. ಮೂರು ಮತ್ತು ನಾಲ್ಕನೆಯ ಯೋಜನೆಗಳಲ್ಲಿ ಅದು ಶೇ. ೪.೮ಕ್ಕೆ ಬಂದು ಐದನೆಯ ಯೋಜನೆಯಲ್ಲಿ ಶೇ. ೩.೬ಕ್ಕೆ ಇಳಿಯಿತು. ಅದಾದನಂತರ ಯೋಜನೆಗೇ ಸಂಚಕಾರ ಬಂದು ಆರನೆಯ ಯೋಜನೆ ಇನ್ನೂ ಸರಿಯಾಗಿ ಹುಟ್ಟಿಯೇ ಇಲ್ಲ. ಅಲ್ಲದೆ ಈಗ 'ಮುಂದುವರಿದ ಯೋಜನೆ', 'ವಾರ್ಷಿಕ ಯೋಜನೆ', ಹೀಗೆ ಏನೇನೋ ನಡೆದಿದೆ. ಅವೀಗ 'ಹೊರದೂಡಲ್ಪಟ್ಟ ಯೋಜನೆ'ಗಳಾಗಿವೆ. ಅಂತಹ ೧೯೭೮-೮೩ರ ಯೋಜನೆಯಲ್ಲಿ ಒಟ್ಟು ೧೧೬೨೪೦ ಕೋಟಿ ರೂಪಾಯಿಗಳ ಅಂದಾಜು ಮೊತ್ತದಲ್ಲಿ ಶಿಕ್ಷಣಕ್ಕೆ ಮೀಸಲಾಗಿರುವುದು ೧೯೫೫ ಕೋಟಿ, ಅಂದರೆ ಶೇಕಡ ೧.೬ ಮಾತ್ರ. ಶತಮಾನಗಳಿಂದ ದಾಸ್ಯದಲ್ಲಿ ತೊಳಲುತ್ತಾ ಬಂದಿರುವ ವಿಭಾಗಕ್ಕೆ ಈ ಯೋಜನಾ ಪದ್ಧತಿಯಿಂದ ಯಾವ ಅನುಕೂಲವಾಗಬಹುದು!

ರಾಷ್ಟ್ರೀಯ ಕರಡುನೀತಿಯ ಇನ್ನೊಂದು ಪ್ರಭಾವವನ್ನು ಈ ಹಿನ್ನೆಲೆಯಲ್ಲಿ ತಿಳಿಯಬೇಕು. ೧೯೭೬-೭೭ರಲ್ಲಿ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶಿಸಿದವರ ಒಟ್ಟು ಸಂಖ್ಯೆ ೨೬ ಲಕ್ಷ. ಈಗ ನಮ್ಮ ಮುಂದಿರುವ ನೀತಿಯು ವಿಶ್ವವಿದ್ಯಾನಿಲಯಗಳಿಗೆ ಪ್ರವೇಶಿಸುವವರ ಸಂಖ್ಯೆಯನ್ನು ಸಾಕಷ್ಟು ತಗ್ಗಿಸಬೇಕು ಎನ್ನುತ್ತದೆ. ಅಂದರೆ, ೧೯೭೬-೮೧ರಲ್ಲಿ ೨೬ ಲಕ್ಷವಿದ್ದುದು ೧೯೮೧-೮೨ರ ವೇಳೆಗೆ ೧೩ಲಕ್ಷಕ್ಕಿಳಿಯಬೇಕು. ಇದು ನಮ್ಮ ಜನಸಂಖ್ಯೆಯ ಶೇಕಡ ೦.೨ ಕ್ಕಿಂತಲೂ ಹೆಚ್ಚಲ್ಲ; ಒಂದು ಸಾವಿರಕ್ಕೆ ಇಬ್ಬರು ವಿಶ್ವವಿದ್ಯಾನಿಲಯ ಪ್ರವೇಶಿಸಲು ಸಾಧ್ಯವಾದೀತು ಎಂದರ್ಥವಾಯಿತು. ಈ ಇಬ್ಬರು ಯಾವ ವರ್ಗದವರಾಗಿರುತ್ತಾರೆಂಬುದನ್ನು ಊಹಿಸಲು ಅಸಾಧ್ಯವಾದ ಬುದ್ಧಿವಂತಿಕೆಯೇನೂ ಬೇಕಿಲ್ಲ. ಈಗ ಜನಸಂಖ್ಯೆಯ ಸುಮಾರು ಶೇಕಡ ೨.೫ರಷ್ಟು ಮಂದಿ ವಿಶ್ವವಿದ್ಯಾನಿಲಯಗಳಿಗೆ ಹೋಗುತ್ತಿದ್ದಾರೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇದು ಶೇಕಡ ೬ರಷ್ಟಾದರೂ ಇರಬೇಕೆಂದು ಕೊಠಾರಿ ಆಯೋಗ ಅಭಿಪ್ರಾಯಪಟ್ಟಿತ್ತು. ೧೮ರಿಂದ ೨೨ರ ವಯಸ್ಸಿನವರಲ್ಲಿ ಶೇಕಡ ೬ರಷ್ಟಾದರೂ ಹೀಗೆ ವಿಶ್ವವಿದ್ಯಾನಿಲಯಗಳಿಗೆ ಹೋಗದಿದ್ದರೆ ಭವಿಷ್ಯದ ಬೌದ್ಧಿಕ ವಾತಾವರಣ ಹೇಗಿರಬಹುದೆಂಬುದನ್ನು ನೆನೆದು ದಣಿಯಬೇಕಷ್ಟೆ.

ಇದನ್ನು ಇನ್ನೂ ಒಂದು ದೃಷ್ಟಿಯಿಂದ ವಿಶ್ಲೇಷಿಸಬಹುದು. ನಮ್ಮ ಇಂದಿನ ಸೆಕೆಂಡರಿ ಮತ್ತು ಉನ್ನತ ಶಿಕ್ಷಣಕ್ಷೇತ್ರಗಳಲ್ಲಿ ವಿದ್ಯಾರ್ಜನೆ ಮಾಡುತ್ತಿರುವ ವಿದ್ಯಾರ್ಥಿಗಳು ಸಮಾಜದ ಯಾವ ವರ್ಗಗಳವರು ಮತ್ತು ರಾಷ್ಟ್ರೀಯ ಕರಡು ನೀತಿಯ ಅನೀತಿ ಜಾರಿಗೆ ಬಂದರೆ ಅವರು ಯಾವ ವರ್ಗಗಳಿಗೆ ಸೇರಿರುತ್ತಾರೆ? ಸೆಕೆಂಡರಿ ಶಾಲೆಗಳ ವಿದ್ಯಾರ್ಥಿಗಳ ಪೈಕಿ ಶೇಕಡ ೭೦ರಷ್ಟು ಮತ್ತು ಕಾಲೇಜುಮಟ್ಟದವರ ಪೈಕಿ ಶೇಕಡ ೮೦ರಷ್ಟು ಮಂದಿ ಕಳೆದ ಎರಡು ವರ್ಷಗಳ ಲೆಕ್ಕದಂತೆ ರಾಷ್ಟ್ರದ ವರಮಾನದಲ್ಲಿ ಮೇಲಿನ ಶೇಕಡ ೩೦ರ ಗುಂಪಿಗೆ ಸೇರಿದವರು. ಬಡತನದ ಮಟ್ಟಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ರಾಷ್ಟ್ರದ ಶೇಕಡ ೫೦ರಷ್ಟು ಮಂದಿ ಜೀವಿಸಿರುವಾಗ ಇದೇನೂ ಆಶ್ಚರ್ಯದ ವಿಷಯವಲ್ಲ. ವರಮಾನದ ದೃಷ್ಟಿಯಿಂದ ಮೇಲಿನ ಶೇಕಡ ೩೦ರಷ್ಟು

ಮಂದಿಯೂ ಇನ್ನುಮುಂದೆ ಉನ್ನತ ಶಿಕ್ಷಣ ಪಡೆಯುವಂತಿಲ್ಲ. ಒಟ್ಟು ಸಂಖ್ಯೆಯನ್ನು ಶೇಕಡ ೫೦ರಷ್ಟು ಕಡಿಮೆ ಮಾಡಿದರೆ ಆರ್ಥಿಕವಾಗಿ ಉನ್ನತ ಮಟ್ಟದ ಶೇಕಡ ೧೫ ಅಥವಾ ೧೮ಕ್ಕೆ ಸೇರುವಂತಹವರು ಬಹುಶಃ ಸೆಕೆಂಡರಿ ಮತ್ತು ಕಾಲೇಜು ಮಟ್ಟಗಳಲ್ಲಿ ಶೇಕಡ ೭೦ ಮತ್ತು ೮೦ರಷ್ಟಿರುತ್ತಾರೆ. ಮಿಕ್ಕೆಲ್ಲ ಅಧಿಕ ಸಂಖ್ಯಾತರು ಶೇಕಡ ೩೦ ಮತ್ತು ಶೇಕಡ ೨೦ರಷ್ಟು ಮಾತ್ರ ದಾಖಲಾಗಲು ಸಾಧ್ಯವಾಗುತ್ತದೆ.

ಉನ್ನತ ಶಿಕ್ಷಣ ದೊರಕದಿರುವುದು ಕೇವಲ ವಿದ್ಯಾರ್ಜನೆಯ ಸಾಧ್ಯತೆಯನ್ನು ಮೊಟಕು ಮಾಡುವುದಿಲ್ಲ. ಅದರ ತೀವ್ರ ಪರಿಣಾಮ ಇನ್ನೊಂದು ರೀತಿಯಲ್ಲಿ ಆಗುತ್ತದೆ. ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಅಧಿಕಾರ ಸೂತ್ರವನ್ನು ತಮ್ಮಲ್ಲಿಟ್ಟುಕೊಂಡಿರುವವರು ಉನ್ನತ ಶಿಕ್ಷಣ ಪಡೆಯುವ ಮೇಲ್ಮಟ್ಟದ ಶೇಕಡ ೩೦ರಷ್ಟು ಮಂದಿ ಎಂಬುದು ಬಹುಮಟ್ಟಿಗೆ ನಿಜ. ಕಚೇರಿಗಳು, ಬ್ಯಾಂಕುಗಳು, ಉದ್ಯಮಗಳು, ಸಾರಿಗೆ ಸಂಪರ್ಕ, ರಾಜಕೀಯ ಪಕ್ಷಗಳ ಮುಂದಾಳತ್ವ, ಇತ್ಯಾದಿಗಳೆಲ್ಲಾ ಹೆಚ್ಚಿನ ರೀತಿಯಲ್ಲಿ ಇವರ ಅಧೀನದಲ್ಲೇ ಇರುವುದು. ಇದನ್ನು ಇನ್ನೂ ಸೀಮಿತಗೊಳಿಸಿ ಅಧಿಕಾರವನ್ನು ಮೇಲ್ಮಟ್ಟದ ಶೇಕಡ ೧೫ ಅಥವಾ ೧೮ ಮಂದಿಗೆ ಮುಡಿಪಾಗಿಡುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಉಪದ್ರವೀ ಪರಿಣಾಮ !

ಕರಡು ನೀತಿಯು ಇನ್ನೊಂದು ಅಪಹಾಸ್ಯಕರ ನಿಲುವನ್ನು ಎತ್ತಿಹಿಡಿದಿದೆ : ''ಮಾನವ ವ್ಯಕ್ತಿಯನ್ನು ಬದಲಾಯಿಸುವುದರಿಂದ ಮಾತ್ರವೇ ಸಾಮಾಜಿಕ ಬದಲಾವಣೆಯನ್ನು ತರಲು ಸಾಧ್ಯ.'' ''ಎಲ್ಲರೂ ಉದ್ಯೋಗ ದೊರಕಿಸಿಕೊಂಡರೆ ನಮ್ಮಲ್ಲಿ ನಿರುದ್ಯೋಗದ ನಿವಾರಣೆ ಯಾಗುತ್ತದೆ'', ''ಎಲ್ಲರೂ ಬಡತನವನ್ನು ತೊಡೆದುಹಾಕಿಕೊಂಡರೆ ನಮ್ಮಲ್ಲಿ ಬಡತನ ಇಲ್ಲವಾಗುತ್ತದೆ'' ಎಂದು ನವಿರಾಗಿ ಹೇಳುವುದು ಎಷ್ಟು ಪೊಳ್ಳುತನದ ಮಾತೋ ಇದೂ ಅಷ್ಟೇ ಪೊಳ್ಳುತನದ್ದು. ಬೆಲ್ಚಿ, ಪಿಪ್ರಾಗಳಂತಹ ಕುಗ್ರಾಮಗಳಲ್ಲಿ ಆರ್ಥಿಕ-ಸಾಮಾಜಿಕ ತುಳಿತಕ್ಕೆ ಸಿಕ್ಕಿ ತಮ್ಮ ಗುಡಿಸಿಲುಗಳಿಗೂ ತಮಗೂ ಬೆಂಕಿ ಹಾಕಿಸಿಕೊಳ್ಳುತ್ತಿರುವ ಚೇತನಗಳಿಗೆ ನಮ್ಮ ರಾಷ್ಟ್ರೀಯ ನೀತಿಯ ತತ್ವದಿಂದ ಚಿರಶಾಂತಿ ದೊರಕಬಹುದು ! ಏಕೆಂದರೆ, ಬೆಂಕಿಹಾಕುವ ಘಟಿಂಗರನ್ನು ಮಾನವರನ್ನಾಗಿ ಮಾಡುವ ಉದಾತ್ತಧ್ಯೇಯ ಈಗ ನಮ್ಮದಾಗುತ್ತದೆ. ಸಂವಿಧಾನದಲ್ಲಿ ಬರೆದಿಟ್ಟು ಅಸ್ಪೃಶ್ಯತೆಯನ್ನು ನಿವಾರಿಸಿದ್ದಾಯಿತು : ಈಗ ಮಾನವನನ್ನು ಶಿಕ್ಷಣದಿಂದ ಬದಲಾಯಿಸಿ ತನ್ಮೂಲಕ ಸಮಾಜವನ್ನು ಬದಲಾಯಿಸುವ ಹೊಸನೀತಿ ಬರುತ್ತಿದೆ ! ನಿರ್ಗತಿಕನಾಗಿರುವವನು ಸಂಪೂರ್ಣ ಪರಾವಲಂಬಿಯಾಗಿದ್ದು ಆರ್ಥಿಕವಾಗಿ ತನ್ನ ಕಾಲಮೇಲೆ ತಾನು ನಿಲ್ಲಲು ಅಶಕ್ತನಾಗಿರುವುದರಿಂದ ಎಲ್ಲ ಉಪಟಳ ಮತ್ತು ಬಾಧೆಗಳಿಗೆ ತುತ್ತಾಗುತ್ತಿದ್ದಾನೆಂಬುದನ್ನು ಮರೆಮಾಚಿ ಹಿಂಸೆಯಲ್ಲಿ ತೊಡಗುವ ಕ್ರೂರಿ ಶೋಷಕರನ್ನು ಮಾನಸಿಕವಾಗಿ ಬದಲಾಯಿಸುವುದು ಹೇಗೆ ಸಿದ್ಧಿಸೀತೆಂಬುದು ಊಹೆಗೆ ನಿಲುಕದಂತಹ ಸಂಗತಿ. ವ್ಯವಸ್ಥೆಯನ್ನು ತಿದ್ದುವುದು ಅಪ್ರಾಸಂಗಿಕವೆಂದು ಇಂದಿನ ವ್ಯವಸ್ಥೆಯ ಆರಾಧಕರು ಮತ್ತು ಪಟ್ಟಭದ್ರ ಹಿತಾಸಕ್ತರು ಪದೇ ಪದೇ ಹೇಳುತ್ತಾರೆ. ದೋಷವೇ ಆಗಲಿ ಗುಣವೇ ಆಗಲಿ ವ್ಯಕ್ತಿನಿಷ್ಠವಾದದ್ದೆಂದು ಅವರ ವಾದ. ವ್ಯವಸ್ಥೆ ಗೌಣವಾದುದೆಂದು ತರ್ಕಿಸಿ ಅದರ ಅಸ್ತಿತ್ವವನ್ನು ಈಗಿರುವಂತೆಯೇ ಮುಂದುವರಿಸಿಕೊಳ್ಳುವುದು ಅವರ ಅಂತಿಮ ಗುರಿ. ಅದಕ್ಕೆ ಸೊಪ್ಪುಹಾಕುವ ಮಾರ್ಮಿಕ ತತ್ವವನ್ನು ನಮ್ಮ ಕರಡು ನೀತಿಯು ವಿಶದಪಡಿಸಿದೆ. ಮಾನವಿಕ ಮೌಲ್ಯಗಳನ್ನು . ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಿತ್ತಬೇಕಾದ್ದು ಶಿಕ್ಷಣದ ಒಂದು ಉದ್ದೇಶವೆಂದು ಮೊದಲಿಗೆ ಹೇಳಿ, ರಾಷ್ಟ್ರೀಯವಾಗಿ ಒಪ್ಪಿಗೆ ಪಡೆದಿರುವ ಸ್ವಾತಂತ್ರ್ಯ-ಸಮಾನತೆ-ನ್ಯಾಯ ಇತ್ಯಾದಿಗಳನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕೆಂದು ನಂತರ

ನುಡಿದು, ಪ್ರಜಾಪ್ರಭುತ್ವ- ಧರ್ಮನಿರಪೇಕ್ಷತೆ-ಸಮಾಜವಾದಗಳನ್ನು ಬಲಪಡಿಸಲು ಶಿಕ್ಷಣವು ಅನುವು ನೀಡಬೇಕೆಂದು ಕರೆಕೊಟ್ಟು, ಕಡೆಗೆ ವ್ಯವಸ್ಥೆಯತ್ತ ಗಮನ ನೀಡದೆ ಹೋಗುವುದು ಅವೈಜ್ಞಾನಿಕವಾದ ಶುಷ್ಕ ಮಾರ್ಗ.

ವಯಸ್ಕರ ಶಿಕ್ಷಣದ ಬಗೆಗೆ ಕರಡು ನೀತಿಯು ಸ್ಪಷ್ಟವಾದ ಗುರಿಯನ್ನು ಸಾರಿ ಹೇಳಿದೆ. ಅದನ್ನು ಸಾಧಿಸುವುದರಲ್ಲಿ ಮಾತ್ರ ಹಿಂದಿನ ಸರ್ಕಾರ ತಿಳಿದೂ ತಿಳಿದೂ ಮುಗ್ಗರಿಸಿ ಹಳ್ಳಕ್ಕೆ ಬಿತ್ತು. ಖಾಸಗಿ ಸಂಘಟನೆಗಳನ್ನೂ ಈ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತರಾಗುವಂತೆ ಪ್ರೇರೇಪಿಸಿ ಮತೀಯ ಸಂಘಟನೆಯೊಂದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಡಲಾಯಿತು. ಈ ಬಗ್ಗೆ ಈಗಿನ ಪರಿಸ್ಥಿತಿಯೇನೆಂಬುದು ಇನ್ನೂ ಸರಿಯಾಗಿ ತಿಳಿದುಬಂದಿಲ್ಲ. ಅದನ್ನು ಸರಿಪಡಿಸಬೇಕಾದ್ದು ಅತ್ಯವಶ್ಯಕ.

ಸಮಾಜವಾದಿ ಸಮಾಜದ ರಚನೆ ನಮ್ಮ ಗುರಿಯೆಂಬುದನ್ನು ಕರಡು ನೀತಿ ಒಪ್ಪಿದೆ. ಅದರೊಟ್ಟಿಗೆ ಜೀವನಮೌಲ್ಯಗಳನ್ನು ಗಾಂಧಿ ಮಾರ್ಗದಲ್ಲಿ ರೂಪಿಸಬೇಕೆಂದು ಈ ನೀತಿ ಅಪೇಕ್ಷಿಸುತ್ತದೆ. ಬಂಡವಾಳಿಗರು ಧರ್ಮಾಧಿಕಾರಿಗಳಂತೆ ವರ್ತಿಸಬೇಕೆಂದು ಗಾಂಧೀಜಿಯವರು ಅವರಿಗೆ ಮನವಿ ಮಾಡಿಕೊಂಡಿದ್ದರು. ಅದರ ಫಲವಾಗಿ ಬಂಡವಾಳಿಗರು ಎಷ್ಟು ಧರ್ಮಾತ್ಮರಾಗಿ ನಡೆದುಕೊಂಡರೆಂಬುದು ಈ ಲೇಖಕನಿಗೆ ತಿಳಿದಿಲ್ಲ. ವೈಜ್ಞಾನಿಕ ಸಮಾಜವಾದಕ್ಕೂ ಗಾಂಧೀಜಿಯವರ ಮೌಲ್ಯವಾದ ಧರ್ಮಾಧಿಕಾರಕ್ಕೂ ಹೊಂದಾಣಿಕೆ ಎಳ್ಳಷ್ಟೂ ಸಾಧ್ಯವಿಲ್ಲವೆಂಬುದು ಈ ಲೇಖಕನ ಖಚಿತ ಅಭಿಪ್ರಾಯ. ಕರಡು ನೀತಿಯು ಸಮಾಜವಾದ ಮತ್ತು ಧರ್ಮಾಧಿಕಾರಿಗಳೆರಡನ್ನೂ ಪೋಷಿಸುವಂತಾಗಿ ಅದೊಂದು ಬರಡು ನೀತಿಯಾಗಿ ಪರಿಣಮಿಸಿದೆ.

ಶಿಕ್ಷಣ ಮಾಧ್ಯಮ ಮತ್ತು ತ್ರಿಭಾಷಾಸೂತ್ರಗಳನ್ನು ಕುರಿತು ಕರಡು ನೀತಿಯು ಸಮಗ್ರವೆಂದು ತೋರುವ ಆದರೆ ನಮ್ಮನ್ನು ಬಹಳ ಇಕ್ಕಟ್ಟಿಗೆ ಸಿಗಿಸಬಹುದಾದಂತಹ ಮಾತುಗಳನ್ನು ಉಲ್ಲೇಖಿಸಿದೆ. ಜಟಿಲವಾದ ಪ್ರಶ್ನೆಯೊಂದನ್ನು ಇಷ್ಟು ಸಲೀಸಾಗಿ ಬಿಡಿಸಹೊರಡುವುದು ಹಿಂದಿಯ ರಕ್ಷಣೆ ಮಾತ್ರವಾದೀತೇ ವಿನಾ ರಾಷ್ಟ್ರದ ಐಕ್ಯತೆ ಮತ್ತು ಅವಶ್ಯಕತೆಗಳನ್ನು ಪೂರೈಸದೆ ಹೋಗುವ ಸಂಭವವೇ ಹೆಚ್ಚು. ಶಿಕ್ಷಣವು ಆಯಾ ಪ್ರಾದೇಶಿಕ ಭಾಷೆಗಳಲ್ಲಿರಬೇಕೆಂಬುದು ಸಾಧುವಾದರೂ ಅದರ ಕಾರ್ಯಾಚರಣೆಯು ಸಾರ್ವತ್ರಿಕವಾಗಿ ನಡೆಯಲು ಯಾವ ವಿಧಾನಗಳನ್ನನುಸರಿಸಬೇಕೋ ಅದಕ್ಕೆ ಸರ್ಕಾರ ಸಿದ್ಧವಿದೆಯೇ? ಖಾಸಗಿ ಶಾಲೆಗಳಲ್ಲಿ ಮೇಲ್ವರ್ಗದ ಜನ ಇದಕ್ಕೆ ಬದ್ಧರಾಗುತ್ತಾರೆಯೆ? ಉದ್ಯೋಗಾವಕಾಶಗಳಿಗೂ ಇಂಗ್ಲಿಷ್ ಭಾಷಾಜ್ಞಾನಕ್ಕೂ ಗಂಟು ಹಾಕಿದರೆ ಆಗ ಪರಿಹಾರ ಏನು? ಇದನ್ನೆಲ್ಲಾ ಆಳವಾಗಿ ಚಿಂತಿಸಿ ಕರಡು ನೀತಿಯು ಒಂದು ನಿರ್ಧಾರಕ್ಕೆ ಬಂದಿದ್ದಿದ್ದರೆ ಒಳಿತಿರುತ್ತಿತ್ತು.

ಅತ್ಯಂತ ಖಾಸಗಿತನದಲ್ಲಿ ವಿಜೃಂಭಿಸುತ್ತಿರುವ 'ಸಾರ್ವಜನಿಕ ಶಾಲೆಗಳು' ಬೇರೆಲ್ಲ ಶಾಲೆಗಳಂತೆ ನಡೆದುಕೊಳ್ಳುವಂತೆ ಮಾಡಬೇಕೆಂಬ ಕರಡುನೀತಿಯ ಧೋರಣೆ ಮಾತ್ರ ಬಹಳ ಸ್ವಾಗತಾರ್ಹ. ಈ ಮೇಲ್ವರ್ಗದ ದ್ವೀಪಗಳನ್ನು ಸಿಡಿಸಬೇಕಾದ್ದು ನಮ್ಮ ಸಮಾಜದ ಆರೋಗ್ಯಕ್ಕೆ ಬಹಳ ಅಗತ್ಯವಾದ ಮದ್ದಾಗಿದೆ. ಅವುಗಳಿಂದ ಈವರೆಗೆ ಉಂಟಾಗಿರುವ ಹಾನಿಯನ್ನು ನಿವಾರಿಸುವುದು ಮುಂದಿನ ಪ್ರಶ್ನೆಯಾಗಬೇಕು. ಜನಸಾಮಾನ್ಯರ ಪರವಾದ ತತ್ವಗಳನ್ನು ಹೊಗಳಿ ಕೈಬಿಡುವುದು ಮತ್ತು ಮೇಲ್ವರ್ಗದ ವಿಶಿಷ್ಟ ಹಿತಗಳನ್ನು ಖಂಡಿಸಿ ಪರೋಕ್ಷವಾಗಿ ಅವಕ್ಕೆ ಬೆಂಬಲ ನೀಡುವುದು ಈವರೆವಿಗೆ ಕೇಂದ್ರದಲ್ಲಿನ ಎಲ್ಲ ಸರ್ಕಾರಗಳೂ ಅನುಸರಿಸಿರುವ ನೀತಿ. ಅದನ್ನು ಕೈಬಿಡುತ್ತೇವೆಂದು ಹೇಳಿರುವ ಕರಡು ನೀತಿಯು ಎಷ್ಟರಮಟ್ಟಿಗೆ ಕಾರ್ಯತಃ

ಜಾರಿಗೆ ಬರುತ್ತದೆಂಬುದನ್ನು ಕುತೂಹಲದಿಂದ ನಿರೀಕ್ಷಿಸಬೇಕಾಗಿದೆ. ಹಿಂದೆ ಹೇಳಿದಂತೆ ಇತಿಹಾಸದ ಕೆಲವು ಪಠ್ಯಪುಸ್ತಕಗಳನ್ನು ಕಪಟಮಾರ್ಗದಿಂದ ಹಿಂತೆಗೆದುಕೊಂಡು ಆಮೇಲೆ ನೀತಿ ಬೋಧಿಸಿದ ಸರ್ಕಾರ ತನ್ನ ಕರಡು ನೀತಿಯಲ್ಲಿ ಹೀಗೆ ಹೇಳುತ್ತದೆ: ''ಸಂಶೋಧನೆ ಮತ್ತು ಪ್ರಯೋಗಗಳಲ್ಲಿ ತೊಡಗಲು ಹಾಗೂ ನವೀನ ಮಾರ್ಗಗಳ ಶೋಧನೆ ಮಾಡಲು ಅಧ್ಯಾಪಕರಿಗೆ ಶೈಕ್ಷಣಿಕ ಸ್ವಾತಂತ್ರ್ಯವನ್ನು ಸರ್ವಥಾ ಮಾನ್ಯಮಾಡಲಾಗುತ್ತದೆ.'' ಸ್ವಲ್ಪ ಖಾರವಾಗಿ ಇದಕ್ಕೆ ಪ್ರತಿಕ್ರಿಯೆ ಸೂಚಿಸುವುದಾದರೆ ಇದೊಂದು ''ಮಾರ್ಮಿಕ ಮೋಸದ ಹಸನು ಮಾತುಗಳು'' ಎನ್ನಬಹುದು. ಇಡೀ ಕರಡುನೀತಿಯದೂ ಅದೇ ಗತಿಯಾಗದಿರಲೆಂದಷ್ಟೇ ನಾವು ಅಪೇಕ್ಷಿಸಬಹುದಾದದ್ದು.

ವಿದ್ಯಾಭ್ಯಾಸ ಕ್ಷೇತ್ರವು ಪ್ರಜಾಪ್ರಭುತ್ವದ ತತ್ವಗಳ ಆಧಾರದ ಮೇಲೆ ನಿಲ್ಲಬೇಕು. ಅದರ ಲಕ್ಷಣಗಳು ಈ ತತ್ವದಿಂದ ನಿರ್ಧಾರಿತವಾಗಬೇಕು ಮತ್ತು ಆಡಳಿತದಲ್ಲೂ ಅದೇ ಮಾರ್ಗದ ಅನುಸರಣೆಯಾಗಬೇಕು. ಅದಕ್ಕೆ ತಕ್ಕುದಾದ ಪರ್ಯಾಯ ವ್ಯವಸ್ಥೆಯನ್ನು ಕುರಿತು ನಾವು ಚಿಂತಿಸಬೇಕು. ಶಿಕ್ಷಣವನ್ನು ಕುರಿತ ರಾಷ್ಟ್ರೀಯ ಧೋರಣೆಯನ್ನು ನಿರೂಪಿಸುವ ಈ ಕರಡು ನೀತಿಯು ನಮ್ಮನ್ನು ಆ ದಿಕ್ಕಿನಲ್ಲಿ ಮುನ್ನಡೆಯುವಂತೆ ಎಚ್ಚರಿಸುತ್ತದೆ; ಅದೇ ಅದರ ಮಹತ್ತರ ಪಾತ್ರ.

*– ಫೆಬ್ರವರಿ 1980*

## ದಮನಕ್ಕೆ ಮಾರುತ್ತರ

ತಲೆಬಾಗಿ ಎದೆ ಬಗ್ಗಿಸಿ ನಡೆಯುತಿರುವ ಓ ಬಂಧು,
ಆಳಲಿ ಬಳಲಿ ಸೊರಗಿರುವವನೆ,
ಹೀಗಿದೇಕೆಂದರಿಯದೆಯೆ ಒಂದು ದಿನ
  ಸುಮ್ಮಗೆ ಆಸು ನೀಗುವವನೆ,
ಇನ್ನೋರ್ವರ ವಿರಾಮವನು ಕಂಡೇ
  ಸಂತಸಗೊಳಬೇಕಾದ ಓ ಹೋರಾಟಗಾರ,
ನಿನ್ನ ಕಣ್ಗಳೊಳು ನಗೆಯ ಮಿನುಗನೆ
  ಕಾಣರಿಯದಿಹ ಎಲೆ ತಮ್ಮ,
ಆ ನಿನ್ನ ಮೊಗ ಭಯ-ಪರಿತಾಪಗಳಿಂದ ತುಂಬಿದೆ.
ಏಳು, ಎದ್ದೇಳು;
ಇನ್ನಿದನು ಸಹಿಸಲಾಗದೆಂದು ಕೂಗು,
ಇನ್ನದೆಲ್ಲಾ ಸಾಧ್ಯವಾಗದೆಂದಾರ್ಭಟಿಸು !

— ಡೇವಿಡ್ ಡಿಯೋಪ್

## ಈ ಲೇಖಕರ ಬೇರೆ ಕೆಲವು ಕೃತಿಗಳು

| | |
|---|---|
| ಆಯತನ | ೧೯೯೫ |
| ವೈಚಾರಿಕ ಜಾಗೃತಿ (ದ್ವಿತೀಯ ಮುದ್ರಣ) | ೧೯೯೪ |
| ಭಾರತೀಯ ವಿಜ್ಞಾನದ ಹಾದಿ | ೧೯೯೭ |
| ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ | ೧೯೯೪ |
| ಯುಗಪುರುಷ ಲೆನಿನ್ | ೧೯೭೯ |
| ಭಗತ್ ಸಿಂಗ್ (ಏಳನೆಯ ಮುದ್ರಣ) | ೨೦೦೫ |
| ಚೆ ಗೆವಾರಾ | ೧೯೯೪ |
| ಭೂಪೇಶ್ ಗುಪ್ತ | ೧೯೮೬ |
| ಫ್ರೆಡರಿಕ್ ಏಂಗೆಲ್ಸ್ | ೨೦೦೩ |
| ಗೋಲ್ವಾಲ್ಕರ್ ಸಂಸ್ಕೃತಿಯ ವೈಚಿತ್ರ್ಯ | ೧೯೭೧ |
| ಹಿಂದುತ್ವದ ಹಿಂದೆ-ಮುಂದೆ | ೧೯೯೩ |
| ಯುಗದರಿವು | ೨೦೦೪ |
| ಯೋಗಪ್ರವೇಶ (ಎರಡನೆ ಮುದ್ರಣ) | ೨೦೦೫ |
| ನುಡಿಬಿಂಬ | ೨೦೦೬ |

## ಇಂಗ್ಲಿಷ್


| | |
|---|---|
| The Living Marx | 1983 |
| Philosophy in China | 1990 |
| The Gorbachev Phenomenon | 1991 |
| The Strange Culture of M. S. Golwalkar | 1971 |

## ಅನುವಾದ

| | |
|---|---|
| ದರ್ಶನ | ೧೯೯೫ |
| ವಾನರನಿಂದ ಮಾನವನವರೆಗೆ | ೧೯೭೮ |
| ಕೂಲಿಗೆಲಸ ಮತ್ತು ಬಂಡವಾಳ | ೧೯೭೯ |
| ಬಾ ನೊಣವೆ ಬಾ ನೊಣವೆ | ೧೯೭೩ |
| ಪ್ರಾಚೀನ ಭಾರತದಲ್ಲಿ ಶೂದ್ರರು | ೨೦೦೪ (ಭಾಗಶಃ) |

# ಸಂಪಾದಿತ ಕೃತಿಗಳು

| | |
|---|---|
| An Encyclopaedia of South Indian Culture (with Debiprasad Chattopadhyaya and N. Gayathri) | 1983 |
| Studies in Indian Culture | 1986 |
| Towards a Redefinition of the Education Policy | 1992 |
| Vision and Wisdom | 1995 |
| Musings in Ideology (with Dr. Sanjay K. Biswas) | 2002 |
| Some Thoughts on Marxism (with Dr. Sanjay K. Biswas) | 2002 |
| ವೈಜ್ಞಾನಿಕ ಮನೋಧರ್ಮ | ೨೦೦೫ |
| ಸ್ವಾತಂತ್ರ್ಯೋತ್ತರ ಭಾರತ ಮಾಲಿಕೆ (೧೪ ಪುಸ್ತಕಗಳು) | ೧೯೯೭-೯೯ |



* ಇಂದಿನ ಹೋರಾಟಕ್ಕೆ ಅವಶ್ಯಕವಾದ ನಮ್ಮ ಪರಂಪರೆ, ಇತಿಹಾಸ, ತತ್ವಶಾಸ್ತ್ರ, ಸಾಹಿತ್ಯ, ಕಲೆ – ಇತ್ಯಾದಿಗಳ ಚಾರಿತ್ರಿಕ ಮತ್ತು ವೈಜ್ಞಾನಿಕ ವಿಶ್ಲೇಷಣೆ.

* ಮಾನವೀಯತೆಯ ಶ್ಲಾಘ್ಯ ಧ್ಯೇಯವನ್ನು ಸಾರುವ ಮತ್ತು ಕೆಲವರಿಗೆ ಮಾತ್ರ ಮೀಸಲಾದ ಸೊತ್ತಾಗದೆ ಜನಸಮೂಹದ ಸ್ವತ್ತಾಗಿ ಅವರ ಅನುಭವಕ್ಕೆ ಸಾಟಿಯಾದ ಸಾಹಿತ್ಯ ಮೀಮಾಂಸೆಯ ಮತ್ತು ಅಂತಹ ಕೆಲವು ಸಾಹಿತಿಗಳ ಬಗೆಗಿನ ಚರ್ಚೆ.

* ಜನಸಾಮಾನ್ಯರ ಆಶೋತ್ತರಗಳನ್ನು ತಮ್ಮದನ್ನಾಗಿಸಿಕೊಂಡು ಎಂತಹ ತ್ಯಾಗಕ್ಕಾದರೂ ಸಿದ್ಧರಾಗಿ, ಎಂದೆಂದಿಗೂ ತಮ್ಮ ಜೀವನದ ಕಷ್ಟಕಾರ್ಪಣ್ಯಗಳಿಗಾಗಿ ಮರುಗದೆ ನಿರಂತರ ಹೋರಾಟ ನಡೆಸಿದ ಕೆಲವು ಧೀಮಂತ ವ್ಯಕ್ತಿಗಳ ಪರಿಚಯ.

* ಉಚ್ಚ ಸಂಸ್ಕೃತಿಯ ಉಗಮಕ್ಕೆ ಸಾಧನದಂತಿರುವ ವ್ಯವಸ್ಥೆಯನ್ನು ಸೃಷ್ಟಿಸುವ ಸಮಾಜವಾದದ ಅನಂತ ಸ್ವರೂಪದ ವಿವೇಚನೆ.

* ಸಾಮಾಜಿಕ ಸಂಸ್ಥೆಗಳ ಒಳಿತು ಕೆಡುಕುಗಳ ಅಧ್ಯಯನಕ್ಕೆ ಮತ್ತು ಸಮಾಜದ ಸಮಸ್ಯೆಗಳ ಅಧ್ಯಯನ ಮತ್ತು ಪರಿಹಾರಕ್ಕೆ ಅತ್ಯವಶ್ಯಕವಾದ ವೈಜ್ಞಾನಿಕ ವಿಶ್ಲೇಷಣೆ ಮತ್ತು ವೈಜ್ಞಾನಿಕ ಆಲೋಚನಾ ವಿಧಾನ

— ಇಷ್ಟನ್ನೂ ಸ್ಥೂಲವಾಗಿ ಒಳಗೊಂಡಿರುವ ಸಂಕಲನ "ಮುನ್ನೋಟ". ಇಲ್ಲಿಯವರೆಗೂ ನಡೆದಿರುವ ಮತ್ತು ಮುಂದೂ ನಡೆಯಲಿರುವ ಜನಪರ ಹೋರಾಟಗಳಿಗೆ ಈ ಲೇಖನಗಳ ಮೂಲಕ ಜಿ.ಆರ್ ಅವರು ಮುಂದಿಡುವ ವಿಚಾರ ಒಂದು ತಾತ್ವಿಕ ತಳಹದಿಯನ್ನು ಒದಗಿಸುವುದಲ್ಲದೆ ಚರ್ಚೆಯನ್ನು ಮುಂದುವರೆಸಲು ನೆರವಾಗುತ್ತದೆ.



ಬೆಲೆ : ರೂ. 75